ಶ್ರೀಮಚ್ಛಂಕರಭಗವತ್ಪಾದರ

ರಾಮಕರ್ಣಾಮೃತ

ಮೂಲ; ತಾತ್ಪರ್ಯ; "ರಾಮತತ್ವ ಅರ್ಥಾತ್
ಅದ್ವೈತತತ್ವ ಮತ್ತು ಯೋಗಿಕ"
ಟಿಪ್ಪಣಿಗಳೊಡನೆ

ಲೇಖಕರು ಮತ್ತು ಸಂಪಾದಕರು:
ಬಿ. ಎಸ್. ಕಪನೀಪತಯ್ಯ, ಬಿ.ಎ.

★

ಪ್ರಕಾಶಕರು:
ಎಂ. ಎಸ್. ಶ್ರೀನಿವಾಸಯ್ಯ
ಮಳವಳ್ಳಿ

ಶ್ರೀಮಚ್ಛಂಕರಭಗವತ್ಪಾದರ

ರಾಮಕರ್ಣಾಮೃತ

ಮೂಲ ; ತಾತ್ಪರ್ಯ ; "ರಾಮತತ್ವ ಅರ್ಥಾತ್
ಅದ್ವೈತತತ್ವ ಮತ್ತು ಯೋಗಿಕ"
ಟಿಪ್ಪಣಿಗಳೊಡನೆ

ಲೇಖಕರು ಮತ್ತು ಸಂಪಾದಕರು :
ಬಿ. ಎಸ್. ಕಪನೀಪತಯ್ಯ, ಬಿ.ಎ.

★

ಪ್ರಕಾಶಕರು :
ಎಂ. ಎಸ್. ಶ್ರೀನಿವಾಸಯ್ಯ
ಮಳವಳ್ಳಿ

ಪ್ರಕಾಶಕರು :
ಂ. ಎಸ್. ಶ್ರೀನಿವಾಸಯ್ಯ
ಕಾಫಿಪುಡಿ ವ್ಯಾಪಾರಿಗಳು
ಕೋಟಿ ಮಳವಳ್ಳಿ

ಮೊದಲನೆಯ ಪ್ರಕಾಶನ : ಮಾರ್ಚ್ ೧೯೬೮

ಬೆಲೆ : ರೂ. 4-00

ಮುದ್ರಕರು :
ರೋಹಿಣಿ ಪ್ರಿಂಟರ್ಸ್
ಅರಳೇಪೇಟೆ, ಬೆಂಗಳೂರು-೨

ಪ್ರಕಾಶಕನ ವಾಣಿ

ಭಕ್ತ ಮಹಾಶಯರಲ್ಲಿ, ಪ್ರಚಾರ ಸೇವಕನದೊಂದು ಪ್ರಾರ್ಥನೆ

ಕಲಿಯುಗದಲ್ಲಿ ಸಮಸ್ತ ಮಾನವರಿಗೂ ರಾಮ ನಾಮಸ್ಮರಣೆಯೇ ಇಹಪರಗಳೆರಡಕ್ಕೂ ಸೌಖ್ಯಸಾಧಕವೆಂದೂ, ಸಂಸಾರ ತಾರಕವೆಂದೂ, ಶಿವಪಾರ್ವತಿಯರು ಹೇಳಿರುವುದನ್ನು ಶ್ರೀಮಚ್ಛಂಕರರು ಈ ಗ್ರಂಥದಲ್ಲಿ

ರಾಮಸ್ಮರಣಾ ದನ್ಯೋಪಾಯಂ|
ನಹಿಪಶ್ಯಾಮೋ ಭವತರಣೇ|
ಕಲೌಯುಗೇಕಲ್ಮಷ ಮಾನಸಾನಾಂ|
ಅನ್ಯತ್ರಧರ್ಮೇ ಖಲುನಾಧಿಕಾರಃ||

ಎಂದು ಅಪ್ಪಣೆ ಕೊಡಿಸಿರುವರಲ್ಲದೆ ಲೋಕೋಪಕಾರಾರ್ಥವಾಗಿ, ಜನ್ಮೋತ್ತಾರಣಕ್ಕೆ, ಅಮೃತ ಕುಲ್ಯವಾದ ಸ್ತೋತ್ರಗಳನ್ನು ರಚಿಸಿರುವರು. ಇವುಗಳಲ್ಲಿ 'ರಾಮಕರ್ಣಾ ಮೃತವು' ಅತ್ಯುತ್ತಮವಾದುದು. ಇದು, ಇದುವರಿಗೂ ಸರಿಯಾಗಿ ಬೆಳಕಿಗೆ ಬರದೆ, ಇಂತಹ ಉತ್ತಮ ಗ್ರಂಥದ ಉಪಯೋಗವನ್ನು ಇದುವರಿಗೂ ನಾವು ಪಡೆಯದೆ ಇದ್ದುದು ವಿಷಾದನೀಯ.

ಈಗ ಈ ನ್ಯೂನತೆಯನ್ನು ಪರಿಹರಿಸಿ, ಈ ಗ್ರಂಥದ ಶ್ಲೋಕಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ, ಕನ್ನಡ ಅನುವಾದಪೂರ್ವಕವಾಗಿ, ಯೋಗವಿಷಯಿಕ ಟೀಕೆಗಳನ್ನೂ ಸಂದರ್ಭೋಚಿತ 'ರಾಮತತ್ವ' ಅರ್ಥಾತ್ ಅದ್ವೈತ ತತ್ವ ಸಾರ ಸಂಗ್ರಹಃ ಎಂಬುದನ್ನೂ ಸ್ವಾರಸ್ಯವಾಗಿ ಬರೆದು ಈ ಗ್ರಂಥದ ಕರ್ತರುಗಳಾದ ಶ್ರೀಮಾನ್ ಬಿ. ಎಸ್. ಕಪನೀಪತಯ್ಯ, ಬಿ. ಎ. ಅವರು ನಮ್ಮ ಕನ್ನಡನಾಡಿಗೆ ಸಾಂಸ್ಕೃತಿಕ ಸೇವೆಯನ್ನು ಅತ್ಯುತ್ತಮವಾಗಿ ಸಲ್ಲಿಸಿದ್ದಾರೆ.

ಇವರು ತಾವು ಬರೆದಿರುವ ವಿಷಯಗಳನ್ನು ನನ್ನ ಮೇಲಿನ ಸಂಪೂರ್ಣ ಅಭಿಮಾನದಿಂದ, ನನ್ನ ಮನಗಾಣುವಂತೆ, ಗುರುಶಿಷ್ಯ ಭಾವನೆಯಿಂದ ನನಗೆ ವಿವರಿಸಿ, ನನ್ನ ಮನಸ್ಸಿನ ಮೇಲೆ ವೇದಾಂತ ವಿಷಯದಲ್ಲಿ ಅಚಲವಾದ ಜಾಗ್ರುತಿಯನ್ನುಂಟುಮಾಡಿದ್ದಾರೆ. ಇದಕ್ಕಾಗಿ ನಾನು ಅವರಿಗೆ ಎಷ್ಟು ವಿನೀತನಾಗಿದ್ದರೂ ಸಾಲದು.

ಇವರು ಸ್ವಭಾವತಃ ವಿನಯಶೀಲರು, ದೈವಭಕ್ತರು, ಆಚಾರಪರರು, ಬಾಹ್ಯಾಡಂಬರರಹಿತರು. ಹಿಮಾಲಯದ ಬದರಿಕಾಶ್ರಮದಿಂದ ಕನ್ಯಾಕುಮಾರಿಯವರೆಗಿನ ಮುಖ್ಯ ತೀರ್ಥಕ್ಷೇತ್ರಗಳೆಲ್ಲವನ್ನೂ ಇವರು ಎರಡು ಬಾರಿ ಸಂದರ್ಶಿಸಿ ಅನೇಕ ಪುಣ್ಯಪುರುಷರ ಸಮಾಗಮ ಮಾಡಿ ಬಂದಿದ್ದಾರೆ. ಮೈಸೂರಿನಲ್ಲಿ ಶಂಕರಮಠದಲ್ಲಿ ವೇದಾಂತ ಪ್ರವಚನ ಸಭೆಯ ಮೂಲಕ ಶ್ರೀ ಶೃಂಗೇರೀ ಜಗದ್ಗುರುಗಳ ಅನುಗ್ರಹದಿಂದ ನಡೆಯುತ್ತಿದ್ದ ಪ್ರಸ್ಥಾನತ್ರಯ ಶಾಂಕರ ಭಾಷ್ಯವೇ ಆದಿಯಾದ ವೇದಾಂತ ಪ್ರವಚನಗಳಿಗೆ ಸುಮಾರು 20–25 ವರ್ಷಗಳು ಇವರು ಹೋಗಿ ಅಲ್ಲಿ ಅದ್ವೈತ ವೇದಾಂತದ ಘನ ಪಂಡಿತರುಗಳ ದಿವ್ಯವಾಣಿಯನ್ನು ಕೇಳಿ ಸಂಸ್ಕಾರ ಪಡೆದಿರುವರು.

ಇವರು ಕೃಷ್ಣರಾಜಪೇಟೆ ತಾಲ್ಲೂಕಿಗೆ ಅತ್ಯುತ್ತಮ ಅಧ್ಯಾಪಕರೆನಿಸಿ ಆ ತಾಲ್ಲೂಕಿಗೆ ಸೇರಿದ ಬುಕ್ಕನಕೆರೆ ಮಿಡಲ್‌ಸ್ಕೂಲ್ ಹೆಡ್ಮಾಸ್ಟರೂ ಅಲ್ಲಿನ ಸ್ಥಳೀಯ ಗಣ್ಯವ್ಯಕ್ತಿಗಳೂ ಆಗಿದ್ದ ಕೀರ್ತಿಶೇಷ ಬಿ. ಶ್ರೀಕಂಠಯ್ಯನವರ ಜೇಷ್ಠ ಪುತ್ರರು. ಇವರು ಮೈಸೂರು ಅರಮನೆ ಆಫೀಸಿನಲ್ಲಿ, ರಾಜಾಶ್ರಮದಲ್ಲಿ ಮ್ಯಾನೇಜರಾಗಿದ್ದು, ಸುಮಾರು 35 ವರ್ಷಗಳು ರಾಜಸೇವೆ ಸಲ್ಲಿಸಿ, ನಿವೃತ್ತರಾಗಿರುವರು.

65 ವರ್ಷ ವಯಸ್ಸಿನ ಈ ಮಹನೀಯರು ಇನ್ನೂ ಚಿರಕಾಲ ವಾಗ್ದೇವಿಯನ್ನು ಉಪಾಸಿಸುತ್ತಾ ಮುಂದೆಯೂ ತಾವು ಆಶಿಸುತ್ತಿರುವ ಶ್ರೀಮಚ್ಛಂಕರ ಭಗವತ್ಪಾದರ ಹಲವು ಸ್ತೋತ್ರಗಳನ್ನು ಕನ್ನಡಕ್ಕೆ ಅನುವಾದಿಸಿ, ಕನ್ನಡ ನಾಡಿನ ಜನರ ಮನಸ್ಸನ್ನು ಆನಂದಗೊಳಿಸಲಿ. ಇವರು ಅರಮನೆಯ ಸಮಾರಂಭಗಳಲ್ಲಿ ಕನ್ನಡ ಕೃತಿಗಳನ್ನು ರಚಿಸುತ್ತಿದ್ದರು. ಇವರು 'ಸದಾಶಿವ ಬ್ರಹ್ಮೇಂದ್ರರ ಜೀವನ ಚರಿತ್ರೆ' ಎಂಬ ಒಂದು ಸಣ್ಣ ಪುಸ್ತಕವನ್ನು ಬರೆದಿರುತ್ತಾರೆ.

ರಾಮಕರ್ಣಾಮೃತನೆಂಬ ಈ ಗ್ರಂಥವನ್ನು ಪ್ರಕಟಗೊಳಿಸಿ, ಓದುವ ಭಗವದ್ಭಕ್ತರಿಗೆ ಇದರ ಮೌಲ್ಯವು, ಸ್ವಭಾವ ಮೌಲ್ಯಕ್ಕಿಂತ ಅತಿ ಸುಲಭ ಬೆಲೆಗೆ ದೊರೆಯುವಂತೆ ಮಾಡಬೇಕೆಂಬ ನನ್ನ ಆಶಯಕ್ಕೆ ಆಶ್ರಯ ಕೊಟ್ಟು, ಮುಂದಿನ ಪುಟದಲ್ಲಿ ಪ್ರಕಟಿಸಿರುವ 10 ಜನ ಭಕ್ತ ಮಹಾಶಯರು ಧನ ಸಹಾಯ ಮಾಡಿರುತ್ತಾರೆ. ಅವರುಗಳಿಗೆ ಈ ಮೂಲಕ ನನ್ನ ಧನ್ಯವಾದಗಳು. ಇವರಲ್ಲಿ ಒಬ್ಬರಾದ ಸಂಪಾದಕರೇ ಸಹಾಯ ಧನವನ್ನು ಅತಿ ಸಂತೋಷದಿಂದ ನೀಡಿರುತ್ತಾರಾಗಿ, ಸಂಪಾದಕರಿಗಾಗಲಿ, ಪ್ರಕಾಶಕನಾದ ನನಗಾಗಲಿ, ಯಾವ ಸ್ವಾರ್ಥತೆಯೂ ಇಲ್ಲವೆಂದು ತಿಳಿಸಲಿಚ್ಛಿಸುತ್ತೇನೆ.

ಈ ಗ್ರಂಥವನ್ನು ಶ್ರದ್ಧೆವಹಿಸಿ, ಅಂದವಾಗಿ, ಅಚ್ಚುಕಟ್ಟಾಗಿ ಮುದ್ರಿಸಿದವರು ಬೆಂಗಳೂರು ನಗರದ ವಿಖ್ಯಾತ ಮುದ್ರಣಾ ಸಂಸ್ಥೆಗಳಲ್ಲೊಂದಾದ 'ರೋಹಿಣಿ ಪ್ರಿಂಟರ್ಸ್'ನ ಮಾಲೀಕರಾದ ಶ್ರೀಮಾನ್ ಜಿ. ಕಲ್ಲಯ್ಯನವರು. ಇವರ ಸೌಜನ್ಯವನ್ನೂ, ಕಾರ್ಯದಕ್ಷತೆಯನ್ನೂ, ದೈವಭಕ್ತಿಯನ್ನೂ, ಉದಾರತೆಯನ್ನೂ ಮತ್ತು ಈ ಕಾರ್ಯದಲ್ಲಿ ಸೌಹಾರ್ದದಿಂದ ಸಹಕರಿಸಿದ ಇವರ ನೌಕರ ವರ್ಗವನ್ನೂ ಎಷ್ಟು ವಂದಿಸಿದರೂ ಸಾಲದು. ಇವರೆಲ್ಲರಿಗೂ ನನ್ನ ಅನಂತ ವಂದನೆಗಳು.

ಈ ಗ್ರಂಥವು ಭಕ್ತ ಮಹಾಜನಗಳಲ್ಲಿ ಪ್ರಚಾರವಾಗಲು, ಅದರ ಮಹತ್ವವನ್ನು ತಿಳಿಯಪಡಿಸಿ, ಸಹಕರಿಸಿದ, ವೇದಾಧ್ಯಯನ ಸಂಪನ್ನರಾದ ಶ್ರೀ ಶೃಂಗೇರಿ ಜಗದ್ಗುರು ಮಹಾ ಸಂಸ್ಥಾನದ ಮಠ ಮುದ್ರೆ, ವೇ|| ಬ್ರ|| ರಂಗಾವಧಾನಿಗಳಿಗೆ ನಾನು ಅನಂತ ಧನ್ಯವಾದಗಳನ್ನು ಸಮರ್ಪಿಸುತ್ತೇನೆ.

ಈ ಗ್ರಂಥದ ರಕ್ಷಾಕವಚವನ್ನು ಮುದ್ರಿಸಿಕೊಟ್ಟು, ರಾಮಸೇವೆ ಸಲ್ಲಿಸಿದ, ಬೆಂಗಳೂರು ಕರ್ಣಾಟಕ ಸಹಕಾರ ಪ್ರಕಾಶನ ಮಂದಿರದ ಪ್ರೆಸ್ ಮ್ಯಾನೇಜರಾದ ಶ್ರೀಮಾನ್ ಬಿ. ಎಸ್. ಹನಮಂತೇಗೌಡರವರಿಗೆ ನಾನು ಚಿರಋಣಿಯಾಗಿರುವೆನು.

ಇತರ ಹಲವು ವಿಧಗಳಲ್ಲಿ ನನಗೆ ನೆರವಾದ ಮಳವಳ್ಳಿಯಲ್ಲಿರುವ ಗುಂಡಲಪೇಟೆಯ ಶ್ರೀಮಾನ್ ಜಿ. ಎಸ್. ಆದಿಶೇಷ್‌ರವರಿಗೂ ನಾನು ನನ್ನ ಕೃತಜ್ಞತೆಯನ್ನು ಸೂಚಿಸುತ್ತೇನೆ.

ಸಾಧ್ಯವಾದಷ್ಟು ಸುಲಭ ಬೆಲೆಗೆ ಈ ಗ್ರಂಥವು ದೊರೆಯುವಂತೆ ಏರ್ಪಡಿಸಿರುತ್ತೆ. ಮುಮುಕ್ಷುಗಳು ಈ ಉತ್ತಮ ಗ್ರಂಥವನ್ನು ಕೊಂಡುಕೊಂಡು ಪೂಜಾ, ನಿತ್ಯ ಪಾರಾಯಣಾದಿಗಳಿಗೆ ಉಪಯೋಗಿಸಿಕೊಳ್ಳುತ್ತಾ ಬಂದರೆ, ಶ್ರೀರಾಮಚಂದ್ರಮೂರ್ತಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗುವುದರಲ್ಲಿ ಸಂದೇಹವಿಲ್ಲ. ಅಲ್ಪಮತಿಯಾದ ನನ್ನ ಈ ರಾಮಸೇವೆಯಿಂದ ಕನ್ನಡ ಭಾಷಾಭಿಮಾನಿಗಳಿಗೂ, ಭಗವದ್ಭಕ್ತರಿಗೂ ಕಿಂಚಿತ್ತಾದರೂ ಉಪಯೋಗ ಕಂಡುಬಂದಲ್ಲಿ ನಾನು ಕೃತಾರ್ಥನೆಂದು ಭಾವಿಸುತ್ತೇನೆ.

ಇತಿ ಪ್ರಕಾಶಕ
ಎಂ. ಎಸ್. ಶ್ರೀನಿವಾಸಯ್ಯ
ಕಾಫಿಪುಡಿ ವ್ಯಾಪಾರಿಗಳು
ಕೋಟೆ ಮಳವಳ್ಳಿ

ತಾರೀಖು 6-3-1968
ಮಳವಳ್ಳಿ

ಮುನ್ನುಡಿ

ಆನಂದಮಾನಂದಕರಂ ಪ್ರಪನ್ನಂ ।
ಜ್ಞಾನಸ್ವರೂಪಂ ನಿಜಬೋಧಯುಕ್ತಂ ॥
ಯೋಗೀಂದ್ರಮೀಡ್ಯಂ ಭವರೋಗವೈದ್ಯಂ ।
ಅಸ್ಮದ್ಗುರೂಂ ಸಂತತಮಾನತೋಸ್ಮಿ ॥
ಸರ್ವಭೂತಾಂತರಸ್ಥಾಯ ನಿತ್ಯಮುಕ್ತ ಚಿದಾತ್ಮನೇ ।
ಪ್ರತ್ಯಕ್ ಚೈತನ್ಯ ರೂಪಾಯ ಮಹ್ಯಮೇವ ನಮೋ ನಮಃ ॥

ಶ್ರೀ ಶಂಕರ ಭಗವತ್ಪಾದರವರಿಂದ ರಚಿತವಾದುದೆಂದು ಪ್ರಸಿದ್ಧವಾದ "ರಾಮಕರ್ಣಾಮೃತ"ವೆಂಬ ಗ್ರಂಥವು 1896ರಲ್ಲಿ ಕನ್ನಡದಲ್ಲಿ ಮುದ್ರಿತವಾದುದು, ಈಚಿಗೆ ಆ ಪ್ರತಿಗಳೇ ಸಿಕ್ಕದೆ, ಭಕ್ತರಿಗೂ, ಜಿಜ್ಞಾಸುಗಳಿಗೂ ಆ ಅಮೃತಪಾನಕ್ಕೆ ಅವಕಾಶವಿಲ್ಲದಂತಾಗಿತ್ತು. ಅದರಲ್ಲೂ ಹೆಚ್ಚಾಗಿ ಸಂಸ್ಕೃತ ಭಾಷಾ ಪರಿಶ್ರಮವಿಲ್ಲದವರಿಗಂತೂ ಗಗನಕುಸುಮಾಯಮಾನವಾಗುತ್ತಿದ್ದುದನ್ನು ಮನಗಂಡೋ ಎಂಬಂತೆ ಮೈಸೂರು ಅರಮನೆ ಆಫೀಸ್‌ನಲ್ಲಿದ್ದು ವಿಶ್ರಾಂತರಾಗಿರುವ, ಮ್ಯಾನೇಜರ್ ಶ್ರೀಮಾನ್ ಬಿ. ಎಸ್. ಕಪನೀಪತಯ್ಯ, ಬಿ.ಎ., ಅವರು ಆ ಗ್ರಂಥವನ್ನು ಪರಿಷ್ಕರಿಸಿ, ಅದರ ಕನ್ನಡದ ಅನುವಾದದೊಡನೆ ಬೆಳಕಿಗೆ ತರುವ ಪ್ರಯತ್ನ ಮಾಡಿರುವುದು ಎಲ್ಲರನ್ನೂ ಚಿರಋಣಿಗಳನ್ನಾಗಿ ಮಾಡಿದೆ. ಈ ಮಹನೀಯರು ಮೈಸೂರು ಶ್ರೀ ಶಂಕರ ಮಠದಲ್ಲಿ ಅದ್ವೈತ ಗ್ರಂಥಗಳನ್ನೆಲ್ಲಾ ವ್ಯಾಸಂಗ ಮಾಡಿ ತಮ್ಮ ಅನುಭವ ಮತ್ತು ಜ್ಞಾನದ ಸಾರವನ್ನು ಒಳಗೊಂಡ, 'ಶ್ರೀ ರಾಮ ತತ್ತ್ವ ಸಾರ ಸಂಗ್ರಹ'ವನ್ನು ಇದಕ್ಕೆ ಅನುಬಂಧವಾಗಿ ಸೇರಿಸಿರುವುದು ಮತ್ತಷ್ಟು ಉಪಕಾರವಾಗಿ, ಜಿಜ್ಞಾಸುಗಳಿಗೆ ಕನ್ನಡಿಯಂತೆ ತತ್ತ್ವ ಬೋಧಕ್ಕೆ ಸುಲಭವಾದ ಅವಕಾಶ ಕಲ್ಪನೆ ಮಾಡಿಕೊಟ್ಟಂತಾಗಿದೆ.

ಆದಿ ಶಂಕರರ, ರಾಮಕರ್ಣಾಮೃತವು ಐದು ಖಂಡಗಳಿಂದ ಕೂಡಿ 414 ಶ್ಲೋಕಗಳನ್ನುಳ್ಳದ್ದಾಗಿದೆ. ಅವುಗಳಲ್ಲಿ ಕಾಣುವ ಭಕ್ತಿ ಭಾವ, ಪದಲಾಲಿತ್ಯ ತತ್ವನಿರೂಪಣೆಗೆ ಇವು ಲೋಕೋತ್ತರವಾಗಿವೆ. ತಾರಕಮಂತ್ರ ಮಹಿಮಾ, ಯೋಗವಿಚಾರಗಳಂತೂ ನಿಬಿಡವಾಗಿರುವ ಈ ಗ್ರಂಥವು ಭಕ್ತರಿಗೆ ಆಹ್ಲಾದವನ್ನೂ ಅಪೂರ್ವ ಭಕ್ತಿಯನ್ನೂ ನೀಡುತ್ತಾ, ಸ್ವಾನುಷ್ಠಾನ ತತ್ಪರರಿಗೆ ಪರಮೋಪಕಾರವಾಗಿದೆ. ಶ್ರೀಯುತ ಕಪನೀಪತಯ್ಯನವರು ಈ ರಹಸ್ಯಗಳನ್ನೆಲ್ಲಾ ಕೀರ್ತಿಶೇಷರಾದ ಪಂಡಿತರತ್ನ, ಪಂಡಿತ ಪ್ರವರ, ಪಂಡಿತರಾಜ ನವೀನಂ ವೆಂಕಟೇಶ ಶಾಸ್ತ್ರಿಗಳೇ ಮೊದಲಾದ ಉದ್ದಾಮ ಪಂಡಿತರಿಂದ ವಿಚಾರಪೂರಿತವಾಗಿ ತಿಳಿದುಕೊಂಡು ವಿಶದವಾಗಿ ಕನ್ನಡಿಸಿರುತ್ತಾರೆ.

ಈ ಗ್ರಂಥದಲ್ಲಿರುವ ಅಮೂಲ್ಯವಾದ ಸ್ತೋತ್ರಗಳನ್ನು ಹಾಡುತ್ತಿದ್ದರೆ ಶ್ರೀರಾಮಭಕ್ತಿಪ್ರವಾಹವು ಗಂಗಾ, ಯಮುನಾ ಪ್ರವಾಹಗಳಂತೆ ಗಂಭೀರವಾಗಿ ಉಕ್ಕಿ ಹರಿಯುತ್ತಾ ಶ್ರೀರಾಮಚಂದ್ರಮೂರ್ತಿಯನ್ನು ಮನಸ್ಸಿನಲ್ಲೇ ಚಿತ್ರಿಸಿ ಆನಂದಪರವಶರಾಗುವಂತೆ ಮಾಡುತ್ತದೆ. ಶ್ರೀ ಕಪನೀಪತಯ್ಯನವರ ಅನುವಾದವು ಮೆರಗು ಕೊಟ್ಟಂತೆ ಓದುಗರ ಮನಸ್ಸಿನ ಆನಂದವನ್ನು ಹೆಚ್ಚಿಸಲು ಬಹಳಮಟ್ಟಿಗೆ ಸಹಕಾರಿಯಾಗುತ್ತದೆ.

ಭಕ್ತಾಗ್ರೇಸರರು ಈ ಗ್ರಂಥ ರಸಾಸ್ವಾದನೆಯಿಂದ ಆತ್ಮಾನುಭವವನ್ನು ಪಡೆಯುವಂತಾದರೆ, ಶ್ರೀಯುತರ ಶ್ರಮ ಸಾರ್ಥಕವಾಗುತ್ತದೆ. ಶ್ರೀಮದಾಚಾರ್ಯರ ಅನುಗ್ರಹದಿಂದ ಜೀವನ್ಮುಕ್ತರಾಗಲೂ ಸಹಕಾರಿಯಾಗುತ್ತದೆಂದು ಧಾರಾಳವಾಗಿ ಹೇಳಬಹುದು. ಶ್ರೀಯುತರಿಂದ ಇಂಥಾ ಗ್ರಂಥರತ್ನಗಳು ಹೆಚ್ಚಾಗಿ ಪ್ರಕಟವಾಗಿ ಜನೋಪಕಾರವಾಗಲೆಂದು ಆಶಿಸುತ್ತೇನೆ.

ನರಸಿಂಹ ಮಂದಿರಂ
31. ಹಾರ್ಡಿಂಜ್ ರಸ್ತೆ
ಬೆಂಗಳೂರು–4
14-9-1967

ಎನ್. ಮಲ್ಲಿಕಾರ್ಜುನ ಶಾಸ್ತ್ರೀ, ಎಂ. ಎ.
(ವೈದಿಕ ಧರ್ಮಾಚಾರ್ಯ, ಆಚಾರರತ್ನ, ಗುರುಸೇವಾ ನಿಪುಣ, ವಿದ್ಯಾಭೂಷಣ)
ಮೈಸೂರು ಶ್ರೀಮನ್ಮಹಾರಾಜರ ಸಂಸ್ಕೃತ ಮಹಾ ಪಾಠಶಾಲಾ
ವಿಶ್ರಾಂತಾಧ್ಯಕ್ಷ

'ರಾಮಕರ್ಣಾಮೃತ' ಗ್ರಂಥರಚನೆಗೆ ಧನಸಹಾಯ ಮಾಡಿದ ಮಹನೀಯರುಗಳು

		ರೂ. ಪೈ.
(1)	ಶ್ರೀ ಬಿ. ಎಸ್. ಕಪನೀಪತಯ್ಯನವರು, ಈ ಗ್ರಂಥದ ಅನುವಾದಕರು	100-00
(2)	ಶ್ರೀ ಎಂ. ಎಸ್. ಶಾಮರಾವ್, ಜಮೀನ್‌ದಾರ್, ಮಗ್ಗೆ, ಹೆಗ್ಗಡದೇವನಕೋಟೆ ತಾಲ್ಲೂಕ್	50-00
(3)	ಶ್ರೀ ಎಂ. ಜಯಶೇಕರಯ್ಯನವರು, ದಿನಸಿ ಅಂಗಡಿ, ಪೇಟೆ, ಮಳವಳ್ಳಿ	100-00
(4)	ಶ್ರೀ ಕೆ. ವಿ. ರಾಮರಾವ್, ಜಮೀನ್‌ದಾರ್, ಹೆಗ್ಗಡದೇವನಕೋಟೆ	100-00
(5)	ಶ್ರೀ ಎಂ. ಆರ್. ಶ್ರೀಕಂಠಶರ್ಮ, ಜಮೀನ್‌ದಾರ್, ಕೋಟೆ, ಮಳವಳ್ಳಿ	100-00
(6)	ಶ್ರೀ ಡಿ. ಎಸ್. ದೊರೆಸ್ವಾಮಿಯವರು, ಮುತ್ತಲವಾಡಿ ಶ್ಯಾನುಭೋಗರು, ಟಿ. ನರಸೀಪುರದ ತಾಲ್ಲೂಕ್	100-00
(7)	ಗುಂಡ್ಲುಪೇಟೆ ಲೇಟ್ ಜಿ. ವಿ. ಸುಬ್ರಾಯರ ಮಗ ಶ್ರೀ ಜಿ. ಎಸ್. ಆದಿಶೇಷ್, ಬ್ರೂಕ್ ಬಾಂಡ್ ಟೀ ಸೇಲ್ಸ್‌ಮನ್, ಮಳವಳ್ಳಿ	50-00
(8)	ಶ್ರೀ ಹೆಚ್. ಬಿ. ವೆಂಕಟಸುಬ್ಬಯ್ಯ, ಪಡಕೋಟೆ ಶ್ಯಾನುಭೋಗರು, ಹೆಗ್ಗಡದೇವನಕೋಟೆ	50-00
(9)	ಶ್ರೀ ಕೆ. ಎಸ್. ಶೇಷಗಿರಯ್ಯ, ಕಾಕನಕೋಟೆ ಶ್ಯಾನುಭೋಗರು, ಹೆಗ್ಗಡದೇವನಕೋಟೆ ತಾಲ್ಲೂಕ್ ಮಗ್ಗೆ	50-00
(10)	ಶ್ರೀ ಹೆಚ್. ಎಸ್. ನಂಜುಂಡ ಶಾಸ್ತ್ರಿಗಳು, ಗೌಡಗೆರೆ ಕಾಲೋನಿ, ಮಳವಳ್ಳಿ ತಾಲ್ಲೂಕ್	101-00

ಕೃತಜ್ಞತೆ

(1) ಈ ಗ್ರಂಥದ ಮೂಲವನ್ನು ಪರಿಷ್ಕರಿಸಿ, ಖಂಡಗಳಾಗಿ ವಿಂಗಡಿಸಿ, ಕನ್ನಡ ಅನುವಾದ ಟಿಪ್ಪಣಿಗಳೊಡನೆಯೂ, 'ಅದ್ವೈತತತ್ವಸಂಗ್ರಹ' ವೆಂಬ ಅನುಬಂಧದೊಡನೆಯೂ, ಯೋಗಿಕ ವಿಷಯಗಳೊಡನೆಯೂ, ಭಗವದ್ಭಕ್ತರ ಉಪಯೋಗಕ್ಕಾಗಿ ನಾನು ಸಿದ್ಧಪಡಿಸುವುದಕ್ಕೂ ಮತ್ತು ವ್ಯಾವಹಾರಿಕ ಪ್ರತಿಫಲಾಪೇಕ್ಷೆಯಿಲ್ಲದೆ, ಕೇವಲ ಭಗವತ್ಸೇವೆಗಾಗಿ ಈ ಗ್ರಂಥದ ಪ್ರಕಾಶನವನ್ನು ಕೈಗೊಂಡ ನನ್ನ ಮಿತ್ರವರ್ಯರಾದ ಶ್ರೀಮಾನ್ ಶ್ರೀನಿವಾಸಯ್ಯನವರಿಗೆ, ಪ್ರಕಾಶನದ ಕಾರ್ಯಗಳು ಸುಗಮವಾಗಿ ನಡೆಯುವುದಕ್ಕೂ ಅನುಗ್ರಹಮಾಡಿ, ನಮ್ಮಗಳಿಗೆ, ಮಧ್ಯೆ ಮಧ್ಯೆ ಸಂಭವಿಸಿದ ವಿಘ್ನಗಳನ್ನೆಲ್ಲಾ ಪಾರುಮಾಡಿದ ಮತ್ತು ಮುಂದೆಯೂ ನಮ್ಮನ್ನು ಕಾಪಾಡುವ, ಶ್ರೀರಾಮಚಂದ್ರಮೂರ್ತಿಗೂ, ಶ್ರೀ ಸೀತಾಮಾತೆಗೂ, ಶ್ರೀರಾಮಭಕ್ತಾಗ್ರೇಸರನಾದ ಶ್ರೀಮದಾಂಜನೇಯನಿಗೂ, ನಾನೂ, ನನ್ನ ಮಿತ್ರರಾದ ಶ್ರೀ ಶ್ರೀನಿವಾಸಯ್ಯನವರೂ, ಅತಿನಮ್ರತೆಯಿಂದಲೂ, ಭಕ್ತಿಯಿಂದಲೂ, ಸಾಷ್ಟಾಂಗ ಪ್ರಣಾಮಪೂರ್ವಕವಾಗಿ ನಮ್ಮಗಳ ವಂದನೆಗಳನ್ನು ಅರ್ಪಿಸುತ್ತೇವೆ.

(2) ಮೈಸೂರಿನಲ್ಲಿ, ಶ್ರೀ ಶೃಂಗೇರಿ ಜಗದ್ಗುರುಗಳ ದಿವ್ಯ ಅನುಗ್ರಹದಿಂದ ನಡೆಯುತ್ತಲಿರುವ ವೇದಾಂತ ಪ್ರವಚನಗಳಲ್ಲಿ ಹಲವಾರು ವರ್ಷಗಳು, ನಾನು ಭಾಗಿಯಾಗಿದ್ದಾಗ, ನನಗೆ ಅಧ್ಯಾತ್ಮ ವಿದ್ಯೆಯಲ್ಲಿ ಜ್ಞಾನದಾತೃಗಳಾಗಿ, ಜ್ಞಾನಭಿಕ್ಷೆ ನೀಡಿ, ಈ ಗ್ರಂಥಕಾರ್ಯ ನನ್ನಿಂದ ನಡೆಯಲು ಮೂಲಕಾರಣರಾದ,

(a) ಪ್ರಥಮತಃ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಯವರಿಗೂ

(b) ಪಂಡಿತೋತ್ತಮರೂ, ವೈದಿಕ ಕರ್ಮಾನುಷ್ಠಾನಪರರೂ, ಶಾಂತಮೂರ್ತಿಗಳೂ ಎನ್ನಿಸಿದ ವಿದ್ವಾನ್ ವೇ|| ಬ್ರ|| ಮಲ್ಲಿಕೆರೆ ಸುಬ್ರಹ್ಮಣ್ಯ ಶಾಸ್ತ್ರಿಗಳಿಗೂ,

(c) ಪಂಡಿತರತ್ನ, ಪಂಡಿತಪ್ರವರ, ಪಂಡಿತರಾಜ, ಇತ್ಯಾದ್ಯನೇಕ ಬಿರುದಾಂಕಿತರೂ ಆಸ್ಥಾನ ಮಹಾವಿದ್ವಾಂಸರೂ ಅರಮನೆ ಧರ್ಮಾಧಿಕಾರಿಗಳೂ ಆಗಿದ್ದ ವೇ|| ಬ್ರ|| ನವೀನಂ ವೆಂಕಟೇಶ ಶಾಸ್ತ್ರಿಗಳಿಗೂ.

(d) ಇವರ ಶಿಷ್ಯರೂ, ಪಂಡಿತಪ್ರವರ, ವೇದಾಂತಾಲಂಕಾರ, ವಿದ್ಯಾವಾರಿಧಿ, ವೇದಾಂತ ರತ್ನ ಎಂಬ ಬಿರುದಾಂಕಿತರೂ, ಅರಮನೆ ಧರ್ಮಾಧಿಕಾರಿಗಳೂ, ಮಹಾರಾಜರ ಸಂಸ್ಕೃತ ಪಾಠಶಾಲೆಯ ಅದ್ವೈತ ವೇದಾಂತ ಪ್ರಾಧ್ಯಾಪಕರೂ ಆಗಿರುವ ವೇ|| ಬ್ರ|| ರಾಮಚಂದ್ರ ಸೋಮಯಾಜಿಗಳಿಗೂ, ನನ್ನ ಪ್ರಣಾಮಪೂರ್ವಕ ನಮ್ರ ವಂದನೆಗಳನ್ನು ಅರ್ಪಿಸುತ್ತೇನೆ.

(3) ಈ ಗ್ರಂಥಕ್ಕೆ ಸುಂದರವಾದ ಮುನ್ನುಡಿಯನ್ನು ಬರೆದುಕೊಟ್ಟ, ವೈದಿಕ ಧರ್ಮಾಚಾರ್ಯ, ಗುರುಸೇವಾ ನಿಪುಣ, ಆಚಾರ ರತ್ನ, ವಿದ್ಯಾವಿಭೂಷಣ, ಮೈಸೂರು ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾಪಾಠಶಾಲಾ ವಿಶ್ರಾಂತ ಅಧ್ಯಕ್ಷ ವೇ|| ಬ್ರ|| ಮಲ್ಲಿಕಾರ್ಜುನಶಾಸ್ತ್ರಿಗಳಿಗೆ ನಾನು ನನ್ನ ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ.

(4) ಈ ಗ್ರಂಥದ ಕರುಡಚ್ಚುಗಳ ಶೋಧನೆಯ ವೇಳೆಯಲ್ಲಿ, ಈ ಗ್ರಂಥವನ್ನು ನನ್ನಿಂದ ಓದಿಸಿ ಕೇಳಿ, ಸೂಕ್ತ ಸಲಹೆ ಕೊಟ್ಟು ಉಪಕಾರ ಮಾಡಿದ, ಚಿಂತಾಮಣಿ ಸಾಹಿತ್ಯಕೂಟದ ಅಧ್ಯಕ್ಷರಾದ ವೇ|| ಬ್ರ|| ಪಂಡಿತವರ ಸಿ. ಸುಬ್ರಹ್ಮಣ್ಯಶಾಸ್ತ್ರಿಗಳವರಿಗೂ ಮತ್ತು ಈ ಸಂದರ್ಭದಲ್ಲಿ ಸಹಕರಿಸಿದ, ಸಾಹಿತ್ಯಕೂಟದ ವ್ಯವಸ್ಥಾಪಕರೂ,

ರಾಷ್ಟ್ರಪತಿ ಪ್ರಶಸ್ತಿ ಪಡೆದವರೂ ಆದ ನಿವೃತ್ತ ಅಧ್ಯಾಪಕ, ಶ್ರೀಮಾನ್ ವೈ. ಎಸ್. ಗುಂಡಪ್ಪನವರಿಗೂ ನಾನು ತುಂಬಾ ಕೃತಜ್ಞನಾಗಿದ್ದೇನೆ.

(5) ಈ ಮುದ್ರಣದ ಭಾರವನ್ನು ಹೊತ್ತು ಸ್ವಾರ್ಥತೆಯೆಂಬುದು ಸ್ವಲ್ಪವೂ ಇಲ್ಲದೆ, ಕೇವಲ ದೈವಭಕ್ತಿ, ಶ್ರೀರಾಮಸೇವೆ, ಕಾರ್ಯತತ್ಪರತೆಗಳನ್ನು ಧ್ಯೇಯವಾಗಿಟ್ಟುಕೊಂಡು, ತಮ್ಮ ಇತರ ಕೆಲಸಗಳ ಗೊಂದಲದಲ್ಲಿ, ಬಿಡುಗಡೆ ಮಾಡಿಕೊಂಡು, ತುಂಬಾ ಶ್ರಮವಹಿಸಿ ನನ್ನೊಡನೆ ಸಹಕರಿಸಿ, ಈ ಪುಸ್ತಕವು ಬೆಳಕಿಗೆ ಬರಲು ಮಹದುಪಕಾರ ಮಾಡಿದ ಮಳವಳ್ಳಿಯ ಶ್ರೀಮಾನ್ ಎಂ. ಎಸ್. ಶ್ರೀನಿವಾಸಯ್ಯನವರಿಗೆ ನನ್ನ ಹೃತ್ಪೂರ್ವಕವಾದ ಆಶೀರ್ವಾದಪೂರ್ವಕ ಶುಭಾಶಯಗಳನ್ನು ಕೋರಿ, ಭಗವದ್ಭಕ್ತರಾದ ಇವರಿಗೂ, ಇವರ ಕುಟುಂಬವರ್ಗಕ್ಕೂ ಶ್ರೀರಾಮಚಂದ್ರನು ಅನಂತ ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಅನುಗ್ರಹಿಸಲೆಂದು, ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

(6) ಮುದ್ರಣದ ರೂಪುರೇಷೆ, ಅಚ್ಚುಕಟ್ಟುಗಳ ಬಗ್ಗೆ ಶ್ರಮವಹಿಸಿ, ಮುದ್ರಣ ಕಾರ್ಯವನ್ನು ತ್ವರೆಗೊಳಿಸಿ, ಈ ಪುಸ್ತಕವು ಅಚ್ಚುಗಟ್ಟಾಗಿ, ಅಂದವಾಗಿ ಮುದ್ರಣವಾಗಲು, ಹಲವು ತೆರಗಳಲ್ಲಿ ಶ್ರಮವಹಿಸಿದ, ಪ್ರಕಾಶಕರ ಜ್ಯೇಷ್ಠ ಪುತ್ರರಾದ, ಬೆಂಗಳೂರು ಚಾಮರಾಜಪೇಟೆಯಲ್ಲಿರುವ ಕರ್ಣಾಟಕ ಸಹಕಾರಿ ಪ್ರಕಾಶನದಲ್ಲಿ ಜನಾನುರಾಗಿಗಳಾಗಿ, ಕಾರ್ಯ ನಿರ್ವಹಿಸುತ್ತಿರುವ, ತರುಣರೂ, ವಿನಯಶೀಲರೂ, ದೈವಭಕ್ತಿ ಶ್ರದ್ಧೆಗಳುಳ್ಳವರೂ ಆದ ಶ್ರೀಮಾನ್ ಎಂ. ಎಸ್. ನಾಗರಾಜರಿಗೆ ನನ್ನ ಆಶೀರ್ವಾದಪೂರ್ವಕ ಶುಭಾಶಯಗಳು.

6-3-1968

ಬಿ. ಎಸ್. ಕಪನೀಪತಯ್ಯ
ಸಂಪಾದಕ

ಓಂ

ಪ್ರಸ್ತಾವನೆ

ಶ್ರೀಮಚ್ಛಂಕರಭಗವತ್ಪಾದರಿಂದ ರಚಿತವಾದ ಸ್ತೋತ್ರಗಳು ಸರ್ವಾದರಣೀಯವೆಂಬ ಅಂಶ ಸರ್ವರಿಗೂ ದಿತವೇ ಆಗಿರುತ್ತದೆ. ಅಂತಹ ಸ್ತೋತ್ರಗಳಲ್ಲಿ ನಾನು ಈಗ ಸಂಗ್ರಹಿಸಿ ಪ್ರಕಟಿಸಿರುವ "ರಾಮುಕರ್ಣಾಮೃತವು" ಂದಾಗಿರುತ್ತದೆ. ಇದರಲ್ಲಿ ಕಂಡುಬರುವ ಭಕ್ತಿಭಾವ, ಪದಲಾಲಿತ್ಯ, ವಿಷಯನಿರೂಪಣೆ, ವೃತ್ತವೈವಿಧ್ಯ, ಾರಕಮಂತ್ರಪ್ರಭಾವ, ಯೋಗವಿಚಾರ, ಅದ್ವೈತ ತತ್ತ್ವ ಮುಂತಾದುವುಗಳು ಭಕ್ತಜನರ ಮನಸ್ಸಿನಲ್ಲಿ ಅಪೂರ್ವ ನಾದ ಭಕ್ತಿಯನ್ನೂ ಆನಂದವನ್ನೂ, ಉಂಟುಮಾಡುವುದರಲ್ಲಿ ಸಂದೇಹವಿಲ್ಲ.

ಇದರಲ್ಲಿನ ಶ್ಲೋಕಗಳನ್ನು ಮುಕ್ತಕಂಠದಿಂದ ಹಾಡಿದರೆ ಶ್ರೀರಾಮಭಕ್ತಿ ಎಂಬ ಪ್ರವಾಹವು ಗಂಗಾಪ್ರವಾಹ ವಂತೆ ನಿರರ್ಗಳವಾಗಿ ಗಂಭೀರವಾಗಿ ಉಕ್ಕಿ ಹರಿಯುವುದು. ಅಲ್ಲದೆ ಈ ಶ್ಲೋಕಗಳನ್ನು ಪಠಿಸುವಾಗ ಈ ಶ್ಲೋಕ ಗಳಲ್ಲಿ ವರ್ಣಿತವಾಗುವ ಶ್ರೀರಾಮಮೂರ್ತಿಯನ್ನು ಮನಸ್ಸಿನಲ್ಲಿ ಹಾಗೆಯೇ ಮೂರ್ತೀಕರಿಸಿ ಪಠಿಸಿತೆಂದರೆ ಆಗ ಆಗುವ ಆನಂದಕ್ಕೆ ಪಾರವೇ ಇರುವುದಿಲ್ಲ. ಅಲ್ಲದೆ ಪಠಿಸುವವರು ಶಬ್ದಲಾಲಿತ್ಯವೆಂಬ ಮಧುರ ರಸಾಸ್ವಾದನೆ ಯಿಂದ ಮತ್ತರಾಗುವರು. ಶ್ರೀರಾಮ ಭಕ್ತಿಪ್ರಧಾನವಾದ ಈ ಗ್ರಂಥದಲ್ಲಿ ಶ್ರೀರಾಮನು ಬಾಲರಾಮನಾಗಿಯೂ, ೀರರಾಮನಾಗಿಯೂ, ಕೋದಂಡರಾಮನಾಗಿಯೂ, 'ವೀರಶ್ರೀ' ಬಿರುದಾಂಕಿತ ರಾಮನಾಗಿಯೂ ಮನ್ಮಥ ರಾಮ ನಾಗಿಯೂ, ಕಲ್ಯಾಣರಾಮನಾಗಿಯೂ ಸೀತಾರಾಮನಾಗಿಯೂ, ತಾರಕರಾಮನಾಗಿಯೂ, ಅಯೋಧ್ಯಾರಾಮ ನಾಗಿಯೂ, ಪಟ್ಟಾಭಿರಾಮನಾಗಿಯೂ, ಬಹುರೂಪದಲ್ಲಿ ಗಾನಮಾಡುವ ಮತ್ತು ಕೇಳುವ ಭಕ್ತರ ಅಂತರ್ಹೃದಯ ಗಳಲ್ಲಿ, ದರ್ಶನ ಕೊಡುವನು. ಇದರಲ್ಲಿ ವಿಸ್ತೃತವಾದ ಯೋಗ, ಅದ್ವೈತ, ರಾಮನಾಮ ಪ್ರಭಾವ ಮುಂತಾದುವುಗಳು ಶ್ರೀರಾಮನೆಂಬ ಚಂದ್ರನಿಗೆ ಅಲಂಕರಿಸಿದ ನಕ್ಷತ್ರಗಳಂತೆ ಭಾಸವಾಗುವುವು. ಓದುಗರ ಅನು ಕೂಲಕ್ಕಾಗಿ ಈ ಒಟ್ಟು ಶ್ಲೋಕಗಳನ್ನು ಐದು ಖಂಡಗಳಾಗಿ ವಿಂಗಡಿಸಿದೆ. ಇದರಲ್ಲಿನ ಕೆಲವು ಶ್ಲೋಕಗಳು ಜನ ಜನಿತವಾಗಿವೆ. ಆದರೆ ಹೀಗೆ ಐದು ಖಂಡಗಳಿಂದ ವಿಭಾಗ ಹೊಂದಿ ~~441~~ 414 ಶ್ಲೋಕಗಳನ್ನು ಒಳಗೊಂಡು ಕನ್ನಡ ಅನುವಾದ ಪೂರ್ವಕವಾಗಿ ಇದುವರೆಗೂ ಕನ್ನಡದಲ್ಲಿ ಮುದ್ರಿತವಾಗಿಲ್ಲವೆಂದೇ ನನ್ನ ಭಾವನೆ. ಈ ಗ್ರಂಥದಲ್ಲಿ ಶ್ರೀ ರಾಮಚಂದ್ರನ ಸದ್ಗುಣಗಳನ್ನು ಭಿನ್ನ ಭಿನ್ನ ವೃತ್ತಗಳಲ್ಲಿ ಸ್ವಾರಸ್ಯವಾದ ಪದಗಳ ಜೋಡಣೆಯಿಂದ ಪುನರುಕ್ತಿ ಯೆಂಬುದು ಕಾಣದಂತೆ ಬಹು ರಮಣೀಯವಾಗಿ ವರ್ಣಿಸಿದೆ.

ಈ ಗ್ರಂಥದ ಪ್ರಥಮದಲ್ಲೂ ಕೊನೆಯಲ್ಲೂ 'ಶ್ರೀಮದಾಂಜನೇಯಕೃತ' ಶ್ರೀ ಸೀತಾರಾಮ ಸ್ತೋತ್ರ ವನ್ನೂ, ಶ್ರೀ ವಿಭೀಷಣಕೃತ "ಶ್ರೀರಾಮ ಮಂಗಳಾಷ್ಟಕ"ವನ್ನೂ ನಾನು ಸೇರಿಸಿರುವುದು, ಶ್ರೀರಾಮಭಕ್ತರೆಲ್ಲರೂ ಭಕ್ತಿಹರ್ಷಗಳಿಂದ ಗಾನರೂಪವಾಗಿ ಈ ಗ್ರಂಥವನ್ನು ಬಾಚಿ ತಬ್ಬಿಕೊಂಡಂತಿರಲೆಂದು.

ಈ ಗ್ರಂಥವು ಶ್ರೀಮಚ್ಛಂಕರಭಗವತ್ಪಾದರಿಂದ ರಚಿತವಾದದ್ದೆಂಬ ಅಂಶವು ಮೈಸೂರಿನ ಶ್ರೀ ಶಿವಾನಂದ ುಬ್ರಹ್ಮಣ್ಯ ಸ್ವಾಮಿಗಳು ರಚಿಸಿದ ಆತ್ಮಪುರಾಣದ ಕನ್ನಡ ಅನುವಾದದಲ್ಲಿನ ಶ್ರೀರಾಮ ತಾರಕಮಂತ್ರ ಪ್ರಭಾವ ನ್ನು ಹೇಳುವ ಕಡೆಯಲ್ಲಿಯೂ, ಕ್ರಿ.ಶ. 1896ನೇ ಇಸವಿಯಲ್ಲಿ ಮುದ್ರಿತವಾದ 'ರಾಮುಕರ್ಣಾಮೃತ'ವೆಂಬ ಪುಸ್ತಕ ಂದಲೂ ತಿಳಿಯಬಂದಿತು. ಈ ಸಂಗ್ರಹಣ ಮತ್ತು ಅನುವಾದ ಕಾರ್ಯಗಳ ಸಂದರ್ಭದಲ್ಲಿ ಮಂಡ್ಯ ಡಿಸ್ಟ್ರಿಕ್ಟ್ ಳವಳ್ಳಿ ಕೋಟೆಯಲ್ಲಿರುವ ಹೆಗ್ಗಡದೇವನಕೋಟೆ ತಾಲ್ಲೂಕ್ ಮಗ್ಗೆ, ಶ್ರೀಮಾನ್ ವೆಂಕಟಸುಬ್ಬರಾಯರ ಪುತ್ರರು ೀಮಾನ್ ಶ್ರೀನಿವಾಸಯ್ಯನವರೆಂಬ ನನ್ನ ಮಿತ್ರರು ನನಗೆ ತುಂಬಾ ಪ್ರೋತ್ಸಾಹ ಕೊಟ್ಟರು. ಭಗವದ್ಭಕ್ತರೂ,

ಯಾವಾಗಲೂ ಶ್ರೀರಾಮ ಸೇವಾನಿರತರೂ, ಆಸ್ತಿಕರೂ ಆದ ಇವರು ಈ ಗ್ರಂಥದ ಪ್ರಾರಂಭದಿಂದ ಪರಿಸಮಾಪ್ತಿಯ ವರೆಗೂ ಲೇಖನ ಕಾರ್ಯದಲ್ಲಿ ನನಗೆ ತುಂಬಾ ಸಹಾಯಕರಾಗಿದ್ದರು. ಗಣಿಯಲ್ಲಿ ಅಡಗಿದ್ದ ಈ ರತ್ನವನ್ನು ಹೊರಗಡೆ ಪ್ರಕಾಶಕ್ಕೆ ನಾನು ತರಲು ಈ ಭಗವದ್ಭಕ್ತರ ರಾಮಸೇವೆಯೇ ಮೂಲಕಾರಣವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಈ ಗ್ರಂಥವನ್ನು ಕನ್ನಡಕ್ಕೆ ಅನುವಾದ ಮಾಡುವ ಸಂದರ್ಭದಲ್ಲಿ ಕೆಲವು ಭಾಗಗಳು ಪರಿವರ್ತಿಸಲು ಸುಲಭ ವಾಗಿ ಕಂಡುಬಂದರೂ ಅನೇಕ ಕ್ಲಿಷ್ಟ ಪದಗಳೂ ಭಿನ್ನ ಭಿನ್ನ ವೃತ್ತಜಾತೀಯ ಶ್ಲೋಕಗಳೂ ಗೂಢಾರ್ಥಗಳಿಂದ ಕೂಡಿದ ಪದಗಳೂ ಯೋಗಪ್ರಕ್ರಿಯೆಗಳೂ ಅದ್ವೈತ ತತ್ತ್ವಾರ್ಥಗಳೂ ಇದ್ದು, ಪರಿವರ್ತನೆಯ ಕಾರ್ಯವು ನನ್ನ ಅಲ್ಪಮತಿಗೆ ಸ್ವಲ್ಪ ಕಷ್ಟವಾಯಿತು. ಮೈಸೂರಿನ ಶಂಕರಮಠದಲ್ಲಿ ಶ್ರೀ ಶೃಂಗೇರಿ ಜಗದ್ಗುರುಗಳ ಕೃಪಾಶ್ರಯ ದಲ್ಲಿ ನಡೆಯುತ್ತಿದ್ದ ಅದ್ವೈತ ತತ್ವ ಪ್ರಕರಣ ಗ್ರಂಥಗಳ ಮತ್ತು ಪ್ರಸ್ಥಾನತ್ರಯ ಶಾಂಕರ ಭಾಷ್ಯಗಳ ಪ್ರವಚನ ಗಳನ್ನು ಸುಮಾರು 25-30 ವರ್ಷಗಳಿಂದ ಕೇಳಿದ ಸಂಸ್ಕಾರವಿಶೇಷದಿಂದಲೂ ಮತ್ತು ಶ್ರೀರಾಮಚಂದ್ರನ ಪ್ರೇರಣೆಯಿಂದಲೂ ಈ ಕೆಲಸವನ್ನು ಪೂರ್ಣಗೊಳಿಸಲು ಸಾಧ್ಯವಾಯಿತು.

ಈ ಗ್ರಂಥದ ರಾಮಯೋಗ ಖಂಡದಲ್ಲಿ ಯೋಗಪ್ರಕ್ರಿಯೆಗಳು ಬಹುವಾಗಿ ಕಂಡುಬರುತ್ತವೆ. ಇವುಗಳನ್ನು ಸುಲಭವಾಗಿ ತಿಳಿಯಲು ಅನುಕೂಲಿಸುವಂತೆ ಈ ಆಶ್ವಾಸದ ಕನ್ನಡ ಅನುವಾದದ ಕೊನೆಯಲ್ಲಿ ಯೋಗವಿಷಯ ವಾಗಿ ಸ್ವಲ್ಪ ವಿಚಾರ ಮಾಡಿರುತ್ತೇನೆಯಲ್ಲದೆ ಈ ಸಂದರ್ಭದಲ್ಲಿ ಯೋಗಚಕ್ರಗಳ ನಕ್ಷೆಯೊಂದನ್ನೂ, ಆತ್ಮಾರಾಮ ಪೂಜಾ ದ್ವಾದಶಮಂಜರಿ, ಯೋಗಚಕ್ರಾತ್ಮಕ ನಿರ್ಗುಣಧ್ಯಾನ ಎಂಬ ಸ್ವಕಪೋಲ ಕಲ್ಪಿತ ಎರಡು ಕನ್ನಡ ಕೃತಿಗಳನ್ನು ಅಳವಡಿಸಿರುತ್ತೇನೆ.

ಈ ಗ್ರಂಥದ 'ರಾಮ ತತ್ವ ಖಂಡ'ದಲ್ಲಿನ ಶ್ಲೋಕಗಳಿಗೆ ಸಂಬಂಧಿಸಿ, 'ರಾಮ ತತ್ವ ಅರ್ಥಾತ್ ಅದ್ವೈತ ತತ್ವ ಸಾರ ಸಂಗ್ರಹ' ಎಂಬ ಅದ್ವೈತ ಶಾಸ್ತ್ರಬೋಧಕ ವಿವರಣೆಯನ್ನು ಆ ಖಂಡದ ಶ್ಲೋಕಗಳ ಕೊನೆಯಲ್ಲಿ ಸೇರಿಸಿದ್ದೇನೆ. ಶ್ರೀಮಚ್ಛಂಕರರು ವಿವೇಕ ಚೂಡಾಮಣಿ ಗ್ರಂಥದಲ್ಲಿ ಅಪ್ಪಣೆ ಕೊಡಿಸಿರುವಂತೆ, ಪ್ರಪಂಚದ 84 ಲಕ್ಷ ಜೀವರಾಶಿಗಳಲ್ಲಿ ನರಜನ್ಮ ಬರುವುದೇ ದುರ್ಲಭ. ಅಂಥ ನರಜನ್ಮ ಬಂದಾಗ್ಯೂ ವೈದಿಕ ಧರ್ಮಾಚರಣೆಯಲ್ಲಿ ಆಸಕ್ತಿ ಹೊಂದುವುದು ಮತ್ತೂ ದುರ್ಲಭ. ಅದರಲ್ಲಿಯೂ ಪಾಂಡಿತ್ಯವನ್ನು ಸಂಪಾದಿಸುವುದು ಇನ್ನೂ ದುರ್ಲಭ. ಇದು ಆತ್ಮ, ಇದು ಅನಾತ್ಮ ಎಂಬ ವಿವೇಚನೆಯುಂಟಾಗುವುದು ಮತ್ತೂ ಕಷ್ಟ. ಅದರಲ್ಲಿಯೂ ಸ್ವಾನುಭವ ವುಂಟಾಗುವುದು ಕೇವಲ ವಿರಳ.

ಹೀಗಾಗಿ ಮುಕ್ತಿಯು ಅನೇಕ ಕೋಟಿ ಜನ್ಮಗಳಲ್ಲಿ ಫಲಾಭಿಲಾಷೆಯಿಲ್ಲದೆ ಭಗವದರ್ಪಣ ಬುದ್ಧಿಯಿಂದ ಮಾಡಲಾಗುವ ಪುಣ್ಯಗಳಿಂದಲ್ಲದೆ ಲಭಿಸುವುದಿಲ್ಲ. ಹೀಗಿರುವಲ್ಲಿ ಇಂತಹ ದುರ್ಲಭವಾದ ನರಜನ್ಮವನ್ನು ಹೊಂದಿಯೂ ಯಾವನು ತನ್ನ ಮುಕ್ತಿಯ ವಿಷಯದಲ್ಲಿ ಸ್ವಲ್ಪವಾದರೂ ಪ್ರಯತ್ನ ಮಾಡುವುದಿಲ್ಲವೋ ಅವನು ಆತ್ಮಘಾತುಕನೇ ಸರಿ. ಜನನ ಮರಣ ಸ್ವರೂಪವಾದ ಸಂಸಾರವೆಂಬ ಕಾಳ್ಗಿಚ್ಚಿನ ಜ್ವಾಲೆಗಳಿಂದ ಬೇಯುತ್ತಿರು ನವರಿಗೆ ಶಾಂತಿಯನ್ನುಂಟುಮಾಡಿ ಆನಂದ ರಸದಲ್ಲಿ ಕ್ರೀಡಿಸುವಂತೆ ಮಾಡುವುದು ಯಾವುದೆಂದರೆ, 'ಅಜ್ಞಾನದಿಂದ ದೇಹಾದಿಗಳನ್ನು ತಾನೆಂದು ಭ್ರಮಿಸಿಕೊಂಡಿರುವುದನ್ನು ವೇದಾಂತಾರ್ಥ ವಿಚಾರದಿಂದ ನಿವಾರಿಸಿಕೊಂಡು ತಾನು ಸಚ್ಚಿದಾನಂದನಾದ ನಿರ್ಗುಣ ಬ್ರಹ್ಮನೇ ಎಂದು ಅನುಭವಕ್ಕೆ ತಂದುಕೊಳ್ಳುವುದು'. ಇದೇ ಮುಕ್ತಿಯು.

"ಈ ಸಂಸಾರವೆಂಬ ಸಮುದ್ರವು ಅವಿದ್ಯೆ, ಕಾಮ, ಕರ್ಮಗಳೆಂಬ ನೀರುಳ್ಳದ್ದಾಗಿದೆ. ತಡೆಯಲಾರದ ಬೇನೆಗಳು ಮುಪ್ಪು ಸಾವು ಎಂಬ ದೊಡ್ಡ ದೊಡ್ಡ ಮೊಸಳೆಗಳಿಂದ ಕೂಡಿದೆ. ಮೊದಲಿಲ್ಲದೆ, ಕೊನೆಯಿಲ್ಲದೆ, ಪಾರವಿಲ್ಲದೆ, ಆಶ್ರಯವೂ ಇಲ್ಲದೆ ಇದೆ. ಇದರಲ್ಲಿ ವಿಶ್ರಾಂತಿ ಸ್ಥಾನವೆಂದರೆ, ವಿಷಯೇಂದ್ರಿಯಗಳಿಂದ ಅಲ್ಲಲ್ಲಿ

ಒಂದಿಷ್ಟು ಉಂಟಾಗುವ ವಿಷಯಸುಖ ಮಾತ್ರ. ಈ ಸಮುದ್ರದಲ್ಲಿ ಇಂದ್ರಿಯಾರ್ಥಗಳ ಬಯಕೆಯೆಂಬ ಬಿರುಗಾಳಿ ಬೀಸುತ್ತಾ, ತನ್ನ ಹೊಡೆತದಿಂದ ಅನರ್ಥಗಳೆಂಬ ನೂರಾರು ದೊಡ್ಡ ದೊಡ್ಡ ಅಲೆಗಳನ್ನು ಎಬ್ಬಿಸುತ್ತಿರುತ್ತದೆ. ಈ ಸಮುದ್ರವು ಮಹಾ ರೌರವವೇ ಮುಂತಾದ ಘೋರ ನರಕಗಳಲ್ಲಿನ "ಹಾಹಾ" ಮುಂತಾದ ಕೂಗುಗಳಿಂದ ಉಂಟಾದ ದೊಡ್ಡ ಗದ್ದಲವುಳ್ಳದ್ದಾಗಿದೆ. ಸತ್ಯ, ಆರ್ಜವ, ದಾನ, ದಯೆ, ಅಹಿಂಸೆ, ಶಮ, ದಮ, ಸ್ಮೃತಿ ಮುಂತಾದ ಆತ್ಮಗುಣಗಳೆಂಬ ಪಾಥೇಯದಿಂದ ತುಂಬಿರುವ ಜ್ಞಾನವೆಂಬ ದೋಣಿಯಲ್ಲಿ ಕುಳಿತು, ಸತ್ಸಂಗ, ಸರ್ವತ್ಯಾಗ ಎಂಬ ಮಾರ್ಗದಿಂದ ಈ ಸಮುದ್ರವನ್ನು ದಾಟಿ, ಮೋಕ್ಷವೆಂಬ ದಡಕ್ಕೆ ಸೇರಬೇಕು.

ಹೀಗೆಂದು ಶ್ರೀಮಚ್ಛಂಕರ ಭಗವತ್ಪಾದರು ಐತರೇಯೋಪನಿಷತ್ತಿನ ಭಾಷ್ಯದಲ್ಲಿ ಹೇಳಿರುವರು. ಸನಾತನ ಧರ್ಮವೆಲ್ಲಾ ಖಿಲವಾಗುತ್ತಾ, ವರ್ಣಾಶ್ರಮ ಧರ್ಮಗಳು, ಸತ್ಕುಲಾಚಾರಗಳು, ಶಾಸ್ತ್ರವಿಧಿಗಳು ಎಲ್ಲವೂ ಕಾಣದಂತಾಗಿ ಕಲಿಯ ತಾಂಡವನೃತ್ಯವು ಪ್ರಬಲವಾಗುತ್ತಿರುವ ಈ ಸಮಯದಲ್ಲಿ, ಮೇಲೆ ಹೇಳಿದ ಪಾಥೇಯಗಳಲ್ಲಿ ಒಂದನ್ನಾದರೂ ನಾವು ಹೊಂದದೆ, ಚಿತ್ತಶುದ್ಧಿಯೆಂಬ ಮೊದಲ ಹಂತವನ್ನು ಹತ್ತಲು ಕೂಡಾ ಅನರ್ಹರಾಗಿರುತ್ತೇವೆ. ಇಂತಹ ಪರಿಸ್ಥಿತಿಯಲ್ಲಿ ಪೂರ್ವಜನ್ಮದ ಸುಕೃತದಿಂದಲೂ ಈಶ್ವರಾನುಗ್ರಹದಿಂದಲೂ ತಾವು ಮುಕ್ತಿ ಮಾರ್ಗವನ್ನು ಅನುಸರಿಸಬೇಕೆಂದು ಇಚ್ಛಿಸುವ ಮುಮುಕ್ಷುಗಳು ಪ್ರಥಮತಃ ಅನುಸರಿಸಬೇಕಾದ ಕರ್ತವ್ಯವೇನೆಂದರೆ,

"ನಾಮಸ್ಮರಣಾದನ್ಯೋಪಾಯಂ ।
ನಹಿ ಪಶ್ಯಾಮೋ ಭವತರಣೇ ॥ ೧ ॥
ಕಲೌ ಯುಗೇ ಕಲ್ಮಷ ಮಾನಸಾನಾಂ ।
ಅನ್ಯತ್ರ ಧರ್ಮೇ ಖಲುನಾಧಿಕಾರಃ ॥ ೨ ॥

ಎಂಬುದಾಗಿ ಶ್ರೀಮಚ್ಛಂಕರರು ಅಪ್ಪಣೆ ಕೊಡಿಸಿರುವಂತೆ, ಪರಮಾತ್ಮನ ನಾಮಸಂಕೀರ್ತನೆಯೇ ಮುಖ್ಯವಾಗಿ ಮಾಡತಕ್ಕದು. ಇಂತಹ ನಾಮಸಂಕೀರ್ತನೆಗಳಲ್ಲಿ "ಶ್ರೀರಾಮ"ನಾಮಸಂಕೀರ್ತನವು ಪರಮಶ್ರೇಷ್ಠವಾದುದು.

ಪದ್ಮಪುರಾಣದಲ್ಲಿ ಉತ್ತರ ಖಂಡ, 143ನೇ ಅಧ್ಯಾಯ 7ನೇ ಶ್ಲೋಕದಲ್ಲಿ ಪರಮೇಶ್ವರನು ಪಾರ್ವತಿಗೆ,

"ಅಹಂ ರಾಮೋಸ್ತು ವಿಜ್ಞೇಯೋ ರಾಮೋ ವೈ, ರುದ್ರ ಏವಚ ।
ಏವಂ ಜ್ಞಾತ್ವಾತು ದೇವೇಶಂ ನಭೇದೋ ವರ್ತತೇ ಕ್ವಚಿತ್ ॥"

ಎಂದು ಹೇಳಿರುವಂತೆಯೂ,

ಶ್ರೀಮಚ್ಛಂಕರರು 'ವಂದೇ ಸಾಧಕವರ್ಗ ಕಲ್ಪಕತರುಂ ವಂದೇ ತ್ರಿಮೂರ್ತ್ಯಾತ್ಮಕಂ' ಎಂದು ಹೇಳಿರುವಂತೆಯೂ, ಶ್ರೀರಾಮನೇ ಪರಮೇಶ್ವರನು, ತ್ರಿಮೂರ್ತ್ಯಾತ್ಮಕನು. ಶೈವ, ವೈಷ್ಣವ ಎಂಬ ಭೇದವಿಲ್ಲದೆ ಎಲ್ಲರೂ ಸ್ತುತಿಸಬಹುದಾದ ನಾಮವಿದು. ಅಲ್ಲದೆ,

"ರಾಮ ಏವ ಪರಬ್ರಹ್ಮ ರಾಮ ಏವ ಪರಂ ತಪಃ ।
ರಾಮ ಏವ ಪರಂ ತತ್ತ್ವಂ ಶ್ರೀರಾಮೋ ಬ್ರಹ್ಮತಾರಕಂ ॥"

ಎಂದು ರಾಮ ರಹಸ್ಯೋಪನಿಷತ್ತಿನಲ್ಲಿ ಹೇಳಿರುವಂತೆ ಶ್ರೀರಾಮನೇ ಸಗುಣ ಬ್ರಹ್ಮನು. ಶ್ರೀರಾಮನೇ ನಿರ್ಗುಣ ಬ್ರಹ್ಮನು.

ಮತ್ತು "ರಾಮೇತಿ ವರ್ಣದ್ವಯಮಾದರೇಣ ಸದಾ ಸ್ಮರನ್ ಮುಕ್ತಿಮುಪೈತಿ ಜಂತುಃ" ಎಂಬಂತೆ ಮುಕ್ತಿ ಮಾರ್ಗಕ್ಕೆ ಶ್ರೀರಾಮ ನಾಮವು ಅತಿ ಶ್ರೇಷ್ಠವಾದ ಸಾಧನವು.

ಇಂತಹ ಶ್ರೇಷ್ಠವಾದ ಶ್ರೀರಾಮನಾಮಾತ್ಮಕವಾದ 'ರಾಮ ಕರ್ಣಾಮೃತ'ವೆಂಬ ಈ ಸ್ತೋತ್ರರೂಪ ಗ್ರಂಥವನ್ನು ನಿತ್ಯವೂ ಪಾರಾಯಣಕ್ಕೆ ಇಟ್ಟುಕೊಂಡು ಅಥವಾ ಇದನ್ನು ಕೀರ್ತನ ರೂಪದಲ್ಲಿ ನಿತ್ಯವೂ ಹಾಡಿಸಿ ಕೇಳುತ್ತಾ, ಅನುವಾದವನ್ನು ಓದಿ ಸ್ತೋತ್ರಗಳ ರಸವನ್ನು ಸವಿಯುತ್ತಾ, ಮೋಕ್ಷವೆಂದರೇನು ? ನಮ್ಮ ಸಂಸಾರ ದುಃಖಗಳು ಪರಿಹಾರವಾಗುವುದೆಂತು ? ಇದಕ್ಕೆ ನಾವು ಏನು ಸಾಧಿಸಬೇಕೆಂಬುದನ್ನು ವೇದಾಂತ ಶ್ರವಣದಿಂದಲೂ, ಸತ್ಸಂಗದಿಂದಲೂ ಮನಗಂಡು, ಶಾಸ್ತ್ರವಿಧಿಯಂತೆ ನಮ್ಮ ವರ್ಣಾಶ್ರಮ ಧರ್ಮಗಳಿಗೆ ಅನುಸಾರವಾಗಿಯೂ, ನಮ್ಮ ಕುಲಾನುಗತವಾದ ಶಾಸ್ತ್ರ ನಿಷಿದ್ಧವಲ್ಲದ ಶಿಷ್ಟ ಸಂಪ್ರದಾಯದಂತೆಯೂ, ನಿತ್ಯಕರ್ಮಗಳನ್ನು ನಿಷ್ಕಾಮವಾಗಿ ಭಗವದರ್ಪಣ ಬುದ್ಧ್ಯಾ ಮಾಡುತ್ತಾ, ಶ್ರೀರಾಮ ಪೂಜಾ, ಶ್ರೀರಾಮ ಸ್ತೋತ್ರ ಪಠನ, ಶ್ರೀರಾಮ ಧ್ಯಾನ ಇವುಗಳನ್ನು ಆಚರಿಸುತ್ತಾ, ಯೋಗದಲ್ಲಿ ಹೇಳಿರುವ ಮುಕ್ತಿಯ ಅಷ್ಟಾಂಗ ಸಾಧನಗಳಲ್ಲಿ 'ಯಮ, ನಿಯಮ'ಗಳೆಂಬ ಎರಡು ಸಾಧನಗಳನ್ನಾದರೂ ಈ ಜನ್ಮದಲ್ಲಿ ಸಾಧಿಸಿ ಚಿತ್ತಶುದ್ಧಿಯನ್ನೂ, ಪರಮಾತ್ಮನ ಅನುಗ್ರಹವನ್ನೂ ಪಡೆದು, ಮುಂದೆ ಇನ್ನೂ ಉತ್ತಮ ಜನ್ಮವನ್ನು ಹೊಂದಿದವರಾಗಿ ತೀವ್ರ ವೈರಾಗ್ಯವನ್ನು ಸಾಧಿಸಿ ಮೋಕ್ಷವನ್ನು ಹೊಂದ ಬಹುದು. ಹಾಗಿಲ್ಲದೆ ಈ ನರಜನ್ಮವನ್ನು ವ್ಯರ್ಥಗೊಳಿಸಿದರೆ ಅಂಧಕಾರಮಯವಾದ ಪಶು ಪಕ್ಷಿ ಮೃಗ ಕೀಟಗಳ ಜನ್ಮಗಳನ್ನು ಪಡೆದು ಅನೇಕ ಯುಗಗಳನ್ನು ಅಜ್ಞಾನಾಂಧಕಾರವೆಂಬ ಕೂಪದಲ್ಲಿ ಬಿದ್ದು ಕಳೆಯಬೇಕಾಗುವುದು.

ಕೊನೆಯದಾಗಿ ಈ 'ಯಮ, ನಿಯಮ'ಗಳೆಂದರೇನು ಎಂಬುದನ್ನು ಸಂಗ್ರಹವಾಗಿ ಈ ಕೆಳಗೆ ಹೇಳುತ್ತೇನೆ.

'ಯಮ' ಎಂದರೆ :—ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಇವುಗಳು. ಯಾವ ಪ್ರಾಣಿಯನ್ನೂ ನೋಯಿಸದಿರುವುದು ಅಹಿಂಸೆಯೆನ್ನಿಸಿಕೊಳ್ಳುತ್ತದೆ.

ಮಿತಭಾಷಿಯಾಗಿರುವುದು, ಸುಳ್ಳು ಹೇಳದಿರುವುದು, ಯಾವಾಗಲೂ ಸತ್ಯವನ್ನೇ ಹೇಳುವುದು, ಇನ್ನೊಬ್ಬರಿಗೆ ಸತ್ಯ ಹೇಳುವುದು ಅಪ್ರಿಯವಾಗಿ ತೋರಿದರೆ ಆ ಕಾಲದಲ್ಲಿ ಸುಮ್ಮನಿರುವುದು, ಇವೇ "ಸತ್ಯ"ವೆನ್ನಿಸಿಕೊಳ್ಳುವುವು. ಪರರ ಸ್ವತ್ತನ್ನು ಅಪಹರಿಸದೇ ಇರುವುದೇ 'ಅಸ್ತೇಯ' ಎನ್ನಿಸುವುದು. ಪರಸ್ತ್ರೀಯರಲ್ಲಿ ಸಹೋದರಿ ಬುದ್ಧಿಯನ್ನು ಹೊಂದಿರುವುದು ಮತ್ತು ಸ್ತ್ರೀಸುಖವನ್ನು ಬಯಸದಿರುವುದು 'ಬ್ರಹ್ಮಚರ್ಯ'ವೆನ್ನಿಸಿಕೊಳ್ಳುವುದು. ಎಷ್ಟು ಸಾಧನದಿಂದ ತನ್ನ ದೇಹಕ್ಕೆ ರಕ್ಷಣೆ ಅವಶ್ಯಕವೋ ಅದಕ್ಕಿಂತ ಹೆಚ್ಚಾಗಿ ಭೋಗಸಾಧನಗಳನ್ನು ಕೂಡಿ ಹಾಕದಿರುವುದು 'ಅಪರಿಗ್ರಹ'ವೆನಿಸುವುದು. ಇವುಗಳನ್ನು ಕಾಯಾ, ವಾಚಾ, ಮನಸಾ ಆಚರಿಸಬೇಕು.

'ನಿಯಮ' ಎಂದರೆ :— ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ, ಈಶ್ವರ ಪ್ರಣಿಧಾನ ಎಂಬುವು. ಶರೀರವನ್ನೂ ಮನಸ್ಸನ್ನೂ ಶುದ್ಧವಾಗಿಟ್ಟುಕೊಂಡಿರುವುದೇ ಶೌಚವು. ದೇವರು ಕೊಟ್ಟದ್ದರಲ್ಲಿ ತೃಪ್ತನಾಗಿ ಆಶೆಮಾಡದಿರುವಿಕೆಯೇ ಸಂತೋಷವು.

ಮನಸ್ಸು ಮತ್ತು ಇಂದ್ರಿಯಗಳು, ಇವುಗಳನ್ನು ಹೋದ ದಾರಿಯಲ್ಲಿ ಬಿಡದಿರುವುದೇ ತಪಸ್ಸು. ಇದು ಸ್ವಧರ್ಮಾಚರಣೆಯಿಂದ ಲಭಿಸುತ್ತದೆ. ಆದಪ್ರಯುಕ್ತ ಶ್ರೌತಸ್ಮಾರ್ತ ಕರ್ಮಗಳನ್ನೂ, ಕುಲಾನುಗತವಾದ ಶ್ರುತಿ ನಿಷಿದ್ಧವಲ್ಲದ ಶಿಷ್ಟ ಸಂಪ್ರದಾಯಗಳನ್ನೂ ವರ್ಣಾಶ್ರಮ ಧರ್ಮಗಳಿಗೆ ಅನುಸಾರವಾಗಿ ಆಚರಿಸುವುದೇ ತಪಸ್ಸು. ಗೃಹಸ್ಥನಾದ ಬ್ರಾಹ್ಮಣನು ಪ್ರತಿನಿತ್ಯವೂ,

"ಸ್ವಶಾಖೋಪನಿಷದಂ ಗೀತಾಂ | ವಿಷ್ಣೋರ್ನಾಮ ಸಹಸ್ರಕಂ |
ಶ್ರೀರುದ್ರಂ ಪುರುಷಸೂಕ್ತಂಚ | ನಿತ್ಯಮಾವರ್ತಯೇದ್ಗೃಹೀ ||"

ಎಂಬಂತೆ ಇವುಗಳನ್ನು ತ್ರಿಕಾಲ ಸಂಧ್ಯಾವಂದನೆಯೊಡನೆ ಆಚರಿಸಬೇಕು.

ಸಪ್ತದಶೀ, ಅಷ್ಟಾಕ್ಷರೀ, ಪ್ರಣವ, ಪಂಚಾಕ್ಷರೀ, ಅಜಪ ಮಂತ್ರ, ಶ್ರೀರಾಮ ತಾರಕ ಮಂತ್ರ, ಗಾಯಿತ್ರೀ ಮುಂತಾದ ಮಂತ್ರಗಳ ಜಪ ಯಾವುದುಂಟೋ ಅದು "ಸ್ವಾಧ್ಯಾಯ"ವೆನಿಸುವುದು ಇವುಗಳಲ್ಲಿ ಯಾವವುಗಳ ನ್ನಾದರೂ ಗುರುಮುಖೇನ ಉಪದೇಶವನ್ನು ಹೊಂದಿ ಜಪ ಮಾಡುವುದು. ಇವುಗಳಲ್ಲಿ 'ಶ್ರೀರಾಮ' ಎಂಬ ತಾರಕ ಮಂತ್ರವು ಸರ್ವರೂ ಜಪಿಸುವುದಕ್ಕೆ ತಕ್ಕುದಾಗಿದೆ.

ಮೇಲ್ಕಂಡ ಎಲ್ಲವನ್ನೂ ಆಚರಿಸಿ ನಮ್ಮ ಅಪರಾಧಗಳಿಗೆಲ್ಲಾ ಪಶ್ಚಾತ್ತಾಪ ಸೂಚಿಸುತ್ತಾ ನಮ್ಮ ಸಮಸ್ತ ಕರ್ಮಗಳನ್ನೂ ಶ್ರೀರಾಮಚಂದ್ರನಲ್ಲಿ ಅರ್ಪಿಸುವುದೇ ಈಶ್ವರ ಪ್ರಣಿಧಾನವು.

"ಲೋಕೇಶ ಚೈತನ್ಯಮಯಾಧಿದೇವ। ಶ್ರೀರಾಮಚಂದ್ರ।
ಭವದಾಜ್ಞಯೈವ। ಪ್ರಾತಃಸಮುತ್ಥಾಯ ತವ ಪ್ರಿಯಾರ್ಥಂ।
ಸಂಸಾರಯಾತ್ರಾಂ ಅನುವರ್ತಯಿಷ್ಯೇ॥

ಜಾನಾಮಿ ಧರ್ಮಂ ನಚ ಮೇ ಪ್ರವೃತ್ತಿಃ।
ಜಾನಾಮ್ಯಧರ್ಮಂ ನಚ ಮೇ ನಿವೃತ್ತಿಃ।
ತ್ವಯಾ ರಘುಶ್ರೇಷ್ಠ ಹೃದಿಸ್ಥಿತೇನ।
ಯಥಾ ನಿಯುಕ್ತೋಸ್ಮಿ ತಥಾ ಕರೋಮಿ॥

ಎಂಬ ಸ್ತೋತ್ರದಂತೆ, ಸರ್ವವನ್ನೂ ಭಗವಂತನಲ್ಲಿ ಅರ್ಪಿಸುವುದು. ಇದೇ ನಿಷ್ಕಾಮಕರ್ಮವು. ಇವುಗಳನ್ನು ಸಾಧಿಸಿದರೆ ನಮಗೆ ಚಿತ್ತಶುದ್ಧಿಯಾಗಿ ಈಶ್ವರಾನುಗ್ರಹವಾಗುವುದು.

ಇದಾದಮೇಲೆ ಮನಸ್ಸನ್ನು ಏಕಾಗ್ರತೆಗೆ ತರಲು ಪ್ರಯತ್ನಿಸಬೇಕು. ವೇದಾಂತ ವಿಚಾರಗಳನ್ನು ಸರ್ವದಾ ಮಾಡುತ್ತಾ ಸಾಧುಗಳ ಸಹವಾಸದಲ್ಲಿರುತ್ತಾ, ಪ್ರಾಣಾಯಾಮವನ್ನು ಮಿತವಾಗಿ ಆಚರಿಸುತ್ತಾ, ಹಂಸಮಂತ್ರ ಧ್ಯಾನ ಮಾಡುತ್ತಾ [ಹಂಸಮಂತ್ರ ಧ್ಯಾನದ ವಿಚಾರವಾಗಿ ದ್ವಿತೀಯಾಶ್ವಾಸದ ಅನುವಾದದಲ್ಲಿ ತಿಳಿಸಿರುತ್ತೆಯಾಗಿ ಇಲ್ಲಿ ಪುನಃ ವಿವರಿಸಿಲ್ಲ.] ನಮ್ಮಲ್ಲಿರುವ ದುರ್ವಾಸನೆಗಳನ್ನು ಕ್ಷಯ ಮಾಡಿಕೊಳ್ಳಬೇಕು. ಮನಸ್ಸೆಂಬ ಮದಗಜವು ಸ್ವಾಧೀನಕ್ಕೆ ಬರುವುದು ಕಷ್ಟ.

ವೇದಾಂತ ವಿಚಾರದಿಂದ ಸಂಸಾರದ ಸುಖವೆಂಬುದೆಲ್ಲಾ ಮೂರು ಗಳಿಗೆಯ ಬಾಳಿನದೆಂದೂ, ಆದರಲ್ಲಿ ಹುರುಳಿಲ್ಲವೆಂದೂ, ಆ ಸುಖವಾದರೂ ತಾತ್ಕಾಲದಲ್ಲಿ ಸುಖವಾಗಿ ಕಾಣುವುದೇ ಆಗಿರುವುದೆಂದೂ, ಆ ಅಲ್ಪಸುಖ ವನ್ನು ಪಡೆಯುವಾಗಲೂ ಕೂಡ ದುಃಖ, ಆ ಅಲ್ಪಸುಖ ಮುಗಿದು ಹೋದಮೇಲೆಯೂ ಅದರ ಅಗಲಿಕೆಯ ದುಃಖ, ಹೀಗೆಲ್ಲಾ ಆಗಿ ಆ ಸಂಸಾರ ಸುಖವು ಕೇವಲ ದುಃಖಮಯವಾಗಿರುವುದೆಂದೂ ತಿಳಿದು ಆ ಸಂಸಾರ ಸುಖಗಳನ್ನು ಉಪೇಕ್ಷೆಮಾಡಿ ನಿಜವಾದ ಪರಮ ಸುಖವನ್ನು ಹೊಂದಲು ಆಚಾರ್ಯರು 'ಆತ್ಮೇಚ್ಛಾವ್ಯಸೀಯತಾಂ' ಎಂದು ಹೇಳಿರುವಂತೆ, ನಮ್ಮ ಸ್ವರೂಪವೇನೆಂಬುದನ್ನು ತಿಳಿಯಬೇಕು. ನಾವೇ ಪರಮಾರ್ಥತಃ ಸಚ್ಚಿದಾನಂದರೂಪ ಬ್ರಹ್ಮವೆಂದೂ, ಮನಸ್ಸೆಂಬ ಉಪಾಧಿಯ ಸಂಬಂಧದಿಂದ ನಮಗೆ ಅಲ್ಪಜ್ಞತ್ವ ಬಂದಿದೆಯೆಂದೂ, ಅಂತೆಯೇ ಮಾಯೋಪಾಧಿಯಿಂದ ಪರಬ್ರಹ್ಮನಾದ ಈಶ್ವರನಿಗೆ ಸರ್ವಜ್ಞತ್ವವೂ ಬಂದಿದೆಯೆಂದೂ, ಔಷ್ಣ್ಯ ಪ್ರಕಾಶಾತ್ಮಕ ವಾದ ಅಗ್ನಿಯು ಒಂದಾಗಿದ್ದರೂ ಕಟ್ಟಿಗೆಯ ಭೇದದಿಂದ ಬೇರೆಬೇರೆಯಾಗಿ ಕಾಣುವಂತೆ ನಮ್ಮ ಮತ್ತು ಪರಮೇಶ್ವರನ ಚೈತನ್ಯವು ಒಂದೇ ಆದರೂ ಉಪಾಧಿ ಭೇದದಿಂದ ಬೇರೆಬೇರೆಯಾಗಿ ಉತ್ಕರ್ಷನಿಕರ್ಷಗಳನ್ನು ಹೊಂದಿ ಕಾಣಿಸುವುದೆಂದೂ ಚೆನ್ನಾಗಿ ತಿಳಿದು ಅನುಭವಕ್ಕೆ ತಂದುಕೊಂಡರೆ, "ಬ್ರಹ್ಮವೇದ ಬ್ರಹ್ಮೈವಭವತಿ" ಎಂಬ ಉಪನಿಷದ್ವಾಕ್ಯದಂತೆ ಬ್ರಹ್ಮವೇ ನಾವಾಗಿರುವೆವೆಂಬುದು ನಮಗೆ ಗೊತ್ತಾಗುವುದು.

ಈ ವೇದಾಂತ ವಿಚಾರವನ್ನು ಸರ್ವದಾ ಮಾಡುತ್ತಿರಬೇಕಲ್ಲದೆ, ತತ್ವವು ಚೆನ್ನಾಗಿ ಅನುಭವಕ್ಕೆ ಬರಲು ಸಾಧುಗಳೆಂಬ ಸಜ್ಜನರ ಸಂಗದಲ್ಲಿರಬೇಕು. 'ಸತ್' ಎಂದರೆ ಎಂದೆಂದಿಗೂ ಅಚ್ಚಳಿಯದಂತೆ ಎಲ್ಲೆಲ್ಲಿಯೂ ಇರುವ ಭಗವತ್ಸ್ವರೂಪ. ಜಗತ್ತಿನಲ್ಲಿ ನಿಜವಾಗಿರುವ ವಸ್ತುವು ಇದೊಂದೇ. ಮಿಕ್ಕವೆಲ್ಲಾ ಕನಸಿನ ವಸ್ತುಗಳಂತೆ ಬರೀ ತೋರಿಕೆಯವು. ಈ ಭಗವತ್ಸ್ವರೂಪವನ್ನು ಕಾಣುವ ದಾರಿಯಲ್ಲಿ ಮುಂದುವರಿದಿರುವ ಜನರು ಸಜ್ಜನರು. ಇವರೊಡನೆ ಬಳಕೆಯನ್ನು ಬೆಳೆಸಬೇಕು. ಆ ಬಳಕೆಯ ದೆಸೆಯಿಂದ ನಮ್ಮ ಮನಸ್ಸೂ ಅದೇ ದಾರಿಯಲ್ಲಿ ಮುಂದುವರಿಯುವುದು. ಇಷ್ಟಾದರೂ ನಮ್ಮ ಮನಸ್ಸಿನ ದುರ್ವಾಸನೆಗಳು ಅಳಿಯದೇ ಇದ್ದರೆ, ಪ್ರಾಣಾಯಾಮದಿಂದ ಮನಸ್ಸನ್ನು ಹರಿದಾಡದಂತೆ ಮಾಡಬೇಕು ಪ್ರಾಣ ಮನಸ್ಸುಗಳಲ್ಲಿ ಒಂದನ್ನು ಅಧೀನ ಮಾಡಿಕೊಂಡರೆ ಇನ್ನೊಂದು ತನಗೆ ತಾನೇ ಅಧೀನವಾಗುವುದು.

ಆಸನ (ಪದ್ಮಾಸನ ಅಥವಾ ಸಿದ್ಧಾಸನ) ನಿಯಮವನ್ನೂ ಊಟದ ನಿಯಮವನ್ನೂ ಸಾಧಿಸಿ, ತಪ್ಪದೆ ಪ್ರಾಣಾಯಾಮವನ್ನು ಮಾಡಬೇಕು. ಉಸಿರನ್ನು ಬಿಗಿಹಿಡಿದು ವ್ಯಾಹೃತಿ, ಪ್ರಣವ, ಶಿರಸ್ಸಿನಿಂದ ಕೂಡಿದ ಗಾಯಿತ್ರಿಯನ್ನು ಮನಸ್ಸಿನಲ್ಲಿ ಮೂರುಬಾರಿ ಅಂದುಕೊಂಡರೆ ಒಂದು ಪ್ರಾಣಾಯಾಮವಾಗುತ್ತದೆ. ಈ ಪ್ರಾಣಾಯಾಮದಲ್ಲಿ ರೇಚಕ, ಪೂರಕ, ಕುಂಭಕ ಎಂದು ಮೂರು ಕೆಲಸಗಳಿವೆ. ಇವುಗಳನ್ನು ಸರಿಯಾಗಿ ಉಪದೇಶಹೊಂದಿ ಅನುಸರಿಸಬೇಕು. ಇದನ್ನು ಸಾಧ್ಯವಾದಷ್ಟು ಮಾಡುವುದರಿಂದ ಮನಸ್ಸಿನ ತಮೋಗುಣವು ನಾಶವಾಗುತ್ತಾ ಬರುವುದು. ಇದನ್ನು ಯೋಗರೀತ್ಯಾ ಸರಿಯಾಗಿ ಅಭ್ಯಾಸಮಾಡುತ್ತಾ ಬಂದಿತೆಂದರೆ, ಮನಸ್ಸನ್ನು ಕ್ರಮಕ್ರಮವಾಗಿ ಜಗ್ಗಿಸಿ ನಮ್ಮ ಶರೀರದಲ್ಲಿನ ಮೂಲಾಧಾರ ಚಕ್ರದಿಂದ ಮೇಲೆ ಮೇಲೆ ಯಾವ ಚಕ್ರದಲ್ಲಾದರೂ ಸ್ಥಾಪಿಸುವ ಶಕ್ತಿಯನ್ನು ಪಡೆಯಬಹುದು. ಹೀಗೆಯೇ ಅಭ್ಯಾಸವನ್ನು ಮುಂದುವರಿಸಿ ಶಬ್ದಾದಿ ವಿಷಯಗಳನ್ನೂ ಶ್ರೋತ್ರಾದಿ ಇಂದ್ರಿಯಗಳನ್ನೂ ನಿರೋಧಿಸುವುದೆಂಬ 'ಪ್ರತ್ಯಾಹಾರ'ವೆಂಬ ಸಾಧನೆಯನ್ನೂ, ಮನಸ್ಸನ್ನು ಆತ್ಮಸ್ವರೂಪದಲ್ಲಿ ನಿಲ್ಲಿಸುವುದೆಂಬ 'ಧಾರಣೆ'ಯೆಂಬ ಸಾಧನೆಯನ್ನೂ, ಹಾಗೆಯೇ ಅಭ್ಯಾಸಬಲದಿಂದ ಮನಸ್ಸು ಆತ್ಮವಸ್ತುವಿನಲ್ಲಿ ಪ್ರಯತ್ನವಿಲ್ಲದೇ ನಿಲ್ಲುವಂತೆ ಮನೋವೃತ್ತಿಗಳನ್ನು ಏಕಾಕಾರವಾಗಿ ಮಾಡುತ್ತಾ ನಾನೇ ಪರಬ್ರಹ್ಮವೆಂಬ 'ಸೋಹಂ' ಭಾವವನ್ನು ಹೊಂದುವುದೆಂದು 'ಧ್ಯಾನ' ಎಂಬ ಸಾಧನೆಯನ್ನೂ ಬಲಗೊಳಿಸಿ ಕೊನೆಯದಾಗಿ "ಸಮಾಧಿ" ಅವಸ್ಥೆಗೆ ಬರಬೇಕು. ಈ ಸಮಾಧಿಯಲ್ಲಿಯೂ 'ಸಂಪ್ರಜ್ಞಾತ ಸಮಾಧಿ', 'ಅಸಂಪ್ರಜ್ಞಾತ ಸಮಾಧಿ' ಎಂದು ಎರಡು ವಿಧಗಳಿವೆ. ಈ ರೀತಿ ಸಾಧನೆ ಪೂರೈಸಿದರೆ ಮೋಕ್ಷಪ್ರಾಪ್ತಿಯಾಗುವುದು. ಇಷ್ಟನ್ನೂ ಸಾಧಿಸುವಂತಹ ಪುಣ್ಯಾತ್ಮರು ಕೇವಲ ವಿರಳ. ದೇಶ ಕಾಲಾನುಗುಣವಾಗಿ ನಮ್ಮ ಯೋಗ್ಯತೆಯನ್ನರಿತು ಅದಕ್ಕೆ ತಕ್ಕ ಉಪದೇಶವನ್ನು ಸದ್ಗುರುಗಳಿಂದಲೂ ಸತ್ಸಂಗದಿಂದಲೂ ಪಡೆದು ಸಾಧನೆ ಮಾಡಬೇಕು ಈ ಜನ್ಮದಲ್ಲಿ **'ಈಶ್ವರ ಪ್ರಣಿಧಾನ'**ದವರೆಗಿನ ಹಂತವನ್ನಾದರೂ ಹತ್ತಿದರೆ ಎಷ್ಟೋ ಕೃತಾರ್ಥರಾಗುವೆವು. ಯೋಗ ಪ್ರಕ್ರಿಯೆಗಳನ್ನೆಲ್ಲಾ ಕಟ್ಟುನಿಟ್ಟಾಗಿ 'ಸಮಾಧಿ' ಪರ್ಯಂತವೂ ಸಾಧಿಸಲು ಶಕ್ತರಲ್ಲದ ನಾವುಗಳು ರೋಗದ ಉಚ್ಚಾಟನೆಗೆ ನಮ್ಮ ಶರೀರದ ಒಳರಚನೆಯು ಹೇಗೆ ತಿಳಿಯತಕ್ಕದ್ದು ಅವಶ್ಯಕವೋ ಹಾಗೆ ಸಂಸಾರವೆಂಬ ರೋಗದ ನಿವಾರಣೆಗೆ ನಾವು ತಿಳಿಯಬೇಕಾದ ನಮ್ಮ ಶರೀರದಲ್ಲಿರುವ ಷಟ್ಚಕ್ರಗಳೇ ಮುಂತಾದುವುಗಳನ್ನೂ ಓಂಕಾರವನ್ನೂ ಬೀಜಾಕ್ಷರಗಳನ್ನೂ 'ಹಂಸ' ಮಂತ್ರವನ್ನೂ ಇವುಗಳ ರಚನೆಯೇನೆಂಬುದನ್ನೂ ತಿಳಿದು ಅವುಗಳನ್ನೆಲ್ಲಾ ಪರಬ್ರಹ್ಮಸ್ವರೂಪವೆಂದು ಧ್ಯಾನಮಾಡುತ್ತಾ ಬಂದರೆ 'ಈಶ್ವರ ಪ್ರಣಿಧಾನ'ದ ಮುಂದಿನ ಸಾಧನೆಗಳಿಗೆ ಎಂದಿಗಾದರೂ ಅವುಗಳು ಸಹಾಯಕವಾಗಿ ನಮ್ಮಲ್ಲಿರುತ್ತವೆ. ಈ ಉದ್ದಿಶ್ಯಕ್ಕಾಗಿಯೇ ಸ್ವಕಪೋಲ ಕಲ್ಪಿತ ಕನ್ನಡದ ಎರಡು ಕೃತಿಗಳನ್ನು ಇದರಲ್ಲಿ ಸೇರಿಸಿರುತ್ತದೆ.

ಇವುಗಳನ್ನೂ ಸಹ ಆಚರಿಸಲು ಅಶಕ್ತರಾದವರು, ಕೊನೆಯಪಕ್ಷ, ಶ್ರೀಮಚ್ಛಂಕರ ಭಗವತ್ಪಾದರು ಅಪ್ಪಣೆ ಕೊಡಿಸಿರುವಂತೆ ಭಕ್ತಿಯಿಂದ ಶ್ರೀರಾಮ ಸ್ಮರಣೆಯನ್ನು ನಿತ್ಯವೂ ಮಾಡುತ್ತಾ ತಮ್ಮ ತಮ್ಮ ವರ್ಣಾಶ್ರಮ

ಧರ್ಮಗಳನ್ನು ಪರಿಪಾಲಿಸುತ್ತಾ, ನಿಷ್ಕಾಮನೆಯಿಂದ ವ್ಯವಹಾರ ನಡೆಸುತ್ತಾ ಈ 'ರಾಮಕರ್ಣಾಮೃತ' ವನ್ನೂ ಈ ಮೇಲಣ ಎರಡು ಕೃತಿಗಳನ್ನೂ ಕೀರ್ತನ ರೂಪದಲ್ಲಿ ದಿನವಹಿ ಹಾಡಿ ಅಥವಾ ಹಾಡಿಸಿ ಕೇಳಿ ಅನಂದಪಡು ತ್ತಿದ್ದರೆಚಿತ್ತಶುದ್ಧಿ, ಶ್ರೀರಾಮಚಂದ್ರನ ಅನುಗ್ರಹ ಎರಡೂ ಆಗಿ ಅವರು ಕ್ರಮಕ್ರಮವಾಗಿ ಮುಂದೆಯಾದರೂ ಮೋಕ್ಷ ಸಂಪಾದನೆ ಮಾಡಲು ಅನುಕೂಲಿಸುತ್ತದೆ.

ಶ್ರೀರಾಮನಾಮ ಪಾರಾಯಣ ಧುರೀಣನೂ, ಶ್ರೀರಾಮ ಭಕ್ತಾಗ್ರೇಸರನೂ ಆದ ಶ್ರೀಮದಾಂಜನೇಯ ಮೂರ್ತಿಯು ಭಕ್ತಿಮಾರ್ಗದಿಂದಲೇ, ಶ್ರೀರಾಮ ಸ್ತೋತ್ರ ಧ್ಯಾನಗಳಿಂದಲೇ ಮುಂದೆ ಮುಂದೆ ಸಾಗಿ ಸೀತಾಮಾತೆ ಯಿಂದಲೂ ಶ್ರೀರಾಚಂದ್ರನಿಂದಲೂ ಉಪನಿಷದರ್ಥವನ್ನು ತಿಳಿದು ಅನುಭವಕ್ಕೆ ತಂದುಕೊಂಡು ಬ್ರಹ್ಮಾನಂದ ವನ್ನು ಪಡೆದು ಶ್ರೀರಾಮಚಂದ್ರನಲ್ಲಿ ಹೀಗೆ ತನ್ನ ಸ್ವಾನುಭವವನ್ನು ತಿಳಿಸಿ ಕೊಂಡಾಡಿದನು.

ದೇಹಬುದ್ಧ್ಯಾಸ್ಮಿ ದಾಸೋಹಂ ।
ಜೀವಬುದ್ಧ್ಯಾ ತ್ವದಂಶಕಃ ।
ಆತ್ಮಬುದ್ಧ್ಯಾ ತ್ವಮೇವಾಹಂ ।
ಇತಿ ಮೇ ನಿಶ್ಚಿತಾ ಮತಿಃ ॥

ಹೀಗೆ ಭಕ್ತಶಿರೋಮಣಿ ಆಂಜನೇಯನೂ ಸಹಾ ಶ್ರೀರಾಮ ಧ್ಯಾನದಿಂದ ಸಾಧನೆ ಮಾಡಿ ಕ್ರಮಕ್ರಮವಾಗಿ ಕೊನೆಗೆ ಆತ್ಮಜ್ಞಾನವನ್ನು ಪಡೆದನು. ಈ ಮಹಾತ್ಮನಿಂದ ವಿರಚಿತವಾದ ಭಗವದ್ಗೀತಾ ಪೈಶಾಚ ಭಾಷ್ಯದಲ್ಲಿ ಪ್ರಪಂಚ ಮಿಥ್ಯಾತ್ವ ಪ್ರತಿಪಾದನೆಯ ಮೂಲಕ, ಜೀವಬ್ರಹ್ಮೈಕ್ಯವೇ ಪ್ರತಿಪಾದಿಸಲ್ಪಟ್ಟಿದೆ. ವಿಷ್ಣುಪುರಾಣದ 6ನೇ ಅಂಶದಲ್ಲಿ ಪರಮಾತ್ಮನೊಡನೆ ಅಭಿನ್ನತ್ವವನ್ನು ಹೇಳಿದೆ. ಭಾಗವತದ 11ನೇ ಸ್ಕಂಧದ 11ನೇ ಅಧ್ಯಾಯ ದಲ್ಲೂ, 3ನೇ ಸ್ಕಂಧದ 28ನೇ ಅಧ್ಯಾಯದ, ದೇಹಹೂತಿಕಪಿಲರ ಸಂವಾದದಲ್ಲೂ, ಇದನ್ನೇ ಪ್ರತಿಪಾದಿಸಿದೆ. ಯಾಜ್ಞ್ಯವಲ್ಕ್ಯ ಸ್ಮೃತಿಯೂ ಇದನ್ನೇ ತಿಳಿಸುತ್ತದೆ.

ಅಣುರೇಣು ತೃಣಕಾಷ್ಟಗಳಲ್ಲಿ ಹಾಸುಹೊಕ್ಕಾಗಿರುವ ಆತ್ಮಾರಾಮನನ್ನು, ಈ ರಾಮಕರ್ಣಾಮೃತ ಪಾರಾಯಣದಿಂದ ಅರಿತು ಶಾಂತಿಯಿಂದ ಅವನ ಪರಮೋದಾರ ಗುಣಗಳನ್ನು ಅನವರತವೂ ಕೀರ್ತನ ಮಾಡುತ್ತಾ ಇಹದಲ್ಲಿ ಸೌಖ್ಯವನ್ನೂ ಅನಂತರ ಶಾಶ್ವತ ಸುಖವನ್ನೂ ಎಲ್ಲರೂ ಅನುಭವಿಸಲೆಂಬುದೇ ಈ ಅನುವಾದಕನ ಪರಮೋದ್ದೇಶ.

ಪ್ರಸಕ್ತ ಗ್ರಂಥದ ಸಂಪಾದನ ಕಾರ್ಯದಲ್ಲಿ ಲೋಪದೋಷಗಳು ಕಂಡುಬರುವುದು ಸಹಜ. ಪ್ರಾಜ್ಞರು ಅವನ್ನು ತಿಳಿಯಪಡಿಸುವ ಉಪಕಾರ ಮಾಡಿದರೆ, ದೋಷಗಳನ್ನು ಮುಂದಿನ ಮುದ್ರಣದಲ್ಲಿ ಸರಿಪಡಿಸಿ ಕೊಳ್ಳುತ್ತೇನೆ.

ಭದ್ರಂ ಶುಭಂ ಮಂಗಳಂ

ಶ್ರೀರಾಮಾರ್ಪಣಮಸ್ತು

ದಿನಾಂಕ : 6-3-1968
ಮುಕ್ಕಾಂ : ಮುಳವಳ್ಳಿ

ಬಿ. ಎಸ್. ಕಪನೀಪತಯ್ಯ, ಬಿ.ಎ.,

ಮೈಸೂರು ಶ್ರೀಮನ್ಮಹಾರಾಜರವರ
ಅರಮನೆ ಆಫೀಸು ರಿ॥ ಮ್ಯಾನೇಜರು,
563/1, ಎರಡನೇ ರಾಮಚಂದ್ರ ಅಗ್ರಹಾರ,
ಖಿಲ್ಲೇ ಮೊಹಲ್ಲಾ, ಮೈಸೂರು-4.




ವಾಮೇ ಭೂಮಿಸುತಾ ಪುರಸ್ತು ಹನುಮಾ಼ ಪಶ್ಚಾತ್ಸುಮಿತ್ರಾಸುತಃ ।
ಶತ್ರುಘ್ನೋ ಭರತಶ್ಚ ಪಾರ್ಶ್ವದಳಯೋರ್ವಾಯ್ವಾದಿಕೋಣೇಷುಚ ॥
ಸುಗ್ರೀವಶ್ಚ ವಿಭೀಷಣಶ್ಚ ಯುವರಾಟ್ ತಾರಾಸುತೋ ಜಾಂಬವಾನ್ ।
ಮಧ್ಯೇ ಸಂಸ್ಮರ ರಾಘವಂ ಮುನಿವೃತಂ ವ್ಯಾಖ್ಯಾನ ಮುದ್ರಾಕರಂ ॥

ವಿಷಯ ಸೂಚಿಕೆ

ಮಂಗಳ ಶ್ಲೋಕಗಳು

ಶ್ರೀ



ಅಗಜಾನನ ಪದ್ಮಾರ್ಕಂ ಗಜಾನನ ಮಹರ್ನಿಶಂ |
ಅನೇಕ ದಂತಂ ಭಕ್ತಾನಾಂ ಏಕದಂತಮುಪಾಸ್ಮಹೇ ||

ರಾಮ ರಾಮೇತಿ ರಾಮೇತಿ |
ರಮೇ ರಾಮೇ ಮನೋರಮೇ |

ಸಹಸ್ರನಾಮ ತತ್ತುಲ್ಯಂ |
ರಾಮನಾಮ ವರಾನನೇ ||

ಆಪದಾಮಪಹರ್ತಾರಂ, ದಾತಾರಂ ಸರ್ವಸಂಪದಾಂ |
ಲೋಕಾಭಿರಾಮಂ ಶ್ರೀರಾಮಂ, ಭೂಯೋ ಭೂಯೋ ನಮಾಮ್ಯಹಂ ||

ರಾಮ ನಾಮಾಮೃತರಸಾ |
ಸ್ವಾದ ಸಂಸಕ್ತ ಮಾನಸಂ ||

ತನ್ನಮಾಮಿ ಹನೂಮಂತ |
ಮನೂನ ಶ್ರೀಪ್ರದಾಯಕಂ ||

ಶ್ರೀ ಹನುಮದ್ವಿರಚಿತ ಶ್ರೀ ಸೀತಾ ರಾಮಸ್ತೋತ್ರ

ಶ್ರೀ ಹನೂಮಾನುವಾಚ



ಶ್ರೀರಾಮಮೂರ್ತಿ

ಅಯೋಧ್ಯಾ ಪುರನೇತಾರಂ |
ರಾಘವಾಣಾ ಮಲಂ ಕಾರಂ |
ರಘೂಣಾಂ ಕುಲದೀಪಂಚ |
ಸೂರ್ಯವಂಶ ಸಮುದ್ಭೂತಂ |
ಪುತ್ರಂ ದಶರಥಸ್ಯಾಪಿ |
ವಸಿಷ್ಠಾನು ಮತಾಚಾರಂ |
ಕೌಸಲ್ಯಾ ಗರ್ಭ ಸಂಭೂತಂ |
ಪುಂಡರೀಕ ವಿಶಾಲಾಕ್ಷಂ |

ಮತ್ತಮಾತಂಗ ಗಮನಂ |
ಚಂದನಾರ್ದ್ರ ಭುಜಾ ಮಧ್ಯಂ |
ಚಾಪಾಲಂಕೃತ ಹಸ್ತಾಬ್ಜಂ |
ಸರ್ವಲೋಕ ವಿಧಾತಾರಂ |
ಲೋಕಾಭಿರಾಮಂ ಶ್ರೀರಾಮಂ |

ಶ್ರೀ ಸೀತಾಮಾತೆ

ಮಿಥಿಲಾಪುರ ನಾಯಕೀಂ |
ವೈದೇಹೀ ನಾಮಲಂಕ್ರಿಯಾಂ |
ನಿಮೀನಾಂ ಕುಲದೀಪಿಕಾಂ |
ಸೋಮವಂಶ ಸಮುದ್ಭವಾಂ |
ಪುತ್ರೀಂ ಜನಕ ಭೂಪತೇಃ |
ಶತಾನಂದ ಮತಾನುಗಾಂ |
ವೇದಿಗರ್ಭೋದಿತಾಂ ಸ್ವಯಂ |
ಸ್ಫುರದಿಂದೀ ವರೇಕ್ಷಣಾಂ |

ಮತ್ತ ಸಾರಸ ಗಾಮಿನೀಂ |
ಕುಂಕುಮಾಕ್ತ ಭುಜಾಂತರಾಂ |
ಪದ್ಮಾಲಂಕೃತ ಪಾಣಿಕಾಂ |
ಸರ್ವಲೋಕ ವಿಧಾಯಿನೀಂ |
ಅಭಿರಾಮಾಂಚ ಮೈಥಿಲೀಂ |

ದಿವ್ಯ ಸಿಂಹಾಸನಾರೂಢಂ | ದಿವ್ಯಸ್ರಗ್ವಸ್ತ್ರ ಭೂಷಣಾಂ |
ಅನುಕ್ಷಣಂ ಕಟಾಕ್ಷಾಭ್ಯಾಂ | ಅನ್ಯೋನ್ಯೇಕ್ಷಣ ಕಾಂಕ್ಷಿಣೌ |
ಅನ್ಯೋನ್ಯ ಸದೃಶಾವೇತೌ | ತ್ರೈಲೋಕ್ಯ ಗೃಹ ದಂಪತೀ |
ಇಮೌಯುವಾಂ ಪ್ರಣಮ್ಯಾಹಂ | ಭಜಾಮ್ಯತಿ ಕೃತಾರ್ಥತಾಂ |
ಅನಯಾಸ್ತೌತಿಯ ಸ್ತುತ್ಯಾ | ರಾಮಂ ಸೀತಾಂಚ ಭಕ್ತಿತಃ |

ತಸ್ಯತೌತನುತಾಂ ಪ್ರೀತೌ ಸಂಪದಸ್ಸಕಲಾ ಅಪಿ |
ಇತೀದಂ ರಾಮಚಂದ್ರಸ್ಯ ಜಾನಕ್ಯಾಶ್ಚ ವಿಶೇಷತಃ |
ಕೃತಂ ಹನುಮತಾ ಪುಣ್ಯಂ ಸ್ತೋತ್ರಂಸದ್ಯೋವಿಮುಕ್ತಿದಂ |
ಯಃಪಠೇ ತ್ಪ್ರಾತರುತ್ಥಾಯ ಸರ್ವಾನ್ಕಾಮಾನವಾಪ್ನುಯಾತ್ |
ಯ ಇದಂ ಪಠತಿ ಸ್ತೋತ್ರಂ ಮೈಥಿಲೀ ರಾಮಚಂದ್ರಯೋಃ |
ಶ್ರೀ ವೈಕುಂಠಮವಾಪ್ನೋತಿ ಸನರೋಹತ ಕಿಲ್ಬಿಷಃ |

ಲಂಕೆಯಲ್ಲಿ ಶಿಂಶುಪಾವೃಕ್ಷದ ಅಡಿಯಲ್ಲಿ, ಸೀತಾಮಾತೆಯನ್ನು ಕಂಡು,

'ಕೃತಾರ್ಥೋಽಹಂ, ಕೃತಾರ್ಥೋಽಹಂ, ದೃಷ್ಟ್ವಾ ಜನಕನಂದಿನೀಂ |
ಮಯ್ಯೈವಸಾಧಿತಂ ಕಾರ್ಯಂ ರಾಮಸ್ಯ ಪರಮಾತ್ಮನಃ ||'

ಎಂದುಕೊಳ್ಳುತ್ತಾ, ಶ್ರೀ ಮದಾಂಜನೇಯನು ತನ್ನ ಹೃತ್ಕಮಲದಲ್ಲಿ ರಾಮನನ್ನೂ ಸೀತಾಮಾತೆಯನ್ನೂ ಪಕ್ಕಪಕ್ಕದಲ್ಲಿ ಕುಳ್ಳಿರಿಸಿಕೊಂಡು, ಅವರನ್ನು ಧ್ಯಾನಿಸತೊಡಗಿದಾಗಿನ, ಧ್ಯಾನ ಶ್ಲೋಕವಿದು.

ರಾಮ ಮಹಿಮಾ ಖಂಡ

ಮಂಗಳ ಶ್ಲೋಕ

ಶ್ರೀರಾಮಚಂದ್ರಶ್ರಿತಪಾರಿಜಾತ | ಸಮಸ್ತ ಕಲ್ಯಾಣಗುಣಾಭಿರಾಮಃ |
ಸೀತಾಮುಖಾಂಭೋರುಹ ಚಂಚರೀಕೋ | ನಿರಂತರಂ ಮಂಗಳಮಾತನೋತು ||

ಆಶ್ರಿತ ಜನರಿಗೆ ಪಾರಿಜಾತ ಪುಷ್ಪದಂತಿರುವ ಸಮಸ್ತ ಕಲ್ಯಾಣ ಗುಣಗಳಿಂದ ಕೂಡಿ ರಂಜಿಸುವ ಸೀತಾದೇವಿಯ ಮುಖ ಕಮಲಕ್ಕೆ ಭ್ರಮರ ದಂತಿರುವ ಶ್ರೀರಾಮಚಂದ್ರನು ನಮಗೆ ಸರ್ವದಾ ಮಂಗಳವನ್ನುಂಟು ಮಾಡಲಿ.

ಭದ್ರವ್ಯಾಖ್ಯಾನಮುದ್ರಾಂ ಕರ ಸರಸಿರುಹೇ ದಕ್ಷಿಣೇ ಧಾರಯಂತಂ |
ಸವ್ಯೇ ಜಾನುನ್ಯುದಾರಂ ಕರಮಪಿಚಮುದಾ ಧಾರಯಂತಂ ಸ್ಫುರಂತಂ |
ಪಶ್ಯಂತಂ ವಾಮಭಾಗೇ ಕರಧೃತ ಕಮಲಾಂ ಚಿತ್ರಭೂಷಾ ವಿಶೇಷಾಂ |
ವೈದೇಹೀಂ ಕಾಂಚನಾಢ್ಯಾಂ ಸ್ತನಭರನಮಿತಾಂ ಭಾವಯೇ ರಾಮಚಂದ್ರಂ ||

ಬಲಹಸ್ತ ಕಮಲದಲ್ಲಿ ಮಂಗಳಕರವಾದ ಅದ್ವೈತ ತತ್ವೋಪದೇಶಕ ಚಿನ್ಮುದ್ರೆಯನ್ನು ಧರಿಸಿ, ಉದಾರ ಹಸ್ತ ಅಂದರೆ ವರದ ಹಸ್ತ ಅಂದರೆ ಎಡಹಸ್ತವನ್ನು, ಎಡಮೊಳಕಾಲಮೇಲೆ ಮುದದಿಂದ ಇಟ್ಟುಕೊಂಡು, ಎಡ ಭಾಗದಲ್ಲಿ ಪುಷ್ಪಹಸ್ತಳಾಗಿ ವಿಶೇಷವಾಗಿ ಚಿತ್ರಾಭರಣ ಭೂಷಿತಳಾಗಿ ಸ್ಥೂಲವಾದ ಸ್ತನಗಳ ಭಾರದಿಂದ ಸ್ವಲ್ಪ ಬಗ್ಗಿದಂತೆ ಕಾಣುವ ಸೀತಾದೇವಿಯನ್ನು ವೀಕ್ಷಿಸುತ್ತಿರುವ ಶ್ರೀ ರಾಮನನ್ನು ಧ್ಯಾನಿಸುತ್ತೇನೆ.

ನಿತ್ಯಸ್ಮರಣ ರಾಮಸ್ತೋತ್ರ

ಧ್ಯಾಯೇ ತ್ವಾಂ ಪ್ರಾತಸ್ಸುರೇಶಂ ರವಿಕುಲತಿಲಕಂ ರಂಜಿತಾನಂತಲೋಕಂ |
ಬಾಲಂ ಬಾಲಾರುಣಾಕ್ಷಂ ಭವಮುಖವಿನುತಂ ಭಾವಗಮ್ಯಂ ಭವಘ್ನಂ |
ದೀಪ್ಯಂತಂ ಸ್ವರ್ಣಕ್ಲಿಪ್ತೇ ರ್ಮಣಿಗಣ ನಿಕರೈ ರ್ಭೂಷಣೈರುಜ್ಜ್ವಲಾಂಗಂ |
ಕೌಸಲ್ಯಾದೇಹಜಾತಂ ಮಮಹೃದಯಗತಂ ರಾಮಮೀಷತ್ಸ್ಮಿತಾಸ್ಯಂ. ||

ದೇವತೆಗಳಿಗೆ ಒಡೆಯನೂ, ಸೂರ್ಯವಂಶಶ್ರೇಷ್ಠನೂ, ಸಮಸ್ತ ಲೋಕಗಳಿಗೂ ರಂಜಕನೂ ಆದ ಅರುಣೋದಯದ ಕೆಂಪಿನಂತೆ ಕೆಂಪು ಕಣ್ಣುಗಳುಳ್ಳ ಈಶ್ವರನೇ ಮೊದಲಾದವರಿಂದ ಸ್ತುತಿಸಿಕೊಳ್ಳುವ, ಸದ್ಭಾವನೆಗೆ ಸಿಲುಕುವ, ಸಂಸಾರ ದುಃಖನಾಶಕನೂ ಪ್ರಕಾಶಮಾನನೂ ಆದ, ಸುವರ್ಣಖಚಿತವಾದ ಮಣಿಗಳಿಂದ ಕೂಡಿದ ಭೂಷಣಗಳಿಂದ ಶೋಭಿತನಾದ, ಕೌಸಲ್ಯಾಪುತ್ರನಾದ, ಮುಗುಳ್ನಗೆಯಿಂದ ಕೂಡಿರುವ, ನನ್ನ ಹೃದಯಕಮಲದಲ್ಲಿರುವ, ಬಾಲನಾದ ಶ್ರೀರಾಮಚಂದ್ರಮೂರ್ತಿಯನ್ನು ಪ್ರಾತಃಕಾಲದಲ್ಲಿ ಧ್ಯಾನಿಸುತ್ತೇನೆ.

ಮಧ್ಯಾಹ್ನೇ ರಾಮಚಂದ್ರಂ ಮಣಿಗಣಲಲಿತಂ ಮಂದಹಾಸಾವಲೋಕಂ |
ಮಾರ್ತಾಂಡಾನೇಕಭಾಸಂ ಮರಕತನಿಕರಾಕಾರಮಾನಂದಮೂರ್ತಿಂ |
ಸೀತಾವಾಮಾಂಕಸಂಸ್ಥಂ ಸರಸಿಜನಯನಂ ಸತ್ಯಸಂಕಲ್ಪ ಶೀಲಂ |
ವಂದೇಹಂ ವಾಸುದೇವಂ ವರಶರಧನುಷಂ ಮಾನಸೇ ಮೇವಿಭಾಂತಂ. ||

ಮಣಿಗಣಗಳಿಂದ ಶೋಭಿಸುವ ಶರೀರವುಳ್ಳ, ಮಂದಹಾಸ ಮುಖದ, ಅನೇಕ ಸೂರ್ಯರ ಪ್ರಕಾಶಕ್ಕೆ ಸಮಾನವಾದ ಕಾಂತಿಯುಳ್ಳ, ಪಚ್ಚೆಯ ಬಣ್ಣದಿಂದ ಕೂಡಿದ, ಆನಂದಮೂರ್ತಿಯಾದ, ಎಡ ತೊಡೆಯಮೇಲೆ ಸೀತಾದೇವಿಯನ್ನು ಕೂರಿಸಿಕೊಂಡಿರುವ, ಕಮಲಾಕ್ಷನೂ, ಸತ್ಯಸಂಕಲ್ಪನೂ ಸತ್ಯಶೀಲನೂ ಆದ, ಸಕಲಭೂತಗಳಲ್ಲೂ ಜೀವರೂಪದಿಂದ ವಾಸಿಸುತ್ತಾ, ವಾಸುದೇವನೆಂದೆನಿಸಿಕೊಂಡ, ಶ್ರೇಷ್ಠವಾದ, ಬಿಲ್ಲು ಬಾಣಗಳಿಂದ ಕೂಡಿದ, ಶ್ರೀರಾಮಚಂದ್ರನನ್ನು ಮಧ್ಯಾಹ್ನದಲ್ಲಿ ಮನಸಾ ಧ್ಯಾನ ಮಾಡುತ್ತೇನೆ.

ಧ್ಯಾಯೇದ್ರಾಮಂ ಸುಧಾಂಶುಂ ನತಸಕಲಭವಾರಣ್ಯ ತಾಪಾಪಹಾರಂ ।
ಶ್ಯಾಮಂ ಶಾಂತಂ ಸುರೇದ್ರಂ ಸುರಮುನಿವಿನುತಂ ಕೋಟಿಸೂರ್ಯ ಪ್ರಕಾಶಂ ।
ಸೀತಾ ಸೌಮಿತ್ರಿ ಸೇವ್ಯಂ ಸುರನರ ಸುಗಮಂ ದಿವ್ಯ ಸಿಂಹಾಸನಸ್ಥಂ ।
ಸಾಯಾನ್ಹೇ ರಾಮಚಂದ್ರಂ ಸ್ಮಿತರುಚಿರಮುಖಂ ಸರ್ವದಾಮೇ ಪ್ರಸನ್ನಂ. ॥

ಚಂದ್ರನಂತೆ ಆಹ್ಲಾದಕರನಾದ, ಆಶ್ರಿತ ಜನರ ಸಂಸಾರ ದುಃಖವನ್ನು ಪ್ರಶಮಗೊಳಿಸುವ, ಶ್ಯಾಮಲ ಮೂರ್ತಿಯೂ ಶಾಂತಿಸ್ವರೂಪಿ ಆದ, ದೇವೇಂದ್ರನಾದ, ನಾರದಾದಿಗಳಿಂದ ಸ್ತುತಿಸಲ್ಪಡುವ, ಕೋಟಿಸೂರ್ಯಪ್ರಕಾಶದಿಂದ ಕೂಡಿದ ತೇಜಸ್ಸುಳ್ಳ, ಸೀತಾಲಕ್ಷ್ಮಣರಿಂದ ಸೇವಿತನಾದ, ದೇವತೆಗಳಿಗೂ ಸತ್ಪುರುಷರಿಗೂ ಸುಲಭನಾದ, ದಿವ್ಯಸಿಂಹಾಸನದಲ್ಲಿ ಕುಳಿತಿರುವ, ಮಂದಸ್ಮಿತ ಮುಖವುಳ್ಳವನಾಗಿ ನನಗೆ ಸರ್ವದಾ ಪ್ರಸನ್ನನಾದ, ಶ್ರೀ ರಾಮಚಂದ್ರನನ್ನು ನಾನು ಸಾಯಂಕಾಲದಲ್ಲಿ ಧ್ಯಾನಿಸುತ್ತೇನೆ.

ಪ್ರಾತಸ್ಸ್ಮರಾಮಿ ರಘುನಾಥ ಮುಖಾರವಿಂದಂ ।
ಮಂದಸ್ಮಿತಂ ಮಧುರ ಭಾಷಿ ವಿಶಾಲ ಫಾಲಂ ।
ಕರ್ಣಾವಲಂಬಿ ಚಲಕುಂಡಲ ಗಂಡ ಭಾಗಂ ।
ಕರ್ಣಾಂತ ದೀರ್ಘನಯನಂ ನಯನಾಭಿರಾಮಂ. ॥

ಪ್ರಾತಃಕಾಲದಲ್ಲಿ ಮಧುರ ಭಾಷಣದಿಂದಲೂ ಮಂದಹಾಸದಿಂದಲೂ, ವಿಶಾಲವಾದ ಹಣೆಯಿಂದಲೂ, ಕಿವಿಗಳಲ್ಲಿ ಧರಿಸಿದ ಕುಂಡಲಗಳಿಂದ ಹೊಳೆಯುವ ಕಪೋಲ ಪ್ರದೇಶಗಳಿಂದಲೂ, ಕಿವಿಗಳವರೆವಿಗೂ ಇರುವ ವಿಶಾಲ ನಯನಗಳಿಂದಲೂ, ನಯನಮೋಹಕವಾಗಿ ಪ್ರಕಾಶಿಸುವ ರಘುಪತಿಯ ಮುಖಕಮಲವನ್ನು ಸ್ಮರಣೆ ಮಾಡುತ್ತೇನೆ.

ಪ್ರಾತರ್ಭಜಾಮಿ ರಘುನಾಥ ಕರಾರವಿಂದಂ ।
ರಕ್ಷೋಗಣಾಯ ಭಯದಂ ವರದಂ ನಿಜೇಭ್ಯಃ ।
ಯದ್ರಾಜ ಸಂಸದಿ ವಿಭಿದ್ಯ ಮಹೇಶ ಚಾಪಂ ।
ಸೀತಾ ಕರಗ್ರಹಣ ಮಂಗಳ ಮಾಪಸದ್ಯಃ. ॥

ರಾಕ್ಷಸರಿಗೆ ಭಯದಾಯಕವಾದ, ಆಶ್ರಿತರಿಗೆ ವರಪ್ರದವಾದ, ರಾಜಾಧಿ ರಾಜರುಗಳ ಇದಿರಿನಲ್ಲಿ ಶಿವಧನುಸ್ಸನ್ನು ಭೇದಿಸಿದ, ಸೀತೆಯನ್ನು ಪರಿಗ್ರಹಣ ಮಾಡಿದ, ಮಂಗಳಕರವಾದ ಶ್ರೀರಾಮನ ಕರ ಕಮಲವನ್ನು ಪ್ರಾತಃಕಾಲದಲ್ಲಿ ಭಜಿಸುತ್ತೇನೆ.

ಪಾತರ್ನಮಾಮಿ ರಘುನಾಥ ಪದಾರವಿಂದಂ |
ಪದ್ಮಾಂಕುಶಾದಿ ಶುಭರೇಖ ಶುಭಾವಹಂಮೇ |
ಯೋಗೀಂದ್ರ ಮಾನಸ ಮಧುವ್ರತ ಸೇವ್ಯಮಾನಂ |
ಶಾಪಾಪಹಂ ಸಪದಿ ಗೌತಮ ಧರ್ಮಪತ್ನ್ಯಾಃ. ||

ಪದ್ಮ, ಅಂಕುಶ, ಮುಂತಾದ ಶುಭ ರೇಖೆಗಳಿಂದ ಕೂಡಿದ, ಮಂಗಳದಾಯಕವಾದ, ಯೋಗಿಗಳ ಮನಸ್ಸೆಂಬ ಭ್ರಮರಗಳಿಂದ ಸೇವಿಸಿಕೊಳ್ಳುವ, ಗೌತಮನ ಧರ್ಮಪತ್ನಿಯಾದ ಅಹಲ್ಯೆಯ ಶಾಪವನ್ನು ಕ್ಷಣ ಮಾತ್ರದಲ್ಲಿ ವಿಮೋಚನೆ ಮಾಡಿದ, ಶ್ರೀರಾಮಚಂದ್ರನ ಪಾದಾರವಿಂದಗಳಿಗೆ ಪ್ರಾತಃಕಾಲದಲ್ಲಿ ನಮಸ್ಕರಿಸುತ್ತೇನೆ.

ಪ್ರಾತರ್ವದಾಮಿವಚಸಾ ರಘುನಾಥನಾಮ |
ವಾಗ್ದೋಷಹಾರಿ ಸಕಲಂ ಕಲುಷನ್ನಿಹಂತ್ಯ |
ಯತ್ಪಾರ್ವತೀ ಸ್ವಪತಿನಾ ಸಹಭೋಕ್ತು ಕಾಮಾ |
ಪ್ರೀತ್ಯಾ ಸಹಸ್ರ ಹರಿನಾಮಸಮಂ ಜಜಾಪ. ||

ನನ್ನ ಮಾತಿನಿಂದ ಇತರಿಗೆ ಖೇದವಾಗಿ ಅದರಿಂದ ಉಂಟಾಗ ಬಹುದಾದ, ಪಾಪಗಳನ್ನು ನಿವಾರಣೆ ಮಾಡುವ, ಸಕಲ ಕಾರ್ಮೇಂದ್ರಿಯ, ಜ್ಞಾನೇಂದ್ರಿಯಗಳಿಂದ ಸಂಭವಿಸಬಹುದಾದ ಸಕಲ ಪಾಪಗಳನ್ನೂ ನಿವೃತ್ತಿ ಗೊಳಿಸುವ, ಲೋಕಮಾತೆಯಾದ ಪಾರ್ವತಿಯು ತನ್ನ ಪತಿಯೊಡನೆ ಪ್ರೀತಿಯಿಂದ ಸದಾ ಜಪಿಸಿ ರಸಾಸ್ವಾದನೆ ಮಾಡುತ್ತಿರುವ, ಸಹಸ್ರ ಹರಿ ನಾಮಕ್ಕೆ ಸಮನಾದ, ರಾಮನಾಮವನ್ನು ಪ್ರಾತಃಕಾಲದಲ್ಲಿ ಪಠಿಸುತ್ತೇನೆ.

ಪ್ರಾತಶ್ಶ್ರಯೇ ಶ್ರುತಿನುತಾಂ ರಘುನಾಥಮೂರ್ತಿಂ |
ನೀಲಾಂಬುದೋತ್ಪಲ ಸಿತೇತರರತ್ನ ನೀಲಾಂ |
ಆಮುಕ್ತ ಮೌಕ್ತಿಕ ವಿಶೇಷ ವಿಭೂಷಣಾಢ್ಯಾಂ |
ಧ್ಯೇಯಾಂ ಸಮಸ್ತಮುನಿಭಿರ್ನಿಜಭೃತ್ಯಮುಖ್ಯೈಃ. ||

ವೇದಗಳಲ್ಲಿ ಸ್ತುತ್ತ್ಯನಾದವನೂ, ರಘು ಶ್ರೇಷ್ಠನೂ, ಶ್ರೇಷ್ಠವಾದ ಇಂದ್ರನೀಲ ಮಣಿಯ ಕಾಂತಿಯಂತೆ ನೀಲಮೇಘಶ್ಯಾಮನೂ, ವಿಶೇಷವಾದ ಚಿತ್ರ, ವಿಚಿತ್ರ, ಆಭರಣಗಳನ್ನು ಧರಿಸಿರುವವನೂ, ಸಮಸ್ತ ಋಷಿಗಳಿಂದಲೂ ಆಶ್ರಿತರಿಂದಲೂ ಸ್ತುತಿಸಿಕೊಳ್ಳುವವನೂ, ಆದ ಶ್ರೀರಾಮಚಂದ್ರಮೂರ್ತಿಯನ್ನು ಪ್ರಾತಃಕಾಲದಲ್ಲಿ ಶರಣು ಹೊಂದುತ್ತೇನೆ.

ಯಃ ಶ್ಲೋಕ ಪಂಚಕಮಿದಂ ನಿಯತಃ ಪಠೇದ್ಯಃ |
ನಿತ್ಯಂ ಪ್ರಭಾತಸಮಯೇ ಪುರುಷಃ ಪ್ರಬುದ್ಧಃ |
ಶ್ರೀರಾಮ ಕಿಂಕರ ಜನೇಷು ಸ ಏವಮುಖ್ಯೋ |
ಭೂತ್ವಾಪ್ರಯಾತಿ ಹರಿಲೋಕಮನನ್ಯ ಲಭ್ಯಂ. ||

ಯಾವ ಈ ಐದು ಶ್ಲೋಕಗಳನ್ನು ಯಾರು ಕ್ರಮವಾಗಿ ನಿತ್ಯವೂ ಪ್ರಾತಃಕಾಲದಲ್ಲಿ ಪಠನ ಮಾಡುವರೋ ಅಂತಹ ಬುದ್ಧಿಶಾಲಿಗಳಾದ ಪುರುಷರು, ಶ್ರೀರಾಮ ಭಕ್ತರಲ್ಲಿ ಅಗ್ರಗಣ್ಯರಾಗಿ, ಇತರರಿಗೆ ಲಭಿಸಲು ಅಸಾಧ್ಯವಾದ ವೈಕುಂಠ ಲೋಕವನ್ನು ಹೊಂದುತ್ತಾರೆ.

ಭಜೇಹಂ ಸದಾರಾಮ ಮಿಂದೀವರಾಭಂ |
ಭವಾರಣ್ಯ ದಾವಾನಲಾಂ ಭೋಧರಾಭಂ |
ಭವಾನೀಹೃದಾ ಭಾವಿತಾನಂದರೂಪಂ |
ಭವಾಭಾವ ಹೇತುಂ ಭವಾನೀ ಪ್ರಸನ್ನಂ. ||

ರಂಜಕನಾಗಿಯೂ, ಕಮಲಾಕ್ಷನಾಗಿಯೂ, ಸಂಸಾರವೆಂಬ ಕಾಳ್ಗಿಚ್ಚನ್ನು ಅಡಗಿಸುವ ಮೇಘದಂತಿರುವವನಾಗಿಯೂ, ಪಾರ್ವತಿಯ ಹೃದಯದಲ್ಲಿ ಧ್ಯಾನಮೂರ್ತಿಯಾಗಿ ಆನಂದರೂಪದಲ್ಲಿ ನೆಲಸಿರುವವನಾದ, ಸಂಸಾರದ ಮುಕ್ತಿಗೆ ಕಾರಣನಾದ, ಪಾರ್ವತಿಗೆ ಪ್ರಸನ್ನನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಸುರಾನೀಕ ದುಃಖೌಘ ನಾಶೈಕಹೇತುಂ |
ನರಾಕಾರದೇಹಂ ನಿರಾಕಾರಮೀಡ್ಯಂ |
ಪರೇಶಂ ಪರಾನಂದರೂಪಂ ವರೇಣ್ಯಂ |
ಹರಿಂ ರಾಮಮೀಶಂ ಭಜೇ ಭಾರನಾಶಂ. ||

ದೇವತಾಸಮೂಹದ ದುಃಖನಾಶಕ್ಕೆ ಏಕೈಕ ಕಾರಣನೂ, ಮಾನುಷರೂಪಿಯೂ, ಆಕಾರಶೂನ್ಯನೂ, ಸ್ತುತಿಸಲು ಯೋಗ್ಯನೂ, ಶ್ರೇಷ್ಠ ಸ್ವಾಮಿಯೂ ಆದ, ಅಂದರೆ ಪರಬ್ರಹ್ಮನಾದ ಮತ್ತು ಬ್ರಹ್ಮಾನಂದಮೂರ್ತಿಯೂ, ಅತ್ಯುತ್ತಮನೂ, ವಿಷ್ಣುಸ್ವರೂಪಿಯೂ, ಸಮಸ್ತ ಪ್ರಪಂಚಕ್ಕೂ ಒಡೆಯನೂ, ಭೂಭಾರವನ್ನು ಹರಣ ಮಾಡಿದವನೂ ಆದ, ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಪ್ರಪನ್ನಾಖಿಲಾನಂದ ದೋಹಪ್ರಸನ್ನಂ |
ಪ್ರಪನ್ನಾರ್ತಿ ನಿಶ್ಶೇಷ ನಾಶಾಭಿದಾನ |
ಸ್ತಪೋಯೋಗ ಯೋಗೀಶ ಭಾವಾಭಿಭಾವ್ಯಂ |
ಕಪೀಶಾದಿಮಿತ್ರಂ ಭಜೇ ರಾಮಚಂದ್ರಂ. ||

ಸಮಸ್ತವಾದ ಆನಂದ ಸ್ವರೂಪನೇ ತಾನಾಗಿ, ಹೀಗೆ ಅಪಾರ ಆನಂದವನ್ನು ಹೊಂದಿರುವ ಹೆಚ್ಚುಗೆಯಿಂದ, ಸಂತುಷ್ಟನಾಗಿರುವ, ಆಶ್ರಿತರ ಸಂಕಷ್ಟಗಳನ್ನು ನಿಶ್ಶೇಷವಾಗಿ ಪರಿಹರಿಸುವುದರಲ್ಲಿ ಹೆಸರಾಂತವನಾದ, ತಪಸ್ಸು ಯೋಗ ಇವುಗಳಿಂದ ಕೂಡಿದ ಯೋಗಿಶ್ರೇಷ್ಠರ ಮನಸ್ಸಿನಲ್ಲಿ ಆತ್ಮಾರಾಮನಾಗಿ ಕಾಣಿಸಿಕೊಳ್ಳುವ, ಸುಗ್ರೀವ ಮಿತ್ರನಾದ ರಾಮಚಂದ್ರನನ್ನು ಭಜಿಸುತ್ತೇನೆ.

ಸ್ಫುರದ್ರತ್ನ ಕೇಯೂರ ಹಾರಾಭಿರಾಮಂ |
ಧರಾಭಾರಭೂತಾ ಸುರಾನೀಕ ದಾವಂ |
ಶರಚ್ಚಂದ್ರ ವಕ್ತ್ರಂ ಲಸತ್ಪದ್ಮ ನೇತ್ರಂ |
ದುರಾಸಾಧ್ಯ ಪಾದಂ ಭಜೇ ರಾಮಚಂದ್ರಂ. ||

ಪ್ರಕಾಶಮಾನವಾದ ರತ್ನಗಳಿಂದ ನಿರ್ಮಿತವಾದ ಬಾಹುಬಂದಿ, ಹಾರಗಳಿಂದ ಅಲಂಕೃತನಾದ, ಭೂಮಿಗೆ ಭಾರವಾಗಿದ್ದ ರಾಕ್ಷಸರ ಸಮೂಹವನ್ನು ಭಸ್ಮಮಾಡಿದವನಾದ, ಶರತ್ಕಾಲದ ಚಂದ್ರನಂತೆ ಪ್ರತಿಭೆಯಿಂದ ಕೂಡಿದ ಮುಖವುಳ್ಳ ಕಮಲಾಕ್ಷನಾದ, ಭಕ್ತರಿಗೆ ಸುಲಭಸಾಧ್ಯನಾದ, ಶ್ರೀರಾಮನ ಪಾದಗಳನ್ನು ಭಜಿಸುತ್ತೇನೆ.

ಸುರಾಧೀಶ ನೀಲಾಭ ನೀಲಾಂಗ ಕಾಂತಿಂ |
ವಿರಾಧಾದಿ ರಕ್ಷೋಗಣಾನೀಕ ನಾಶಂ |
ಕಿರೀಟಾದಿ ಶೋಭಂ ಪುರಾರಾತಿಲಾಭಂ |
ಭಜೇ ರಾಮಚಂದ್ರಂ ರಘೂಣಾಮಧೀಂದ್ರಂ. ||

ಇಂದ್ರನೀಲದಂತೆ ನೀಲವರ್ಣನಾದ, ವಿರಾಧನೇ ಮುಂತಾದ ರಾಕ್ಷಸ ಕದಂಬವನ್ನೇ ನಾಶಪಡಿಸಿದ, ಕಿರೀಟವೇ ಮೊದಲಾದ ಆಭರಣಗಳಿಂದ ಶೋಭಿಸುತ್ತಿರುವ, ಪರಮೇಶ್ವರನಿಗೆ ಸುಲಭನಾದ, ರಘು ಶ್ರೇಷ್ಠನಾದ, ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಲಸಚ್ಚಂದ್ರ ಕೋಟಿ ಪ್ರಕಾಶಾದಿ ಪೀಠೇ |
ಸಮಾಸೀನಮಂಕೇ ಸಮಾಧಾಯ ಸೀತಾಂ |
ಸ್ಫುರದ್ಧೇಮ ವರ್ಣಾಲಸತ್ಕಂಜ ಪುಂಜಂ |
ಭಜೇರಾಮಚಂದ್ರಂ ನಿವೃತ್ಯಾದಿ ತಂತ್ರಂ. ||

ಉಜ್ವಲವಾದ ಕೋಟಿಚಂದ್ರಪ್ರಕಾಶವುಳ್ಳ ಪೀಠದಲ್ಲಿ ಆಸೀನನಾಗಿ, ತೊಡೆಯ ಮೇಲೆ ಸೀತೆಯನ್ನು ಕುಳ್ಳಿರಿಸಿಕೊಂಡಿರುವ, ಒಳ್ಳೆಯ ಚಿನ್ನದ ಬಣ್ಣದಿಂದ ಹೊಳೆಯುವ ಕಮಲಪುಷ್ಪಗಳ ರಾಶಿಯಿಂದ ಅಲಂಕೃತನಾದ ವನಾದ, ನಿವೃತ್ತಿ ಮಾರ್ಗವಾದ ಯೋಗಪ್ರಕ್ರಿಯೆಯಲ್ಲಿ ನಿಪುಣನಾದ, ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಸದಾ ಭೋಗಭಾಜಾಂ ಸುದೂರೇಪ್ಯಭಾಂತಂ |
ಮುದಾಯೋಗ ಭಾಜಾಮದೂರೇತಿಭಾಂತಂ |
ಚಿದಾನಂದ ಕಂದಂ ಸದಾ ರಾಘವೇಶಂ |
ವಿದೇಹಾತ್ಮಜಾನಂದ ಕಂದಂ ಪ್ರಪದ್ಯೇ. ||

ಪ್ರಪಂಚದ ವಿಷಯ ಸುಖಗಳಲ್ಲೇ ಮಗ್ನರಾದ ಅಜ್ಞಾನಿಗಳಿಗೆ ಸದಾ ದೂರವಾಗಿರುವುದಲ್ಲದೆ ಕಾಣಿಸದೆಯೂ ಇರುವ, ಯೋಗಾನಂದದಲ್ಲಿ ಮಗ್ನರಾದವರಿಗೆ ಹತ್ತಿರದಲ್ಲಿರುವುದಲ್ಲದೆ ಕಾಣಿಸಿಕೊಳ್ಳುವವನೂ ಆದ, ಜ್ಞಾನ ಸ್ವರೂಪನೂ ಆನಂದಸಾಗರನೂ ಆದ, ರಘುಶ್ರೇಷ್ಠನಾದ ಸೀತಾದೇವಿಯ ಆನಂದಕ್ಕೆ ಆಶ್ರಯನಾದ, ಶ್ರೀರಾಮ ನನ್ನು ಸದಾ ಶರಣು ಹೊಂದುತ್ತೇನೆ.

ಮಹಾಯೋಗಮಾಯಾ ವಿಶೇಷಾನು ಯುಕ್ತೋ |
ವಿಭಾಸೀಶಲೀಲಾ ನರಾಕಾರವೃತ್ತಿಃ |
ತ್ವದಾನಂದ ಲೀಲಾ ಕಥಾಪೂರ್ಣಕಂದಾ |
ಸದಾನಂದರೂಪಾ ಭವಂತೀಹಲೋಕೇ. ||

ಮೂಲಕಾರಣವಾದ ಮಹಾಯೋಗಮಾಯೆಯಿಂದ ವಿಶೇಷವಾಗಿ ಕೂಡಿ ಪರಮೇಶ್ವರನಾದ ನೀನು ಲೀಲಾ ಮಾತ್ರದಲ್ಲಿ ಮನುಷ್ಯನಾಗಿ ಅವತಾರ ಮಾಡಿ ತೋರಿದ ನಿನ್ನ ಆನಂದ ಲೀಲಾಮೃತವಾದ ಕಥೆಯು, ಈ ಲೋಕದಲ್ಲಿ ಯಲ್ಲರಿಂದಲೂ ಮುಕ್ತಕಂಠದಿಂದ ಹೊಗಳಿಸಿಕೊಳ್ಳುವುದಾಗಿಯೂ ಸದಾ ಆನಂದ ರೂಪವಾಗಿಯೂ ಆಗಿರುತ್ತದೆ.

ಶ್ರೀರಾಮ ಪಂಚರತ್ನ ಸ್ತೋತ್ರ

ಕಂಜಾತ ಪತ್ರಾಯತ ಲೋಚನಾಯ |
ಕರ್ಣಾವತಂಸೋಜ್ಜ್ವಲ ಕುಂಡಲಾಯ |
ಕಾರುಣ್ಯ ಪಾತ್ರಾಯ ಸುವಂಶಜಾಯ |
ನಮೋಸ್ತು ರಾಮಾಯ ಸಲಕ್ಷ್ಮಣಾಯ ||

ಕಮಲದಂತೆ ವಿಶಾಲ ನೇತ್ರನಾದ, ಕಿವಿಗಳಲ್ಲಿ ಅಲಂಕೃತವಾದ ತೇಜೋಮಯ ಕುಂಡಲಗಳುಳ್ಳವನಾದ, ಕರುಣಾಶ್ರಯನಾದ, ಸದ್ವಂಶ ಸಂಭವನಾದ, ಲಕ್ಷ್ಮಣ ಸಮೇತನಾದ, ಶ್ರೀರಾಮನಿಗೆ ನಮಸ್ಕಾರಗಳು.

ವಿದ್ಯುನ್ನಿಭಾಂ ಭೋದ ಸುವಿಗ್ರಹಾಯ |
ವಿದ್ಯಾಧರೈಸ್ಸಂಸ್ತುತ ಸದ್ಗುಣಾಯ |
ವೀರಾವತಾರಾಯ ವಿರೋಧಿ ಹಂತ್ರೇ |
ನಮೋಸ್ತು ರಾಮಾಯ ಸಲಕ್ಷ್ಮಣಾಯ ||

ಮಿಂಚಿನ ಕಾಂತಿಯಿಂದ ಕೂಡಿದ ನೀಲಮೇಘದಂತೆ ನೀಲವರ್ಣನೂ, ತೇಜಸ್ವಿಯೂ ಆದ, ಗಂಧರ್ವ ವಿದ್ಯಾಧರರಿಂದ ಗಾನಮಾಡಲ್ಪಟ್ಟ, ಸದ್ಗುಣಗಳುಳ್ಳವನಾದ, ಪರಾಕ್ರಮಮೂರ್ತಿಯೂ ಶತ್ರು ಸಂಹಾರಕನೂ ಲಕ್ಷ್ಮಣ ಸಮೇತನೂ ಆದ ಶ್ರೀರಾಮಚಂದ್ರನಿಗೆ ಸಮಸ್ಕಾರಗಳು.

ಸಂಸಕ್ತ ದಿವ್ಯಾಯುಧ ಕಾರ್ಮುಕಾಯ |
ಸಮುದ್ರ ಗರ್ವಾಪಹರೋತ್ಸುಕಾಯ |
ಸುಗ್ರೀವ ಮಿತ್ರಾಯ ಸುರಾರಿ ಹಂತ್ರೇ |
ನಮೋಸ್ತು ರಾಮಾಯ ಸಲಕ್ಷ್ಮಣಾಯ ||

ಶ್ರೇಷ್ಠ ಆಯುಧಗಳಿಂದಲೂ, ಬಿಲ್ಲಿನಿಂದಲೂ ಕೂಡಿದವನೂ, ಸಮುದ್ರರಾಜನ ಗರ್ವವನ್ನು ದಮನಮಾಡಲು ಉತ್ಸಾಹಿಯೂ, ಸುಗ್ರೀವನ ಸಖನೂ, ರಾಕ್ಷಸ ನಾಶಕನೂ, ಲಕ್ಷ್ಮಣ ಸಹಿತನೂ ಆದ ಶ್ರೀರಾಮಚಂದ್ರನಿಗೆ ನಮಸ್ಕಾರಗಳು.

ಪೀತಾಂಬರಾಲಂಕೃತ ಮಧ್ಯಕಾಯ |
ಪಿತಾಮಹೇಂದ್ರಾಮರವಂದಿತಾಯ |
ಪ್ರೀತೇಸ್ವಭಕ್ತಸ್ಯ ಜನಸ್ಯ ಮಾತ್ರೇ |
ನಮೋಸ್ತು ರಾಮಾಯಸಲಕ್ಷ್ಮಣಾಯ ||

ಪೀತಾಂಬರವನ್ನುಟ್ಟ ನಡುಉಳ್ಳವನಾದ, ಬ್ರಹ್ಮ ಇಂದ್ರಾದಿ ದೇವತೆಗಳಿಂದ ವಂದಿಸಿಕೊಳ್ಳುತ್ತಿರುವ, ತನ್ನ ಭಕ್ತರಿಗೂ, ಮಾತೃವರ್ಗಕ್ಕೂ ಪ್ರೀತನಾದ, ಲಕ್ಷ್ಮಣ ಸಮೇತನಾದ ಶ್ರೀರಾಮನಿಗೆ ನಮಸ್ಕಾರವು.

ನಮೋ ನಮಸ್ತೇಖಿಲ ಪೂಜಿತಾಯ।
ನಮೋ ನಮಸ್ತೇಂದು ನಿಭಾನನಾಯ।
ನಮೋ ನಮಸ್ತೇ ರಘುವಂಶಜಾಯ।
ನಮೋಸ್ತು ರಾಮಾಯ ಸಲಕ್ಷ್ಮಣಾಯ॥

ಸಮಸ್ತರಿಂದ ಪೂಜಿಸಿಕೊಳ್ಳುವವನೂ, ಚಂದ್ರನಿಗೆ ಸದೃಶನೂ, ಮನೋಹರವಾದ ಮುಖ ಉಳ್ಳವನೂ, ರಘು ಕುಲೋದ್ಭವನೂ ಲಕ್ಷ್ಮಣ ಸಹಿತನೂ ಆದ ಶ್ರೀರಾಮನಿಗೆ ಪುನಃ ಪುನಃ ನಮಸ್ಕಾರಗಳನ್ನು ಅರ್ಪಿಸುತ್ತೇನೆ.

ಇಮಾನಿ ಪಂಚರತ್ನಾನಿ ತ್ರಿಸಂಧ್ಯಂ ಯಃಪಠೇನ್ನರಃ।
ಸರ್ವಪಾಪ ವಿನಿರ್ಮುಕ್ತ ಸ್ಸಯಾತಿ ಪರಮಾಂಗತಿಂ॥

ಈ ಮೇಲಿನ ಪಂಚರತ್ನದಂತಿರುವ ಐದು ಶ್ಲೋಕಗಳನ್ನು ಯಾವ ಪುರುಷನು ತ್ರಿಕಾಲಗಳಲ್ಲೂ ಪಠಿಸುವನೋ ಅವನು ಸರ್ವ ಪಾಪಗಳಿಂದಲೂ ಬಿಡಲ್ಪಟ್ಟು ಪರಮ ಗತಿಯನ್ನು ಹೊಂದುತ್ತಾನೆ.

ಕಲಯಾಮಿ ಚಿತ್ತೇ ಸ್ತೋತ್ರ

ಕಲ್ಯಾಣದಂ ಕೌಶಿಕ ಯಜ್ಞಪಾಲಂ। ಕಳಾನಿಧಿಂ ಕಾಂಚನ ಶೈಲಧೀರಂ॥
ಕಂಜಾತನೇತ್ರಂ ಕರುಣಾಸಮುದ್ರಂ। ಕಾಕುತ್ಸ್ಥರಾಮಂ ಕಲಯಾಮಿ ಚಿತ್ತೇ॥

ಮನಸ್ಸಿನಲ್ಲಿ, ಕಲ್ಯಾಣದಾಯಕನೂ, ವಿಶ್ವಾಮಿತ್ರನ ಯಜ್ಞರಕ್ಷಕನೂ, ಕಳಾಪರಿಪೂರ್ಣನೂ, ಮೇರು ಪರ್ವತಕ್ಕೆ ಸಮನಾದ ಧೈರ್ಯದಿಂದ ಕೂಡಿದವನೂ, ಕಮಲಾಕ್ಷನೂ, ಕರುಣಾಸಮುದ್ರನೂ ಕಕುತ್ಥವಂಶಜನೂ ಆದ ಶ್ರೀರಾಮಮೂರ್ತಿಯನ್ನು ಧ್ಯಾನಿಸುತ್ತೇನೆ.

ಏಕೇನ ಬಾಣಮಪರೇಣ ಕರೇಣ ಚಾಪಂ।
ಹರ್ಷಂವಹಂತಮಸಮಾನ ಜಟಾಶಿರಸ್ಕಂ।
ಸೀತಾಸಹಾಯ ಮನುಜೇನ ಸಹಾಚರಂತಂ।
ಶ್ರೀರಾಮಚಂದ್ರಮನಿಶಂ ಕಲಯಾಮಿ ಚಿತ್ತೇ॥

ಒಂದು ಕೈಯಲ್ಲಿ ಬಾಣವನ್ನೂ ಇನ್ನೊಂದರಲ್ಲಿ ಬಿಲ್ಲನ್ನೂ ಹಿಡಿದುಕೊಂಡು ಸಂತೋಷದಿಂದ ಕೂಡಿ, ಎಣೆಯಿಲ್ಲದವನಾಗಿ, ಜಟಾಧಾರಿಯಾಗಿ, ಸೀತಾಲಕ್ಷ್ಮಣಸಮೇತನಾಗಿ ವನವಾಸವನ್ನು ಮುಗಿಸುತ್ತಿರುವ ಶ್ರೀರಾಮ ಚಂದ್ರನನ್ನು ಮನಸ್ಸಿನಲ್ಲಿ ಸದಾ ಧ್ಯಾನ ಮಾಡುತ್ತೇನೆ.

ಆಮೀಲಯರ್ನ್ ದಶಶಿರೋವದನಾಂಬುಜಾತ।
ಮುನ್ಮೀಲಯರ್ನ್ ಜನಕಜಾನಯನೋತ್ಪಲೇಚ।
ಆನಂದಯರ್ನ್ ಸಕಲಜೀವ ಚಕೋರರಾಶಿಂ।
ಶ್ರೀರಾಮಚಂದ್ರಮನಿಶಂ ಕಲಯಾಮಿ ಚಿತ್ತೇ॥

ದಶಕಂಠ ರಾವಣನ ಶಿರಸ್ಸೆಂಬ ಕಮಲವನ್ನು ಬಾಡಿಸಿದ, ಸೀತಾದೇವಿಯ, ಕಣ್ಣುಗಳೆಂಬ ನೈದಿಲೆಯನ್ನು ಅರಳಿಸಿದ, ಸಮಸ್ತ ಜೀವರಾಶಿಗಳೆಂಬ ಚಕ್ರವಾಕ ಪಕ್ಷಿಗಳಿಗೆ ಆನಂದವನ್ನುಂಟುಮಾಡಿದ, ಶ್ರೀರಾಮನೆಂಬ ಚಂದ್ರ ನನ್ನು ಯಾವಾಗಲೂ ಮನಸ್ಸಿನಲ್ಲಿ ಧ್ಯಾನಿಸುತ್ತೇನೆ.

ರಾಮಂ ಪುರಾಣಪುರುಷಂ ರಮಣೀಯ ವೇಷಂ।
ರಾಜಾಧಿರಾಜ ಮಕುಟಾರ್ಚಿತ ಪಾದ ಪೀಠಂ।
ಸೀತಾಪತಿಂ ವಿನಯಿನಂ ಜಗದೇಕವೀರಂ।
ಶ್ರೀರಾಮಚಂದ್ರಮನಿಶಂ ಕಲಯಾಮಿ ಚಿತ್ತೇ॥

ಆದಿಪುರುಷನಾದ, ಮನೋಹರ ಮೂರ್ತಿಯಾದ, ರಾಜಾಧಿರಾಜರುಗಳು ನಮಸ್ಕರಿಸಿದಾಗ ಅವರ ಕಿರೀಟಗಳಿಂದ ಶೋಭಿತವಾದ ಪಾದಗಳುಳ್ಳ, ಸೀತಾಪತಿಯೂ ವಿನಯವೆಂಬ ಗುಣವುಳ್ಳವನೂ, ಜಗತ್ತಿಗೇ ಅಪ್ರತಿಮ ವೀರನೂ ಆದ ಶ್ರೀರಾಮಚಂದ್ರನನ್ನು ಸದಾ ಮನಸ್ಸಿನಲ್ಲಿ ಧ್ಯಾನಿಸುತ್ತೇನೆ.

ವಿದ್ಯುಸ್ಫುರನ್ಮಕರ ಕುಂಡಲದೀಪ್ತಚಾರು।
ಗಂಡಸ್ಥಲಂ ಮಣಿಕಿರೀಟ ವಿರಾಜಮಾನಂ।
ಪೀತಾಂಬರಂ ಜಲದನೀಲ ಮುದಾರಕಾಂತಿಂ।
ಶ್ರೀರಾಮಚಂದ್ರಮನಿಶಂ ಕಲಯಾಮಿ ಚಿತ್ತೇ॥

ಮಿಂಚಿನ ಕಾಂತಿಯಂತೆ ಹೊಳೆಯುವ ಕುಂಡಲಗಳ ಪ್ರಕಾಶದಿಂದ ಶೋಭಿಸುವ ಕಪೋಲಗಳುಳ್ಳ, ರತ್ನ ಕಿರೀಟವನ್ನು ಧರಿಸಿ ಬೆಳಗುವ, ಪೀತಾಂಬರಧಾರಿಯೂ ಮೇಘಶ್ಯಾಮನೂ ಆದ ಶ್ರೀರಾಮಮೂರ್ತಿಯನ್ನು ಮನಸ್ಸಿನಲ್ಲಿ ಸದಾ ಧ್ಯಾನಿಸುತ್ತೇನೆ.

ಚೇತಸ್ಸ್ಥಿತಂ ಚಿಂತಿತ ಚಿಂತನೀಯಂ।
ಚಿಂತಾಹರಂ ಚಿಂತಿತ ಪಾರಿಜಾತಂ।
ಅಚಿಂತನೀಯಂ ಬಹು ಚಿಂತಯಂತಂ।
ತಮೇವ ರಾಮಂ ಕಲಯಾಮಿ ಚಿತ್ತೇ॥

ಅಂತಃಕರಣದಲ್ಲಿ ಚೈತನ್ಯಸ್ವರೂಪದಲ್ಲಿ ಪ್ರಕಟವಾಗುವ, ಧ್ಯಾನ ಮಾಡುವವರಿಗೆ ಇಷ್ಟಾರ್ಥವನ್ನು ಸಲ್ಲಿಸುವ, ದುಃಚಿಂತೆಗಳನ್ನು ಪರಿಹರಿಸುವ, ಭಕ್ತರು ಕೇಳಿದ್ದನ್ನು ಕೊಡುವ, ಎಲ್ಲವನ್ನೂ ತಿಳಿದುಕೊಳ್ಳುವ ಬುದ್ಧಿಗೂ ದೂರನಾದ, ಆದರೆ, ಬಹಳವಾಗಿ ದೀರ್ಘವಾಗಿ ಏಕಾಗ್ರತೆಯಿಂದ ಧ್ಯಾನಿಸಿದರೆ ಸಿಕ್ಕುವನಾದ, ಆತ್ಮಾರಾಮನಾದ ಶ್ರೀರಾಮನನ್ನು ಸದಾ ಮನಸ್ಸಿನಲ್ಲಿ ಧ್ಯಾನಿಸುತ್ತೇನೆ.

ನೀಲಾಭ್ರದೇಹ ನಿಖಿಲೇಶ ಜಗನ್ನಿವಾಸ।
ರಾಜೀವನೇತ್ರ ರಮಣೀಯ ಗುಣಾಭಿರಾಮ।
ಶ್ರೀರಾಮ ದೈತ್ಯಕುಲ ಮರ್ದನ ರಾಮಚಂದ್ರ।
ತ್ವತ್ಪಾದ ಪದ್ಮಮನಿಶಂ ಕಲಯಾಮಿ ಚಿತ್ತೇ॥

ಆಕಾಶದಂತೆ ನೀಲವರ್ಣನಾದವನೇ, ಸಮಸ್ತಕ್ಕೂ ಒಡೆಯನೇ, ಸಮಸ್ತ ಜಗತ್ತಿನಲ್ಲೂ ಚಿದ್ರೂಪನಾಗಿ ಇರುವನೇ, ಕಮಲಾಕ್ಷನೆ, ರಂಜಕವಾದ ಸದ್ಗುಣಗಳಿಂದ ಪ್ರಕಾಶಿಸುವವನೇ, ಶ್ರೀರಾಮನೇ ರಾಕ್ಷಸವಂಶ ನಾಶಕನೇ, ರಾಮಚಂದ್ರ, ನಿನ್ನ ಪಾದ ಕಮಲವನ್ನು ಯಾವಾಗಲೂ ನನ್ನ ಮನಸ್ಸಿನಲ್ಲಿ ಧ್ಯಾನಿಸುತ್ತೇನೆ.

ಕುವಲಯದಳನೀಲಃ ಪೀತವಾಸಾಸ್ಮಿತಾಸ್ಯಃ|
ವಿವಿಧರುಚಿರಭೂಷಾ ಭೂಷಿತೋ ದಿವ್ಯಮೂರ್ತಿಃ|
ದಶರಥ ಕುಲನಾಥೋ ಜಾನಕೀ ಪ್ರಾಣನಾಥೋ|
ನಿವಸತು ಮಮಚಿತ್ತೇ ಸರ್ವದಾ ರಾಮಚಂದ್ರಃ||

ನೈದಿಲೆಯಂತೆ ನೀಲವರ್ಣನೂ, ಪೀತಾಂಬರಧಾರಿಯೂ, ಮಂದಸ್ಮಿತನೂ, ವಿಧ ವಿಧವಾದ ಪ್ರಕಾಶಮಾನ ವಾದ ಒಡವೆಗಳಿಂದ ಅಲಂಕೃತನೂ, ದಿವ್ಯಮೂರ್ತಿಯೂ, ದಶರಥನ ವಂಶದಲ್ಲಿ ಶ್ರೇಷ್ಠನೂ, ಸೀತಾಪತಿಯೂ ಆದ ರಾಮಚಂದ್ರನು ಸರ್ವದಾ ನನ್ನ ಮನಸ್ಸಿನಲ್ಲಿ ನೆಲಸಲಿ.

ರಾಘವ ರಾಮಚಂದ್ರ ಸ್ತೋತ್ರ

ಸಿಂಹಾಸನಸ್ಥಂ ಸುರ ಸೇವಿತವ್ಯಂ|
ರತ್ನಾಂಕಿತಾಲಂಕೃತ ಪಾದಪದ್ಮಂ|
ಸೀತಾಸಮೇತಂ ಶಶಿಸೂರ್ಯನೇತ್ರಂ|
ರಾಮಂ ಭಜೇ ರಾಘವ ರಾಮಚಂದ್ರಂ||

ಸಿಂಹಾಸನಾಸೀನನಾಗಿ, ದೇವತೆಗಳಿಂದ ಸೇವಿತನಾಗಿ, ರತ್ನಗಳಿಂದ ಅಲಂಕೃತವಾದ ಪಾದಕಮಲಗಳುಳ್ಳವ ನಾಗಿ, ಸೀತಾಸಮೇತನಾಗಿ, ಚಂದ್ರ, ಸೂರ್ಯರ ಕಾಂತಿಯಂತೆ ಕಾಂತಿಯುಳ್ಳ ನೇತ್ರಗಳಿಂದ ಕೂಡಿದವನಾಗಿ ಇರುವ ರಘುಪತಿಯಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಸುಗ್ರೀವ ಮಿತ್ರಂ ಸುಜನಾನುರೂಪಂ|
ಲಂಕಾಹರಂ ರಾಕ್ಷಸವಂಶನಾಶಂ|
ವೇದಾಶ್ರಯಾಂಗಂ ವಿಪುಲಾಯತಾಕ್ಷಂ|
ರಾಮಂ ಭಜೇ ರಾಘವ ರಾಮಚಂದ್ರಂ||

ಸುಗ್ರೀವಮಿತ್ರನಾದ, ಸತ್ಪುರುಷರಿಗೆ ಸರಿಯಾದವನಾದ, ಲಂಕೆಯನ್ನು ಭಗ್ನಗೊಳಿಸಿ ರಾಕ್ಷಸ ವಂಶವನ್ನೇ ನಾಶಮಾಡಿದ, ವೇದಗಳಿಗೆ ಆಶ್ರಯನಾದ, ಧರ್ಮ ಸಂಸ್ಥಾಪನೆಗಾಗಿ ಮನುಷ್ಯ ಶರೀರ ಧರಿಸಿ ಅವತರಿಸಿದ, ವಿಶಾಲ ನಯನನಾದ, ರಘುಪತಿಯಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಅನಂತ ಕೀರ್ತಿಂ ವರದಂ ಪ್ರಸನ್ನಂ|
ಪದ್ಮಾಸನಂ ಸೇವಕ ಪಾರಿಜಾತಂ|
ರಾಜಾಧಿರಾಜಂ ರಘುವೀರಕೇತುಂ|
ರಾಮಂ ಭಜೇ ರಾಘವ ರಾಮಚಂದ್ರಂ||

ಅಪರಿಮಿತ ಕೀರ್ತಿಶಾಲಿಯೂ, ವರಪ್ರದನೂ, ಪ್ರಸನ್ನವದನನೂ, ಕಮಲಾಸನನೂ, ಆಶ್ರಿತರಿಗೆ ಕಲ್ಪವೃಕ್ಷ ದಂತಿರುವನೂ, ಚಕ್ರವರ್ತಿಯೂ, ರಘುವಂಶ ವೀರರಲ್ಲಿ ಧ್ವಜದಂತೆ ಅಗ್ರಗಣ್ಯನೂ, ರಘುಪತಿಯೂ ಆದ ರಾಮ ಚಂದ್ರನನ್ನು ಭಜಿಸುತ್ತೇನೆ.

ಪದ್ಮಾಸನಸ್ಥಂ ಶುಕಸೇವಿತವ್ಯಂ।
ಪದ್ಮಾಲಯಾನಂದ ಕಟಾಕ್ಷವೀಕ್ಷ್ಯಂ।
ಗಂಧರ್ವ ವಿದ್ಯಾಧರ ಗೀಯಮಾನಂ।
ರಾಮಂ ಭಜೇ ರಾಘವ ರಾಮಚಂದ್ರಂ॥

ಪದ್ಮಾಸನಾಸೀನನಾಗಿ, ಶುಕಮುನಿಯಿಂದ ಸೇವಿತನಾಗಿ, ಲಕ್ಷ್ಮಿಯ ಕಟಾಕ್ಷದಿಂದ ಕೂಡಿ, ಗಂಧರ್ವರಿಂದಲೂ ವಿದ್ಯಾಧರರಿಂದಲೂ ಹಾಡಿ ಹೊಗಳಿಸಿಕೊಳ್ಳುತ್ತಾ ಇರುವ, ರಘುಪತಿಯಾದ ರಾಮಚಂದ್ರನನ್ನು ಭಜಿಸುತ್ತೇನೆ.

ಅಚಿಂತ್ಯಮವ್ಯಕ್ತಮನಂತರೂಪಂ।
ಅದ್ವೈತಮಾನಂದಮನಾದಿಗಮ್ಯಂ।
ಪುಣ್ಯಸ್ವರೂಪಂ ಪುರುಷೋತ್ತಮಾಖ್ಯಂ।
ರಾಮಂ ಭಜೇ ರಾಘವ ರಾಮಚಂದ್ರಂ॥

ಮನಸ್ಸಿಗೂ ದೂರನೂ, ರೂಪರಹಿತನೂ, ಆದರೂ ಮಾಯಾ ಪ್ರಭಾವದಿಂದ ಅನಂತರೂಪವಾಗಿ ಕಾಣುವವನೂ, ಎರಡನೆಯದಿಲ್ಲದ ಅದ್ವಿತೀಯ ಸ್ವರೂಪನೂ, ಆನಂದನೂ, ಜನ್ಮರಹಿತನೂ, ಪುಣ್ಯಸ್ವರೂಪನೂ, ಪುರುಷೋತ್ತಮನೂ ಅಂದರೆ, ಬ್ರಹ್ಮಸ್ವರೂಪಿಯೂ ಆದ, ರಘುಪತಿಯಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಮಂದಸ್ಮಿತಂ ಕುಂಡಲ ಗಂಡಭಾಗಂ।
ಪೀತಾಂಬರಂ ಭೂಷಣ ಭೂಷಿತಾಂಗಂ।
ನೀಲೋತ್ಪಲಾಂಗಂ ಭುವನೈಕಮಿತ್ರಂ।
ರಾಮಂ ಭಜೇ ರಾಘವ ರಾಮಚಂದ್ರಂ॥

ಮಂದಹಾಸದಿಂದ ಕೂಡಿದವನೂ, ಕುಂಡಲಗಳಿಂದ ಅಲಂಕೃತವಾದ ಕಪೋಲಸ್ಥಳಗಳುಳ್ಳವನೂ, ಪೀತಾಂಬರಧಾರಿಯೂ ನೈದಿಲೆಯಂತೆ ನೀಲವರ್ಣನೂ ಪ್ರಪಂಚಕ್ಕೆ ಏಕೈಕ ಮಿತ್ರನೂ, ರಘುಪತಿಯೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಡಿಂಡೀರಹಾಸ ಮಣಿಕುಂಡಲ ಚಾರುಕರ್ಣ।
ದೋರ್ದಂಡಶೌರ್ಯಜಿತ ಖಂಡನ ಶೌರ್ಯಧೀರ।
ಕೋದಂಡಕಾಂಡ ಪರಿಮಂಡಿತ ಪಾರ್ಥಿವೇಂದ್ರ।
ವೇದಂಡಯಾನ ಜಯರಾಘವ ರಾಮಚಂದ್ರ॥

ಸಮುದ್ರದ ನೊರೆಯಂತೆ ಧವಳಿಸುವ ರತ್ನ ಕುಂಡಲಗಳಿಂದ ಭೂಷಿತನಾದ, ಮನೋಹರವಾದ ಕಿವಿಗಳಿಂದಲೂ, ಶೂರರೂ ಧೀರರೂ ಎನಿಸಿಕೊಂಡು ಮೆರೆಯುತ್ತಿದ್ದವರ ಗರ್ವವನ್ನು ತಗ್ಗಿಸಿದ ಬಾಹು ದಂಡಗಳಿಂದಲೂ, ರಾಜಶ್ರೇಷ್ಠರನ್ನು ಮಣಿಯುವಂತೆ ಮಾಡಿದ ಬಿಲ್ಲು ಬಾಣಗಳಿಂದಲೂ ಕೂಡಿರುವ, ದಿವ್ಯಗಜಾರೂಢನಾಗಿ ಮೆರೆಯುವ ಶ್ರೀರಾಮಚಂದ್ರನೇ, ನಿನಗೆ ಜಯ, ಜಯಕಾರವು.

ಸೌಮಿತ್ರಿಮಾನಾರ್ಣವ ಪೂರ್ಣಚಂದ್ರ।
ಸೀತಾಲಸಲ್ಲೋಚನ ಪೂರ್ಣಚಂದ್ರ।
ಸುರಾರಿವಕ್ತ್ರಾಂಬುಜ ಪೂರ್ಣಚಂದ್ರ।
ಸಂರಕ್ಷಮಾಂ ರಾಘವ ರಾಮಚಂದ್ರ॥

ಲಕ್ಷ್ಮಣನ ಮನಸ್ಸೆಂಬ ಸಮುದ್ರಕ್ಕೆ ಪೂರ್ಣಚಂದ್ರನಂತೆ ಆಹ್ಲಾದಕರನಾಗಿರುವ, ಸೀತೆಯ ಶುಭ್ರವಾದ ಕಣ್ಣುಗಳಿಗೆ ಪೂರ್ಣಚಂದ್ರನಂತೆ ಸಂತೋಷದಾಯಕನಾದ, ರಾಕ್ಷಸರ ಮುಖಗಳೆಂಬ ಕಮಲಗಳಿಗೆ ಮ್ಲಾನತೆಯನ್ನುಂಟುಮಾಡುವ ಪೂರ್ಣಚಂದ್ರನಾದ, ರಾಘವನೇ, ರಾಮಚಂದ್ರನೇ, ನನ್ನನ್ನು ಸಂರಕ್ಷಿಸು.

ಆನಂದರೂಪಂ ವರದಂ ಪ್ರಸನ್ನಂ।
ಸಿಂಹಾಸನಂ ಸೇವಿತ ಪಾರಿಜಾತಂ।
ನೀಲೋತ್ಪಲಾಂಗಂ ಭುವನೈಕಮಿತ್ರಂ।
ರಾಮಂ ಭಜೇ ರಾಘವ ರಾಮಚಂದ್ರಂ।

ಆನಂದಮೂರ್ತಿಯೂ, ವರಪ್ರದನೂ, ಯಾವಾಗಲೂ ಭಕ್ತರಿಗೆ ಪ್ರಸನ್ನನಾಗತಕ್ಕವನೂ, ಸಿಂಹಾಸನದಲ್ಲಿ ಕುಳಿತು, ಪಾರಿಜಾತಪುಷ್ಪಗಳಿಂದ ಪೂಜಿಸಿಕೊಳ್ಳತಕ್ಕವನೂ, ನೈದಿಲೆಯಂತೆ ಶ್ಯಾಮವರ್ಣನೂ, ಪ್ರಪಂಚಕ್ಕೆಲ್ಲಾ ಒಬ್ಬನೇ ಒಬ್ಬನಾದ ಸೂರ್ಯಸ್ವರೂಪನೂ, ರಘುವಂಶೋದ್ಭವನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಸಿಂಹಾಸನಸ್ಥಂ ಮುನಿಸಿದ್ಧಸೇವ್ಯಂ।
ರಕ್ತೋತ್ಪಲಾಲಂಕೃತ ಪಾದಪದ್ಮಂ।
ಸೀತಾಸಮೇತಂ ಶಶಿ ಸೂರ್ಯನೇತ್ರಂ।
ರಾಮಂ ಭಜೇ ರಾಘವ ರಾಮಚಂದ್ರಂ॥

ಸಿಂಹಾಸನಾಸೀನನೂ, ಋಷಿಗಳಿಂದಲೂ ಸಿದ್ಧರುಗಳಿಂದಲೂ ಸೇವಿತನೂ, ಕೆಂಪು ನೈದಿಲೆಯಿಂದ ಅಲಂಕಾರವಾದ ಪಾದಗಳುಳ್ಳವನೂ, ಸೀತಾಸಮೇತನೂ, ಸೂರ್ಯಚಂದ್ರರಂತೆ ಕಾಂತಿಯುಕ್ತವಾದ ಕಣ್ಣುಗಳುಳ್ಳವನೂ, ರಘುಪತಿಯೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ರಾಮಮಂತ್ರ ಸ್ತೋತ್ರ

ಜಗತಿ ವಿಶದಮಂತ್ರಂ ಜಾನಕೀ ಪ್ರಾಣಮಂತ್ರಂ।
ವಿಬುಧ ವಿನುತಮಂತ್ರಂ ವಿಶ್ವವಿಖ್ಯಾತಮಂತ್ರಂ।
ದಶರಥಸುತ ಮಂತ್ರಂ ದೈತ್ಯಸಂಹಾರ ಮಂತ್ರಂ।
ರಘುಪತಿ ನಿಜಮಂತ್ರಂ ರಾಮರಾಮೇತಿ ಮಂತ್ರಂ॥

ಜಗತ್ತಿನಲ್ಲೆಲ್ಲಾ ವ್ಯಾಪಿಸಿ, ಜಾನಕಿಗೆ ತನ್ನ ಪ್ರಾಣಕ್ಕಿಂತ ಪ್ರಿಯವಾಗಿ, ಜ್ಞಾನಿಗಳಿಂದ ವಿಶೇಷವಾಗಿ ಧ್ಯಾನಿಸಲ್ಪಟ್ಟು, ಪ್ರಪಂಚದಲ್ಲೆಲ್ಲಾ ಪ್ರಸಿದ್ಧಿ ಹೊಂದಿರುವ ದಶರಥ ಪುತ್ರ ನಾಮಕವಾದ, ದೈತ್ಯರನ್ನು ಸಂಹರಿಸಿ, ಮನುಷ್ಯನ ತಮೋಗುಣವೆಂಬ ದೈತ್ಯನನ್ನು ನಾಶಮಾಡುವ ರಘುಪತಿಯ ಶ್ರೇಷ್ಠಮಂತ್ರವು, "ರಾಮ, ರಾಮ" ಎಂಬ ದಿವ್ಯ ಮಂತ್ರವು.

ಶತ್ರು ಚ್ಛೇದೈಕಮಂತ್ರಂ ಸರಸಮುಪನಿಷದ್ವಾಕ್ಯ ಸಂಪೂಜ್ಯಮಂತ್ರಂ।
ಸಂಸಾರೋತ್ತಾರಮಂತ್ರಂ ಸಮುಚಿತಸಮಯೇ ಸಂಗನಿರ್ಯಾಣಮಂತ್ರಂ।
ಸರ್ವೈಶ್ವರ್ಯೈಕಮಂತ್ರಂ ವ್ಯಸನ ಭುಜಗಸಂದಷ್ಟ ಸಂತ್ರಾಣಮಂತ್ರಂ।
ಜಿಹ್ವೇ ಶ್ರೀರಾಮ ಮಂತ್ರಂ ಜಪತು ಜಪತು ಮೇ ಜನ್ಮ ಸಾಫಲ್ಯ ಮಂತ್ರಂ॥

ಶ್ರೀರಾಮ ಮಂತ್ರವು ಶತ್ರು ನಾಶಕ್ಕೆ ಏಕಮಾತ್ರ ಮಂತ್ರ. ರಸಯುಕ್ತವಾದ ಉಪನಿಷತ್ತುಗಳಿಂದ ಹೊಗಳಿಸಿಕೊಳ್ಳುವ ಮಂತ್ರ, ಸಂಸಾರವನ್ನು ದಾಟಿಸುವ ಮಂತ್ರ, ಉಚಿತ ಸಮಯದಲ್ಲಿ ವೈರಾಗ್ಯವನ್ನುಂಟು ಮಾಡಿ ಮೋಕ್ಷವನ್ನು ಕೊಡಿಸುವ ಮಂತ್ರ, ಸಮಸ್ತವಾದ ಐಶ್ವರ್ಯವನ್ನು ಗಳಿಸುವುದಕ್ಕೂ ಏಕಮಂತ್ರ. ದುಃಖ ವೆಂಬ ಹಾವಿನಿಂದ ಕಚ್ಚಿಸಿಕೊಂಡಿರುವವರಿಗೆ ಉಪಶಾಮಕವಾದ ಮಂತ್ರ. ಎಲೈ ನಾಲಿಗೆಯೇ ಇಂತಹ ಶ್ರೇಷ್ಠವಾದ ಶ್ರೀರಾಮ ಮಂತ್ರವನ್ನು ನನ್ನ ಜನ್ಮ ಸಾಫಲ್ಯಕ್ಕಾಗಿ ಜಪಿಸು, ಜಪಿಸು.

ಬ್ರಹ್ಮಾದಿಯೋಗಿ ಮುನಿಪೂಜಿತ ಸಿದ್ಧಮಂತ್ರಂ।
ದಾರಿದ್ರ್ಯ ದುಃಖ ಭವರೋಗ ವಿನಾಶಮಂತ್ರಂ।
ಸಂಸಾರ ಸಾಗರ ಸಮುತ್ತರಣೈಕ ಮಂತ್ರಂ।
ವಂದೇ ಮಹಾಭಯಹರಂ ರಘು ರಾಮಮಂತ್ರಂ॥

ಬ್ರಹ್ಮಾದಿ ಯೋಗಿಗಳು ಮುನಿಗಳು ಮುಂತಾದವರಿಂದ ಪೂಜಿತವಾಗಿ, ಅವರಿಗೆ ಸಿದ್ಧಮಂತ್ರವಾಗಿರುವ, ದಾರಿದ್ರ್ಯ ದುಃಖವನ್ನೂ ಭವರೋಗವನ್ನೂ ನಾಶಮಾಡುವ, ಸಂಸಾರ ಸಾಗರದಿಂದ ಪಾರುಮಾಡುವ, ಮೃತ್ಯು ಭಯವನ್ನು ನಾಶಮಾಡುವ ರಘುರಾಮನ ದಿವ್ಯ ಮಂತ್ರಕ್ಕೆ ನಮಸ್ಕರಿಸುತ್ತೇನೆ.

ನಿತ್ಯಂ ಶ್ರೀರಾಮ ಮಂತ್ರಂ ನಿರುಪಮಮಧಿಕಂ ನೀತಿಸುಜ್ಞಾನ ಮಂತ್ರಂ।
ಸತ್ಯಂ ಶ್ರೀರಾಮ ಮಂತ್ರಂ ಸದಮಲಹೃದಯೇ ಸರ್ವದಾರೋಗ್ಯ ಮಂತ್ರಂ।
ಸ್ತುತ್ಯಂ ಶ್ರೀರಾಮ ಮಂತ್ರಂ ಸುಲಲಿತಸುಮನಸ್ಸೌಖ್ಯ ಸೌಭಾಗ್ಯ ಮಂತ್ರಂ।
ಪಠ್ಯಂ ಶ್ರೀರಾಮ ಮಂತ್ರಂ ಪವನಜವರದಂ ಪಾತುಮಾಂ ರಾಮಮಂತ್ರಂ॥

ಶ್ರೀರಾಮ ಮಂತ್ರವು ನಿತ್ಯವಾದದ್ದು. ಎಣೆಯಿಲ್ಲದ್ದು. ನೀತಿ ಸುಜ್ಞಾನ ಬೋಧಕವಾದದ್ದು. ಸತ್ಯ ವಾದದ್ದು. ಪರಿಶುದ್ಧ ಮನಸ್ಸಿನಿಂದ ಜಪಿಸಿದರೆ ಸದಾ ಆರೋಗ್ಯದಾಯಕವಾದದ್ದು. ಇದು ಸ್ತುತಿಗೆ ಅರ್ಹವಾದದ್ದು. ಒಳ್ಳೆಯ ಮನಸ್ಸಿಗೆ ಸಕಲ ಸುಖ ಸೌಭಾಗ್ಯಗಳನ್ನು ಕೊಡತಕ್ಕದ್ದು. ಪಾರಾಯಣಕ್ಕೆ ಯೋಗ್ಯವಾದದ್ದು. ಇದು ಆಂಜನೇಯನಿಗೆ ವರಪ್ರದಾನ ಮಾಡಿತು. ಇಂತಹ ರಾಮಮಂತ್ರವು ನಮ್ಮನ್ನು ಕಾಪಾಡಲಿ.

ನಿಖಿಲ ನಿಲಯ ಮಂತ್ರಂ ನಿತ್ಯ ತತ್ತ್ವಾಖ್ಯಮಂತ್ರಂ।
ಭವಕುಲಹರಮಂತ್ರಂ ಭೂಮಿಜಾ ಪ್ರಾಣಮಂತ್ರಂ।
ಪವನಜಸುತ ಮಂತ್ರಂ ಪಾರ್ವತೀ ಮೋಕ್ಷಮಂತ್ರಂ।
ಪಶುಪತಿ ನಿಜಮಂತ್ರಂ ಪಾತುಮಾಂ ರಾಮಮಂತ್ರಂ॥

ಸಮಸ್ತರೂ ಜಪಿಸುತ್ತಿರುವ, ನಿತ್ಯವಾದ ಆತ್ಮ ತತ್ತ್ವವೆಂಬ ಹೆಸರಿನ ಮಂತ್ರವಾದ, ಸಂಸಾರ ದುಃಖ ನಾಶಕವೂ, ಸೀತಾ ಪ್ರಾಣಮಂತ್ರವೂ, ಆಂಜನೇಯನ ಪ್ರಿಯಮಂತ್ರವೂ, ಪಾರ್ವತಿಗೆ ಮೋಕ್ಷ ಮಂತ್ರವೂ, ಪರಮೇಶ್ವರನ ನಿಜ ಮಂತ್ರವೂ ಆದ ರಾಮಮಂತ್ರವು ನಮ್ಮನ್ನು ಕಾಪಾಡಲಿ.

ಪ್ರಣವನಿಲಯಮಂತ್ರಂ ಪ್ರಾಣನಿರ್ಯಾಣಮಂತ್ರಂ।
ಪ್ರಕೃತಿ ಪುರುಷಮಂತ್ರಂ ಬ್ರಹ್ಮರುದ್ರೇಂದ್ರಮಂತ್ರಂ ।
ಪ್ರಕಟದುರಿತ ರಾಗದ್ವೇಷ ನಿರ್ನಾಶ ಮಂತ್ರಂ।
ರಘುಪತಿ ನಿಜಮಂತ್ರಂ ರಾಮರಾಮೇತಿ ಮಂತ್ರಂ.॥

ಓಂ ಕಾರದಲ್ಲಿ ನೆಲೆಸಿರುವ, ಪ್ರಾಣಕ್ಕೆ ಮೋಕ್ಷದಾಯಕವಾದ, ಪ್ರಕೃತಿ ಪುರುಷ, ರೂಪವೂ (ಇಡಾ, ಪಿಂಗಳ ನಾಡೀರೂಪವೂ), ಬ್ರಹ್ಮ, ರುದ್ರ, ಇಂದ್ರ, ಸ್ವರೂಪವೂ, ರೂಪುಗೊಳ್ಳುವ ಪಾಪಗಳನ್ನು (ಅರಿಷಡ್ವರ್ಗಗಳನ್ನು) ನಾಶ ಮಾಡುವುದೂ ಆದ ರಾಮ ಎಂಬ ಮಂತ್ರವು ನಮ್ಮನ್ನು ಕಾಪಾಡಲಿ.

ದಶರಥಸುತಮಂತ್ರಂ ದೈತ್ಯಸಂಹಾರಮಂತ್ರಂ।
ವಿಬುಧವಿನುತಮಂತ್ರಂ ವಿಶ್ವವಿಖ್ಯಾತಮಂತ್ರಂ।
ಮುನಿಗಣನುತಮಂತ್ರಂ ಮುಕ್ತಿಮಾರ್ಗೈಕಮಂತ್ರಂ।
ರಘುಪತಿನಿಜಮಂತ್ರಂ ರಾಮರಾಮೇತಿಮಂತ್ರಂ।

ದಶರಥ ಪುತ್ರನ ಮಂತ್ರವೂ, ರಾಕ್ಷಸ ನಾಶಕನೂ, ವಿಪ್ರರಿಂದ ಸ್ತುತಿಸಿಕೊಳ್ಳುವುದೂ, ಪ್ರಪಂಚದಲ್ಲೇ ಖ್ಯಾತಿ ಹೊಂದಿರುವುದೂ, ಮುನಿಶ್ರೇಷ್ಠರಿಂದ ಹೊಗಳಿಸಿಕೊಳ್ಳುವದೂ, ಮುಕ್ತಿ ಮಾರ್ಗಕ್ಕೆ ಏಕೈಕ ಮಂತ್ರವೂ, ರಘುಪತಿಯ ಮಂತ್ರವೂ ಆದ ರಾಮ, ರಾಮ ಎಂಬ ಮಂತ್ರವು ನಮ್ಮನ್ನು ಕಾಪಾಡಲಿ.

ಸಂಸಾರ ಸಾಗರ ಭಯಾಪಹ ವಿಶ್ವಮಂತ್ರಂ।
ಸಾಕ್ಷಾನ್ಮುಮುಕ್ಷು ಜನಸೇವಿತ ಸಿದ್ಧಮಂತ್ರಂ।
ಸಾರಂಗಹಸ್ತ ಮುಖಹಸ್ತ ನಿವಾಸ ಮಂತ್ರಂ।
ಕೈವಲ್ಯಮಂತ್ರಮನಿಶಂ ಭಜರಾಮಮಂತ್ರಂ॥

ಸಂಸಾರ ಸಾಗರದ ಭಯವನ್ನು ನಾಶಪಡಿಸುವ, ಲೋಕಮಂತ್ರವಾದ, ಮುಮುಕ್ಷುಗಳು ಚಿತ್ತಶುದ್ಧಿಗಾಗಿ ಸೇವಿಸುವ ದಿವ್ಯ ಮಂತ್ರವಾದ, ಪರಮೇಶ್ವರನೇ ಮುಂತಾದವರಿಗೆ ಹಸ್ತಗತವಾದ ಮಂತ್ರವೂ ಕೈವಲ್ಯಪ್ರದ ಮಂತ್ರವೂ ಆದ ರಾಮಮಂತ್ರವನ್ನು ಯಾವಾಗಲೂ ಭಜಿಸು.

ಜಯತು ಜಯತು ಮಂತ್ರಂ ಜನ್ಮಸಾಫಲ್ಯಮಂತ್ರಂ।
ಜನನ ಮರಣ ಭೇದಕ್ಲೇಶ ವಿಚ್ಛೇದ ಮಂತ್ರಂ।
ಸಕಲ ನಿಗಮ ಮಂತ್ರಂ ಸರ್ವ ಶಾಸ್ತ್ರೈಕಮಂತ್ರಂ।
ರಘುಪತಿ ನಿಜಮಂತ್ರಂ ರಾಮರಾಮೇತಿ ಮಂತ್ರಂ.॥

ಜನ್ಮ ಸಫಲವಾಗುವಂತೆ ಮಾಡುವ, ಹುಟ್ಟು ಸಾವುಗಳ ವಿಲಗವನ್ನು (ಕ್ಲೇಶವನ್ನು) ತಪ್ಪಿಸುವ, ಸಕಲ ವೇದಗಳ ಸಾರಭೂತವಾದ, ಸರ್ವ ಶಾಸ್ತ್ರಗಳಿಗೂ ಏಕೈಕ ಮಂತ್ರವಾದ, ರಘುಪತಿಯ ರಾಮ, ರಾಮ ಮಂತ್ರಕ್ಕೆ ಜಯ, ಜಯಕಾರವು.

ಸೇವ್ಯಂ ಶ್ರೀರಾಮ ಮಂತ್ರಂ ಶ್ರವಣ ಶುಭಕರಂ ಶ್ರೇಷ್ಠ ಸುಜ್ಞಾನಿ ಮಂತ್ರಂ |
ಸ್ತವ್ಯಂ ಶ್ರೀರಾಮ ಮಂತ್ರಂ ನರಕದುರಿತ ದುರ್ವಾರ ನಿರ್ಘಾತ ಮಂತ್ರಂ |
ಭವ್ಯಂ ಶ್ರೀರಾಮ ಮಂತ್ರಂ ಭಜತು ಸಂಸಾರ ನಿಸ್ತಾರ ಮಂತ್ರಂ
ದಿವ್ಯಂ ಶ್ರೀರಾಮ ಮಂತ್ರಂ ದಿವಿಭುವಿವಿಲಸನ್ಮೋಕ್ಷರಕ್ಷೈಕ ಮಂತ್ರಂ ||

ಶ್ರೀರಾಮ ಮಂತ್ರವು ಜಪಿಸುವುದಕ್ಕೆ ಯೋಗ್ಯವಾದುದು. ಕೇಳುವುದಕ್ಕೆ ಮಂಗಳಕರವಾದುದು. ಜ್ಞಾನಿಗಳ ಧ್ಯಾನಕ್ಕೆ ಶ್ರೇಷ್ಠವಾದುದು. ಸ್ತುತಿಸಲು ಈ ಮಂತ್ರವು ಪವಿತ್ರವಾದುದು. ನರಕಭಾಜನೆಗೆ ಕಾರಣವಾದ ಮತ್ತು ನರಕದಿಂದ ತಪ್ಪಿಸಿಕೊಳ್ಳಲು ಅಸಾಧ್ಯವಾದ ಸಮಸ್ತ ಪಾಪಗಳನ್ನೂ ನಾಶಮಾಡಬಲ್ಲ ಶಕ್ತಿಯುಳ್ಳದ್ದು. ಧ್ಯಾನ ಯೋಗ್ಯವೂ ಶ್ರೇಷ್ಠವೂ ಸಂಸಾರ ಕ್ಲೇಶನಾಶಕವೂ ಆದುದು. ಸ್ವರ್ಗ, ಮರ್ತ್ಯಲೋಕಗಳೆಲ್ಲಕ್ಕೂ ಮೋಕ್ಷದಾಯಕ ಮಂತ್ರವೆಂದರೆ ಶ್ರೀರಾಮ ಮಂತ್ರ ಒಂದೇ.

ಶ್ರೀ ರಾಮೇತ್ಯೇಕದಾವಕ್ತುಂ |
ಮನೋಯಸ್ಯ ಪ್ರವರ್ತತೇ |
ವೈಕುಂಠವಾಸಿನಸ್ತಸ್ಯ |
ಕುಲಮೇಕೋತ್ತರಂ ಶತಂ ||

ಶ್ರೀರಾಮ ಎಂದು ಒಂದು ಸಾರಿಯಾದರೂ ಯಾರು ಧ್ಯಾನಿಸುವರೋ ಮತ್ತು ಯಾರ ಮನಸ್ಸು ರಾಮನಲ್ಲಿ ಪ್ರವರ್ತಿಸುತ್ತಿರುವುದೋ, ಅಂತಹವರ ಕುಲಜರಾದ ನೂರೊಂದು ವಂಶೀಕರು, ವೈಕುಂಠವನ್ನು ಸೇರಿ ಸುಖಾನಾಭವವನ್ನು ಪಡೆಯುವರು.

ರಾಶಿಬ್ದೋಚ್ಚಾರ ಮಾತ್ರೇಣ ಮುಖಾನ್ನಿರ್ಯಾಂತಿ ಪಾತಕಾಃ |
ಪುನಃ ಪ್ರವೇಶ ಭೀತ್ಯಾಚ ಮಕಾರಸ್ತು ಕವಾಟವತ್ ||

"ರಾ" ಎಂಬ ಶಬ್ದವನ್ನು ಉಚ್ಚರಿಸಿದ ಮಾತ್ರದಲ್ಲಿ ನಾವು ಮಾಡಿದ ಪಾಪಗಳೆಲ್ಲಾ ಮುಖದಿಂದ ಹೊರ ಬೀಳುತ್ತವೆ. ಪುನಃ ಆ ಪಾಪಗಳು ನಮ್ಮೊಳಗೆ ಬಾರದಂತೆ ನಾವು ಉಚ್ಚರಿಸುವ "ಮ" ಎಂಬ ಶಬ್ದವು ಮನೆಯ ಬಾಗಿಲನ್ನು ಮುಚ್ಚಿದೋಪಾದಿಯಲ್ಲಿ ನಮ್ಮನ್ನು ಆ ಪಾಪಗಳಿಂದ ತಡೆದು ದೂರಮಾಡುತ್ತದೆ.

ಕಿಂಮಂತ್ರೈರ್ಬಹುಭಿಶ್ಚದುಷ್ಕರ ಫಲೈರಾಯಾಸದೈಸ್ತದ್ವಿದಾಂ |
ಕಿಂಚಿಲ್ಲೋಪವಿಧಾನಮಾತ್ರ ವಿಫಲೈ ಸ್ಸಂಸಾರದುಃಖಾವಹೈಃ |
ಏಕಸ್ಸನ್ನಪಿ ಸರ್ವಮಂತ್ರಫಲದೋ ದೋಷೋಜ್ಝಿತಸ್ಸರ್ವದಾ |
" ಶ್ರೀರಾಮಶ್ಶರಣಂಮಮೇ"ತಿ ಪರಮೋ ಮಂತ್ರೋಯಮಷ್ಟಾಕ್ಷರಃ ||

ಫಲ ಸಾಧನೆಗೆ ಬಹು ದುಷ್ಕರವೂ, ತ್ರಾಸದಾಯಕವೂ, ಮತ್ತು ತಿಳಿದು ಸಾಧಿಸುವುದರಲ್ಲಿ ಸ್ವಲ್ಪ ನ್ಯೂನತೆ ಉಂಟಾದರೂ ವಿಫಲವಾಗಿ ಸಂಸಾರ ದುಃಖವನ್ನುಂಟುಮಾಡುವವೂ ಆದ ಮಂತ್ರಗಳನ್ನು ಬಿಟ್ಟರೆ, ಯಾವ ಒಂದು ಮಂತ್ರವು ಸಮಸ್ತ ಮಂತ್ರಗಳ ಫಲಗಳನ್ನು ಕೊಡುವುದಾಗಿ, ಸಾಧನೆಯ ಕಾಲದ ಕಿಂಚಿತ್ ದೋಷಗಳಿಗಾಗಿ ವಿಫಲವಾಗದೆ ಇರುವುದೋ ಅಂತಹ ಮಂತ್ರವು "ಶ್ರೀರಾಮಶ್ಶರಣಂಮಮ" ಎಂಬ ಶ್ರೀರಾಮ ಅಷ್ಟಾಕ್ಷರಿ ಮಂತ್ರವು.

ರಾಮರತ್ನ ಸ್ತೋತ್ರ

ಸಕಲ ಭುವನರತ್ನಂ ಸರ್ವಶಾಸ್ತ್ರಾರ್ಥರತ್ನಂ।
ಸಮರ ವಿಜಯರತ್ನಂ ಸಚ್ಚಿದಾನಂದರತ್ನಂ।
ದಶಮುಖಹರರತ್ನಂ ದಾನವಾರಾತಿರತ್ನಂ।
ರಘುಕುಲನೃಪರತ್ನಂ ಪಾತುಮಾಂ ರಾಮರತ್ನಂ.॥

ಸಕಲ ಪ್ರಪಂಚಕ್ಕೂ ರತ್ನಪ್ರಾಯನಾದ, ಸರ್ವ ಶಾಸ್ತ್ರಗಳ ಅರ್ಥಗಳಿಗೂ ರತ್ನಮಣಿಯಂತಿರುವ, ಯುದ್ಧದಲ್ಲಿ ವಿಜಯಗಳಿಸುವುದರಲ್ಲಿ ರತ್ನ ಅಂದರೆ ಶ್ರೇಷ್ಠವೆನಿಸಿರುವ, ಸತ್, ಚಿತ್, ಆನಂದ, ಸ್ವರೂಪನಾದ, ರಾವಣನನ್ನು ಸಂಹರಿಸಿದ, ರಾಕ್ಷಸ ಶತ್ರುವಾದ, ರಘು ಕುಲದ ದೊರೆಗಳಲ್ಲಿ ರತ್ನ ಪ್ರಾಯನಾದ ಶ್ರೀರಾಮಚಂದ್ರನೆಂಬ ರತ್ನವು ನನ್ನನ್ನು ಕಾಪಾಡಲಿ.

ಸಕಲ ಭುವನರತ್ನಂ ಸಚ್ಚಿದಾನಂದರತ್ನಂ।
ಸಕಲ ಹೃದಯರತ್ನಂ ಸೂರ್ಯಬಿಂಬಾಂತರರತ್ನಂ।
ವಿಮಲ ಸುಕೃತರತ್ನಂ ವೇದವೇದಾಂತರರತ್ನಂ।
ಪುರಹರ ಜಪರತ್ನಂ ಪಾತುಮಾಂ ರಾಮರತ್ನಂ॥

ಸಮಸ್ತ ಪ್ರಪಂಚಕ್ಕೂ ರತ್ನಪ್ರಾಯನೂ, ಸಚ್ಚಿದಾನಂದಮೂರ್ತಿಯೂ, ಸಕಲರ ಹೃದಯದಲ್ಲೂ ಜೀವಾತ್ಮನಾಗಿ ಭಾಸವಾಗುವವನೂ, ಸೂರ್ಯಮಂಡಲ ಮಧ್ಯವರ್ತಿಯೂ, ಶ್ರೇಷ್ಠಕರ್ಮಗಳಲ್ಲಿ ರತ್ನನೂ, ವೇದ ವೇದಾಂತಗಳಿಗೆ ರತ್ನದಂತಿರುವವನೂ, ಪರಶಿವನ ಜಪಕ್ಕೆ ಆಧಾರನೂ ಆದ ಶ್ರೀರಾಮನೆಂಬ ರತ್ನವು ನಮ್ಮನ್ನು ಕಾಪಾಡಲಿ.

ಇಕ್ಷ್ವಾಕು ವಂಶಾರ್ಣವ ಜಾತರತ್ನಂ।
ಸೀತಾಂಗನಾ ಯೌವ್ವನ ಭಾಗ್ಯರತ್ನಂ।
ವೈಕುಂಠರತ್ನಂ ಮಮ ಭಾಗ್ಯರತ್ನಂ।
ಶ್ರೀರಾಮರತ್ನಂ ಶಿರಸಾ ನಮಾಮಿ॥

ಇಕ್ಷ್ವಾಕು ವಂಶಾಂಬುಧಿಯಲ್ಲಿ ಹುಟ್ಟಿದ ರತ್ನವೂ, ಸೀತಾದೇವಿಯ ಯೌವ್ವನವೆಂಬ ಭಾಗ್ಯಕ್ಕೆ ರತ್ನವೂ, ವೈಕುಂಠದ ರತ್ನವೂ, ನನ್ನ ಭಾಗ್ಯರತ್ನವೂ ಆದ ಶ್ರೀರಾಮ ರತ್ನವನ್ನು ನಾನು ವಂದಿಸುತ್ತೇನೆ.

ನಿಗಮ ಶಿಖರರತ್ನಂ ನಿರ್ಮಲಾನಂದರತ್ನಂ।
ನಿರುಪಮ ಗುಣರತ್ನಂ ನಾದನಾದಾಂತರರತ್ನಂ।
ದಶರಥ ಕುಲರತ್ನಂ ದ್ವಾದಶಾಂತಸ್ಥರತ್ನಂ।
ಪಶುಪತಿ ಜಪರತ್ನಂ ಪಾತುಮಾಂ ರಾಮರತ್ನಂ॥

ವೇದಗಳಿಗೆ ಶಿಖರಪ್ರಾಯವಾದ ರತ್ನವೂ, ನಿರ್ಮಲವಾದ ಬ್ರಹ್ಮಾನಂದ ದಾಯಕರತ್ನವೂ, ಎಣೆಯಿಲ್ಲದ ಸದ್ಗುಣಗಳ ಖನಿಯಾದ (ಗಣಿ) ರತ್ನವೂ, ಶರೀರದಲ್ಲಿ ಮೂಲಾಧಾರ ಚಕ್ರದಿಂದ ಸಹಸ್ರಾರ ಚಕ್ರ ಪರ್ಯಂತ ವ್ಯಾಪಿಸಿರುವ ಸುಷುಮ್ನಾನಾಡಿಯ ಒಳಗಡೆ ನಾದ ನಾದಾಂತವಾಗಿ ಗೋಚರಿಸುವ ರತ್ನವೂ, ಹನ್ನೆರಡು ದಳಗಳುಳ್ಳ ಅನಾಹತ ಚಕ್ರದಲ್ಲಿ ನೆಲೆಸಿರುವ, ದಶರಥ ಕುಲರತ್ನವೂ, ಈಶ್ವರನಿಗೆ ಜಪಿಸಲು ಯೋಗ್ಯವಾದ ರತ್ನವೂ ಆದ ರಾಮನೆಂಬ ರತ್ನವು ನಮ್ಮನ್ನು ಕಾಪಾಡಲಿ.

ಶತಮುಖನುತರತ್ನಂ ಷೋಡಶಾಂತಸ್ಥರತ್ನಂ |
ಮುನಿಜನ ಜಪರತ್ನಂ ಮುಖ್ಯ ವೈಕುಂಠರತ್ನಂ |
ನಿರುಪಮ ಗುಣರತ್ನಂ ನೀರಜಾಂತಸ್ಥರತ್ನಂ |
ಪರಮ ಪದವಿರತ್ನಂ ಪಾತುಮಾಂ ರಾಮರತ್ನಂ ||

ಇಂದ್ರನಿಂದ ಸ್ತುತಿಸಿಕೊಳ್ಳುತ್ತಾ ಶರೀರದಲ್ಲಿ ಹದಿನಾರು ದಳಗಳುಳ್ಳ ವಿಶುದ್ಧಿ ಚಕ್ರದಲ್ಲಿ ನೆಲೆಸಿರುವ, ಮುನಿಗಳ ಜಪಕ್ಕೆ ಶ್ರೇಷ್ಠರತ್ನವಾದ, ವೈಕುಂಠಕ್ಕೆ ನಾಯಕ ರತ್ನ ಪ್ರಾಯವಾದ, ಎಣೆಯಿಲ್ಲದ ಗುಣಗಳಿಂದ ಕೂಡಿದ, ಹೃದಯ ಕಮಲದಲ್ಲಿ ಪ್ರಕಾಶಿಸುವ ಮೋಕ್ಷರತ್ನವಾದ ರಾಮರತ್ನವು ನನ್ನನ್ನು ಕಾಪಾಡಲಿ.

ಸಕಲ ಸುಕೃತರತ್ನಂ ಸತ್ಯವಾಕ್ಯಾರ್ಥರತ್ನಂ |
ಶಮದಮ ಗುಣರತ್ನಂ ಶಾಶ್ವತಾನಂದರತ್ನಂ |
ಪ್ರಣವ ನಿಲಯರತ್ನಂ ಪ್ರಸ್ಫುಟ ಜ್ಯೋತಿರತ್ನಂ |
ಪರಮ ಪದವಿರತ್ನಂ ಪಾತುಮಾಂ ರಾಮರತ್ನಂ ||

ಸಕಲ ಸತ್ಕರ್ಮಗಳಿಗೆ ರತ್ನವಾದ, ಶ್ರೇಷ್ಠವಾದ ವೇದಾರ್ಥಗಳಿಗೆ ಭೂಷಣವಾದ, ಶಮದಮಗಳೆಂಬ ಗುಣಗಳಿಗೆ ರತ್ನವಾದ, ಶಾಶ್ವತ ಆನಂದದಾಯಕವಾದ, ಓಂಕಾರದಲ್ಲಿ ನೆಲೆಸಿರುವ, ಜ್ಯೋತಿ ಸ್ವರೂಪವಾಗಿ ಪ್ರಜ್ವಲಿಸುವ, ವೈಕುಂಠ ಪದವಿಗೆ ಭೂಷಣವಾದ ರಾಮರತ್ನವು ನಮ್ಮನ್ನು ಕಾಪಾಡಲಿ.

ನಿಗಮಶಿಖರರತ್ನಂ ನಿತ್ಯಮಾನಂದರತ್ನಂ |
ಜನನುತನೃಪರತ್ನಂ ಜಾನಕೀಮೋಹರತ್ನಂ |
ಭುವನವಲಯರತ್ನಂ ಭೂಭುಜಾಮೇಕರತ್ನಂ |
ರಘುಕುಲವರರತ್ನಂ ಪಾತುಮಾಂ ರಾಮರತ್ನಂ ||

ವೇದಾಂತಕ್ಕೆ ರತ್ನಪ್ರಾಯವೂ, ನಿತ್ಯವಾದ ಬ್ರಹ್ಮಾನಂದನೆಂಬ ರತ್ನವೂ, ಪ್ರಜೆಗಳಿಂದ ಹೊಗಳಿಸಿಕೊಳ್ಳುವ ರಾಜರತ್ನವೂ, ಸೀತಾದೇವಿಗೆ ಮೋಹಕವಾದ ರತ್ನವೂ, ಪ್ರಪಂಚಕ್ಕೆ ರತ್ನಪ್ರಾಯವೂ, ರಾಜರುಗಳಿಗೆ ಏಕೈಕ ರತ್ನವೂ, ರಘುವಂಶಕ್ಕೆ ಕುಲರತ್ನವೂ ಆದ ಶ್ರೀರಾಮನೆಂಬ ರತ್ನವು ನಮ್ಮನ್ನು ಕಾಪಾಡಲಿ.

ವಿಶಾಲನೇತ್ರಂ ಪರಿಪೂರ್ಣಗಾತ್ರಂ | ಸೀತಾಕಳತ್ರಂ ಸುರವೈರಿಜೈತ್ರಂ |
ಕಾರುಣ್ಯಪಾತ್ರಂ ಜಗತಃಪವಿತ್ರಂ | ಶ್ರೀರಾಮರತ್ನಂ ಪ್ರಣತೋಽಸ್ಮಿನಿತ್ಯಂ ||

ವಿಶಾಲಾಕ್ಷನೂ, ಸುಂದರ ಶರೀರನೂ, ಸೀತಾಪತಿಯೂ, ರಾವಣ ಮರ್ದನನೂ, ಕರುಣಾನಿಧಿಯೂ, ಜಗತ್ತಿಗೇ ಪವಿತ್ರನೂ, ಆಶ್ರಿತವತ್ಸಲನೂ ಆದ ಶ್ರೀರಾಮನೆಂಬ ರತ್ನವನ್ನು ಸದಾ ನಮಸ್ಕರಿಸುತ್ತೇನೆ.

ಸೀತಾ ಸ್ತೋತ್ರ

ವಿದ್ಯುದ್ವರ್ಣೋಪಮಾಂಗೀಂ ವಿಕಚದಳಮುಖಾಂ ವಿದ್ರುಮಾಭಾಧರೋಷ್ಠೀಂ |
ವೇದಂಡಾದ್ಧೃತ್ಯ ಕುಂಭ ಪ್ರತಿಕುಚಯುಗಳಾಂ ವೇದಿಮಧ್ಯಾವತಂಸಾಂ |
ಶ್ಯಾಮಾಂ ಸಂಫುಲ್ಲ ಪದ್ಮಚ್ಛದನಿಭನಯನಾಂ ಚಾರುಹಾಸಾಂ ಸುನಾಸಾಂ |
ಸೀತಾಂ ಶ್ರೀರಾಮಪತ್ನೀಂ ಶ್ರಿತಜನವರದಾಂ ಚಿಂತಯೇನಂತಮೂರ್ತಿಂ ||

ವಿದ್ಯುತ್ಕಾಂತಿಯಿಂದ ಕೂಡಿದ ಶರೀರವುಳ್ಳ, ಪ್ರಫುಲ್ಲವದನೆ (ಅರಳಿದ ಮುಖ) ಯಾದ, ಹವಳದಂತೆ ಕೆಂಪಾದ ಕೆಳತುಟಿಯುಳ್ಳ, ಆನೆಯ ಕುಂಭಸ್ಥಳದಂತೆ ಎದ್ದು ಕಾಣುತ್ತಿರುವ ಕುಚದ್ವಯಗಳಿಂದ ಕೂಡಿದ, ವೇದಿಕೆಯ ಮಧ್ಯದಲ್ಲಿ ಕುಳಿತಿರುವ, ಮಧ್ಯ ಯೌವ್ವನದ, ಅರಳಿದ ಕಮಲದಂತಿರುವ ಕಣ್ಣುಗಳುಳ್ಳ, ಮಂದಸ್ಮಿತಳಾದ, ಸಂಪಿಗೆ ಎಸಳಿನಂತಿರುವ ನಾಸಿಕವುಳ್ಳ, ಭಕ್ತಜನೋದ್ಧಾರಕಳಾದ, ಅನಂತ ಕಲ್ಯಾಣಗುಣ ಪರಿಪೂರ್ಣಳಾದ, ಶ್ರೀರಾಮ ಪತ್ನಿಯಾದ ಸೀತಾದೇವಿಯನ್ನು ಭಜಿಸುತ್ತೇನೆ.

ಮಾಣಿಕ್ಯಮಂಜೀರ ಪದಾರವಿಂದಾಂ |
ಆನಂದ ಸಂಫುಲ್ಲ ಮುಖಾರವಿಂದಾಂ|
ಭಕ್ತಪ್ರದಾತೃತ್ವ ಕರಾರವಿಂದಾಂ|
ದೇವೀಂ ಭಜೇ ರಾಘವವಲ್ಲಭಾಂತಾಂ||

ಮುತ್ತಿನಕಾಲು ಸರಪಣಿಯಿಂದ ಕೂಡಿದ ಪಾದಕಮಲಗಳುಳ್ಳ, ಆನಂದದಿಂದ ಕೂಡಿದ ಮುಖ ಕಮಲವುಳ್ಳ, ಭಕ್ತರಿಗೆ ವರಪ್ರದಾನ ಮಾಡುವ ಕರಕಮಲವುಳ್ಳ ಶ್ರೀರಾಮ ಪತ್ನಿಯಾದ ಸೀತಾದೇವಿಯನ್ನು ಭಜಿಸುತ್ತೇನೆ.

ರಾಮನಾಮ ಮಹಿಮ್ನ ಸ್ತೋತ್ರ

ವ್ಯಾಮೋಹ ಪ್ರಶಮೌಷಧಂ ಮುನಿಮನೋವೃತ್ತಿ ಪ್ರವೃತ್ತ್ಯೌಷಧಂ |
ದೈತ್ಯೋನ್ಮೂಲಕರೌಷಧಂ ಭವಭಯ ಪ್ರಧ್ವಂಸ ಕೈಕೌಷಧಂ |
ಭಕ್ತಾನಂದಕರೌಷಧಂ ತ್ರಿಭುವನೇ ಸಂಜೀವನೈಕೌಷಧಂ |
ಶ್ರೇಯಃಪ್ರಾಪ್ತಿಕರೌಷಧಂ ಪಿಬಮನಃ ಶ್ರೀರಾಮನಾಮೌಷಧಂ ||

ಆಶೆ, ವ್ಯಾಮೋಹಗಳನ್ನು ನಾಶಗೊಳಿಸಲು ಶ್ರೀರಾಮನಾಮವೇ ಒಳ್ಳೆಯ ಔಷಧಿಯು. ಮುನಿಗಳ ಮನಸ್ಸಿನ ಚಾಂಚಲ್ಯವನ್ನು ನಾಶಮಾಡಿ ಅವರಿಗೆ ಏಕಾಗ್ರತೆಯನ್ನು ಕೊಡಲು ಇದು ಸಿದ್ಧೌಷಧ. ಈ ಔಷಧವು ರಾಕ್ಷಸರನ್ನು ನಾಶಮಾಡುತ್ತದೆ. ಸಂಸಾರ ಭಯವನ್ನು ಭಗ್ನಗೊಳಿಸುತ್ತದೆ. ಭಕ್ತರಿಗೆ ಆನಂದವನ್ನುಂಟುಮಾಡುತ್ತದೆ. ಮೂರು ಲೋಕಕ್ಕೂ ಇದು ಸಂಜೀವಿನಿಯು. ಶ್ರೇಯಸ್ಕರವಾದದ್ದು. ಆದಪ್ರಯುಕ್ತ ಎಲೈ ಮನಸ್ಸೇ ಶ್ರೀರಾಮ ನಾಮವೆಂಬ ದಿವ್ಯ ಔಷಧಿಯನ್ನು ಪಾನಮಾಡು.

ಯನ್ನಾಮೈವ ಸಹಸ್ರನಾಮ ಸದೃಶಂ ಯನ್ನಾಮ ವೇದೈಸ್ಸಮಂ।
ಯನ್ನಾಮಾಂಕಿತ ವಾಕ್ಯಮಾಸುರಬಲ ಸ್ತ್ರೀಗರ್ಭವಿಚ್ಛೇದಕಂ।
ಯನ್ನಾಮ ಶ್ವಪಚಾರ್ಯ ಭೇದರಹಿತಂ ಮುಕ್ತೇಸ್ಸದಾದಾಯಕಂ।
ತನ್ನಾಮ ಶ್ರುತಕೀರ್ತಿಮಂಗಳಕರಂ ಚಿತ್ತೇಸ್ಮರಾನ್ಯನ್ವಹಂ॥

ಯಾರ ಒಂದು ನಾಮವು ಸಹಸ್ರ ಇತರ ದೇವತಾ ನಾಮಗಳಿಗೆ ಸದೃಶವೋ, ಯಾವ ನಾಮವು ವೇದಕ್ಕೆ ಸಮಾನವೋ, ಯಾವ ನಾಮದಿಂದ ಕೂಡಿದ ವಾಕ್ಯವು, ರಾಕ್ಷಸ ಬಲವೆಂಬ ಸ್ತ್ರೀ ಗರ್ಭವನ್ನು ನಿರ್ಭೇದ ಮಾಡತಕ್ಕದ್ದೋ, ಯಾವ ನಾಮವನ್ನು ಉತ್ತಮ, ನೀಚ ಭೇದವಿಲ್ಲದೆ ಎಲ್ಲರೂ ಜಪಿಸಲು ಸಾಧ್ಯವೋ' ಯಾವುದು ಸದಾಮುಕ್ತಿ ಪ್ರದವೋ, ಅಂತಹ ಪ್ರಸಿದ್ಧ ಮಂಗಳ ರಾಮನಾಮವು ಸ್ಮರಿಸಲ್ಪಡಲಿ.

ಕಲ್ಯಾಣಾನಾಂ ನಿದಾನಂ ಕಲಿಮಲದಹನಂ ಪಾವನಂ ಪಾವನಾನಾಂ।
ಪಾಥೇಯಂ ಮೋಕ್ಷಮಾರ್ಗೇ ಸುರವರವಿನುತಂ ಶುದ್ಧಸತ್ವಂ ಸುವೀರ್ಯಂ।
ವಿಶ್ವಸ್ಯಸ್ಥಾನಮೇಕಂ ಕವಿವರವಚನಂ ಜೀವನಂ ಜೀವಿತಾನಾಂ।
ಬೀಜಂ ಧರ್ಮದ್ರುಮಸ್ಯ ಪ್ರಭವತಿ ಭವತಾಂ ಪೂರ್ತಯೇ ರಾಮನಾಮ॥

ರಾಮನಾಮವು ಸಮಸ್ತ ಕಲ್ಯಾಣಗಳಿಗೂ ಆದಿಕಾರಣವಾದುದು. ಕಲಿಯುಗದಲ್ಲಿ ಕಲಿಯ ಪ್ರೇರಣೆಯಿಂದ ಉಂಟಾಗುವ ಸಮಸ್ತ ಪಾಪಗಳನ್ನೂ ನಾಶಮಾಡತಕ್ಕುದು. ಪವಿತ್ರಕ್ಕೂ ಪವಿತ್ರವು. ಸತ್ವ, ವೀರ್ಯವೆನಿಸಿ ಮೋಕ್ಷಕ್ಕೆ ಪ್ರವೇಶಿಸಲು ಕಟ್ಟಿಕೊಟ್ಟ ಬುತ್ತಿಯಂತಿರುವುದು. ಯಾವಾಗಲೂ ಧ್ಯಾನಿಸಲು ಯೋಗ್ಯವಾದುದು. ಪ್ರಪಂಚಕ್ಕೆ ಒಂದು ಮುಖ್ಯ ಆಧಾರದಂತಿರುವುದು. ಕವಿ ಶ್ರೇಷ್ಠನಾದ ವಾಲ್ಮೀಕಿ ಮಹರ್ಷಿಯು ಇದನ್ನು ಹೊಗಳಿರುವನು. ಸಮಸ್ತ ಜೀವಿಗಳಿಗೂ ಇದು ಪ್ರಾಣವಾಗಿರುವುದು. ಧರ್ಮವೆಂಬ ವೃಕ್ಷಕ್ಕೆ ಬೀಜದಂತಿರುವುದು. ಇಂತಹ ರಾಮನಾಮವು ಸಂಪೂರ್ಣವಾಗಿ ಪ್ರಭಾವಶಾಲಿಯಾಗಿ ಮೆರೆಯಲಿ.

ಕೃತ್ಯಾಕೃತ್ಯ ವಿವೇಕಹೀನಮನಸಾಂ ಹತ್ವಾತಮೋಜೀವನಂ।
ಹ್ಯತ್ಯಂತಂ ಬಹುತಾರಕಂ ತನುಭೃತಾಂ ಮುಕ್ತಿಪ್ರದಂ ಸರ್ವದಾ।
ಸತ್ಯಾನಂದಮಯಂ ಸಮಸ್ತ ನಿಗಮ ಸ್ತುತ್ಯಾಸ್ಪದಂ ಸಂಪದಾಂ।
ಸ್ಥಾನಂ ಶ್ರೀರಘುರಾಮನಾಮ ವಿಮಲಂ ನಿತ್ಯಂ ಸ್ಮರ್ತ ಮುಚ್ಯತೇ॥

ಇದು ಮಾಡತಕ್ಕದು, ಇದು ಮಾಡಬಾರದು ಎಂಬ ವಿವೇಚನೆಯಿಲ್ಲದೆ, ಅಂಧಕಾರಮಯವಾದ, ಜೀವನವನ್ನು ನಡೆಸುತ್ತಾ, ಅತಿಯಾದ ಬಾಧೆಗೆ ಗುರಿಯಾಗಿ, ದುಃಖಪಡುತ್ತಿರುವ ಪ್ರಾಣಿಗಳಿಗೆ, ಮುಕ್ತಿಪ್ರದವಾದ ತಾರಕ ಮಂತ್ರವಾಗಿರುವ, ಬಹು ಪರಿಶುದ್ಧವೂ ಸತ್ಯ ಆನಂದಗಳ ಘನೀಭೂತವೂ ಆದ, ಸಮಸ್ತ ವೇದಗಳಿಂದಲೂ ಸ್ತುತಿಸಲ್ಪಟ್ಟ, ಸಕಲ ಸಂಪತ್ತಿಗೂ ಸ್ಥಾನವಾದ, ರಾಮನಾಮವನ್ನು ನಿತ್ಯವೂ ಸ್ಮರಿಸಿದರೆ ಅದು ನಮ್ಮನ್ನು ಸಂಸಾರ ಬಂಧನದಿಂದ ಬಿಡುಗಡೆ ಮಾಡುತ್ತದೆ.

ರಾಮಚಂದ್ರ ಚರಿತಾಮೃತಪಾನಂ।
ಸೋಮಪಾನ ಶತಕೋಟಿ ಸಮಾನಂ।
ಸೋಮಪಾನ ಶತಕೋಟಿಭಿರೇವ।
ಜನ್ಮನೇತಿ ರಘುನಾಯಕನಾಮ್ನಾ॥

ರಾಮಚಂದ್ರನ ಚರಿತ್ರಾತ್ಮಕ ಪಾರಾಯಣ ಎಂಬ ಅಮೃತಪಾನವು, ಸೋಮಯಾಗಮಾಡಿ, ತದಂಗವಾಗಿ ಸೋಮಪಾನಮಾಡಿ ಸಂಪಾದಿಸುವ ಕೋಟಿಯಾಗ ಫಲಕ್ಕೆ ಸಮಾನವು. ಶತಕೋಟಿ ಸೋಮಯಾಗ ಮಾಡಿದರೂ ಕೂಡ ಜನ್ಮ ತಪ್ಪಿದ್ದಲ್ಲ. ರಾಮನಾಮ ಜಪವಾದರೆ ಹಾಗಲ್ಲ.

ಅಲಂ ಶಾಸ್ತ್ರಾಭ್ಯಾಸೈರಲಮಸಕೃದಾಮ್ನಾಯ ಪಠನೈ |
ರಲಂತೀರ್ಥಸ್ನಾನೈರಲಂ ಮಲಿನಯಾಗ ವ್ರತ ಜಪೈಃ |
ಅಲಂ ಯೋಗಾಭ್ಯಾಸೈರಹಮಪಿ ಮಹಾಪಾತಕಧಿಯಾ |
ಯದ್ಯಸ್ಮಾಕಂ ರಾಮಸ್ಮರಣ ಮಹಿಮಾಸಾ ವಿಜಯತೇ ||

ನಮಗೆ ಇನ್ನು ಶಾಸ್ತ್ರಾಭ್ಯಾಸ ಮಾಡುವುದು ಸಾಕು. ಅವಿಚ್ಛಿನ್ನವಾಗಿ ವೇದ ಪಾರಾಯಣ ಮಾಡುವುದೂ ಸಾಕು. ತೀರ್ಥಯಾತ್ರಾದಿಗಳನ್ನು ಮಾಡುವುದು ಬೇಡ. ಕೇವಲ ಐಹಿಕ ಭೋಗಪ್ರದಗಳಾದ ಯಾಗ ವ್ರತಾದಿಗಳನ್ನು ಮಾಡುವುದು, ಯೋಗಾಭ್ಯಾಸಾದಿಗಳನ್ನು ಅನುಷ್ಠಾನ ಮಾಡುವುದು ಕೂಡಾ ಇನ್ನು ಸಾಕು. ನಾನು ಎಷ್ಟೇ ಪಾಪಗಳಿಂದ ಕೂಡಿದ್ದರೂ, ರಾಮನಾಮ ಸ್ಮರಣಮಾತ್ರದಿಂದ ವಿಜಯ ಗಳಿಸುತ್ತೇನೆ. (ಅಂದರೆ ಇಲ್ಲಿ ರಾಮನಾಮ ಸ್ಮರಣೆಗೆ ಮಹತ್ವವನ್ನು ತೋರಿಸಲು ಈ ರೀತಿ ಹೊಗಳಿರುತ್ತೆ)

ಯಸ್ಯ ಕಿಂಚಿದಪಿ ನೋ ಹರಣೀಯಂ |
ಕರ್ಮ ಕಿಂಚಿದಪಿ ನೋ ಚರಣೀಯಂ |
ರಾಮನಾಮ ಹೃದಿ ಸಂಸ್ಮರಣೀಯಂ |
ಲೀಲಯಾ ಭವ ಜಲಂ ತರಣೀಯಂ ||

ಶ್ರೀ ರಾಮಚಂದ್ರಮೂರ್ತಿಯ ನಾಮವಾದ "ರಾಮ" ಎಂಬುದು ಎರಡೇ ಅಕ್ಷರವಾದರೂ ಬಹಳ ಮಹತ್ವ ಪೂರಿತವಾದುದು. ಈ ನಾಮವನ್ನು ಸ್ವಲ್ಪ ಜಪಿಸಿದರೂ ಅತಿರಮ್ಯವು. ಈ ನಾಮವು ಸದಾ ಸ್ಮರಿಸಲು ಯೋಗ್ಯವಾದುದು. ಇದು ಸಂಸಾರ ಸಾಗರವನ್ನು ಲೀಲಾ ಮಾತ್ರದಲ್ಲಿ ದಾಟಿಸುವಂಥಾದ್ದು.

ಶ್ರೀರಾಮ ನಾಮಾಮೃತ ಮಂತ್ರ ಬೀಜಂ |
ಸಂಜೀವನಂ ಚೇನ್ಮನಸಿಃ ಪ್ರವಿಷ್ಟಂ |
ಹಾಲಾಹಲಂವಾ ಪ್ರಳಯಾನಲಂವಾ |
ಮೃತ್ಯೋರ್ಮುಖಂವಾ ವಿತಥೀ ಕರೋತಿ ||

"ಶ್ರೀರಾಮ" ಎಂಬ ಸಂಜೀವಿನೀ ಔಷಧಿಯಂತಿರುವ ಈ ನಾಮಮೃತ ಜೀಜ ಮಂತ್ರವು, ನಮ್ಮ ಮನಸ್ಸಿನ ಧ್ಯಾನಕ್ಕೆ ಸಿಕ್ಕಿ ನಮ್ಮ ಮನಸ್ಸಿನಲ್ಲಿ ಸ್ಥಾಪಿತವಾಯಿತೆಂದರೆ, ನಾವು ವಿಷಪಾನ ಮಾಡಲಿ, ಪ್ರಳಯಾಗ್ನಿಯಲ್ಲಿ ಸಿಕ್ಕಿರಲಿ, ಮೃತ್ಯುವಿನ ದಾಡೆಯಲ್ಲಿ ಬೀಳಲಿ ಆ ದುಃಖಗಳೊಂದೂ ನಮಗೆ ಕಾಣಿಸದಂತೆ ಆಗುತ್ತದೆ.

ರಾಮಾಯಣ ಮಹಿಮ್ನ ಸ್ತೋತ್ರ

ಶೃಂಗಾರಂ ಕ್ಷಿತಿನಂದಿನೀ ವಿಹರಣೇ ವೀರಂ ಧನುರ್ಭಂಜನೇ |
ಕಾರುಣ್ಯಂ ಬಲಿಭೋಜನೇದ್ಭುತರಸಂ ಸಿಂಧೌಗಿರಿಸ್ಥಾಪನೇ |
ಹಾಸ್ಯಂ ಶೂರ್ಪಣಖಾಮುಖೇಭಯಮಘೇ ಭೀಭತ್ಸಮನ್ಯೇಮುಖೇ |
ರೌದ್ರಂ ರಾವಣಮರ್ದನೇ ಮುನಿಜನೇ ಶಾಂತಂವಪುಃಪಾತುನಃ ||

ಶ್ರೀಮದ್ರಾಮಾಯಣದಲ್ಲಿ ನವರಸಗಳನ್ನೂ ಕಾಣಬಹುದು. ಜಾನಕೀವಿರಹದಿಂದ ಶ್ರೀರಾಮನು ತಾನು ಹಿಂದೆ ಜಾನಕಿಯೊಡನೆ ಅನುಭವಿಸಿದ ಶೃಂಗಾರ ರಸಾನುಭವಗಳನ್ನು ಜ್ಞಾಪಿಸಿಕೊಂಡು ವ್ಯಥೆಪಡುವ ಸಂದರ್ಭದ ಶ್ಲೋಕಗಳಲ್ಲಿ ಶೃಂಗಾರರಸವನ್ನೂ, ಜಾನಕೀ ಪಾಣಿಗ್ರಹಣದ ವೇಳೆಯಲ್ಲಿ, ಯಾರಿಗೂ ಮಣಿಯದ ಶಿವಧನುಸ್ಸನ್ನು ಶ್ರೀರಾಮನು ಭಂಜಿಸಿದ ವೇಳೆಯಲ್ಲಿನ ಶ್ಲೋಕಗಳಲ್ಲಿ ವೀರರಸವನ್ನೂ, ಕೊಕ್ಕಿನಿಂದ ಸೀತೆಗೆ ಗಾಯಗೊಳಿಸಿದ ಕಾಕಾಸುರನನ್ನು ತೃಣಪ್ರಯೋಗವಮಾಡಿ, ಶ್ರೀರಾಮನು ಭಂಜಿಸಿದಾಗ, ಅವನು ಆಡಿದ ದೈನ್ಯಪೂರಿತ ಮಾತುಗಳಿಗೆ ಮತ್ತು ಅನನ್ಯಶರಣತೆಗೆ ಮನಸೋತು ಪ್ರಾಣ ಉಳಿಸಿದ ಸಂದರ್ಭದಲ್ಲಿ ಕರುಣಾರಸವನ್ನೂ, ಸಮುದ್ರಕ್ಕೆ ಸೇತುಬಂಧನ ಮಾಡಿದಾಗ ಸಮುದ್ರದ ಮೇಲೆ ಬೆಟ್ಟಗಳನ್ನು ಶ್ರೀರಾಮನಾಮವು ತೇಲಿಸಿತೆಂಬುದನ್ನು ಹೇಳುವ ಶ್ಲೋಕಗಳಲ್ಲಿ ಅದ್ಭುತ ರಸವನ್ನೂ, ರಾವಣನ ತಂಗಿಯಾದ ಶೂರ್ಪಣಖಿಯು ತನ್ನನ್ನು ಮದುವೆಯಾಗೆಂದು ಶ್ರೀರಾಮನನ್ನು ಬಲಾತ್ಕರಿಸಲು ಆತನು ಲಕ್ಷ್ಮಣನನ್ನು ಮದುವೆಯಾಗೆಂದು ಅವಳನ್ನು ಲಕ್ಷ್ಮಣನ ಬಳಿಗೆ ಕಳುಹಿಸಿ ಪರಿಹಾಸ್ಯ ಮಾಡಿದ ಸಂದರ್ಭದ ಶ್ಲೋಕಗಳಲ್ಲಿ ಹಾಸ್ಯರಸವನ್ನೂ, ಶೂರ್ಪಣಖಿಯು ಮೂಗು ಹೋದ ಕರಾಳ ವದನವನ್ನು ವರ್ಣಿಸುವ, ಭಯವನ್ನು ಪ್ರಕಟಿಸುವ ಶ್ಲೋಕಗಳಲ್ಲಿ ಭಯಾನಕ ರಸವನ್ನೂ, ಸಹಜವಾಗಿ ಕತ್ತಿನ ಮೇಲೆ ಮುಖವಿಲ್ಲದೆ ಎದೆಯಲ್ಲಿ ಮುಖವನ್ನು ಹೊಂದಿ "ಅನ್ಯಮುಖ" ನೆಂದು ಹೇಳಿಸಿಕೊಂಡ ಕಬಂಧನೆಂಬ ರಾಕ್ಷಸನ ಕಣ್ಣು ಕಿವಿ, ಕಾಲುಗಳಿಲ್ಲದ, ಎದೆಯಲ್ಲಿ ಮುಖವನ್ನು ಹೊಂದಿದ ವಿಕೃತಾಕಾರವನ್ನು ವರ್ಣಿಸುವ ಶ್ಲೋಕಗಳಲ್ಲಿ ಭೀಭತ್ಸ ರಸವನ್ನೂ, ರಾವಣನ ಸಂಹಾರದಲ್ಲಿ ಶ್ರೀರಾಮನ ರೌದ್ರಾಕಾರವನ್ನು ವರ್ಣಿಸುವ ಸಮಯದಲ್ಲಿ ರೌದ್ರರಸವನ್ನೂ, ದಂಡಕಾರಣ್ಯದ ಮುನಿಗಳಿಗೆ ಶಾಂತಿಯನ್ನು ಉಂಟುಮಾಡಿದ ಶ್ರೀರಾಮನನ್ನು ವರ್ಣಿಸುವ ಶ್ಲೋಕಗಳಲ್ಲಿ ಶಾಂತಿ ರಸವನ್ನೂ ನಾವು ಕಾಣುತ್ತೇವೆ. ಇಂತಹ ನವರಸಗಳಿಂದ ಕೂಡಿದ ರಾಮಾಯಣ ಮೂರ್ತಿಯಾದ ಶ್ರೀರಾಮ ಚಂದ್ರನು ನಮ್ಮನ್ನು ಕಾಪಾಡಲಿ.

ವಾಲ್ಮೀಕೇಸ್ಮೃತಿಮಂದರೇಣ ಮಥಿತಸ್ಸೀತಾರಮಾಸಂಭವಃ |
ಸುಗ್ರೀವಾ ಮರಭೂರುಹೋಂಗದಗಜಸ್ಸೌಮಿತ್ರಿ ಚಂದ್ರೋದಯಃ |
ವಾತೋತ್ಪನ್ನಮಣಿರ್ವಿಭೀಷಣಸುಧಃ ಪೌಲಸ್ತ್ಯ ಹಾಲಾಹಲ |
ಶ್ರೀರಾಮಾಯಣ ದುಗ್ಧವಾರ್ಧಿರಮಲೋ ಭೂಯಾತ್ಸನಶ್ರೇಯಸೇ ||

ಶ್ರೀ ರಾಮಾಯಣವೆಂಬ ಕ್ಷೀರಸಮುದ್ರವು ವಾಲ್ಮೀಕಿ ಮಹರ್ಷಿಯ ಜ್ಞಾಪಕಶಕ್ತಿಯೆಂಬ ಕಡೆಗೋಲಿನಿಂದ ಕಡೆಯಲ್ಪಟ್ಟಿತು. ಆಗ ಅದರಲ್ಲಿ ಸೀತಾದೇವಿ ಎಂಬ ಲಕ್ಷ್ಮಿ ಹುಟ್ಟಿದಳು. ಸುಗ್ರೀವನೆಂಬ ಕಲ್ಪವೃಕ್ಷವೂ, ಅಂಗದನೆಂಬ ಐರಾವತವೂ, ಲಕ್ಷ್ಮಣನೆಂಬ ಚಂದ್ರನೂ ಉದಯಿಸಿದರು. ವಾಯುಪುತ್ರನಾದ ಆಂಜನೇಯನೆಂಬ ಕೌಸ್ತುಭಮಣಿಯು ಹುಟ್ಟಿತು. ಭಕ್ತಾಗ್ರೇಸರನಾದ ವಿಭೀಷಣನೆಂಬ ಅಮೃತವು ಹುಟ್ಟಿದ್ದಲ್ಲದೆ, ರಾವಣನೆಂಬ ವಿಷವೂ ಹುಟ್ಟಿತು. ಆ ರಾಮಾಯಣವೆಂಬ ಕ್ಷೀರಸಮುದ್ರವು ನಮಗೆ ಸುಖ ಶ್ರೇಯಸ್ಸನ್ನು ಕೊಡಲಿ.

[ವಿ. ಸೂ.—ಮೊದಲಿನ ಶ್ಲೋಕದಲ್ಲಿ 'ವಿರಹಣೆ'ಗೆ ಬದಲಾಗಿ 'ವಿಹರಣೆ' ಎಂದೂ, 'ಭಯವಹೇ'ಗೆ ಬದಲಾಗಿ 'ಭಯಮಘೇ' ಎಂದೂ, 'ಅನ್ಯೇಮುಖೇ'ಗೆ ಬದಲಾಗಿ 'ಅನ್ಯಾಮುಖೇ' ಎಂದೂ ಪಾಠಾಂತರವಿದೆ.]

ಇದಂ ಶರೀರಂ ಶತಸಂಧಿ ಜರ್ಝರಂ |
ಪತತ್ಯವಶ್ಯಂ ಪರಿಣಾಮ ಪೇಶಲಂ |
ಕಿಮೌಷಧಂ ಪೃಚ್ಛಸಿ ಮೂಢದುರ್ಮತೇ |
ನಿರಾಮಯಂ ರಾಮರಸಾಯನಂ ಪಿಬ ||

ಈ ಶರೀರವು ನೂರಾರು ನಾಡಿ ಗ್ರಂಥಿಗಳಿಂದ ಕೂಡಿ, ಜೀರ್ಣವಾಗತಕ್ಕದ್ದು ಎಂದಾದರೂ ಖಂಡಿತ ನಾಶವಾಗತಕ್ಕದ್ದು. ಈ ಶರೀರವು ನಶಿಸಿದಾಗ ಪಂಚಭೂತಗಳಲ್ಲಿ ಸೇರಿ ಪರಿಣಾಮ ಹೊಂದುವುದೇ ಹೊರತು, ಅದರಿಂದ ಯಾವ ಪ್ರಯೋಜನವೂ ಲಭ್ಯವಾಗುವುದಿಲ್ಲ. ಮೂಢಬುದ್ಧಿಯುಳ್ಳವನೇ ಇದರಿಂದ ಉದ್ಧಾರವಾಗಲು ಔಷಧಿ ಏನು ಎಂದು ಕೇಳುವಿಯಾದರೆ, ಈ ಶರೀರವನ್ನು ಧರಿಸಲು ಕಾರಣವಾದ ಹುಟ್ಟು ಸಾವುಗಳೆಂಬ ಖಾಯಿಲೆಯನ್ನು ಗುಣಪಡಿಸುವಂತಹ ರಾಮಕಥಾ ಎಂಬ ಅಮೃತ ಸಮಾನವಾದ ರಸಾಯನವನ್ನು ಪಾನಮಾಡು.

ರಾಮ ಕೋದಂಡ ಮಹಿಮ್ನ ಸ್ತೋತ್ರ

ಭೂಕಂಪಂ ಜನಯನ್ನಭೋವಿದಳಯನ್ನಂ ಭೋನಿಧಿಂ ಕ್ಷೋಭಯನ್ |
ದೈತೇಯಾಂಶ್ಚ ವಿಮರ್ದಯನ್ ಗಿರಿವರಾನ್ ಭಿಂದನ್ ದಿಶಃಪೂರಯನ್ |
ವೈದೇಹೀ ಮತಿಮೋದಯನ್ ಸಕಲಗೀರ್ವಾಣಾನ್ ಶಿರಃಕಂಪಯನ್ |
ಕಲ್ಯಾಣೋ ರಘುರಾಮ ಬಾಣವಿಲಸತ್ಕೋದಂಡ ಚಂಡಧ್ವನಿಃ ||

ಕಲ್ಯಾಣ ರಘುರಾಮಚಂದ್ರನ ಅಮೋಘ ಬಾಣಗಳಿಂದ ಶೋಭಿಸುವ ಕೋದಂಡದ ಪ್ರಚಂಡ ಧ್ವನಿಯು, ಭೂಮಿಯನ್ನು ಕಂಪಿಸಿತು, ಆಕಾಶವನ್ನು ಭೇದಿಸಿತು, ಸಾಗರಗಳನ್ನು ಬತ್ತಿಸಿತು. ರಾಕ್ಷಸರನ್ನು ಚೆನ್ನಾಗಿ ಮರ್ದಿಸಿತು. ಕುಲಪರ್ವತಗಳನ್ನು ಛೇದಿಸಿತು. ದಶದಿಕ್ಕುಗಳನ್ನು ತುಂಬಿತು. ಅಶೋಕವನದಲ್ಲಿ ಬಂಧಿತಳಾಗಿದ್ದ ಸೀತಾಮಾತೆಗೆ, "ಇನ್ನೇನು ರಾಕ್ಷಸರು ನಾಶವಾಗುವರು. ರಾವಣನು ಹತನಾಗುವನು. ತನಗೆ ಶ್ರೀರಾಮನ ದರ್ಶನವು ಇನ್ನೇನು ಸಮೀಪಿಸಿತು" ಎಂಬುದು ಸೂಚಿತವಾಗಿ ಸಂತೋಷವಾಯಿತು. ರಾಕ್ಷಸ ವಂಶವು ಇನ್ನು ನಾಶವಾಗುವುದೆಂದು ದೇವತೆಗಳು ಆ ಧ್ವನಿಯ ಸಾಮರ್ಥ್ಯವನ್ನು ಕೊಂಡಾಡಿ ಸಂತೋಷದಿಂದ ತಲೆದೂಗಿದರು.

ಲೋಕಾನ್ ಸಪ್ತವಿನಾದಯನ್ ಹರಿಹಯ ಬ್ರಹ್ಮಾದಿ ಸಮ್ಮೋದಯನ್ |
ಸಪ್ತಾಶ್ವಾಂಬುಧರ ಪ್ರಕಂಪಮುದಯನ್ ಸಪ್ತಾರ್ಣವಾನ್ ಘೂರ್ಣಯನ್ |
ಉನ್ಮೀಲಾನಿ ರಸಾತಲಾನಿ ಜನಯನ್ ಸಪ್ತಾಪಿ ಪೃಥ್ವೀಧರಾನ್ |
ಸ ಶ್ರೀರಾಘವ ಬಾಹುದಂಡ ವಿದಳತ್ಕೋದಂಡ ಚಂಡಧ್ವನಿಃ ||

ಶ್ರೀರಾಮಚಂದ್ರನ ಬಾಹುದಂಡಗಳಿಂದ ಠಂಕಾರವನ್ನು ಹೊಂದಿದ ಕೋದಂಡದ ಪ್ರಚಂಡ ಧ್ವನಿಯು ಸಮಸ್ತ ಲೋಕಗಳಲ್ಲಿಯೂ ವಿಶೇಷವಾಗಿ ಧ್ವನಿತವಾಯಿತು. ಇಂದ್ರ, ಬ್ರಹ್ಮಾದಿಗಳಿಗೆ ಮೋದವನ್ನುಂಟು ಮಾಡಿತು. ಸಪ್ತಾಶ್ವನಾದ ಸೂರ್ಯನನ್ನೂ ಮೇಘಗಳನ್ನೂ ನಡುಗಿಸಿತು. ಸಪ್ತ ಸಮುದ್ರಗಳೂ ಅಲ್ಲೋಲ ಕಲ್ಲೋಲವಾದುವು. ಸಪ್ತಕುಲ ಪರ್ವತಗಳೂ ಭೂಮಿಯಮೇಲೆ ತಲೆಕೆಳಗಾಗಿ ಬೀಳುವಂತಾದುವು.

ಬ್ರಹ್ಮಾಂಡಂದಲರ್ಯ ವಿಯದ್ವಿದಳರ್ಯ ಭೋಗೀಶ ಭೋಗಸ್ಥಲಂ |
ಸಂತ್ರಾಸಂಜನರ್ಯ ಸಮುದ್ರಪಟಲೀತೋಯಂ ಸಮುದ್ವೇಲರ್ಯ |
ದಿಕ್ಪಾಲಾನತಿಕ್ಷೋಭರ್ಯ ಕುಲಗಿರೀಂಜೀರ್ಣತ್ವಮಾಪಾದರ್ಯ |
ನಕ್ಷತ್ರಾಣಿಚಪಾತರ್ಯ ವಿಲಸಿತಶ್ಶೌರ್ಯೇರ್ಧನುಜ್ಯಾರವಃ ||

ಬ್ರಹ್ಮಾಂಡವು ಬಿರುಕು ಬಿಟ್ಟಿತು. ಆಕಾಶವು ಎರಡು ಭಾಗವಾಯಿತು. ಪೃಥ್ವಿಯನ್ನು ಹೊತ್ತಿದ್ದ ಆದಿ ಶೇಷನ ಹೆಡೆಯಲ್ಲಿ ತಾಪ ಹುಟ್ಟಿತು. ಸಮುದ್ರದೊಳಗಿನ ನೀರು ಆಕಾಶಕ್ಕೆ ಎರಚಲ್ಪಟ್ಟಿತು. ಅಷ್ಟದಿಕ್ಪಾಲಕರಿಗೆ ಕ್ಷೋಭೆಯುಂಟಾಯಿತು. ಸಪ್ತಕುಲ ಪರ್ವತಗಳೂ ಚೂರುಚೂರಾಗಿ ಜೀರ್ಣತ್ವವನ್ನು ಹೊಂದಿದವು. ಆಕಾಶದಿಂದ ನಕ್ಷತ್ರಗಳು ಉದುರಿದವು. ಇಷ್ಟೂ ಆ ವೀರ ರಾಮಚಂದ್ರನ ಧನುಸ್ಸಿನ ಹೆದೆಯ ಠಂಕಾರ ಶಬ್ದದ ಪರಿಣಾಮಗಳು.

ಶ್ರೀರಾಮ ಭಕ್ತಿ ಗೀತಾ

ಶ್ರೀರಾಮಾ ವರಪುಂಡರೀಕನಯನಾ ಶ್ರೀರಾಮ ಸೀತಾಪತೇ |
ಗೋವಿಂದಾಚ್ಯುತ ನಂದನಂದನ ಮುಕುಂದಾನಂದ ದಾಮೋದರಾ |
ವಿಷ್ಣೋ ರಾಘವ ವಾಸುದೇವ ನೃಹರೇ ದೇವೌಘಚೂಡಾಮಣೇ |
ಸಂಸಾರಾರ್ಣವ ಕರ್ಣಧಾರಕ ಹರೇ ಹೇರಾಮ ತುಭ್ಯಂ ನಮಃ ||

ಕಮಲಾಕ್ಷನೇ, ಶ್ರೀರಾಮಾ, ಸೀತಾಪತಿಯೇ, ಗೋವಿಂದನೇ, ನಾಶರಹಿತನೇ, ನಂದಗೋಪಕುಮಾರನೇ, ಮುಕುಂದಾ, ಆನಂದಾ, ದಾಮೋದರಾ, ವಿಷ್ಣೋ, ರಾಘವಾ, ವಾಸುದೇವಾ, ನರಸಿಂಹಾ, ದೇವತೆಗಳ ಗುಂಪಿಗೆ ಚೂಡಾರತ್ನಪ್ರಾಯನೇ, ಸಂಸಾರ ಸಮುದ್ರವನ್ನು ದಾಟಿಸತಕ್ಕ ನಾವಿಕನೇ, ಕೃಷ್ಣಾ, ಶ್ರೀರಾಮಚಂದ್ರಾ, ನಿನಗೆ ನಮಸ್ಕಾರಗಳು.

ರಾಮಚಂದ್ರಚರಿತಾ ಕಥಾಮೃತಂ | ಲಕ್ಷ್ಮಣಾಗ್ರಜ ಗುಣಾನುಕೀರ್ತನಂ |
ರಾಘವೇಶ ತವಪಾದಸೇವನಂ | ಸಂಭವಂತು ಮಮಜನ್ಮಜನ್ಮನಿ ||

ಲಕ್ಷ್ಮಣನ ಅಣ್ಣನಾದ ಶ್ರೀರಾಮಚಂದ್ರನ ಕಥಾಮೃತವನ್ನು ಪಾನಮಾಡುವುದೂ ಆತನ ಗುಣಗಳನ್ನು ಅನುದಿನವೂ ಭಜಿಸುತ್ತಿರುವುದೂ ಆತನ ಪಾದ ಸೇವೆ ಮಾಡುತ್ತಿರುವುದೂ ನನಗೆ ಜನ್ಮ ಜನ್ಮಗಳಲ್ಲಿಯೂ ಲಭಿಸಲಿ.

ರಾಮಂ ಮತ್ಕುಲದೈವತಂ ಸಕರುಣಂ ರಾಮಂಭಜೇ ಸಾದರಂ |
ರಾಮೇಣಾಖಿಲ ಪಾತಕಂವಿನಿಹತಂ ರಾಮಾಯ ತಸ್ಮೈ ನಮಃ |
ರಾಮಾನ್ನಾಸ್ತಿ ಜಗತ್ರಯೈಕ ಸುಲಭೋ ರಾಮಸ್ಯ ದಾಸೋಸ್ಮ್ಯಹಂ |
ರಾಮೇ ಪ್ರೀತಿಮತೀವಮೇ, ಕುಲಗುರೋ ಶ್ರೀರಾಮರಕ್ಷಸ್ವಮಾಂ ||

ನನ್ನ ಕುಲದೈವವೂ ಕರುಣಾಮೂರ್ತಿಯೂ ಆದ ಶ್ರೀರಾಮಚಂದ್ರನನ್ನು ಭಕ್ತಿಯಿಂದ ಭಜಿಸಿದಲ್ಲಿ ಆತನಿಂದ ಸಮಸ್ತ ಘೋರ ಪಾತಕಗಳೂ ನಾಶಹೊಂದುತ್ತವೆ. ಅಂಥ ರಾಮನಿಗೆ ನಮಸ್ಕಾರವು. ಶ್ರೀರಾಮನಿಗಿಂತ ಮೂರು ಲೋಕಗಳಲ್ಲಿ ಭಕ್ತಿಗೆ ಸುಲಭರು ಇನ್ನೊಬ್ಬರಿಲ್ಲ. ನಾನು ರಾಮನ ದಾಸನಾಗುತ್ತೇನೆ. ನನಗೆ ರಾಮನಲ್ಲಿ ಅತಿಯಾದ ಪ್ರೀತಿಯಿದೆ. ನನ್ನ ಕುಲಗುರುವಾದ ಶ್ರೀರಾಮನೇ ನನ್ನನ್ನು ರಕ್ಷಿಸು.

ಮಾತಾರಾಮೋ ಮತ್ಪಿತಾ ರಾಮಚಂದ್ರೋ |
ಭ್ರಾತಾರಾಮೋ ಮತ್ಸಖಾ ರಾಘವೇಶಃ |
ಸರ್ವಸ್ವಂಮೇ ರಾಮಚಂದ್ರೋದಯಾಳುಃ |
ನಾನ್ಯಂ ದೈವಂ ನೈವಜಾನೇ ನಜಾನೇ ||

ನನ್ನ ತಾಯಿ ರಾಮಚಂದ್ರ. ನನ್ನ ತಂದೆಯೂ ರಾಮಚಂದ್ರ. ನನ್ನ ಸಹೋದರ ಮತ್ತು ಸ್ನೇಹಿತನೂ ರಾಮ ಚಂದ್ರಮೂರ್ತಿಯೇ. ದಯಾಳುವಾದ ರಾಮಚಂದ್ರನೇ ನನ್ನ ಸರ್ವಸ್ವ. ಬೇರೆ ಯಾರನ್ನೂ ನಾನು ಧ್ಯಾನಿಸುವುದಿಲ್ಲ. ಖಂಡಿತಾ ಧ್ಯಾನಿಸುವುದಿಲ್ಲ.

ರತ್ನೋಲ್ಲಸಜ್ಜ್ವಲಿತ ಕುಂಡಲಗಂಡಭಾಗಂ |
ಕಸ್ತೂರಿಕಾತಿಲಕ ಶೋಭಿತ ಫಾಲಭಾಗಂ |
ಕರ್ಣಾಂತ ದೀರ್ಘನಯನಂ ಕರುಣಾಕಟಾಕ್ಷಂ |
ಶ್ರೀರಾಮಚಂದ್ರ ಮುಖಮಾತ್ಮನಿ ಸನ್ನಿಧತ್ತಾಂ ||

ರತ್ನಗಳ ದಿವ್ಯಪ್ರಕಾಶದಿಂದ ಯುಕ್ತವಾದ, ಕುಂಡಲಗಳಿಂದ ಅಲಂಕೃತವಾದ ಕಪೋಲ ಪ್ರದೇಶಗಳುಳ್ಳ, ಕಸ್ತೂರಿ ತಿಲಕದಿಂದ ಶೋಭಿಸುವ ಹಣೆಯುಳ್ಳ, ಕಿವಿಯವರೆಗೆ ವ್ಯಾಪಿಸಿರುವ ದೀರ್ಘನಯನಗಳುಳ್ಳ, ಕರುಣಾ ಮೂರ್ತಿಯಾದ ಶ್ರೀರಾಮಚಂದ್ರನ ಮುಖವು ನನ್ನ ಎದುರಿಗೆ ನೆಲಸಲಿ.

ರಾಮಃಪಾತು ಸದೈವಮಾಮರಿಭಯದ್ರಾಮಂ ಸದಾ ಭಾವಯೇ |
ರಾಮೇಣೈವ ಹೃತಂ ಮಹತ್ತರತಮೋ ರಾಮಾಯನಿತ್ಯಂ ನಮಃ |
ರಾಮಾನ್ನಾಸ್ತಿ ಪರಂಪದಂ ಸುಲಲಿತೌ ರಾಮಸ್ಯ ಪಾದೌ ಭಜೇ
ರಾಮೇಪ್ರೀತಿರಚಂಚಲಾಸ್ತು ಮಮಹೇ ಶ್ರೀರಾಮ ಮಾಂ ಪಾಲಯ ||

ಶ್ರೀರಾಮಚಂದ್ರನು ನನ್ನನ್ನು ಸರ್ವದಾ ಅರಿಷಡ್ವರ್ಗಗಳೆಂಬ ಶತ್ರುಭಯದಿಂದ ಕಾಪಾಡಲಿ. ರಾಮನನ್ನು ನಾನು ಸದಾ ಧ್ಯಾನಿಸುತ್ತೇನೆ. ರಾಮನೊಬ್ಬನೇ ಮಹಾ ಪಾಪಗಳನ್ನು ನಾಶಮಾಡಲು ಸಮರ್ಥನು. ರಾಮನನ್ನು ನಿತ್ಯವೂ ನಮಸ್ಕರಿಸುತ್ತೇನೆ. ರಾಮನನ್ನು ಬಿಟ್ಟು ನನಗೆ ಬೇರೆ ಮಾರ್ಗವೇ ಇಲ್ಲ. ಮನೋಹರವಾದ ರಾಮನ ಪಾದಗಳನ್ನು ಭಜಿಸುತ್ತೇನೆ. ರಾಮನಲ್ಲಿ ನನಗೆ ಪ್ರೀತಿಯು ಸ್ಥಿರವಾಗಿರಲಿ. ಶ್ರೀರಾಮನೇ, ನನ್ನನ್ನು ಪಾಲಿಸು.

ರಾಮಃಪಿತಾ ರಾಘವ ಏವಮಾತಾ |
ರಾಮಸ್ಸುಬಂಧುಶ್ಚ ಸಖಾ ಸಖೀವ |
ರಾಮೋಗುರುರ್ಮೇ ಪರಮಂಚ ದೈವಂ |
ರಾಮಂ ವಿನಾನಾನ್ಯಮಹಂ ಸ್ಮರಾಮಿ ||

ರಾಮನು ನನ್ನ ತಂದೆಯು. ಆ ರಾಘವನೇ ನನ್ನ ತಾಯಿಯು. ರಾಮನೇ ನನಗೆ ಒಳ್ಳೆಯ ಬಂಧುವು, ಸಖನು, ಸಖಿಯು, ಗುರುವು ಮತ್ತು ಪರಮ ದೈವವು. ರಾಮನ ವಿನಃ ಇನ್ನೊಬ್ಬರನ್ನೂ ಸ್ಮರಿಸುವುದಿಲ್ಲ.

याकृपा मुनिसंत्राणे।
याकृपा कपिनायके।
याविभीषण रक्षायां।
सा राम मम दीयतां॥

ಮುನಿಗಳ ರಕ್ಷಣೆಗೆ ಯಾವ ಕೃಪೆ ತೋರಿಸಿದೆಯೋ, ಕಪಿಶ್ರೇಷ್ಠನಾದ ಆಂಜನೇಯನಿಗೆ ಅಥವಾ ಸುಗ್ರೀವನಿಗೆ ಯಾವ ಕೃಪೆ ತೋರಿಸಿದೆಯೋ, ಆಶ್ರಿತನಾದ ವಿಭೀಷಣನಿಗೆ ಯಾವ ಕೃಪೆಯಿಂದ ರಕ್ಷಣೆ ಕೊಟ್ಟೆಯೋ, ಅದೇ ಕೃಪೆಯನ್ನೇ, ಶ್ರೀರಾಮನೇ ! ನನ್ನಲ್ಲಿ ತೋರಿಸುವವನಾಗು.

ದಯಾನಿಧೇ ರಾಘವ ರಾಮಚಂದ್ರ।
ನಿರಸ್ಯ ಪಾಪಾನಿ ಮಮಾಖಿಲಾನಿ।
ತ್ವಯ್ಯೇವಭಕ್ತಿಂ ಸದೃಢಾಂ ಪ್ರಯಚ್ಛ।
ಸೈವ ಪ್ರಸೂತೇಹ್ಯಖಿಲಾನ್ಯಭೀಷ್ಟಾನ್॥

ದಯಾನಿಧಿಯೇ, ರಾಘವನೇ, ರಾಮಚಂದ್ರನೇ, ನನ್ನ ಸಮಸ್ತ ಪಾಪಗಳನ್ನೂ ನಾಶಮಾಡಿ ನಿನ್ನಲ್ಲಿ ನನಗೆ ದೃಢಭಕ್ತಿಯುಂಟಾಗುವಂತೆ ಅನುಗ್ರಹಿಸು, ನನ್ನ ಸಕಲ ಇಷ್ಟಾರ್ಥಗಳೂ ನಿನ್ನಿಂದಲೇ ದೊರಕುತ್ತವೆ.

ಅಕ್ಷೀಣ ಬಾಣತೂಣೀರಃ ಸಮಾರೋಪಿತ ಕಾರ್ಮುಕಃ।
ದಶಗ್ರೀವ ಶಿರೋಹಂತಾ ಶ್ರೀರಾಮಶ್ಶರಣಂ ಮಮ॥

ಅಕ್ಷಯವಾದ ಬಾಣ ಬತ್ತಳಿಕೆಯಿಂದ ಕೂಡಿ, ಬಿಲ್ಲಿನಲ್ಲಿ ಬಾಣವನ್ನು ಹೆದೆಗೇರಿಸಿ, ರಾವಣನ ಶಿರಸ್ಸನ್ನು ಛೇದಿಸಿದ ಶ್ರೀರಾಮನನ್ನು ನಾನು ಶರಣು ಹೊಂದುತ್ತೇನೆ.

ಇಂದೀವರದಳಶ್ಯಾಮಃ ಪುಂಡರೀಕ ನಿಭೇಕ್ಷಣಃ।
ಧೃತ ಕೋದಂಡತೂಣೀರೋ ರಾಮ ಏವ ಗತಿರ್ಮಮ॥

ನೈದಿಲೆಯಂತೆ ಶ್ಯಾಮಲನೂ, ಕಮಲಾಕ್ಷನೂ, ಬಿಲ್ಲು ಬತ್ತಳಿಕೆಯನ್ನು ಧರಿಸಿರುವವನೂ ಆದ ರಾಮನೇ ನನಗೆ. ದಿಕ್ಕು.

ಶ್ರೀರಾಮ ಮೇತ್ತ್ವಂಹಿ ಪಿತಾಚಮಾತಾ।
ಶ್ರೀರಾಮ ಮೇತ್ತ್ವಂಹಿ ಸುಹೃಚ್ಚಬಂಧುಃ।
ಶ್ರೀರಾಮ ಮೇತ್ತ್ವಂಹಿ ಗುರುಶ್ಚಗೋಪ್ತಾ।
ಶ್ರೀರಾಮ ಮೇತ್ತ್ವಂಹಿ ಸಮಸ್ತಮೇವ॥

ಶ್ರೀರಾಮಚಂದ್ರನೇ, ನನಗೆ ನೀನೇ ತಂದೆ ತಾಯಿಯು.
ಶ್ರೀರಾಮಚಂದ್ರನೇ, ನನಗೆ ನೀನೇ ಬಂಧು ಮಿತ್ರನು.
ಶ್ರೀರಾಮಚಂದ್ರನೇ, ನನಗೆ ನೀನೇ ಗುರು ಮತ್ತು ಆಪ್ತನು.
ಶ್ರೀರಾಮಚಂದ್ರನೇ, ನನಗೆ ನೀನೇ ಸಮಸ್ತವೂ.

ಪಟುತರ ಜಲವಾಹಧ್ವಾನಮಾದಾಯಚಾಪಂ।
ಪವನ ಜವನವೇಗಂ ಬಾಣಮಾಕೃಷ್ಯತೂಣಾತ್।
ಅಭಯ ವಚನದಾಯೀ ಸಾನುಜಸ್ಸರ್ವತೋವೇ।
ರಣಹತದನುಜೇಂದ್ರೋ ರಾಮಚಂದ್ರಸ್ಸಹಾಯಃ॥

ಗಂಭೀರವಾದ ಮೇಘನಾದದಂತೆ ಟಂಕಾರ ಶಬ್ದಮಾಡುವ ಕೋದಂಡದಿಂದಲೂ, ವಾಯುವೇಗದಿಂದ ಶತ್ರುಗಳನ್ನು ಭೇದಿಸುವ ಬಾಣಗಳಿಂದ ಕೂಡಿದ ಬತ್ತಳಿಕೆಯಿಂದಲೂ ಪ್ರಕಾಶಿಸುತ್ತ, ಲಕ್ಷ್ಮಣ ಸಮೇತನಾಗಿ, ಸರ್ವರಿಗೂ ಅಭಯಪ್ರದನಾಗಿ, ಯುದ್ಧದಲ್ಲಿ ರಾವಣನನ್ನು ಸಂಹರಿಸಿದ ರಾಮಚಂದ್ರನು ನಮಗೆ ಸಹಾಯಕನಾಗಿರಲಿ.

ಶ್ರೀರಾಮಚಂದ್ರೇತಿ ದಯಾಪರೇತಿ।
ಭಕ್ತಪ್ರಿಯೇತಿ ಭವ ಬಂಧನ ಮೋಚನೇತಿ।
ನಾಥೇತಿ ನಾಗಶಯನೇತಿ ಸದಾ ಸ್ತುವಂತಂ।
ಮಾಂ ಪಾಹಿ ಭೀತಮನಿಶಂ ಕೃಪಣಂ ಕೃತಘ್ನಂ॥

ಶ್ರೀರಾಮಚಂದ್ರ ದಯಾನಿಧೇ, ಭಕ್ತಪ್ರಿಯಾ, ಸಂಸಾರದುಃಖ ನಾಶನಾ, ನಾಥಾ, ಶೇಷಶಯನಾ ಎಂದು ಸದಾ ನಿನ್ನನ್ನು ಕೂಗಿ ಸ್ತುತಿಸುತ್ತಿರುವ, ಕೃಪಣನೂ ಕೃತಘ್ನನೂ ತಪ್ಪುಯುಕ್ತ ಭೀತನೂ ಆದ ನನ್ನನ್ನು ಕಾಪಾಡು.

ರಾಮರಾಮ ದಯಾಸಿಂಧೋ ರಾವಣಾರೇ ಜಗತ್ಪತೇ।
ತ್ವತ್ಪಾದ ಕಮಲಾಸಕ್ತಿರ್ಭವೇ ಜ್ಜನ್ಮನಿಜನ್ಮನಿ॥

ದಯಾಸಾಗರನೂ, ರಾವಣಾಂತಕನೂ, ಲೋಕಸ್ವಾಮಿಯೂ ಆದ ಶ್ರೀರಾಮನೇ ನಿನ್ನ ಪಾದಕಮಲಗಳಲ್ಲಿ ಭಕ್ತಿಯು ನನಗೆ ಜನ್ಮ ಜನ್ಮಗಳಲ್ಲಿಯೂ ಲಭಿಸಲಿ.

ಶ್ರೀರಾಘವಂ ರಾಮಚಂದ್ರಂ ರಾವಣಾರಿಂ ರಮಾಪತಿಂ।
ರಾಜೀವಲೋಚನಂ ರಾಮಂ ತಂ ವಂದೇ ರಘುನಾಯಕಂ॥

ರಾಘವನೆಂದೂ, ರಾಮಚಂದ್ರನೆಂದೂ, ರಾವಣಮರ್ದನನೆಂದೂ, ರಮಾಪತಿ ಎಂದೂ, ರಾಜೀವಾಕ್ಷನೆಂದೂ ಹೇಳಿಸಿಕೊಳ್ಳುವ, ರಕಾರ ಪ್ರಾರಂಭದಿಂದ ರಂಜಿತನಾದ ಶ್ರೀರಾಮಚಂದ್ರನನ್ನು ವಂದಿಸುತ್ತೇನೆ.

ಯತ್ಪಾದ ಪಂಕಜ ರಜ ಶ್ರುತಿಭಿರ್ವಿಮೃಗ್ಯಂ।
ಯನ್ನಾಭಿ ಪಂಕಜ ಭವಃ ಕಮಲಾಸನಸ್ಸ್ಯಾತ್।
ಯನ್ನಾಮ ಸಾರರಸಿಕೋ ಭಗವಾನ್‌ಪುರಾರಿ।
ಸ್ತಂರಾಮಚಂದ್ರಮನಿಶಂ ಹೃದಿ ಭಾವಯಾಮಿ॥

ಯಾವ ಸ್ವಾಮಿಯ ಪಾದದೂಳನ್ನೇ ಶ್ರುತಿಗಳು ಹುಡುಕುತ್ತಿರುವುವೋ, ಯಾವ ಸ್ವಾಮಿಯ ಹೊಕ್ಕುಳಿಂದ ಹುಟ್ಟಿದ ಕಮಲದಲ್ಲಿ ಜಗತ್ಕರ್ತನಾದ ಬ್ರಹ್ಮನು ಹುಟ್ಟಿರುವನೋ ಯಾವನಾಮಗಳನ್ನೇ ಭಗವಂತನಾದ ಈಶ್ವರನೂ ಭಜಿಸುತ್ತಿರುವನೋ, ಅಂತಹ ರಾಮಚಂದ್ರನನ್ನು ನಾನು ಯಾವಾಗಲೂ ಚಿಂತಿಸುತ್ತಿರುವೆನು.

ಯಸ್ಯಾವತಾರ ಚರಿತಾನಿ ವಿರಿಂಚಿಲೋಕೇ।
ಗಾಯಂತಿ ನಾರದ ಮುಖಾ ಭವ ಪದ್ಮಜಾದ್ಯಾಃ।
ಆನಂದಜಾಶ್ರು ಪರಿಷಿಕ್ತ ಕುಚಾಗ್ರಸೀಮಾ।
ವಾಗೀಶ್ವರೀ ಚತಮುಹಂ ಶರಣಂ ಪ್ರಪದ್ಯೇ॥

ಯಾವನ ಅವತಾರ ಚರಿತ್ರೆಗಳನ್ನು ಬ್ರಹ್ಮಲೋಕದಲ್ಲಿ ನಾರದ ಬ್ರಹ್ಮ ಇವರುಗಳೇ ಮುಂತಾದವರು ಗಾನ ಮಾಡುತ್ತಿರುವರೋ, ಅಲ್ಲಿರುವ ವಾಗೀಶ್ವರಿಯಾದ ಸರಸ್ವತಿಯು ಯಾವ ಸ್ವಾಮಿಯ ಸ್ತುತಿಯನ್ನು ಕೇಳಿ ಆನಂದ ದಿಂದ ಬಾಷ್ಪ ಪೂರಿತಳಾಗಿ ತನ್ನ ವಕ್ಷಸ್ಥಳವನ್ನು ನನೆಸಿಕೊಳ್ಳುತ್ತಿರುವಳೋ, ಅಂತಹ ಸ್ವಾಮಿಯಾದ ಶ್ರೀರಾಮಚಂದ್ರ ನನ್ನು ಶರಣು ಹೊಂದುತ್ತೇನೆ.

ವಿಬುಧ ವಿಟಪಿಮೂಲೇ ಜಾನಕೀ ಲಕ್ಷ್ಮಣಾಭ್ಯಾಂ।
ಸಹಿತಮನಿಲವೇಗಂ ಬಾಣಮಾದಾಯ ಚಾಪಂ।
ಬಹುಶರ ಪಟುತೂಣಂ ರಮ್ಯ ಪುಷ್ಪೋಪಹಾರಂ।
ವಿಬುಧ ಭರಣಚಿತ್ತಂ ಚಿಂತಯೇ ರಾಮಚಂದ್ರಂ॥

ಋಷಿಗಳು ಇರತಕ್ಕ ಆಶ್ರಮ ಸ್ಥಳದಲ್ಲಿ, ಜಾನಕೀ ಲಕ್ಷ್ಮಣರ ಸಹಿತನಾಗಿ, ವಾಯುವೇಗದಿಂದ ಹೋಗತಕ್ಕ ಬಾಣಗಳಿಂದಲೂ, ಬಿಲ್ಲಿನಿಂದಲೂ, ಅನೇಕ ಶಕ್ತಿಯುಕ್ತವಾದ ಬಾಣಗಳನ್ನು ಒಳಗೊಂಡ ಬತ್ತಳಿಕೆಯಿಂದಲೂ, ತನಗೆ ಸಮರ್ಪಿಸಿದ ಮನೋರಂಜಕವಾದ ಪುಷ್ಪಕಾಣಿಕೆಗಳಿಂದಲೂ ಕೂಡಿ, ಋಷಿಗಳ ಪಾಲನೆಯನ್ನು ಧ್ಯೇಯವಾಗಿ ಇಟ್ಟುಕೊಂಡಿರುವ ಶ್ರೀರಾಮಚಂದ್ರನನ್ನು ಧ್ಯಾನಿಸುತ್ತೇನೆ.

ಹೇ ರಾಮ ಹೇ ರಮಣ ಹೇ ಜಗದೇಕವೀರ।
ಹೇ ನಾಥ ಹೇ ರಘುಪತೇ ಕರುಣಾಲವಾಲ।
ಹೇ ಜಾನಕೀರಮಣ ಹೇ ಜಗದೇಕಬಂಧೋ।
ಮಾಂ ಪಾಹಿ ದೀನಮನಿಶಂ ಕೃಪಣಂ ಕೃತಘ್ನಂ॥

ಎಲೈ ರಾಮಮೂರ್ತಿಯೆ! ನನ್ನ ಯಜಮಾನನೆ! ಪ್ರಪಂಚಕ್ಕೆ ಏಕೈಕವೀರನೆ! ನನ್ನ ಒಡೆಯನೆ! ರಘುಪತಿಯೆ! ಕರುಣಾಕರನೆ! ಸೀತಾಪತಿಯೆ! ಪ್ರಪಂಚಕ್ಕೇ ಬಂಧುವೆ! ಕೃಪಣನೂ ಕೃತಘ್ನನೂ ಆದ ನನ್ನನ್ನು ಸರ್ವದಾ ರಕ್ಷಿಸು.

ರಾಮಂ ರಾಕ್ಷಸಮರ್ದನಂ ರಘುಪತಿಂ ಶಕ್ರಾರಿ ವಿಧ್ವಂಸಿನಂ।
ಸುಗ್ರೀವೇಪ್ಸಿತರಾಜ್ಯದಂ ಸುರಪತೇಃಪುತ್ರಾಂತಕಂ ಶಾರ್ಙ್ಗಿಣಂ।
ಭಕ್ತಾನಾಮಭಯಪ್ರದಂ ಭಯಹರಂ ಪಾಪೌಘ ವಿಧ್ವಂಸಿನಂ।
ಸೀತಾಸೇವಿತ ಪಾದಪದ್ಮಯುಗಳಂ ರಾಮಂಭಜೇ ಶ್ಯಾಮಲಂ॥

ರಾಕ್ಷಸರನ್ನು ಸಂಹರಿಸಿದವನೂ, ರಘುಶ್ರೇಷ್ಠನೂ, ಇಂದ್ರಶತ್ರುವಾದ ರಾವಣನನ್ನು ಧ್ವಂಸಗೊಳಿಸಿದವನೂ, ಸುಗ್ರೀವನಿಗೆ ಇಷ್ಟಾಪೂರ್ತಿಮಾಡಿ ರಾಜ್ಯವನ್ನು ಕೊಡಿಸಿದವನೂ, ಇಂದ್ರನ ಪುತ್ರನಾದ ವಾಲಿಯನ್ನು ಭಗ್ನಗೊಳಿಸಿ ದವನೂ, ಕೋದಂಡಧಾರಿಯಾಗಿ ಭಕ್ತರಿಗೆ ಭಯವನ್ನು ತಪ್ಪಿಸಿ ಅವರಿಗೆ ಅಭಯಪ್ರಧಾನ ಮಾಡುವವನೂ, ತನ್ನ ನಾಮವನ್ನು ಪಠಿಸಿದರೆ ಸಮಸ್ತ ಪಾಪಸಮೂಹವನ್ನು ನಾಶಪಡಿಸುವವನೂ, ಸೀತೆಯಿಂದ ಅರ್ಚಿಸಲ್ಪಟ್ಟ ಪಾದ ಕಮಲಗಳುಳ್ಳವನೂ, ಶ್ಯಾಮಲ ಮೂರ್ತಿಯೂ ಆದ ಶ್ರೀರಾಮನನ್ನು ಭಜಿಸುತ್ತೇನೆ.

ವಿಶಾಲನೇತ್ರಂ ಪರಿಪೂರ್ಣಗಾತ್ರಂ |
ಸೀತಾಕಳತ್ರಂ ಸುರವೈರಿಜೈತ್ರಂ |
ಜಗತ್ಪವಿತ್ರಂ ಪರಮಾತ್ಮ ತತ್ವಂ |
ಶ್ರೀರಾಮಚಂದ್ರಂ ಪ್ರಣಮಾಮಿ ಚಿತ್ತೇ ||

ವಿಶಾಲವಾದ ಕಣ್ಣುಗಳುಳ್ಳವನೂ, ತುಂಬಿದ ದೇಹವುಳ್ಳವನೂ, ಸೀತಾಪತಿಯೂ, ರಾಕ್ಷಸರನ್ನು ಜಯಿಸಿದವನೂ, ಪ್ರಪಂಚಕ್ಕೆ ಪೂಜ್ಯನೂ, ತತ್ವಪ್ರಧಾನವಾದ ಪರಮಾತ್ಮನೂ, ಅಂದರೆ, ಪರಬ್ರಹ್ಮನೂ ಆದ ಶ್ರೀರಾಮಚಂದ್ರನನ್ನು ಮನಸ್ಸಿನಲ್ಲಿ ನಮಸ್ಕರಿಸುತ್ತೇನೆ.

ಲೋಕಾಭಿರಾಮಂ ರಣರಂಗಭೀಮಂ |
ರಾಜೀವನೇತ್ರಂ ರಘುವಂಶಮಿತ್ರಂ |
ಕಾರುಣ್ಯಮೂರ್ತಿಂ ಕರುಣಾಪ್ರಪೂರ್ತಿಂ |
ಶ್ರೀರಾಮಚಂದ್ರಂ ಶರಣಂ ಪ್ರಪದ್ಯೇ ||

ಲೋಕರಂಜಕನೂ, ಯುದ್ಧದಲ್ಲಿ ಭಯಂಕರನೂ, ಕಮಲಾಕ್ಷನೂ, ರಘುಕುಲಕ್ಕೆ ಸೂರ್ಯನಂತಿರುವ ಕರುಣಾಳುವೂ, ಕರುಣಾರಸವೇ ತುಂಬಿ ಉಕ್ಕೇರಿ ಮೂರ್ತೀಭವಿಸಿದಂತಿರುವವನೂ ಆದ ಶ್ರೀರಾಮಚಂದ್ರನನ್ನು ಶರಣು ಹೊಂದುತ್ತೇನೆ.

ಸನ್ನದ್ಧಃಕವಚೀ ಖಡ್ಗೀ ಚಾಪಬಾಣಧರೋಯುವಾ |
ಗಚ್ಛನ್ಮಮಾಗ್ರತೋ ನಿತ್ಯಂ ರಾಮಃಪಾತು ಸಲಕ್ಷ್ಮಣಃ ||

ತರುಣ ಯೋಧನಂತೆ ಕವಚ, ಖಡ್ಗ, ಬಿಲ್ಲು, ಬಾಣಗಳನ್ನು ಧರಿಸಿ, ಲಕ್ಷ್ಮಣಸಹಿತನಾಗಿ, ನನ್ನ ಹೃದಯದಲ್ಲಿ ನಿತ್ಯವೂ ಚರಿಸುತ್ತಿರುವ ಶ್ರೀರಾಮನು ನನ್ನನ್ನು ಕಾಪಾಡಲಿ.

ಸುಗ್ರೀವಮಿತ್ರಂ ಪರಮಂ ಪವಿತ್ರಂ |
ಸೀತಾಕಳತ್ರಂ ನವಹೇಮ ಸೂತ್ರಂ |
ಕಾರುಣ್ಯಪಾತ್ರಂ ಶತಪತ್ರನೇತ್ರಂ |
ಶ್ರೀರಾಮಚಂದ್ರಂ ಶಿರಸಾ ನಮಾಮಿ ||

ಸುಗ್ರೀವ ಸ್ನೇಹಿತನೂ, ಪರಮ ಶ್ರೇಷ್ಠನೂ, ಸೀತಾಪತಿಯೂ, ನೂತನ ಸುವರ್ಣ ಯಜ್ಞೋಪವೀತವನ್ನು ಧರಿಸಿರುವವನೂ, ಕರುಣೆಗೆ ಆಗರನಾದವನೂ, ಕಮಲಾಕ್ಷನೂ ಆದ ಶ್ರೀರಾಮಚಂದ್ರನನ್ನು ತಲೆಬಾಗಿ ನಮಸ್ಕರಿಸುವೆನು.

ಶ್ರೀರಾಘವೇತಿ ರಮಣೇತಿ ರಘೂದ್ವಹೇತಿ।
ರಾಮೇತಿ ರಾವಣಹರೇತಿ ರಮಾಧವೇತಿ।
ಸಾಕೇತನಾಥ ಸುಮುಖೇತಿ ಚ ಸುವ್ರತೇತಿ।
ವಾಣೀ ಸದಾ ವದತು ರಾಮಹರೇ ಹರೇತಿ॥

ನನ್ನ ವಾಣಿಯು ಯಾವಾಗಲೂ ಶ್ರೀರಾಘವಾ ! ಒಡೆಯಾ ! ರಘುವಂಶೋತ್ಪನ್ನಾ ! ರಾಮಾ ! ರಾವಣಾರೇ ! ಮಾಧವಾ ! ಅಯೋಧ್ಯಾಪತೇ ! ಹಸನ್ಮುಖೀ ! ಧರ್ಮಾಚಾರನಿರತಾ ! ರಾಮಾ ! ಹರೇ ! ಹರೇ ! ಎಂದು ಹೇಳುತ್ತಿರಲಿ.

ಜಯತು ಜಯತು ರಾಮೋ ಜಾನಕೀವಲ್ಲಭೋಯಂ।
ಜಯತು ಜಯತು ರಾಮಶ್ಚಂದ್ರಚೂಡಾರ್ಚಿತಾಂಘ್ರಿಃ।
ಜಯತು ಜಯತು ವಾಣೀ ನಾಥನಾಥಃ ಪರಾತ್ಮಾ।
ಜಯತು ಜಯತು ರಾಮೋನಾಥನಾಥಃ ಕೃಪಾಳುಃ॥

ಸೀತಾಪತಿಯಾದ ಶ್ರೀರಾಮನಿಗೆ ಜಯವಾಗಲಿ, ಜಯವಾಗಲಿ. ಪರಮೇಶ್ವರನಿಂದ ಪೂಜಿತನಾದ ಆತ್ಮಾ ರಾಮನಿಗೆ ಜಯವಾಗಲಿ. ಬ್ರಹ್ಮನಿಗೂ ಒಡೆಯನಾದ ಪರಮಾತ್ಮರೂಪಿಯಾದ ರಾಮನಿಗೆ ಜಯವಾಗಲಿ. ಒಡೆಯರೆಂಬುವವರಿಗೂ ಒಡೆಯನಾದ ಕೃಪಾಳುವಾದ ಶ್ರೀರಾಮಚಂದ್ರನಿಗೆ ಜಯ, ಜಯಕಾರವು.

ಪರಂನಯಾಚೇ ರಘುನಾಥಯುಷ್ಮ।
ತ್ಪಾದಾಬ್ಜ ಭಕ್ತಿಸ್ಸತತಂ ಮಮಾಸ್ತು।
ಇದಂಪ್ರಿಯಂ ನಾಥ ವರಂ ಪ್ರಯಚ್ಛ।
ಪುನಃ ಪುನಸ್ತ್ವಾಮಿದಮೇವಯಾಚೇ॥

ರಘುನಾಥಾ ! ನಿನ್ನನ್ನು ಇದೊಂದು ಹೊರತು ಬೇರೆ ಏನನ್ನೂ ಕೇಳುವುದಿಲ್ಲ. ಅದೇನೆಂದರೆ, ನಿನ್ನ ಪಾದ ಕಮಲದಲ್ಲಿ ಭಕ್ತಿಯು ನನಗೆ ಸದಾ ನೆಲಸಲಿ. ಇಂಥಾ ಪ್ರಿಯವಾದ ವರವನ್ನು ನನ್ನ ಒಡೆಯನೇ, ನನಗೆ ಕರುಣಿಸು. ಪುನಃ ಪುನಃ ಇದನ್ನೊಂದನ್ನೇ ಯಾಚಿಸುತ್ತೇನೆ.

ಚಾಪಬಾಣಧರ ಸ್ಸೀತಾಕಾಮದಃ ಕಾಂತಿಮನ್ನರಃ।
ಸೀತಾಲಕ್ಷ್ಮಣಸಯುಕ್ತಃ ಪಾತುಯುಮಾಂರಾಘವೇಶ್ವರಃ॥

ಧನುರ್ಬಾಣಧರನೂ, ಸೀತೆಯ ಮನೋಭೀಷ್ಟಪ್ರದನೂ, ಪುರುಷೋತ್ತಮನೂ, ಸೀತಾಲಕ್ಷ್ಮಣಸಮೇತನೂ, ರಘುಕುಲಶ್ರೇಷ್ಠನೂ ಆದ ಶ್ರೀರಾಮನು ನಮ್ಮನ್ನು ಕಾಪಾಡಲಿ.

ವದತು ವದತು ವಾಣೀ ರಾಮರಾಮೇತಿನಿತ್ಯಂ |
ನಮತು ನಮತು ನಿತ್ಯಂ ರಾಮ ಪಾದಾರವಿಂದಂ |
ವಸತು ವಸತು ಚಿತ್ತಂ ರಾಮಪಾದಾರವಿಂದೇ |
ನಭವತು ಮಮಪಾಪಂ ಜನ್ಮಜನ್ಮಾಂತರೇಷು ||

ನನ್ನ ಮಾತು ಯಾವಾಗಲೂ "ರಾಮ ರಾಮ" ಎಂದು ಉಚ್ಚರಿಸುವುದೇ ಆಗಿರಲಿ. ಶ್ರೀರಾಮನ ಚರಣ ಕಮಲವನ್ನೇ ನಾನು ನಿತ್ಯವೂ ನಮಿಸುವಂತಾಗಲಿ. ನನ್ನ ಮನವು ಶ್ರೀರಾಮ ಪಾದಕಮಲ ಚಿಂತನೆಯಲ್ಲಿಯೇ ಸ್ಥಿರವಾಗಿರಲಿ. ಹೀಗೆ ನಾನು ಇದ್ದರೆ ನನಗೆ ಜನ್ಮ ಜನ್ಮಾಂತರಗಳಲ್ಲೂ ಪಾಪ ಸಂಘಟನೆಯಾಗುವುದಿಲ್ಲ.

ರಾಮಭದ್ರಾಶ್ರಯಸ್ಸಾಕ್ಷಾದ್ರಾಮಚಂದ್ರೋ ನಸಂಶಯಃ |
ತತ್ರಕೋದಂಡ ತೂಣೀರೌ ಅತ್ರದಂಡ ಕಮಂಡಲೂ ||

ರಾಮಭದ್ರನನ್ನು ಆಶ್ರಯಿಸಿ ಧ್ಯಾನಿಸುವ ಯೋಗಿಯು, ಸಾಕ್ಷಾತ್ ಶ್ರೀರಾಮಚಂದ್ರನೇ, ಇದಕ್ಕೆ ಸಂಶಯ ವಿಲ್ಲ. ಆತನ, ದಂಡ, ಕಮಂಡಲಗಳೇ ಶ್ರೀರಾಮನ ಕೋದಂಡ ಬತ್ತಳಿಕೆಗಳು.

ರಘುನಾಥ ಪಾದಾರವಿಂದಯೋಃ |
ಭ್ರಮರೀ ಭೂತಮಘಾಂಧಕಾರಸೂರ್ಯಃ |
ಅಪರಾಧ ಶತಾಲಯಂ ಕಲೌಮಾ |
ಮನುಗೃಹ್ಣೀಷ್ವಹಿ ಮಂಗಳೈಃಕಟಾಕ್ಷೈಃ ||

ತನ್ನ ಪಾದಕಮಲಗಳಲ್ಲಿ ಸಮಸ್ಕರಿಸಿದವರ ಪಾಪಗಳು. ಭ್ರಮರ ರೂಪದಲ್ಲಿ ತನ್ನಲ್ಲಿ ಬಂದು ಸೇರಲು, ಆ ಭ್ರಮರಗಳೆಂಬ ಕತ್ತಲೆಯನ್ನು ನಾಶಪಡಿಸುವ ಸೂರ್ಯನಂತಿರುವ ಶ್ರೀರಾಮಮೂರ್ತಿಯೆ ! ಶತಾಪರಾಧಗಳಿಗೆ ಆಶ್ರಯವಾದ ಈ ಕಲಿಯುಗದಲ್ಲಿ, ನೀನು ನಿನ್ನ ಮಂಗಳಕರವಾದ ಕಟಾಕ್ಷದಿಂದ ನನ್ನನ್ನು ಉದ್ಧರಿಸು.

ಕಿಂ ಯೋಗಶಾಸ್ತ್ರೈಃ ಕಿಮಶೇಷವಿದ್ಯಯಾ |
ಕಿಂ ಯಾಗ ಗಂಗಾದಿ ವಿಶೇಷತೀರ್ಥೈಃ |
ಕಿಂ ಬ್ರಹ್ಮಚರ್ಯಾಶ್ರಮ ಸಂಶ್ರಯೇಣ |
ಭಕ್ತಿರ್ನಚೇತ್ತೇ ರಘುವಂಶ ಕೀರ್ತೇ ||

ರಘುವಂಶ ಶ್ರೇಷ್ಠನಾದ, ಶ್ರೀರಾಮಚಂದ್ರನಲ್ಲಿ ಭಕ್ತಿಯಿಂದ ಮನಸ್ಸಿಡದಿದ್ದರೆ, ಯೋಗಶಾಸ್ತ್ರಗಳಿಂದ ಏನು ? ಅಪಾರ ವಿದ್ಯೆಯಿದ್ದರೇನು ! ಎಷ್ಟು ಯಾಗಮಾಡಿದರೇನು ? ಗಂಗಾದಿ ದಿವ್ಯ ತೀರ್ಥಗಳಲ್ಲಿ ಎಷ್ಟು ಸ್ನಾನಮಾಡಿದ ರೇನು ? ಬ್ರಹ್ಮಚರ್ಯೆಯನ್ನು ಚೆನ್ನಾಗಿ ಪರಿಪಾಲಿಸಿದ್ದರೆ ತಾನೆ ಏನು ? (ಅಂದರೆ ಶ್ರೀರಾಮಚಂದ್ರನನ್ನು ಮನಸ್ಸಿ ನಲ್ಲಿ ಭಕ್ತಿಯುತವಾಗಿ ಏಕಾಗ್ರತೆಯಿಂದ ಧ್ಯಾನಿಸುವುದು ಎಲ್ಲಕ್ಕೂ ಹೆಚ್ಚಿನದು).

ನಮಃ ಕೋದಂಡಹಸ್ತಾಯ ಸಂದೀಪಿತ ಶರಾಯಚ |
ಖಂಡಿತಾಖಿಲದೈತ್ಯಾಯ ರಾಮಾಯಾಪನ್ನಿವಾರಣೇ ||

ಕೋದಂಡಹಸ್ತನಾಗಿ, ತೇಜಃಪುಂಜವಾದ ಬಾಣಗಳಿಂದ ಕೂಡಿ, ಸಮಸ್ತ ರಾಕ್ಷಸರನ್ನೂ ಮರ್ದಿಸಿ, ಲೋಕ ವನ್ನು ಆಪತ್ತಿನಿಂದ ನಿವಾರಣೆ ಮಾಡಿದ ಶ್ರೀರಾಮಚಂದ್ರನಿಗೆ ನಮಸ್ಕಾರವು.

ರಾಮೋಮೇ ಹೃದಿಸನ್ನಿಧಿಂ ಕಲಯುತಾಂ ರಾಮಂ ಭಜೇ, ದುಷ್ಕೃತಂ |
ರಾಮೇಣಾಪಹೃತಂ, ನಮೋ ಭಗವತೇ ರಾಮಾಯ, ರಾಮಾಚ್ಛುಭಂ |
ಭೂಯಾತ್ ಶ್ರೀರಘುನಂದನಸ್ಯ ಸುಕೃತೀ ದಾಸೋಸ್ಮ್ಯಹಂ ಸರ್ವದಾ |
ನಿತ್ಯಂ ಕೋಸಲ ಕನ್ಯಕಾ ಪ್ರಿಯಸುತೇ ರಾಮೇ ಮನೋವರ್ತತಾಂ ||

ರಾಮನು ನನ್ನ ಹೃದಯಪ್ರದೇಶದಲ್ಲಿ ಸೇರಿರಲಿ. ರಾಮನನ್ನು ಭಜಿಸುತ್ತೇನೆ. ನನ್ನ ಪಾಪಗಳು ರಾಮನಿಂದ ಪರಿಹಾರವಾಗಲಿ. ಭಗವಂತನಾದ ರಾಮನಿಗೆ ನಮಸ್ಕಾರಗಳು. ಶ್ರೀರಾಮನ ದೆಸೆಯಿಂದ ಮಂಗಳವುಂಟಾಗುವುದು. ನನ್ನ ಪುಣ್ಯದಿಂದ ನಾನು ಶ್ರೀರಾಮಚಂದ್ರನ ದಾಸನಾಗಿರುತ್ತೇನೆ. ಕೌಸಲ್ಯೆಯ ಪ್ರಿಯಪುತ್ರನಾದ ಶ್ರೀರಾಮಚಂದ್ರನಲ್ಲಿ ನನ್ನ ಮನಸ್ಸು ಯಾವಾಗಲೂ ನೆಲಸಲಿ.

ಗತೇಷ್ವನೇಕೇಷು ಭವೇಷು ಪಾಪ |
ವ್ರತೇಷ್ಯಮೂರ್ತೇಷು ಪ್ರಯಾಗತೀರ್ಥೈಃ |
ವಿತ್ರಸ್ತ ಸರ್ವೇಷು ನೃಣಾಂತರಂಗೇ|
ಸಂಜಾಯತೇ ಭಕ್ತಿರಸ ಸ್ತಮೀಡೇ ||

ಹಿಂದೆ ಕಳೆದುಹೋದ ಅನೇಕ ಜನ್ಮಗಳಲ್ಲಿ ಗಳಿಸಿದ ಪಾಪಗಳಲ್ಲಿ, ಕೆಲವನ್ನು ವ್ರತಾಚರಣೆಯಿಂದ ನಾಶಮಾಡಿ, ಉಳಿದ ಸಮಸ್ತ ಪಾಪಗಳನ್ನೂ ಪ್ರಯಾಗತೀರ್ಥಸ್ನಾನದಿಂದ ಅಂದರೆ ಗಂಗಾ, ಯಮುನಾ ಸರಸ್ವತಿ ನದಿಗಳ ರೂಪದಲ್ಲಿರುವ ಸುಷುಮ್ನಾ, ಯಿಡಾ ಮತ್ತು ಪಿಂಗಳಾ ನದಿಗಳ ಸಂಗಮವಾದ ಆಜ್ಞಾಚಕ್ರದಲ್ಲಿನ ಸುಧಾಪ್ರವಾಹದಿಂದ, ಕಳೆದುಕೊಂಡ ಮನುಷ್ಯನ ಅಂತರಂಗದಲ್ಲಿ, ಆತ್ಮಾರಾಮನಾದ ಶ್ರೀರಾಮಚಂದ್ರನ ಭಕ್ತಿ ಎಂಬ ಸುಧಾರಸವು, ಸಹಸ್ರಾರ ಚಕ್ರದಿಂದ ಪ್ರವಹಿಸುತ್ತದೆ. ಅಂತಹ ಭಕ್ತಿರಸಕ್ಕೆ ನಮಸ್ಕರಿಸುತ್ತೇನೆ.

ಶ್ರೀರಾಮಭದ್ರ ತವಯೋಗಿವರ್ಯ |
ಪಾದಾಬ್ಜಯುಗ್ಮಂ ಸತತಂ ಭಜೇಹಂ |
ಯಚ್ಚಕ್ಷುಷೀ ಧಾಮ ಜನಪ್ರವೇಶಂ |
ತಚ್ಚಕ್ಷುಷೀ ಪಶ್ಯತಿ ಯಸ್ಯಚೇತಃ ||

ಯಾವ ಜಗಚ್ಚಕ್ಷುವಿನಲ್ಲಿ ಯೋಗಿಜನರು ಪ್ರವೇಶಮಾಡುವರೋ, ಅಂತಹ ಜಗಚ್ಚಕ್ಷುವಾದ ಸೂರ್ಯನಿಗೂ ಚೇತನವನ್ನು ಕೊಡುವವನಾದ, ಯೋಗಿಶ್ರೇಷ್ಠನಾದ, ಶ್ರೀರಾಮಭದ್ರನೇ, ನಿನ್ನ ಪಾದಕಮಲದ್ವಯಗಳನ್ನು ನಾನು ಯಾವಾಗಲೂ ಭಜಿಸುತ್ತೇನೆ.

ಲಲಿತ ಮಧುರ ರಾಮಗೀತಾ

ಶ್ರೀರಾಮಚಂದ್ರ ಕರುಣಾಕರ ರಾಘವೇಂದ್ರ।
ರಾಜೇಂದ್ರಚಂದ್ರ ರಘುವಂಶ ಸಮುದ್ರಚಂದ್ರ।
ಸುಗ್ರೀವ ನೇತ್ರಯುಗಳೋತ್ಪಲ ಪೂರ್ಣಚಂದ್ರ।
ಸೀತಾ ಮನಃಕುಮುದಚಂದ್ರ ನಮೋ ನಮಸ್ತೇ॥

ಕರುಣಾಕರನೇ, ರಘುಕುಲ ಶ್ರೇಷ್ಠನೇ, ರಾಜಶ್ರೇಷ್ಠರಲ್ಲಿ ಅಗ್ರಣಿಯೇ, ರಘುವಂಶವೆಂಬ ಸಮುದ್ರಕ್ಕೆ ಚಂದ್ರನಂತೆ ಆಹ್ಲಾದವನ್ನುಂಟುಮಾಡುವ ಮೂರ್ತಿಯೇ, ಸುಗ್ರೀವನ ನೇತ್ರಗಳಿಗೆ ಆನಂದದಾಯಕನಾದ ಮನೋಹರ ಮೂರ್ತಿಯೇ, ಸೀತೆಯ ಮನಸ್ಸೆಂಬ ಕನ್ನೈದಿಲೆಯನ್ನು ಅರಳಿಸುವ ಶ್ರೀರಾಮಚಂದ್ರನೇ ನಿನಗೆ ನಮಸ್ಕಾರ ಮಾಡುತ್ತೇನೆ.

ಶ್ರೀರಾಮಚಂದ್ರೇತಿ ಸಲಕ್ಷ್ಮಣೇತಿ।
ನೀಲೋತ್ಪಲ ಶ್ಯಾಮಲ ಕೋಮಲೇತಿ।
ಆಕ್ರೋಶತಾಮಸ್ತ್ಯಧುನೈವ ಮುಕ್ತಿಃ।
ಸೀತಾಪತೇ ರಾಘವ ರಾಘವೇತಿ॥

"ಶ್ರೀರಾಮಚಂದ್ರಾ," "ಸೌಮಿತ್ರೀಸಹಚರಾ," "ನೀಲಮೇಘಶ್ಯಾಮಾ," "ಕೋಮಲಾ," "ಸೀತಾಪತೇ" "ರಾಘವಾ, ರಾಘವಾ" ಎಂದು ಶುದ್ಧ ಮನಸ್ಸಿನಿಂದ ಘಟ್ಟಿಯಾಗಿ ಉಚ್ಚರಿಸಿದರೆ, ಈಗಲೇ, ಈ ಕ್ಷಣದಲ್ಲಿಯೇ, ಮುಕ್ತಿ ದೊರಕೊಳ್ಳುವುದು.

ಶ್ರೀರಾಮಚಂದ್ರೇ ರಮತಾಂ ಮನೋಮೇ।
ವಾಮಾಂಕರಾಮೇ ವಿಪದಾಂ ವಿರಾಮೇ।
ಜಿತಾರಿಕಾಮೇ ಪ್ರಣತೇಷ್ಟ ರಾಮೇ।
ಗುಣಾಭಿರಾಮೇ ಭುವನೈಕ ರಾಮೇ॥

ಸೀತಾದೇವಿಯನ್ನು ವಾಮಾಂಕದಲ್ಲಿ ಧರಿಸಿದ, ವಿಪತ್ತುಗಳನ್ನು ನಾಶಮಾಡುವ, ಕಾಮವೆಂಬ ಶತ್ರುವಿಗೆ ಧ್ವಂಸಕನಾದ, ಭಕ್ತರ ಇಷ್ಟಗಳನ್ನು ಸಲ್ಲಿಸುವ, ಸದ್ಗುಣಗಳಿಂದ ಶೋಭಿಸುವ, ಪ್ರಪಂಚಕ್ಕೆ ಏಕೈಕ ಸ್ವಾಮಿಯಾದ ಶ್ರೀರಾಮಚಂದ್ರನಲ್ಲಿ ನನ್ನ ಮನಸ್ಸು ರಮಿಸಲಿ.

ಶ್ರೀರಾಮಚಂದ್ರ ರಘುಪುಂಗವ ರಾಜವರ್ಯ।
ರಾಜೇಂದ್ರರಾಜ ಸುರನಾಯಕ ರಾಘವೇಶ।
ರಾಜಾಧಿರಾಜ ರಘುನಂದನ ರಾಮಭದ್ರ।
ದಾಸೋಽಸ್ಮ್ಯಹಂಚ ಭವತಶ್ಶರಣಾಗತೋಽಸ್ಮಿ॥

ರಘುಶ್ರೇಷ್ಠನೇ, ರಾಜಶ್ರೇಷ್ಠನೇ, ರಾಜಾಧಿ ರಾಜರುಗಳಿಗೆ ದೇವೇಂದ್ರನಂತಿರುವವನೇ, ರಾಮಭದ್ರನೇ ನಿನ್ನ ದಾಸನಾಗುತ್ತೇನೆ. ನಿನಗೆ ನಾನು ಶರಣಾಗತನಾಗುತ್ತೇನೆ.

ಶ್ರೀರಾಮಚಂದ್ರ ತವಕೀರ್ತಿ ಸುರದ್ರುಮಸ್ಯ |
ತಾರಾಗಣಸ್ಸುಮನಸಃ ಫಲಮಿಂದುಬಿಂಬಂ |
ಮೂಲಂ ಫಣಾಫಣಿಗತಂ ಗಗನಂಚ ಮಧ್ಯಂ |
ಶಾಖಾದಿಶೋ ಭುವನಮಂಡಲ ಮಾಲವಾಲಂ ||

ಶ್ರೀರಾಮಚಂದ್ರನೇ, ನಿನ್ನ ವಿಶ್ವವ್ಯಾಪಿಯಾದ "ಕೀರ್ತಿ" ಎಂಬ ಕಲ್ಪವೃಕ್ಷದ ಹೂವುಗಳು, ತಾರಾಗಣಗಳು. ಫಲವು ಚಂದ್ರಬಿಂಬವು. ಮೂಲವು ಪಾತಾಳದಲ್ಲಿರುವ ಆದಿಶೇಷನ ಹೆಡೆಯು. ಮಧ್ಯ ಭಾಗವೇ ಭೂಮ್ಯಾಕಾಶದ ನಡುವಣ ಪ್ರದೇಶ. ಶಾಖೆಗಳೇ (ಕೊಂಬೆಗಳೇ) ದಿಕ್ಕುಗಳು. ಆ ವೃಕ್ಷದ ಕಟ್ಟೆಯೇ ಭುವನ ಮಂಡಲ. (ಅಂದರೆ ಈ ಭೂಮಿಯಲ್ಲಿ ಗಿಡ ಬೆಳೆದಂತೆ ಈ ಭೂಮಿಯಿಂದಲೇ ಶ್ರೀರಾಮನ ಕೀರ್ತಿಯು ವಿಶ್ವ ವ್ಯಾಪಿಯಾಗಿ ವೃಕ್ಷದಂತೆ ಹರಡಿದೆ ಎಂದು ಭಾವ)

ಶ್ರೀರಾಮಸ್ಸಕಲೇಶ್ವರೋ ಮಮಪಿತಾ, ಮಾತಾಚ ಸೀತಾ, ಮಮ |
ಭ್ರಾತಾಬ್ರಹ್ಮ. ಸಖಾಪ್ರಭಂಜನಸುತಃ, ಪತ್ನೀವಿರಕ್ತಿಃ ಪ್ರಿಯಾ |
ವಿಶ್ವಾಮಿತ್ರ ವಿಭೀಷಣಾದಿ ವಶಗಾಮಿತ್ರಾಣಿ, ಭೋಧಸ್ತುತೋ |
ಭಕ್ತಿ. ಶ್ರೀಹರಿಸಂಗತಾ. ರತಿಸುಖಂ. ವೈಕುಂಠಮಸ್ಮತ್ಪದಂ ||

ಸಕಲರಿಗೂ ಒಡೆಯನಾದ ಶ್ರೀರಾಮಚಂದ್ರನು ನನ್ನ ತಂದೆಯು, ಸೀತಾದೇವಿಯು ನನ್ನ ತಾಯಿಯು, ನನ್ನ ಸಹೋದರನು ಬ್ರಹ್ಮನು, ನನ್ನ ಸ್ನೇಹಿತನು ಆಂಜನೇಯನು, ನನ್ನ ಪತ್ನಿಯು ನನಗೆ ಪ್ರಿಯವಾದ ವೈರಾಗ್ಯವು, ನನಗೆ ಸುಲಭವಾಗಿರುವ ವಿಶ್ವಾಮಿತ್ರ ವಿಭೀಷಣರು ನನ್ನ ಮಿತ್ರರು. ನನ್ನ ತಿಳುವಳಿಕೆಯೇ ಭಕ್ತಿಯು. ನನಗೆ ದೊರಕುವ ಶ್ರೀಹರಿ ಸಂಗವೇ ರತಿಸುಖವು. ನನ್ನ ಗಮ್ಯಸ್ಥಾನವೇ ವೈಕುಂಠವು.

ವಂದಾಮಹೇ ಚಂಡಕೋದಂಡ ಖಂಡನಂ |
ಜಾನಕೀ ಹೃದಯಾನಂದ ಚಂದನಂ ರಘುನಂದನಂ ||

ಜಾನಕೀ ಕಲ್ಯಾಣ ಕಾಲದಲ್ಲಿ, ಮಹೇಶ್ವರನ ಪ್ರಚಂಡ ಧನಸ್ಸನ್ನು ಖಂಡಿಸಿ, ಜಾನಕಿಯ ಹೃದಯಕ್ಕೆ ಆನಂದವನ್ನುಂಟುಮಾಡಿದ ಶ್ರೀರಾಮಚಂದ್ರನನ್ನು ವಂದಿಸುತ್ತೇನೆ.

ಜಾನಾತಿ ರಾಮ ತವನಾಮ ರುಚಿಂಮಹೇಶೋ |
ಜಾನಾತಿ ಗೌತಮಸತೀ ಚರಣಪ್ರಭಾವಂ |
ಜಾನಾತಿ ದೋರ್ಬಲ ಪರಾಕ್ರಮ ಮೀಶಚಾಪೋ |
ಜಾನಾತ್ಯಮೋಘಪಟು ಬಾಣಗತಿಂ ಪಯೋಧಿಃ ||

ಶ್ರೀರಾಮನೇ, ನಿನ್ನ ನಾಮದ ರುಚಿ, ಸದಾ ನಿನ್ನ ತಾರಕನಾಮ ಜಪವನ್ನು ಮಾಡುವ ಮಹೇಶ್ವರನಿಗೆ ಚೆನ್ನಾಗಿ ಗೊತ್ತು. ನಿನ್ನ ಚರಣ ಪ್ರಭಾವವನ್ನು ಶಾಪದಿಂದ ಕಲ್ಲಾಗಿದ್ದು ನಿನ್ನ ಚರಣದ ಸೋಂಕಿನಿಂದ, ಪುನಃ ಸ್ತ್ರೀತ್ವವನ್ನು ಪಡೆದ ಗೌತಮಸತಿ ಅಹಲ್ಯೆಯು ಚೆನ್ನಾಗಿ ತಿಳಿದಿರುತ್ತಾಳೆ. ಸೀತಾಪಾಣಿಗ್ರಹಣ ಸಂದರ್ಭದಲ್ಲಿ ನೀನು ಹಿಡಿದು ಬಗ್ಗಿಸಿದ ಹರನ ಧನುಸ್ಸು, ನಿನ್ನ ಬಾಹುಬಲದಿಂದ ಭಗ್ನಗೊಳಿಸಲ್ಪಟ್ಟಿತು. ಆ ಧನುಸ್ಸು ನಿನ್ನ ಬಾಹುಬಲವನ್ನು ಚೆನ್ನಾಗಿ ಅರಿತಿರುತ್ತೆ. ನೀನು ಸೇತುಬಂಧನ ಕಾಲದಲ್ಲಿ ಸಮುದ್ರದ ದರ್ಪವನ್ನು ನಿನ್ನ ಬಾಣ ಪ್ರಯೋಗದಿಂದ ಅಡಗಿಸಿದೆ. ಆ ಸಮುದ್ರಕ್ಕೆ ನಿನ್ನ ಬಾಣದ ವೇಗದ ಅರಿವು ಚೆನ್ನಾಗಿ ಆಗಿರುತ್ತೆ.

ಬ್ರಹ್ಮಾದ್ಯಾಮರಸಿದ್ಧ ಜನ್ಮಭುವನಂ ಯನ್ನಾಭಿಪಂಕೇರುಹಂ |
ಶ್ರೀನಿರ್ವಾಣನಿಕೇತನಂ ರಘುವರಂ ಲೋಕೈಕ ಶಯ್ಯಾಗೃಹಂ |
ಯದ್ವಕ್ಷಃ ಕಮಲಾವಿಲಾಸಭವನಂ ಯನ್ನಾಮಮಂತ್ರಂ ಸತಾಂ |
ವಾಸಾಗಾರಮಖಂಡಮಂಡಲನಿಧಿಃ ಪಾಯಾತ್ಸವೋ ರಾಘವಃ ||

ಬ್ರಹ್ಮಾದಿ ದೇವತೆಗಳಿಗೂ, ಸಿದ್ಧರಿಗೂ, ಯಾವ ನಿನ್ನ ನಾಭೀಕಮಲವು ಆಶ್ರಯಸ್ಥಾನವೋ, ಯಾರು ಮೋಕ್ಷದ ಗುರಿಯೋ, ರಘುಶ್ರೇಷ್ಠನೆನಿಸಿ ಯಾರು ಮೆರೆದರೋ, ಭೂಮಂಡಲವೇ ಯಾರಿಗೆ ಶಯ್ಯಾಗೃಹವಾಗಿದೆಯೋ, ಅಂದರೆ ಯಾರಿಂದ ಪ್ರಪಂಚವೆಲ್ಲ ಆವರಿಸಲ್ಪಟ್ಟಿದೆಯೋ, ಯಾರ ವಕ್ಷಸ್ಥಳದಲ್ಲಿ ಲಕ್ಷ್ಮಿಯು ಮುದದಿಂದ ನರ್ತಿಸುವಳೋ, ಯಾರ ನಾಮವು ಸತ್ಪುರುಷರಿಗೆ ಆಶ್ರಯವೋ, ಯಾರು ಸಮಸ್ತ ಪ್ರಪಂಚಕ್ಕೆ ನಿಧಿಯಂತಿರುವರೋ, ಅಂತಹ ಶ್ರೀರಾಮಚಂದ್ರನು ನಮ್ಮನ್ನು ಕಾಪಾಡಲಿ.

ನೀಲಾಬ್ದ ಬೃಂದ ಸದೃಶಂ ಪರಿಪೂರ್ಣದೇಹಂ |
ದಿಕ್ಪಾಲಕಾದಿ ಸುರಸೇವಿತ ಪಾದಪದ್ಮಂ |
ಪೀತಾಂಬರಂ ಕನಕಮಂಡನ ಶೋಭಿತಾಂಗಂ |
ಸೀತಾಪತಿಂ ರಘುಪತಿಂ ಸತತಂ ಭಜಾಮಿ ||

ನೀಲಮೇಘಕ್ಕೆ ಸದೃಶವಾದ ಪರಿಪೂರ್ಣ ಶರೀರವುಳ್ಳ, ಅಷ್ಟದಿಕ್ಪಾಲಕರೇ ಮುಂತಾದ ದೇವತೆಗಳಿಂದ ಸೇವಿಸಲ್ಪಡುವ ಪಾದಕಮಲಗಳುಳ್ಳ, ಪೀತಾಂಬರಧಾರಿಯಾದ, ಸುವರ್ಣ ಆಭರಣಗಳಿಂದ ಶೋಭಿತನಾದ, ಸೀತಾಪತಿಯಾದ, ರಘುಪುಂಗವನಾದ ಶ್ರೀರಾಮನನ್ನು ಯಾವಾಗಲೂ ನಾನು ಭಜಿಸುತ್ತೇನೆ.

ಬ್ರಹ್ಮಾಮೃತಾನಂದ ಫಲಪ್ರದಾಯಿನಂ |
ವೇದಾಂತವಿಜ್ಞಾನ ಸುಗಂಧಪುಷ್ಪಿತಂ |
ಸೀತಾಶುಭಾಂಗಾಂಚಿತ ಬಾಹುಶಾಖಿನಂ |
ಶ್ರೀರಾಮ ಕಲ್ಪದ್ರುಮಮಾಶ್ರಯಾಮಃ ||

ಬ್ರಹ್ಮಾನಂದವೆಂಬ ಅಮೃತಫಲವನ್ನು ಕೊಡತಕ್ಕದ್ದಾಗಿಯೂ, ವೇದಾಂತ ವಿಜ್ಞಾನವೆಂಬ ಪರಿಮಳ ಪುಷ್ಪದಿಂದ ಕೂಡಿಯೂ, ಸೀತಾದೇವಿಯ ಮಂಗಳದೇಹವನ್ನು ಆವರಿಸಿರುವ ಬಾಹುಗಳೆಂಬ ರೆಂಬೆಗಳಿಂದ ಶೋಭಿಸುತ್ತಲೂ ಇರುವ ಶ್ರೀರಾಮಚಂದ್ರನೆಂಬ ಕಲ್ಪವೃಕ್ಷವನ್ನು ನಾವು ಆಶ್ರಯಿಸೋಣ.

ಕನಕನಿಕರಭಾಸಾ ಸೀತಯಾಲಿಂಗಿತಾಂಗೋ |
ನವಕುವಲಯದಳಶ್ಯಾಮ ವರ್ಣಾಭಿರಾಮಃ |
ಅಭಿನವಯುತ ವಿದ್ಯುನ್ಮಂದಿತೋ ಮೇಘ ಖಂಡ |
ಶ್ಯಮಯತು ಮಮ ತಾಪಂ ಸರ್ವದಾ ರಾಮಚಂದ್ರಃ ||

ನೀಲಮೇಘವು ಎಳೆಯ ಮಿಂಚಿನ ಬಳ್ಳಿಯಿಂದ ಶೋಭಾಯಮಾನವಾಗುವಂತೆ, ಸುವರ್ಣ ಜ್ಯೋತಿಸ್ಸಿನಿಂದ ಕೂಡಿದ ಸೀತಾದೇವಿಯ ಶರೀರವನ್ನು ಆಲಂಗಿಸಿಕೊಂಡಿರುವ, ನೀಲಮೇಘಶ್ಯಾಮನಾದ ಶ್ರೀರಾಮನು ಶೋಭಿಸುತ್ತಿರಲು, ಆ ರಾಮಚಂದ್ರಮೂರ್ತಿಯು ನನ್ನ ತಾಪತ್ರಯಗಳನ್ನು ಸರ್ವದಾ ಶಮನ ಮಾಡಲಿ.

ವಿಮಲ ಕಮಲನೇತ್ರಂ ವಿಸ್ಫುರನ್ನೀಲಗಾತ್ರಂ |
ತಪನ ಕುಲಪವಿತ್ರಂ ದಾನವ ಧ್ವಾಂತ ಮಿತ್ರಂ |
ನಿಗಮ ಕುಸುಮ ಸೂತ್ರಂ ಮೈಥಿಲೀ ಮೋಹಪಾತ್ರಂ |
ದಶರಥವರಪುತ್ರಂ ನೌಮಿ ರಾಮಾಖ್ಯ ಮಿತ್ರಂ ||

ಪರಿಶುದ್ಧನೂ, ಕಮಲಾಕ್ಷನೂ, ಪ್ರಕಾಶಮಾನವಾದ ನೀಲ ಶರೀರನೂ, ತನ್ನ ಅವತಾರದಿಂದ ಸೂರ್ಯವಂಶ ವನ್ನೇ ಪವಿತ್ರ ಮಾಡಿದವನೂ, ರಾಕ್ಷಸರೆಂಬ ಕತ್ತಲೆಗೆ ಸೂರ್ಯನಂತಿರುವವನೂ, ವೇದಗಳೆಂಬ ಪುಷ್ಪಗಳಿಗೆ ಆಧಾರವಾದ ದಾರದಂತಿರುವವನೂ, ಸೀತಾಮೋಹಪಾತ್ರನೂ, ದಶರಥನ ವರಪುತ್ರನೂ ಆದ ಶ್ರೀರಾಮನೆಂಬ ಸೂರ್ಯನನ್ನು ನಮಿಸುತ್ತೇನೆ.

ಸೀತಾ ಮನೋ ಮಾನಸರಾಜಹಂಸಃ |
ಸಂಸಾರ ಸಂತಾಪ ವಿನಾಶಹೇತುಃ |
ಶ್ರೀರಾಮ ದೈತ್ಯಾಂತಕ ಶಾಂತರೂಪ |
ಶ್ರೀತಾರಕಬ್ರಹ್ಮ ನಮೋ ನಮಸ್ತೇ ||

ಸೀತಾದೇವಿಯ ಮನಸ್ಸೆಂಬ ಮಾನಸಸರೋವರಕ್ಕೆ, ಶ್ರೇಷ್ಠ ಹಂಸಪಕ್ಷಿಯಂತೆ ಶೋಭಿಸುವ, ಸಂಸಾರ ದುಃಖವಿನಾಶಕ್ಕೆ ಕಾರಣನಾದ, ರಾಕ್ಷಸನಾಶಕನಾದ, ಶಾಂತಮೂರ್ತಿಯಾದ, ಶ್ರೀ ತಾರಕಬ್ರಹ್ಮ, ನಿನಗೆ ನಮಸ್ಕಾರವು.

ಕದಾವಾ ಸಾಕೇತೇ ವಿಮಲ ಸರಯೂತೀರಪುಳಿನೇ |
ಸಮಾಸೀನಶ್ರೀಮದ್ರಘುಪತಿ ಪದಾಬ್ಜೇ ಹೃದಿ ಭಜನ್ |
ಅಯೇ ರಾಮಸ್ವಾಮಿನ್ ಜನಕತನಯಾ ವಲ್ಲಭವಿಭೋ |
ಪ್ರಸೀದೇತಿ ಕ್ರೋಶನ್ನಿಮಿಷಮಿವ ನೇಷ್ಯಾಮಿದಿವಸಾನ್ ||

ಒಂದ್ಕೊಂದು ಬಾರಿ ಅಯೋಧ್ಯೆಯಲ್ಲಿ ಪರಿಶುದ್ಧವಾದ ಸರಯೂನದಿ ತೀರದ ಮರಳು ರಾಶಿಯಮೇಲೆ ಕುಳಿತಿರುತ್ತಿದ್ದ ರಘುಶ್ರೇಷ್ಠನಾದ ಆ ಶ್ರೀರಾಮಮೂರ್ತಿಯ ಪಾದಕಮಲಗಳನ್ನು ಮನಸ್ಸಿನಲ್ಲಿ ಧ್ಯಾನ ಮಾಡುತ್ತೇನೆ. ಮತ್ತು ಆ ಶ್ರೀರಾಮಮೂರ್ತಿಯನ್ನು "ಹೇ ರಾಮಚಂದ್ರ, ಜಾನಕೀರಮಣ!, ನನ್ನಸ್ವಾಮಿ!, ಪ್ರಸನ್ನನಾಗು, ಪ್ರಸನ್ನನಾಗು" ಎಂದು ಆರ್ತಧ್ವನಿಯಿಂದ ಪ್ರಾರ್ಥಿಸುತ್ತೇನೆ. ಇದರಿಂದ ಉಂಟಾಗುವ ಆನಂದ ದಿಂದ ನನಗೆ ದಿನಗಳು ನಿಮಿಷದಂತೆ ಕಳೆಯುತ್ತವೆ.

ಕದಾವಾ ಸಾಕೇತೇ ತರುಣ ತುಲಸೀ ಕಾನನವನೇ |
ನಿವಿಷ್ಟಸ್ತಂ ಪಶ್ಯನ್ನವಿದಿತ ವಿಶಾಲೋರ್ಧ್ವತಿಲಕಂ |
ಅಯೇ ಸೀತಾನಾಥ ಸ್ಮೃತಿಜನಪತೇ ದಾನವಜಯೀ |
ಪ್ರಸೀದೇತಿ ಕ್ರೋಶನ್ನಿಮಿಷಮಿವ ನೇಷ್ಯಾಮಿ ದಿವಸಾನ್ ||

ಒಂದೊಂದು ಬಾರಿ ಅಯೋಧ್ಯೆಯ ಎಳೆಯ ತುಳಸಿಯ ವನದಲ್ಲಿ ಪ್ರವೇಶಿಸಿ ಅಲ್ಲಿ ಮರೆಯಾಗಿ ಸಂಚರಿಸು ತ್ತಿರುವ, ವಿಶಾಲವಾದ ಊರ್ಧ್ವತಿಲಕದಿಂದ ಕೂಡಿದ ಶ್ರೀರಾಮಮೂರ್ತಿಯನ್ನು ಧ್ಯಾನಿಸಿ, ಆ ರಾಮಚಂದ್ರ ನನ್ನು, "ಎಲೈ ಸೀತಾಪತಿಯೇ, ಧ್ಯಾನಿಸುವವರ ಸ್ವಾಮಿಯೇ, ದಾನವಾಂತಕ, ಪ್ರಸನ್ನನಾಗು ಪ್ರಸನ್ನನಾಗು" ಎಂದು ಆರ್ತಧ್ವನಿಯಿಂದ ಕೂಗಿ ಹೇಳುತ್ತಿದ್ದರೆ, ನನಗೆ ದಿವಸಗಳು ನಿಮಿಷದಂತೆ ಕಳೆದುಹೋಗುತ್ತವೆ.

ಕದಾವಾ ಸಾಕೇತೇ ಮಣಿಖಚಿತ ಸಿಂಹಾಸನತಲೇ |
ಸಮಾಸೀನಂ ರಾಮಂ ಜನಕತನಯಾಲಿಂಗಿತ ತನುಂ |
ಅಯೇ ಸೀತಾರಾಮ ತ್ರುಟಿತಹರಧನ್ವಿನ್ ರಘುಪತೇ |
ಪ್ರಸೀದೇತಿ ಕ್ರೋಶನ್ನಿಮಿಷಮಿವ ನೇಷ್ಯಾಮಿ ದಿವಸಾನ್ ||

ಒಂದೊಂದು ಬಾರಿ ಅಯೋಧ್ಯೆಯಲ್ಲಿ ನವರತ್ನಖಚಿತ ಸಿಂಹಾಸನದ ಮೇಲೆ ಕುಳಿತು, ಸೀತಾದೇವಿಯ ಆಲಿಂಗನದಿಂದ ಪ್ರಕಾಶಿಸುತ್ತಿರುವ, ಶ್ರೀರಾಮಮೂರ್ತಿಯನ್ನು ಧ್ಯಾನಿಸಿ, ಆ ರಾಮಚಂದ್ರನನ್ನು "ಎಲೈ ಸೀತಾರಾಮ" ಶಿವನ ಕಾರ್ಮುಕವನ್ನು ಭಂಜಿಸಿದವನೇ, ರಘುಪತೇ, "ಪ್ರಸನ್ನನಾಗು ಪ್ರಸನ್ನನಾಗು" ಎಂದು ಆರ್ತಧ್ವನಿಗೈಯ್ಯುತ್ತಿದ್ದರೆ, ನನಗೆ ದಿವಸಗಳು ನಿಮಿಷದಂತೆ ಕಳೆದುಹೋಗುತ್ತವೆ.

ಮಾರ್ಗೇ ಮಾರ್ಗೇ ಶಾಖಿನಾಂ ರತ್ನವೇದೀ |
ವೇದ್ಯಾಂ ವೇದ್ಯಾಂ ಕಿನ್ನರೀ ಬೃಂದಗೀತಂ |
ಗೀತೇ ಗೀತೇ ಮಂಜುಳಾಲಾಪಗೋಷ್ಠೀ |
ಗೋಷ್ಠ್ಯಾಂ ಗೋಷ್ಠ್ಯಾಂ ತ್ವತ್ಕಥಾ ರಾಮಚಂದ್ರ ||

ದಾರಿಯುದ್ದಕ್ಕೂ ವೃಕ್ಷಶಾಖೆಗಳು, ಶಾಖೆಗಳ ಕೆಳಗೆ ರತ್ನಮಯವಾದ ಜಗಲಿಗಳು, ಜಗಲಿ ಜಗಲಿಗಳಲ್ಲೂ ಕಿನ್ನರಿಯರ ಸಾಮೂಹಿಕ ಹಾಡುಗಳು, ಪ್ರತಿ ಹಾಡುಗಳಲ್ಲೂ, ಆ ಹಾಡುವ ಸಾರಾಂಶವನ್ನು ತಿಳಿಯಿಸುವ ಭಕ್ತರ ಸಂಘ, ಪ್ರತಿ ಸಂಘದಲ್ಲೂ ಎಲೈ ಶ್ರೀರಾಮಚಂದ್ರಮೂರ್ತಿ, ನಿನ್ನ ಗುಣ ಕಥನ.

ವೃಕ್ಷೇ ವೃಕ್ಷೇ ವೀಕ್ಷಿತಾಃ ಪಕ್ಷಿಸಂಘಾ |
ಸಂಘೇ ಸಂಘೇ ಮಂಜುಲಾಮೋದವಾಕ್ಯಂ |
ವಾಕ್ಯೇ ವಾಕ್ಯೇ ಮಂಜುಲಾಲಾಪಗೋಷ್ಠೀ |
ಗೋಷ್ಠ್ಯಾಂ ಗೋಷ್ಠ್ಯಾಂ ತ್ವತ್ಕಥಾ ರಾಮಚಂದ್ರ ||

ಪ್ರತಿವೃಕ್ಷದಲ್ಲೂ ಪಕ್ಷಿಗಳ ಸಮೂಹ, ಪ್ರತಿ ಸಮೂಹದಲ್ಲೂ ಮಂಜುಳ ಧ್ವನಿಯ ಮೋದವಾಕ್ಯ, ಪ್ರತಿ ವಾಕ್ಯದಲ್ಲೂ ಮಂಜುಳ ಆಲಾಪಗೋಷ್ಠಿ, ಪ್ರತಿಗೋಷ್ಠಿಯಲ್ಲೂ ರಾಮಚಂದ್ರಾ, ನಿನ್ನ ಗುಣಕಥನ.

ದುರಿತ ತಿಮಿರ ಚಂದ್ರೋ ದುಷ್ಟಕಂಜಾತಚಂದ್ರಃ |
ಸುರಕುವಲಯಚಂದ್ರಃ ಸೂರ್ಯವಂಶಾಬ್ಧಿಚಂದ್ರಃ |
ಸ್ವಜನನಿವಹ ಚಂದ್ರಃ ಶತ್ರುರಾಜೀವಚಂದ್ರಃ |
ಪ್ರಣತ ಕುಮುದ ಚಂದ್ರಃ ಪಾತುಮಾಂ ರಾಮಚಂದ್ರಃ ||

ಪಾಪಗಳೆಂಬ ಕತ್ತಲೆಗೆ ಪ್ರಕಾಶಮಾನವಾದ ಚಂದ್ರನಂತಿರುವ, ದುಸ್ಟರೆಂಬ ಕಮಲಗಳಿಗೆ ಅವರನ್ನು ನಾಶಮಾಡುವ ಚಂದ್ರನಂತಿರುವ, ದೇವತೆಗಳ ಕುಲವೆಂಬ ನೈದಿಲೆಗೆ ಆಹ್ಲಾದಕರನಾದ ಚಂದ್ರನಂತಿರುವ, ಸೂರ್ಯವಂಶವೆಂಬ ಸಮುದ್ರಕ್ಕೆ ಆನಂದದಾಯಕನಾದ ಪೂರ್ಣಿಮಾ ಚಂದ್ರನಂತಿರುವ, ಸ್ವಜನರಿಗೆ ಚಂದ್ರನೋಪಾದಿಯಲ್ಲಿ ಆಹ್ಲಾದಕರನಾದ, ಶತ್ರುಗಳೆಂಬ ಕಮಲಕ್ಕೆ ಅವರನ್ನು ಕುಗ್ಗಿಸುವ ಚಂದ್ರನಂತಿರುವ, ಆಶ್ರಿತ ಜನರೆಂಬ ನೈದಿಲೆಯನ್ನು ಅರಳಿಸುವ ಚಂದ್ರನಂತಿರುವ, ಶ್ರೀರಾಮಚಂದ್ರನು ನಮ್ಮನ್ನು ಕಾಪಾಡಲಿ.

ಉತ್ಫುಲ್ಲಾಮಲ ಕೋಮಲೋತ್ಪಲದಳಶ್ಯಾಮಾಯ ಸೀತಾಮನ |
ಶ್ಚಂದ್ರಾಯ ಪ್ರಶಮಾಯ, ನಿರ್ಮಲಗುಣಾರಾಮಾಯ ರಾಮಾತ್ಮನೇ |
ಧ್ಯಾನಾರೂಢ ಮುನೀಂದ್ರ ಮಾನಸಸರೋಹಂಸಾಯ ಸಂಸಾರವಿ |
ಧ್ವಂಸಾಯಾದ್ಭುತ ತೇಜಸೇ ರಘುಕುಲೋತ್ತಂಸಾಯ ಪುಂಸೇನಮಃ ||

ಅರಳಿರುವ, ಶುದ್ಧವೂ ಕೋಮಲವೂ ಆದ ನೈದಿಲೆಯ ದಳದಂತೆ ಶಾಮಲ ಶರೀರದಿಂದೊಪ್ಪುವ, ಸೀತಾದೇವಿಯ ಮನಸ್ಸನ್ನು ಆಹ್ಲಾದಪಡಿಸುವ, ಪ್ರಶಾಂತ ಮೂರ್ತಿಯಾದ, ನಿರ್ಮಲಗುಣಗಳಿಂದ ರಂಜಿಸುವ, ಧ್ಯಾನಾರೂಢರಾದ ಮುನಿಶ್ರೇಷ್ಠರ ಮಾನಸ ಸರೋವರದಲ್ಲಿ ಹಂಸದಂತೆ ಶುದ್ಧವಾಗಿ ಕಾಣುವ, ಸಂಸಾರ ದುಃಖನಾಶಕನಾದ, ಅದ್ಭುತತೇಜಸ್ಸಿನಿಂದ ಕೂಡಿದ, ಪುರುಷೋತ್ತಮನೆನಿಸಿ, ರಘುಕುಲಾಗ್ರಣಿಯಾದ ಶ್ರೀರಾಮಚಂದ್ರನಿಗೆ ನಮಸ್ಕಾರವು.

ವಲ್ಲೀಪ್ರವಾಳ ನವಪಲ್ಲವ ಪಾದಪದ್ಮಂ |
ಕಂಜೇಕ್ಷಣಂ ಜಲಜ ನೀಲಸರೋರುಹಾಭಂ |
ಸೀಮಂತಿನೀ ನಯನಮೋಹನ ಮೂಲಮಂತ್ರಂ |
ರಾಮಂ ನಮಾಮಿ ಮುನಿಮಾನಸ ರಾಜಹಂಸಂ ||

ಎಳೆಯ ಹವಳದಂತೆಯೂ, ಹೊಸ ಚಿಗುರಿನಂತೆಯೂ, ಕೆಂಪಗಿರುವ ಪಾದಕಮಲಗಳಿಂದಲೂ, ಕಮಲದಂತಿರುವ ಕಣ್ಣುಗಳಿಂದಲೂ ಕೂಡಿ, ನೈದಿಲೆ ಬಣ್ಣದಂತೆ ಶರೀರ ಕಾಂತಿಯುಳ್ಳವನೂ, ಸೌಭಾಗ್ಯದ ಅಧಿದೈವವೂ, ಸೀತಾದೇವಿಯ ಕಣ್ಣುಗಳಿಗೆ ಅತಿ ಮೋಹಕನೂ ಆದ, 'ಹಂಸ'ವೆಂಬ ಮೂಲಮಂತ್ರ ಸ್ವರೂಪಿಯಾಗಿಯೂ, ಮುನಿಗಳ ಮನಸ್ಸಿನಲ್ಲಿ ಸರ್ವದಾ ಕ್ರೀಡಿಸುತ್ತಿರುವವನಾಗಿಯೂ ಇರುವ ಶ್ರೀರಾಮನನ್ನು ನಮಸ್ಕರಿಸುತ್ತೇನೆ.

ಅಲಂವಿವಾದೇನ ನಮಾನುಷೋಯಂ |
ರಾಮಾತ್ಮನಾ ರಾಕ್ಷಸಮರ್ದನಾಯ |
ಭುಜಂಗ ಶಯ್ಯಾಂ ಪರಿಮುಚ್ಯಸಾಕ್ಷಾ |
ನ್ನಾರಾಯಣೋ ಭೂತಲ ಮಾಜಗಾಮ ||

ವಿವಾದವಿನ್ನು ಸಾಕು. ಜಿಜ್ಞಾಸುಗಳು ರಾಮನನ್ನು ಅಮಾನುಷ ಪುರುಷನೆಂದೂ, ರಾಕ್ಷಸ ಸಂಹಾರಾರ್ಥವಾಗಿ ಆದಿಶೇಷನ ತಲ್ಪವನ್ನು ಬಿಟ್ಟು ಈ ಭೂಮಿಗೆ ಬಂದ ಸಾಕ್ಷಾತ್ ನಾರಾಯಣನೇ ಎಂದೂ ಹೇಳುತ್ತಾರೆ.

ರಾಮೇತಿ ವರ್ಣದ್ವಯಮಾದರೇಣ |
ಸದಾಸ್ಮರ್ರ ಮುಕ್ತಿಮುಪೈತಿಜಂತುಃ |
ಕಲೌಯುಗೇ ಕಲ್ಮಷಮಾನುಷಾಣಾ |
ಮನ್ಯತ್ರಧರ್ಮೇ ಖಲುನಾಧಿಕಾರಃ ||

'ರಾಮ' ಎಂಬ ಎರಡು ಅಕ್ಷರಗಳನ್ನು ಆದರದಿಂದ ಉಚ್ಚರಿಸುವುದರಿಂದ ಪ್ರಾಣಿಗಳು ಮುಕ್ತಿಯನ್ನು ಪಡೆಯುತ್ತವೆ. ಕಲಿಯುಗದಲ್ಲಿ ಕಲುಷಿತ ಹೃದಯನಾದ ಮನುಷ್ಯನಿಗೆ ಈ ನಾಮ ಜಪವಲ್ಲದೆ ಬೇರೆ ಮಾರ್ಗವೇ ಇಲ್ಲ. ಅಲ್ಲದೆ ಬೇರೆ ಮಾರ್ಗದಿಂದ ಮುಕ್ತಿ ಪಡೆಯಲು ಅಧಿಕಾರವೂ ಇಲ್ಲ. ಅಂದರೆ ಬೇರೆ ಮಾರ್ಗಗಳನ್ನು ಅನುಸರಿಸುವುದು ಕಲಿಯುಗದಲ್ಲಿ ಅತಿ ಕಷ್ಟವೆಂದು ಅಭಿಪ್ರಾಯ.

ಭಕ್ತಪ್ರಿಯಂ ಭಕ್ತಸಮಾಧಿಗಮ್ಯಂ |
ಚಿಂತಾಹರಂ ಚಿಂತಿತ ಕಾಮಧೇನುಂ |
ಸೂರ್ಯೇಂದು ಕೋಟಿದ್ಯುತಿ ಭಾಸ್ವರಂತಂ |
ರಾಮಂ ಭಜೇ ರಾಘವ ರಾಮಚಂದ್ರಂ ||

ಭಕ್ತರಿಗೆ ಪ್ರಿಯನಾಗಿಯೂ, ಭಕ್ತರ ಧ್ಯಾನಕ್ಕೆ ಸಿಕ್ಕತಕ್ಕವನಾಗಿಯೂ, ಚಿಂತೆಗಳನ್ನೆಲ್ಲಾ ನಾಶಮಾಡತಕ್ಕವನಾಗಿಯೂ, ಕಾಮಿತಾರ್ಥಪ್ರದನಾಗಿಯೂ, ಕೋಟಿಸೂರ್ಯ ಸದೃಶ ಕಾಂತಿಯುಕ್ತನಾಗಿಯೂ ಇರುವ ರಾಮಚಂದ್ರನನ್ನು ನಾನು ಭಜಿಸುತ್ತೇನೆ.

ರಾಮಾಭಿರಾಮಂ ನಯನಾಭಿರಾಮಂ |
ವಾಚಾಭಿರಾಮಂ ವದನಾಭಿರಾಮಂ |
ಸರ್ವಾಭಿರಾಮಂಚ ಸದಾಭಿರಾಮಂ |
ವಂದೇ ಸದಾ ದಾಶರಥಿಂಚ ರಾಮಂ ||

ಜನ ಮನೋಹರನಾದ, ಕಣ್ಣುಗಳಿಗೆ ಆನಂದವನ್ನುಂಟುಮಾಡುವ, ಮೃದುಮಧುರ ಭಾಷಿತನೂ, ಸುಂದರನೂ, ಸರ್ವರಿಗೂ ಸದಾ ಮೋಹಕನೂ, ದಶರಥಸುತನೂ ಆದ ಶ್ರೀರಾಮನನ್ನು ಸದಾ ವಂದಿಸುತ್ತೇನೆ.

ವಂದೇ ಮಹೇಶ್ವರ ಮಹಾವರದಾನಗರ್ವ |
ಲಂಕಾಧಿನಾಥ ಕುಲಪರ್ವತನಾಶವಜ್ರಂ |
ತಂ ರಾವಣಾನುಜ ಮರುತ್ಸುತ ಭಾನುಸೂನು |
ದಿಕ್ಪಾಲ ಸೋದರಗಣೈಃ ಪರಿಸೇವ್ಯಮಾನಂ ||

ಮಹೇಶ್ವರನಿಂದ ವರಗಳನ್ನು ಪಡೆದು, ಅತಿ ಗರ್ವದಿಂದ ಮೆರೆದ ಲಂಕಾಧಿಪತಿಯಾದ ರಾವಣನ ವಂಶವೆಂಬ ಕುಲಗಿರಿಗಳಿಗೆ ವಜ್ರಾಯುಧದೋಪಾದಿಯಲ್ಲಿ ಆ ರಾಕ್ಷಸ ವಂಶವನ್ನೇ ನಿರ್ಮೂಲಗೊಳಿಸದ ಮತ್ತು ವಿಭೀಷಣ ಆಂಜನೇಯ ಸುಗ್ರೀವ ಅಷ್ಟದಿಕ್ಪಾಲರುಗಳು ಲಕ್ಷ್ಮಣ ಭರತ ಶತ್ರುಘ್ನರುಗಳಿಂದ ಸೇವಿತನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ವನೇಚರಾಮೋ ವಸುಧಾಂಚರಾಮೋ |
ನದೀಸ್ತರಾಮೋ ನಭಯಂ ಸ್ಮರಾಮಃ |
ಇತಿ ಬ್ರುವಂತೋ ವಿಪಿನೇ ಕಿರಾತಾಃ |
ಮುಕ್ತಿಂಗತಾ ರಾಮಪದಾನುಷಂಗಾತ್ ||

ಕಾಡಿನಲ್ಲಿ ತಿರುಗೋಣ, ಭೂಮಿಯಲ್ಲಿ ಚಲಿಸೋಣ, ನದಿಯನ್ನು ದಾಟೋಣ, ಭಯವೆಂಬುದನ್ನು ಕೊಂಚವೂ ಸ್ಮರಿಸದೇ ಇರೋಣ, ಎಂಬುದಾಗಿ ಕಿರಾತರುಗಳು ಕಾಡಿನಲ್ಲಿ ತಮ್ಮ ವೃತ್ತಿಗೆ ಸಂಬಂಧಿಸಿದ ಕೆಲಸ ನಿರ್ವಹಣೆಗಾಗಿ, ಆಡುತ್ತಿದ್ದ ಮಾತುಗಳಲ್ಲಿ ಅನುಷಂಗಿಕವಾಗಿ, 'ರಾಮ' ಶಬ್ದವು ಉಚ್ಚರಿತವಾದ್ದರಿಂದ ಆ ಕಿರಾತರು ಮುಕ್ತಿಯನ್ನು ಪಡೆದರು. (ಅಂದರೆ 'ರಾಮ' ನಾಮ ಪಠನವು ಅತಿ ಶ್ರೇಯಸ್ಕರವಾದುದೆಂಬುದನ್ನು ತಿಳಿಸಲು ಹೀಗೆ ಉತ್ಪ್ರೇಕ್ಷೆಯಿಂದ ತಿಳಿಸಿದೆ.)

ಅಜ್ಞಾನ ಸಂಭವ ಭವಾಂಬುಧಿ ಬಾಡಬಾಗ್ನಿಃ|
ಅವ್ಯಕ್ತತತ್ತ್ವ ನಿಕರ ಪ್ರಣವಾಧಿರೂಢಃ|
ಶ್ರೀಜಾನಕೀಸಹ ಚರೋಮಮಮಾ ನಸಾಂತಃ|
ಪ್ರಾಣ ಪ್ರಯಾಣಸಮಯೇ ಮಮ ಸನ್ನಿಧತ್ತಾಂ||

ಆತ್ಮನಿಗೆ ಅಜ್ಞಾನದಿಂದ ಶರೀರಾದಿಗಳಲ್ಲಿ ನಾನು ಎಂಬ ಅನಾತ್ಮ ಭ್ರಾಂತಿಯುಂಟಾಗಿದೆ. ಈ ಶರೀರಾದಿಗಳಲ್ಲಿ ನಾನು ಎಂಬ ಬುದ್ಧಿಯಿಂದಲೇ ಜನನ, ಮರಣ, ಪ್ರವಾಹರೂಪವಾದ ಸಂಸಾರವು ಪ್ರಾಪ್ತವಾಗಿದೆ. ಇಂತಹ ಅನಾತ್ಮ ತತ್ವವನ್ನು ನಾಶಪಡಿಸಲು, ಪ್ರಣವಸ್ವರೂಪಿಯಾದ ಶ್ರೀರಾಮಚಂದ್ರನ ಅವ್ಯಕ್ತ ತತ್ತ್ವವನ್ನು ಬೋಧಿಸಬೇಕು (ಅಂದರೆ ಆತ್ಮನು ಯಥಾರ್ಥವಾಗಿ ಶ್ರೀರಾಮರೂಪಿಯಾದ ಪರಬ್ರಹ್ಮನೇ ಎಂದೂ, ಅಯಥಾರ್ಥವಾಗಿ ದೇಹಾದಿಗಳನ್ನು ಆತ್ಮನೆಂದು ತಿಳಿದಿರುವುದು ಕೇವಲ ಭ್ರಾಂತಿ ಎಂದೂ ಅವ್ಯಕ್ತ ತತ್ತ್ವವನ್ನು ಬೋಧಿಸಬೇಕು.) ಹೀಗೆ ಬೋಧಿಸಿದರೆ ಸಂಸಾರ ಸಾಗರವು ಪರಬ್ರಹ್ಮರೂಪಿ ಶ್ರೀರಾಮನೆಂಬ ಬಾಡಬಾಗ್ನಿಯಿಂದ ಶೋಷಿತವಾಗುತ್ತದೆ. ಅಂತಹ ಪರಬ್ರಹ್ಮರೂಪಿ ಶ್ರೀರಾಮಚಂದ್ರನು ಸೀತಾ ಸಮೇತನಾಗಿ ನನ್ನ ಕೊನೆಗಾಲದಲ್ಲಿ ನನ್ನ ಸಮೀಪದಲ್ಲಿಯೂ, ನನ್ನ .ಹೃದಯದಲ್ಲಿಯೂ ಇದ್ದು ನನ್ನನ್ನು ಉದ್ಧಾರಮಾಡಲಿ.

ರಾಮಂ ರಮ್ಯಗುಣಂ ರಮಾಪತಿಸಮಂ ರಾಕಾ ಶಶಾಂಕಾನನಂ|
ರಾಜನ್ಯಂ ರಮಣೀಯರೂಪಮಮಲಂ ರಾಮಾಭಿರಾಮಂಹರಿಂ|
ರಾಜಾರಾಧಿತ ಪಾದಪದ್ಮಮನಿಶಂ ಸೌಜನ್ಯ ಸಂಭೂಷಿತಂ|
ರಾಕೇಂದು ಪ್ರತಿಮಾನನಾ ಕುಚಯುಗೇ ವಿನ್ಯಸ್ತ ಹಸ್ತಂ ಭಜೇ||

ರಂಜಕನೂ, ಸದ್ಗುಣಗಳಿಂದ ಕೂಡಿದವನೂ, ಲಕ್ಷ್ಮೀಪತಿಯಾದ ವಿಷ್ಣುಸದೃಶನೂ ಪೂರ್ಣಚಂದ್ರನಂತೆ ದುಂಡು ಮುಖವುಳ್ಳವನೂ, ಪಟ್ಟಾಭಿಷಿಕ್ತನಾದ, ಪ್ರಭುವೂ, ರಮಣೀಯವಾದ ರೂಪಿನಿಂದ ಕೂಡಿದವನೂ, ಪರಿಶುದ್ಧನೂ ರಾಜಾಧಿರಾಜರುಗಳಿಂದ ನಮಸ್ಕರಿಸಿಕೊಳ್ಳುವ ಪಾದಕಮಲಗಳುಳ್ಳವನೂ, ಸೌಜನ್ಯದಿಂದ ಹೆಚ್ಚಾಗಿ ಪೂಜ್ಯನೂ, ಪೂರ್ಣಚಂದ್ರನಂತೆ ದುಂಡುಮುಖವುಳ್ಳವನೂ, ಸೀತಾದೇವಿಯ ವಕ್ಷಸ್ಥಳದಲ್ಲಿ ಕ್ರೀಡಿಸುತ್ತಿರುವವನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ರಾಮಂ ಕೌಶಿಕ ಗೌತಮ ಪ್ರಿಯಕರಂ ಸೀತಾಪತಿಂ ಸಾನುಜಂ|
ರಕ್ಷೋಘ್ನಂ ವನವಾಸಿನಂ ಗುಣನಿಧಿಂ ಸಂತೋತಾರ್ಕಾತ್ಮಜಂ|
ಸೇತೋರ್ಬಂಧನ ಧೀರವಾನರಬಲಂ ಧಿಕ್ಕುಂಭಕರ್ಣೇಂದ್ರಜಿ|
ತ್ಪುಜ್ಕ್ಯಗ್ರೀವಮವದ್ವಿಭೀಷಣಮಜಂ ಶ್ರೀರಾಮಚಂದ್ರಂ ಭಜೇ||

ವಿಶ್ವಾಮಿತ್ರನ ಯಾಗರಕ್ಷಣೆ ಮಾಡಿ, ಗೌತಮಸತಿಯಾದ, ಶಿಲೆಯಾಗಿದ್ದ ಅಹಲ್ಯೆಯನ್ನು ಉದ್ಧಾರಮಾಡಿ, ಅದರಿಂದ ವಿಶ್ವಾಮಿತ್ರ, ಗೌತಮರಿಗೆ ಪ್ರಿಯಕರನಾಗಿ; ಅನಂತರ, ಶಿವಧನಸ್ಸನ್ನು ಭಂಗಮಾಡಿ, ಸೀತೆಯನ್ನು ಪಾಣಿಗ್ರಹಣ ಮಾಡಿಕೊಂಡು, ಸೀತಾಪತಿಯಾದ ; ಸೌಮಿತ್ರೀಸಹಿತನೂ, ರಾಕ್ಷಸನಾಶಕನೂ, ವನವಾಸವ್ರತವನ್ನು ಕೈಗೊಂಡವನೂ, ಗುಣನಿಧಿಯೂ, ಸುಗ್ರೀವ ವರದನೂ, ಸೇತುಬಂಧನ ಮಾಡಿದವನೂ, ಶ್ರೇಷ್ಠ ವಾನರರಿಂದ ಕೂಡಿದವನೂ, ಕುಂಭಕರ್ಣ, ಇಂದ್ರಜಿತು,ರಾವಣರುಗಳನ್ನು ತುಳಿದವನೂ, ವಿಭೀಷಣನನ್ನು ಕಾಪಾಡಿದವನೂ, ಜನ್ಮರಹಿತನಾದವನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಜಲನಿಧಿಕೃತಸೇತುಂ ದೇವತಾನಂದ ಹೇತುಂ |
ದಶಮುಖ ಮುಖರಕ್ಷೋ ದಾನವಾಂತ್ಯೈಕಹೇತುಂ |
ಮುನಿಜನ ನಿವಹಾನಾಂ ಮುಕ್ತಿ ಸೌಖ್ಯಾದಿ ಹೇತುಂ |
ರಘುವರ ಕುಲಕೇತುಂ ಕೀರ್ತಯೇ ದ್ಧರ್ಮಹೇತುಂ ||

ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ದೇವತೆಗಳ ಆನಂದಕ್ಕೆ ಕಾರಣನಾದ, ರಾವಣನೇ ಮುಂತಾದ ರಾಕ್ಷಸರ, ಮತ್ತು ದಾನವರ ನಾಶಕ್ಕೆ ಹೇತುವೂ, ರಘುಕುಲಧ್ವಜನೂ, ಮುನಿಶ್ರೇಷ್ಠರಿಗೆ ಮೋಕ್ಷದಾತೃವೂ, ಧರ್ಮವೃದ್ಧಿಗೆ ಕಾರಣನೂ, ಆದ ಶ್ರೀರಾಮನನ್ನು ಸ್ತುತಿಸುತ್ತೇನೆ.

ಸಕಲಗುಣನಿದಾನಂ ಯೋಗಿಭಿಸ್ತೂಯಮಾನಂ |
ವಿನುತ ಗರುಡವಾಹಂ ರಕ್ಷಿತೇಂದ್ರಾದಿಮಾನಂ |
ಮಹಿತ ವೃಷಭಯಾನಂ ಸೀತಯಾ ಶೋಭಮಾನಂ |
ಸ್ಮರಥ ಹೃದಯಭಾನಂ ಬ್ರಹ್ಮರಾಮಾಭಿರಾಮಂ ||

ಸಕಲ ಸದ್ಗುಣಗಳಿಗೆ ಆಶ್ರಯನಾಗಿಯೂ, ಯೋಗಿಗಳಿಂದ ಸ್ತುತಿಸಿಕೊಳ್ಳುವವನಾಗಿಯೂ, ಗರುಡಾರೂಢನಾಗಿಯೂ, ದೇವೇಂದ್ರಾದಿಗಳ ಮಾನಸಂರಕ್ಷಕನಾಗಿಯೂ, ಈಶ್ವರನನ್ನು ಪೂಜಿಸುವವನಾಗಿಯೂ, ಸೀತೆಯ ಸಾಮೀಪ್ಯದಿಂದ ಶೋಭಿತನಾಗಿಯೂ, ಪ್ರಾಣಿಗಳ ಅಂತರ್ಹೃದಯದಲ್ಲಿ ಚಿಜ್ಜ್ಯೋತಿಯಾಗಿ ಬೆಳಗುತ್ತಲಿರುವ, ಪರಬ್ರಹ್ಮನಾದ ಶ್ರೀರಾಮನನ್ನು ಸ್ಮರಿಸುತ್ತೇನೆ.

ವರಗುಣಮಣಿ ಸಿಂಧುಃ ಮೈಥಿಲೀ ಪ್ರಾಣಬಂಧುಃ |
ಕರಧೃತವರಚಾಪಃ ಭಾನುಕೋಟಿಪ್ರಕಾಶಃ |
ದಶರಥನೃಪರತ್ನೋ ದೇವತಾಮುಗ್ರಗಣ್ಯೋ |
ಭಜಿತ ಭುವನಭದ್ರೋ ಪಾತುಮಾಂ ರಾಮಭದ್ರಃ ||

ಶ್ರೇಷ್ಠ ಸದ್ಗುಣಗಳೆಂಬ ಮಣಿಗಳಿಗೆ ಸಮುದ್ರದಂತೆ ಆಶ್ರಯನಾಗಿರುವ, ಜಾನಕಿಯ ಪ್ರಾಣಪ್ರಿಯನಾದ, ಧನುಸ್ಸನ್ನು ಹಸ್ತದಲ್ಲಿ ಧರಿಸಿರುವ, ಕೋಟಿ ಸೂರ್ಯರಂತೆ ಪ್ರಕಾಶಿಸುವ, ಆಶ್ರಿತ ಪ್ರಪಂಚಕ್ಕೆ ಮಂಗಳಕರನಾದ ರಾಮಭದ್ರನು ನಮ್ಮನ್ನು ಕಾಪಾಡಲಿ.

ತ್ರಿದಶ ಕುಮುದಚಂದ್ರೋ ದಾನವಾಂಭೋಜಚಂದ್ರೋ |
ದುರಿತತಿಮಿರ ಚಂದ್ರೋ ಯೋಗಿನಾಂ ಜ್ಞಾನಚಂದ್ರಃ |
ಪ್ರಣತನಯನಚಂದ್ರೋ ಮೈಥಿಲೀ ನೇತ್ರಚಂದ್ರೋ |
ದಶಮುಖ ರಿಪುಚಂದ್ರಃ ಪಾತುಮಾಂ ರಾಮಚಂದ್ರಃ ||

ದೇವತೆಗಳೆಂಬ ಕನ್ನೈದಿಲೆಗೆ ಮೋದವನ್ನುಂಟುಮಾಡುವ ಚಂದ್ರನಾದ, ರಾಕ್ಷಸರೆಂಬ ಕಮಲಗಳಿಗೆ ಮ್ಲಾನವನ್ನುಂಟುಮಾಡುವ ಚಂದ್ರನಾದ, ಪಾಪಗಳೆಂಬ ಕತ್ತಲೆಯನ್ನು ನಾಶಮಾಡುವ ಚಂದ್ರನಾದ, ಯೋಗಿಗಳಿಗೆ ಜ್ಞಾನಚಂದ್ರನಾದ, ಆಶ್ರಿತರೆಂಬ ಕಣ್ಣುಗಳಿಗೆ ಚಂದ್ರನಂತೆ ಆಹ್ಲಾದಕರನಾದ, ಸೀತೆ ಎಂಬ ನೇತ್ರಕ್ಕೆ ಚಂದ್ರನಂತೆ ಸುಖದಾಯಕನಾದ, ರಾವಣನಿಗೆ ಶತ್ರುವಾದ, ರಾಮುಸೈನ್ಯಕ್ಕೆ ಚಂದ್ರನಂತೆ ಆಹ್ಲಾದಕರನಾದ ಶ್ರೀರಾಮನೆಂಬ ಚಂದ್ರನು ನಮ್ಮನ್ನು ಕಾಪಾಡಲಿ.

ಸ್ವಯುವತಿ ಕುಚಚಂದ್ರಃ ಬಂಧು ದುಗ್ಧಾಬ್ಧಿಚಂದ್ರಃ।
ಸುಜನ ಕುಮುದಚಂದ್ರಃ ವೈರಿವಕ್ತ್ರಾಬ್ಜ ಚಂದ್ರಃ।
ವಿಕಸಿತಮುಖಚಂದ್ರಃ ವ್ಯಾಪ್ತಿ ಸತ್ಕೀರ್ತಿಚಂದ್ರಃ।
ರಘುಕುಲವರಚಂದ್ರಃ ಪಾತುಮಾಂ ರಾಮಚಂದ್ರಃ॥

ತನ್ನ ಪತ್ನಿಯ ವಕ್ಷಸ್ಥಳಕ್ಕೆ ಚಂದ್ರನಂತೆ ಆಹ್ಲಾದಕರನಾದ, ತನ್ನ ಬಂಧುಗಳೆಂಬ ಕ್ಷೀರ ಸಮುದ್ರಕ್ಕೆ ಚಂದ್ರನಂತೆ ಸಂತೋಷದಾಯಕನಾದ, ಸುಜನರೆಂಬ ಕನ್ನೈದಿಲೆಗೆ ಚಂದ್ರನಂತೆ ಸಂತೋಷವನ್ನುಂಟುಮಾಡುವ, ವೈರಿಗಳ ಮುಖಕಮಲಗಳಿಗೆ ಚಂದ್ರನಂತೆ ಮ್ಲಾನತೆಯನ್ನುಂಟುಮಾಡುವ, ಒಳ್ಳೆಯ ಯಶಸ್ಸಿಗೆ ಚಂದ್ರನಂತೆ ಶುಭ್ರತೆಯನ್ನು ಕೊಡುವ, ರಘುವಂಶಕ್ಕೆ ಚಂದ್ರನಂತೆ ರತ್ನಪ್ರಾಯನಾದ, ಮಂದಹಾಸದ ಶ್ರೀರಾಮನ ಮುಖ ಚಂದ್ರವು ನಮ್ಮನ್ನು ಕಾಪಾಡಲಿ.

ರುಚಿರಮಣಿ ಕಿರೀಟಂ ಸುಂದರ ಭ್ರೂಲಲಾಟಂ।
ಕನಕರುಚಿರಚೇಲಂ ರಾಜ್ಯಸದ್ಭೋಗಖೇಲಂ।
ವಿಮಲ ಜಲದವರ್ಣಂ ಕುಂಡಲೋದ್ಭಾಸಕರ್ಣಂ।
ರಘುಕುಲಜನರತ್ನಂ ಸಂತತಂ ಚಿಂತಯಾಮಿ॥

ಪ್ರಕಾಶಮಾನವಾದ ರತ್ನ ಕಿರೀಟಧರನೂ, ಸುಂದರವಾದ ಹುಬ್ಬು ಹಣೆಗಳುಳ್ಳವನೂ, ಪೀತಾಂಬರ ಧಾರಿಯೂ, ರಾಜ್ಯಭೋಗದಲ್ಲಿ ಕ್ರೀಡಿಸುವವನೂ (ಆನಂದಪಡುವವನೂ), ನವಮೇಘ ಶ್ಯಾಮಲನೂ, ಕುಂಡಲ ದಿಂದ ಪ್ರಕಾಶಿಸುವ ಕರ್ಣಗಳುಳ್ಳವನೂ, ರಘುವಂಶಕ್ಕೆ ರತ್ನಪ್ರಾಯನೂ ಆದ ಶ್ರೀರಾಮನನ್ನು ಧ್ಯಾನಿಸುತ್ತೇನೆ.

ಮುಕುರ ರುಚಿರಗಂಡಂ ಪುಂಡರೀಕಾಭಿತುಂಡಂ।
ಕರಿಕರ ಭುಜದಂಡಂ ಭಧ್ರ ತೇಜೋಗ್ನಿಕುಂಡಂ।
ನಮಿತ ಭುವನ ಷಂಡಂ ಭಿಂದತೋಗ್ರಾರಿಮುಂಡಂ।
ಗುಣನಿಕರ ಕರಂಡಂ ನೌಮಿರಾಮ ಪ್ರಚಂಡಂ॥

ಕನ್ನಡಿಯಂತೆ ಹೊಳೆಯುವ ಕಪೋಲಗಳುಳ್ಳ, ಕಮಲದಂತೆ ಮನೋಹರವಾದ ಮುಖವುಳ್ಳವನಾದ, ಆನೆಯ ಸೊಂಡಿಲಿನಂತೆ ಶಕ್ತಿಯುತವಾದ ಬಾಹುಗಳುಳ್ಳ, ಮಂಗಳಕರವಾದ ತೇಜಸ್ಸಿನಿಂದ ಕೂಡಿ ಅಗ್ನಿಕುಂಡದಂತೆ ಶೋಭಿಸುತ್ತಿರುವ, ಚತುರ್ದಶ ಭುವನಗಳೆಂಬ ಕಮಲಗಳಿಂದ ಪೂಜಿತನಾದ, ಸದ್ಗುಣಗಳ ಸಮೂಹಕ್ಕೆ ಆಶ್ರಯ ದಾತನೂ, ಪ್ರಚಂಡನೂ ಆದ ಶ್ರೀರಾಮಚಂದ್ರನನ್ನು ನಮಸ್ಕರಿಸುತ್ತೇನೆ.

ಕೋದಂಡಕಾಂಡ ವಿನಿವೇಶಿತ ಬಾಹುದಂಡ।
ಮಾಖಂಡಲಾದ್ಯಮರ ವರ್ಷಿತ ಪುಷ್ಪವರ್ಷಂ।
ಆಯೋಧನಸ್ಥಿತರಜಃ ಪರಿಧೂಸರಾಂಗ।
ಮಭ್ಯುತ್ಥಿತಂ ರಘುವರೇಂದ್ರ ಮರಿಪ್ರಭೇದಂ॥

ಬಿಲ್ಲು ಬಾಣಗಳಿಗೆ ಆಶ್ರಯವಾಗಿರುವ ಬಾಹು ದಂಡಗಳುಳ್ಳ, ದೇವೇಂದ್ರನೇ ಮೊದಲಾದ ದೇವತೆಗಳಿಂದ ವರ್ಷಿಸಲ್ಪಟ್ಟ ಪುಷ್ಪವೃಷ್ಟಿಯಿಂದ ಕೂಡಿದ, ಯುದ್ಧಮಾಡುವಾಗ ತನ್ನ ಶರೀರದ ಮೇಲೆ ವ್ಯಾಪಿಸಲ್ಪಟ್ಟ ಧೂಳಿನ ಕಣಗಳುಳ್ಳವನಾದ, ಶತ್ರುಗಳನ್ನು ಎದುರಿಸಿ ಎದ್ದುನಿಂತವನಾದ ಮತ್ತು ಶತ್ರುಗಳನ್ನು ಪೂರ್ಣವಾಗಿ ಭೇದಿಸುವವ ನಾದ ಶ್ರೀರಾಮಭದ್ರನನ್ನು ಸೇವಿಸುತ್ತೇನೆ.

ಆಜಾನುಬಾಹುಮರವಿಂದದೃಶ್ಯಂ ಶುಭಾಂಗಂ |
ರಾಜಾಧಿರಾಜ ಮಘರಾಜಿ ತಮಃಪತಂಗಂ |
ಶ್ರೀ ಜಾನಕೀ ಮುಖಸರೋರುಹ ಮತ್ತಭೃಂಗಂ |
ಸೀತಾಪತಿಂ ಹೃದಿ ಭಜಾಮಿ ಕೃಪಾಂತರಂಗಂ ||

ಧೀರ್ಘವಾದ ಬಾಹುಗಳುಳ್ಳವನೂ, ಕಮಲಾಕ್ಷನೂ, ಮಂಗಳಾಂಗನೂ, ಚಕ್ರವರ್ತಿಯೂ, ಪಾಪಗಳ ಸಮೂಹವೆಂಬ ಕತ್ತಲೆಗೆ ಸೂರ್ಯನಂತಿರುವವನೂ, ಅಂದರೆ ಪಾಪನಾಶಕನೂ, ಸೀತಾದೇವಿಯ ಮುಖಕಮಲಕ್ಕೆ ಮದಿಸಿದ ಭ್ರಮರದಂತಿರುವವನೂ (ಅಂದರೆ ಸೀತಾದೇವಿಯ ಮುಖ ದರ್ಶನದಿಂದ ಆನಂದ ಹೊಂದುವವನೂ), ಸೀತಾಪತಿಯೂ, ಕರುಣಾಳುವೂ ಆದ ಶ್ರೀರಾಮಚಂದ್ರನನ್ನು ಭಜಿಸೋಣ.

ವೈದೇಹೀ ರಮಣೀಯ ವಕ್ತ್ರವನಜಪ್ರದ್ಯೋತ ಖದ್ಯೋತನಂ |
ಕೇಳೀಸದ್ಮನಿ ರತ್ನದೀಪಕಳಿಕಾ ಕಾಂತೇ ವಸಂತಂ ವಿಭುಂ |
ಸೌರಭ್ಯ ಪ್ರಸವಪ್ರಯುಕ್ತ ವಿಲಸಚ್ಛಯ್ಯಾಂತರೇ ಶಾಯಿನಂ |
ಶ್ರೀಮಂತಂ ರಘುವಂಶದೀಪಕಮಣಿಂ ಶ್ರೀರಾಮಚಂದ್ರಂ ಭಜೇ ||

ಸೀತಾದೇವಿಯ ಮನೋಹರವಾದ ಮುಖವೆಂಬ ಕಮಲವನ್ನು ಅರಳಿಸುವುದರಲ್ಲಿ ಸೂರ್ಯನಂತಿರುವವನಾದ, ಸಂತೋಷಗೃಹದಲ್ಲಿ ರತ್ನದೀಪಗಳ ಕಾಂತಿಯಿಂದ ರಾಜಿಸುವವನಾದ, ಪರಿಮಳ ದ್ರವ್ಯಗಳಿಂದ ಘಮಘಮಿಸುವ ಹಂಸತೂಲಿಕಾತಲ್ಪದಲ್ಲಿ ನಿದ್ರಿಸುವವನಾದ, ಶ್ರೀಮಂತನೂ ರಘುವಂಶ ಕುಲದೀಪಕನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಕರತಲ ಧೃತಚಾಪಂ ಕಾಲಮೇಘ ಸ್ವರೂಪಂ |
ಸರಸಿಜದಳನೇತ್ರಂ ಚಾರುಹಾಸಂ ಸುಗಾತ್ರಂ |
ನಿಯಮಿತ ವನವಾಸಂ ವಿಕ್ರಮೋದಗ್ರವೇಷಂ |
ಪ್ರಣಮತ ರಘುನಾಥಂ ಜಾನಕೀ ಪ್ರಾಣನಾಥಂ ||

ಕೈಯಲ್ಲಿ ಕೋದಂಡವನ್ನು ಧರಿಸಿ, ವರ್ಷಾಕಾಲದ ಮೇಘದಂತೆ ಶ್ಯಾಮಲ ವರ್ಣದಿಂದ ಕೂಡಿ, ಕಮಲ ನೇತ್ರನಾಗಿ, ಮಂದಹಾಸಯುತನಾಗಿ, ಸುದೃಢ ಶರೀರಿಯಾಗಿ, ಪಿತೃವಚನದಿಂದ ನಿಯಮಿತವಾದ ವನವಾಸಕ್ಕೆ ಹೊರಟವನಾದ, ವಿಕ್ರಮ ಅಂದರೆ ಶೌರ್ಯ ಸೂಚಕವಾಗಿಯೂ, ಉದಗ್ರ ಅಂದರೆ ಎತ್ತರವನ್ನು ಸೂಚಿಸುವುದಾಗಿಯೂ ಇರುವ ಧನುರ್ಧಾರಿತ್ವ ಮತ್ತು ಶಿರಸ್ಸಿನಲ್ಲಿ ಜಟಾಮುಕುಟಧಾರಿತ್ವದಿಂದ ಕೂಡಿದ ವೇಷವನ್ನು ಧರಿಸಿದ, (ಅಂದರೆ ಧನುರ್ಬಾಣ ಜಟಾಮುಕುಟಗಳಿಂದ ಕೂಡಿದ) ರಘುಪತಿಯೂ ಸೀತಾಪತಿಯೂ ಆದ ಶ್ರೀರಾಮನನ್ನು ನಮಸ್ಕರಿಸಿರಿ.

ಯಃಪೃಥ್ವೀ ಭರವಾರಣಾಯ ದಿವಿಜೈಸ್ಸಂಪ್ರಾರ್ಥಿತಶ್ಚಿನ್ಮಯಃ |
ಸಂಜಾತಃ ಪೃಥಿವೀತಲೇ ರವಿಕುಲೇ ಮಾಯಾಮನುಷ್ಯೋವ್ಯಯಃ |
ನಿಶ್ಚಕ್ರಂ ಹತರಾಕ್ಷಸಃ ಪುನರಗಾದ್ಬ್ರಹ್ಮತ್ವ ಮಾದ್ಯಂ ಸ್ಥಿರಾಂ |
ಕೀರ್ತಿಂ ಪಾಪಹರಾಂ ವಿಧಾಯ ಜಗತಾಂ ತಂ ಜಾನಕೀಶಂ ಭಜೇ ||

ಯಾರು ಭೂಭಾರವನ್ನು ಕಳೆಯುವುದಕ್ಕಾಗಿ ದೇವತೆಗಳ ಪ್ರಾರ್ಥನೆಯಂತೆ, ತಾನು ಅವ್ಯಯನೂ ಸರ್ವಕ್ಕೂ ಚೈತನ್ಯ ಸ್ವರೂಪಿಯೂ ಆಗಿದ್ದರೂ, ಮಾಯಾವಿಶಿಷ್ಟನಾಗಿ, ಭೂಮಿಯಲ್ಲಿ ಸೂರ್ಯವಂಶದಲ್ಲಿ ಮನುಷ್ಯನಾಗಿ ಅವತರಿಸಿ, ರಾಕ್ಷಸರನ್ನೂ ಅವರ ಗಜಾಶ್ವಾದಿ ಸೇನಾಂಗಗಳನ್ನೂ ಸಂಪೂರ್ಣವಾಗಿ ನಾಶಗೊಳಿಸಿ, ಹಿಂತಿರುಗಿ, ತನ್ನ ಸ್ವಸ್ವರೂಪದಲ್ಲಿ ಪರಬ್ರಹ್ಮನಾಗಿ ನಿಂತಿರುವ, ಅಂತಹ ಶಾಶ್ವತ ಕೀರ್ತಿಯುತನಾದ, ಪಾಪನಾಶಕನಾದ, ಲೋಕಕ್ಕೆ ವಿಧಾತೃವಾದ ಸೀತಾಪತಿಯನ್ನು ಭಜಿಸುತ್ತೇನೆ.

ವಿಶ್ವೋದ್ಭವ ಸ್ಥಿತಿಲಯಾದಿಷು ಹೇತುಮೇಕಂ |
ಮಾಯಾಶ್ರಯಂ ವಿಗತಮಾಯಮಚಿಂತ್ಯಮೂರ್ತಿಂ |
ಆನಂದ ಸಾಂದ್ರಮಮಲಂ ನಿಜ ಬೋಧರೂಪಂ |
ಸೀತಾಪತಿಂ ವಿದಿತ ತತ್ವಮಹಂ ನಮಾಮಿ ||

ಯಾರು ಮಾಯೆಯನ್ನು ಆಶ್ರಯಿಸಿ, ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಒಬ್ಬನೇ ಕಾರಣನಾದನೋ, ಆದರೂ ತಾನು ಮಾಯೆಗೆ ಸಿಕ್ಕದೆ ಇರುವನೋ, ಯಾರು ಮನಸ್ಸಿನ ಚಿಂತನೆಗೂ ಅತಿದೂರನೋ, ಯಾರು ಆನಂದ ಪರಿಪೂರ್ಣನೋ, ಯಾರು ಚಿದ್ರೂಪನೋ, ಯಾರು ಸರ್ವಜ್ಞನೋ, ಅಂತಹ ಪರಬ್ರಹ್ಮನಾದ, ಮಾನುಷ ವೇಷದ ಸೀತಾಪತಿ ಎನಿಸಿದ ಶ್ರೀರಾಮಚಂದ್ರನನ್ನು ನಾನು ನಮಿಸುತ್ತೇನೆ.

ಶ್ರೀರಾಮಚಂದ್ರ ಚರಣಾರವಿಂದಯೋಃ |
ಅಂತರಂಗ ಚರ ಭೃಂಗ ಲೀಲಯಾ |
ತತ್ರ ಸಂತಿ ಚ ರಸಾಶ್ಚತುರ್ವಿಧಾ |
ಮಾಕರಂದ ರಸಏವ ಪಂಕಜೇ ||

ಕಮಲದ ಅಂತರಂಗದಲ್ಲಿ (ಅಂದರೆ ಒಳಗಡೆ) ಭ್ರಮರವು (ದುಂಬಿ) ಹೋಗಿ ಮಕರಂದ ರಸಾಸ್ವಾದನ ಮಾಡುವಂತೆ ಶ್ರೀರಾಮಚಂದ್ರನ ಪಾದಗಳೆಂಬ ಕಮಲದಲ್ಲಿ ಭ್ರಮರ ರೂಪಿಯಾದ ನೀನು ನಿನ್ನ ಅಂತರಂಗವನ್ನು (ಮನಸ್ಸನ್ನು) ಪ್ರವೇಶಿಸುವಂತೆ ಮಾಡಿ ಅಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಮಕರಂದ ರಸಗಳಂತೆ ಇರುವ ನಾಲ್ಕು ವಿಧವಾದ ರಸಗಳನ್ನು ಆಸ್ವಾದನೆಮಾಡು. ಅಂದರೆ ಭೃಂಗಕ್ಕೆ ಕಮಲವನ್ನು ಆಶ್ರಯಿಸಿದ್ದರಿಂದ ಮಕರಂದವು ಹೇಗೆ ದೊರಕುವುದೋ ಹಾಗೆ ನಮಗೂ ಶ್ರೀರಾಮಚಂದ್ರನ ಪಾದಕಮಲಗಳನ್ನು ಆಶ್ರಯಿಸಿದರೆ ಚತುರ್ವಿಧ ಫಲಗಳೆಂಬ ಮಕರಂದವು ದೊರಕುವುದು.

ಯೋದಂಡಕಾರಣ್ಯ ನಿಶಾಚರೇಂದ್ರಾ‌ನ್ |
ಕೋದಂಡಲೀಲಾ ವಿಷಯಾಂ ಚಕಾರ |
ವೇದಂಡ ಶುಂಡಾಯಿತ ಬಾಹುದಂಡಃ |
ಕೋದಂಡಪಾಣಿಃ ಕುಲದೈವತಂ ನಃ ||

ಯಾರು ದಂಡಕಾರಣ್ಯದಲ್ಲಿ ಖರನೆಂಬ ರಾಕ್ಷಸ ಶ್ರೇಷ್ಠನನ್ನು ತನ್ನ ಕೋದಂಡ ಲೀಲೆಗೆ ವಿಷಯವನ್ನು ಮಾಡಿ ಅಂದರೆ ಲೀಲಾಮಾತ್ರದಿಂದ ಸಂಹರಿಸಿದನೋ, ಯಾರು ಮದಗಜದ ಸೊಂಡಿಲಿನಂತೆ ಬಾಹುಗಳನ್ನುಳ್ಳವನೋ, ಅಂತಹ ಕೋದಂಡಪಾಣಿಯಾದ ಶ್ರೀರಾಮನು ನನ್ನ ಕುಲದೈವವು.

ನ ಜಾನೇ ಜಾನಕೀಜಾನೇ ರಾಮತ್ವನ್ನಾಮ ವೈಭವಂ ।
ಸವೇದ ಭಗವಾರ್ ಶಂಭು ರ್ವಾಲ್ಮೀಕೀರ್ವೇತ್ತಿವಾನವಾ ॥

ಶ್ರೀರಾಮ! ನಿನ್ನ ನಾಮದ ವೈಭವ ನನಗೆ ತಿಳಿಯದು, ಭಗವಾನ್ ಶಂಭುವಿಗೆ, ಆತನೇ ತಾರಕರಾಮ ನಾಮ ಮಂತ್ರಕ್ಕೆ ಋಷಿಯಾದ್ದರಿಂದ, ಆ ನಾಮ ವೈಭವವು ಸಾರವತ್ತಾಗಿ ತಿಳಿದಿದೆ. ರಾಮಾಯಣವನ್ನು ಚಿಸಿದ ವಾಲ್ಮೀಕಿಯು ರಾಮಾಯಣದ ಕಥೆಗೇ ಪ್ರಾಧಾನ್ಯ ಕೊಟ್ಟನೋ ಅಥವಾ ರಾಮನಾಮದ ವೈಭವವೆಂಬ ಮೃತದ ರುಚಿಯನ್ನು ನೋಡಿದನೋ ಅದು ತಿಳಿಯದಾಗಿ ವಾಲ್ಮೀಕಿಗೆ ರಾಮನಾಮ ವೈಭವ ಗೊತ್ತಿದೆಯೋ ಲ್ಲವೋ ನಾನು ಹೇಳಲಾರೆ. ಅಂತಹ ಗೂಢವಾದ ತಾರಕಮಂತ್ರ ಶ್ರೀರಾಮ ಮಂತ್ರವಾಗಿದೆ.

ಸತ್ಯೇನ ಲೋಕಾರ್ ಜಯತಿ ದೀನಾಂ ದಾನೇನ ರಾಘವಃ ।
ಗುರುಂಶುಶ್ರೂಷಯಾವೀರೋ ಧನುಷಾಯುಧಿ ಶಾತ್ರವಾರ್ ॥

ಸತ್ಯವ್ರತಪಾಲನೆಯಿಂದ ಲೋಕದ ಜನಗಳನ್ನೆಲ್ಲಾ ತನ್ನ ಕೈವಶ ಮಾಡಿಕೊಂಡು, ದಾನದಿಂದ ಬಡವರನ್ನು ತೃಪ್ತಿಗೊಳಿಸಿ, ಗುರುಗಳನ್ನು ಸೇವೆಮಾಡಿ ತೃಪ್ತಿಗೊಳಿಸಿ, ತನ್ನ ಧನುರ್ಬಾಣಗಳಿಂದ ಶತ್ರುಗಳನ್ನು ಜಯಿಸಿ ರೀರಾಮಚಂದ್ರನು ಕೀರ್ತಿ ಗಳಿಸಿದನು.

ಭರ್ಜನಂ ಭವಬೀಜಾನಾಂ ಆರ್ಜನಂ ಸುಖಸಂಪದಾಂ ।
ತರ್ಜನಂ ಯಮದೂತಾನಂ ರಾಮರಾಮೇತಿ ಗರ್ಜನಂ ॥

ಸಂಸಾರದ ಮೂಲಕಾರಣವಾದ ಅವಿದ್ಯೆಯನ್ನು ನಾಶಮಾಡುವುದು, ಸುಖಸಂಪತ್ತುಗಳನ್ನು ಕೊಡುವುದು, ಯಮದೂತರು ನಮಗೆ ತೊಂದರೆ ಕೊಡದಂತೆ ಅವರನ್ನು ಓಡಿಸಿ ನಮ್ಮನ್ನುಕಾಪಾಡುವುದು, 'ರಾಮ' 'ರಾಮ' ಎಂದು ಗಟ್ಟಿಯಾಗಿ ಸಾರಿ, ಸಾರಿ ಘೋಷಿಸುವುದೇ ಆಗಿರುತ್ತದೆ.

ಸಕೃತ್ಪ್ರಣತರಕ್ಷಾಯ ಸಾಕ್ಷೀಯಸ್ಯ ವಿಭೀಷಣಃ ।
ಸಾಪರಾಧ ಪ್ರತೀಕಾರಃ ಸಶ್ರೀರಾಮೋ ಗತಿರ್ಮಮ ॥

ಶ್ರೀರಾಮಚಂದ್ರನು ಶರಣಾಗತರನ್ನು ರಕ್ಷಿಸಿದ್ದಕ್ಕೆ ವಿಭೀಷಣನಿಗೆ ಅಭಯಪ್ರಧಾನ ಮಾಡಿದ್ದು ಒಂದು ದರ್ಶನವಾಗಿದೆ. ಅಪಕಾರಕ್ಕೆ ಪ್ರತೀಕಾರಮಾಡಿದ್ದಕ್ಕೆ ಸೀತಾಪಹರಣಮಾಡಿದ ರಾವಣನ ವಧೆಯೇ ಸಾಕ್ಷೀಭೂತ ವಾಗಿದೆ. ಅಂತಹ ಶ್ರೀರಾಮನಲ್ಲಿ ಅಪರಾಧವನ್ನೆಸಗದೆ ಆ ದೇವನಲ್ಲಿ ಶರಣಾಗತಿ ಹೊಂದಿದರೆ ಅವನು ನಮಗೆ ಕ್ಕಾಗಿ ನಮ್ಮನ್ನು ಕಾಪಾಡುತ್ತಾನೆ.

ಜಯತು ಜಯತು ಶೌರೀ ಜಾನಕೀ ಮೋದಕಾರೀ ।
ತಪನ ಕುಲವಿಹಾರೀ ದಂಡಕಾರಣ್ಯಚಾರೀ ।
ದಶವದನ ಕುಠಾರೀ ದೈತ್ಯ ವಿಚ್ಛೇದಕಾರೀ ।
ಮಣಿಮಕುಟವಿಧಾರೀ ಚಂಡಕೋದಂಡಧಾರೀ ॥

ವಿಷ್ಣುಸ್ವರೂಪಿಯಾದ, ಜಾನಕಿಗೆ ಆನಂದದಾಯಕನಾದ, ಸೂರ್ಯವಂಶದಲ್ಲಿ ಉದ್ಭವಿಸಿದ, ದಂಡಕಾರಣ್ಯದಲ್ಲಿ ಸಂಚಾರಮಾಡಿದ, ರಾವಣನಿಗೆ ಕುಠಾರಪ್ರಾಯನಾದ, ರಾಕ್ಷಸರನ್ನು ನಾಶಪಡಿಸಿದ, ರತ್ನಕಿರೀಟವನ್ನು ಧರಿಸಿದ, ಪ್ರಚಂಡವಾದ ಕೋದಂಡಧಾರಿಯಾದ ಶ್ರೀರಾಮಚಂದ್ರನಿಗೆ ಜಯ ಜಯಕಾರವು.

ಕೌಸಲ್ಯಾಲಸದಾಲವಾಲಜನಿತ ಸ್ಸೀತಾಲತಾಲಿಂಗಿತಃ ।
ಸಿಕ್ತಂ ಪಙ್ತಿರಥೇನ ಸೋದರಮುಹಾ ಶಾಖಾಭಿರತ್ಯುನ್ನತಃ ।
ರಕ್ಷಸ್ತೀಕ್ಷ್ಣ ವಿದಾರ ಪಾಟನಪಟುಚ್ಛಾಯಾಭಿರಾನಂದಕೃ ।
ತ್ಲೋಸ್ಮದ್ವಾಂಛಿತ ಸತ್ಫಲಾನಿ ದದತು ಶ್ರೀರಾಮ ಕಲ್ಪದ್ರುಮಃ ॥

ಕೌಸಲ್ಯೆ ಎಂಬ ಶ್ರೇಷ್ಠವಾದ ಪಾತ್ರದಲ್ಲಿ ಜನಿಸಿ, ದಶರಥನೆಂಬ ನೀರಿನಿಂದ ಬೆಳಸಲ್ಪಟ್ಟು, ಸಹೋದರರೆಂಬ ಉನ್ನತವಾದ ಕೊಂಬೆಗಳಿಂದ ಕೂಡಿ, ಸೀತೆ ಎಂಬ ಬಳ್ಳಿಯಿಂದ ಸುತ್ತುವರಿಯಲ್ಪಟ್ಟು, ರಾಕ್ಷಸರನ್ನು ತೀಕ್ಷ್ಣವಾಗಿ ಸಂಹರಿಸಿ, ಲೋಕಕ್ಕೆ ಆನಂದವೆಂಬ ನೆಳಲನ್ನು ಕೊಡುವ, ಕಲ್ಪವೃಕ್ಷಕ್ಕೆ ಸಮವಾದ, ಕಲ್ಪವೃಕ್ಷದಂತೆ ಕೇಳಿದ ಇಷ್ಟಾರ್ಥಗಳನ್ನು ಕೊಡುವ ಶ್ರೀರಾಮಚಂದ್ರನೆಂಬ ಕಲ್ಪವೃಕ್ಷವು ನಮಗೆ ಸಮಸ್ತ ಇಷ್ಟಾರ್ಥಗಳನ್ನೂ ದಯಪಾಲಿಸಲಿ.

ಇಚ್ಛಾಮೋಹಿ ಮಹಾಬಾಹುಂ ರಘುವೀರಂ ಮಹಾಬಲಂ ।
ಗಜೇಂದ್ರ ಮಹತಾ ಯಾಂತಂ ರಾಮಂ ಛತ್ರಾವೃತಾನನಂ ॥

ಶ್ರೀರಾಮನು ಲೀಲಾಮಾತ್ರದಿಂದ ಸಕಲ ಜಗತ್ತನ್ನೂ ಮೋಹಪಡಿಸತಕ್ಕವನೂ, ವೀರನೂ, ರಘುಶ್ರೇಷ್ಠನೂ, ಬಲಯುತನೂ, ಐರಾವತದಂತೆ ಶ್ರೇಷ್ಠತೆಯನ್ನು ಹೊಂದಿರುವವನೂ, ಶ್ವೇತಚ್ಛತ್ರದ ನೆರಳಿನಿಂದ ಶೋಭಿಸುವ ರಾಜತೇಜದ ಮುಖ ಉಳ್ಳವನೂ ಆಗಿರುವನು.

ನದೀರಮಣ ಬಂಧನಂ ಮತಿಮತಾಮುದಾರಂ ಧನಂ ।
ಜಗದ್ವಿಹಿತರಂಜಿನಂ ಸಕಲ ಕಾಮ ನಿಷ್ಯಂದನಂ ।
ವಿಲಿಪ್ತ ಹರಿಚಂದನಂ ವಿನುತಯಾತು ಸಂಕ್ರಂದನಂ ।
ಭಜಾಮಿ ರಘುನಂದನಂ ಪವನ ನಂದನಸ್ಯಂದನಂ ॥

ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದ, ಉದಾರಮತಿಗಳಿಗೆ ಅಂದರೆ ಜ್ಞಾನಿಗಳಿಗೆ ಆತ್ಮಧನವಾಗಿರುವ, ಪ್ರಪಂಚಕ್ಕೆ ಹಿತಪ್ರದನಾಗಿ ರಂಜಿಸುವ, ಸಕಲ ಪುರುಷಾರ್ಥಪ್ರದನಾದ, ಶ್ರೀ ಚಂದನಾದಿಗಳಿಂದ ಲೇಪಿತ ಅಂಗನಾದ, ನಿರುತಿ (ನೈರುತ್ಯ) ಇಂದ್ರಾದಿಗಳಿಂದ ಅಂದರೆ ಒಟ್ಟಿನಲ್ಲಿ ಇಂದ್ರಾದಿ ಅಷ್ಟದಿಕ್ಪಾಲಕರಿಂದ ಹೊಗಳಿಸಿಕೊಳ್ಳುವವನಾದ, ಆಂಜನೇಯನ ಹೆಗಲಮೇಲೆ ಕುಳಿತು ಸುಗ್ರೀವನ ಬಳಿಗೆ ಹೋದವನಾದ ರಘುಪತಿಯನ್ನು ಧ್ಯಾನಿಸುತ್ತೇನೆ.

ಜಾನಾತಿ ರಾಮ ತವತತ್ವಗತಿಂ ಹನೂರ್ಮಾ ।
ಜಾನಾತಿ ರಾಮ ತವಸಖ್ಯಗತಿಂ ಕಪೀಶಃ ।
ಜಾನಾತಿರಾಮ ತವಯುದ್ಧಗತಿಂ ದಶಾಸ್ಯೋ ।
ಜಾನಾತಿ ರಾಮ ಧನದಾನುಜ ಏವಸತ್ಯಂ ॥

ರಾಮಚಂದ್ರಮೂರ್ತಿಯೆ ! ಆತ್ಮಾರಾಮನಾದ ನಿನ್ನ ತತ್ವವನ್ನು ಅಂದರೆ ಜೀವಸ್ವರೂಪದಿಂದ ಪ್ರಾಣಿಗಳ ಶರೀರದಲ್ಲಿ ಅಭಿವ್ಯಕ್ತನಾಗುವನು ನೀನೇ ಎಂಬ ಅಭೇದ ಐಕ್ಯಜ್ಞಾನ ತತ್ವವನ್ನು, ನಿನ್ನ ಪರಮಭಕ್ತನಾದ ಆಂಜನೇಯನು ಸರಿಯಾಗಿ ತಿಳಿದು ನಿನ್ನನ್ನು 'ಆತ್ಮಬುದ್ಧ್ಯಾತ್ವಮೇವಾಹಂ' ಎಂದುಕೊಂಡಾಡಿರುವನು. ಕಪಿಶ್ರೇಷ್ಠನಾದ ಸುಗ್ರೀವನು ನಿನ್ನ ಸಖ್ಯ ಎಷ್ಟು ಅಚಲವೆಂಬುದನ್ನು ಚೆನ್ನಾಗಿ ತಿಳಿದಿರುವನು. ನಿನ್ನ ಯುದ್ಧಕೌಶಲ್ಯವನ್ನು ನಿನ್ನೊಡನೆ ಯುದ್ಧ ಮಾಡಿದ ಮಹಾ ಪರಾಕ್ರಮಿಯಾದ ರಾವಣನು ಚೆನ್ನಾಗಿ ತಿಳಿದಿರುತ್ತಾನೆ. ಕುಬೇರನ ತಮ್ಮನಾದ, ನಿನ್ನ ಆಶ್ರಯ ಪಡೆದ ವಿಭೀಷಣನು ನಿನ್ನ ಮಹತ್ವವನ್ನು ಅರಿತಿರುವುದು ಸತ್ಯ.

ಭವಭಯ ಹರಮೇಕಂ ಭಾನುಕೋಟಿಪ್ರಕಾಶಂ |
ಕರಧೃತ ಶರಚಾಪಂ ಕಾಲಮೇಘಾವಭಾಸಂ |
ಕನಕರುಚಿರವಸ್ತ್ರಂ ರತ್ನವತ್ಕುಂಡಲಾಢ್ಯಂ |
ಕಮಲ ವಿಶದನೇತ್ರಂ ಸಾನುಜಂ ರಾಮಮೀಡೇ ||

ಜನನ ಮರಣ, ಪ್ರವಾಹರೂಪವಾದ ಸಂಸಾರಭಯವನ್ನು ನಾಶಪಡಿಸುವ, ಅದ್ವಿತೀಯನಾದ, ಕೋಟಿ ೂರ್ಯರಂತೆ ಪ್ರಕಾಶಮಾನನಾದ, ಬಿಲ್ಲು ಬಾಣಗಳಿಂದ ಕೂಡಿದ ಹಸ್ತಗಳುಳ್ಳ, ವರ್ಷಾಕಾಲದ ಮೋಡದಂತೆ ನೀಲ ರ್ಣನಾದ, ಪೀತಾಂಬರಧಾರಿಯೂ ರತ್ನ ಕುಂಡಲಗಳಿಂದ ಶೋಭಿತನೂ ಕಮಲದಂತೆ ವಿಶಾಲವಾದ ೀತ್ರಗಳುಳ್ಳವನೂ ಲಕ್ಷ್ಮಣಸಮೇತನೂ ಆದ ಶ್ರೀರಾಮಚಂದ್ರನನ್ನು ಧ್ಯಾನಿಸುತ್ತೇನೆ.

ದನುಜ ತಿಮಿರ ಭಾನುಂ ತಾಪಸೈಶ್ಚಿಂತ್ಯಮಾನಂ |
ಶಮಿತ ಕಲುಷವಾರಂ ಸೇವಯೇಭೀಷ್ಟದಂತಂ |
ದಳಿತ ವಿಷಮ ಸಾಲಂ ದಂಡಿತಾರಾತಿ ಜಾಲಂ |
ಪ್ರಣುತ ಶಿಖರಿಶತ್ರುಂ ಭವ್ಯಪಾಥೋದಗಾತ್ರಂ ||

ರಾಕ್ಷಸರೆಂಬ ಕತ್ತಲೆಗೆ ಸೂರ್ಯಸ್ವರೂಪನಾದ, ತಪಸ್ವಿಗಳಾದ ಋಷಿಗಳಿಂದ ಧ್ಯಾನಿಸಿಕೊಳ್ಳತಕ್ಕವನಾದ, ಾಪವೆಂಬ ಕಲ್ಮಷಗಳನ್ನು ಶಮನಗೊಳಿಸುವವನಾದ, ಆಶ್ರಿತರ ಇಷ್ಟಾಪೂರ್ತಿಮಾಡುವ, ವಿಷಮಸಂಖ್ಯೆಯಾದ ಾಲವೆಂದರೆ ಸಪ್ತಸಾಲವೃಕ್ಷಗಳು, (ತಾಳೆ ಗಿಡ) ಇವುಗಳನ್ನು ಒಂದೇ ಬಾಣದಿಂದ, ಸುಗ್ರೀವನಿಗೆ ತನ್ನ ಪರಾಕ್ರಮ ರನ್ನು ತೋರುವಲ್ಲೂ, ಛೇದಿಸಿದವನಾದ, ಶತ್ರುಸಮೂಹವನ್ನು ದಂಡಿಸಿದ, ದೇವೇಂದ್ರನಿಂದ ಹೊಗಳಿಸಿಕೊಳ್ಳುವವ ಾದ, ನೀಲಮೇಘಶ್ಯಾಮನಾಗಿ, ಭವ್ಯಮೂರ್ತಿ ಎನಿಸಿದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಯುದ್ಧೇವಸನ್ನವೃಣದದ್ಭುತ ಬಾಣವರ್ಷೈಃ |
ರಾಮಃ ಪ್ರಹಾರಸಮಯೇ ರಜನೀಚರಾಣಾಂ |
ರಕ್ಷಾನುಕೂಲ ಧಿಷಣಾಯ ವಿಭೀಷಣಾಯ |
ಲಂಕಾಧಿಪತ್ಯಮ ದಿಶದ್ರಘುರಾಮಚಂದ್ರಃ ||

ರಾಮರಾವಣರ ಯುದ್ಧ ನಡೆದಲ್ಲೂ, ಶ್ರೀರಾಮಚಂದ್ರನ ಬಾಣಗಳ ಅದ್ಭುತ ಸುರಿಮಳೆಯು ಜೋರಾಗಿರಲು ಸುರಿಮಳೆಯಲ್ಲಿ ಗಾಯಗೊಳ್ಳದೆ ತಪ್ಪಿಸಿಕೊಂಡ ರಾಕ್ಷಸ ಯೋಧರುಗಳು ತಮ್ಮ ಒಡೆಯನ ಸಂಹಾರ ಾದುದನ್ನು ನೋಡಿ, ತಮಗೆ ಇನ್ನು ರಕ್ಷಣೆ ಹೊಂದಲು ಗತಿ ಏನು ಎಂದು ಚಿಂತಿಸುತ್ತಿರಲು, ಅಂತಹ ಸಮಯ ಲ್ಲಿ ಶ್ರೀರಾಮಚಂದ್ರನು ವಿಭೀಷಣನಿಗೆ ಲಂಕಾಧಿಪತ್ಯವನ್ನು ದಯಪಾಲಿಸಿದನು. ಇದರಿಂದ ಆ ದಿಕ್ಕುಗೆಟ್ಟ ೋಧರುಗಳು ವಿಭೀಷಣನಿಗೆ ಶರಣಾಗತರಾಗಿ ರಕ್ಷಣೆ ಪಡೆದರು.

ದಶಮುಖ ಗಜಸಿಂಹಂ ದೈತ್ಯ ಗರ್ವಾಪಹಾರಂ|
ಕದನ ಭಯದಹಸ್ತಂ ತಾರಕ ಬ್ರಹ್ಮಶಸ್ತ್ರಂ|
ಮಣಿಖಚಿತ ಕಿರೀಟಂ ಮಂಜುಲಾಲಾಪಯುಕ್ತಂ|
ದಶರಥ ಕುಲಚಂದ್ರಂ ರಾಮಚಂದ್ರಂ ಭಜೇಹಂ||

ರಾವಣನೆಂಬ ಆನೆಗೆ ಸಿಂಹದಂತಿರುವವನಾದ, ರಾಕ್ಷಸರ ದರ್ಪವನ್ನು ಅಪಹರಿಸಿದ, ಯುದ್ಧರಂಗದ ಶತ್ರುಗಳಿಗೆ ಭಯವನ್ನುಂಟುಮಾಡುವ, ಶಸ್ತ್ರಶಕ್ತಿಯುಳ್ಳ ಹಸ್ತದಿಂದ ಕೂಡಿದ, ತಾರಕ ಬ್ರಹ್ಮವೆಂ ಬ್ರಹ್ಮಾಸ್ತ್ರವನ್ನು ಹೊಂದಿರುವ, ರತ್ನಖಚಿತ ಕಿರೀಟಧರನಾದ, ಮೃದುಭಾಷಿಯಾದ, ದಶರಥನ ವಂಶಕ್ಕೆ ಚಂದ್ರನಂತಿರುವ ಶ್ರೀರಾಮನನ್ನು ನಾನು ಭಜಿಸುತ್ತೇನೆ.

ಅಂಭೋಧಿ ರೋಷಾದ ರುಣಾಯಮಾನೇ|
ನಾಥಸ್ಯ ದೃಷ್ಟ್ವಾ ನಯನೇ ರಘೂಣಾಂ|
ಮರುದ್ಗಣೈ ಸ್ತತ್ಕ್ಷಣ ಮಾನುಶಂಕೇ|
ಮಂದಾಕಿನೀ ಮಂಗಳಸೂತ್ರ ಭಂಗಃ||

ರಘುನಾಥನ ದೃಷ್ಟಿಯಲ್ಲಿ ಕೋಪದಿಂದ ಕೂಡಿದ ಕೆಂಪಾದ ಕಣ್ಣುಗಳ ಕ್ರೌರ್ಯವನ್ನು ಸಮುದ್ರರಾಜನು ನೋಡುತ್ತಿರುವಲ್ಲಿ, ಆ ಸಮಯದಲ್ಲಿಯೇ ಮರುದ್ಗಣಗಳು ಸಮುದ್ರರಾಜನ ಪತ್ನಿಯಾದ ಮಂದಾಕಿನಿಯ ಮಾಂಗಲ್ಯವು ಹರಿದುಹೋಗಬಹುದೆಂದು ಅಂದರೆ ಸಮುದ್ರವು ಶೋಷಿಸಿಹೋಗಬಹುದೆಂದು ಅನುಮಾನಿಸಿದರು.

ಅಂಭೋಧಿಸ್ಮಯ ಬಂಧನೇನ, ಜಗದಾನಂದೇನ ಭೂಪುತ್ರಿಕಾ|
ಸ್ವಾಂತಾಂಭೋಭವ ಬಾಂಧವೇನ, ನತರಕ್ಷಾಯತ್ತ ಚಿತ್ತೇನ ಮೇ|
ಕರ್ಣಾಲಂಬಿತ ಕುಂಡಲೇನ, ದಿವಿಷತ್ತ್ರಾಣೋದ್ಯ ಮೇನಾಶ್ರಿತ|
ಶ್ರೈಯಃ ಕಲ್ಪಲತೇವ ಮೇಹ್ಯತಿಶಯಂ ರಾಮೇಣ ಸಂವರ್ಧತಾಂ||

ಸಮುದ್ರದಲ್ಲಿ ಆಶ್ಚರ್ಯವಾದ ರೀತಿಯಲ್ಲಿ ಬೆಟ್ಟಗಳನ್ನು ತೇಲಿಸಿ ಸೇತುಬಂಧನ ಮಾಡಿದವನೂ, ಜಗತ್ತಿಗೆ ಕಲ್ಯಾಣದಾಯಕನೂ, ಸೀತೆಯ ಹೃದಯಕ್ಕೆ ಸೂರ್ಯನಂತೆ ಪ್ರಕಾಶದಾಯಕನೂ (ಅಂದರೆ ಆನಂದವನ್ನುಂಟು ಮಾಡುವವನೂ), ಆಶ್ರಿತ ರಕ್ಷಣೆಯನ್ನು ಧ್ಯೇಯವಾಗಿ ಉಳ್ಳವನೂ, ಕಿವಿಯಲ್ಲಿ ಕುಂಡಲಗಳನ್ನು ಧರಿಸಿದವನೂ, ದೇವತೆಗಳ ರಕ್ಷಣೆಗೆ ಬದ್ಧಕಂಕಣನಾದವನೂ, ಆಶ್ರಿತ ಜನರ ಶ್ರೇಯಸ್ಸಾಧನೆಗೆ ಕಲ್ಪವೃಕ್ಷದಂತಿರುವವನೂ ಆದ ರಾಮನಿಂದ ನಾನು ಅತಿಶಯವಾಗಿ ಸಂರಕ್ಷಿಸಲ್ಪಡುತ್ತೇನೆ.

ಶ್ರೀರಾಮಃ ಕಲ್ಪವೃಕ್ಷೋಮೇ ವಿರಾಮಸ್ಸಕಲಾಪದಾಂ|
ಅಭಿರಾಮಸ್ತ್ರಿಲೋಕಾನಾಂ ರಾಮಃ ಕ್ಷೇಮಂ ಕರೋತು ನಃ||

ನನಗೆ ಕಲ್ಪವೃಕ್ಷದಂತಿರುವ, ನನ್ನ ಸಕಲ ಆಪತ್ತುಗಳನ್ನೂ ನಿವಾರಣೆ ಮಾಡುವವನಾದ, ಮೂರು ಲೋಕಕ್ಕೂ ರಂಜಕನಾದ ಶ್ರೀರಾಮಚಂದ್ರಮೂರ್ತಿಯು ನನಗೆ ಕ್ಷೇಮವನ್ನುಂಟುಮಾಡಲಿ.

ಸಜಲ ಜಲದನೀಲಂ ಸನ್ಮುನಿಸ್ತುತ್ಯಲೀಲಂ ।
ಸುಗಮು ನಿಗಮು ಮೂಲಂ ಯಾತುಧಾನಾಂತಕಾರಿಂ ।
ದಶರಥನೃಪಬಾಲಂ ಸತ್ಕೃಪಾಪೂರ್ಣಲೋಲಂ ।
ಭಜತು ಭುವನ ಖೇಲಂ ಭಕ್ತ ಸಂಸ್ತುತ್ಯಶೀಲಂ ॥

ವರ್ಷಾಕಾಲದ ಮೋಡದಂತೆ ನೀಲವರ್ಣನಾದ, ಸಜ್ಜನರಾದ ಮುನಿಗಳಿಂದ ಸ್ತುತಿಸಿಕೊಳ್ಳತಕ್ಕವನಾದ, ಲೀಲಾನಾಟಕಸೂತ್ರಧಾರಿಯಾದ, ವೇದಗಳಿಗೆ ಆದಿಯೂ ಸುಲಭನೂ ಆದ, ರಾಕ್ಷಸರಿಗೆ ಯಮಸ್ವರೂಪಿಯಾದ, ದಯಾಪೂರ್ಣನಾದ, ಪ್ರಪಂಚವನ್ನೇ ತನ್ನ ಲೀಲೆಯಾಗಿ ಮಾಡಿಕೊಂಡಿರುವ, ಭಕ್ತರಿಂದ ಚೆನ್ನಾಗಿ ಸ್ತೋತ್ರ ಮಾಡಿಸಿಕೊಳ್ಳತಕ್ಕವನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ದಶರಥವರಪುತ್ರಂ ಜಾನಕೀ ಸತ್ಕಳತ್ರಂ ।
ದಶಮುಖಹರದಕ್ಷಂ ಪದ್ಮಪಾತ್ರಾಯತಾಕ್ಷಂ ।
ಕರಧೃತ ಶರಚಾಪಂ ಚಾರುಮುಕ್ತಾಕಲಾಪಂ ।
ರಘುಕುಲನೃವರೇಣ್ಯಂ ರಾಮಮೀಡೇ ಶರಣ್ಯಂ ॥

ದಶರಥ ಚಕ್ರವರ್ತಿಯ ಸುಪುತ್ರನೂ, ಸೀತಾಪತಿಯೂ, ರಾವಣನ ಸಂಹಾರದಲ್ಲಿ ಸಮರ್ಥನೂ, ಕಮಲ ದಂತಿರುವ ವಿಶಾಲ ನೇತ್ರನೂ, ಕೋದಂಡ ಬಾಣಗಳನ್ನು ಹಸ್ತದಲ್ಲಿ ಧರಿಸಿರುವವನೂ, ರಘುಕುಲದಲ್ಲಿ ಶ್ರೇಷ್ಠ ರಾಜನೂ, ಶರಣರು ಧ್ಯಾನಿಸತಕ್ಕ ಮೂರ್ತಿಯೂ ಆದ ಶ್ರೀರಾಮಚಂದ್ರನನ್ನು ಸ್ತುತಿಸುತ್ತೇನೆ.

ರಣಹತದನುಜೇಂದ್ರೋ ರಾಜರಾಜಾತ್ಮ ಚಂದ್ರೋ ।
ಸಮದರಿಪುಮೃಗೇಂದ್ರೋ ಸನ್ಮನಾಂಭೋಧಿ ಚಂದ್ರಃ ।
ಲಲಿತಘನನರೇಂದ್ರೋ ಲಕ್ಷ್ಮಣಾನಂದ ಸಾಂದ್ರೋ ।
ಮಹಿತ ಸುಜನಚಂದ್ರೋ ಮೈಥಿಲೀಪ್ರಾಣ ಚಂದ್ರಃ ॥

ಯುದ್ಧದಲ್ಲಿ ರಾಕ್ಷಸಾಧಿಪನಾದ ರಾವಣನನ್ನು ಸಂಹಾರ ಮಾಡಿದ, ರಾಜಾಧಿರಾಜರುಗಳ ಮನಸ್ಸಿಗೆ ಚಂದ್ರನಂತೆ ಆಹ್ಲಾದಕರನಾದ, ಮದಿಸಿದ ಶತ್ರುಗಳೆಂಬ ಗಜಗಳಿಗೆ ಸಿಂಹಸ್ವರೂಪಿಯಾದ, ಏಕಾಗ್ರತೆಯಿಂದ ಕೂಡಿದ ಭಕ್ತರ ಶುದ್ಧ ಮನಸ್ಸೆಂಬ ಸಮುದ್ರಕ್ಕೆ ಚಂದ್ರನಂತಿರುವ, ಅಂದರೆ ಅವರ ಮನಸ್ಸಿಗೆ ಆನಂದದಾಯಕ ನಾದ, ಮನೋಹರನೂ, ಶ್ರೇಷ್ಠ ಭೂಮಿಪನೂ, ಲಕ್ಷ್ಮಣನ ಆನಂದಕ್ಕೆ ಮೇರೆಯಿಲ್ಲದಂತೆ ಮಾಡುವವನೂ, ಮಹಾತ್ಮರಾದ ಸಜ್ಜನರಿಗೆ ಚಂದ್ರನಂತಿರುವವನೂ, ಸೀತೆಗೆ ಪ್ರಾಣಚಂದ್ರನೂ ಆದ ಶ್ರೀರಾಮನು ನಮ್ಮನ್ನು ಕಾಪಾಡಲಿ.

ಕೋದಂಡ ನಿರ್ಮುಕ್ತ ಶರಾಗ್ರ ಖಂಡನಂ ।
ಪ್ರಚಂಡ ವಿಶ್ವದ್ಭುಜ ದಂಡಮಂಡನಂ ।
ಪ್ರಚಂಡ ಚಂಡಾಂಶು ಸಮಾನ ತೇಜಿನಂ ।
ಭಜಾಮಿ ರಾಮಂ ರಣರಂಗಮಂಡನಂ ॥

ತನ್ನ ಕೋದಂಡದಿಂದ ಬಿಡಲ್ಪಟ್ಟ ಬಾಣಗಳ ತುದಿಯಿಂದ ಶತ್ರುಗಳನ್ನು ತುಂಡರಿಸುವುದರಲ್ಲಿ ಪ್ರತಾಪ ಶಾಲಿಯಾದ, ವೀರ್ಯವತ್ತಾದ ಬಾಹುಗಳಿಂದ ಶೋಭಿಸುವವನಾದ, ಬೇಸಿಗೆಯ ಸೂರ್ಯನ ಸಮಾನವಾದ ತೇಜಸ್ಸಿನಿಂದ ಕೂಡಿದವನಾದ, ಯುದ್ಧರಂಗಕ್ಕೆ ಅಲಂಕಾರಪ್ರಾಯನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ನಗ್ರಸ್ತಸ್ತಮಸಾ, ನಜಾಹ್ನಿ ಮಲಿನೋ, ದರ್ಶೇನ ನೋಶಕೃತೋ ।
ನೈವಾಸ್ತಂಗತವಾನ್ ನಚಾಂಕಿತತನುರ್ನ್ಯೋಪಾಕ್ಷಿಕ ಶ್ರೀರಪಿ ।
ಲೋಕಾಲೋಕ ನಗೇಂದ್ರಲಂಘನವಿಧೌ ನೋಪಂಗು ಭಾವಂಗತೋ ।
ನಿರ್ದೋಷೋ ಗುಣಸಾಗರಾದ್ರಘುಪತೇ ಸ್ತೇಜೋಯಶಶ್ಚಂದ್ರಮಾಃ ॥

ದೋಷರಹಿತನೂ ಗುಣನಿಧಿಯೂ ರಘುಶ್ರೇಷ್ಠನೂ ಆದ ಶ್ರೀರಾಮಚಂದ್ರನ ಯಶಸ್ಸೆಂಬ ಚಂದ್ರನು ಆಕಾಶದಲ್ಲಿರುವ ಚಂದ್ರನಂತೆ, (1) ಅಂಧಕಾರದಿಂದ ಮುಚ್ಚಿ ಹೋಗುವುದಿಲ್ಲ, (2) ಪರಸ್ತ್ರೀ ಸಂಪರ್ಕದಿಂದ ಮಾಲಿನ್ಯ ಹೊಂದುವುದಿಲ್ಲ, (3) ತನ್ನ ದರ್ಶನದಿಂದ ಇತರರಿಗೆ ಅಸಹ್ಯ ಹೊಂದಿಸುವುದಿಲ್ಲ, (4) ಅಸ್ತವನ್ನು ಹೊಂದುವುದಿಲ್ಲ. (5) ಕಲೆಗಳನ್ನು ಹೊಂದುವುದಿಲ್ಲ, (6) ಒಂದೇ ಪಕ್ಷದಲ್ಲಿ ಅಭಿವೃದ್ಧಿ ಹೊಂದುವುದಿಲ್ಲ. (7) ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಲು ಉದಯ ಅಸ್ತಾಚಲಗಳನ್ನು ಮೀರಿ ಹೋಗಲಾರದೆ, ಹೆಳವನಂತೆ ಆಗುವುದೂ ಇಲ್ಲ.

ಶ್ರೀರಾಮಚಂದ್ರನ ಯಶಸ್ಸೆಂಬ ಚಂದ್ರನು	ಆಕಾಶದಲ್ಲಿನ ಚಂದ್ರನು
1. ಯಾವಾಗಲೂ ಪ್ರಕಾಶಿಸುತ್ತಲಿರುವುದರಿಂದ ಅಂಧಕಾರದಿಂದ ಮುಚ್ಚಿಹೋಗುವುದಿಲ್ಲ.	1. ಕೃಷ್ಣಪಕ್ಷದಲ್ಲಿ ಅಂಧಕಾರದಲ್ಲಿ ಮುಚ್ಚಿ ಹೋಗುವುದು.
2. ಏಕಪತ್ನೀವ್ರತನಾಗಿ ಶ್ರೀರಾಮನು ಇದ್ದದ್ದರಿಂದ ಅವನ ಯಶಸ್ಸು ಪರಸ್ತ್ರೀ ಸಂಪರ್ಕದಿಂದ ಮಲಿನವಾಗುವುದಿಲ್ಲ.	2. ಚಂದ್ರನು ತನ್ನ ಗುರುವಾದ ಬೃಹಸ್ಪತಿಗಳ ಹೆಂಡತಿಯಾದ ತಾರೆಯಿಂದ ಮಲಿನ ಹೊಂದಿದನು.
3. ರಾಮನ ಯಶಸ್ಸನ್ನು ಎಲ್ಲರೂ ದರ್ಶಿಸಲು ಬಯಸುವರು.	3. ವಿನಾಯಕನ ಶಾಪದಿಂದ ಭಾದ್ರಪದ ಶುದ್ಧ ಚೌತಿಯ ದಿನ ದರ್ಶನಕ್ಕೆ ಚಂದ್ರನು ಯೋಗ್ಯನಾಗಿಲ್ಲ.
4. ರಾಮನ ಯಶಸ್ಸು ಯಾವಾಗಲೂ ಅಸ್ತ ಹೊಂದುವುದಿಲ್ಲ.	4. ಚಂದ್ರನು ಉದಯಾಸ್ತಗಳನ್ನು ಪ್ರತಿದಿನವೂ ಹೊಂದುವನು.
5. ರಾಮನ ಯಶಸ್ಸಿನಲ್ಲಿ ಕಳಂಕವಿಲ್ಲ.	5. ಚಂದ್ರನು ಕಳಂಕದಿಂದ ಕೂಡಿರುವನು.
6. ಶ್ರೀರಾಮನ ಯಶಸ್ಸು ಸರ್ವಪಕ್ಷಗಳಿಂದಲೂ ಕೊಂಡಾಡಲ್ಪಟ್ಟು ಅಭಿವೃದ್ಧಿ ಹೊಂದುತ್ತದೆ.	6. ಚಂದ್ರನು ಏಕಪಕ್ಷದಲ್ಲಿ ಅಂದರೆ ಶುಕ್ಲಪಕ್ಷದಲ್ಲಿ ಅಭಿವೃದ್ಧಿ ಹೊಂದುತ್ತಾನೆ.
7. ಶ್ರೀರಾಮನ ಯಶಸ್ಸು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹರಡಲು ಯಾವ ತಡೆಗಳೂ ಇಲ್ಲ. ಅದು ವಿಶ್ವದ ಮೇರೆಯನ್ನು ಮೀರಿ ಹೋಗುವುದು.	7. ಚಂದ್ರನ ಗತಿಯು ವಿಶ್ವದ ಮೇರೆಯಾದ ಉದಯ ಅಸ್ತಾಚಲಗಳನ್ನು ಮೀರಿ ಹೋಗಲಾರದು.

ಅಂದರೆ ಚಂದ್ರನ ಕಳಂಕಗಳೊಂದೂ ಶ್ರೀರಾಮಚಂದ್ರನ ಯಶಸ್ಸಿನಲ್ಲಿ ಇಲ್ಲದೆ ಆ ಚಂದ್ರನ ತಂಪಾದ ಪ್ರಕಾಶವೆಂಬ ಸದ್ಗುಣ ಮಾತ್ರ ಇದ್ದು, ಈ ಹೋಲಿಕೆಯಿಂದ ಮಾತ್ರ ಶ್ರೀರಾಮಚಂದ್ರನ ಯಶಸ್ಸು ಚಂದ್ರನೆನಿಸಿಕೊಂಡಿದೆ. ಒಟ್ಟಿನಲ್ಲಿ ಈ ಯಶಸ್ಸು ಸರ್ವವ್ಯಾಪಿಯೂ, ಕಳಂಕರಹಿತವೂ ಆಗಿದೆ.

ನಾಗಾ ನಾಮಯುತಂ ತುರಂಗನಿಯುತಂ ಸಾರ್ಧಂ ರಥಾನಾಂ ಶತಂ |
ಪಾದಾತಂಶತಕೋಟಿಯುದ್ಧ ದಳಿತಾ ನೃತ್ತನ್ಕ ಬಂಧೋ ರಣೇ |
ಏವಂ ಕೋಟಿ ಕಬಂಧನರ್ತನವಿಧೌ ಕಿಂಚಿಧ್ವನಿಃಕಿಂಕಿಣೇಃ |
ಯಾಮಾರ್ಧಂ ಪರಮಾತ್ಮನೋ ರಘುಪತೇಃ ಕೋದಂಡಘಂಟಾರವಃ ||

ವಿವರಣೆ :– ರಾಮ ರಾವಣರ ಯುದ್ಧದಲ್ಲಿ ಹತರಾದ ರಾಕ್ಷಸರ ಎಣಿಕೆಯನ್ನು ಇಲ್ಲಿ ವಿವರಿಸಲಾಗಿದೆ. ಅಯುತ ಆನೆಗಳು, ನಿಯುತ ಕುದುರೆಗಳು (ಅಯುತ ನಿಯುತ ಎಂಬವುಗಳು ಸಂಖ್ಯಾ ವಿಶೇಷಗಳು), ಇವುಗಳೊಡನೆ ಒಂದುನೂರು ಐವತ್ತು ರಥಗಳು ಒಂದುನೂರು ಕೋಟಿ ಕಾಲಾಳುಗಳು ಇಷ್ಟು ಜನಗಳೂ ಯುದ್ಧದಲ್ಲಿ ಶ್ರೀರಾಮನ ಕೋದಂಡದಿಂದ ಹತವಾದವೆಂದರೆ ಒಂದು ಯುದ್ಧಶ್ರವದ, ತಲೆಯಿಲ್ಲದ ಮುಂಡವು ನರ್ತಿಸುತ್ತದೆ. ಇಂತಹ ಒಂದು ಕೋಟಿ ಮುಂಡಗಳ ನರ್ತನವಾಯಿತೆಂದರೆ ಶ್ರೀರಾಮಚಂದ್ರನ ಕೋದಂಡದ ಒಂದು ಸಣ್ಣ ಘಂಟೆಯು ಒಂದು ಮಿಂಚು ಮಿಂಚಿದಷ್ಟುಕಾಲ ಧ್ವನಿಮಾಡುತ್ತದೆ. ಹೀಗಿರಲು ರಾಮರಾವಣರ ಯದ್ಧದಲ್ಲಿ ಶ್ರೀರಾಮಚಂದ್ರನ ಕೋದಂಡದ ಘಂಟೆಗಳ ಶಬ್ದವು ಅರ್ಧಜಾವದಕಾಲ ಒಂದೇ ಸಮನೆ ಧ್ವನಿ ಮಾಡಿತು. ಅಂದರೆ ಸತ್ತವರೆಷ್ಟೆಂಬುದನ್ನು ಸಂಖ್ಯೆಯಲ್ಲಿ ಹೇಳಲು ಸಾಧ್ಯವಿಲ್ಲದೆ ಈ ರೀತಿ ಸುತ್ತುವರಿದು ಹೇಳಿದ್ದರಲ್ಲಿ ಅಭಿಪ್ರಾಯವೇನೆಂದರೆ, ಅಗಣಿತ ಸಂಖ್ಯೆಯಲ್ಲಿ ರಾಕ್ಷಸರನ್ನು ಶ್ರೀರಾಮನ ಕೋದಂಡವು ಹತಮಾಡಿತೆಂದೂ, ಅಂತಹ ಕೋದಂಡಧಾರಿಯಾದ ಪರಮಾತ್ಮನು ಮಹಾವೀರನೆಂದೂ, ಶ್ರೀರಾಮಚಂದ್ರನ ಪರಾಕ್ರಮವನ್ನು ವರ್ಣಿಸಿದೆ (ಅಯುತ=10 ಸಾವಿರ, ನಿಯುತ=1 ಲಕ್ಷ.)

ರಘುಕುಲವರನಾಥೋ ಜಾನಕೀ ಪ್ರಾಣನಾಥಃ |
ಪಿತೃವಚನ ವಿಧಾತಾ ನಿಖಿಲ ರಾಜ್ಯಪ್ರದಾತಾ |
ಕೃತನಿಶಿಚರನಾಶಃ ಪ್ರಾಪ್ತರಾಜ್ಯಪ್ರವೇಶಃ |
ವಿಹಿತ ಭುವನರಕ್ಷಃ ಪಾತು ಪದ್ಮಾಯತಾಕ್ಷಃ ||

ರಘುವಂಶದಲ್ಲಿ ಶ್ರೇಷ್ಠನೂ ಜಾನಕಿಯ ಪತಿಯೂ, ಪಿತೃವಚನವೆಂಬ ವಿಧಿಗೆ ಅನುಸಾರವಾಗಿ, ತಾನು ಅನುಭವಿಸಬೇಕಾಗಿದ್ದ ಸಮಸ್ತ ರಾಜ್ಯವನ್ನೂ ಭರತನಿಗೆ ಕೊಟ್ಟುಬಿಟ್ಟು ಕಾಡಿಗೆ ಹೋಗಿ ಅಲ್ಲಿ ರಾಕ್ಷಸರನ್ನು ನಾಶಪಡಿಸಿದವನೂ, ಪುನಃ, ಪಿತೃವಾಕ್ಯ ಪರಿಪಾಲನೆಯಾಗಿ ಹದಿನಾಲ್ಕು ವರ್ಷಗಳು ಕಳೆಯುತ್ತಲು ಅಯೋಧ್ಯೆಗೆ ಪ್ರವೇಶಿಸಿ ರಾಜ್ಯಸೂತ್ರವನ್ನು ಧರಿಸಿ, ಭೂಮಿಯನ್ನು ಪ್ರಜಾಹಿತಕ್ಕೆ ಅನುಸಾರವಾಗಿ ಪರಿಪಾಲನೆ ಮಾಡಿದವನೂ ಆದ ಶ್ರೀರಾಮನು ನಮ್ಮನ್ನು ಕಾಪಾಡಲಿ.

ಆಂಜನೇಯ ಸ್ತೋತ್ರ

ಹೇರಾಮಭದ್ರಾಶ್ರಯ ಹೇಕೃಪಾಳೋ |
ಹೇಭಕ್ತ ಲೋಕೈಕ ಶರಣ್ಯಮೂರ್ತೇ |
ಪುನೀಹಿಮಾಂ ತ್ವಚ್ಚರಣಾರವಿಂದಂ |
ಜಗತ್ಪವಿತ್ರಂ ಶರಣಂ ಮಮಾಸ್ತು ||

ಎಲೈ ರಾಮಭದ್ರನ ಆಶ್ರಿತನೇ, ದಯಾಳುವೇ, ಪ್ರಪಂಚಕ್ಕೆಲ್ಲಾ ತಾನೊಬ್ಬನೇ ಶರಣಾಗತರಕ್ಷಕನಾಗಿರುವ ಶ್ರೀರಾಮಚಂದ್ರನ 'ಭಕ್ತನೇ', ನನ್ನನ್ನು ಉದ್ಧರಿಸು. ನಿನ್ನ ಜಗತ್ಪವಿತ್ರವಾದ ಚರಣ ಕಮಲವನ್ನು ನಾನು ಶರಣುಹೊಂದುವಂತಾಗಲಿ.

ಶ್ರೀರಾಮಭದ್ರಾಶ್ರಯ ಯೋಗಿಚಂದ್ರ।
ಪ್ರಸನ್ನಮೂರ್ತೌ ಪರಿದೃಶ್ಯಮಾನೇ।
ತಾಪತ್ರಯಂ ನಾಶಮುಪೈತಿ ಪುಂಸಾಂ।
ಮಮಾಂಧಕಾರಂ ವಿನಿಹಂತು ಸದ್ಯಃ॥

ಶ್ರೀರಾಮಭದ್ರನನ್ನು ಆಶ್ರಯಿಸಿ ಆ ಆತ್ಮಾರಾಮ ಮೂರ್ತಿಯ ಧ್ಯಾನದಲ್ಲಿರುವ ಯೋಗಿವರ್ಯನಾದ ಆಂಜನೇಯನೇ! ಪ್ರಸನ್ನಮೂರ್ತಿಯಾದ ನಿನ್ನ ದಿವ್ಯ ದರ್ಶನದಿಂದ ಮನುಷ್ಯನ ತಾಪತ್ರಯವು ನಾಶವಾಗುವುದು. ನನ್ನ ಅಜ್ಞಾನವನ್ನು ಈಗಲೇ ಹೋಗಲಾಡಿಸು.

ಶ್ರೀರಾಮಭದ್ರಾಶ್ರಯ ಸದ್ಗುರೂಣಾಂ।
ಪಾದಾರವಿಂದಂ ಭಜತಾಂ ನರಾಣಾಂ।
ಆರೋಗ್ಯಮೈಶ್ವರ್ಯಮನಂತಕೀರ್ತಿಂ।
ಅಂತೇಚ ವಿಷ್ಣೋಃ ಪದಮಸ್ತಿ ಸತ್ಯಂ॥

ಶ್ರೀರಾಮಚಂದ್ರನ ಆಶ್ರಯವನ್ನು ಪಡೆದಿರುವವನೂ, ಶ್ರೀರಾಮಚಂದ್ರನ ಪಾದಾರವಿಂದವನ್ನು ಹೊಂದುವುದಕ್ಕೆ ಉಪದೇಶಕನಾದ ಸದ್ಗುರುವೂ ಆದ ಶ್ರೀಮದಾಂಜನೇಯನ ಪಾದ ಕಮಲಗಳನ್ನು ಭಜಿಸುವ ಮಾನವನಿಗೆ ಆರೋಗ್ಯ ಐಶ್ವರ್ಯಾದಿಗಳೂ, ಅಪಾರವಾದ ಯಶಸ್ಸೂ ದೊರಕುವುದಲ್ಲದೆ, ಆತನಿಗೆ ಈ ಲೋಕ ವ್ಯಾಪಾರ ಮುಗಿದಮೇಲೆ ವೈಕುಂಠಪದವು ಲಭಿಸುವುದು. ಇದು ಸತ್ಯವು.

ರಾಮ ವೈಭವ ಖಂಡ

ಬಾಲರಾಮ ಸ್ತೋತ್ರ

ಶುದ್ಧಾಂತೇ ಮಾತೃಮಧ್ಯೇ ದಶರಥಪುರತಃ ಸಂಚರಂತಂ ಪರಂತಂ |
ಕಾಂಚೀದಾಮಾನುವಿದ್ಧ ಪ್ರತಿಮಣಿವಿಲಸತ್ಕಿಂಕಿಣೀ ನಿಕ್ವಣಾಂಗಂ |
ಫಾಲೇ ಮುಕ್ತಾಲಲಾಮಂ ಪದಯುಗ ನಿನದನ್ನೂಪುರಂ ಚಾರುಹಾಸಂ |
ಬಾಲಂ ರಾಮಂ ಭಜೇಹಂ ಪ್ರಣತ ಜನಮನಃಖೇದ ವಿಚ್ಛೇದದಕ್ಷಂ ||

ಶುದ್ಧ ಅಂತಃಕರಣನಾಗಿ ಕೌಸಲ್ಯಾ ಸುಮಿತ್ರೆ ಕೈಕೆ ಮುಂತಾದ ಮಾತೃಗಳ ಮಧ್ಯದಲ್ಲಿಯೂ, ದಶರಥನ ಮುಂದೆಯೂ ಓಡಾಡುತ್ತಾ, ಉಡಿದಾರದಿಂದ ಕೂಡಿ, ಅದರ ಗೆಜ್ಜೆಗಳು ಕಿಣಿ, ಕಿಣಿ ಶಬ್ದಮಾಡುತ್ತಿರಲು, ಮನೋಹರವಾಗಿ ಕಾಣುವ, ಹಣೆಯಲ್ಲಿ ಮುತ್ತಿನ ತಿಲಕ ಉಳ್ಳವನಾಗಿ, ಕಾಲಿಗೆ ಧರಿಸಿರುವ ಕಾಲ್ಗೆಜ್ಜೆಯ ಶಬ್ದದಿಂದ ಮನೋಲ್ಲಾಸಕನಾಗಿ ಇರುವ, ಆಶ್ರಿತ ಜನಗಳ ದುಃಖ ನಾಶಕನಾದ ಪರಮ ಪುರುಷನಾದ ಶ್ರೀ ಬಾಲರಾಮನನ್ನು ಭಜಿಸುತ್ತೇನೆ.

ಮಾತುಃ ಪಾರ್ಶ್ವೇ ಚರಂತಂ ಮಣಿಮಯಶಯನೇ ಮಂಜುಭೂಷಾಂಚಿತಾಂಗಂ |
ಮಂದಂ ಮಂದಂ ಪಿಬಂತಂ ಮುಕುಳಿತನಯನಂ ಸ್ತನ್ಯಮನ್ಯಸ್ತನಾಗ್ರಂ |
ಅಂಗುಳ್ಯಗ್ರೈಸ್ಸ್ಪೃಶಂತಂ ಸುಖಪರವಶಯಾ ಸುಸ್ಮಿತಾಲಂಗಿತಾಂಗಂ |
ಗಾಢಂ ಗಾಢಂ ಜನನ್ಯಾಃ ಕಲಯತು ಹೃದಯೇ ಮಾಮಕಂ ರಾಮಬಾಲಂ ||

ರತ್ನಖಚಿತವಾದ ಶಯ್ಯೆಯಲ್ಲಿ, ತಾಯಿಯ ಮಗ್ಗುಲಲ್ಲಿ ಚಲಿಸುತ್ತಾ, ಮನೋಹರವಾದ ಭೂಷಣಗಳಿಂದ ಭೂಷಿತನಾಗಿ ಕಣ್ಣುಗಳನ್ನು ಸ್ವಲ್ಪ ಮುಚ್ಚಿಕೊಂಡು, ಸ್ವಲ್ಪ ಸ್ವಲ್ಪವಾಗಿ ನಿಧಾನವಾಗಿ ಮಾತೃವಿನ ಸ್ತನ್ಯಪಾನ ಮಾಡುತ್ತಾ, ಇನ್ನೊಂದು ಸ್ತನಾಗ್ರವನ್ನು ತನ್ನ ಬೆರಳುಗಳ ತುದಿಗಳಿಂದ ಮುಟ್ಟಿ ಸವರುತ್ತಾ, ಸುಖಪರವಶಳಾಗಿ ಮಂದಹಾಸದಿಂದ ಕೂಡಿದ, ತನ್ನ ತಾಯಿಯಿಂದ ಆಲಿಂಗಿತನಾಗಿ, ಅಂದರೆ ಗಾಢವಾಗಿ ತಾಯಿಯ ಹೃದಯದಲ್ಲಿ ಸೇರಿಕೊಂಡಿರುವ ಬಾಲನಾದ ಶ್ರೀರಾಮಚಂದ್ರನು ನನ್ನ ಹೃದಯದಲ್ಲಿ ನೆಲಸಲಿ.

ದಿಗಂಬರಂ ಕಿಂಕಿಣಿ ಮೇಖಲೋಜ್ಜ್ವಲಂ |
ಲಲಾಟಪರ್ಯಂತ ವಿಲಂಬಿ ತಾಲಕಂ |
ಕಲದ್ವಚೋಂಕಂ ಕಮನೀಯ ನೂಪುರಂ |
ತಂ ಬಾಲರಾಮಂ ಶಿರಸಾ ನಮಾಮಿ ||

ದಿಗಂಬರನಾಗಿ, ಶೋಭಾಯಮಾನವಾದ ಉಡಿದಾರದ ಗೆಜ್ಜೆಗಳ ಕಿಣಿ, ಕಿಣಿ ಶಬ್ದದಿಂದಲೂ, ಹಣೆಯ ವರೆಗೆ ಹರಡಿಕೊಂಡಿರುವ ಮುಂಗುರುಳುಗಳಿಂದಲೂ, ಬಾಲಭಾಷೆಯಿಂದಲೂ, ರಂಜಕವಾದ ಕಾಲುಗೆಜ್ಜೆ ಯಿಂದಲೂ ಕೂಡಿ ಮನಮೋಹಕನಾಗಿರುವ ಬಾಲರಾಮನನ್ನು ತಲೆಬಾಗಿ ನಮಸ್ಕರಿಸುತ್ತೇನೆ.

ಲಲಾಟದೇಶೋಜ್ಜ್ವಲ ಬಾಲಭೂಷಣಂ|
ಸತಾಂಡವಂ ವ್ಯಾಘ್ರನಖಾಂಕ ಕಂಧರಂ|
ದಿಗಂಬರಂ ಶೋಭಿತ ಬರ್ಬರಾಲಕಂ|
ಶ್ರೀ ಬಾಲರಾಮಂ ಶಿರಸಾ ನಮಾಮಿ||

ಶೋಭಾಯಮಾನವಾದ ಹಣೆಯಿಂದಲೂ, ಬಾಲತೊಡಿಗೆಗಳಿಂದಲೂ, ನೃತ್ಯಮೂರ್ತಿಯಾಗಿ, ವ್ಯಾಘ್ರನಖವನ್ನು ಕತ್ತಿನಲ್ಲಿ ಧರಿಸಿ, ದಿಗಂಬರನಾಗಿ, ಮುಂಗುರುಳುಗಳಿಂದ ಕೂಡಿರುವ ಬಾಲರಾಮನನ್ನು ತಲೆಬಾಗಿ ನಮಸ್ಕರಿಸುವೆನು.

ರಾಮಂ ಕೋಮಲ ನೀಲ ನೀರದನಿಭಂ ನೀಲಾಲಕಾಲಂಕೃತಂ|
ಕಟ್ಯಾಂ ಶೋಭಿತ ಕಿಂಕಿಣೀ ಝಣ ಝಣ ಧ್ವಾನ್ಯೈರುಪೇತಂಶಿಶುಂ|
ಕಂಠಾಲಂಬಿ. ತರಕ್ಷು ನಿರ್ಮಲನಖಂ ಕಂಜಾಕ್ಷವಬ್ಜಾನನಂ|
ಭಾಸ್ವಂತಂ ಮಕುಟಾಂಗದಾದಿ ವಿವಿಧಾಕಲ್ಪಂ ಸದಾಹಂ ಭಜೇ||

ಕೋಮಲವಾದ ನೈದಿಲೆಯ ನೀಲಕಾಂತಿಯ ಶರೀರದಿಂದ ಕೂಡಿದ, ನೀಲವಾದ ಮುಂಗುರುಳುಗಳಿಂದ ಶೋಭಿತವಾದ, ನಡುವಿನಲ್ಲಿ ಶೋಭಿಸುವ ಕಿರುಗೆಜ್ಜೆಗಳ ಝಣ, ಝಣತ್ಕಾರದಿಂದ ಮನೋಹರನಾದ, ಕಂಠದಲ್ಲಿ ಅಲಂಕೃತವಾದ ವ್ಯಾಘ್ರನಖದ ಹಾರವುಳ್ಳ, ಶುದ್ಧವಾದ ಉಗುರುಗಳುಳ್ಳ, ಕಮಲಾಕ್ಷನಾದ, ಕಮಲ ಮುಖವುಳ್ಳ, ಪ್ರಕಾಶಮಾನವಾದ, ಕಿರೀಟ, ತೋಳುಬಂದಿ ಮುಂತಾದ ಒಡವೆಗಳಿಂದ ಕೂಡಿದ, ಶಿಶುವಾದ ಶ್ರೀರಾಮಚಂದ್ರನನ್ನು ಸರ್ವದಾ ಭಜಿಸುತ್ತೇನೆ.

ಪಾಗಂಡೇ ಹಿತಬಾಲಕಃ ಪರಿವೃತಃ ಪೂರ್ಣೇಂದು ಕಾಂತಾನನಃ|
ಪ್ರೀತ್ಯಾಬದ್ಧ ವಿಚಿತ್ರ ಹೇಮವಸನೇ ಸಂಸಕ್ತ ಕಾಂಚೀಗುಣಃ|
ಆಜಾನು ಪ್ರವಿಲಂಬ ಬಾಹುಯುಗಳ ಶ್ಯಾಮಾಂಬುಭೃದ್ವಿಗ್ರಹಂ|
ಭ್ರಾತುಹ್ಯಾನುಚರಶ್ಚರಾಚರಗುರುಃ ಪಾಯಾತ್ಸದಾ ರಾಘವಃ||

ಬಾಲ್ಯ, ಕೌಮಾರ್ಯಗಳನ್ನು ದಾಟಿದ ಬಾಲಕರೊಡನೆ ಕೂಡಿಕೊಂಡು, ಪೂರ್ಣಚಂದ್ರನ ಕಾಂತಿಯಂತೆ ಪ್ರಕಾಶಮಾನವಾದ ಮುಖವುಳ್ಳವನಾಗಿ, ಪ್ರೀತಿಯಿಂದ ಉಡಿಸಿದ ಪೀತಾಂಬರದಮೇಲೆ ಚಿನ್ನದ ಉಡಿದಾರವು ಶೋಭಿಸುತ್ತಿರಲು, ಧೀರ್ಘ ಬಾಹುವಾಗಿ, ನೀಲಮೇಘಶ್ಯಾಮನಾಗಿ, ಸಹೋದರರಿಂದಲೂ ಸಂಗಾತಿಗಳಿಂದಲೂ ಕೂಡಿ, ಬಾಲರಾಮನಾಗಿ ಶೋಭಿಸುವವನಾದ, ಚರಾಚರ ಪ್ರಾಣಿಗಳಿಗೆಲ್ಲಾ ಗುರುವಾದ ರಾಘವನು ನಮ್ಮನ್ನು ಕಾಪಾಡಲಿ.

ರಂಗಮಾಣಮಭಿತೋ ಗೃಹಾಂಗಣೇ|
ಭೃಂಗನೀಲಮಲಕ್ಪ್ರಾವೃತಾನನಂ|
ಮಂಗಳಪ್ರದಮಂಗಳಾಪಹಂ|
ಸಂಗೃಣೇ ದಶರಥಾತ್ಮಜಂ ಹೃದಿ||

ಅರಮನೆಯ ಅಂಗಳದ ಬಳಿಯಲ್ಲಿ ಭ್ರಮರದಂತೆ ನೀಲ ಬಣ್ಣದ ಮುಂಗುರುಳುಗಳಿಂದ ಕೂಡಿದ ಮುಖ ಉಳ್ಳವನಾಗಿ ಕ್ರೀಡಿಸುತ್ತಿರುವ, ಬಾಲರಾಮನಾದ, ಮಂಗಳಪ್ರದನೂ, ಅಮಂಗಳ ನಾಶಕನೂ ಆದ, ದಶರಥ ಪುತ್ರನಾದ ಶ್ರೀರಾಮಚಂದ್ರನನ್ನು ಮನಸ್ಸಿನಲ್ಲಿ ಧ್ಯಾನಿಸುತ್ತೇನೆ.

ಕೌಮಾರೋ ರಾಮಚಂದ್ರಃ ಕಮಲಮೃದುಪದಾಶೋಭಯನ್ ಭೂಮಿಭಾಗಂ|
ಮಾತುಶ್ಚಾನಂದಕಾರೀ ಮರಕತ ನಿಕರಾಕಾರ ಮಿಂದೀವರಾಕ್ಷಃ|
ಉತ್ಸಂಗೇ ಸನ್ನಿವಿಷ್ಟಃ ಪಿತುರವರಜೈಃ ಸ್ತೂಯಮನೋಪಕಾರೀ |
ನಾನಾಲಂಕಾರ ಭೂಷಸ್ಫುರತು ಮಮಸದಾ ಮಾಯಯಾ ರಾಮಈಶಃ||

ಶ್ರೀರಾಮಚಂದ್ರನು ಬಾಲನಾಗಿ, ಮನೋಹರವಾದ ಮತ್ತು ಮೃದುವಾದ ಪಾದಗಳುಳ್ಳವನಾಗಿ, ತಾನಿರುವ ಸ್ಥಳವನ್ನು ಪ್ರಕಾಶಿಸುತ್ತಾ, ತಾಯಿಗೆ ಸಂತೋಷವನ್ನುಂಟುಮಾಡುತ್ತಾ, ಪಚ್ಚೆಯ ಕಾಂತಿಯನ್ನು ಹೋಲುವ ಶರೀರ ಕಾಂತಿಯುಳ್ಳವನಾಗಿ, ಕಮಲಾಕ್ಷನಾಗಿ ತನ್ನ ತಂದೆಯಾದ ದಶರಥನ ತೊಡೆಯಮೇಲೆ ಕುಳಿತು ಕೊಂಡು, ತಮ್ಮಂದಿರಿಂದ ಹೊಗಳಿಸಿಕೊಳ್ಳುತ್ತಿರುವ, ಎಲ್ಲರಿಗೂ ಬೇಕಾದವನೂ ನಾನಾ ವಿಧವಾದ ಒಡವೆಗಳಿಂದ ಅಲಂಕೃತನೂ, ಪರಮಾತ್ಮರೂಪಿಯೂ ಆದ ಶ್ರೀ ಬಾಲರಾಮನು ನನ್ನ ಅಜ್ಞಾನವನ್ನು ಹೋಗಲಾಡಿಸಿ, ನನ್ನ ಮುಂದೆ ಪ್ರಕಾಶಿಸಲಿ.

ಕಲ್ಯಾಣರಾಮ ಸ್ತೋತ್ರ

ಮೈಥಿಲ್ಯಾನಗರೇ ವಿವಾಹಸಮಯೇ ಕಲ್ಯಾಣವೇದ್ಯಂತರೇ ।
ಶ್ರೀಮಂತೌ ವಿಮಲೇಂದು ರತ್ನಖಚಿತೇ ಪೀಠೇ ವಸಂತೌ ಶುಭೇ ।
ಶೃಣ್ವಂತೌ ನಿಗಮಾರ್ಥ ವೇದವಿದುಷಾಮಾಶೀರ್ಭಿರಾರಾಜಿತೌ |
ಪಾಯಾಸ್ತಾಂ ಸುವಧೂವರೌ ಸುಚರಿತೌ ಶ್ರೀ ಜಾನಕೀ ರಾಘವೌ ||

ಮಿಥಿಲಾ ಪಟ್ಟಣದಲ್ಲಿ, ವಿವಾಹ ಸಮಯದಲ್ಲಿ, ಕಲ್ಯಾಣಮಂಟಪದಲ್ಲಿ ಪೂರ್ಣಚಂದ್ರ ಪ್ರಕಾಶದಿಂದ ಕೂಡಿದ ರತ್ನಪೀಠದಲ್ಲಿ, ಶುಭಲಗ್ನದಲ್ಲಿ ಕುಳಿತು, ವಿದ್ವಾಂಸರುಗಳ ವೇದ ವೇದಾರ್ಥಗಳ ವಿಚಾರವನ್ನು ಶ್ರವಣ ಮಾಡುತ್ತಾ ಅವರುಗಳ ಆಶೀರ್ವಚನಗಳಿಂದ .ರಾರಾಜಿಸುತ್ತಾಯಿರುವ, ವಧೂವರರಾದ, ಸುಚರಿತ್ರರಾದ, ಸೀತಾರಾಮರು ನಮ್ಮನ್ನು ಕಾಪಾಡಲಿ.

ಭರ್ಗ ಬ್ರಹ್ಮಸುರೇಂದ್ರ ಮುಖ್ಯದಿವಿಜ ಪ್ರಾಂಜತ್ಕಿರೀಟಾಗ್ರಸಂ ।
ಸರ್ಗಾನೇಕಮಣಿ ಪ್ರಭಾಕರ ಸಹಸ್ರಾಭಂ ಪದಾಂಭೋರುಹೇ ।
ದುರ್ಗಾಸಂತತ ಸಂಸ್ತುತಾಂಘ್ರಿ ಕಮಲಂ ದುರ್ವಾರಕೋದಂಡಿನಂ ।
ಗಂಗಾಲಂಕೃತಮೌಳಿ ಮಾನಸಹರಂ ಕಲ್ಯಾಣರಾಮಂ ಭಜೇ ||

ತನ್ನನ್ನು ನಮಸ್ಕರಿಸುವ, ಈಶ್ವರ, ಬ್ರಹ್ಮ, ದೇವೇಂದ್ರರೇ ಮುಂತಾದ, ದೇವತೆಗಳ ಪ್ರಕಾಶಮಾನವಾದ ರತ್ನಖಚಿತವಾದ ಕೀರೀಟಾಗ್ರಗಳು, ತನ್ನ ಪಾದಕಮಲದಲ್ಲಿ, ಸಹಸ್ರ ಸೂರ್ಯರ, ಕಿರಣಗಳಂತಿರುವ, ಪ್ರಕಾಶವನ್ನು, ಪ್ರಸರಿಸುತ್ತಿರಲು, ಪಾರ್ವತಿಯಿಂದ ಸರ್ವದಾ ಸ್ತುತಿಸಲ್ಪಡುವಪಾದ ಕಮಲಗಳುಳ್ಳವನಾದ, ಅತಿಗಹನವಾದ ಕೋದಂಡದಿಂದ ಕೂಡಿದ, ಗಂಗೆಯುನ್ನು ಶಿರದಲ್ಲಿ ಧರಿಸಿರುವ ಪರಶಿವನ ಮನಸ್ಸಿನ ಧ್ಯಾನಮೂರ್ತಿಯಾದ, ಮಂಗಳಮೂರ್ತಿ ಆತ್ಮಾರಾಮನನ್ನು ಭಜಿಸುತ್ತೇನೆ.

ಜಾನಕ್ಯಾ ಕಮಲಾಮಲಾಂಜಲಿಪುಟೇ ಯಃಪದ್ಮ ರಾಗಾಯಿತಾಃ |
ನ್ಯಸ್ತಾ ರಾಘವಮಸ್ತಕೇಷು ವಿಲಸತ್ಕುಂದ ಪ್ರಸೂನಾಯಿತಾಃ |
ಸ್ರಸ್ತಾ ಶ್ಯಾಮಲ ಕಾಯಕಾಂತಿ ಕಲಿತಾಃ ಯಾ ಇಂದ್ರನೀಲಾಯಿತಾಃ |
ಮುಕ್ತಾಸ್ತಾಶ್ಶುಭದಾಭವಂತು ಭವತಾಂ ಶ್ರೀರಾಮ ವೈವಾಹಿಕಾಃ ||

ವಿವಾಹ ಸಮಯದಲ್ಲಿ ಸೀತಾದೇವಿಯು ತನ್ನ ಪರಿಶುದ್ಧವಾದ ಕಮಲವನ್ನು ಹೋಲುವ ಕೆಂಪಾದ ಕೈ ಬೊಗಸೆಗಳಲ್ಲಿ ಬಿಳಿಯ ಮುತ್ತುಗಳನ್ನು ಧರಿಸಿ, ಅವು ಕೆಂಪುಮಾಣಿಕದಂತಿರಲು, ಇಂದ್ರನೀಲಮಣಿಯ ಕಾಂತಿಯಂತೆ ಶ್ಯಾಮಲವರ್ಣನಾದ ಶ್ರೀರಾಮನ ಶಿರಸ್ಸಿನಮೇಲೆ, ಅವುಗಳ ಪುಷ್ಪವೃಷ್ಟಿಯನ್ನು ಕರೆದಳು. ಅವುಗಳು ನೀಲಮಣಿಯಂತೆ ಒಪ್ಪಿದುವು. ಅಂತಹ ರತ್ನತ್ರಯಗಳಿಂದ ಪೂಜಿತನಾದ ಹಾಗೂ ತ್ರಿಗುಣಾತ್ಮಕ ಮಾಯಾವಿಶಿಷ್ಟಚೈತನ್ಯದಂತೊಪ್ಪುವ, ಶ್ರೀರಾಮಚಂದ್ರನ ವಿವಾಹದ ಶುಭಮೌಕ್ತಿಕ ಪುಷ್ಪಗಳು ನಮಗೆ ಮಂಗಳವನ್ನು ಉಂಟುಮಾಡಲಿ.

ಕಸ್ತೂರೀಘನಸಾರ ಕುಂಕುಮಲಸಚ್ಛ್ರೀ ಚಂದನಾಲಂಕೃತಂ |
ಕಂದರ್ಪಾಧಿಕಸುಂದರಂ ಘನನಿಭಂ ಕಾಕುತ್ಥ್ಸವಂಶಧ್ವಜಂ |
ಕಲ್ಯಾಣಾಂಬರವೇಷ್ಟಿತಂ ಕಮಲಯಾಯುಕ್ತಂ ಕಳಾವಲ್ಲಭಂ |
ಕಲ್ಯಾಣಾಚಲ ಕಾರ್ಮುಕಪ್ರಿಯಸಖಂ ಕಲ್ಯಾಣರಾಮಂ ಭಜೇ ||

ಕಸ್ತೂರಿ ಚಂದನ ಗಂಧಗಳಿಂದ ಅಲಂಕೃತನಾದ, ಮನ್ಮಥನಿಗಿಂತ ಅತಿ ಸುಂದರನೂ ದಿವ್ಯ ತೇಜಸ್ವಿಯೂ, ಕಾಕುತ್ಥ್ಸವಂಶಕ್ಕೆ ಅಗ್ರಣಿಯೂ ಆದ, ವಿವಾಹದಲ್ಲಿ ಧರಿಸುವ ಪೀತವಸ್ತ್ರಗಳಿಂದ ಭೂಷಿತನಾದ, ಸೀತಾ ಸಮೇತನಾದ, ಷೋಡಶಕಲೆಗಳಿಂದ ಶೋಭಿಸುವ, ಮೇರು ಪರ್ವತವನ್ನು ಬಿಲ್ಲನ್ನಾಗಿ ಮಾಡಿಕೊಂಡ, ಶಿವನಪ್ರಿಯ ಮಿತ್ರನಾದ, ಕಲ್ಯಾಣರಾಮನನ್ನು ಭಜಿಸುತ್ತೇನೆ.

ಹೇಲಾ ಭಗ್ನಶಶಾಂಕ ಶೇಖರಧನುರ್ಭೂಮಂಡಲಾಖಂಡಲ |
ಶ್ರೇಣೀಮೌಳಿ ಲಸದ್ವಿನೂತ್ನ ಮಣಿಭಿರ್ದೀಪ್ತಾಂಘ್ರಿ ಪಂಕೇರುಹಃ |
ಕಲ್ಯಾಣಂ ಜನಯತ್ಯಖಂಡವಿಭವಃ ಕಲ್ಯಾಣ ಲೀಲೋತ್ಸವೇ |
ಮಾರ್ತಾಂಡಾನ್ವಯ ಮಂಡನಶ್ಚಭವತಾಂ ಸೀತಾಸಮೇತಸ್ಸದಾ ||

ಶಿವಧನುಸ್ಸನ್ನು ಲೀಲಾಮಾತ್ರದಲ್ಲಿ ಭಗ್ನಗೊಳಿಸಿ, ಭೂಮಂಡಲದ ರಾಜೇಂದ್ರರ ಶಿರೋಭೂಷಣಗಳಲ್ಲಿನ ದಿವ್ಯರತ್ನಗಳು, ಅವರುಗಳು ನಮಸ್ಕರಿಸುವಲ್ಲೂ, ತನ್ನ ಪಾದಕಮಲಗಳನ್ನು ಪ್ರಕಾಶಿಸುತ್ತಿರಲು, ಅಪಾರವಾದ ವೈಭವದಿಂದ, ಕಲ್ಯಾಣೋತ್ಸವ ಲೀಲೆಯನ್ನು ತೋರಿಸಿದ, ಸೂರ್ಯಕುಲಕ್ಕೆ ಅಲಂಕಾರಪ್ರಾಯನಾದ ಶ್ರೀರಾಮಚಂದ್ರಮೂರ್ತಿಯು ನಮಗೆ ಸದಾ ಕಲ್ಯಾಣವನ್ನುಂಟುಮಾಡಲಿ.

ವೀರರಾಮ ಸ್ತೋತ್ರ

ರಾಮಂ ಲೋಕಾಭಿರಾಮಂ ರವಿಶಶಿನಯನಂ ಕೋಟಿಸೂರ್ಯಪ್ರಕಾಶಂ |
ದಿವ್ಯಂ ದಿವ್ಯಾಸ್ತ್ರಪಾಣಿಂ ಶರಮುಖಶರಧಿಂ ಚಾರುಕೋದಂಡಹಸ್ತಂ |
ಕಾಲಂ ಕಾಲಾಗ್ನಿರುದ್ರಂ ರಿಪುಕುಲದಹನಂ ವಿಘ್ನವಿಚ್ಛೇದದಕ್ಷಂ |
ಭೀಮಂ ಭೀಮಾಟ್ಟಹಾಸಂ ಸಕಲಭಯಹರಂ ರಾಮಚಂದ್ರಂ ಭಜೇಹಂ ||

ಲೋಕಮೋಹನನಾಗಿ, ಸೂರ್ಯ ಚಂದ್ರರ ತೇಜಸ್ಸಿನಂತಿರುವ ಕಣ್ಣುಗಳುಳ್ಳವನಾಗಿ, ಕೋಟಿ ಸೂರ್ಯರ ಪ್ರಕಾಶದಂತೆ ಪ್ರಕಾಶಮಾನನಾದ, ಶ್ರೇಷ್ಠನಾದ, ಶ್ರೇಷ್ಠ ಅಸ್ತ್ರಗಳನ್ನು ಹಿಡಿದುಕೊಂಡಿರುವ, ಸಮುದ್ರದ ದರ್ಪವನ್ನು ತನ್ನ ಬಾಣದಿಂದ ಹರಣಮಾಡಿದ, ಮನೋಹರವಾದ ಕೋದಂಡದಿಂದ ಕೂಡಿದ ಹಸ್ತವುಳ್ಳ, ದುಷ್ಟರಿಗೆ ಯಮಸ್ವರೂಪಿಯಾಗಿಯೂ, ಪ್ರಳಯಕಾಲದ ರುದ್ರನಂತೆಯೂ ತೋರಿ ಶತ್ರುಗಳ ಕುಲವನ್ನೇ ದಹಿಸಿಬಿಡುವ, ಸಮಸ್ತ ವಿಘ್ನಗಳನ್ನೂ ನಾಶಮಾಡುವ, ಶತ್ರುಗಳಿಗೆ ಭಯಂಕರನೂ, ತನ್ನ ಭೀಷಣ ಧ್ವನಿಯಿಂದ ಅವರನ್ನು ನಡುಗಿಸಿ ಬಿಡುವವನೂ ಆದ, ಆಶ್ರಿತರ ಸಕಲ ಭಯವನ್ನೂ ಹರಣಮಾಡುವ ಶ್ರೀರಾಮಚಂದ್ರನನ್ನು ನಾನು ಸ್ತೋತ್ರ ಮಾಡುತ್ತೇನೆ.

ದಿವ್ಯಸ್ಯಂದನ ಮಧ್ಯಗಂ ರಣರಣ ಚ್ಚಾಪಾನ್ವಿತಂ ಭೀಷಣಂ |
ಕಾಲಾಗ್ನಿಪ್ರತಿಮಾನ ಬಾಣಕಲಿತಂ ಘೋರಾಸ್ತ್ರತೂಣೀದ್ವಯಂ |
ಸುಗ್ರೀವಾಂಗದ ರಾವಣಾನುಜ ಮರುತ್ಪುತ್ರಾದಿ ಸಂಸೇವಿತಂ |
ರಾಮಂ ರಾಕ್ಷಸವೀರಕೋಟಿಹರಣಂ ರಕ್ತಾಂಬುಜಾಕ್ಷಂ ಭಜೇ ||

ದಿವ್ಯರಥದ ಮಧ್ಯೆ ಭೀಕರ ಧ್ವನಿಪೂರಿತ ಬಿಲ್ಲಿನಿಂದಲೂ, ಪ್ರಳಯಕಾಲದ ಅಗ್ನಿಯಂತೆ ಇರುವ ಬಾಣಗಳಿಂದಲೂ, ಘೋರವಾದ ಮಂತ್ರಾಸ್ತ್ರಗಳಿಂದ ತುಂಬಿದ ಬತ್ತಳಿಕೆಯಿಂದಲೂ, ಶೋಭಿಸುತ್ತ, ಸುಗ್ರೀವ, ಅಂಗದ, ರಾವಣನ ತಮ್ಮನಾದ ವಿಭೀಷಣ, ಆಂಜನೇಯ ಇವರುಗಳಿಂದ ಸೇವಿಸಿಕೊಳ್ಳುತ್ತಾ, ವೀರರಾದ, ಕೋಟ್ಯಾನುಕೋಟಿ ರಾಕ್ಷಸರನ್ನು ಸಂಹರಿಸುವಾಗ, ಕೆಂಪಾದ ಕಣ್ಣುಗಳುಳ್ಳವನಾಗಿ ವೀರನೆನಿಸಿ ಮೆರೆಯುವ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ದೋರ್ದಂಡದ್ವಯ ಮಂಡಲೀಕೃತ ಮಹಾಕೋದಂಡ ಚಂಡಾಶುಗೈಃ |
ನಿರ್ಘಾತೈಃ ರವಿಕೋಟಿತುಲ್ಯ ನಿಶಿತೈರ್ಬ್ರಹ್ಮಾದಿ ಮುಖ್ಯಸ್ತುತೈಃ |
ಸುಗ್ರೀವಾದಿ ಸಮಸ್ತ ವಾನರಚಮೂನಾಜ್ಞಾಪಯಂತಂಗಿರಾ |
ತಾಂಸ್ತಾನ್ತಾಡಯ ತಾಡಯೇತ್ಯನುಪದಂ ಶ್ರೀರಾಮಚಂದ್ರಂ ಭಜೇ ||

ಯುದ್ಧ ಸಮಯದಲ್ಲಿ ತನ್ನ ಬಾಹುಗಳಿಂದ ಮಹಾ ಕೋದಂಡವನ್ನು ಬಗ್ಗಿಸಿ, ಕೋಟಿ ಸೂರ್ಯರ ಕಾಂತಿಗೆ ಸಮಾನವಾದ, ಮೊನಚಾದ ಬಾಣಗಳನ್ನು ಪ್ರಯೋಗಿಸುತ್ತಾ, ಬ್ರಹ್ಮಾದಿಗಳಿಂದ ಹೊಗಳಿಸಿಕೊಳ್ಳುತ್ತಾ ಸುಗ್ರೀವಾದಿ ಸಮಸ್ತ ವಾನರರಿಗೂ "ಶತ್ರುಗಳನ್ನು ಛೇದಿಸಿ, ಛೇದಿಸಿ," ಎಂದು ಅಪ್ಪಣೆ ಕೊಡುತ್ತಾ ಇರುವ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಆಕರ್ಣಮಾಕೃಷ್ಟ ಧನುರ್ಗುಣಾಢ್ಯಂ |
ದಿವ್ಯಾಸ್ತ್ರ ಮಂದೀಕೃತ ರಾಕ್ಷಸೇಂದ್ರಂ |
ರಥಾಧಿರೂಢಂ ರಣರಂಗಧೀರಂ |
ರಾಮಂ ಭಜೇ ರಕ್ತಸರೋರುಹಾಕ್ಷಂ ||

ಕಿವಿಯವರೆವಿಗೆ ಧನುಸ್ಸಿನ ಹೆದೆಯನ್ನು ಎಳೆದು, ದಿವ್ಯಾಸ್ತ್ರಗಳನ್ನು ಪ್ರಯೋಗಮಾಡಿ, ರಾವಣನ ದರ್ಪವನ್ನು ಮಂಕುಗೊಳಿಸಿದ, ಇಂದ್ರರಥಾಧಿರೂಢನೂ, ಯುದ್ಧಧೀರನೂ, ಕೆಂಪಾದ ನೇತ್ರ ಕಮಲಗಳಿಂದ ಕೂಡಿದವನೂ, ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಏತೌತೌ ದಶಕಂಠಕಂಠ ಕದಳೀ ಕಾಂತಾರ ಕಾಂತಿಚ್ಛಿದೌ |
ವೈದೇಹೀ ಕುಚಕುಂಭ ಕುಂಕುಮಲಸತ್ಪಂಕಾರುಣಾಲಂಕೃತೌ |
ವಿಶ್ವತ್ರಾಣ ನಿದಾನ ಸಾಧುಸರಸಪ್ರಾರಂಭ ಯೂಥೌಭುಜೌ |
ದೇಯಾಸ್ತಾಮುರು ವಿಕ್ರಮಾ ರಘುಪತೇ ಶ್ರೇಯಾಂಸಿ ಭೂಯಾಂಸಿನಃ ||

ರಾವಣನ ಕಂಠಗಳೆಂಬ ಬಾಳೆಯಗಿಡಗಳಿಂದ ಕೂಡಿದ ವನದಕಾಂತಿಯನ್ನು ಭಗ್ನಗೊಳಿಸಿದ, ಅಂದರೆ ರಾವಣನ ದಶಕಂಠಗಳನ್ನು ಕತ್ತರಿಸಿದ, ಸೀತಾದೇವಿಯ ಆಲಿಂಗನದಿಂದ ಮೋಹಕವಾದ, ಪ್ರಪಂಚದ ಸ್ಥಿತಿಗೂ, ಸಂರಕ್ಷಣೆಗೂ, ಆಧಾರವಾಗಿ ಉನ್ನತವೂ, ಪ್ರತಾಪಶಾಲಿಗಳೂ ಆದ, ಶ್ರೀರಾಮನ ಬಾಹುದ್ವಯಗಳು, ನಮಗೆ ಶ್ರೇಯಸ್ಸನ್ನುಂಟುಮಾಡಲಿ.

ಕರ್ಣಾಂತ ವಿಶ್ರಾಂತ ಧನುರ್ಗುಣಾಂಕಂ |
ಕಲಂಬ ಲಕ್ಷ್ಯೀಕೃತ ರಾಕ್ಷಸೇಶ್ವರಂ |
ವೃದ್ಧಶ್ರವಸ್ಯಂದನ ಮಧ್ಯಸಂಸ್ಥಂ |
ರೂಕ್ಷೇಕ್ಷಣಂ ರಾಮ ಮಹಂ ನಮಾಮಿ ||

ಧನುವನ್ನು ಕಿವಿಯವರವಿಗೆ ಸೆಳೆದು ಅದರಲ್ಲಿ ಬಾಣದಿಂದ ರಾವಣನನ್ನು ಗುರಿಯಿಟ್ಟು, ಇಂದ್ರನ ರಥದಲ್ಲಿ ಕುಳಿತು, ಘೋರದೃಷ್ಟಿಯಿಂದ ರಾವಣನನ್ನು ನೋಡುತ್ತಿರುವ, ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಸುತ್ರಾಮ ನೀಲೋತ್ಪಲ ನೀಲಮೇಘ |
ಶ್ರೀನಿರ್ಜಿತಾಂಗಂ ಸುತಯಾಧರಣ್ಯಾಃ |
ಯುಕ್ತಂ ಸುರೇಂದ್ರಾವನಮಾನಸಂತಂ |
ರಾಮಂ ಭಜೇ ರಾಕ್ಷಸ ವಂಶನಾಶನಂ ||

ಇಂದ್ರನೀಲ, ನೈದಿಲೆ, ಮೇಘ, ಯಿವುಗಳಿಗೆ ಸಮಾನವಾದ ನೀಲಶರೀರಿಯಾದ, ಸೀತಾಸಮೇತನಾದ, ಇಂದ್ರಾದಿದೇವತೆಗಳನ್ನು ರಕ್ಷಿಸುವ ಸಂಕಲ್ಪದಿಂದ ಕೂಡಿದ, ರಾಕ್ಷಸವಂಶವನ್ನೇ ನಾಶಮಾಡಿದ, ಶ್ರೀರಾಮನನ್ನು ಭಜಿಸುತ್ತೇನೆ.

ಆಕರ್ಣಾಂತ ಗುಣೋಲ್ಲಸಚ್ಛರಮಜಂ ಕಲ್ಪಾಂತ ಕಾಲೋಪಮಂ |
ನೇತ್ರಾಂತಾರುಣತಾವಹಂ ತಮನಿಶಂಶಾಖಾಮೃಗಾಹ್ಲಾದಕಂ |
ಪೌಲಸ್ತ್ಯಾಸುರ ದೃಷ್ಟಿಚಂಚಲಕರಂ ಶಸ್ತ್ರಾಸ್ತ್ರಸಂಧಾಯಿನಂ |
ಬಾಣಾನೇಕ ವಿಚಿತ್ರ ಹಸ್ತಕುಶಲಂ ಶ್ರೀ ವೀರರಾಮಂ ಭಜೇ ||

ಬಾಣವನ್ನು ಹೆದೆಗೆ ಏರಿಸಿ ಕಿವಿಯವರೆಗೆ ಸೆಳೆದು ನಿಲ್ಲಿಸಿರುವವನೂ, ಆದಿಪುರುಷನೂ, ಪ್ರಳಯಕಾಲದ ಯಮನಂತೆ ಕೆಂಪಾದ ಕಣ್ಣುಗಳಿಂದ ಕೂಡಿರುವವನೂ, ಯಾವಾಗಲೂ ಕಪಿಗಣಗಳನ್ನು ಸಂತೋಷ ಪಡಿಸ ತಕ್ಕವನೂ, ಪುಲಸ್ತ್ಯನ ಮಗನಾದ ರಾವಣನ ದೃಷ್ಟಿ ನೋಟವನ್ನು ಭಯದಿಂದ ಅಮರುವಂತೆ ಮಾಡುವವನೂ, ಶಸ್ತ್ರಾಸ್ತ್ರಗಳನ್ನು ಸಂಧಾನ ಮಾಡುತ್ತಿರುವವನೂ, ಅನೇಕ ಬಾಣಗಳನ್ನು ಚಿತ್ರ ವಿಚಿತ್ರವಾಗಿ ಪ್ರಯೋಗಿಸುವುದ ರಲ್ಲಿ ಹಸ್ತ ಕೌಶಲ್ಯವುಳ್ಳವನೂ, ಆದ ಶ್ರೀ ವೀರರಾಮನನ್ನು ಭಜಿಸುತ್ತೇನೆ.

ದೇವೇಂದ್ರೇಣ ಸಮರ್ಪಿತೇ ಧ್ವಜಯುತೇ ಸತ್ಸ್ಯಂದನೇ ಸಂಸ್ಥಿತಂ |
ಸೌತ್ಕಂಠಾತ್ಸುರವೈರಿ ವೀರ್ಯವಿಭವಂ ಜ್ಞಾತ್ವಾ ಭುಜಾಸ್ಫಾಲನಂ |
ಕೃತ್ವಾಸೂತಯುತಂ ದಶಾನನಹರಂ ತೂಣೀರಸಂಸ್ಥಂ ಶರಂ |
ಹೃತ್ವಾ ಜ್ಯಾನಿನದೇನವೈರಿ ಭಯದಂ ಶ್ರೀ ವೀರರಾಮಂ ಭಜೆ ||

ದೇವೇಂದ್ರನಿಂದ ಸಮರ್ಪಿತವಾದ ಧ್ವಜದಿಂದಕೂಡಿದ ಒಳ್ಳೆಯ ರಥದಲ್ಲಿ ಆಸೀನನಾಗಿ, ದೇವತೆಗಳ ವಿರೋಧಿಯಾದ ರಾಕ್ಷಸರ ವೀರ್ಯಶ್ರೀಯು ಎಷ್ಟರಮಟಿಗೆಯಿದೆ ಎಂಬುದನ್ನು ಆಸಕ್ತಿಯಿಂದ ತಿಳಿದು, ಭುಜಗಳನ್ನು ತಟ್ಟಿಕೊಂಡು, ತನ್ನ ಶೌರ್ಯವನ್ನು ಪ್ರದರ್ಶಿಸುತ್ತಾ, ಇಂದ್ರನವಿಮಾನದಲ್ಲಿ ಕುಳಿತು, ಅವನ ಸಾರಥಿಯಾದ ಮಾತಲಿಯಿಂದ ಕೂಡಿದವನಾಗಿ, ರಾವಣನೊಡನೆ ಯುದ್ಧಮಾಡಿ, ಅವನಮೇಲೆ ಬಾಣ ಪ್ರಯೋಗಮಾಡಿ, ಅವನನ್ನು ಸಂಹರಿಸಿ, ಆ ಬಾಣವನ್ನು ಪುನಃ ಬತ್ತಳಿಕೆಗೆ ಸೇರಿಸಿ, ತನ್ನ ಗೆಲುವನ್ನು ತೋರ್ಪಡಿಸಲು ಬಿಲ್ಲನ್ನು ಠಂಕಾರಮಾಡಿ, ಭಯೋತ್ಪಾದನೆಮಾಡಿದ ಶ್ರೀ ವೀರರಾಮನನ್ನು ಭಜಿಸುತ್ತೇನೆ.

ಶ್ರೀರಾಮಃ ಕುಶಿಕಾತ್ಮಜಸ್ಯ ವಚನೇನಾಕೃಷ್ಯ ಬಾಣಾಸನಂ |
ಮಾರೀಚಂಚ ಸುಬಾಹುಕಂ ಶರಯುಗೇ ನ್ಯೈವಾಹವೇ ಲೀಲಯಾ |
ಕ್ರಾಂತಃ ಸುಂದರೆ ಕಾಕಪಕ್ಷರುಚಿರಃ ಸೌಮಿತ್ರಿಣಾ ಸಂಸ್ತುತಃ |
ಪಾಯಾನ್ನಃ ಕಮಲಾನನ ಸ್ಸಕರುಣಃ ಕಾಲಾಂಬುದ ಶ್ಯಾಮಲಃ ||

ವಿಶ್ವಾಮಿತ್ರನ ವಚನದಮೇಲೆ ಬಾಣಗಳನ್ನು ಹೆದೆಗೇರಿಸಿ, ಕೇವಲ ಎರಡು ಬಾಣಗಳಿಂದ ಮಾರೀಚ, ಸುಬಾಹುಗಳನ್ನು ಯುದ್ಧದಲ್ಲಿ ಲೀಲಾಮಾತ್ರದಲ್ಲಿ ಖೇದಗೊಳಿಸಿದವನಾದ, ಕಿವಿಗಳ ಮೇಲ್ಭಾಗದಲ್ಲಿ ಕಾಗೆಯ ರೆಕ್ಕೆಗಳ ಆಕಾರವನ್ನು ಹೋಲುವಂತೆ ಜುಲ್ಪಿ ಕೂದಲುಗಳನ್ನು ಹೊಂದಿರುವ, ಲಕ್ಷ್ಮಣನಿಂದ ಸ್ತುತಿಸಲ್ಪಟ್ಟ, ಕಮಲದಂತೆ ಮುಖವುಳ್ಳ, ಕರುಣೆಯಿಂದ ಕೂಡಿದ, ವರ್ಷಾಕಾಲದ ಮೋಡದಂತೆ ನೀಲವರ್ಣನಾದ, ಶ್ರೀರಾಮಚಂದ್ರನು ನಮ್ಮನ್ನು ಕಾಪಾಡಲಿ.

ಕೋದಂಡರಾಮ ಸ್ತೋತ್ರ

ಶ್ರೀರಾಮಂ ಕರುಣಾಕರಂ ಗುಣನಿಧಿಂ ಸೀತಾಪತಿಂ ಶಾಶ್ವತಂ।
ಪಾರಾವಾರ ಗಭೀರಮಬ್ಜನಯನಂ ಪ್ರಾವೃಡ್ಘನ ಶ್ಯಾಮಲಂ।
ವೀರಶ್ರೇಷ್ಠಮನಾಮಯಂ ವಿಜಯಿನಂ ವಿಶ್ವಪ್ರಕಾಶಾತ್ಮಕಂ।
ಘೋರಾರಾತಿ ಪ್ರಕರಾಧಿಪ ಪ್ರಹರಣಂ ಕೋದಂಡರಾಮಂ ಭಜೇ॥

ಕರುಣೆಗೆ ಆಶ್ರಯನೂ, ಸದ್ಗುಣಗಳಿಗೆ ನಿಧಿಯೂ, ಸೀತಾರಮಣನೂ, ಶಾಶ್ವತನೂ, ಸಮುದ್ರದಂತೆ ಗಂಭೀರನೂ, ಕಮಲ ನೇತ್ರನೂ, ಮೇಘಶ್ಯಾಮಲಮೂರ್ತಿಯೂ, ವೀರನೂ, ಶ್ರೇಷ್ಠನೂ, ಕ್ಲೇಶರಹಿತನೂ, ವಿಜಯಿಯೂ, ಪ್ರಪಂಚವನ್ನೇ ಪ್ರಕಾಶಿಸುವವನೂ, ಘೋರ ಶತ್ರುಗಳ ಗುಂಪಿನಲ್ಲಿ ಅಗ್ರಗಣ್ಯನಾದ ರಾವಣನನ್ನು ಸಂಹರಿಸಿದವನೂ, ಆದ ಕೋದಂಡರಾಮನನ್ನು ಭಜಿಸುತ್ತೇನೆ.

ರಾಮಂ ಸೌಮಿತ್ರಿಮಿತ್ರಂ ರಘುಪತಿಮಮಲಂ ರಾಮಚಂದ್ರಂರಮೇಶಂ।
ರಮ್ಯಂ ಶ್ರೀರಾಘವೇಶಂ ಶುಭಲಲಿತಮುಖಂ ಶುದ್ಧಸತ್ವಂ ಸುವೀರ್ಯಂ।
ಸೀತಾ ಸೌಂದರ್ಯಪಾತ್ರಂ ಸುರಮುನಿವಿನುತಂ ನೀಲಮಿಂದೀವರಾಭಂ।
ವಂದೇ ವಂದಾರುಪಾಲಂ ರಜನಿಚರಹರಂ ರಮ್ಯ ಕೋದಂಡರಾಮಂ॥

ಲಕ್ಷ್ಮಣನ ಮಿತ್ರನೂ, ರಘುಪತಿಯೂ, ಪರಿಶುದ್ಧನೂ, ಲಕ್ಷ್ಮೀಶನೂ, ಮನೋಹರನೂ, ಶುಭಕರವಾದ ಮಂಗಳ ಆನನವನ್ನು ಹೊಂದಿರುವವನೂ, ಶುದ್ಧ ಸತ್ವಗುಣದಿಂದ ಕೂಡಿದವನೂ, ವೀರನೂ, ಸೀತಾಸೌಂದರ್ಯಕ್ಕೆ ಪಾತ್ರನೂ, ದೇವತೆಗಳಿಂದಲೂ ಋಷಿಗಳಿಂದಲೂ ಸ್ತುತಿಸಲ್ಪಡುವನೂ, ನೈದಿಲೆಯಂತೆ ನೀಲಶರೀರಿಯೂ, ಆಶ್ರಿತ ರಕ್ಷಕನೂ, ರಾಕ್ಷಸ ನಾಶಕನೂ ಆದ, ಕೋದಂಡರಾಮನನ್ನು ನಮಸ್ಕರಿಸುತ್ತೇನೆ.

ಅಸಿತ ಕಮಲ ಭಾಸಾ ಭಾಸಯಂತಂ ತ್ರಿಲೋಕಂ।
ದಶರಥಕುಲದೀಪಂ ದೈವತಾಂಭೋಜ ಭಾನುಂ।
ದಿನಕರಕುಲಬಾಲಂ ದಿವ್ಯಕೋದಂಡಪಾಣಿಂ।
ಕನಕಖಚಿತ ರತ್ನಾಲಂಕೃತಂ ರಾಮಮೀಡೇ।

ಕನ್ನೈದಿಲೆಯಂತೆ, ಶ್ಯಾಮಲವರ್ಣನಾದ, ಮೂರು ಲೋಕಗಳನ್ನೂ ತನ್ನ ಆತ್ಮ ತೇಜಸ್ಸಿನಿಂದ ಬೆಳಗುವ, ದಶರಥ ಚಕ್ರವರ್ತಿಯ ವಂಶವನ್ನು ಪ್ರಕಾಶಿಸುವ ದೀಪವಾದ, ದೇವತೆಗಳೆಂಬ ಕಮಲಗಳಿಗೆ, ಸೂರ್ಯನೋಪಾದಿಯಲ್ಲಿ, ಹರ್ಷವನ್ನುಂಟುಮಾಡುವ, ಸೂರ್ಯವಂಶೋದ್ಭವನಾದ, ದಿವ್ಯ ಕೋದಂಡವನ್ನು ಹಸ್ತದಲ್ಲಿ ಧರಿಸಿರುವ, ಸುವರ್ಣಖಚಿತವಾದ ರತ್ನದ ಒಡವೆಗಳಿಂದ ಅಲಂಕೃತನಾದ ಶ್ರೀರಾಮಚಂದ್ರನನ್ನು ಸ್ತೋತ್ರ ಮಾಡುತ್ತೇನೆ.

ಅಂಭೋಧರ ಶ್ಯಾಮಲಮಂಬುಜಾಕ್ಷಂ।
ಧನುರ್ಧರಂ ವೀರ ಜಟಾ ಕಲಾಪಂ।
ಅಹರ್ನಿಶಂ ಲಕ್ಷ್ಮಣ ಮೈಥಿಲೀಭ್ಯಾಂ।
ನಿಷೇವ್ಯಮಾಣಂ ಪ್ರಣಮಾಮಿ ರಾಮಂ॥

ನೀಲಮೇಘಶ್ಯಾಮನೂ, ಕಮಲಾಕ್ಷನೂ, ಧನುಸ್ಸನ್ನು ಧರಿಸಿದ ಶೂರನೂ, ಜಟಾಧಾರಿಯೂ, ಪಾದಗಳ ಸಮೀಪದಲ್ಲಿ ಸೀತಾಲಕ್ಷ್ಮಣರಿಂದ ಸದಾ ಸೇವಿಸಿಕೊಳ್ಳುತ್ತಿರುವವನೂ ಆದ ಶ್ರೀರಾಮಚಂದ್ರನನ್ನು ನಮಸ್ಕರಿಸುತ್ತೇನೆ.

ಕೋದಂಡದೀಕ್ಷಾಗುರುಮಪ್ರಮೇಯಂ |
ಸಲಕ್ಷ್ಮಣಂ ದಾಶರಥಿಂ ದಯಾಳುಂ |
ಆಜಾನುಬಾಹುಂ ಜಗದೇಕವೀರಂ |
ಅನಾಥನಾಥಂ ರಘುನಾಥಮೀಡೇ ||

ಕೋದಂಡಧಾರಿಯಾಗಿ, ಆ ಕೋದಂಡವನ್ನು ರಾಕ್ಷಸ ನಿರ್ಮೂಲನಕ್ಕಾಗಿಯೇ ಧರಿಸಿರುವೆನೆಂದು, ದೀಕ್ಷೆಯನ್ನು ತೊಟ್ಟಿರುವ, ಯಾವಪ್ರಮಾಣಕ್ಕೂ ಸಿಗದ, ಲಕ್ಷ್ಮಣ ಸಹಿತನಾದ, ದಶರಥ ಪುತ್ರನೂ, ದಯಾಳುವೂ, ಆಜಾನುಬಾಹುವೂ, ಪ್ರಪಂಚಕ್ಕೆಲ್ಲಾ ಏಕೈಕವೀರನೂ, ಅನಾಥರಿಗೆಲ್ಲಾ ಒಡೆಯನೂ, ರಘುನಾಥನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ವಾಮೇ ಕೋದಂಡದಂಡಂ ನಿಜಕರಮಮಲೇ ದಕ್ಷಿಣೇ ಬಾಣಮೇಕಂ |
ಪಶ್ಚಾದ್ಭಾಗೇಚ ನಿತ್ಯಂ ದಧತಮಭಿಮತಂ ಸಾಚಿತೂಣೀರ ಭಾರಂ |
ವಾಮೇ ವಾಮೇಲಸದ್ಭ್ಯಾಂ ಸಹಮಿಳಿತತನುಂ ಜಾನಕೀ ಲಕ್ಷ್ಮಣಾಭ್ಯಾಂ |
ರಾಮಂ ಶ್ಯಾಮಂ ಭಜೇಹಂ ಪ್ರಣತಜನಮನಃ ಖೇದವಿಚ್ಛೇದದಕ್ಷಂ ||

ತನ್ನ ಎಡಗೈನಲ್ಲಿ ಕೋದಂಡವನ್ನೂ, ಬಲಗೈನಲ್ಲಿ ಒಂದು ಬಾಣವನ್ನೂ ಧರಿಸಿ, ತನ್ನ ಬೆನ್ನಿನಲ್ಲಿ ತನಗೆ ಇಷ್ಟವಾದ ಬಾಣಗಳಿಂದ ಕೂಡಿರುವ ಬತ್ತಳಿಕೆಯ ಭಾರವನ್ನು ಹೊಂದಿ, ಎಡಭಾಗದಲ್ಲಿ ಸೀತಾಲಕ್ಷ್ಮಣರು ಇರಲು, ಅವರ ದೇಹಗಳ ಕಾಂತಿಯಿಂದ ಆ ಎಡಭಾಗವು ಶೋಭಿಸುತ್ತಿರಲು, ಆಶ್ರಿತ ಜನರ ದುಃಖವನ್ನು ನಾಶ ಮಾಡುವುದರಲ್ಲಿ ದಕ್ಷನಾದ, ಶ್ಯಾಮಲರೂಪಿಯಾದ, ಶ್ರೀರಾಮನನ್ನು ನಾನು ಧ್ಯಾನಿಸುತ್ತೇನೆ.

ಲೋಕತ್ರಾಣಾನುಕಾರೀ ದಶವದನ ಶಿರಃಪಙ್ಕ್ತಿವಿಚ್ಛೇದಕಾರೀ |
ಲಂಕಾಲಂಕಾರಹಾರೀ ಭೃಗು ತನಯ ಮನಸ್ಸರ್ವಗರ್ವಾಪಹಾರೀ |
ಸೀತಾ ಸೀಮಂತಕಾರೀ ಮಣಿಮಯಮುಕುಟೋ ದ್ದಿವ್ಯಕೋದಂಡಧಾರೀ |
ಶ್ರೀರಾಮಃ ಪಾಪಹಾರೀ ಶಮಯತುದುರಿತಂ ಭೂಮಿಭಾರಾಪಹಾರೀ ||

ಲೋಕಕ್ಕೆ ಚೈತನ್ಯಬರಲು ಮೂಲಕಾರಣನೂ, ರಾವಣನ ದಶ ಶಿರಗಳನ್ನು ಕತ್ತರಿಸಿದವನೂ, ಲಂಕೆಯ ಅಲಂಕಾರವನ್ನು ಭಗ್ನಮಾಡಿದವನೂ, ಪರಶುರಾಮನ ಮನಸ್ಸಿನಲ್ಲಿದ್ದ ಗರ್ವವನ್ನು ಹರಣ ಮಾಡಿದವನೂ, ಸೀತೆಗೆ ಸೌಭಾಗ್ಯದಾಯಕನೂ, ರತ್ನಗಳಿಂದ ರಾರಾಜಿಸುವ ಕಿರೀಟದಿಂದ ಕೂಡಿದವನೂ, ದಿವ್ಯ ಕೋದಂಡಧಾರಿಯೂ, ಭೂಮಿಭಾರವನ್ನು ತಗ್ಗಿಸುವವನೂ, ಪಾಪನಾಶಕನೂ, ಆದ ಶ್ರೀರಾಮಚಂದ್ರನು, ನಮ್ಮ ಪಾಪಗಳನ್ನು ಶಮನಮಾಡಲಿ.

ಸ್ಮಿತಾನನಂ ಪದ್ಮದಳಾಯತೇಕ್ಷಣಂ |
ವಿನೀಲ ಮಾಣಿಕ್ಯ ಜಿತಾಂಗ ಶೋಭಿತಂ |
ಜಟಾಕಿರೀಟಂ ಶರಚಾಪ ಲಾಂಛನಂ |
ನಮಾಮ್ಯಹಂ ಭಾನು ಕುಲಾಬ್ಧಿ ಕೌಸ್ತುಭಂ ||

ಮಂದಹಾಸದಿಂದ ಕೂಡಿದ ಮುಖವುಳ್ಳ, ಕಮಲಾಕ್ಷನಾದ, ಇಂದ್ರನೀಲಮಣಿಗೂ ಮೀರಿದ ಮನೋಹರವಾದ ಶ್ಯಾಮಲ ಕಾಂತಿಯುಳ್ಳ ಶರೀರದಿಂದಕೂಡಿದ, ಕಿರೀಟದಂತೆ ತಲೆಯಮೇಲೆ ಎತ್ತರವಾಗಿ ಕಟ್ಟಿದ ಜಟಿಯಿಂದ ಕೂಡಿದ, ಬಿಲ್ಲು ಬಾಣಗಳನ್ನು ಧರಿಸಿದ, ಸೂರ್ಯವಂಶಕ್ಕೆ ಕೌಸ್ತುಭಮಣಿಯಂತಿರುವ, ಶ್ರೀರಾಮನನ್ನು ನಮಸ್ಕರಿಸುತ್ತೇನೆ.

ಯೋಚಂಡಗಾಂಭೀರ್ಯ ಧನುರ್ವಿತೇಜೋ ।
ಭೂಮಂಡಲೀ ಪುಣ್ಯಕೃತಾವತಾರಃ ।
ಆ ಖಂಡಲಾದ್ಯೈರಮರ್ಯೈರು ಪೇತಃ ।
ಕೋದಂಡಪಾಣಿಃ ಕುಲದೈವತಂನಃ ॥

ಪ್ರಚಂಡವಾಗಿಯೂ ಗಂಭೀರವಾಗಿಯೂ ಇರುವ ಧನುಸ್ಸಿನಿಂದ ಯಾರು ವಿಶೇಷವಾಗಿ ತೇಜೋವಂತನಾಗಿರುವನೋ, ಪೃಥ್ವಿಮಾತೆಯ ಪುಣ್ಯದಿಂದ ಯಾರು ಮಾನುಷರೂಪದಲ್ಲಿ ಈ ಪೃಥ್ವಿಯಲ್ಲಿ ಅವತರಿಸಿರುವನೋ, ಯಾರು ಇಂದ್ರಾದಿ ದೇವತೆಗಳಿಂದ ಕೂಡಿರುವನೋ, ಅಂತಹ ಕೋದಂಡಧರನಾದ ಶ್ರೀರಾಮಚಂದ್ರನು ನಮ್ಮ ಕುಲದೈವವು.

ರಕ್ತಾಂಭೋರುಹ ಲೋಚನಂ ಕುವಲಯ ಶ್ಯಾಮಂ ಕಪೋಲಂಧನುಃ ।
ಕೋಟಿನ್ಯಸ್ತ ಕರಾಂಬುಜಂ ಧೃತತನುತ್ರಾಣಂ ಜಟಾಮಂಡಿತಂ ।
ಜೇತಾರಂ ಖರದೂಷಣ ತ್ರಿಶಿರ ಸಾಮಾಬದ್ಧ ಗೋಧಾಂಗುಳೀ ।
ತ್ರಾಣಂ ಮಾರ್ಗಣ ಪೂರ್ಣತೂಣಯುಗಳಂ ಕೋದಂಡರಾಮಂ ಭಜೇ ॥

ರಕ್ತಾಕ್ಷನೂ, ನೈದಿಲೆಯಂತೆ ಶ್ಯಾಮಲವರ್ಣನೂ, ತನ್ನ ಕಪೋಲದ ಬಳಿಗೆ ಧನುಸ್ಸು ಬಂದು ನಿಂದಿರಲು ಆ ಧನುಸ್ಸಿನ ಅಗ್ರಭಾಗವನ್ನು ಹಿಡಿದುಕೊಂಡ ಹಸ್ತಕಮಲದಿಂದ ಪ್ರಕಾಶಿಸುವವನಾದ, ಅಂಗರಕ್ಷೆಯನ್ನು ಧರಿಸಿರುವ, ಜಟಾಧಾರಿಯಾದ, ಖರದೂಷಣ ತ್ರಿಶಿರ ಎಂಬ ರಾಕ್ಷಸರನ್ನು ಜಯಿಸಿದವನಾದ, ವ್ಯಾಘ್ರನಖದಂತಿರುವ ಆಯುಧವನ್ನು ಬೆರಳಿನಲ್ಲಿ ಧರಿಸಿರುವ, ಬಾಣಗಳಿಂದ ತುಂಬಿರುವ ಎರಡು ಬತ್ತಳಿಕೆಗಳುಳ್ಳವನಾದ, ಕೋದಂಡರಾಮನನ್ನು ಭಜಿಸುತ್ತೇನೆ.

ಕೃಷ್ಣಂ ಭೀಮಧನುಃ ಕಠೋರನಿನದಂ ಬ್ರಹ್ಮಾದಿ ಸಂವಿಸ್ಮಯಂ ।
ಭಾಸ್ವದ್ವಾಜಿಗಜೇನ ಯಾನಮನಿಶಂ ಶಂಭೋಶ್ಶಿರಃ ಕಂಪಯನ್ ।
ದಿಗ್ದಂತಿಸ್ಖಲನಂ ಕುಲಾದ್ರಿಚಲನಂ ಸಪ್ತಾರ್ಣವೋನ್ಮೀಲನಂ ।
ವೈದೇಹೀ ಮುದನಂ ಮದಾಂಧ ದಮನಂ ತ್ರೈಲೋಕ್ಯಸಮ್ಮೋಹನಂ ।

ಶ್ಯಾಮಲ ಮೂರ್ತಿಯೂ, ಪ್ರಚಂಡವಾದ ಧನುಸ್ಸಿನಿಂದ ಕೂಡಿದವನೂ, ಸಿಂಹನಾದಮಾಡಿ ಶತ್ರುಗಳನ್ನು ಭಯಗೊಳಿಸಿದವನೂ, ಬ್ರಹ್ಮಾದಿಗಳಿಗೆ ಅದ್ಭುತವಾಗಿ ಕಾಣತಕ್ಕವನೂ, ವರ್ಚಸ್ಸಿನಿಂದ ಕೂಡಿದವನೂ, ಆನೆ ಕುದುರೆಗಳ ಮೇಲೆ ಕುಳಿತು ಸಂಚರಿಸುವನೂ, ತನ್ನ ಕೋದಂಡ ಧ್ವನಿಯಿಂದ ಪರಮೇಶ್ವರನು ಸಂತೋಷದಿಂದ ತಲೆದೂಗುವಂತೆ ಮಾಡುವವನೂ, ದಿಗ್ಗಜಗಳನ್ನು ನಡುಗಿಸತಕ್ಕವನೂ, ಕುಲಪರ್ವತಗಳು ಅಲ್ಲಾಡುವಂತೆ ಮಾಡುವವನೂ, ಸಪ್ತಸಮುದ್ರಗಳನ್ನೂ ಅಲ್ಲೋಲ ಕಲ್ಲೋಲ ಮಾಡುವವನೂ, ಸೀತೆಗೆ ಮೋದವನ್ನುಂಟು ಮಾಡುವವನೂ, ಮತಿಮೂಢರಾದ ರಾಕ್ಷಸರನ್ನು ನಿಗ್ರಹಿಸತಕ್ಕವನೂ, ಮೂರು ಲೋಕಗಳನ್ನೂ ಮೋಹಗೊಳಿಸುವವನೂ, ಆದ ಶ್ರೀರಾಮನನ್ನು ಭಜಿಸುತ್ತೇನೆ.

ಮನ್ಮಥರಾಮ ಸ್ತೋತ್ರ

ಸುಸ್ನಿಗ್ಧಂ ನೀಲಕೇಶಂ ಸ್ಫುಟಮಧುರಮುಖಂ ಸುಂದರ ಭ್ರೂಲಲಾಟಂ |
ದೀರ್ಘಾಕ್ಷಂ ಚಾರುನಾಸಾ ಪುಟಮಮಲಮಣಿಶ್ರೇಣಿಕಾ ದಂತಪಙ್ಕ್ತಿಂ |
ಬಿಂಬೋಷ್ಠಂ ಕಂಬುಕಂಠಂ ಕಠಿನತರಮಹೋರಸ್ಕಮಾಜಾನು ಬಾಹುಂ |
ಮುಷ್ಟಿಗ್ರಾಹ್ಯಾವಲಗ್ನಂ ಪೃಥುಜಘನಮುದಾರೋರು ಜಂಘಾಂಘ್ರಿ ಮೀಡೇ ||

ಅತಿ ಶುಭ್ರವಾದ ನೀಲಕೇಶಪಾಶದಿಂದಕೂಡಿದ, ಎದ್ದು ಕಾಣಿಸುವಂತಿರುವ ಮಧುರ ಮುಖವುಳ್ಳ, ಸುಂದರವಾದ ಹುಬ್ಬು ಹಣೆಗಳಿಂದಲೂ, ವಿಶಾಲವಾದ ನೇತ್ರಗಳಿಂದಲೂ, ಮನೋಹರವಾದ ನಾಸಿಕದಿಂದಲೂ, ಪರಿಶುದ್ಧವಾದ ಮುತ್ತುಗಳ ಸಾಲಿನಂತಿರುವ ಹಲ್ಲುಗಳ ಸಾಲಿನಿಂದಲೂ, ತೊಂಡೆಯ ಹಣ್ಣಿನಂತಿರುವ ತುಟಿಗಳಿಂದಲೂ, ಶಂಖವನ್ನು ಹೋಲುವ ಕತ್ತಿನಿಂದಲೂ, ದಾರ್ಢ್ಯವೂ ವಿಶಾಲವೂ ಆದ, ಎದೆ, ಹೆಗಲು ಗಳಿಂದಲೂ, ಮೊಣಕಾಲಿನವರೆಗೆ ಬರುವಂತಿರುವ ನೀಳವಾದ ತೋಳುಗಳಿಂದಲೂ, ಒಂದೇ ಮುಷ್ಟಿಯಲ್ಲಿ ಅಡಕವಾಗುವಂತಿರುವ ತೆಳುವಾದ ನಡುವಿನಿಂದಲೂ, ವಿಶಾಲವಾದ ಹೃದಯ, ತೊಡೆ, ಪಾದಗಳಿಂದಲೂ, ರಂಜಿಸುವ ಶ್ರೀರಾಮನನ್ನು ಭಜಿಸುತ್ತೇನೆ.

ಕರ್ಪೂರಾಂಗವಿಲೇಪನಂ ರಘುವರಂ ರಾಜೀವನೇತ್ರಂ ಪ್ರಭುಂ |
ಕಸ್ತೂರೀ ನಿಕರಾಕೃತಿಂ ಖರಭೃತಿ ಪ್ರಧ್ವಂಸಿನಂ ಶ್ರೀಹರಿಂ |
~~ದುರ್ಗಾ ಸಂತತ ಸಂಸ್ತುತಾಂಘ್ರಿ ಕಮಲಂ ದುರ್ವಾರ ಕೋದಂಡಿನಂ~~ |
~~ಗಂಗಾಸಸ್ಫುಟಮೌಳಿ ಮಾನಸಹರಂ ಕಲ್ಯಾಣರಾಮಂ ಭಜೇ~~ ||

ಪಚ್ಚಕರ್ಪೂರಾದಿಗಳ ಲೇಪನದಿಂದ ರಂಜಿಸುವ, ರಘು ಶ್ರೇಷ್ಠನಾದ, ಕಮಲಾಕ್ಷನೂ ಪ್ರಭುವೂ ಆದ, ಕಸ್ತೂರಿಯಂತೆ ಶ್ಯಾಮಲ ಬಣ್ಣದ ಕಾಂತಿಯುಳ್ಳ, ಖರದೂಷಣರೇ ಮುಂತಾದ, ರಾಕ್ಷಸರನ್ನು ಧ್ವಂಸ ಮಾಡಿದ, ಶ್ರೀಹರಿ ರೂಪನಾದ, ಮನ್ಮಥನ ಸೌಂದರ್ಯಕ್ಕೆ, ಕೋಟಿಪಾಲು ಮಿಗಿಲಾದ ಸೌಂದರ್ಯದಿಂದ ಕೂಡಿದ ಶರೀರವುಳ್ಳ, ಪರಮೇಶ್ವರನಿಂದಲೂ ಸುತ್ತಿಸಿಕೊಳ್ಳುವ, ಸೀತೆಯ ಇಷ್ಟಾರ್ಥ ಪ್ರದನಾದ, ಯಾವ ಪ್ರಮೇಯಕ್ಕೂ ಸಿಲುಕದ, ಪರಿಶುದ್ಧನಾದ, ಸೀತಾ ಸಮೇತನಾಗಿರುವ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಧ್ಯಾಯೇತ್ತ್ವಾಂ ನವವಿದ್ರುಮಸ್ಫುಟತನುಂ ಬರ್ಹಾಲಸನ್ಮೇಚಕಂ |
ನಾಸಾ ರಂಜಿತ ಮೌಕ್ತಿಕಂ ಪರಿಲಸತ್ಪೀತಾಂಬರಂ ಕೌಸ್ತುಭಂ |
ವೇಣ್ವಾ ಕಂಬು ರಥಾಂಗ ಪಾಣಿ ಪರಿಘಾಪ್ರಾಪ್ತೇಕ್ಷು ಚಾಪಾಶುಗಂ |
ಶ್ರೀರಾಮಂ ನವಮನ್ಮಥಾಧಿಪಮಹಂ ಷಟ್ಕೋಣ ಚಕ್ರಸ್ಥಿತಂ ||

ಹೊಸ ಹವಳದ ಕಾಂತಿಯಂತೆ ಕೆಂಪಾದ ಶರೀರದಿಂದಲೂ, ನವಿಲುಗರಿಯ ಚಂದ್ರರೇಖೆಯ ಅಲಂಕಾರ ದಿಂದಲೂ, ಮೂಗಿನಲ್ಲಿ, ಮುತ್ತುಗಳಿಂದ ನಿರ್ಮಿತವಾದ ಆಭರಣಗಳಿಂದಲೂ, ಪ್ರಕಾಶಮಾನವಾದ ಪೀತಾಂಬರ ದಿಂದ ಕೂಡಿ, ಕೌಸ್ತುಭ, ಶಂಖ, ಚಕ್ರ, ವೇಣುಧರನಾಗಿಯೂ, ಮನ್ಮಥನಂತೆ, ಪರಿಘ, ಇಕ್ಷುಚಾಪ ಬಾಣಗಳಿಂದ ಕೂಡಿಯೂ, ನವಮನ್ಮಥನಿಗೂ ಅಧಿಪತಿಯಾಗಿ ಬೆಳಗುವ, ನಮ್ಮ ಶರೀರದಲ್ಲಿ ಷಡ್ದಳಗಳುಳ್ಳ, ಸ್ವಾಧಿಷ್ಠಾನ ಚಕ್ರದಲ್ಲಿ ನೆಲಸಿರತಕ್ಕವನಾದ, ಆತ್ಮಾರಾಮನಾದ, ಮತ್ತು ಮನ್ಮಥ ರಾಮನಾದ, ಶ್ರೀರಾಮನನ್ನು ಭಜಿಸುತ್ತೇನೆ.

ಶ್ರೀವತ್ಸಾಂಕಮುದಾರ ಕೌಸ್ತುಭಲಸತ್ಪೀತಾಂಬರಾಲಂಕೃತಂ |
ನಾನಾರತ್ನ ವಿರಾಜಮಾನಮುಕುಟಂ ನೀಲಾಂಬುದ ಶ್ಯಾಮಲಂ |
ಕಸ್ತೂರೀ ಘನಸಾರ ಚರ್ಚಿತತನುಂ ಮಂದಾರ ಮಾಲಾಧರಂ |
ಕಂದರ್ಪಾಯುತ ಸುಂದರಂ ರಘುಪತಿಂ ಸೀತಾಸಮೇತಂ ಭಜೇ ||

ಶ್ರೀವತ್ಸ ಚಿಹ್ನೆಯಿಂದ ಕೂಡಿದವನೂ, ಉದಾರಿಯೂ, ಕೌಸ್ತುಭಮಣಿಧರನೂ, ಪೀತಾಂಬರದಿಂದ ಅಲಂಕೃತನೂ, ಅನೇಕ ರತ್ನಗಳಿಂದ ರಂಜಿಸುವ ಕಿರೀಟಧಾರಿಯೂ, ನೀಲಮೇಘಶ್ಯಾಮನೂ, ಕಸ್ತೂರಿ ಮುಂತಾದ ಒಳ್ಳೆಯ ಸುಗಂಧದಿಂದ ಲೇಪಿತವಾದ ಶರೀರ ಉಳ್ಳವನೂ, ಮಂದಾರ ಪುಷ್ಪದ ಮಾಲೆಯನ್ನು ಧರಿಸಿರುವವನೂ, ಮನ್ಮಥನಂತೆ ಅತಿ ಸುಂದರನೂ, ರಘುಪತಿಯೂ, ಸೀತಾಸಮೇತನೂ ಆದ ಶ್ರೀರಾಮನನ್ನು ಭಜಿಸುತ್ತೇನೆ.

ಸೀತಾ ಸಮೇತ ರಾಮ ಸ್ತೋತ್ರ

ರಾಮಂ ರಾಜ ಶಿಖಾಮಣಿಂ ರಘುಪತಿಂ ದೇವಾರಿದರ್ಪಾಪಹಂ |
ಲೋಕಾನಾಂ ಹಿತಕಾರಿಣಂ ಗುಣನಿಧಿಂ ಕಾರುಣ್ಯ ಪುಣ್ಯೋದಯಂ |
ಮುಕ್ತಾವಿದ್ರುಮ ರತ್ನ ಶೋಭಿತತನುಂ ಸೌಂದರ್ಯ ಹಸ್ತಾಂಬುಜಂ |
ಕೌಸಲ್ಯಾತನಯಂ ಭಜಾಮಿಸತತಂ ಶ್ರೀ ಜಾನಕೀ ನಾಯಕಂ ||

ರಾಜಶ್ರೇಷ್ಠನೂ ರಾಕ್ಷಸರ ಗರ್ವಭಂಗಮಾಡಿದವನೂ ಆದ, ಲೋಕಕ್ಕೆಲ್ಲಾ ಹಿತವನ್ನುಂಟುಮಾಡುವ, ಸದ್ಗುಣಗಳ ನಿಧಿಯೂ ಕರುಣಾಮೂರ್ತಿಯೂ ಪುಣ್ಯಕ್ಕೆ ಆಶ್ರಯನೂ ಆದ, ಮುತ್ತು ಹವಳ, ರತ್ನ ಮುಂತಾದ ನವರತ್ನಗಳ ಒಡವೆಗಳಿಂದ ಶೋಭಿತವಾದ ಶರೀರವುಳ್ಳ, ಮನೋಹರವಾದ ಹಸ್ತ ಕಮಲಗಳಿಂದಕೂಡಿದ, ಕೌಸಲ್ಯಾ ಪುತ್ರನಾದ, ಜಾನಕೀ ಪ್ರಾಣನಾಯಕನಾದ, ಶ್ರೀರಾಮನನ್ನು ಯವಾಗಲೂ ನಾನು ಧ್ಯಾನಿಸುತ್ತೇನೆ.

ವೈದೇಹೀಂ ಪರಿರಭ್ಯಜಾತ ಪುಲಕಾಂ ಲಜ್ಜಾವತೀಂ ಸುಸ್ಮಿತಾಂ|
ಕಾಂಚೀನೂಪುರಹಾರ ಕಂಕಣಲಸತ್ಕರ್ಣಾವತಂಸೋಜ್ವಲಾಂ |
ಕಸ್ತೂರೀ ಘನಸಾರರಂಜಿತಕುಚಾಂ ಚಂದ್ರಾನನಾಂ, ಶ್ಯಾಮಲಂ |
ಕಂದರ್ಪಾಧಿಕಸುಂದರಂ ರಘುಪತಿಂ ಶ್ರೀರಾಮಚಂದ್ರಂ ಭಜೇ ||

ಓಲೆ, ಹಾರ, ಕಂಕಣ, ಕಾಲುಸರ, ಮುಂತಾದ ಆಭರಣಗಳಿಂದ, ಅಲಂಕೃತಳಾಗಿ ಲಜ್ಜೆಯಿಂದ ತಲೆಬಗ್ಗಿಸಿ ಕೊಂಡು, ಮಂದಹಾಸಯುತಳಾಗಿ, ಸಂತೋಷದಿಂದ ರೋಮಾಂಚಿತಳಾಗಿರುವ, ಚಂದ್ರಮುಖಿಯಾದ ಸೀತಾದೇವಿ ಯಿಂದ ಕೂಡಿರುವ, ಶ್ಯಾಮಲ ಮೂರ್ತಿಯಾದ, ಮನ್ಮಥನಿಗಿಂತಲೂ ಅತಿ ಸುಂದರನಾದ ರಘುಕುಲ ಶ್ರೇಷ್ಠನಾದ, ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ರಾಮಂ ರಾಕ್ಷಸಮರ್ದನಂ ರಘುವರಂ ಮಾರೀಚ ಸಂಹಾರಿಣಂ |
ಸುಗ್ರೀವೇಪ್ಸಿತರಾಜ್ಯದಂ ಭಯಹರಂ ಪಾಪೌಘ ವಿಧ್ವಂಸಿನಂ |
ಸಾಧೂನಾಮಭಯಪ್ರದಂ ಭಯಹರಂ ದೇವೌಘ ಸಂತೋಷಿಣಂ |
ಸಾಮೀರಿಸ್ತುತಪಾದಪದ್ಮಯುಗಳಂ ಸೀತಾಸಮೇತಂ ಭಜೇ ||

ರಾಕ್ಷಸಮರ್ದನನೂ, ಮಾರೀಚನನ್ನು ಸಂಹರಿಸಿದವನೂ, ರಘುಶ್ರೇಷ್ಠನೂ, ಸುಗ್ರೀವನ ಕೋರಿಕೆಯಂತೆ ಅವನಿಗೆ ರಾಜ್ಯಲಾಭ ಮಾಡಿಸಿದವನೂ, ಭಯನಾಶಕನೂ, ಪಾಪಗಳನ್ನು ಧ್ವಂಸ ಮಾಡತಕ್ಕವನೂ, ಸಾಧುಗಳಿಗೆ ಅಭಯವನ್ನು ಕೊಡುವವನೂ, ದೇವಸಮೂಹವನ್ನು ಸಂತೋಷಪಡಿಸುವವನೂ, ಆಂಜನೇಯನಿಂದ, ಸ್ತುತಿಸಿಕೊಳ್ಳತಕ್ಕವನೂ, ಸೀತಾಸಮೇತನೂ ಆದ ರಾಮನನ್ನು ಭಜಿಸುತ್ತೇನೆ.

ರಾಮಂ ರಕ್ತಸರೋರುಹಾಕ್ಷಮಮಲಂ ಲಂಕಾಧಿನಾಥಾಂತಕಂ |
ಕೌಸಲ್ಯಾನಯನೋತ್ಸುಕಂ ರಘುವರಂ ನಾಗೇಂದ್ರ ತಲ್ಪಸ್ಥಿತಂ |
ವೈದೇಹೀ ಕುಚಕುಂಭ ಕುಂಕುಮ ರಜೋಲಂಕಾರಿಹಾರಿಂಹರಿಂ |
ಮಾಯಾಮಾನುಷ ವಿಗ್ರಹಂ ರಘುಪತಿಂ ಸೀತಾಸಮೇತಂ ಭಜೇ ||

ಕೆಂಪು ಕಮಲದಂತೆ ಕಣ್ಣುಳ್ಳವನೂ, ಪರಿಶುದ್ಧನೂ, ಲಂಕಾಪತಿಯಾದ ರಾವಣನನ್ನು ಸಂಹರಿಸಿದವನೂ, ಕೌಸಲ್ಯಾಮಾತೆಗೆ ದರುಶನ ಕೊಟ್ಟು ಸಂತೋಷಪಡಿಸುವವನೂ, ರಘುಶ್ರೇಷ್ಠನೂ, ಆದಿಶೇಷಶಾಯಿಯೂ, ಜಾನಕಿಯನ್ನು ಆಲಿಂಗನ ಮಾಡಿಕೊಂಡು, ಆಕೆಯ ವಕ್ಷಸ್ಥಳದ ಕುಂಕುಮದಿಂದ ಅಲಂಕೃತನಾಗಿ ಆ ವಕ್ಷಸ್ಥಳದ ಅಲಂಕಾರವನ್ನು ಭಗ್ನಗೊಳಿಸಿದವನೂ, ಶ್ರೇಷ್ಠನೂ, ಮಾಯಾರೂಪದ ಮಾನವನೂ, ಸೀತಾಸಮೇತನೂ ಆದ ಶ್ರೀರಾಮನನ್ನು ಭಜಿಸುತ್ತೇನೆ.

ರಾಮಂ ಹೇಮ ತಟಿತ್ಪ್ರಭಾಂಶುಕಧರಂ ವೀರಾಸನೇ ಸಂಸ್ಥಿತಂ |
ಧೀರಂ ನೀಲಮಣಿಪ್ರಭಂ ಮಧುರಿಪುಂ ದೈತ್ಯೇಂದ್ರ ಗರ್ವಾಪಹಂ |
ವಿಶ್ವಾಮಿತ್ರ ವಸಿಷ್ಠ ನಾರದವರೈ ಸ್ಸಂಸೇವ್ಯಮಾನಂ ಸದಾ |
ನಿತ್ಯಂ ಭಾಸ್ಕರ ಚಂದ್ರಕೋಟಿ ಸದೃಶಂ ಸೀತಾಸಮೇತಂ ಭಜೇ ||

ಚಿನ್ನದ ಕಾಂತಿಯಿಂದ ಕೂಡಿ, ಪೀತಾಂಬರಧಾರಿಯಾಗಿ, ವೀರಾಸನದಲ್ಲಿ ಆಸೀನನಾಗಿ, ಧೀರನೂ ನೀಲಮಣಿಯ ಕಾಂತಿಯಂತೆ ಶ್ಯಾಮಲ ಶರೀರಿಯೂ, ಮಧು ಎಂಬ ರಾಕ್ಷಸನನ್ನು ಹಿಂದಿನ ಅವತಾರದಲ್ಲಿ ಸಂಹರಿಸಿದವನೂ, ರಾವಣನ ಗರ್ವಭಂಗ ಮಾಡಿದವನೂ, ವಿಶ್ವಾಮಿತ್ರ, ವಸಿಷ್ಠ, ನಾರದ, ಮುಂತಾದ ಮುನಿವರರಿಂದ, ಸ್ತುತಿಸಲ್ಪಟ್ಟವನೂ, ಕೋಟಿ ಸೂರ್ಯಚಂದ್ರರಿಗೆ ಸಮಾನವಾದ ಕಾಂತಿಯುಳ್ಳವನೂ, ಸೀತಾಸಮೇತನೂ ಆದ ಶ್ರೀರಾಮನನ್ನು ನಿತ್ಯವೂ ಭಜಿಸುತ್ತೇನೆ.

ಶತ್ರುಘ್ನೇನ ಕರಾಬ್ಜ ಸಂಧೃತಸಿತಚ್ಛತ್ರೇಣ ಸಂಸೇವಿತಂ |
ಕೈಕೇಯೀತನಯೇನ ಶೋಭಿತಮಲಂ ಸೌಮಿತ್ರಿಣಾಪಕ್ಷಯೋಃ |
ಮೂಲೇ ಕಲ್ಪತರೋರ್ವಿಮಾನ ವಿಲಸನ್ಮಾಣಿಕ್ಯ ಸಿಂಹಾಸನೇ |
~~ಪದ್ಮಾಸ್ಯಂ~~ ಮುನಿಸೇವಿತಂ ರಘುಪತಿಂ ಸೀತಾಸಮೇತಂ ಭಜೇ
ಸ್ವಾಸೀನಂ

ಶತ್ರುಘ್ನನು ಬೀಸಣಿಗೆಯನ್ನು ಹಿಡಿದು ಸೇವೆಗಾಗಿ ನಿಂದಿರಲು, ಹಿಂಭಾಗದಲ್ಲಿ ಉಭಯಪಾರ್ಶ್ವಗಳಲ್ಲಿ, ಲಕ್ಷ್ಮಣ, ಭರತರು ಸೇವಿಸುತ್ತಿರಲು, ಕಲ್ಪವೃಕ್ಷದಂತಿರುವ ನವರತ್ನ ನಿಬಿಡವಾದ ಶ್ವೇತಚ್ಛತ್ರದ ಅಡಿಯಲ್ಲಿನ ವಿಮಾನದಲ್ಲಿ ಪ್ರಕಾಶಮಾನವಾದ, ಮಾಣಿಕ್ಯ ಸಿಂಹಾಸನದಲ್ಲಿ, ಕುಳಿತಿರುವ, ಪದ್ಮದಂತೆ ದುಂಡು ಮುಖವುಳ್ಳ, ಮುನಿಗಳಿಂದ ಸೇವಿತನಾದ, ರಘುಶ್ರೇಷ್ಠನಾದ, ಸೀತಾಸಮೇತನಾದ ಶ್ರೀರಾಮನನ್ನು ಭಜಿಸುತ್ತೇನೆ.

ವಾಮಾಂಕೋಪರಿ ತಪ್ತ ಕಾಂಚನನಿಭಾಂ ಸೀತಾ ಸಮಾಲಿಂಗಿತಂ |
ಹಸ್ತಾಭ್ಯಾಂ ಧೃತ ಛತ್ರ ಚಾಮರ ಮಹಾ ಸೌಮಿತ್ರಿಣಾ ಸೇವಿತಂ |
ನಿತ್ಯಂ ಪೂಜಿತ ಪಾದಪದ್ಮಯುಗಳಂ ದೇವೈಃ ಸುರೇಂದ್ರಾದಿಭಿಃ |
ಸೇವ್ಯಂ ಮಾನುಷ ರಾಕ್ಷಸೈಃ ಕಪಿವರೈ ಶ್ರೀರಾಮಚಂದ್ರಂ ಭಜೇ ||

ಪುಟವಿಟ್ಟ ಚಿನ್ನದಂತೆ ಪ್ರಕಾಶಿಸುವ ಸೀತಾದೇವಿಯು, ಎಡದ ತೊಡೆಯ ಮೇಲೆ ಕುಳ್ಳಿರಲು, ಆಕೆಯ ಅವಲೋಕನದಿಂದ ಸಂತುಷ್ಟನಾಗಿರುವವನೂ, ಹಸ್ತಗಳಲ್ಲಿ ಛತ್ರ, ಚಾಮರಗಳನ್ನು ಹಿಡಿದುಕೊಂಡು ಲಕ್ಷ್ಮಣನು ಸೇವಿಸುತ್ತಿರಲು, ದೇವತೆಗಳಿಂದಲೂ, ದೇವೇಂದ್ರನಿಂದಲೂ ನಿತ್ಯವೂ ಪೂಜಿಸಿಕೊಳ್ಳುವ ಪಾದಕಮಲಗಳುಳ್ಳ, ಮಾನವರಿಂದಲೂ ರಾಕ್ಷಸರಿಂದಲೂ, ಕಪಿಶ್ರೇಷ್ಠರಿಂದಲೂ ಸೇವೆ ಮಾಡಿಸಿಕೊಳ್ಳುವ, ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಕಸ್ತೂರೀತಿಲಕಂ ಕಪೀಂದ್ರಹರಣಂ ಕಾರುಣ್ಯ ವಾರಾಂ ನಿಧಿಂ |
ಕ್ಷೀರಾಂಭೋಧಿಸುತಾ ಮುಖಾಬ್ಜ ಮಧುಪಂ ಕಲ್ಯಾಣರಾಮಂನಿಧಿಂ |
ಕೌಸಲ್ಯಾನಯನೋತ್ಸುಕಂ ಕಪಿವರತ್ರಾಣಂ ಮಹಾಪೌರುಷಂ |
ಕಾಮಾರಿಪ್ರಿಯಮರ್ಕಕೋಟಿ ಸದೃಶಂ ಸೀತಾಸಮೇತಂ ಭಜೇ ||

ಕಸ್ತೂರಿ ತಿಲಕದಿಂದ ಅಲಂಕೃತನೂ, ವಾಲಿಯನ್ನು ನಿಗ್ರಹಿಸಿದವನೂ, ಕರುಣಾಕರನೂ, ಕ್ಷೀರಸಮುದ್ರದಲ್ಲಿ ಹುಟ್ಟಿದ ಲಕ್ಷ್ಮಿಯ, ಮುಖವೆಂಬ ಕಮಲದಲ್ಲಿ ಭ್ರಮರದಂತಿರುವವನೂ, ನಾರಾಯಣ ಸ್ವರೂಪನೂ, ಕಲ್ಯಾಣ ರಾಮನೂ, ಸಮಸ್ತರಿಗೂ, ಒಂದು ನಿಧಿಯಂತೆ ಇರತಕ್ಕವನೂ, ಕೌಸಲ್ಯೆಗೆ ನಯನಮೋಹಕನೂ, ಸುಗ್ರೀವನನ್ನು ಪಾಲಿಸಿದವನೂ, ಮಹಾವೀರನೂ, ಪರಮೇಶ್ವರನ ಪ್ರಿಯನೂ, ಕೋಟಿ ಸೂರ್ಯ ಸಮಾನ ಕಾಂತಿಯುಳ್ಳವನೂ, ಸೀತಾಸಮೇತನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ವಿದ್ಯುತ್ಕೋಟಿ ದಿವಾಕರದ್ಯುತಿನಿಭಂ ಶ್ರೀಕೌಸ್ತುಭಾಲಂ ಕೃತಂ ।
ಯೋಗೀಂದ್ರೈ ಸ್ಸನಕಾದಿಭಿಃ ಪರಿವೃತಂ ಕೈಲಾಸನಾಥಪ್ರಿಯಂ।
ಮುಕ್ತಾರತ್ನ ಕಿರೀಟ ಕುಂಡಲ ಯುತಂ ಗ್ರೈವೇಯ ಹಾರಾನ್ವಿತಂ ।
ವೈದೇಹೀ ಕುಚಸನ್ನಿವಾಸಮನಿಶಂ ಸೀತಾಸಮೇತಂ ಭಜೇ ।

ಕೋಟಿ ಮಿಂಚುಗಳ ಮತ್ತು ಸೂರ್ಯರ ಕಾಂತಿಯಿಂದ ಕೂಡಿದವನೂ, ಕೌಸ್ತುಭಮಣಿಯಿಂದ ಅಲಂಕೃತನೂ, ಸನಕ, ಸನಂದರೇ ಮೊದಲಾದ, ಯೋಗಿಶ್ರೇಷ್ಠರಿಂದ ಕೂಡಿದವನೂ, ಪರಮೇಶ್ವರನ ಪ್ರಿಯನೂ, ಮುತ್ತುರತ್ನಗಳಿಂದ ನಿರ್ಮಿತವಾದ, ಕಿರೀಟ ಕುಂಡಲಧಾರಿಯೂ, ಕಂಠಾಭರಣ ಹಾರಗಳನ್ನು ಧರಿಸಿರುವವನೂ, ಸೀತೆಗೆ ಮೋದದಾಯಕನೂ, ಮತ್ತು ಸೀತಾಸಮೇತನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ವಿದ್ಯುತ್ಕೋಟಿ ಸಹಸ್ರ ಭಾನು ಸದೃಶಂ ಸಿಂಹಾಸನೇ ಸಂಸ್ಥಿತಂ ।
ಮೂಲೇ ಕಲ್ಪತರೋರ್ಮಹಾಮಣಿಮಯೇ ಭಾಸ್ವತ್ಸುರೇಶಂ ವಿಭುಂ ।
ಸುಗ್ರೀವಾಂಗದ ಜಾಂಬವಾದಿ ಹರಿಭಿಃ ಸಂಸೇವ್ಯಮಾನಂ ಹರಿಂ ।
ಶಂಭುಬ್ರಹ್ಮ ಸುರಾದಿಭಿ ಃಪರಿವೃತಂ ಸೀತಾಸಮೇತಂ ಭಜೇ ॥

ಕೋಟಿಸೂರ್ಯಪ್ರಕಾಶನೂ, ಸಿಂಹಾಸನಾಸೀನನೂ, ಕಲ್ಪವೃಕ್ಷದಂತಿರುವ ನವರತ್ನನಿಬಿಡವಾದ ಶ್ವೇತಚ್ಛತ್ರದ ಅಡಿಯಲ್ಲಿ, ಮಣಿಮಯ ಪೀಠದಲ್ಲಿ ಪ್ರಕಾಶಿಸುವವನೂ, ದೇವತೆಗಳ ಒಡೆಯನೂ, ಪ್ರಪಂಚಕ್ಕೆ ಪ್ರಭುವೂ, ಸುಗ್ರೀವ ಅಂಗದ, ಜಾಂಬವ, ಇವರೇ ಮುಂತಾದ ಕಪಿಶ್ರೇಷ್ಠರಿಂದ ಸೇವಿಸಿಕೊಳ್ಳುವವನೂ, ಸಾಕ್ಷಾತ್ ವಿಷ್ಣುವೂ, ಈಶ್ವರ, ಬ್ರಹ್ಮ, ದೇವತೆಗಳೇ, ಮುಂತಾದವರಿಂದ ಕೂಡಿದವನೂ, ಸೀತಾಸಮೇತನೂ ಆದ ಶ್ರೀರಾಮನನ್ನು ಭಜಿಸುತ್ತೇನೆ.

ಮೇಘಶ್ಯಾಮಲಮಂಬುಜಾತ ನಯನಂ ವಿಸ್ತೀರ್ಣವಕ್ಷಸ್ಥಲಂ ।
ಬಾಹು ದ್ವಂದ್ವವಿರಾಜಿತಂ ಸುವದನಂ ಶೋಣಾಂಘ್ರಿ ಪಂಕೇರುಹಂ ।
ನಾನಾರತ್ನ ವಿಚಿತ್ರ ಭೂಷಣಯುತಂ ಕೋದಂಡ ಬಾಣಾಂಕಿತಂ ।
ತ್ರೈಲೋಕ್ಯ ಪ್ರತಿಮಾನ ಸುಂದರತನುಂ ಸೀತಾಸಮೇತಂ ಭಜೇ ॥

ನೀಲಮೇಘಶ್ಯಾಮನೂ, ಕಮಲಾಕ್ಷನೂ, ವಿಶಾಲವಾದ ವಕ್ಷಸ್ಥಳವುಳ್ಳವನೂ, ಪ್ರತಾಪಸೂಚಿಗಳಾದ ಬಾಹುದ್ವಯಗಳಿಂದ ಕೂಡಿದವನೂ, ಮೋಹಕವಾದ ಮುಖವುಳ್ಳವನೂ, ಕಮಲದಂತೆ ಕೆಂಪಾದ ಪಾದಗಳುಳ್ಳವನೂ, ಅನೇಕ ರತ್ನಖಚಿತವಾದ ಒಡವೆಗಳಿಂದ, ಅಲಂಕೃತನೂ, ಬಿಲ್ಲು ಬಾಣಗಳನ್ನು ಧರಿಸಿರುವವನೂ, ಮೂರು ಲೋಕಗಳಿಗೂ ಸುಂದರನೂ, ಸೀತಾಸಮೇತನೂ ಆದ, ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ದಿವ್ಯಾರಣ್ಯ ಯತೀಂದ್ರ ನಾಮನಗರೇ ಮಧ್ಯೇ ಮಹಾಮಂಟಪೇ |
ಸ್ವರ್ಣಸ್ತಂಭ ಸಹಸ್ರ ಷೋಡಶಯುತೇ ಮಂದಾರಮೂಲಾಶ್ರಿತೇ |
ನಾನಾರತ್ನ ವಿಚಿತ್ರ ನಿರ್ಮಲ, ಮಹಾ ಸಿಂಹಾಸನೇ ಸಂಸ್ಥಿತಂ |
ಸೀತಾಲಕ್ಷ್ಮಣ ಸೇವಿತಂ ರಘುಪತಿಂ ಸೀತಾಸಮೇತಂ ಭಜೇ ||

ದಿವ್ಯ ಋಷಿಯಾದ ಮಾಂಧಾತ ನಾಮಾಂಕಿತ ನಗರವಾದ ಮಾಂಧಾತೃಪುರಿಯಲ್ಲಿ ಅಂದರೆ ಅಯೋಧ್ಯೆಯಲ್ಲಿ, ಕಲ್ಪವೃಕ್ಷದ ಅಡಿಯಲ್ಲಿ ಹದಿನಾರು ಸಾವಿರ ಚಿನ್ನದ ಕಂಬಗಳಿಂದ ಕೂಡಿದ ದೊಡ್ಡ ಮಂಟಪದಲ್ಲಿ, ಅನೇಕ ರತ್ನಗಳಿಂದ ವಿಚಿತ್ರವಾಗಿ ನಿರ್ಮಿತವಾದ, ಪರಿಶುದ್ಧವಾದ, ಮಹಾಸಿಂಹಾಸನದಲ್ಲಿ, ಆಸೀನನಾದ ಸೀತಾಲಕ್ಷ್ಮಣರಿಂದ ಸೇವಿತನಾದ ಸೀತಾಸಮೇತನಾದ, ರಘುಪತಿಯನ್ನು ಸ್ಮರಿಸುತ್ತೇನೆ.

ಯತ್ಪಾದಾಂಬುಜ ಸಂಭವಾ ತ್ರಿಪಥಗಾ ಭಾಗೀರಥೀ ಮುಕ್ತಿದಾ |
ಲೋಕಾನಾಂ ಹತ ಕಿಲ್ಬಿಷಾ ಭಗವತೀ ಮಂದಾಕಿನೀ ಶಾಂಭವೀ |
ಲೋಕೇಭಾತಿ ಸರಸ್ವತೀ ಸುರನದೀ ಪೂರ್ಣೇಂದು ಕಾಂತಿಪ್ರಭಾ|
ತಂ ವಿಷ್ಣುಂ ಭರತಾಗ್ರಜಂ ರಘುವರಂ ಸೀತಾಸಮೇತಂ ಭಜೇ ||

ಯಾರ ಪಾದಕಮಲದಲ್ಲಿ ತಾನು ಜನ್ಮನೆತ್ತಿದ ಪ್ರಭಾವದಿಂದ ಭಾಗೀರಥೀ ಎಂಬ ಗಂಗಾಮಾತೆಯು ಸ್ವರ್ಗ, ಮರ್ತ್ಯ, ಪಾತಾಳ ಎಂಬ ಮೂರು ಲೋಕಗಳಲ್ಲಿಯೂ ಸಂಚರಿಸುತ್ತಾ, ಮೋಕ್ಷದಾಯಕಳಾಗಿ ತನ್ನಲ್ಲಿ ಸ್ನಾನ ಮಾಡಿದ ಜನಗಳ ಪಾಪ ಪರಿಹಾರಕಳಾಗಿ, ಶಂಭುವಿನ ಜಟೆಯಲ್ಲಿ ನೆಲಸಿ, ಶಾಂಭವಿಯಾಗಿ ಲೋಕದಲ್ಲಿ ಸರಸ್ವತಿ ಎಂದೂ ದೇವನದಿ ಎಂದೂ, ಪೂರ್ಣಚಂದ್ರನಂತೆ ವಿರಾಜಿಸುವಳೋ ಅಂತಹ ವಿಷ್ಣುರೂಪಿಯಾದ, ಭರತಾಗ್ರಜನಾದ, ರಘುಶ್ರೇಷ್ಠನಾದ ಸೀತಾಸಮೇತನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಯತ್ಪಾದಾಂಬುಜ ಸನ್ನಿಧೌ ತ್ರಿಪಥಗಾ ತ್ರೈಲೋಕ್ಯ ಸಂಪೂಜಿತಾ |
ಯತ್ಪಾದಾಂಬುಜ ರೇಣುನಾ ಮುನಿಸತೀ ಮುಕ್ತಿಂ ಗತಾಪಾವಿತಾ |
ಯನ್ನಾಮಸ್ಮರಣಂ ಪ್ರಗೇ, ತ್ರಿಜಗತಾಂ ಪಾಪೌಘ ವಿಧ್ವಂಸನಂ|
ತಂ ರಾಮಂ ವಿಬುಧಪ್ರಿಯಂ ಗುಣನಿಧಿಂ ಸೀತಾಸಮೇತಂ ಭಜೇ ||

ಯಾರ ಚರಣಕಮಲ ಸನ್ನಿಧಿಯಿಂದ ಗಂಗಾಮಾತೆಯು ಮೂರು ಲೋಕಗಳಲ್ಲೂ ಪೂಜಿತಳಾದಳೋ, ಯಾರ ಚರಣಕಮಲದ ಧೂಳೀಪ್ರಭಾವದಿಂದ ಅಹಲ್ಯೆಯು ತನ್ನ ಶಿಲಾಸ್ವರೂಪದಿಂದ ಉದ್ಧಾರಳಾಗಿ, ಮುಕ್ತಿ ಪದವಿಯಲ್ಲಿ ನಿಂತಳೋ, ಯಾರ ಪ್ರಾತಃಸ್ಮರಣೆಯಿಂದ ಮೂರು ಲೋಕದ ಜನಗಳ ಪಾಪವೂ ನಾಶವಾಗುವುದೋ ಅಂತಹ, ಜ್ಞಾನಿಗಳಿಗೆ ಪ್ರಿಯನಾದ, ಗುಣನಿಧಿಯಾದ, ಸೀತಾಸಮೇತನಾದ ಶ್ರೀರಾಮನನ್ನು ಭಜಿಸುತ್ತೇನೆ.

ವೈದೇಹೀ ಕುಚಮಂಡಲಾಗ್ರ ವಿಲಸನ್ಮಾಣಿಕ್ಯ ಹಸ್ತಾಂಬುಜಂ |
ಭಾಸ್ವತ್ಕಂಕಣಹಾರ ನೂಪುರ ಲಸತ್ಕೇಯೂರ ಹಾರಾನ್ವಿತಂ |
ದೇವೇಂದ್ರಾರ್ಚಿತ ಪಾದಪದ್ಮಯುಗಳಂ ಸಿಂಹಾಸನಾಧಿಷ್ಟಿತಂ |
ವೀರಶ್ರೀ ರಘುಪುಂಗವಂ ಗುಣನಿಧಿಂ ಸೀತಾಸಮೇತಂ ಭಜೇ ||

ಸೀತಾದೇವಿಯ ವಕ್ಷಸ್ಥಳದಲ್ಲಿ ಕ್ರೀಡಿಸತಕ್ಕ ಹಸ್ತಕಮಲಗಳುಳ್ಳ, ಪ್ರಕಾಶಮಾನವಾದ ಕಂಕಣ, ಹಾರ, ಕೇಯೂರ ಮುಂತಾದ ಆಭರಣಗಳಿಂದ ಅಲಂಕೃತನಾದ, ದೇವೇಂದ್ರನಿಂದ ಪೂಜೆ ಮಾಡಿಸಿಕೊಂಡ ಪಾದಗಳುಳ್ಳವನೂ, ಸಿಂಹಾಸನಾಸೀನನೂ, ಗುಣನಿಧಿಯೂ, ರಘುಶ್ರೇಷ್ಠನೂ, ವೀರನೂ, ಸೀತಾಸಮೇತನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ವೈದೇಹೀ ಕುಚಮಂಡಲೋಪರಿಲಸ ನ್ಮಾಣಿಕ್ಯ ಹಾರಾವಳೀ |
ಮಧ್ಯಸ್ಥಂ ನವನೀತ ಕೋಮಲರುಚಿಂ ನೀಲೋತ್ಪಲ ಶ್ಯಾಮಲಂ |
ಕಂದರ್ಪಾಯುತ ಕೋಟಿ ಸುಂದರತನುಂ ಪೂರ್ಣೇಂದು ಬಿಂಬಾನನಂ |
ಕೌಸಲ್ಯಾ ಕುಲಭೂಷಣಂ ರಘುಪತಿಂ ಸೀತಾಸಮೇತಂ ಭಜೇ ||

ಮಾಣಿಕ್ಯಹಾರದಿಂದ ಪ್ರಕಾಶಿಸುವ ಸೀತಾದೇವಿಯ ವಕ್ಷಸ್ಥಳದಲ್ಲಿ ಕ್ರೀಡಿಸತಕ್ಕವನೂ, ಬೆಣ್ಣೆಯಂತೆ ಮೃದುವಾದ ಹೃದಯವುಳ್ಳವನೂ, ನೈದಿಲೆಯಂತೆ ಶ್ಯಾಮಲನೂ. ಕೋಟಿ ಮನ್ಮಥರ ಸೌಂದರ್ಯದಿಂದ ಕೂಡಿದ ರೂಪುಳ್ಳವನೂ, ಪೂರ್ಣಚಂದ್ರನಂತೆ ದುಂಡು ಮುಖವುಳ್ಳವನೂ, ಕೌಸಲ್ಯೆಯ ವಂಶಕ್ಕೆ ಭೂಷಣನೂ, ರಘುಶ್ರೇಷ್ಠನೂ, ಸೀತಾಸಮೇತನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ವೈದೇಹೀಯುತ ವಾಮಭಾಗಮತುಲಂ ವಂದಾರು ಮೋದಪ್ರದಂ |
ವಂದೇ ವಿಶ್ರುತ ಕೀರ್ತಿ ವಾಸಿತ ತನು ಚ್ಛಾಯಾನುಕಾರಿಪ್ರಭಂ |
ವೈದೇಹೀಕುಚ ಕುಂಕುಮಾಂಕಿತ ಮಹೋರಸ್ಕಂ ಮಹಾಭೂಷಣಂ |
ವೇದಾಂತೈರುಪಗೀಯ ಮಾನಮಸಕೃತ್ಸೀತಾಸಮೇತಂ ಭಜೇ ||

ಎಡಭಾಗದಲ್ಲಿ ಸೀತಾ ಸಮೇತನೂ, ಅನುಪಮನೂ, ಆಶ್ರಿತರಿಗೆ ಮೋದವನ್ನುಂಟುಮಾಡುವವನೂ ಆದ, ಬಹು ಜನರ ಸ್ತುತಿಯಿಂದ ತಾನು ಗಳಿಸಿದ ಕೀರ್ತಿಯು ತನ್ನ ಶರೀರದಲ್ಲಿ ನೆಲಸಿ, ತನ್ಮೂಲಕ ತೇಜೋರೂಪದಲ್ಲಿ, ಹೊರಹೊಮ್ಮುತ್ತಿರಲು ಅಂತಹ ಕಾಂತಿಯಿಂದ ಕೂಡಿದವನಾದ, ವೈದೇಹಿಯ ಆಲಿಂಗನದಿಂದ, ಮೋದ ಹೊಂದಿದ, ವಕ್ಷಸ್ಥಳವುಳ್ಳವನೂ, ಲೋಕಕ್ಕೇ ರತ್ನಪ್ರಾಯನೂ, ವೇದಾಂತದಿಂದ ಸ್ತುತಿಸಲ್ಪಡುವವನೂ, ಸೀತಾಸಮೇತನೂ ಆದ ಶ್ರೀರಾಮನನ್ನು ಬಾರಿ ಬಾರಿಗೂ ಭಜಿಸುತ್ತೇನೆ.

ವೈದೇಹೀ ಸ್ತನಕುಂಭ ಸಂಭ್ರಮು ಪರೀ ರಂಭಾಹೃತಂ ಸಿಂಧುರಂ।
ರಾಕಾಚಂದ್ರ ನಿಭಾನನಂ ರಘುವರಂ ರಾಜೀವ ಪತ್ರೇಕ್ಷಣಂ।
ಪ್ರಾವೃಣ್ಮೇಘನಿಭದ್ಯುತಿ ಸ್ಮಿತಯುತಂ ಹಾರಾವಳೀ ಭೂಷಿತಂ।
ಶ್ರೀರಾಮಂ ಪ್ರಣಮಾಮಿ ಭಕ್ತಜನತಾ ಚಿಂತಾಮಣಿಂ ಸಂತತಂ॥

ಸೀತಾದೇವಿಯ ವಕ್ಷಸ್ಥಳದ ಆಲಿಂಗನದಿಂದ ಮುದವಾಂತವನೂ, ಪೂರ್ಣಚಂದ್ರನಂತೆ, ದುಂಡು ಮುಖವುಳ್ಳವನೂ, ರಘುಪತಿಯೂ, ಕಮಲನಯನನೂ, ವರ್ಷಾಕಾಲದ ಮೇಘದಂತೆ, ನೀಲವರ್ಣನೂ, ಮಂದಹಾಸಯುತನೂ ಅನೇಕ ಹಾರಗಳಿಂದ ಅಲಂಕೃತನೂ, ಭಕ್ತಜನ ಚಿಂತಾಮಣಿಯೂ ಆದ ಶ್ರೀರಾಮನನ್ನು ಯಾವಾಗಲೂ ನಮಸ್ಕರಿಸುತ್ತೇನೆ.

ವೈದೇಹೀ ರಮಣೀ ಹಿರಣ್ಯತಿಲಕಂ ವಿಶ್ವಂಭರಾಪಾಲಕಂ।
ವರ್ಧಿಷ್ಣುಂ ವಿವಿಧಾಯುಧೇಷು ನಿಪುಣಂ ವಿದ್ವಜ್ಜನ ಶ್ರೀಕರಂ।
ವಿದ್ಯಾವಾಸಗೃಹಂ ವಿಯಚ್ಚರಮತಂ ವಿದ್ಯುತ್ಪ್ರಕಾಶಾಂಬರಂ।
ವಿಪ್ರತ್ರಾಣ ಪರಾಯಣಂ ಪರತರಂ ಶ್ರೀರಾಮಚಂದ್ರಂ ಭಜೇ॥

ಜಾನಕೀ ಸೌಭಾಗ್ಯಕ್ಕೆ ಸುವರ್ಣತಿಲಕಪ್ರಾಯನೂ, ಭೂಮೀಶ್ವರನೂ, ಮಹಿಮೋನ್ನತನೂ, ಅನೇಕ ವಿಧವಾದ ಶಸ್ತ್ರಾಸ್ತ್ರ ಪ್ರಯೋಗಗಳಲ್ಲಿ ನಿಪುಣನೂ, ವಿದ್ವಜ್ಜನರಿಗೆ ಆಶ್ರಯದಾತನೂ, ವಿದ್ಯೆಗೆ ಆಶ್ರಯನೂ, ಆಗಿರುವ,ದೇವತೆಗಳಿಗೆ ತುಂಬಾ ಒಪ್ಪಿಗೆಯಾದವನಾಗಿರುವ, ಪೀತಾಂಬರಧಾರಿಯಾದ, ವಿಪ್ರರಕ್ಷಣೆಯಲ್ಲಿ ನಿರತನೂ, ಪರಬ್ರಹ್ಮನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ವೈದೇಹೀ ವಶವರ್ತಿನಂ ರಣಜಿತಂ ರತ್ನಾಕರೋ ರೋಜ್ಜ್ವಲಂ।
ಪಙ್ಕ್ತಿಗ್ರೀವ ಮದಾಪಹಂ ಪಟುಭುಜಂ ಪದ್ಮಾಪ್ತ ಕೋಟಿಪ್ರಭಂ।
ವಿಷ್ಣುಂ ಜಿಷ್ಣುಮತುಲ್ಯ ಶೌರ್ಯನಿಲಯಂ ನೀಲಾಂಬುದ ಶ್ಯಾಮಲಂ।
ರತ್ನಾಲಂಕರಣಾನ್ವಿತಂ ರಘುಪತಿಂ ಶ್ರೀರಾಮಚಂದ್ರಂ ಭಜೇ॥

ಸೀತಾದೇವಿಗೆ ಸುಗಮನಾದ, ಯುದ್ಧರಂಗದಲ್ಲಿ ಜಯಗಳಿಸುವನಾದ, ಸಮುದ್ರ ರಾಜನ ಹೃದಯವನ್ನು ನಿರ್ಭೇದಗೊಳಿಸಿದ, ದಶಶಿರನ ಗರ್ವಭಂಗಮಾಡಿದ, ಪರಾಕ್ರಮದಿಂದ ಕೂಡಿದ ಭುಜಗಳುಳ್ಳ, ಕೋಟಿ ಸೂರ್ಯರ ಕಾಂತಿಯುಳ್ಳ, ಸರ್ವವ್ಯಾಪಕನಾದ, ಇಂದ್ರನಂತೆ ಶ್ರೇಷ್ಠನೂ, ಅಪರಿಮಿತ ಪರಾಕ್ರಮಶಾಲಿಯೂ, ನೀಲಮೇಘಶ್ಯಾಮನೂ, ರತ್ನಗಳಿಂದ ಅಲಂಕೃತನೂ, ರಘುಪತಿಯೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಶ್ರೀರಾಮಂ ಜನಕಾತ್ಮಜಾಕುಚತಟೀ ಶ್ರೀಗಂಧ ಪಂಕೋಲ್ಲಸ ।
ದ್ವಕ್ಷೋ ಪೀಠಮುದಾರಮಾಶ್ರಿತ ಮುನಿಪ್ರಾದುರ್ಭವತ್ಕಲ್ಪಕಂ ।
ಬ್ರಹ್ಮೇಶಾನ ಮುಖಾಮರಸ್ತುತಮಜಂ ಬ್ರಹ್ಮಾಂಡ ಭಾಂಡಾಧಿಪಂ ।
ವಂದೇ ಕೋಸಲ ಕನ್ಯಕಾಸುತಮಹಂ ವಾರಾಶಿಗರ್ವಾಪಹಂ ॥

ಜಾನಕಿಯ ವಕ್ಷಸ್ಥಳದಲ್ಲಿ ಲೇಪನವಾಗಿದ್ದ ಶ್ರೀಗಂಧವು, ಆಕೆಯ ಆಲಿಂಗನದಿಂದ ತನ್ನ ವಕ್ಷಸ್ಥಳದಲ್ಲಿ ಶೋಭಿಸುತ್ತಿರಲು, ಅಂತಹ ವಕ್ಷಸ್ಥಳವುಳ್ಳವನಾದ, ಉದಾರಿಯಾದ, ಆಶ್ರಿತರಾದ ಯೋಗಿಗಳ ಜನ್ಮಸಾಫಲ್ಯಕ್ಕೆ ಕಲ್ಪತರುವಿನಂತಿರುವ, ಬ್ರಹ್ಮ, ಈಶ್ವರರೇ ಮುಂತಾದ ದೇವತೆಗಳಿಂದ ಸ್ತುತಿಸಿಕೊಳ್ಳುವ, ಜನ್ಮರಹಿತನಾದ, ಸಕಲ ಬ್ರಹ್ಮಾಂಡಗಳಿಗೂ ಒಡೆಯನಾದ, ಕೌಸಲ್ಯೆಯ ಮಗನಾದ, ಸಮುದ್ರರಾಜನ ಗರ್ವವನ್ನು ಹರಣಮಾಡಿದ ಶ್ರೀರಾಮಚಂದ್ರನನ್ನು ನಮಸ್ಕರಿಸುತ್ತೇನೆ.

ಸಾಕೇತೇ ಮಣಿನಿರ್ಮಿತೇ ಪ್ರವಿಲಸತ್ಸೌಧಾಯುತಾನಾಂಶತೇ ।
ಅಂತರ್ಗೇಹವತೀತ ಭಾನುನಿಲಯೇ ಚಂಚತ್ಪತಾಕೋಜ್ಜ್ವಲೇ ।
ಹರ್ಮ್ಯೇ ಧರ್ಮಘನಂ ಘಣಾ ಘಣರವದ್ಘಂಟಾಶತೈರಾವೃತೇ ।
ಡೋಲಾಕಲ್ಪ ವಿಹಾರಿಣಂ ರಘುಪತಿಂ ಸೀತಾಸಮೇತಂ ಭಜೇ ॥

ಅಯೋಧ್ಯೆಯಲ್ಲಿ ರತ್ನಖಚಿತವಾದ ನೂರಾರು ದಿವ್ಯಪ್ರಾಸಾದಗಳ ಮಧ್ಯದಲ್ಲಿರುವ, ಭಾನುಮಂಡಲವನ್ನು ಭೇದಿಸಿಕೊಂಡು ಹೋಗುವಂತೆ ಎತ್ತರವಾಗಿ ಉಜ್ಜ್ವಲಿಸುತ್ತಾ ಚಲಿಸುತ್ತಿರುವ, ಬಾವುಟಗಳಿಂದ ಕೂಡಿದ ಸೌಧದಲ್ಲಿ ಧರ್ಮಸ್ವರೂಪಿಯಾದ ಶ್ರೀರಾಮನು ಸೀತಾ ಸಮೇತನಾಗಿ, ಘಣ, ಘಣ ಶಬ್ದಮಾಡುವ ನೂರಾರು ಘಂಟೆಗಳಿಂದ ಕೂಡಿದ ಉಯ್ಯಾಲೆಯಲ್ಲಿ ಆನಂದಿಸುತ್ತಿರಲು, ಅಂತಹ ಸೀತಾಪತಿಯನ್ನು ಧ್ಯಾನಿಸುತ್ತೇನೆ.

ಸಾಕೇತೇ ಜನನೀ ಕರಾರ್ಪಿತ ಲಸತ್ಕಸ್ತೂರಿಕಾ ಸುಂದರೇ ।
ಫಾಲೇ ಮೌಕ್ತಿಕ ಜಾಲಕಂ ಶಶಿನಿಭಂ ಸ್ವರ್ಣಾಂಕಿತಂ ವರ್ತುಲಂ ।
ಚೂಡಾಲಂಬ ಮನೋಜ್ಞಹಾರ ಕಲಿತಂ ಬಿಭ್ರಾಣ ಮತ್ಯುಜ್ಜ್ವಲಂ ।
ರಾಮಂ ಕೋಸಲಪುತ್ರಿಕಾ ವರಸುತಂ ಸೀತಾಸಮೇತಂ ಭಜೇ ॥

ಬಾಲ್ಯದಲ್ಲಿ ಅಯೋಧ್ಯೆಯಲ್ಲಿ ತಾಯಿಯಾದ ಕೌಸಲ್ಯೆಯ ದಿವ್ಯಹಸ್ತಗಳಿಂದ ಕಸ್ತೂರಿ ತಿಲಕವನ್ನು ಹಣೆಗೆ ಹಚ್ಚಿಸಿಕೊಂಡು ಸುಂದರಮೂರ್ತಿಯಾಗಿ ಕಾಣುತ್ತ ಚಂದ್ರನಂತೆ ಪ್ರಕಾಶಮಾನವಾದ ಮುತ್ತುಗಳ ಗೊಂಚಲಿನಿಂದ ಕೂಡಿ ಸುವರ್ಣದಿಂದ ರಚಿತವಾದ, ಉದ್ದವಾದ ಮನಮೋಹಕವಾದ ಹಾರದಿಂದ ಸುತ್ತಲ್ಪಟ್ಟ, ನೆತ್ತಿಯ ಮೇಲೆ ಗುಂಡಾಗಿ ಗಂಟುಹಾಕಿದ ಜುಟ್ಟುಳ್ಳವನಾಗಿ, ಪ್ರಕಾಶಮಾನವಾಗಿ ಕಾಣುವ ಕೌಸಲ್ಯೆಯ ಮಗನಾದ ಸೀತಾಸಮೇತನಾದ ರಾಮಚಂದ್ರನನ್ನು, ಭಜಿಸುತ್ತೇನೆ.

ಸಾಕೇತೇ ಸರಯೂಜಲೇತಿ ವಿಮಲೇ ಪ್ರೋತ್ಫುಲ್ಲ ಪದ್ಮಾಂಕಿತೇ |
ದಿವ್ಯಸ್ತ್ರೀ ಶತಕೋಟಿ ನೃತ್ಯರುಚಿರೇ ಸ್ವರ್ಗಾಪಗಾ ಸುಂದರೇ |
ಪಶ್ಯಂತೀಷು ಸುರಾಂಗನಾ ಸುನಭಸೀ ಕ್ರೀಡಂತಮುರ್ವೀಸುತಾ |
ಬಾಹುಭ್ಯಾಂ ವಿಮಲೋದಕೇನ ರುಚಿರಂ ಸೀತಾಸಮೇತಂ ಭಜೇ ||

ಶತಕೋಟಿ ದಿವ್ಯ ದೇವಾಂಗನೆಯರು ಕ್ರೀಡಿಸುವ, ದೇವಗಂಗೆಯಂತೆ ಸುಂದರವಾದ ಮತ್ತು ಅರಳಿದ ಕಮಲಗಳಿಂದ ಕೂಡಿ ಮನೋಹರವಾದ ಅಯೋಧ್ಯೆಯ ಸರಯೂ ನದಿಯ ನೀರಿನಲ್ಲಿ, ಆಕಾಶದಲ್ಲಿ ಸುರಾಂಗನೆಯರು ನೋಡುತ್ತಿರಲು, ಸೀತಾಸಮೇತನಾಗಿ ಜಲಕ್ರೀಡೆಯಾಡುವ ಮನೋಹರಮೂರ್ತಿಯಾದ ಶ್ರೀರಾಮನನ್ನು ಭಜಿಸುತ್ತೇನೆ.

ಶ್ರೀರಾಮಚಂದ್ರಂ ಧೃತಚಾಪ ಸಾಯಕಂ |
ನೀಲೋತ್ಪಲಾಭಂ ನಲಿನಾಯತೇಕ್ಷಣಂ |
ಸೌಮಿತ್ರಿಣಾ ಸೇವಿತ ಪಾದಪಂಕಜಂ |
ಸೀತಾಸಮೇತಂ ಶರಣಂ ಭಜೇಹಂ ||

ಬಿಲ್ಲು ಬಾಣಗಳಿಂದ ಕೂಡಿದ, ನೈದಿಲೆಯಂತೆ ಶ್ಯಾಮಲವರ್ಣನಾದ, ಕಮಲಾಕ್ಷನಾದ, ಲಕ್ಷ್ಮಣನಿಂದ ಸೇವಿಸಲ್ಪಟ್ಟ ಪಾದಕಮಲಗಳುಳ್ಳ, ಸೀತಾಸಮೇತನಾದ ಶ್ರೀರಾಮಚಂದ್ರನನ್ನು ನಾನು ಭಜಿಸುತ್ತೇನೆ.

ಶ್ರೀರಾಮಚಂದ್ರ ಕರುಣಾಕರ ದೀನಬಂಧೋ |
ಸೀತಾಸಮೇತ ಭರತಾಗ್ರಜ ರಾಘವೇಶ |
ಪಾಪೌಘ ಭಂಜನ ಭಯಾತುರದೀನಬಂಧೋ |
ಪಾಪಾಂಬುಧೌ ಪತಿತಮುದ್ಧರಮಾಮನಾಥಂ ||

ಶ್ರೀರಾಮಚಂದ್ರ! ಕರುಣಾನಿಧಿಯೆ! ಬಡವರ ಬಂಧುವೆ! ಸೀತಾಸಮೇತಾ, ಭರತಾಗ್ರಜ, ರಘುಶ್ರೇಷ್ಠಾ! ನಾನು ಮಾಡಿದ ಅಪಾರ ಪಾಪಗಳಿಂದ ದುಃಖಕ್ಕೆ ಒಳಗಾಗಿ ದಿಕ್ಕುತೋಚದೆ ಭಯದಿಂದ ನಿನ್ನಲ್ಲಿ ದೈನ್ಯವೃತ್ತಿಯಿಂದ, ಅಪರಾಧ ಕ್ಷಮಾಪಣೆ ಕೇಳಿಕೊಳ್ಳುವ ಶರಣಾಗತನಾದ ನನಗೆ ಬಂಧುವಿನಂತಿರುವವನೇ! ಪಾಪವೆಂಬ ಸಮುದ್ರದಲ್ಲಿ ಮುಳಿಗಿರುವ ಅನಾಥನಾದ ನನ್ನನ್ನು ಉದ್ಧರಿಸು.

ಯಸ್ಯಪ್ರಾಣ ನಿವಾರಣಾವನಕೃತೇ ಸ್ಯಾತಾಂನಿದಾನೌವಿಭೋ |
ರೈಂದ್ರುಧ್ವಾಂಕ್ಷಪತೇಃ ಕೃಪಾಜಲನಿಧೇಃ ಕೋಪ ಪ್ರಸಾದೌಮುದೇ |
ಭೂಯಾದ್ವಾ ನವನೀಲ ಸನ್ನಿಭತನುರ್ವಾಮಾಂಕ ಸೀತಾನ್ವಿತಃ |
ಸೋಽಯಂ ದುಷ್ಟನಿಶಾಟ ಪಾಟನಪಟು ಶ್ರೀರಾಘವೋವಸ್ಸದಾ ||

ಯಾವ ಕೃಪಾಸಮುದ್ರನ ಕೋಪ ಪ್ರಸಾದಗಳು ಇಂದ್ರನ ಮಗನಾದ ಕಾಕಾಸುರನ ಪ್ರಾಣವಿನಾಶ ಮತ್ತು ರಕ್ಷಣೆಗೆ ಕಾರಣವಾಗಿ ಆದುವೋ, ಅಂತಹ ಪರಮಾತ್ಮನಾದ ನವನೀಲಾಂಗನಾದ, ವಾಮಭಾಗದಲ್ಲಿ ಸೀತಾಸಮೇತನಾದ, ದುಷ್ಟರನ್ನು ಶಿಕ್ಷಿಸುವುದರಲ್ಲಿ ಧುರೀಣನಾದ ಶ್ರೀ ರಾಘವನು ನಮಗೆ ಸದಾ ಮಂಗಳವನ್ನುಂಟುಮಾಡಲಿ.

'ವೀರಶ್ರೀ' ಬಿರುದಾಂಕಿತ ರಾಮ ಸ್ತೋತ್ರ

ನಾನಾದಿವ್ಯಾಸ್ತ್ರ ತೇಜಸ್ಫುರದಮಿತಭುಜಶ್ಶತ್ರು ಸಂಹಾರ ಧೀರಃ ।
ಕೌಟಿಲ್ಯೋ ದ್ಯೋತಮಾನ ಭ್ರುಕುಟಿಯುತ ಮುಖಂ ಧಾರಯನ್ನಂಬುದಾಭಃ ।
ತೂಣೀರಾದ್ಯಸ್ತವೇಗೋಲ್ಲಸಿತ ಶರವರೈಸ್ತಾಡಯಿತ್ವಾದಶಾಸ್ಯಂ ।
ವೀರಶ್ರೀ ಬಂಧುರಾಂಗಸ್ತ್ರಿ ದಶಪತಿನುತಃ ಪಾತುಮಾಂ ವೀರರಾಮಃ ॥

ಅನೇಕ ಶ್ರೇಷ್ಠ ಅಸ್ತ್ರಗಳಿಂದ ಕೂಡಿ, ತೇಜಸ್ವಿಯಾಗಿಯೂ ಅಪಾರವಾದ ಭುಜಬಲದಿಂದ ಕೂಡಿಯೂ ಶತ್ರುಗಳನ್ನು ಸಂಹರಿಸುವುದರಲ್ಲಿ ಧೀರನಾಗಿಯೂ ಇರುವ, ಕುಟಿಲೋಪಾಯ ಧುರೀಣನಾಗಿ, ಮೇಘ ಸಮನಾದ ಹುಬ್ಬುಗಳನ್ನು ಗಂಟಿಕ್ಕಿಕೊಂಡ ಮುಖವುಳ್ಳವನಾಗಿ, ಬಾಣಗಳಿಂದ ಕೂಡಿದ ಬತ್ತಳಿಕೆಯುಳ್ಳವನಾಗಿ, ವೇಗವಾಗಿ ಶತ್ರುಗಳನ್ನು ಛೇದಿಸುವ ಶ್ರೇಷ್ಠ ಬಾಣಗಳಿಂದ ರಾವಣನನ್ನು ಬಾಧಿಸುತ್ತಾ ಇರುವವನಾದ, ಮನೋಹರವಾದ ಶರೀರವುಳ್ಳ, ದೇವೇಂದ್ರನಿಂದ ಸ್ತುತಿಸಿಕೊಳ್ಳುವ, "ವೀರಶ್ರೀ" ಎನ್ನಿಸಿಕೊಳ್ಳುವ ವೀರರಾಮನು ನಮ್ಮನ್ನು ಕಾಪಾಡಲಿ.

ಹತ್ವಾಯುದ್ಧೇ ದಶಾಸ್ಯಂ ತ್ರಿಭುವನವಿಷಮಂ ವಾಮಹಸ್ತೇನಚಾಪಂ ।
ಭೂಮೌವಷ್ಟಭ್ಯತಿಷ್ಟನ್ನಿತರಕರಧೃತಂ ಭ್ರಾಮಯನ್ಬಾಣಮೇಕಂ ।
ಆರಕ್ತೋಪಾಂತನೇತ್ರೋ ಶರದಳಿತವಪುಃ ಕೋಟಿಸೂರ್ಯಪ್ರಕಾಶೋ ।
ವೀರಶ್ರೀ ಬಂಧುರಾಂಗಸ್ತ್ರಿದಶಪತಿನುತಃ ಪಾತುಮಾಂ ವೀರರಾಮಃ ॥

ಪರಾಕ್ರಮಿಯಾಗಿ ಮೂರು ಲೋಕಗಳಿಗೂ ಕಂಟಕನಾದ ಹತ್ತು ತಲೆಯ ರಾವಣನನ್ನು ಕೊಂದು, ಎಡಗೈನಿಂದ ಧನುಸ್ಸನ್ನು ನೆಲದಲ್ಲಿ ಊರಿ ಹಿಡಿದುಕೊಂಡು, ಮತ್ತೊಂದಾದ ಬಲಗೈಯಿಂದ ಒಂದು ಬಾಣವನ್ನು ತೆಗೆದುಕೊಂಡು ಅದನ್ನು ತಿರುಗಿಸುತ್ತಾ ಇರುವ, ಕೆಂಪಗಿರುವ ಕಡೆಗಣ್ಣುಗಳುಳ್ಳವನಾಗಿ, ಬಾಣದ ಏಟಿನಿಂದ ಜರ್ಝರಿತವಾದ ದೇಹದಿಂದ ಕೂಡಿ, ಕೋಟಿಸೂರ್ಯಪ್ರಕಾಶದ ತೇಜಸ್ಸಿನಿಂದ ಮೆರೆಯುತ್ತಾ, ಲಕ್ಷ್ಮಣಸಮೇತನಾಗಿ, ಇಂದ್ರನಿಂದ ಹೊಗಳಿಸಿಕೊಳ್ಳುತ್ತಿರುವ, "ವೀರಶ್ರೀ" ಎನ್ನಿಸಿಕೊಳ್ಳುವ ವೀರರಾಮನು ನಮ್ಮನ್ನು ಕಾಪಾಡಲಿ.

ಯುದ್ಧೇ ಸನ್ನದ್ಧಶಸ್ತ್ರಂ ಕಪಿವರಭಯದಂ ಕುಂಭಕರ್ಣಂ ಸುರಾರಿಂ ।
ಬಾಣೇನೈಕೇನ ಸದ್ಯಃ ಪ್ರಕಟಿತ ವಿಭವಂಚಂಡರೋಷಾರುಣಾಕ್ಷಂ ।
ಹತ್ವಾಕೃತ್ವಾ ಪ್ರಮೋದಂ ಸುರಕಪಿ ವಿತತೇರ್ಮೌನಿ ಬೃಂದೈಕಸೇವ್ಯಂ ।
ವೀರಶ್ರೀ ಬಂಧುರಾಂಗಸ್ತ್ರಿದಶಪತಿನುತಃ ಪಾತುಮಾಂ ವೀರರಾಮಃ ॥

ಯುದ್ಧದಲ್ಲಿ ಶಸ್ತ್ರಸನ್ನದ್ಧನಾಗಿ ನಿಂತು, ಕಪಿಶ್ರೇಷ್ಠರಿಗೂ ಭಯವನ್ನುಂಟುಮಾಡುತ್ತಿದ್ದ, ದೇವತೆಗಳಿಗೆ ಶತ್ರುವಾದ ಕುಂಭಕರ್ಣನನ್ನು ಒಂದೇ ಬಾಣದಿಂದ ಕ್ಷಣಮಾತ್ರದಲ್ಲಿ ಸಂಹರಿಸಿ, ತನ್ನ ವೈಭವವನ್ನು ಪ್ರಕಟಿಸಿದ, ಪ್ರಚಂಡ ರೋಷವನ್ನು ತೋರಿಸುವ, ಕೆಂಪು ಕಣ್ಣುಗಳಿಂದ ಕೂಡಿದವನಾದ ಮತ್ತು ಕುಂಭಕರ್ಣನ ಸಂಹಾರದಿಂದ ದೇವತೆಗಳಿಗೂ ಕಪಿಗಣಗಳಿಗೂ ಸಂತೋಷವನ್ನುಂಟುಮಾಡಿ ಮುನಿಗಣಗಳಿಂದ ಸೇವಿತನಾದ, ಸುಂದರ ಶರೀರಿಯಾದ, ದೇವೇಂದ್ರನ ಸ್ತುತಿಗೆ ಪಾತ್ರನಾದ, "ವೀರಶ್ರೀ" ಎನ್ನಿಸಿಕೊಳ್ಳುವ ವೀರರಾಮನು ನಮ್ಮನ್ನು ಕಾಪಾಡಲಿ.

ದೈತೇಯಾದಗ್ರಸೇವ್ಯಃ ಪಟುತರವಿಶಿಖಃ ಭೀಷಣೋ ಘೋರನಾದಃ ।
ದೇವೇಂದ್ರಾದ್ಯಿಗೀಯಮಾನಃ ಸುರವರ ನಿಕರಾನಂದಕೋ ದಾನವಾರಿಃ ।
ದಿಕ್ಪಾಲೀಸ್ತೂಯಮಾನಃ ಮಣಿರುಚಿರುಚಿರಃ ವಿದ್ವಿಷಾಂತಾಪಕಾರೀ ।
ವೀರಶ್ರೀ ಬಂಧುರಾಂಗಸ್ತ್ರಿದಶಪತಿನುತಃ ಪಾತುಮಾಂ ವೀರರಾಮಃ ॥

ರಾಕ್ಷಸನಾದ ವಿಭೀಷಣನಿಂದ ಪ್ರಥಮ ಸೇವೆಯನ್ನು ಕೈಗೊಂಡವನಾಗಿ, ತೀಕ್ಷ್ಣ ಬಾಣಗಳಿಂದ ಕೂಡಿ, ಭಯಂಕರವಾಗಿ ಸಿಂಹನಾದ ಮಾಡುತ್ತಿರುವನಾಗಿ, ದೇವೇಂದ್ರನಿಂದ ಸ್ತುತಿಸಲ್ಪಡುತ್ತಾ ಇರುವ, ಶ್ರೇಷ್ಠವಾದ ಸಮಸ್ತ ಆನಂದಗಳನ್ನು ಕೊಡುವನಾದ, ರಾಕ್ಷಸನಾಶಕನೂ ಅಷ್ಟದಿಕ್ಪಾಲರುಗಳಿಂದ ಸ್ತುತಿಸಿಕೊಳ್ಳುವವನೂ, ರಾಕ್ಷಸರಿಗೆ ತಾಪಪ್ರದನೂ, ಶ್ರೇಷ್ಠವಾದ ರತ್ನಗಳಿಂದ ಅಲಂಕೃತನಾದವನೂ, ಕಾಂತಿಯುತವಾದ ಮುತ್ತುಗಳಿಂದ ಶೋಭಾಯಮಾನವಾದ ಶರೀರವುಳ್ಳವನೂ, ಶತ್ರುಗಳನ್ನು ತಾಪಗೊಳಿಸುವವನೂ ಆದ, "ವೀರಶ್ರೀ" ಎನ್ನಿಸಿ ಕೊಳ್ಳುವ ವೀರರಾಮನು ನಮ್ಮನ್ನು ಕಾಪಾಡಲಿ.

ಕೌಸಲ್ಯಾ ವೀರಗರ್ಭಾಂಬುಧಿ ಘನವಿಲಸತ್ಪೂರ್ಣಚಂದ್ರಪ್ರತಾಪಃ ।
ಮೌನೀಂದ್ರಸ್ವಾಂತ ಪದ್ಮ ಪ್ರವಿಮಲತರಣೀಧರ್ಮನೈಪುಣ್ಯರೂಢಾ ।
ಮಾರೀಚಂ ರಾಕ್ಷಸೇಂದ್ರಂ ನಿಜಶರದಹನಸ್ಯಾಹುತಿಂ ಕಲ್ಪಯಿತ್ವಾ ।
ವೀರಶ್ರೀ ಬಂಧುರಾಂಗಸ್ತ್ರೀದಶಪತಿನುತಃ ಪಾತುಮಾಂ ವೀರರಾಮಃ ॥

ಕೌಸಲ್ಯೆಯ ವೀರಗರ್ಭವೆಂಬ ಸಮುದ್ರದಲ್ಲಿ ಪ್ರಕಾಶಮಾನನಾಗಿ ಜನಿಸಿ, ಪ್ರತಾಪಶಾಲಿಯಾಗಿ ಪೂರ್ಣ ಚಂದ್ರನಂತೆ ಇರುವ, ಮುನಿವರ್ಯರ ಹೃದಯಕಮಲಗಳಲ್ಲಿ ಚಿದ್ರೂಪನಾಗಿ ಸೂರ್ಯಪ್ರಕಾಶದಂತೆ ಪ್ರಕಾಶಿಸುವ, ಧರ್ಮಾಧರ್ಮ, ವಿಷಯಗಳಲ್ಲಿ ಗಾಢವಾದ ನೈಪುಣ್ಯವನ್ನು ಹೊಂದಿರುವ, ರಾಕ್ಷಸಶ್ರೇಷ್ಠನಾದ ಮಾರೀಚನನ್ನು ತನ್ನ ಬಾಣಗಳಿಂದ ದಹಿಸಿ ಆ ಬಾಣಕ್ಕೆ ಅವನನ್ನು ಆಹುತಿಯಾಗಿ ಮಾಡಿದ, "ವೀರಶ್ರೀ" ಎನಿಸಿಕೊಳ್ಳುವ ವೀರರಾಮನು ನಮ್ಮನ್ನು ಕಾಪಾಡಲಿ.

ವಿಜಯ ರಾಮ ಸ್ತೋತ್ರ

ವಿಲೋಲ ಮಣಿಮಂಡನಂ ವಿಮಲಚಂದ್ರ ಬಿಂಬಾನನಂ ।
ವಿಖಂಡಿತ ದಶಾನನಂ ವಿತತಚಾಪ ಬಾಣೋಜ್ಜ್ವಲಂ ।
ವಿಮೋಹಿತ ಜಗತ್ರಯಂ ವಿಕಚಪದ್ಮಪತ್ರೇಕ್ಷಣಂ ।
ವಿಭೀಷಣ ಸುರಕ್ಷಕಂ ವಿಜಯರಾಮ ಮಾಳೇಹರಿಂ ।

ಪ್ರಕಾಶವಾದ ಬಿಲ್ಲು ಬಾಣಗಳಿಂದ ಶೋಭಿಸುವ, ಮೂರು ಲೋಕಕ್ಕೂ ಮೋಹಕನಾದ, ಅರಳಿದ ಕಮಲ ದಂತೆ ಕಣ್ಣುಗಳುಳ್ಳ, ವಿಭೀಷಣನನ್ನು ಉದ್ಧಾರಮಾಡಿದ ವಿಷ್ಣುಸ್ವರೂಪನಾದ, ವಿಜಯರಾಮನನ್ನು ಭಜಿಸುತ್ತೇನೆ.

ಚಲತ್ಕನಕ ಕುಂಡಲೋಲ್ಲಸಿತ ದಿವ್ಯ ಗಂಡಸ್ಥಲಂ|
ಚರಾಚರ ಜಗನ್ಮಯಂ ಚರಣಪದ್ಮ ಗಂಗಾಶ್ರಯಂ|
ಚತುರ್ವಿಧ ಫಲಪ್ರದಂ ಸುಚರಪೀಠ ಮಧ್ಯಸ್ಥಿತಂ|
ಚಿದಂಶಮಖಿಲಾಸ್ಪದಂ ದಶರಥಾತ್ಮಜಂ ಚಿಂತಯೇ||

ಮಿನುಗುವ ಸುವರ್ಣ ಕುಂಡಲಗಳಿಂದ ಶೋಭಿಸುವ, ದಿವ್ಯಕಪೋಲ ಪ್ರದೇಶಗಳುಳ್ಳ, ಚರಾಚರ ಜಗದ್ರೂಪನಾದ, ಚರಣದಲ್ಲಿ ಗಂಗೆಗೆ ಆಶ್ರಯ ಕೊಟ್ಟ, ಧರ್ಮಾರ್ಥಕಾಮ ಮೋಕ್ಷಗಳೆಂಬ ಚತುರ್ವಿಧ ಫಲಪ್ರದನಾದ, ಅಂತರಾತ್ಮನಾಗಿ ತನಗೆ ಹೃದಯಕಮಲವು ಸ್ಥಿರಪೀಠವಾಗಿರಲು, ಹೊರಗೆ ಚರಪೀಠವಾದ ಅಯೋಧ್ಯಾಪುರದಲ್ಲಿರುವ, ಸಿಂಹಾಸನದಲ್ಲಿ ಕುಳಿತಿರುವ, ಚಿದಂಶಭೂತನಾದ, ಸಮಸ್ತ ಭಕ್ತರಿಗೂ ಆಶ್ರಯಕೊಡುವ, ದಶರಥನ ಮಗನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ವಿನೀಲ ಜಲದೋಪಮಂ ವಿಮಲಚಂದ್ರ ಬಿಂಬಾನನಂ|
ವಿನಿದ್ರಮಣಿಕುಂಡಲಂ ವಿಕಚ ಪುಂಡರೀಕೇಕ್ಷಣಂ|
ವಿಭಿನ್ನದನುಜಾಧಿಪಂ ವಿಧೃತ ಬಾಣ ಬಾಣಾಸನಂ|
ವಿಭೀಷಣ ವರಪ್ರದಂ ವಿಜಯರಾಮ ಮೀಡೇನಿಶಂ||

ವಿಶೇಷವಾಗಿ ನೀಲವಾಗಿರತಕ್ಕ ಮೋಡದಂತೆ ನೀಲವರ್ಣನೂ, ಪರಿಶುದ್ಧವಾದ ಶರಚ್ಚಂದ್ರನಂತೆ ದುಂಡಾದ ಮತ್ತು ಕಾಂತಿಯುಕ್ತವಾದ ಮುಖವುಳ್ಳವನೂ, ತೇಜೋಯುಕ್ತವಾದ ಮಣಿಕುಂಡಲಗಳಿಂದ ಕೂಡಿದವನೂ, ಅರಳಿದ ಕಮಲದಂತೆ ಕಣ್ಣುಗಳುಳ್ಳವನೂ, ರಾಕ್ಷಸಶ್ರೇಷ್ಠನಾದ ರಾವಣನನ್ನು ಮರ್ದಿಸಿದ ಬಾಣ ಬಿಲ್ಲುಗಳನ್ನು ಧರಿಸಿದವನೂ, ಶರಣಾಗತನಾದ ವಿಭೀಷಣನಿಗೆ ವರಪ್ರದಾನ ಮಾಡಿದವನೂ ಆದ ವಿಜಯರಾಮನನ್ನು ಸರ್ವದಾ ಸ್ತುತಿಸುತ್ತೇನೆ.

ವೈದೇಹೀ ಪ್ರಿಯವಲ್ಲಭಂ ವಿಜಯಿನಂ ವಾತಾತ್ಮಜಾಧೀಶ್ವರಂ|
ವಾಣೀ ವಾರಿಧಿ ವಾನರಾದಿವಿನುತಂ ಮಂದಾರುಮಂದಾರಕಂ|
ವಿಶ್ವಾಮಿತ್ರ ವಸಿಷ್ಠ ವಾಸವ ಶಿವೇಶಾನಾದಿ ಶಶ್ವನ್ನುತಂ|
ದೇವೇಶಂ ವಿನತಾತ್ಮಜಾದಿ ವಿನುತಂ ವಂದೇ ಸದಾ ರಾಘವಂ ||

ಸೀತೆಯ ಪ್ರಾಣಪ್ರಿಯನೂ, ಸರ್ವದಾ ವಿಜಯಶಾಲಿಯೂ, ಆಂಜನೇಯನಿಗೆ ಒಡೆಯನೂ, ಸಮುದ್ರರಾಜನಿಂದಲೂ ಕಪಿಶ್ರೇಷ್ಠರಿಂದಲೂ ಸ್ತುತಿಸಿಕೊಂಡವನೂ, ಆಶ್ರಿತಜನರಿಗೆ ಕಲ್ಪವೃಕ್ಷದಂತಿರುವನನೂ, ವಿಶ್ವಾಮಿತ್ರ, ವಸಿಷ್ಠ, ಇಂದ್ರ, ಪಾರ್ವತಿ, ಶಿವ ಇವರುಗಳಿಂದ ಪುನಃ ಪುನಃ ಸ್ತುತಿಸಿಕೊಳ್ಳುವವನೂ, ದೇವತೆಗಳಿಗೆ ಒಡೆಯನೂ, ಗರುಡನೇ ಮುಂತಾದವರಿಂದ ಸ್ತೋತ್ರ ಮಾಡಿಸಿಕೊಳ್ಳುವವನೂ ಆದ ರಾಘವನನ್ನು ನಮಸ್ಕರಿಸುತ್ತೇನೆ.

ಪಟ್ಟಾಭಿರಾಮ ಸ್ತೋತ್ರ

ವಾಮೇ ಭೂಮಿಸುತಾ ಪುರಸ್ತು ಹನುಮಾನ್ ಪಶ್ಚಾತ್ಸುಮಿತ್ರಾಸುತ ।
ಶ್ಯತ್ರುಘ್ನೋ ಭರತಶ್ಚ ಪಾರ್ಶ್ವದಳಯೊರ್ವಾಯ್ವಾದಿಕೋಣೇಷು ಚ ।
ಸುಗ್ರೀವಶ್ಚ ವಿಭೀಷಣಶ್ಚ ಯುವರಾಟ್ ತಾರಾಸುತೋ ಜಾಂಬವಾನ್ ।
ಮಧ್ಯೇ ನೀಲಸರೋಜ ಕೋಮಲರುಚಿಂ ರಾಮಂ ಭಜೇ ಶ್ಯಾಮಲಂ ॥

ಎಡಭಾಗದಲ್ಲಿ ಸೀತಾಸಮೇತನಾಗಿಯೂ, ಮುಂದುಗಡೆ ಆಂಜನೇಯನಿಂದಲೂ, ಹಿಂಭಾಗದಲ್ಲಿ ಲಕ್ಷ್ಮಣ ನಿಂದಲೂ, ಎಡ, ಬಲ ಭಾಗಗಳಲ್ಲಿ ಭರತ, ಶತ್ರುಘ್ನರಿಂದಲೂ, ನೈರುತ್ಯ ವಾಯುವ್ಯಾದಿಕೋಣಗಳಲ್ಲಿ ಸುಗ್ರೀವ, ವಿಭೀಷಣ, ಅಂಗದ, ಜಾಂಬುವಂತ ಮುಂತಾದವರಿಂದಲೂ ಕೂಡಿ ಪ್ರಕಾಶಿಸುವ, ಎಳೆಯ ಕನ್ನೈದಿಲೆಯ ನೀಲಕಾಂತಿಯುಳ್ಳವನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ವೈದೇಹೀ ಸಹಿತಂಚ ಲಕ್ಷ್ಮಣಯುತಂ ಶ್ರೀವಾಯುಪುತ್ರೈಃಸ್ತುತಂ ।
ಸುಗ್ರೀವಶ್ಚ ವಿಭೀಷಣಾಂಗದಹಿತಂ ಶತ್ರುಘ್ನಸಂಸೇವಿತಂ ।
ವಿಶ್ವಾಮಿತ್ರ ವಸಿಷ್ಠ ಗೌತಮ ಭರದ್ವಾಜಾದಿಸಂಪೂಜಿತಂ ।
ದೇವೇಶಂ ಭರತಾದಿಭಿಃ ಪರಿವೃತಂ ಶ್ರೀರಾಮಚಂದ್ರಂ ಭಜೇ ॥

ಸೀತಾಸಮೇತನಾಗಿ, ಲಕ್ಷ್ಮಣ, ಭರತ, ಶತೃಘ್ನ, ಸುಗ್ರೀವ, ವಿಭೀಷಣ, ಆಂಜನೇಯ, ಅಂಗದರಿಂದಲೂ, ವಿಶ್ವಾಮಿತ್ರ, ವಸಿಷ್ಠ, ಗೌತಮ, ಭರದ್ವಾಜಾದಿ ಋಷಿಗಳಿಂದಲೂ ಕೂಡಿ ಸೇವಿಸಿಕೊಳ್ಳುತ್ತಿರುವ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಅಗ್ರೇಮಾರುತಿಸೇವಿತಂಚ ಮನಿಶಂ ಸೌಮಿತ್ರಿ ಕೈಕಾಸುತೌ ।
ಛತ್ರಂ ಚಾಮರಯುಗ್ಮ ಭಾಸಿತಕರೌ ಪಶ್ಚಾತ್ ಸ್ಥಿತೇ ಪಾರ್ಶ್ವಯೋಃ ।
ವಾಮಾಂಗೇಸ್ಥಿತಜಾನಕೀಂ ವಿಭೀಷಣಮುಖಾನ್ ಸಂಭಾವಯನ್ ಬೋಧಯನ್ ।
ಧೀಮುದ್ರಾ ಕರತತ್ವರೂಪಮವತಾತ್ ಪಟ್ಟಾಭಿಷಿಕ್ತೋಹರಿಃ ॥

ಮುಂದುಗಡೆ ಭಕ್ತಾಗ್ರೇಸರನೂ ವಾಯುಪುತ್ರನೂ ಆದ ಆಂಜನೇಯನು ಪೂಜಿಸುತ್ತಿರಲು, ಹಿಂದುಗಡೆ ಉಭಯಪಾರ್ಶ್ವಗಳಲ್ಲಿ ಆದರ್ಶಪ್ರಾಯರಾದ ಸಹೋದರರುಗಳಾದ ಲಕ್ಷ್ಮಣ ಭರತ ಶತೃಘ್ನರು ಚಾಮರದ್ವಯಗಳನ್ನು ಹಿಡಿದು ನಿಂದಿರಲು,ಎಡಭಾಗದಲ್ಲಿ ಸೀತಾದೇವಿಯಿರಲು,ವಿಭೀಷಣಾದಿಗಳನ್ನು ಸಂಭಾವಿಸುತ್ತ ಮತ್ತು ಅವರಿಗೆ ಅದ್ವೈತ ತತ್ವವನ್ನು ಬೋಧಿಸುತ್ತಾ, ಚಿನ್ಮುದ್ರೆಯಿಂದ ಕೂಡಿದ ಹಸ್ತವುಳ್ಳವನಾಗಿ, ಪಟ್ಟಾಭಿಷಿಕ್ತನಾದ ಶ್ರೀರಾಮಚಂದ್ರನು ನಮ್ಮನ್ನು ಯಾವಾಗಲೂ ಕಾಪಾಡಲಿ.

ಸಿಂಹಾಸನಸ್ಥ ರಾಮ ಸ್ತೋತ್ರ

ರಾಮಂ ರತ್ನಕಿರೀಟಕುಂಡಲಧರಂ ಕೇಯೂರಹಾರಾನ್ವಿತಂ |
ಸೀತಾಲಂಕೃತ ವಾಮಭಾಗಮತುಲಂ ಸಿಂಹಾಸನಸ್ಥಂ ಪ್ರಭುಂ |
ಸುಗ್ರೀವಾದಿ ಹರೀಶ್ವರೈಸ್ಸುರವರೈಸ್ಸಂಸೇವ್ಯಮಾನಂಮುದಾ |
ವಿಶ್ವಾಮಿತ್ರ ಪರಾಶರಾದಿ ಮುನಿಭಿಸ್ಸಂಸ್ತೂಯಮಾನಂ ಭಜೇ|

ರತ್ನಕಿರೀಟ ಕುಂಡಲಧಾರಿಯೂ, ಕೇಯೂರ ಹಾರಗಳಿಂದ ಅಲಂಕೃತನೂ, ಎಡಭಾಗದಲ್ಲಿ ಸೀತಾ ಸಮೇತನಾಗಿರುವವನೂ, ದಿವ್ಯಸಿಂಹಾಸನದಲ್ಲಿ ಮಂಡಿಸಿರುವವನೂ, ಪ್ರಭುವೂ ಆದ, ಸುಗ್ರೀವನೇ ಮುಂತಾದ ಕಪಿವರರಿಂದ ಕೂಡಿ ಅವರೆಲ್ಲರಿಂದ ಸದಾ ಸೇವಿತನಾದ, ವಿಶ್ವಾಮಿತ್ರ, ಪರಾಶರ ಮುಂತಾದ ಋಷಿಗಳು ಭಜಿಸುವ ಶ್ರೀರಾಮಚಂದ್ರನನ್ನು ಧ್ಯಾನಿಸುತ್ತೇನೆ.

ಅಗ್ರೇ ಪ್ರಾಂಜಲಿಮಾಂಜನೇಯಮನಿಶಂ ವೀರಂಚ ತಾರಾಸುತಂ |
ಪಾರ್ಶ್ವೇ ಪಙ್ಕ್ತಿ ಮುಖಾನುಜಂ ಪರಿಸರೇ ಸುಗ್ರೀವಮಗ್ರಾಸನೇ |
ಪಶ್ಚಾಲ್ಲಕ್ಷ್ಮಣಮಂತರೇ ಜನಕಜಾ ಮಧ್ಯೇ ಸ್ಥಿತಂ ರಾಘವಂ |
ಚಿಂತಾ ತೂಲಿಕಯಾ ಲಿಖಂತಿ ಸುಭಯಶ್ಚಿತ್ತೇಷು ಪೀತಾಂಬರಂ||

ಮುಂದುಗಡೆ ಅಂಜಲಿಬದ್ಧನಾಗಿ ಆಂಜನೇಯನು, ಸತತವಾಗಿ ಭಜಿಸುತ್ತಿರಲು, ವೀರನಾದ ಅಂಗದನು ಮುಂದುಗಡೆಯಿರಲು, ಪಾರ್ಶ್ವದಲ್ಲಿ, ರಾವಣನ ತಮ್ಮನಾದ ವಿಭೀಷಣನಿರಲು, ಆಗ್ರಾಸನದ ಸಮೀಪವರ್ತಿಯಾಗಿ, ಸುಗ್ರೀವನಿರಲು, ಅಗ್ರಾಸನದ ಹಿಂದುಗಡೆ ಲಕ್ಷ್ಮಣನಿರಲು, ಸೀತೆಯು ಅಗ್ರಾಸನದ ಒಳಗೆ ಇರಲು, ತನ್ಮಧ್ಯೆ ಅಗ್ರಾಸನದಲ್ಲಿ ಕುಳಿತಿರುವ ಪೀತಾಂಬರಧಾರಿಯಾದ ರಾಘವನನ್ನು ಶ್ರೀರಾಮಚಿಂತನವೆಂಬ ಲೇಖನಿಯಿಂದ, ತತ್ವಜ್ಞಾನಿಗಳು, ಸತ್ವಗುಣಪ್ರಧಾನರಾಗಿ ಏಕಾಗ್ರತೆಯನ್ನು ಪಡೆದಿರುವ ತಮ್ಮ ಶಿಷ್ಯರ ಭಯಗ್ರಸ್ತವಾದ ಮನಸ್ಸಿನ ಮೇಲೆ ಬರೆದು, ಅವರ ಭಯವನ್ನು ತಪ್ಪಿಸುತ್ತಾರೆ. ಅಂದರೆ ಅವರಿಗೆ ಶ್ರೀರಾಮನ ಸಾಕ್ಷಾತ್ಕಾರ ಮಾಡಿಕೊಟ್ಟು, ಅವರನ್ನು ಸಂಸಾರಭಯದಿಂದ ನಿವಾರಣೆ ಮಾಡುತ್ತಾರೆ.

ಮೂಲೇ ಕಲ್ಪದ್ರುಮಸ್ಯಾಖಿಲಮಣಿ ವಿಲಸದ್ರತ್ನ ಸಿಂಹಾಸನಸ್ಥಂ |
ಕೋದಂಡ ದ್ವಂದ್ವಬಾಣೈರ್ಲಸಿತಕರಯುಗಂ ಸಾನ್ವಿತಂ ಲಕ್ಷ್ಮಣೇನ |
ವಾಮಾಂಕೇನ್ಯಸ್ತಸೀತಾಭರತಧೃತ ಮಹಾಮೌಕ್ತಿಕಚ್ಛತ್ರದೀಪ್ತಂ |
ಶತ್ರುಘ್ನಂ ಚಾಮರಾಭ್ಯಾಂ ವಿಲಸಿತಮನಿಶಂ ರಾಮಚಂದ್ರಂ ಭಜೇಹಂ ||

ಕಲ್ಪವೃಕ್ಷದ ಅಡಿಯಲ್ಲಿ ಸಮಸ್ತ ನವರತ್ನ ಖಚಿತವಾದ ಸಿಂಹಾಸನದಲ್ಲಿ ಕುಳಿತು, ಕೋದಂಡ ಬಾಣದ್ವಯಗಳನ್ನು ತನ್ನ ಕೈಯಲ್ಲಿ ಧರಿಸಿ, ಲಕ್ಷ್ಮಣಸಮೇತನಾಗಿ, ಎಡ ತೊಡೆಯಮೇಲೆ ಸೀತಾದೇವಿಯನ್ನು ಕುಳ್ಳಿರಿಸಿಕೊಂಡು, ಭರತನಿಂದ ಎತ್ತಿ ಹಿಡಿಯಲ್ಪಟ್ಟ ಶ್ವೇತಚ್ಛತ್ರದಿಂದ ಕೂಡಿ, ಶತ್ರುಘ್ನನಿಂದ ಚಾಮರವನ್ನು ಹಿಡಿಸಿಕೊಂಡಿರುವ, ಪ್ರಕಾಶಮಾನನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ವಾಮಾಂಕೇ ಪರಿಸಂಸ್ಥಿತಾವನಿಸುತಮಾಮುಕ್ತಭೂಷೋಜ್ವಲಾಂ ।
ಪಶ್ಯಂತಂ ಪರಿಪೂರ್ಣಚಂದ್ರವದನಂ ಭ್ರಾಜತ್ಕಿರೀಟೋಜ್ವಲಂ ।
ಆಸೀನಂ ನವರತ್ನರಾಜಿಖಚಿತೇ ಸಿಂಹಾಸನೇ ರಾಘವಂ ।
ಸುಗ್ರೀವಾಂಗದ ಲಕ್ಷ್ಮಣಾನಿಲಸುತೈರಾಸೇವ್ಯಮಾನಂ ಭಜೇ ॥

ರತ್ನಖಚಿತ ಭೂಷಣಗಳಿಂದ ಜಾಜ್ಜ್ವಲ್ಯಮಾನಳಾಗಿ ಪ್ರಕಾಶಿಸುವ ಸೀತೆಯು ತನ್ನ ಎಡ ತೊಡೆಯಮೇಲೆ ಕುಳ್ಳಿರಲು, ದೇದೀಪ್ಯಮಾನವಾದ ಕಿರೀಟದಿಂದ ಶೋಭಿಸುತ್ತಲಿರುವ ಚಂದ್ರವದನನಾದ ಶ್ರೀರಾಮನು ಆಕೆಯನ್ನು ನೋಡುತ್ತಾ ನವರತ್ನಖಚಿತ ಸಿಂಹಾಸನವನ್ನಲಂಕರಿಸಿದ್ದನು. ಸುಗ್ರೀವ, ಅಂಗದ, ಆಂಜನೇಯ ಇವರುಗಳು ಸೇವಿಸುತ್ತಿದ್ದರು. ಇಂತಹ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಕಂದರ್ಪಾಯುತ ಕೋಟಿ ಕೋಟಿ ಸದೃಶಂ ಕಾಲಾಂಬುದ ಶ್ಯಾಮಲಂ ।
ಕಂಬುಗ್ರೀವ ಮುದಾರ ಕೌಸ್ತುಭಧರಂ ಕರ್ಣಾವತಂಸೋತ್ಪಲಂ ।
ಕಸ್ತೂರೀ ತಿಲಕೋಜ್ಜ್ವಲಂ ಸ್ಮಿತನಿಭಂ ಚಿನ್ಮುದ್ರಯಾಲಂಕೃತಂ ।
ಸೀತಾಲಕ್ಷ್ಮಣ ವಾಯುಪುತ್ರಸಹಿತಂ ಸಿಂಹಾಸನಸ್ಥಂ ಭಜೇ ॥

ಕೋಟಿ, ಕೋಟಿ ಅಯುತ ಮನ್ಮಥರಿಗೆ ಸಮಾನವಾದ ಸೌಂದರ್ಯಾತಿಶಯದಿಂದ ಕೂಡಿದ, ಕಾಲಮೇಘದಂತೆ ನೀಲ ಬಣ್ಣದ ಕಾಂತಿಯುಳ್ಳ, ಶಂಖದಂತೆ ಕತ್ತನ್ನುಳ್ಳ, ಉದಾರಿಯಾದ, ಕೌಸ್ತುಭಮಣಿಯನ್ನು ಧರಿಸಿರುವ, ಪ್ರಕಾಶಮಾನವಾದ ಕುಂಡಲಗಳಿಂದಲೂ ಕಸ್ತೂರೀ ತಿಲಕದಿಂದಲೂ ಮುಗುಳ್ನಗೆಯಿಂದಲೂ ಕೂಡಿದ, ಅದ್ವೈತ ತತ್ವಬೋಧಕವಾದ ಚಿನ್ಮುದ್ರೆಯಿಂದ ಶೋಭಿಸುವ ಹಸ್ತವುಳ್ಳ (ಅಂಗುಷ್ಠ, ತರ್ಜನಿಗಳನ್ನು ಕೂಡಿಸಿ ಮಿಕ್ಕ ಬೆರಳುಗಳನ್ನು ಬೇರೆ ಬೇರೆಯಾಗಿಟ್ಟುಕೊಳ್ಳುವುದು ಚಿನ್ಮುದ್ರೆ), ಸೀತಾ, ಲಕ್ಷ್ಮಣ, ಆಂಜನೇಯ ಸಹಿತನಾದ, ಸಿಂಹಾಸನಾಸೀನನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಶ್ರೀರಾಮಂ ಶಿವಚಾಪ ಭಂಗನಿಪುಣಂ ಸೀತಾಂಗನಾವಲ್ಲಭಂ ।
ಸುತ್ರಾಮಾರ್ಚಿತ ಪಾದಪದ್ಮಯುಗಳಂ ಸೂರ್ಯೇಂದು ನೇತ್ರೋಜ್ಜ್ವಲಂ ।
ಕರ್ಪೂರಾಂಗ ವಿಲೇಪನಂ ಘನರುಚಂ ಕಾರುಣ್ಯಪಾಥೋನಿಧಿಂ ।
ವಂದೇ ಕಲ್ಪತರು ಪ್ರದೇಶವಿಲಸತ್ಸಿಂಹಾಸನಾಧಿಷ್ಠಿತಂ ॥

ಶಿವಧನುಸ್ಸನ್ನು ಭಗ್ನಗೊಳಿಸಿದವನೂ, ಸೀತಾಪತಿಯೂ, ಇಂದ್ರನಿಂದ ಪೂಜಿತವಾದ ಪಾದಕಮಲಗಳುಳ್ಳವನೂ, ಸೂರ್ಯಚಂದ್ರರ ಕಾಂತಿಗೆ ಸಮಾನವಾದ ದಿವ್ಯ ತೇಜಸ್ಸಿನಿಂದ ಕೂಡಿದ ಕಣ್ಣುಗಳುಳ್ಳವನೂ, ಸುಗಂಧ ದ್ರವ್ಯಗಳಿಂದ ಲೇಪಿತನೂ, ತೇಜೋಮೂರ್ತಿಯೂ, ಕರುಣಾಕರನೂ, ಕಲ್ಪವೃಕ್ಷದಂತಿರುವ ಶ್ವೇತಚ್ಛತ್ರದ ಅಡಿಯಲ್ಲಿ ಸಿಂಹಾಸನಾಧಿಷ್ಠನಾಗಿ ಬೆಳಗುವವನೂ ಆದ ಶ್ರೀರಾಮಚಂದ್ರನನ್ನು ನಮಸ್ಕರಿಸುವೆನು.

ರಾಮಂ ಸೀತಾಸಮೇತಂ ವಿಮಲರವಿಶತಾ ಭಾಸಮಾನಂ ರಸಾರ್ದ್ರಂ।
ಶ್ಯಾಮಂ ದೇದೀಪ್ಯಮಾನಂ ಸ್ಮಿತರುಚಿರಮುಖಂ ಕುಂಡಲೋದ್ಭಾಸಿಗಂಡಂ।
ಶ್ರೀವತ್ಸಂ ಶ್ರೀನಿವಾಸಂ ಸುರತರು ವಿಲಸದ್ರತ್ನ ಸಿಂಹಾಸನಸ್ಥಂ।
ದಿವ್ಯಾಕಲ್ಪೋಜ್ಜ್ವಲಾಂಗಂ ದಿವಿಜಪತಿನುತಂ ಸಂತತಂ ತಂ ಭಜೇಹಂ॥

ಸೀತಾಸಮೇತನಾದ, ಪರಿಶುದ್ಧರಾದ ನೂರು ಸೂರ್ಯರ ಸಮಾನ ಕಾಂತಿಯುಳ್ಳ, ಕರುಣಾರಸದಿಂದ ಕೂಡಿದ, ಶ್ಯಾಮಲನಾದ, ಪ್ರಕಾಶಮಾನನಾದ, ಮಂದಹಾಸದ ಕಾಂತಿಯಿಂದ ಕೂಡಿದ ಮುಖವುಳ್ಳ, ಕುಂಡಲದಿಂದ ಶೋಭಿತವಾದ ಕಪೋಲ ಪ್ರದೇಶವುಳ್ಳ, ಶ್ರೀವತ್ಸಧಾರಿಯೂ, ಶ್ರೀನಿವಾಸನೂ, ಕಲ್ಪವೃಕ್ಷದಂತಿರುವ ನವರತ್ನ ನಿಬಿಡವಾದ ಶ್ವೇತಛತ್ರಿಯ ಅಡಿಯಲ್ಲಿ ರತ್ನಸಿಂಹಾಸನದಲ್ಲಿ ಕುಳಿತಿರುವವನೂ, ಶ್ರೇಷ್ಠವಾದ ಮತ್ತು ಕಾಂತಿಯುಕ್ತವಾದ ಶರೀರವುಳ್ಳವನೂ, ದೇವೇಂದ್ರನಿಂದ ಸ್ತುತಿಸಲ್ಪಡುವವನೂ ಆದ ಶ್ರೀರಾಮಚಂದ್ರನನ್ನು ಸತತವಾಗಿ ಭಜಿಸುತ್ತೇನೆ.

ರಾಜದ್ರಾಜೀವನೇತ್ರಂ ರಘುಕುಲತಿಲಕಂ ರಂಜಿತಾಶೇಷಲೋಕಂ।
ವಾಮಾಂಕಾಲೋಕ ಸೀತಾಂ ವರಶರಧನುಷಂ ಕುಂಡಲೋದ್ದೀಪ್ತಗಂಡಂ।
ಶ್ಯಾಮಂ ಶಾಂತಂ ಪ್ರಸನ್ನಂ ದರಹಸಿತ ಮುಖಂ ವಜ್ರ ಸಿಂಹಾಸನಸ್ಥಂ।
ರಾಮಂ ರಾಜತ್ಕಿರೀಟಂ ರವಿಶತವಿಶದಂ ರಾಜ ರಾಜೇಶಮೀಡೇ॥

ಹೊಳೆಯುವ ನೇತ್ರ ಕಮಲವುಳ್ಳ, ರಘುವಂಶಕ್ಕೆ ರತ್ನಪ್ರಾಯನಾದ, ಸಮಸ್ತ ಪ್ರಪಂಚಕ್ಕೂ ಚಿದ್ರೂಪನಾಗಿ ಪ್ರಕಾಶಿಸುವ, ಎಡ ತೊಡೆಯಮೇಲೆ ಕುಳಿತು ತನ್ನನ್ನು ಈಕ್ಷಿಸುತ್ತಿರುವ, ಸೀತಾಸಮೇತನಾದ, ಶ್ರೇಷ್ಠವಾದ ಬಿಲ್ಲು ಬಾಣಗಳಿಂದ ಯುಕ್ತನಾದ, ಕುಂಡಲಗಳಿಂದ ಪ್ರಕಾಶಿಸಲ್ಪಟ್ಟ ಕಪೋಲ ಪ್ರದೇಶಗಳುಳ್ಳ, ಶ್ಯಾಮಲ ವರ್ಣನೂ, ಶಾಂತಮೂರ್ತಿಯೂ, ಭಕ್ತರನ್ನು ಅನುಗ್ರಹಿಸತಕ್ಕವನೂ, ಮಂದಹಾಸದಿಂದ ಕೂಡಿದ ಮುಖವುಳ್ಳವನೂ, ವಜ್ರಸಿಂಹಾಸನದಲ್ಲಿ ಆಸೀನನೂ, ಪ್ರಕಾಶಮಾನವಾದ ಕಿರೀಟದಿಂದ ಕೂಡಿದ ನೂರು ಸೂರ್ಯರಿಗೆ ಸಮಾನವಾದ ಧವಳ ಕಾಂತಿಯುಕ್ತನೂ, ರಾಜರಿಗೂ ರಾಜನೂ ಆದ ಶ್ರೀರಾಮುನನ್ನು ಸ್ತುತಿಸುತ್ತೇನೆ.

ಸಾಕೇತೇ ಪ್ರಣವಾಬ್ಜ ರತ್ನಖಚಿತೇ ಸಿಂಹಾಸನೇ ಸಂಸ್ಥಿತಂ।
ವಿಶ್ವಾಮಿತ್ರ ವಸಿಷ್ಠಗಾಲವ ಮುಖ್ಯೈರಾಶೀರ್ಭಿರಂಚಜ್ಜಟೈಃ।
ಪೂಜ್ಯಂ ಪಾರ್ಶ್ವಗತಾಬ್ಜ ಚಾರುನಯನಂ ವಿದ್ಯುಚ್ಚಲತ್ಸಾಯಕಂ।
ವಂದೇ ಕೋಮಲ ಸುಸ್ಮಿತಾನನ ಮಿಳಾ ರಕ್ಷಾವತೀರ್ಣಂ ಹರಿಂ॥

ಅಯೋಧ್ಯೆಯಲ್ಲಿ ಓಂಕಾರ ರೂಪವಾಗಿರುವ, ರತ್ನ ಕಮಲಗಳಿಂದ ಖಚಿತವಾದ ಸಿಂಹಾಸನದಲ್ಲಿ, ಆಸೀನನಾಗಿರುವವನೂ, ವಿಶ್ವಾಮಿತ್ರ, ವಸಿಷ್ಠ, ಗಾಲವರೇ, ಮುಂತಾದವರಿಂದ ಆಶೀರ್ವದಿಸಿಕೊಳ್ಳುತ್ತಿರುವವನೂ, ಯತಿಗಳಿಂದ ಪೂಜಿಸಿಕೊಳ್ಳುತ್ತಿರುವವನೂ, ಓರೆ ನೋಟದಿಂದ ಕೂಡಿರುವ ಕಮಲ ನೇತ್ರಗಳುಳ್ಳವನೂ, ವಿದ್ಯುದ್ವೇಗದ ಬಾಣಗಳುಳ್ಳವನೂ, ಶ್ಯಾಮಲನೂ, ಕೋಮಲನೂ, ಮಂದಹಾಸದಿಂದ ಕೂಡಿದ ಮುಖವುಳ್ಳವನೂ, ಪ್ರಪಂಚದ ರಕ್ಷಣೆಗೆ ಸಿದ್ಧನಾಗಿರುವವನೂ, ಶ್ರೀ ವಿಷ್ಣುಸ್ವರೂಪಿಯೂ ಆದ ಶ್ರೀರಾಮಚಂದ್ರನನ್ನು ವಂದಿಸುತ್ತೇನೆ.

ವೀರಾಸನಸ್ಥ ರಾಮ ಸ್ತೋತ್ರ

ಶ್ರೀರಾಮಂ ಸರಸೀರುಹಾಕ್ಷಮಮಲಂ ದೂರ್ವಾಂಕುರ ಶ್ಯಾಮಲಂ |
ವಿದ್ಯುತ್ಕೋಟಿ ನಿಭಪ್ರಭಾಂಬರಧರಂ ವೀರಾಸನಾಧಿಷ್ಠಿತಂ |
ವಾಮಾಂಕೋಪರಿ ಸಂಸ್ಥಿತಾಂ ಜನಕಜಾಮಾಲಿಂಗ್ಯತ್ಯಾಂ ಬಾಹುನಾ |
ತತ್ವಂ ಚಾಪರಪಾಣಿನಾ ಕಪಿವರಾನಾಜ್ಞಾಪಯಂತಂ ಭಜೇ ||

ಕಮಲಾಕ್ಷನಾದ, ಪರಿಶುದ್ಧನಾದ, ಎಳೆಯ ಗರಿಕೆಯಂತೆ ಕೋಮಲ ಶ್ಯಾಮಲನಾದ, ಕೋಟಿ ಮಿಂಚಿನ ಪ್ರಕಾಶದಂತೆ ಶೋಭಿಸುವ ಉಡಿಗೆಗಳುಳ್ಳ, ವೀರಾಸನದಲ್ಲಿ ಕುಳಿತಿರುವ, ಎಡಪಾರ್ಶ್ವದಲ್ಲಿ ಜನಕಜೆಯನ್ನು ಆಲಂಗಿಸಿಕೊಂಡಿರುವ ಬಾಹುವಿನಿಂದ ಕೂಡಿದ, ಬಲಹಸ್ತದ ಚಿನ್ಮುದ್ರೆಯಿಂದ ತತ್ವಬೋಧೆ ಮಾಡುತ್ತಿರುವ, ಕಪಿವರರಿಗೆ ಆಜ್ಞಾಪಕನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ರಾಮಸ್ಸೀತಾಸಮೇತೋ ನಿವಸತುಹೃದಯೇ ಸಾನುಜಂ ರಾಮಮೀಳೇ |
ರಾಮೇಣ ಕ್ಷೀಣ ಪಾಪಸ್ತ್ರಿವಿಧಮಪಿಕೃತಂ ಕರ್ಮ ರಾಮಾಯ ದದ್ಯಾಂ |
ರಾಮಾದನ್ಯಂ ನಜಾನೇ ನಹಿ ಕಿಮಪಿ ಮಹಾರಾಮನಾಮಸ್ಸಮಾನಂ |
ರಾಮೇ ಪಶ್ಯಾಮಿ ವಿಶ್ವಂ ಭುವನಮನುದಿನಂ ಪಾಹಿಮಾಂ ವೀರರಾಮ ||

ಸೀತಾಸಮೇತನಾದ ಶ್ರೀರಾಮನು ಲಕ್ಷ್ಮಣಮೂರ್ತಿಯ ಸಹಿತನಾಗಿ ನನ್ನ ಹೃದಯದಲ್ಲಿ ನೆಲಸಲಿ. ಕಾಯ, ವಾಚ, ಮನಸಾ ನಾವು ಮಾಡುವ ತ್ರಿವಿಧ ಕರ್ಮಗಳನ್ನೂ ನಾವು ಶ್ರೀರಾಮರ್ಪಣ ಬುದ್ಧಿಯಿಂದ ಮಾಡಿದರೆ, ಆ ಕರ್ಮಗಳಿಂದ ಉಂಟಾಗುವ ಪಾಪಗಳೆಲ್ಲವೂ ನಾಶಹೊಂದುವುವು. ರಾಮನಲ್ಲದೆ ಬೇರೆ ಯಾರನ್ನೂ ನಾನು ಧ್ಯಾನ ಮಾಡುವುದಿಲ್ಲ. ಮಹತ್ತಾದ ರಾಮನಾಮಕ್ಕೆ ಸ್ವಲ್ಪ ಸಮಾನವಾದ್ದೂ ಯಾವುದೂ ಇಲ್ಲ. ವಿರಾಡ್ರೂಪಿಯಾದ ರಾಮನಲ್ಲಿ ಸಮಸ್ತ ವಿಶ್ವವನ್ನು ಅನುದಿನವೂ ನೋಡುತ್ತೇನೆ. ವೀರ ರಾಮನೇ ನನ್ನನ್ನು ಕಾಪಾಡು.

ರಾಮಂ ವೀರಾಸನಸ್ಥಂ ಹೃದಯಗತಕರೋದಂಚಿತ ಜ್ಞಾನಮುದ್ರಂ |
ಜಾನುನ್ಯಾಸಕ್ತಹಸ್ತಂ ಕ್ಷಿತಿವರತನಯಾ ಭೂಷಿತಂ ವಾಮಭಾಗೇ |
ಷಟ್ಕೋಣೇ ವ್ಯಾಹರಂತಂ ಪವನಸುತಯುತಂ ಮಾನಸೇ ಸಸ್ಫುರಂತಂ |
ಸಂಸೇವೇಸೇವ್ಯಮಾನಂ ದೃಢಶರಧನುಷಂ ದಕ್ಷಿಣೇ ಲಕ್ಷ್ಮಣೇನ ||

ವೀರಾಸನದಲ್ಲಿ, ತನ್ನ ವಕ್ಷಸ್ಥಳದ ಮುಂಭಾಗದಲ್ಲಿ ಜ್ಞಾನಮುದ್ರಾಂಕಿತ ಹಸ್ತನಾಗಿ ಆಜಾನುಬಾಹುವಾದ, ವಾಮ ಭಾಗದಲ್ಲಿ ಸೀತಾಸಮೇತನಾದ, ಶರೀರದಲ್ಲಿ "ಮೂಲಾಧಾರಾದಿ" ಷಟ್ಚಕ್ರಗಳಲ್ಲಿ ಸಂಚರಿಸುವವನಾಗಿರುವ, ಬಲಭಾಗದಲ್ಲಿ, ಕೋದಂಡ ಬಾಣಗಳಿಂದ ಕೂಡಿದ ಲಕ್ಷ್ಮಣನಿಂದ ಸೇವಿಸಿಕೊಳ್ಳುತ್ತಾ, ಆಂಜನೇಯ ಸಹಿತನಾದ, ಶ್ರೀರಾಮನನ್ನು ಸೇವಿಸುತ್ತೇನೆ.

ವೈದೇಹೀಸಹಿತಂ ಸುರದ್ರುಮತಲೇ ಹೈಮೇ ಮಹಾಮಂಟಪೇ ।
ಮಧ್ಯೇ ಪುಷ್ಪಸುಖಾಸನೇ ಮಣಿಮಯೇ ವೀರಾಸನೇ ಸಂಸ್ಥಿತಂ ।
ಅಗ್ರೇವಾಚಯತಿ ಪ್ರಭಂಜನಸುತೇ ತತ್ವಂ ಮುನಿಭ್ಯಃ ಪರಂ ।
ವ್ಯಾಖ್ಯಾಂತಂ ಭರತಾದಿಭಿಃ ಪರಿವೃತಂ ರಾಮಂ ಭಜೇ ಶ್ಯಾಮಲಂ ॥

ಸೀತಾಸಮೇತನಾಗಿ, ಕಲ್ಪವೃಕ್ಷದಂತಿರುವ ಶ್ವೇತಚ್ಛತ್ರದ ಅಡಿಯಲ್ಲಿ ಸುವರ್ಣ ಮಂಟಪದ ಮಧ್ಯೆ, ನವರತ್ನಖಚಿತವಾದ, ಪುಷ್ಪವಿರಚಿತ ಸುಖಾಸನದಲ್ಲಿ ವೀರಾಸನನಾಗಿ ಕುಳಿತಿರುತ್ತಾ, ಋಷಿಗಳಿಂದ ವಾಖ್ಯಾನ ಮಾಡಲ್ಪಟ್ಟ ತನ್ನಪರ ತತ್ವವನ್ನು ಮುಂದುಗಡೆ ಆಂಜನೇಯನು ವಾಚನ ಮಾಡುತ್ತಿರಲು, ಭರತನೇ ಮೊದಲಾದ ತನ್ನ ಪರಿವಾರದೊಡನೆ ಶೋಭಿಸುವ ಶ್ಯಾಮಲ ಮೂರ್ತಿಯಾದ ಶ್ರೀರಾಮಚಂದ್ರನನ್ನು ಸ್ಮರಿಸುತ್ತೇನೆ.

ಕ್ಷೀರಾಂಭೋನಿಧಿ ಮಧ್ಯವರ್ತಿನಿ ಸಿತೇದ್ವೀಪೇ ಸುವರ್ಣಾಚಲೇ ।
ರತ್ನೋಲ್ಲಾಸಿತ ಕಲ್ಪ ಭೂರುಹತಲೇ ಜಾಂಬೂನದೇ ಮಂಡಪೇ ।
ತೇಜೋ ಭ್ರಾಜಿತ ವೇದಿಕೇ ಸುರುಚಿರೇ ಮಾಣಿಕ್ಯ ಸಿಂಹಾಸನೇ ।
ಹೇಮಾಂಭೋರುಹ ಕರ್ಣಿಕೋಪರಿತಲೇ ವೀರಾಸನಸ್ಥಂ ಭಜೇ ॥

ಕ್ಷೀರಸಾಗರದ ಮಧ್ಯೆ, ಶ್ವೇತದ್ವೀಪದಲ್ಲಿ ಪ್ರಕಾಶಿಸುವ ಮೇರು ಪರ್ವತದಲ್ಲಿರುವ ಹೇಮ ಮಂಟಪದಲ್ಲಿ, ದಿವ್ಯವೂ ಉಚ್ಚವೂ ಆದ ಪೀಠವಿರುವುದು. ಆ ಪೀಠದ ಮೇಲೆ ಮಾಣಿಕ್ಯ ಸಿಂಹಾಸನವಿರುವುದು. ಅದರೊಳಗಿರುವ ಸುವರ್ಣ ಕಮಲದ ಕರ್ಣಿಕೆಯಮೇಲೆ ವೀರಾಸನನಾಗಿ ಮಂಡಿಸಿರುವ ಶ್ರೀರಾಮನನ್ನು ಭಜಿಸುತ್ತೇನೆ.

ಸೀತಾಲೋಕನ ತತ್ಪರಂ ಮಣಿನಿಭಂ ವ್ಯಾಖ್ಯಾನ ಮುದ್ರಾಂಚಿತಂ ।
ವಾಮೇ ಜಾನುನಿಸಕ್ತ ಹಸ್ತಮನಿಶಂ ವೀರಾಸನೇ ಸಂಸ್ಥಿತಂ ।
ಮೂಲೇ ಕಲ್ಪತರೋರನಾದಿಮುನಿಭಿರ್ಬ್ರಹ್ಮಾದಿಭಿಸ್ಸೇವಿತಂ ।
ಮುಕ್ತಾಹಾರ ಕಿರೀಟ ಕುಂಡಲಧರಂ ಮೂರ್ಧಾಭಿಷಿಕ್ತಂ ಭಜೇ ॥

ಸೀತಾದೇವಿಯನ್ನು ಆನಂದ ದೃಷ್ಟಿಯಿಂದ ನೋಡುತ್ತಿರುವ, ನವರತ್ನ ಕಾಂತಿಯಿಂದ ಶೋಭಿಸುವ, ಅದ್ವೈತೋಪದೇಶ ಸೂಚಕವಾದ ಚಿನ್ಮುದ್ರೆಯಿಂದ ಕೂಡಿದ ದಕ್ಷಿಣ ಹಸ್ತವುಳ್ಳ, ವಾಮ ಹಸ್ತವನ್ನು ತನ್ನ ಮೊಳ ಕಾಲಿನ ಮೇಲೆ ಇಟ್ಟುಕೊಂಡಿರುವ, ವೀರಾಸನಾಸೀನನಾದ ಮತ್ತು ದೇವಲೋಕದಲ್ಲಿ ಕಲ್ಪವೃಕ್ಷದಂತಿರುವ ಶ್ವೇತಚ್ಛತ್ರದ ಅಡಿಯಲ್ಲಿ ಮುನಿಗಳಿಂದಲೂ ಬ್ರಹ್ಮಾದಿಗಳಿಂದಲೂ ಸೇವಿತನಾದ, ಆದಿ ಮಧ್ಯಾಂತರಗಳಿಲ್ಲದ, ಮುಕ್ತಾಹಾರ ಕಿರೀಟ ಕುಂಡಲಗಳನ್ನು ಧರಿಸಿ ಪಟ್ಟಾಭಿಷಿಕ್ತನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ರಾಮಂ ವೀರಾಸನಸ್ಥಂ ವಿಮಲರವಿನಿಭಂ ಭಾಸಮಾನಸ್ವರೂಪಂ ।
ಶ್ಯಾಮಂ ಸೀತಾಸಮೇತಂ ಸ್ಮಿತರುಚಿರಮುಖಂ ಕುಂಡಲೋದ್ದೀಪ್ತಗಂಡಂ ।
ಶ್ರೀವತ್ಸಂ ಶ್ರೀನಿವಾಸಂ ಸುರವಿಟಪಿ ತಟನ್ಯಸ್ತ ಸಿಂಹಾಸನಸ್ಥಂ ।
ದಿವ್ಯಾ ಕಲ್ಪೋಜ್ವಲಾಂಗಂ ದಿವಿಜಪತಿನುತಂ ಧ್ಯಾನ ಯಜ್ಞೇನ ಯಕ್ಷ್ಯೇ ॥

ವೀರಾಸನದಲ್ಲಿ ಕುಳಿತಿರುವವನೂ, ಮೋಡಗಳಿಲ್ಲದ ಆಕಾಶದಲ್ಲಿ ಪ್ರಜ್ಜ್ವಲಿಸುವ ಸೂರ್ಯನ ಸಮಾನವಾದ ತೇಜಸ್ಸುಳ್ಳವನೂ, ನೀಲವರ್ಣನೂ, ಸೀತಾಸಮೇತನೂ, ಮಂದಹಾಸದಿಂದ ಕೂಡಿದ ಮುಖವುಳ್ಳವನೂ, ಕುಂಡಲಗಳಿಂದ ಹೊಳೆಯುವ ಕಪೋಲ ಪ್ರದೇಶವುಳ್ಳವನೂ, ಶ್ರೀವತ್ಸ ಚಿಹ್ನಾಂಕಿತನಾದವನೂ, ಲಕ್ಷ್ಮಿಗೆ ಆಶ್ರಯನಾದವನೂ, ಕಲ್ಪವೃಕ್ಷ ಪ್ರದೇಶದಲ್ಲಿ ಸಿಂಹಾಸನಾಸೀನನೂ, ದಿವ್ಯ ಸುವರ್ಣ ವಸ್ತ್ರ ಮಾಲ್ಯಾದಿಗಳಿಂದ ಅಲಂಕೃತನೂ, ತೇಜಃಪುಂಜ ಶರೀರಿಯೂ, ದೇವೇಂದ್ರನಿಂದ ಸ್ತುತಿಸಿಕೊಳ್ಳುವವನೂ ಆದ ಶ್ರೀರಾಮನ ಧ್ಯಾನವೆಂಬ ಯಜ್ಞವನ್ನು ಮಾಡುತ್ತೇನೆ.

ಅಯೋಧ್ಯಾರಾಮ ಸ್ತೋತ್ರ

ಕೇಯೂರಾಂಗದ ಕಂಕಣೈರ್ಮಣಿಗಣೈರ್ವೈರೋಚಮಾನಂ ಸದಾ ।
ರಾಕಾಪರ್ವಣಿ ಚಂದ್ರಕೋಟಿಸದೃಶಂ ಛತ್ರೇಣ ವೈರಾಜಿತಂ ।
ಹೇಮಸ್ತಂಭ ಸಹಸ್ರ ಷೋಡಶಯುತೇ ಮಧ್ಯೇ ಮಹಾಮಂಟಪೇ ।
ದೇವೇಶಂ ಭರತಾದಿಭಿಃ ಪರಿವೃತಂ ರಾಮಂ ಭಜೇ ಶ್ಯಾಮಲಂ ।

ಕೇಯೂರ ಅಂಗದ ಕಂಕಣ ಮುಂತಾದ ಆಭರಣಗಳಿಂದ ವಿರಾಜಮಾನನಾದ, ಕೋಟಿ ಪೂರ್ಣಚಂದ್ರರಿಗೆ ಸಮಾನವಾದ ಕಾಂತಿಯಿಂದ ಕೂಡಿ, ಶ್ವೇತಚ್ಛತ್ರದಿಂದ ಶೋಭಿಸುವ, ಹದಿನಾರು ಸಾವಿರ ಚಿನ್ನದ ಕಂಬಗಳ ಮಧ್ಯೆ ಮಹಾಮಂಟಪದಲ್ಲಿ ಭರತಾದಿಗಳಿಂದ ಕೂಡಿ ಇರುವ, ಶ್ಯಾಮಲಮೂರ್ತಿಯಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಸಾಕೇತೇ ನವರತ್ನ ಪಙ್ಕ್ತಿ ಖಚಿತೇ ಚಿತ್ರ ಧ್ವಜಾಲಂಕೃತೇ ।
ಸೌಧೇ ಸ್ವರ್ಣಮಯೇ ದಳಾಷ್ಟಲಲಿತೇ ಪದ್ಮೇ ವಿಮಾನೋತ್ತಮೇ ।
ಆಸೀನಂ ಭರತಾದಿ ಸೋದರಜನೈಃ ಶಾಖಾಮೃಗೈಃ ಕಿನ್ನರೈಃ ।
ದಿಕ್ಪಾಲೈರ್ಮುನಿಪುಂಗವೈ ರ್ನೃಪಗಣೈ ಸ್ಸಂಸೇವ್ಯಮಾನಂ ಭಜೇ ॥

ನವರತ್ನದ ಸಾಲುಗಳ ರಂಗವಲ್ಲಿಗಳಿಂದಲೂ ಚಿತ್ರವಿಚಿತ್ರವಾದ ಪತಾಕೆಗಳಿಂದಲೂ ಅಲಂಕೃತವಾದ ಅಯೋಧ್ಯಾಪುರದಲ್ಲಿನ ಅರಮನೆಯಲ್ಲಿ, ಎತ್ತರವಾದ ವಿಮಾನದಲ್ಲಿ ಸುವರ್ಣಮಯವಾದ ಅಷ್ಟದಳಪದ್ಮದಲ್ಲಿ ಕುಳಿತು, ಭರತಾದಿ ಸೋದರರಿಂದಲೂ ಅಷ್ಟದಿಕ್ಪಾಲಕರಿಂದಲೂ ಕಪಿಶ್ರೇಷ್ಠರಿಂದಲೂ ಕಿನ್ನರರಿಂದಲೂ ರಾಜಸಮೂಹದಿಂದಲೂ ಸೇವಿತನಾಗಿ ಪ್ರಕಾಶಿಸುವ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಸಾಕೇತೇ ಮಣಿಮಂಟಪೇ ಸುರತರುಪ್ರಾಂತೇ ವಿಮಾನಾಂತರೇ ।
ಪದ್ಮೇಚಾಷ್ಟದಳೋಜ್ಜ್ವಲೇ ನುತ ಮಹಾಸೌಧೇ ಸುಧಾಪಾನ್ವಿತೇ ।
ಸಖ್ಯಂ ಸೂರ್ಯಜ ರಾವಣಾನುಜ ಮರುತ್ಪುತ್ರಾನುಜೈಸ್ಸೇವಿತಂ ।
ಮಧ್ಯೇ ವಾಸವ ನೀಲ ಕೋಮಲನಿಭಂ ರಾಮಂ ಭಜೇ ತಾರಕಂ ॥

ಅಯೋಧ್ಯೆಯಲ್ಲಿ, ಮಣಿಮಯವಾದ ಮಂಟಪದಲ್ಲಿ ಶೋಭಿಸುವ, ಸ್ವರ್ಗದಲ್ಲಿ ಕಲ್ಪವೃಕ್ಷವಿರುವ ಪ್ರದೇಶದಲ್ಲಿ ವಿಶಾಲ ಭವನದಲ್ಲಿ ಅಷ್ಟದಳಪದ್ಮದ ಮೇಲೆ ದೇವತೆಗಳಿಂದ ಕೂಡಿ ಪ್ರಕಾಶಿಸುವ, ಸುಗ್ರೀವ, ವಿಭೀಷಣಾದಿಗಳ ಸಖ್ಯದಿಂದಲೂ, ಆಂಜನೇಯನ ಸೇವೆಯಿಂದಲೂ ರಾಜಿಸುವ, ಇಂದ್ರನೀಲ ಮಣಿಯಂತೆ ಶ್ಯಾಮಲಮೂರ್ತಿಯೂ ಕೋಮಲನೂ ಆದ, ತಾರಕ ಬ್ರಹ್ಮನಾದ ಶ್ರೀರಾಮನನ್ನು ಭಜಿಸುತ್ತೇನೆ.

ಸಾಕೇತೇ ರವಿಕೋಟಿಸನ್ನಿಭ ಮಹಾಹರ್ಮ್ಯೇ ಸುಸಿಂಹಾಸನೇ ।
ನಾನಾರತ್ನ ವಿನಿರ್ಮಿತೇ ಮುನಿಜನಾಕೀರ್ಣೇ ಸದಾನಂದನೇ ।
ದೇವಾಧೀಶ್ವರ ಪಂಕಜೇ ನಿವಸಿತಂ ವಾಮಾಂಕಸೀತೋಜ್ಜ್ವಲಂ ।
ದೇವೇಂದ್ರೋಪಲ ನೀಲಕೋಮಲನಿಭಂ ರಾಮಂ ಭಜೇ ತಾರಕಂ ॥

ಅಯೋಧ್ಯಾ ಪಟ್ಟಣದಲ್ಲಿ ಕೋಟಿ ಸೂರ್ಯರ ಕಾಂತಿಗೆ ಸಮಾನವಾದ ಪ್ರಕಾಶದಿಂದ ಕೂಡಿದ, ಅರಮನೆಯಲ್ಲಿ ನಾನಾ ರತ್ನಗಳಿಂದ ನಿರ್ಮಿತವಾದ ಸಿಂಹಾಸನದಲ್ಲಿ ಆಸೀನನಾಗಿರುವ, ಋಷಿ ಜನಗಳ ಸಮೂಹದಲ್ಲಿ ಸದಾ ಆನಂದಿಸುತ್ತಿರುವ, ಇಂದ್ರಾದಿ ದೇವತೆಗಳ ಹೃತ್ಕಮಲದಲ್ಲಿ ವಾಸಿಸುವ, ಎಡ ಭಾಗದಲ್ಲಿ ಸೀತಾದೇವಿಯಿಂದ ಶೋಭಾಯಮಾನನಾದ ನೀಲಮೇಘಶ್ಯಾಮನಾದ, ರಾಮನನ್ನು ಭಜಿಸುತ್ತೇನೆ.

ಸಾಕೇತೇ ನಗರೇ ಸಮಸ್ತಸುಖದೇ ಹರ್ಮ್ಯೇಂದು ಕೋಟಿದ್ಯುತೇ।
ನಕ್ಷತ್ರಗ್ರಹಪಙ್ಕ್ತಿ ಲಗ್ನ ಶಿಖರೇ ಚಾಂತರ್ಯ ಪಂಕೇರುಹೇ।
ವಾಲ್ಮೀಕಂಚ ಪರಾಶರಾದಿ ಮುನಿಭಿ ಸ್ಸಂಸೇವ್ಯಮಾನಸ್ಥಿತಂ।
ಸೀತಾಲಂಕೃತ ವಾಮಭಾಗಮನಿಶಂ ರಾಮಂ ಭಜೇ ತಾರಕಂ॥

ಅಯೋಧ್ಯಾನಗರದಲ್ಲಿ ಸಮಸ್ತ ಸುಖಗಳಿಗೆ ಆಗರವಾದ, ಕೋಟಿ ಚಂದ್ರರ ಕಾಂತಿಯಿಂದಲೂ, ನಕ್ಷತ್ರ ಮತ್ತು ಗ್ರಹಗಳ ಪಂಙ್ತಿಗೆ ಸೇರಿಹೋಗುವಂತೆ ಎತ್ತರವಾಗಿರುವ ಶಿಖರಗಳಿಂದಲೂ ಕೂಡಿದ ಅರಮನೆಯಲ್ಲಿ, ಪ್ರಾಣಿಗಳ ಹೃದಯ ಕಮಲದಲ್ಲಿ ಶೋಭಿಸುವ ಪರಮಾತ್ಮನಾದ ಶ್ರೀರಾಮಚಂದ್ರನು ಶೋಭಿಸುತ್ತಿರಲು, ವಾಲ್ಮಿಕಿ ಪರಾಶರರೇ ಮುಂತಾದ ಋಷಿಗಳು ಸೇವಿಸುತ್ತಿರಲು, ವಾಮ ಭಾಗದಲ್ಲಿ ಸೀತಾಸಮೇತನಾಗಿ ರಾಜಿಸುವ ಶ್ರೀ ತಾರಕ ರಾಮನನ್ನು ಸರ್ವದಾ ಭಜಿಸುತ್ತೇನೆ.

ಅಯೋಧ್ಯಾಪುರ ಮಂಟಪೇ ಸ್ಫುರಿತ ಸಿಂಹ ಪೀಠೇ ಸ್ಥಿತಂ।
ವಸಿಷ್ಠಮುನಿ ಗೌತಮೈ ಭೃಗು ಶುಕಾದಿ ಸಂಸೇವಿತಂ।
ದಿನೇಶಸುತ ರಾವಣಾನುಜ ಸಹೋದರಾದ್ಯಾವೃತಂ।
ಭಜಾಮಿ ರಘುನಂದನಂ ಪ್ರಣವ ಬೀಜ ಪೀಠಾತ್ಮಕಂ॥

ಅಯೋಧ್ಯಾ ಪಟ್ಟಣದಲ್ಲಿ ಪ್ರಕಾಶಮಾನವಾದ ಮಂಟಪದಲ್ಲಿರುವ ಸಿಂಹಾಸನದಲ್ಲಿ, ವಸಿಷ್ಠ ಗೌತಮ, ಭೃಗು, ಶುಕಾದಿ ಋಷಿಗಳಿಂದ ಸೇವಿತನಾಗಿ, ಸುಗ್ರೀವ, ವಿಭೀಷಣ ಮತ್ತು ತನ್ನ ಸಹೋದರರುಗಳಿಂದ ಕೂಡಿ ಇರುವ, ಓಂಕಾರಕ್ಕೆ ಬೀಜಭೂತನಾಗಿ ಆದಕ್ಕೆ ಆಧಾರನಾಗಿರುವ ಶ್ರೀರಾಮನನ್ನು ಭಜಿಸುತ್ತೇನೆ.

ಸಾಕೇತೇ ನಗರೇ ಸಮಸ್ತ ಮಹಿಮಾಧಾರೇ ಜಗನ್ಮೋಹನಂ।
ರತ್ನಸ್ತಂಭ ಸಹಸ್ರಮಂಟಪ ಮಹಾ ಸಿಂಹಾಸನೇ ಸಾಂಬುಜೇ।
ವಿಶ್ವಾಮಿತ್ರ ವಸಿಷ್ಠ ಗೌತಮ ಶುಕ ವ್ಯಾಸಾದಿಭಿರ್ಮೌನಿಭಿಃ।
ಧ್ಯೇಯಂ ಲಕ್ಷ್ಮಣ ಲೋಕಪಾಲ ಸಹಿತಂ ಸೀತಾಸಮೇತಂ ಭಜೇ॥

ಅಯೋಧ್ಯಾ ಪಟ್ಟಣದಲ್ಲಿ ಸಮಸ್ತ ಮಹಿಮೆಗಳಿಗೂ ಆಧಾರಭೂತನಾಗಿ ಜಗನ್ಮೋಹನಮೂರ್ತಿಯಾಗಿ ಸಹಸ್ರ ರತ್ನಸ್ತಂಭಗಳಿಂದ ಕೂಡಿದ ಮಂಟಪದಲ್ಲಿ ದಿವ್ಯ ಸಿಂಹಾಸನದಲ್ಲಿ ಅಷ್ಟದಳ ಪದ್ಮದಲ್ಲಿ ಆಸೀನನಾಗಿ, ವಿಶ್ವಾಮಿತ್ರ, ವಸಿಷ್ಠ, ಗೌತಮ, ಶುಕ, ವ್ಯಾಸಾದಿ ಮುನಿಗಳಿಂದ ಧ್ಯಾನಿಸಿಕೊಳ್ಳುತ್ತಾ, ಸೀತಾಲಕ್ಷ್ಮಣರಿಂದಲೂ, ಅನೇಕ ಧರಣೀಪಾಲರಿಂದಲೂ ಕೂಡಿ ಪ್ರಕಾಶಿಸುವ ಶ್ರೀರಾಮನನ್ನು ಧ್ಯಾನಿಸುತ್ತೇನೆ.

ಸಾಕೇತೇಽ ಗರು, ಗಂಧ, ಧೂಪ ನಿಬಿಡೇ ಮಾಣಿಕ್ಯ ದೀಪಾನ್ವಿತೇ।
ಕಸ್ತೂರೀ ಘನಸಾರ ಕುಂಕುಮ ರಸ ಪ್ರಾಚುರ್ಯ ಸಾರೋಜ್ಜ್ವಲೇ।
ನಾನಾ ಪುಷ್ಪವಿತಾನ ಪಙ್ಕ್ತಿರುಚಿರೇ ಸೌವರ್ಣ ಸಿಂಹಾಸನೇ।
ವಾಸಂ ಮನ್ಮಥ ಮನ್ಮಥಂ ಮಣಿನಿಭಂ ರಾಮಂ ಭಜೇ ತಾರಕಂ॥

ಅಯೋಧ್ಯಾ ಪಟ್ಟಣದಲ್ಲಿ ಅಗುರು ಚಂದನ ಗಂಧ ಮುಂತಾದ ಪರಿಮಳ ದ್ರವ್ಯಗಳಿಂದ ಕೂಡಿದ ಪ್ರದೇಶದಲ್ಲಿ, ಮಣಿಮಯ ದೀಪಗಳಿಂದಲೂ ಕಸ್ತೂರಿ ಕೇಸರಿ ಮುಂತಾದ ಸುಗಂಧಗಳ ಪರಿಮಳದಿಂದಲೂ, ಅನೇಕ ವಿಧವಾದ ಹೂಗಳ ರಾಶಿಗಳಿಂದಲೂ ಶೋಭಿಸುವ ಚಿನ್ನದ ಸಿಂಹಾಸನದಲ್ಲಿ, ಮನ್ಮಥನಿಗೂ ಮನ್ಮಥನಾಗಿ ಅತಿ ಮನೋಹರನಾಗಿ ಪ್ರಕಾಶಿಸುವ ತಾರಕಬ್ರಹ್ಮನಾದ ಶ್ರೀರಾಮಮೂರ್ತಿಯನ್ನು ಭಜಿಸುತ್ತೇನೆ.

ಶ್ರೀವತ್ಸಂ ವೈಭವಾನಾಂ ಶ್ರಿತಜನ ಸುಪಥಂ ಹಾರ ಕೇಯೂರ ಭಾಂತಂ |
ಹಾಸೋಲ್ಲಾಸಾಭಿರಾಮಂ ಮಣಿಮಯ ಮಕುಟಂ ಮಂಗಳಾನಾಂ ನಿವಾಸಂ |
ಮಂದಾರಾರಾಮ ಸೀಮಾಂತರ ಮಣಿಭವನಾಧಿಷ್ಠಿತಂ ಶಿಷ್ಟಸೇವ್ಯಂ |
ಸಲ್ಲಾಪಾನಂದ ಸಿಂಧುಂ ಪ್ರಣತಭಯಹರಂ ರಾಮಚಂದ್ರಂ ಭಜೇಹಂ ||

ಶ್ರೀವತ್ಸ ಚಿಹ್ನೆಯನ್ನು ಧರಿಸಿ ವೈಭವ ಸಂಪನ್ನನಾಗಿರುವ, ಆಶ್ರಿತ ಜನರಿಗೆ ಸುಲಭನೂ, ಹಾರ ಕೇಯೂರಗಳಿಂದ ಪ್ರಕಾಶಿತನೂ, ಮಂದಹಾಸದಿಂದ ಆಹ್ಲಾದಕರನಾಗಿ ಕಾಣುವವನೂ, ರತ್ನಕಿರೀಟವನ್ನು ಧರಿಸಿರುವವನೂ, ಸರ್ವ ಮಂಗಳಕ್ಕೂ ನಿವಾಸನೂ, ಕಲ್ಪವೃಕ್ಷದಿಂದ ಕೂಡಿದ ಉದ್ಯಾನದಲ್ಲಿ ಮಣಿಖಚಿತ ಮಂದಿರದಲ್ಲಿ ನೆಲಸಿರುವವನೂ, ಶಿಷ್ಟರಿಂದ ಸೇವಿತನೂ, ತನ್ನ ವಿಷಯಕವಾದ ಸಲ್ಲಾಪಗಳನ್ನು ಮಾಡತಕ್ಕವರಿಗೆ (ಅಂದರೆ ತನ್ನನ್ನು ಸ್ತೋತ್ರ ಮಾಡತಕ್ಕವರಿಗೆ) ಅಪಾರ ಆನಂದದಾಯಕನೂ, ಆಶ್ರಿತರ ಭಯನಾಶಕನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ವೈದೇಹ್ಯಾಸಹಗಮ್ಯ ರಾಜ್ಯಮನಿಶಂ ಸೌವರ್ಣ ಸಿಂಹಾಸನೇ |
ಮಂದಾರದ್ರುಮವಾಟಿಕಾಂತರ ಮಹಾ ಶ್ರೀಚಂದ್ರ ಕಾಂತಾಲಯೇ |
ಕೈಕೇಯಿಜನಿವಾಯುಸೂನುವಿನುತಂ ಸೌಮಿತ್ರಿಣಾ ಸೇವಿತಂ |
ಮೇಘಶ್ಯಾಮ ಮುದಾರ ಹಾಸವದನಂ ಶ್ರೀರಾಮಚಂದ್ರಂ ಭಜೇ ||

ಯಾರು ಸೀತಾ ಸಮೇತನಾಗಿ, ಬಹುಕಾಲ ಕಲ್ಪವೃಕ್ಷದ ಅಡಿಯಲ್ಲಿ ಚಂದ್ರಕಾಂತ ಶಿಲೆಯಿಂದ ನಿರ್ಮಿತವಾದ ಮಹಾ ಸೌಧದಲ್ಲಿ ಸುವರ್ಣ ಸಿಂಹಾಸನದಲ್ಲಿ ಮಂಡಿಸಿರುವನೋ, ಯಾರು ಲಕ್ಷ್ಮಣ ಭರತ ಆಂಜನೇಯರಿಂದ ಸೇವಿತನಾಗಿರುವನೋ, ಯಾರು ನೀಲಮೇಘಶ್ಯಾಮನಾಗಿಯೂ, ಹಸನ್ಮುಖಿಯೂ ದಯಾಳುವೂ ಆಗಿರುವನೋ, ಅಂತಹ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ವೈದೇಹ್ಯಾ ಪುಲಕಾಂಕುರಾರ್ಚಿತ ತನುರ್ವ್ಯಾಲಂಬಹಸ್ತಾಂಬುಜಃ |
ಹಸ್ತೇ ಮೋದಿತರತ್ನಕಂಕಣರವಃ ಕಲ್ಪದ್ರುಮಾಣಾಂ ವನೇ |
ಪಾದಾಭ್ಯಾಂ ಮಣಿಪಾದುಕಾದ್ಯುತಿಕರ ಪ್ರೇಂಖನ್ನಖಾಭ್ಯಾಂಚರ |
ನ್ನಿಷ್ಟಾಲಾಪ ಸುಧಾರಸಂ ದಿಶತುಮೇ ಶ್ರೀರಾಮಚಂದ್ರೋ ಹರಿಃ ||

ಸೀತಾದೇವಿಯನ್ನು ತನ್ನ ಹಸ್ತ ಕಮಲದಿಂದ ಸ್ಪರ್ಶಿಸಲು, ಆಕೆಯು ಆನಂದದಿಂದ ರೋಮಾಂಚಿತಳಾಗಲು, ತನ್ನ ಹಸ್ತದ ಕಂಕಣದ ಶಬ್ದದಿಂದ ಆಕೆಯನ್ನು ಸಂತೋಷಪಡಿಸುತ್ತಾ, ನವರತ್ನಗಳಿಂದ ನಿರ್ಮಿತವಾದ ಪಾದುಕೆಗಳಿಗೆ ಕಾಂತಿಯನ್ನು ಕೊಡತಕ್ಕ ಉಗುರುಗಳುಳ್ಳ ಪಾದಗಳಿಂದ, ತಾನು ಸೀತಾಸಮೇತನಾಗಿ ಉಯ್ಯಾಲೆಯಲ್ಲಿ ಕುಳಿತು ಉಯ್ಯಾಲೆಯನ್ನು ತೂಗುತ್ತಲಿರುವ, ಕಲ್ಪವೃಕ್ಷ ಪ್ರದೇಶದಲ್ಲಿ ಇರುವ ಶ್ರೀರಾಮಚಂದ್ರನು, ಒಳ್ಳೆಯ ಮಾತುಗಳೆಂಬ ಅಮೃತ ರಸವನ್ನು ನಮಗೆ ಕೊಡಲಿ.

ವಾಮಾಂಕಸ್ಥಿತ ಜಾನಕೀ ಕುಚಯುಗೇ ವಿನ್ಯಸ್ತಹಸ್ತಾಂಬುಜಂ|
ಉಜ್ಜೃಂಭಾನನ ಪಂಕಜಂ ಪರಿಲಸದ್ವಿಸ್ಪಷ್ಟಬಿಂಬಾಧರಂ |
ಸತ್ತಾರೇಣ ವಿಶಿಷ್ಟಕಂಕಂಕಣರವೇ ಓಂಕಾರ ಶಬ್ದಾಶ್ರಯೇ |
ಭಾಂತಂ ಶಾರದ ಚಂದ್ರಹಾಸಮನಿಶಂ ವಂದೇ ಸದಾ ರಾಘವಂ ||

ತನ್ನ ಎಡದ ತೊಡೆಯಮೇಲೆ ಕುಳಿತಿರುವ ಸೀತೆಯ ವಕ್ಷಸ್ಥಳದಲ್ಲಿ ತನ್ನ ಕಮಲ ಹಸ್ತವು ಶೋಭಿಸುತ್ತಿರಲು, ಎದ್ದು ಕಾಣುತ್ತಿರುವ ತೇಜಃಪುಂಜವಾದ ಮುಖಕಮಲದಿಂದಲೂ, ಚೆನ್ನಾಗಿ ಸ್ಪಷ್ಟವಾಗಿ ಕಾಣುತ್ತಿರುವ ಮಧುರ ವಾದ ತುಟಿಗಳಿಂದಲೂ ಶೋಭಿಸುತ್ತಾ ಇರುವವನಾದ, ತಾನು ಧರಿಸಿರುವ ಕಂಕಣಗಳು ತನ್ನ ಕರಗಳು ಚಲಿಸುವಾಗ ಮಾಧುರ್ಯಪೂರಿತ ಉಚ್ಚಧ್ವನಿಯನ್ನು ಬೀರಿ ಆ ಧ್ವನಿಯು ಹೃದಯಕಮಲದಲ್ಲಿ ಕೇಳಿಬರುವ "ಓಂ" ಕಾರ ಶಬ್ದ ವನ್ನು ಹೋಲುತ್ತಾ ಶ್ರೀರಾಮಚಂದ್ರನ ಕರಚಲನಗಳಲ್ಲಿ ಆಶ್ರಯ ಪಡೆದಿರುವುದನ್ನು ನೋಡಿದರೆ, "ಓಂ" ಕಾರಕ್ಕೆ ಆಶ್ರಯನಾದ ಪರಬ್ರಹ್ಮನೇ ಇಲ್ಲಿ ಕಂಕಣರವವೆಂಬ "ಓಂ" ಕಾರ ಶಬ್ದಕ್ಕೆ ಆಶ್ರಯನಾಗಿರುವನೆಂದು ಕಂಡು ಬರುತ್ತಿತ್ತು. ಇಂತಹ ಕಂಕಣಧಾರಿಯಾದ, ಶರತ್ಕಾಲದ ಚಂದ್ರನಂತೆ ತೇಜಸ್ಸಿನಿಂದ ಪ್ರಕಾಶಿಸುವ ರಾಘವ ನನ್ನು ಸರ್ವದಾ ವಂದಿಸುತ್ತೇನೆ.

ಸಾಕೇತಸ್ಯ ನಿಕೇತನೇ ಸುರತರೋರ್ಮೂಲೇ ಲಸದ್ವೇದಿಕೇ |
ಮುದ್ರಾಂ ಜ್ಞಾನಮಯೀಂ ದಧಾನಮಪರಂ ಹಸ್ತಾಂಬುಜಂ ಜಾನುನಿ ।
ಸೀತಾಂ ಪಾರ್ಶ್ವಗತಾ ಸರೋರುಹಕರಾಂ ವಿದ್ಯುನ್ನಿಭಾಂ ರಾಘವಂ |
ಪಶ್ಯಂತಂ ಪರಿಪೂರ್ಣ ಚಂದ್ರವದನಂ ಭಾಸ್ವತ್ಕಿರೀಟಂ ಭಜೇ ||

ಅಯೋಧ್ಯೆಯಲ್ಲಿ ಕಲ್ಪವೃಕ್ಷದಂತಿರುವ ಶ್ವೇತಚ್ಛತ್ರದ ಅಡಿಯಲ್ಲಿ ದಿವ್ಯ ವೇದಿಕೆಯಲ್ಲಿ ಬಲ ಹಸ್ತದಲ್ಲಿ ಚಿನ್ಮುದ್ರೆಯನ್ನು ಧರಿಸಿ, ಮೊಣಕಾಲಿನಮೇಲೆ ಎಡಹಸ್ತವನ್ನು ಇಟ್ಟುಕೊಂಡು ಆ ವೇದಿಕೆಯಲ್ಲಿ ಆಸೀನ ನಾಗಿರುವ ಶ್ರೀರಾಮನು ತನ್ನ ಪಕ್ಕದಲ್ಲಿ ಕುಳಿತಿರುವ ಹಸ್ತದಲ್ಲಿ ಕಮಲವನ್ನು ಹಿಡಿದುಕೊಂಡು ವಿದ್ಯುತ್ಕಾಂತಿಯಿಂದ ಪ್ರಕಾಶಿಸುವ ಸೀತೆಯನ್ನು ನೋಡುತ್ತಿರಲು, ಅಂತಹ ಪೂರ್ಣ ಚಂದ್ರಮುಖನೂ, ಕಿರೀಟಾದಿಗಳಿಂದ ಶೋಭಿತನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಸಾಕೇತೇ ಶರದಿಂದು ಕುಂದಧವಳೇ ಸೌಧೇ ಮಹಾಮಂಟಪೇ ।
ಪರ್ಯಾಪ್ತಾಗರು ಧೂಪ ಧೂಮ ಪಟಲೇ ಕರ್ಪೂರ ದೀಪೋಜ್ಜ್ವಲೇ |
ಸುಗ್ರೀವಾಂಗದ ವಾಯುಪುತ್ರ ಸಹಿತಂ ಸೌಮಿತ್ರಿಣಾ ಸೇವಿತಂ ।
ಲೀಲಾಮಾನುಷ ವಿಗ್ರಹಂ ರಘುಪತಿಂ ರಾಮಂ ಭಜೇ ಶ್ಯಾಮಲಂ ||

ಅಯೋಧ್ಯೆಯಲ್ಲಿ ಶರತ್ಕಾಲದ ಶುಭ್ರಗಗನದಲ್ಲಿ ರಾಜಿಸುವ ಚಂದ್ರನಂತೆಯೂ, ಮಲ್ಲೆಯ ಹೂವಿನಂತೆಯೂ ಬಿಳುಪಾಗಿ ಪ್ರಕಾಶಯುಕ್ತವಾದ ಅರಮನೆಯಲ್ಲಿನ ದೊಡ್ಡ ಮಂಟಪದಲ್ಲಿ, ಅಗರು, ಚಂದನ, ಧೂಪಗಳ ಹೊಗೆಯ ಹರಡುವಿಕೆಯಿಂದಲೂ, ಕರ್ಪೂರ, ದೀಪಗಳಿಂದಲೂ ಕೂಡಿ, ಸುಗ್ರೀವ, ಅಂಗದ, ಆಂಜನೇಯ ಸಹಿತನಾಗಿ, ಲಕ್ಷ್ಮಣನಿಂದ ಸೇವಿಸಿಕೊಳ್ಳುತ್ತಿರುವ, ಲೀಲೆಯಿಂದ ಮನುಷ್ಯಾಕೃತಿಯಲ್ಲಿ ಶೋಭಿಸುವ, ಶ್ಯಾಮಲನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಸಾಕೇತೇ ಸೌಧಬದ್ಧಧ್ವಜ ಶತಮಹಿತೇ ರಾಜಮಾರ್ಗೇ ವಿಶಾಲೇ |
ಘಂಟಾರಾವೈರುಪೇತೇ ಕನಕ ಕುಥಯುತೇ ಗಂಧನಾಗೇ ವಸಂತಂ |
ನಾನಾಕಲ್ಪೋಜ್ವಲಾಂಗಂ ರಥಗಜತುರಗೈರಾವೃತಂ ಸುಪ್ರಸನ್ನಂ |
ರಾಮಂ ಶ್ವೇತಾತಪತ್ರಾವೃತ ಮುಖಕಮಲಂ ಚಿತಯಾಮ್ಯಂತರಂಗೇ ||

ಅಯೋಧ್ಯೆಯ ರಾಜಬೀದಿಯಲ್ಲಿ, ಎತ್ತಿ ಕಟ್ಟಲ್ಪಟ್ಟ ನೂರಾರು ಧ್ವಜಗಳಿಂದ ಕೂಡಿದ ಪ್ರಾಸಾದಗಳಲ್ಲಿ ಘಂಟಾನಾದಗಳು ಕೇಳಿಬರುತ್ತಿರಲು, ರತ್ನಗಂಬಳಿಗಳನ್ನು ಹೊದಿಸಿದ ಮದಗಜದ ಮೇಲೆ ಕುಳಿತುಕೊಂಡು, ನಾನಾ ಅಲಂಕಾರಗಳಿಂದ ತೇಜಃಪುಂಜನಾಗಿ, ರಥ, ಆನೆ, ಕುದುರೆಗಳಿಂದ ಕೂಡಿ, ಪ್ರಸನ್ನವದನನಾಗಿ, ತನ್ನ ಮುಖಕಮಲಕ್ಕೆ ಬಿಸಿಲು ಬೀಳದಂತೆ ಹಿಡಿದಿರುವ ಶ್ವೇತಛತ್ರಿಯಿಂದ ಕೂಡಿ, ವಿಹಾರಾರ್ಥವಾಗಿ ಹೊರಟಿರುವ ಶ್ರೀರಾಮಚಂದ್ರಮೂರ್ತಿಯನ್ನು ನನ್ನ ಮನಸ್ಸಿನಲ್ಲಿ ಚಿಂತಿಸುತ್ತೇನೆ.

ಸಾಕೇತೇ ಮಣಿಕೋಟಿಭಿಸ್ಸುಖಚಿತೇ ದಿವ್ಯಾಂಬರಾಲಂಕೃತೇ |
ಹೇಮಸ್ತಂಭ ಸಹಸ್ರ ಕೋಟಿ ಘಟಿತೇ ತಾರಾಪಥಾತ್ಯುನ್ನತೇ |
ರಮ್ಯ ಸ್ವರ್ಣಮಯೇ ವಿಚಿತ್ರ ಭವನೇ ದಿವ್ಯಾಸನಸ್ಥಂ ಮುದಾ |
ರಾಮಂ ಸ್ಮೇರಮುಖಾಂಬುಜಂ ರಘುಪತಿಂ ಸೀತಾಸಮೇತಂ ಭಜೇ ||

ಅಯೋಧ್ಯೆಯಲ್ಲಿ ಕೋಟಿ ರತ್ನಗಳಿಂದ ನಿರ್ಮಿತವಾದ, ಶ್ರೇಷ್ಠ ವಸ್ತ್ರಗಳಿಂದ ಅಲಂಕೃತವಾದ ಚಿನ್ನದ ಸಹಸ್ರ ಕಂಬಗಳಿಂದ ಕೂಡಿದ, ಆಕಾಶವನ್ನು ಮುಟ್ಟುವಂತೆ ಎತ್ತರವಾಗಿರುವ ಮನೋಹರವಾದ ಸುವರ್ಣ ನಿರ್ಮಿತವಾದ ಮಂದಿರದಲ್ಲಿ ದಿವ್ಯ ಪೀಠದಲ್ಲಿ, ಮೋದದಿಂದ ಕುಳಿತಿರುವ, ಮನೋಹರವಾದ ಮುಖವುಳ್ಳ ರಘುಪತಿಯು ಸೀತಾಸಮೇತನಾಗಿರಲು ಅಂತಹ ಶ್ರೀರಾಮನನ್ನು ಭಜಿಸುತ್ತೇನೆ.

ಸಾಕೇತೇ ಮಣಿತೋರಣಾಂಚಿತ ಲಸದ್ವೀಥೀಶತಪ್ರಾಂಗಣೇ |
ಸಾನಂದಂ ಭರತಾದಿಭಿಸ್ಸಹಚರೈರತ್ಯಂತ ಮೋದಾನ್ವಿತೈಃ |
ಕ್ರೀಡಂತಂ ಮಣಿಕಂತುಕೈಃ ಕರಗತೈರನ್ಯೋನ್ಯಮತ್ಯುಜ್ಜ್ವಲೈಃ |
ಪೌರಸ್ತ್ರೀ ನಯನೋತ್ಸವೈಃ ಪ್ರತಿದಿನಂ ಪೂಜ್ಯಂ ಭಜೇ ರಾಘವಂ ||

ಅಯೋಧ್ಯೆಯಲ್ಲಿ ತೋರಣಗಳಿಂದ ಅಲಂಕೃತವಾದ ನೂರಾರು ಬೀದಿಗಳಲ್ಲಿ ಭರತಾದಿ ಸಹೋದರರೊಡನೆ ಹರ್ಷದಿಂದ ರತ್ನದ ಚೆಂಡನ್ನು ಕೈಯ್ಯಲ್ಲಿ ಹಿಡಿದುಕೊಂಡು ಪ್ರತಿದಿನವೂ ಆಡುತ್ತಾ ಪುರಸ್ತ್ರೀಯರಿಗೆ ನಯನ ಮೋಹನವಾಗಿ ಕಾಣುತ್ತಿರುವ ಬಾಲರಾಮನಾದ ರಾಘವನನ್ನು ಭಜಿಸುತ್ತೇನೆ.

ಸಾಕೇತೇ ಕನಕಾದ್ರಿ ಶೃಂಗಘಟಿತೇ ಕಲ್ಪದ್ರುಮೈರಾವೃತೇ |
ವೈಡೂರ್ಯಾದಿ ಮಣೀಂದ್ರ ಕಾಂತಿಘಟಿತೇ ದೇವೇಂದ್ರ ನೀಲೋಜ್ಜ್ವಲೇ |
ಕುರ್ವಂತಂ ಮಣಿನಾಯಕಂ ಮಣಿಗೃಹೇ ಮಾಣಿಕ್ಯ ಪೀಠೇ ಭಜೇ |
ಪುತ್ರೌ ಮನ್ಮಥಸುಂದರೌ ಕುಶಲವೌ ಸಂಸೇವ್ಯ ಪಾದಾವಿಮೌ ||

ಅಯೋಧ್ಯೆಯಲ್ಲಿ ಕಲ್ಪವೃಕ್ಷಗಳಿಂದ ಸುತ್ತುವರಿಯಲ್ಪಟ್ಟ ಮೇರುಪರ್ವತದ ಶಿಖರದಂತೆ ಎತ್ತರವಾದ ಕಳಶಗಳಿಂದಕೂಡಿ ಚಂದ್ರಕಾಂತ ಶಿಲೆಯಿಂದ ನಿರ್ಮಿತವಾದ ವಜ್ರವೈಡೂರ್ಯಾದಿಗಳನ್ನು ಮತ್ತು ಇಂದ್ರನೀಲ ಮಣಿಗಳನ್ನು ಒಳಗೊಂಡು ಶೋಭಿಸುವ ಮಣಿಗೃಹದಲ್ಲಿ, ರತ್ನಪೀಠದಲ್ಲಿ ಕುಳಿತು, ಮನ್ಮಥರಂತೆ ಅತಿ ಸುಂದರರಾದ, ಶ್ರೇಷ್ಠವಾದ ರತ್ನಗಳಂತಿರುವ ತನ್ನ ಪುತ್ರರಾದ ಲವ, ಕುಶರಿಂದ ಪಾದಸೇವೆ ಮಾಡಿಸಿಕೊಳ್ಳುತ್ತಿರುವ, ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಸರಯೂ ತೀರವನೇ ಲತಾನಿವಸನೇ ಸದ್ರತ್ನವೇದೀತಟೀ ।
ಸುಮಪರ್ಯಂಕತಲೇ ವಿದೇಹತನಯಾ ಸಾರ್ಧಂ ಪರಿಕ್ರೀಡಿತಾ ।
ಕಸ್ತೂರೀ ಘನಸಾರ ಚಂದನ ಮಿಳದ್ಗಂಧೋಲ್ಲಸತ್ಪಾವನೀ ।
ಪಾಯಾದ್ಭೂರಿರನಾಮಯೀ ರಘುಪತೇರ್ಭದ್ರಾತ್ಮಿಕಾನೋನಿಶಂ ॥

ಸರಯೂ ನದೀ ತೀರದ ವನದಲ್ಲಿ, ಬಳ್ಳಿಗಳಿಂದ ನಿರ್ಮಿತವಾದ ಗೃಹದಲ್ಲಿ, ರತ್ನ ನಿರ್ಮಿತವಾದ ವೇದಿಕೆಯಲ್ಲಿ, ಹೂವಿನ ಹಾಸಿಗೆಯಮೇಲೆ, ಸೀತಾಸಮೇತನಾಗಿ ಕ್ರೀಡಿಸುತ್ತ, ಕಸ್ತೂರಿ, ಅಗರು, ಚಂದನಗಳಿಂದ ಕೂಡಿದ ಶ್ರೇಷ್ಠವಾದ ಮತ್ತು ಪರಿಶುದ್ಧವಾದ, ಗಂಧ ಲೇಪನದಿಂದ ಶೋಭಿಸುವ, ನಾಮರೂಪಗಳಿಗೆ ದೂರನೂ ಪರಬ್ರಹ್ಮನೂ ರಘುಶ್ರೇಷ್ಠನೂ ಮಂಗಳಮೂರ್ತಿಯೂ ಆದ ಶ್ರೀರಾಮಚಂದ್ರನು ನಮ್ಮನ್ನು ಯಾವಾಗಲೂ ಚೆನ್ನಾಗಿ ಕಾಪಾಡಲಿ.

ವಿಶ್ವರೂಪಿ ರಾಮ ಸ್ತೋತ್ರ

ಮಂದಾರಮೂಲೇ ಮಣಿಪೀಠಸಂಸ್ಥಂ ।
ಸುಧಾಪ್ಲುತಂ ದಿವ್ಯ ವಿರಾಟ್ಸ್ವರೂಪಂ ।
ಸ ಬಿಂದುನಾದಾಂತ ಕಳಾಂತತುರ್ಯ ।
ಮೂರ್ತಿಂ ಭಜೇಹಂ ರಘುವಂಶರತ್ನಂ ॥

ಕಲ್ಪವೃಕ್ಷದಂತಿರುವ ಶ್ವೇತಚ್ಛತ್ರದ ಅಡಿಯಲ್ಲಿ, ಮಣಿ ಪೀಠದಲ್ಲಿ ಕುಳಿತಿರುವ, ಅಮೃತಸ್ವರೂಪನಾದ, ದಿವ್ಯ ವಿರಾಡ್ರೂಪ ಧಾರಿಯಾದ, ನಾದಬಿಂದು ಕಳಾತೀತನಾದ, ರಘುವಂಶಕ್ಕೆ ರತ್ನಪ್ರಾಯನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಶತಾಷ್ಟ ದೀಪ್ಯಸ್ಥಲ ಮೂರ್ತಿವಂದಿತಂ ।
ಶತಕ್ರತು ಬ್ರಹ್ಮ ಮರುದ್ಗಣಾರ್ಚಿತಂ ।
ಶಶಾಂಕ ವೈಶ್ವಾನರ ಭಾನುಮಂಡಲಂ ।
ಸ್ಥಿತಂ ಭಜೇಹಂ ರಘುವಂಶ ವರ್ಧನಂ ॥

ಎಂಟುನೂರು ತೇಜಃಪುಂಜಸ್ಥಳಗಳಲ್ಲಿ ಆವಿರ್ಭವಿಸಿ, ಅಲ್ಲಿ ಪೂಜಿಸಲ್ಪಡತಕ್ಕವನಾದ, ಇಂದ್ರ, ಬ್ರಹ್ಮ ಮರುದ್ಗಣಗಳಿಂದ ಸೇವಿತನಾದ, ಚಂದ್ರ, ಅಗ್ನಿ, ಭಾನುಗಳಲ್ಲಿ ತನ್ನ ತೇಜಸ್ಸಿನಿಂದ ಬೆಳಗುವವನಾದ, ರಘುವಂಶದ ಕೀರ್ತಿಸ್ತಂಭನಾದ, ರಾಮನನ್ನು ನಾನು ಭಜಿಸುತ್ತೇನೆ.

ಬಾಹೂರು ಪಾದೋದರ ವಕ್ತ್ರ ಲೋಚನಂ ।
ದೀಪ್ತ ಪ್ರಚಂಡಾನಲ ದುರ್ನಿರೀಕ್ಷ್ಯಂ ।
ಅಶೇಷ ಬೃಂದಾರಕ ನಾಗಗೋಚರಂ ।
ಭಜಾಮಿ ತೇ ರಾಘವ ವಿಶ್ವರೂಪಂ ॥

ನೋಡಲು ಅಸಾಧ್ಯವಾದ ಮತ್ತು ಪ್ರಚಂಡ ಪ್ರಳಯಾಗ್ನಿಯ ಕಾಂತಿಯಂತೆ ಝಗ ಝಗಿಸುವ, ತೋಳುಗಳು, ಎದೆ, ಪಾದಗಳು, ಹೊಟ್ಟೆ, ಮುಖ, ಕಣ್ಣುಗಳುಳ್ಳವನಾಗಿ, ಸಮಸ್ತ ದೇವತೆಗಳಿಗೂ ನಾಗರಿಗೂ ಗೋಚರನಾದ ವಿರಾಡ್ರೂಪಿಯಾದ ಶ್ರೀರಾಮನೇ, ನಿನ್ನನ್ನು ಭಜಿಸುತ್ತೇನೆ.

ಸಹಸ್ರ ನೇತ್ರಾನನ ಪಾದಬಾಹು |
ಮನಂತ ವೀರ್ಯಂ ರವಿ ಕೋಟಿತುಲ್ಯಂ |
ಸ್ರಕ್ಚಂದನಾಲಂಕೃತ ದಿವ್ಯ ದೇಹಂ |
ಭಜಾಮ್ಯಹಂ ತೇ ಹರಿ ವಿಶ್ವರೂಪಂ ||

ಅನೇಕ ನೇತ್ರಗಳಿಂದ ಕೂಡಿದ ಮುಖಗಳು, ಅನೇಕ ಬಾಹುಗಳು ಮತ್ತು ಪಾದಗಳು, ಅಪರಿಮಿತ ಪರಾಕ್ರಮ ಕೋಟಿ ಸೂರ್ಯಸದೃಶ ತೇಜಸ್ಸು, ಗಂಧ ಪುಷ್ಪಗಳಿಂದ ಅಲಂಕೃತವಾದ ದಿವ್ಯ ದೇಹ ಇವುಗಳಿಂದ ಕೂಡಿದ, ವಿಷ್ಣುರೂಪಿಯಾದ, ವಿರಾಡ್ರೂಪಧಾರಿಯಾದ ಶ್ರೀರಾಮನೇ, ನಿನ್ನನ್ನು ಭಜಿಸುತ್ತೇನೆ.

ಕಿರೀಟ ಕೋದಂಡ ಗದಾಬ್ಜ ಸಂಯುತಂ |
ದಂಷ್ಟ್ರಾ ಕರಾಲಾಂಕ ಧನಂಜಯಾದಿಕಂ |
ಪೀತಾಂಶುಕ ಸ್ವರ್ಣ ಕಪೋಲ ಕುಂಡಲಂ |
ಭಜಾಮಿ ತೇ ರಾಘವ ವಿಶ್ವರೂಪಂ ||

ಶಂಖ, ಚಂಕ್ರ, ಕೋದಂಡ, ಗಧಾಧಾರಿಯಾಗಿ, ಕಿರೀಟದಿಂದ ಕೂಡಿ, ಕರಾಳವಾದ ಕೋರೆ ದಾಡೆಗಳಲ್ಲಿ ಅಗ್ನಿಯೇ ಮುಂತಾದ ಎಲ್ಲಾ ದೇವತೆಗಳನ್ನೂ ಹೊಂದಿ, ಪೀತಾಂಬರಧಾರಿಯಾಗಿ, ಕಪೋಲಗಳಲ್ಲಿ ಶೋಭಿಸುವ ಕುಂಡಲಗಳಿಂದ ಕೂಡಿ, ವಿಶ್ವರೂಪಧರನಾಗಿ ಶೋಭಿಸಿದ ಶ್ರೀರಾಮ ! ನಿನ್ನನ್ನು ಭಜಿಸುತ್ತೇನೆ.

ಯದ್ರೂಪಮಾನಂದಕರಂ ಮುನೀನಾಂ |
ಯದ್ಬಾಣಮಾಖಂಡಲ ಶತ್ರುನಾಶನಂ |
ಯದ್ದೈವತಂ ಸರ್ವಜನಾಂತರಸ್ಥಂ |
ತತ್ಸರ್ವರೂಪಂ ರಘುನಾಥಮೀಳೇ ||

ಯಾವ ಪರಮಾತ್ಮನ ರೂಪವನ್ನು ನೋಡಿ ಮುನಿಗಳು ಆನಂದಸಾಗರದಲ್ಲಿ ಮಗ್ನರಾಗುವರೋ, ಯಾರ ಬಾಣವು ಇಂದ್ರನ ಶತ್ರುಗಳನ್ನು ಅಂದರೆ ರಾಕ್ಷಸರನ್ನು ನಾಶಪಡಿಸುವುದೋ, ಯಾವ ಪರಮಾತ್ಮನು ಸರ್ವ ಪ್ರಾಣಿಗಳ ಹೃದಯಕಮಲದಲ್ಲಿ ನೆಲಸಿರುವನೋ, ಅಂತಹ ಪರಬ್ರಹ್ಮ ಸ್ವರೂಪವಾದ ಶ್ರೀರಾಮಮೂರ್ತಿಯನ್ನು ಭಜಿಸುತ್ತೇನೆ.

ವಿಷ್ಣುರೂಪಿ ರಾಮ ಸ್ತೋತ್ರ

ವಿಹಾಯ ಕೋದಂಡಮಿಮಂ ಮುಹೂರ್ತಂ |
ಗೃಹಾಣಪಾಣೌ ಮಣಿ ಚಾರುವೇಣುಂ |
ಮಯೂರ ಬರ್ಹಂಚ ನಿಜೋತ್ತಮಾಂಗೇ |
ಸೀತಾಪತೇ ರಾಘವ ರಾಮಚಂದ್ರ ||

ಸೀತಾಪತೇ, ಶ್ರೀರಾಮಚಂದ್ರಾ, ಒಂದು ಮುಹೂರ್ತ ಕಾಲ ನೀನು ನಿನ್ನ ಕೋದಂಡವನ್ನು ಉಳಿದು, ಮನೋಹರವಾದ ವೇಣುವನ್ನು ಕೈಯ್ಯಲ್ಲಿ ಧರಿಸಿ, ನಿನ್ನ ಶಿರಸ್ಸಿನಲ್ಲಿ ನವಿಲುಗರಿ ಕಿರೀಟವನ್ನು ಧರಿಸಿಕೊಂಡು, ನಿನ್ನ ಕೃಷ್ಣರೂಪದ ದರ್ಶನವನ್ನು ನನಗೆ ಮಾಡಿಸು.

ವರಾಭಯಂ ದಿವ್ಯರಥಾಂಗ ಶಂಖಂ |
ಸ ಕೌಸ್ತುಭಂ ವೇಷ್ಟಿತ ಪೀತವಸ್ತ್ರಂ |
ಕಿರೀಟ ಹಾರಾಂಗದ ಕುಂಡಲಾಂಗಂ |
ಶ್ರೀವತ್ಸ ಚಿಹ್ನಂ ಶಿರಸಾ ನಮಾಮಿ ||

ಅಭಯ, ವರದ ಹಸ್ತಗಳಿಂದ ಕೂಡಿದ, ದಿವ್ಯ ಶಂಖ ಚಕ್ರಗಳಿಂದಲೂ, ಕೌಸ್ತುಭಮಣಿಯಿಂದಲೂ, ಪೀತಾಂಬರ, ಕಿರೀಟ, ಹಾರ, ಕುಂಡಲ, ಅಂಗದ ಮುಂತಾದ ಭೂಷಣಗಳಿಂದಲೂ, ಶ್ರೀವತ್ಸವೆಂಬ ಚಿಹ್ನೆಯಿಂದಲೂ ಶೋಭಿಸುವ ಶ್ರೀರಾಮಚಂದ್ರನನ್ನು ತಲೆಬಾಗಿ ನಮಸ್ಕರಿಸುತ್ತೇನೆ.

ವಿರಾಜಮಾನೋಜ್ಜ್ವಲ ಪೀತವಾಸಂ |
ವಿಶಾಲವಕ್ಷಸ್ಥಲ ಕೌಸ್ತುಭಶ್ರಿಯಂ |
ಭಜೇ ಕಿರೀಟಾಂಗದ ರತ್ನಕುಂಡಲಂ |
ನಮಸ್ತುಲಸ್ಯಾಮಲ ಮಾಲಯಾಂಕಿತಂ ||

ಪ್ರಕಾಶಮಾನವಾದ ಪೀತಾಂಬರದಿಂದಲೂ, ವಿಶಾಲವಾದ ಎದೆಯಿಂದಲೂ, ಕೌಸ್ತುಭಮಣಿಯ ಕಾಂತಿಯಿಂದಲೂ, ಕಿರೀಟ ರತ್ನಕುಂಡಲಗಳಿಂದಲೂ, ಶ್ರೇಷ್ಠವಾದ ತುಳಸೀ ಮಾಲೆಯಿಂದಲೂ ಶೋಭಿಸುವ ಶ್ರೀರಾಮನಿಗೆ ನಮಸ್ಕಾರವು.

ಸುಧಾ ಸಮುದ್ರಾಂತ ವಿರಾಜಮಾನ |
ಸ್ಥಲೇ ಸಿತೇ ಚಂದನ ಪಾರಿಜಾತೇ |
ಮಹಾಸನೇ ಪನ್ನಗ ತಲ್ಪ ಮಧ್ಯೇ |
ನಿಷಣ್ಣಮೀಳೇ ರಘುವಂಶ ರತ್ನಂ ||

ಕ್ಷೀರಸಮುದ್ರದಲ್ಲಿ, ಶ್ವೇತದ್ವೀಪದಲ್ಲಿ, ಶ್ರೀಗಂಧದ ಸೌರಭ್ಯದಿಂದಲೂ ಪಾರಿಜಾತ ಪುಷ್ಪಗಳಿಂದಲೂ ಅಲಂಕೃತವಾದ ಮಹಾಸನದಲ್ಲಿ, ಆದಿಶೇಷನ ಪರ್ಯಂಕದಲ್ಲಿ ಮೆರೆಯುವ, ರಘುವಂಶಕ್ಕೆ ರತ್ನಪ್ರಾಯನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಸುಧಾಬ್ಜ ಸಿತದ್ವೀಪ ಮಧ್ಯೇ ವಿಮಾನೇ |
ಸುಪರ್ವಾಣಿವೃಕ್ಷೋಜ್ಜ್ವಲೇ ಶೇಷತಲ್ಪೇ |
ನಿಷಣ್ಣಂ ರಮಾಂಕಂ ನಿಷೇವೇ ನಿಷೇವೇ |
ನ್ಯದೈವಂ ನಸೇವೇ ನಸೇವೇ ನಸೇವೇ ||

ಕ್ಷೀರಸಾಗರದಲ್ಲಿ, ಶ್ವೇತದ್ವೀಪದಲ್ಲಿ, ಕಲ್ಪವೃಕ್ಷದಂತಿರುವ ಶ್ವೇತಚ್ಛತ್ರದ ಅಡಿಯಲ್ಲಿ, ಉಜ್ಜ್ವಲವಾದ ಆದಿಶೇಷನ ಪರ್ಯಂಕದಲ್ಲಿ, ಲಕ್ಷ್ಮೀದೇವಿ ಸಹಿತನಾಗಿ ಪ್ರಕಾಶಿಸುವ, ವಿಷ್ಣುರೂಪಿಯಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ. ಇತರ ಯಾವ ದೈವವನ್ನೂ ನಾನು ಭಜಿಸುವುದಿಲ್ಲ.

ಕರೇ ದಿವ್ಯಚಕ್ರಂ ಪರೇ ಚಾರುಶಂಖಂ ।
ಗಳೇ ತಾರಹಾರಂ ಲಲಾಟೇ ಲಲಾಮಂ ।
ಭುಜಂಗೇ ನಿಷಣ್ಣಂ ಪರಾನಂದರೂಪಂ ।
ಸದಾ ಭೂಮಿಜಾಯುಕ್ತಮೀಳೇ ಹೃದಂತೇ॥

ಒಂದು ಕೈಯ್ಯಲ್ಲಿ ದಿವ್ಯವಾದ ಚಕ್ರವನ್ನೂ, ಇನ್ನೊಂದು ಕೈಯ್ಯಲ್ಲಿ ಮನೋಹರವಾದ ಶಂಖವನ್ನೂ ಧರಿಸಿ, ಕತ್ತಿನಲ್ಲಿ ನಕ್ಷತ್ರ ಮಾಲಿಕೆಯನ್ನು ಹಾಕಿಕೊಂಡು,ಹಣೆಯಲ್ಲಿ ತಿಲಕವನ್ನು ಧರಿಸಿ,ಶೇಷಶಾಯಿಯಾಗಿ,ಸೀತಾಸಮೇತ ನಾಗ್ಗಿಮೆರೆಯುವ, ಪರಮ ಆನಂದರೂಪಿಯಾದ ಶ್ರೀರಾಮಮೂರ್ತಿಯನ್ನು ಮನಸ್ಸಿನಲ್ಲಿ ಸದಾ ಧ್ಯಾನಮಾಡುತ್ತೇನೆ.

ಚತುರ್ವೇದ ಶೃಂಗೋಲ್ಲ ಸತ್ಕಾರಣಾಖ್ಯಂ ।
ಸ್ಫುರದ್ದಿವ್ಯ ವೈಮಾನಿಕೇ ಭೋಗಿತಲ್ಪೇ ।
ಪರಂಧಾಮ ಮೂರ್ತಿಂ ನಿಷಣ್ಣಂ ನಿಷೇವೇ ।
ನ್ಯದೈವಂ ನಸೇವೇ ನಸೇವೇ ನಸೇವೇ ॥

ಚತುರ್ವೇದಗಳ ಶಿರವಾದ ವೇದಾಂತಗಳ ಪ್ರಸಿದ್ಧಿಗೂ ಮೂಲಕಾರಣನಾದ, ದೇದೀಪ್ಯಮಾನನಾದ, ದಿವ್ಯ ವಿಮಾನಾರೂಢನಾದ, ಶೇಷಶಾಯಿಯಾದ, ವೈಕುಂಠಪತಿಯಾದ ಶ್ರೀರಾಮಮೂರ್ತಿಯನ್ನು ಸೇವಿಸುತ್ತೇನೆ. ಬೇರೆ ದೈವವನ್ನು ಸೇವಿಸುವುದಿಲ್ಲ. ಖಂಡಿತಾ ಸೇವಿಸುವುದಿಲ್ಲ.

ಭಂಗೋತ್ತುಂಗ ಮಯಾಮೃತಾಬ್ಧಿ ಲಹರೀ ಮಧ್ಯೇ ವಿರಾಡ್ವಿಗ್ರಹೇ ।
ದ್ವೀಪೇ ನಿರ್ಜರ ಪಾದಪೈಃ ಪರಿವೃತೇ ಕರ್ಪೂರ ದೀಪೋಜ್ಜ್ವಲೇ ।
ಓಂಕಾರಾಂತರ ಮಂದಿರೇ ಮಣಿಮಯೇ ಶೇಷಾಂತರಶ್ಶಾಯಿನಂ ।
ಲಕ್ಷ್ಮೀಯುಕ್ತಮಖಂಡ ಚಿತ್ಸುಖಪದಂ ರಾಮಂ ಭಜೇ ತಾರಕಂ ॥

ಉನ್ನತವಾದ ಅಲೆಗಳಿಂದ ಶೋಭಿಸುವ ಕ್ಷೀರಸಮುದ್ರದಲ್ಲಿ, ವಿಶ್ವರೂಪಿಯಾದ ಪರಮಾತ್ಮನು, ಅಲ್ಲಿನ ಶ್ವೇತದ್ವೀಪದಲ್ಲಿ, ಕಲ್ಪವೃಕ್ಷದಂತಿರುವ ಶ್ವೇತಚ್ಛತ್ರದ ಆಶ್ರಯದಲ್ಲಿ, ಕರ್ಪೂರ ದೀಪದ ಕಾಂತಿಯಿಂದ ಶೋಭಿಸುವ ಪ್ರಣವಮಯ ಮಂದಿರದಲ್ಲಿ, ಶೇಷಶಾಯಿಯಾಗಿ ಲಕ್ಷ್ಮೀಸಮೇತನಾಗಿ ಅಖಂಡ ಸಚ್ಚಿದಾನಂದ ರೂಪನಾಗಿ ಮೆರೆಯುತ್ತಿರಲು ಅಂತಹ ತಾರಕ ರಾಮನನ್ನು ಭಜಿಸುತ್ತೇನೆ.

ವೈಕುಂಠೇ ನಗರೇ ಸುರದ್ರುಮತಲೇ ಹ್ಯಾನಂದನ ಪ್ರಾಂತರೇ ।
ನಾನಾರತ್ನ ವಿನಿರ್ಮಿತಾ ಸ್ಫುಟ ಪಟು ಪ್ರಾಕಾರ ಸಂವೇಷ್ಟಿತೇ ।
ಸೌಧೇಂದೂಪಲ ಶೇಷತಲ್ಪ ಲಲಿತೇ ನೀಲೋತ್ಪಲಾಚ್ಛಾದಿತೇ ।
ಪರ್ಯಂಕೇ ಶಯಿತಂ ರಮಾದಿ ಸಹಿತಂ ರಾಮಂ ಭಜೇ ತಾರಕಂ ॥

ಆನಂದಪ್ರದವಾದ ನಂದನವನ ಪ್ರದೇಶದಲ್ಲಿರುವ ಕಲ್ಪವೃಕ್ಷದ ಅಡಿಯಲ್ಲಿ, ವೈಕುಂಠದಲ್ಲಿ, ಅನೇಕ ರತ್ನ ಗಳಿಂದ ನಿರ್ಮಿತವಾದ ಪ್ರಕಾಶಮಾನವಾದ ಪ್ರಾಕಾರದಿಂದ ಕೂಡಿ ಶೋಭಿಸುವ ಚಂದ್ರಕಾಂತ ಶಿಲೆಯ ಮಂದಿರ ದಲ್ಲಿ, ನೀಲವರ್ಣದ ಕನ್ನೈದಿಲೆಗಳಿಂದ ಅಲಂಕೃತವಾದ ಮಂಚದ ಮೇಲೆ ಶೇಷಶಾಯಿಯಾಗಿ ಇತರ ದೇವತೆ ಗಳಿಂದ ಕೂಡಿ ಮೆರೆಯುವ ತಾರಕರೂಪಿಯಾದ ಶ್ರೀರಾಮನನ್ನು ಭಜಿಸುತ್ತೇನೆ.

ವೈಕುಂಠೇ ಪುಟಭೇದನೇ ಮಣಿಮಯ ಪ್ರಾಂತೇಂದು ಸಿಂಹಾಸನೇ |
ಅಕ್ಷಾಂತಾಂತ ಸರೋರುಹೇ ಶಶಿಗಳ ತ್ರೀಯ್ಯೂಷ ವಾರ್ಯಂತರೇ |
ಚಂದ್ರಾರ್ಕಾನಲ ದಿವ್ಯ ಮಂಡಲಯುತೇ ಶೇಷಾಹಿ ತಲ್ಪಾಂತರೇ |
ವಾಸಂ ವಾಸವನೀಲ ಕೋಮಲ ನಿಭಂ ರಾಮಂ ಭಜೇ ತಾರಕಂ ||

ಶರೀರದಲ್ಲಿ ಚಂದ್ರ ಅನಲ (ಅಗ್ನಿ) ಅರ್ಕಾತ್ಮಕಗಳಾದ, ಮೂಲಾಧಾರ, ಮಣಿಪೂರ, ಆಜ್ಞಾಚಕ್ರಗಳನ್ನೊಳಗೊಂಡ ಸುಷುಮ್ನಾ ಎಂಬ ಶೇಷತಲ್ಪದಲ್ಲಿ ಇರುವವನಾದ, ಅಲ್ಲಿರುವ ಬ್ರಹ್ಮ, ವಿಷ್ಣು, ರುದ್ರ, ಗ್ರಂಥಿಗಳೆಂಬ ಸಂಪುಟಗಳ ಭೇದದಿಂದ ಮುಂದುವರಿದ ಉಪಾಸಕನಿಗೆ ದೊರಕಬಹುದಾದ, ಮಣಿಮಯವಾಗಿ, ಅಕಾರಾದಿ, ಕ್ಷಕಾರಾಂತ ಸರ್ವವರ್ಣಶಕ್ತಿಗಳನ್ನೂ ಒಳಗೊಂಡು ತನ್ನಲ್ಲಿರುವ ಚಂದ್ರಮಂಡಲದಿಂದ ಸುಧಾವೃಷ್ಟಿಯನ್ನು ಕರೆಯಿಸುವ ವೈಕುಂಠವೆಂಬ ಸಹಸ್ರಾರ ಚಕ್ರದಲ್ಲಿ, ನೆಲಸಿರುವ, ತಾರಕಬ್ರಹ್ಮನಾದ, ಇಂದ್ರನೀಲಮಣಿಯಂತೆ ಪ್ರಕಾಶಿಸುವ, ನೀಲಮೇಘಶ್ಯಾಮನಾದ ಮನೋಹರನಾದ, ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಕ್ಷೀರಾಬ್ಧೌ ಶಶಿಶಂಖ ಮೌಕ್ತಿಕ ಲಸದ್ವೀಪೇ ಸುಧರ್ಮಾಂತರೇ |
ಬಿಂದೌ ಸಾರ್ಧಕಳಾನ್ವಿತೇ ಪರಿಲಸನ್ನಾ ಗಾಂತರೇ ಸಂಸ್ಥಿತಂ |
ಕೋಟೀರಾಂಗದ ಹಾರ ಕುಂಡಲಮಣಿ ಗ್ರೈವೇಯ ಹಾರೋಜ್ಜ್ವಲಂ |
ಶ್ರೀವತ್ಸಾಂಕಿತ ಮಿಂದ್ರನೀಲಸದೃಶಂ ರಾಮಂ ಭಜೇ ತಾರಕಂ ||

ಕ್ಷೀರಸಾಗರದಲ್ಲಿ ಚಂದ್ರನಿಗೂ, ಶಂಖಕ್ಕೂ, ಮುತ್ತಿಗೂ ಸದೃಶವಾಗಿ ಹೊಳೆಯುವ ಶ್ವೇತದ್ವೀಪದಲ್ಲಿ, ದಿವ್ಯಪ್ರಾಸಾದದಲ್ಲಿ, ಅಷ್ಟಮಿ ಚಂದ್ರನ ದಿವ್ಯಕಳೆಯಂತೆ ಶೋಭಾಯಮಾನವಾದ ಸ್ಥಳದಲ್ಲಿ, ಶ್ರೇಷ್ಠವಾದ ಶೇಷ ಪರ್ಯಂಕದಲ್ಲಿ, ಕಿರೀಟಹಾರಾದಿಗಳಿಂದ ಭೂಷಿತನಾಗಿ, ಶ್ರೀವತ್ಸಧಾರಿಯಾಗಿ ಇಂದ್ರನೀಲದ ಕಾಂತಿಯುಳ್ಳ ಶರೀರ ಉಳ್ಳವನಾಗಿ ಪ್ರಕಾಶಿಸುವ, ಶರೀರದಲ್ಲಿ ಸುಷುಮ್ನಾ ನಾಡಿಯ ಒಳಗಡೆ ಆಜ್ಞಾಚಕ್ರದಲ್ಲಿ ನೆಲಸಿರುವ, ತಾರಕ ರಾಮನಾದ ಶ್ರೀರಾಮನನ್ನು ಭಜಿಸುತ್ತೇನೆ.

(ಇಲ್ಲಿ ಎರಡನೆಯ ಪಾದದಲ್ಲಿ ಸುಷುಮ್ನಾ ನಾಡಿಯ ಒಳಗಡೆ ಅರ್ಧಕಳಾಯುಕ್ತವಾದ ಬಿಂದುವಿನಲ್ಲಿ ಪರಮಾತ್ಮನಿರುವನೆಂದು ಅರ್ಥವಾಗುತ್ತದೆ. ಹೀಗೆಂದರೆ ಸುಷುಮ್ನಾ ನಾಡಿಯ ಒಳಗಡೆ ಸಮಸ್ತ ಅರ್ಧಕಳೆಗಳನ್ನೂ ಅಂದರೆ ಶಕ್ತಿಗಳನ್ನೂ ಸೂಕ್ಷ್ಮರೂಪದಲ್ಲಿ ಧರಿಸಿರುವ, ಬಿಂದುರೂಪವಾದ ಆಜ್ಞಾಚಕ್ರದಲ್ಲಿ ನೆಲಸಿರುವವನು ಎಂದು ಅರ್ಥ ಮಾಡಬೇಕಾಗುತ್ತದೆ.)

ಪ್ರದ್ಯುಮ್ನ ಕೃಷ್ಣ ರಾಮ ಸ್ತೋತ್ರ

ಪ್ರಸೂನ ಬಾಣಂ ವರಮಿಕ್ಷುಚಾಪಂ |
ಚಕ್ರಾಬ್ಜ ಪಾಶಾಂಕುಶ ಖಡ್ಗ ವೇಣುಂ |
ಧರಂ ಕರೈರಷ್ಟಭಿರರ್ಕವರ್ಣಂ |
ಪ್ರದ್ಯುಮ್ನ ಕೃಷ್ಣಂ ಪ್ರಣಮಾಮಿ ರಾಮಂ ||

ಮನ್ಮಥನಂತೆ ಎಂಟು ಕೈಗಳನ್ನು ಹೊಂದಿ, ಮನ್ಮಥನ ಮತ್ತು ಕೃಷ್ಣನ ಚಿಹ್ನೆಗಳಾದ ಎಂಟು ಆಯುಧಗಳನ್ನು ಅಂದರೆ ಮನ್ಮಥನ ಆಯುಧಗಳಾದ ಹೂವಿನ ಬಾಣ, ಕಬ್ಬಿನ ಜಲ್ಲೆಯ ಬಿಲ್ಲು, ಪಾಶ ಅಂಕುಶಗಳನ್ನೂ, ಕೃಷ್ಣನ ಆಯುಧಗಳಾದ ಶಂಖ, ಚಕ್ರ, ಖಡ್ಗ ಕೊಳಲುಗಳನ್ನೂ ಧರಿಸಿ, ಮನ್ಮಥ ಕೃಷ್ಣನಂತೆ ದರ್ಶನ ಕೊಡುವ ಶ್ರೀರಾಮನಿಗೆ ನಮಸ್ಕಾರವು.

ಕೋದಂಡಮಿಕ್ಷುಜನಿತಂ ವರ ಖಡ್ಗಬಾಣಂ |
ಶಂಖಂ ರಥಾವಯುವಮಂಕುಶ ಪಾಶ ವೇಣುಂ |
ಅಷ್ಟೈಃ ಕರೈರ್ನವಮಣಿದ್ಧ್ಯುತಿಮುದ್ವಹಂತಂ |
ಪ್ರದ್ಯುಮ್ನ ಕೃಷ್ಣಮನಿಶಂ ಭಜ ರಾಮಚಂದ್ರಂ ||

ಮನ್ಮಥನಂತೆ ಎಂಟು ಕೈಗಳನ್ನು ಹೊಂದಿ, ಮನ್ಮಥನ ಆಯುಧಗಳಾದ ಕಬ್ಬಿನ ಜಲ್ಲೆಯ ಬಿಲ್ಲು, ಹೂವಿನ ಬಾಣ, ಅಂಕುಶ, ಪಾಶಗಳನ್ನು ನಾಲ್ಕು ಕೈಗಳಲ್ಲಿ ಧರಿಸಿ, ಕೃಷ್ಣನ ಆಯುಧಗಳಾದ ಶಂಖ, ಚಕ್ರ, ಖಡ್ಗ, ವೇಣುಗಳನ್ನು ಧರಿಸಿ, ಮನ್ಮಥ ಕೃಷ್ಣನಂತೆ ದರ್ಶನ ಕೊಡುವ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಶ್ರೀಕಂಠರೂಪಿ ರಾಮ ಸ್ತೋತ್ರ

ದೋರ್ಭಿಃ ಖಡ್ಗಂ ತ್ರಿಶೂಲಂ ಡಮರುಮಸಿಧನುಶ್ಚಾರು ಬಾಣಂ ಕುಠಾರಂ|
ಶಂಖಂ ಚಕ್ರಂಚಖೇಟಂ ಹಲಮುಸಲ ತದಾ ಭಿಂಡಿವಾಲಂಚ ಪಾಶಂ|
ವಿದ್ಯುದ್ವಹ್ನಿಂ ಚ ಮುಷ್ಟಿಂ ಅಭಯವರಕರಂ ಬಿಭ್ರತಂ ಶುಭ್ರವರ್ಣಂ|
ವಂದೇ ರಾಮಂ ತ್ರಿನೇತ್ರಂ ಸಕಲ ರಿಪುಕುಲಂ ಮರ್ದಯಂತಂ ಪ್ರತಾಪೈಃ||

ಖಡ್ಗ, ಖೇಟಕ, ಅಸಿ ಎಂಬ ಹಲವು ವಿಧವಾದ ಕತ್ತಿಗಳಿಂದಲೂ, ತ್ರಿಶೂಲ, ಡಮರುಗ, ಧನುಸ್ಸು, ಬಾಣ, ಕೊಡಲಿ, ಶಂಖ, ಚಕ್ರ, ಹಲಾಯುಧ, ಮುಸಲಾಯುಧ, ಭಿಂಡಿವಾಲ, ಪಾಶಗಳಿಂದಲೂ ಕೂಡಿರುವ, ಮುಷ್ಟಿಯಲ್ಲಿ ಪ್ರಳಯಾಗ್ನಿಯನ್ನು ಹಿಡಿದುಕೊಂಡು, ವರದ ಅಭಯಹಸ್ತಗಳಿಂದ ತೇಜಸ್ವಿಯಾಗಿ, ಶುಭ್ರವರ್ಣನಾಗಿ, ಶತ್ರುಕುಲವನ್ನು ನಾಶಮಾಡುವವನಾಗಿ, ಪರಮೇಶ್ವರನಂತಿರುವ ಪ್ರತಾಪ ರಾಮನನ್ನು ನಮಸ್ಕರಿಸುತ್ತೇನೆ.

ಭೇತ್ತಾರಂ ದಶಕಂಠ ಕಂಠಕದಳೀಃ ಕಂದರ್ಪದರ್ಪಾಪಹಂ |
ಶ್ರೀಕಂಠಾಕೃತಿ ಮಾಪ್ನುವಂತಮಮಲಂ ಘೋರಾಸುರ ಪ್ರಾಣಹೃತ್ |
ಬಾಣಂ ಪ್ರತ್ಯುಪಸಂಹರಂ ತಮತುಲಂ ಬಾಣಾಸನೋದ್ಯುತ್ಕರಂ |
ವಂದೇಃ ರಾತಿ ಭಯಾವಹಂ ಮುನಿನುತಂ ರಾಮಂ ಘನಶ್ಯಾಮಲಂ ||

ದಶಕಂಠನಾದ ರಾವಣನ ಕಂಠಗಳೆಂಬ ಬಾಳೇಗಿಡಗಳನ್ನು ಕತ್ತರಿಸಿದ, ತನ್ನ ಮನೋಹರವಾದ ದಿವ್ಯರೂಪಿನಿಂದ ಮನ್ಮಥನು ತಾನೇ ಸುಂದರನೆಂದು ಹೇಳುತ್ತಿದ್ದುದನ್ನು ನಿಲ್ಲಿಸಿ ಅವನ ಶಕ್ತಿಯನ್ನು ದಮನ ಮಾಡಿ ಮನ್ಮಥನನ್ನು ಜಯಿಸಿ ತತ್ಪ್ರಯುಕ್ತ ಕಾಮಾರಿಯಾದ ಶ್ರೀಕಂಠನಾಮಕ ಪರಮೇಶ್ವರನನ್ನು ಹೋಲುತ್ತಿರುವ, ಪರಿಶುದ್ಧನಾದ, ಘೋರರಾದ ಅಸುರರ ಪ್ರಾಣಾಪಹಾರ ಮಾಡಿ ತನ್ನ ಬಾಣವನ್ನು ಉಪಸಂಹರಿಸಿದ, ಶ್ರೇಷ್ಠವಾದ ಧನುಸ್ಸನ್ನು ಹಸ್ತದಲ್ಲಿ ಧರಿಸಿರುವ, ಶತ್ರುಭಯಂಕರನಾದ, ಋಷಿಗಳಿಂದ ಸ್ತುತ್ಯನಾದ, ನೀಲಮೇಘಶ್ಯಾಮನಾದ ಶ್ರೀರಾಮನನ್ನು ನಮಸ್ಕರಿಸುತ್ತೇನೆ.

(ಶಿವನು ರಾವಣನಿಗೆ ಪ್ರಸನ್ನನಾಗಲು ಅವನ ದಶಕಂಠಗಳನ್ನೂ ಆಹುತಿಯಾಗಿ ಪಡೆದು, ದಶಕಂಠಗಳೆಂಬ ಕದಳಿಗಳ ಬೇತ್ತಾರನಾದನು.)

ಸ್ತ್ರೀ ಪುಂ ರೂಪಧರ ರಾಮ ಸ್ತೋತ್ರ

ಅರ್ಧಂ ರಕ್ತ ಪದಾರ್ಧನೀಲರುಚಿರಂ ಅರ್ಧೇಂದು ಚೂಡಾರ್ಚಿತಂ।
ಅರ್ಧಂ ರತ್ನಕಿರೀಟ ಕುಂಡಲಧರಂ ತಾಟಂಕ ಮರ್ಧಂಧನುಂ।
ಶಂಖಂ ಚಕ್ರಗದಾಬ್ಜ ಸಂಯುತಕರಂ ಶ್ರೀಯಂ ಮಯಂ ವೈಷ್ಣವಂ।
ಪಾಶಂ ಚಾಂಕುಶ ಬಾಣ ವಿಧೃತಕರಂ ರಾಮಂ ಭಜೇ ತಾರಕಂ॥

ಸ್ತ್ರೀಪುರುಷಧಾರಿಯಂತೆ ರಾಮನನ್ನು ಇಲ್ಲಿ ಧ್ಯಾನಿಸಿದೆ. ಒಂದು ಪಾದವು ಕೆಂಪಗೂ, ಒಂದು ಪಾದವು ನೀಲಿಯ ಬಣ್ಣದ್ದೂ ಇದ್ದು, ಈ ಎರಡು ಪಾದಗಳೂ ಪರಮೇಶ್ವರನಿಂದ ಅರ್ಚಿಸಲ್ಪಡುತ್ತಿರುವುವು. ಇಂತಹ ಪಾದಗಳುಳ್ಳವನಾದ, ಒಂದು ಭಾಗದಲ್ಲಿ ರತ್ನ, ಕುಂಡಲ, ಕಿರೀಟಧಾರಿಯಾಗಿಯೂ, ಇನ್ನೊಂದರಲ್ಲಿ ಬೆಂಡೋಲೆಯನ್ನು ಧರಿಸಿಯೂ, ಒಂದು ಭಾಗದಲ್ಲಿ ಶಂಖ, ಚಕ್ರ, ಗದೆಗಳನ್ನು ಧರಿಸಿಯೂ, ಇನ್ನೊಂದೆಡೆ ಕಮಲಹಸ್ತನಾಗಿಯೂ, ಪಾಶಾಂಕುಶ ಬಾಣಧರನಾಗಿಯೂ, ಮೋಕ್ಷ ಲಕ್ಷ್ಮೀರೂಪಿಯೂ, ವಿಷ್ಣುರೂಪಿಯೂ ಆದ ರಾಮನನ್ನು ಭಜಿಸುತ್ತೇನೆ.

ಸಾಕೇತೇ ನಲಚಂದ್ರಭಾನು ವಿಲಸಚ್ಚಿಚ್ಚಕ್ರ ಬಿಂದುಸ್ಥಿತಂ।
ಬಾಲಾರ್ಕದ್ಯುತಿ ಭಾಸುರಂ ಕರತಲೇ ಪಾಶಾಂಕುಶೌ ಬಿಭೃತಂ।
ಬಾಣಂ ಚಾಪಯುತಂ ವಿಶಾಲನಯನಂ ಸ್ಮೇರಾನನಾಂಭೋರುಹಂ।
ಸ್ತ್ರೀ ಪುಂ ರೂಪಧರಂ ವಿಲಾಸ ಸದನಂ ರಾಮಂ ಭಜೇ ತಾರಕಂ॥

ಅನಲಚಕ್ರವಾದ ಮಣಿಪೂರದಲ್ಲೂ, ಚಂದ್ರಚಕ್ರವಾದ ಮೂಲಾಧಾರದಲ್ಲೂ, ಸೂರ್ಯಚಕ್ರವಾದ ಆಜ್ಞಾಚಕ್ರದಲ್ಲೂ, ಪ್ರಕಾಶಮಾನವಾದ ಚಿಜ್ಜ್ಯೋತಿರೂಪವಾದ ಸಹಸ್ರಾರ ಚಕ್ರದ ಬಿಂದುವಿನಲ್ಲೂ ನೆಲಸಿರುವ, ಬಾಲಸೂರ್ಯನಂತೆ ಕೆಂಪು ಕಾಂತಿಯುಳ್ಳ, ಪಾಶಾಂಕುಶಗಳನ್ನೂ ಬಿಲ್ಲು ಬಾಣಗಳನ್ನೂ ಧರಿಸಿ ವಿಶಾಲಾಕ್ಷನಾಗಿ ಮನೋಹರವಾದ ಮುಖಕಮಲಗಳುಳ್ಳವನಾಗಿ ಇರುವ, ಇಡಾ ಎಂಬ ಸ್ತ್ರೀ ನಾಡಿರೂಪದಲ್ಲೂ ಪಿಂಗಳಾ ಎಂಬ ಪುರುಷ ನಾಡಿ ರೂಪದಲ್ಲೂ, ಅಲ್ಲದೆ ಷಟ್ಚಕ್ರಗಳಲ್ಲೂ ಶಕ್ತಿಸಹಿತ ಅಧಿಷ್ಠಾತೃವಾಗಿ, ಸ್ತ್ರೀ ಪುಂ ರೂಪಧರನಾಗಿರುವ, ಮಾಯಾವಿಲಾಸದಿಂದ ಕೂಡಿದ, ತಾರಕಬ್ರಹ್ಮನಾದ, ಅಯೋಧ್ಯೆಯಲ್ಲಿ ಸೀತಾಸಮೇತನಾಗಿ ಪ್ರಕಾಶಿಸುವ ಶ್ರೀರಾಮನನ್ನು ಭಜಿಸುತ್ತೇನೆ.

ರಘುವರ ರಾಮ ಸ್ತೋತ್ರ

ಶ್ರೀರಾಮಂ ತ್ರಿಜಗದ್ಗುರು ಸುರವರಂ ಸೀತಾ ಮನೋವಲ್ಲಭಂ।
ಶ್ಯಾಮಾಂಗಂ ಶತಕೋಟಿ ಚಂದ್ರವದನಂ ಚಂಚತ್ಕಲಾ ಕೌಸ್ತುಭಂ।
ಸೌಮ್ಯಂ ಸತ್ವಗುಣೋತ್ತಮಂ ಸು ಸರಯೂತೀರೇ ವಸಂತಂ ಪ್ರಭುಂ।
ತ್ರಾತಾರಂ ಸಕಲಾಷ್ಟ ಸಿದ್ಧಿ ಸಹಿತಂ ವಂದೇ ರಘೂಣಾಂ ಪತಿಂ॥

ಮೂರು ಲೋಕಗಳಿಗೂ ಗುರುವಾಗಿ, ದೇವತೆಗಳಲ್ಲಿ ಶ್ರೇಷ್ಠನೆನಿಸಿ, ಸೀತಾಮನೋವಲ್ಲಭನಾಗಿ, ಶ್ಯಾಮಲ ವರ್ಣದಿಂದ ಕೂಡಿ, ಕೋಟಿ ಚಂದ್ರಕಾಂತಿಯಂತೆ ಪ್ರಕಾಶಮಾನವಾದ ಮುಖವುಳ್ಳವನಾಗಿ, ಮನೋಹರವಾದ ಕಾಂತಿಯುಕ್ತನಾಗಿ, ಕೌಸ್ತುಭಮಣಿಯಿಂದ ಶೋಭಿಸುತ್ತಾ, ಶಾಂತಮೂರ್ತಿಯೂ ಸತ್ವಗುಣ ಪ್ರಧಾನನೂ ಆಗಿ, ಸರಯೂ ನದೀ ತೀರದಲ್ಲಿ ವಿಹರಿಸುವ, ಪ್ರಭುವೂ ರಕ್ಷಕನೂ ಸಕಲ ಅಷ್ಟ ಸಿದ್ಧಿಗಳಿಂದ ಕೂಡಿದವನೂ ಆದ ಶ್ರೀ ರಘುರಾಮಮೂರ್ತಿಯನ್ನು ವಂದಿಸುತ್ತೇನೆ.

ಶ್ರೀರಾಮಂ ಜಗದೇಕವೀರಮಮಲಂ ಸೀತಾಮನೋರಂಜನಂ |
ಕೌಸಲ್ಯಾವರನಂದನಂ ರಘುಪತಿಂ ಕಾಕುತ್ಸ್ಥ ವಂಶೋದ್ಭವಂ |
ಲೋಕಾನಾಮಭಿರಾಮ ಮಂಗಳ ಘನವ್ಯಾಪಾರ ಪಾರಾಯಣಂ |
ವಂದೇಹಂ ಜನಘೋರ ಪಾಪನಿಕರಧ್ವಂಸಂ ವಿಭುಂ ರಾಘವಂ ||

ಪ್ರಪಂಚಕ್ಕೇ ಏಕಮಾತ್ರ ವೀರನಾದ, ಪರಿಶುದ್ಧನಾದ, ಸೀತಾಮಾತೆಯ ಮನೋಹಾರಿಯಾದ, ಕೌಸಲ್ಯಾ ದೇವಿಯ ಸುಪುತ್ರನೂ, ರಘುವಂಶ ಶ್ರೇಷ್ಠನೂ, ಸರ್ವದಾ ಚಲಿಸುವ ಹಿಳಿಲುಳ್ಳ ಗೂಳಿಯ ಮೇಲೆ ಒಂದೇ ಕಾಲಿನಲ್ಲಿ ನಿಂತು ಯುದ್ಧಮಾಡಿ ವಿಜಯಿಯಾದ ಕಕುತ್ಸ್ಥ ಮಹಾರಾಜನ ವಂಶೋದ್ಭವನೂ ಆದ, ಲೋಕರಂಜಕನಾಗಿ, ಮಂಗಳ ಕಾರ್ಯಗಳಲ್ಲಿ ನಿರತನಾಗಿರುತ್ತಾ ಜನರ ಮಹತ್ತಾದ ಪಾಪಗಳನ್ನು ನಾಶಮಾಡಬಲ್ಲ ವಿಭುವಾದ, ರಘು ವಂಶೋದ್ಭವನಾದ ಶ್ರೀರಾಮಚಂದ್ರನನ್ನು ನಾನು ವಂದಿಸುವೆನು.

ಶ್ರೀರಾಮೋ ರಘುನಾಯಕೋ ರಘುವರೋ ರಾಜೀವನೇತ್ರಾಂಚಿತೋ |
ರಾಜೇಂದ್ರೋ ರಘುಪುಂಗವೋ ರಘುಕುಲೋತ್ತಂಸೋ ರಘೂಣಾಂ ಪತಿಃ |
ರಾಮೋ ರಾಕ್ಷಸನಾಶನೋಽಮಿತಬಲೋ ರಾಕೇಂದು ಪೂರ್ಣಾನನೋ |
ರಾಜತ್ಕಿಂಕಿಣಿ ಕಂಕಣಾಂಕಿತಕರೋ ರಾಮಸ್ಸದಾ ಪಾತು ನಃ ||

ರಘುಶ್ರೇಷ್ಠನೂ, ಕಮಲಾಕ್ಷನೂ, ರಾಜಶ್ರೇಷ್ಠನೂ, ರಾಕ್ಷಸನಿರ್ಮೂಲನೂ, ಅಪಾರ ಪರಾಕ್ರಮಿಯೂ, ಪೂರ್ಣಚಂದ್ರನಂತೆ ಮನೋಹರವಾದ ಮುಖವುಳ್ಳವನೂ, ಪ್ರಕಾಶಮಾನವಾದ ಕಿರುಗೆಜ್ಜೆ ಕಂಕಣಗಳಿಂದ ಶೋಭಿತವಾದ ಹಸ್ತಗಳುಳ್ಳವನೂ ಆದ ಶ್ರೀರಾಮನು ನಮ್ಮನ್ನು ಕಾಪಾಡಲಿ.

ಶ್ರೀರಾಘವಂ ದಶರಥಾತ್ಮಜಮಪ್ರಮೇಯಂ |
ಸೀತಾಪತಿಂ ರಘುವರಾನ್ವಯ ರತ್ನದೀಪಂ |
ಆಜಾನುಬಾಹುಮರವಿಂದ ದಳಾಯತಾಕ್ಷಂ |
ರಾಮಂ ನಿಶಾಚರ ವಿನಾಶಕರಂ ನಮಾಮಿ ||

ರಘುವರನೂ, ದಶರಥಪುತ್ರನೂ, ಯಾವ ಪ್ರಮೇಯಕ್ಕೂ ಸಿಕ್ಕದವನೂ, ಸೀತಾಪತಿಯೂ, ರಘುವಂಶಕ್ಕೆ ರತ್ನದೀಪದಂತಿರುವವನೂ, ಆಜಾನುಬಾಹುವೂ, ಕಮಲಾಕ್ಷನೂ, ರಾಕ್ಷಸನಾಶಕನೂ ಆದ ಶ್ರೀರಾಮಚಂದ್ರನನ್ನು ನಮಸ್ಕರಿಸುತ್ತೇನೆ.

ರಾಮಂ ಚಂದನ ಶೀತಲಂ ಕ್ಷಿತಿಸುತಾ ಮೋಹಾಕರಂ ಶ್ರೀಕರಂ |
ವೈದೇಹೀ ನಯನಾರವಿಂದಮಿಹಿರಂ ಸಂಪೂರ್ಣ ಚಂದ್ರಾನನಂ |
ಆಜಾನುಂ ಕರುಣಾಸಮೇತನಯನಂ ಸೀತಾಮನಸ್ಯಂದನಂ |
ಸೀತಾದರ್ಪಣ ಚಾರುಗಂಡಲಲಿತಂ ವಂದೇ ಸದಾ ರಾಘವಂ ||

ಶ್ರೀಗಂಧದ ಶೈತ್ಯದಂತೆ ಸುಖಪ್ರದನಾದ, ಸೀತಾದೇವಿಗೆ ಮೋಹಕನಾದ, ಸೀತಾನಯನಗಳೆಂಬ ಕಮಲ ಗಳಿಗೆ ಸೂರ್ಯನಂತಿರುವ, ಪೂರ್ಣಚಂದ್ರನಂತೆ ಮುಖವುಳ್ಳ, ಆಜಾನುಬಾಹುವಾದ, ಕರುಣೆಯಿಂದ ನನೆದ ಹೃದಯವುಳ್ಳ, ಸೀತಾಮನೋರಥವನ್ನು ಪೂರ್ತಿಮಾಡಿದ, ಸೀತೆಯ ಕನ್ನಡಿಯಂತಿರುವ ಮನೋಹರವಾದ ಕಪೋಲಗಳ ವಿಲಾಸದಿಂದ ಕೂಡಿರುವವನಾದ, ರಘುಕುಲೋದ್ಭವನಾದ ಶ್ರೀರಾಮನನ್ನು ನಮಸ್ಕರಿಸುತ್ತೇನೆ.

ವೈದೇಹೀರಮಣಂ ವಿಭೀಷಣವಿಭುಂ ವಿಷ್ಣುಸ್ವರೂಪಂ ಹರಿಂ |
ವಿಶ್ವೋತ್ಪತ್ತಿ ಪ್ರಪತ್ತಿ ಪೋಷಣಕರಂ ವಿದ್ಯಾಧರೈರರ್ಚಿತಂ |
ವೈರಿ ಧ್ವಂಸಕರಂ ವಿರಿಂಚಿಜನಕಂ ವಿಶ್ವಾತ್ಮಕಂ ವ್ಯಾಪಕಂ |
ವ್ಯಾಸಾಂಗೀರಸ ನಾರದಾದಿವಿನುತಂ ವಂದಾಮಹೇ ರಾಘವಂ ||

ಸೀತಾಪತಿಯೂ, ವಿಭೀಷಣನ ಸ್ವಾಮಿಯೂ, ಸಾಕ್ಷಾತ್ ವಿಷ್ಣುಸ್ವರೂಪನೂ, ಸಮಸ್ತ ಪಾಪನಾಶಕನೂ, ಪ್ರಪಂಚದ ಉತ್ಪತ್ತಿ ಸ್ಥಿತಿಗೆ ಕಾರಣನೂ, ವಿಶ್ವರಕ್ಷಕನೂ, ಗಂಧರ್ವಾದಿಗಳಿಂದ ಗಾನಮಾಡಿಸಿಕೊಳ್ಳುವವನೂ, ಶತ್ರುಮರ್ದನನೂ, ವ್ಯಾಸ, ಆಂಗೀರಸ, ನಾರದಾದಿಗಳಿಂದ ಹೊಗಳಿಸಿಕೊಳ್ಳುವವನೂ ಆದ ಶ್ರೀರಾಮಚಂದ್ರನನ್ನು ವಂದಿಸುತ್ತೇನೆ.

ವಂದೇ ಪಾಂಡುರ ಪುಂಡರೀಕ ನಯನಂ ವಂದೇಂದು ಬಿಂಬಾನನಂ |
ವಂದೇ ಕಂಬುಗಳಂ ಕರಾಬ್ಜ ಯುಗಳಂ ವಂದೇ ಲಲಾಟೋಜ್ಜ್ವಲಂ |
ವಂದೇ ಪೀತದುಕೂಲಮಂಬುದನಿಭಂ ವಂದೇ ಜಗನ್ಮೋಹನಂ |
ವಂದೇ ಕಾರಣ ಮಾನುಷೋಜ್ಜ್ವಲತನುಂ ವಂದೇ ಸದಾ ರಾಘವಂ ||

ಬಿಳಿಯ ಕಮಲದಂತೆ ಪ್ರಕಾಶಮಾನವಾದ ಕಣ್ಣುಗಳುಳ್ಳ, ಪೂರ್ಣಚಂದ್ರ ಬಿಂಬಕ್ಕೆ ಸಮಾನವಾದ ದುಂಡು ಮುಖವುಳ್ಳ, ಶಂಖದಂತೆ ಕಂಠತ್ರಿವಳಿಗಳಿಂದ ಕೂಡಿದ, ಕಮಲ ಹಸ್ತನಾದ, ಶೋಭಿಸುವ ಹಣೆಯುಳ್ಳ, ಪೀತಾಂಬರ ಧಾರಿಯೂ ಮೇಘಶ್ಯಾಮಲಮೂರ್ತಿಯೂ ಜಗತ್ತಿಗೇ ಮೋಹಕನೂ ಆದ, ರಾಕ್ಷಸ ನಾಶಕ್ಕೋಸ್ಕರ ಮನುಷ್ಯ ರೂಪಿಯಾಗಿ ಅವತರಿಸಿದವನಾದ ರಾಘವನನ್ನು ವಂದಿಸುತ್ತೇನೆ.

ವಂದೇ ನೀಲಸರೋಜ ಕೋಮಲರುಚಿಂ ವಂದೇ ಜಗದ್ವಂದಿತಂ |
ವಂದೇ ಸೂರ್ಯ ಕುಲಾಬ್ಧಿ ಕೌಸ್ತುಭಮಣಿಂ ವಂದೇ ಸುರಾರಾಧಿತಂ |
ವಂದೇ ಪಾತಕ ಪಂಚಕಪ್ರಹರಣಂ ವಂದೇ ಜಗತ್ಕಾರಣಂ |
ವಂದೇ ವಿಂಶತಿ ಪಂಚತತ್ವರಹಿತಂ ವಂದೇ ಸದಾ ರಾಘವಂ ||

ಕನ್ನೈದಿಲೆಯಂತೆ ನೀಲವರ್ಣವುಳ್ಳ, ಸಮಸ್ತರಿಂದ ವಂದಿತನೂ, ಸೂರ್ಯವಂಶವೆಂಬ ಸಮುದ್ರಕ್ಕೆ ಕೌಸ್ತುಭ ಮಣಿಯಂತೆ ಅಲಂಕಾರಪ್ರಾಯನೂ, ದೇವತೆಗಳಿಂದ ಆರಾಧಿತನೂ, ಪಂಚಮಹಾ ಪಾತಕಗಳನ್ನು ನಾಶ ಮಾಡುವವನೂ, ಜಗತ್ತಿಗೆ ಕಾರಣಭೂತನೆನಿಸಿದ್ದರೂ ನಿಜವಾಗಿ ನೋಡುವಲ್ಲಿ, ಪ್ರಪಂಚೋತ್ಪತ್ತಿಗೆ ಕಾರಣವೆನಿಸಿದ ಪಂಚ ಮಹಾಭೂತಗಳಿಂದ ಉಂಟಾದ, ಇಪ್ಪತ್ತೈದು ತತ್ತ್ವಗಳಿಗೂ ದೂರನಾದವನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ವಂದೇ ಸಾಧಕವರ್ಗ ಕಲ್ಪಕ ತರುಂ ವಂದೇ ತ್ರಿಮೂರ್ತ್ಯಾತ್ಮಕಂ |
ವಂದೇ ನಾದ ಲಯಾಂತಕಸ್ಥಲಗತಂ ವಂದೇ ತ್ರಿವರ್ಗಾತ್ಮಕಂ |
ವಂದೇ ರಾಗ ವಿಹೀನ ಚಿತ್ತಸುಲಭಂ ವಂದೇ ಸಭಾನಾಯಕಂ |
ವಂದೇ ಪೂರ್ಣದಯಾಮೃತಾರ್ಣವಮಹಂ ವಂದೇ ಸದಾ ರಾಘವಂ ||

ಆತ್ಮಜ್ಞಾನ ಸಾಧಕರಿಗೆ ಕಲ್ಪವೃಕ್ಷದಂತಿರುವ ; ಬ್ರಹ್ಮ, ವಿಷ್ಣು, ಶಿವಾತ್ಮಕನಾದ ; ಯೋಗಿಯು ತನ್ನ ಜ್ಞಾನಕ್ರಮದಲ್ಲಿ, ನಾದಾನುಸಂಧಾನ ಮಾಡುತ್ತಾ ಹೋಗುವಲ್ಲಿ, ಆಜ್ಞಾ ಚಕ್ರದಲ್ಲಿ ನಾದವು ಲಯವಾಗಿ ಅಲ್ಲಿಂದ ಮುಂದುವರಿದ ತಾನು ಪರಮಾತ್ಮನಲ್ಲಿ ಎಲ್ಲಿ ಐಕ್ಯ ಹೊಂದುವನೋ ಅಂತಹ ಶಿರಸ್ಥಾನವಾದ ಸಹಸ್ರಾರ ಕಮಲದಲ್ಲಿ ಓಂಕಾರ ರೂಪದಿಂದ ಇರುವ ; ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ತ್ರಿವರ್ಗಾತ್ಮಕನಾದ, ರಾಗದ್ವೇಷಗಳಿಲ್ಲದೆ, ಸತ್ವ ಗುಣಪ್ರಧಾನನೂ, ಚಿತ್ತಕ್ಕೆ ಸುಲಭನೂ, ಸಭಾನಾಯಕನೂ (ಅಂದರೆ ಪ್ರಾಣೋತ್ಕ್ರಮಣ ಕಾಲದಲ್ಲಿ ಎಲ್ಲಾ ಪ್ರಾಣವಾಯುಗಳೂ, ಇಂದ್ರಿಯಾದಿಗಳೂ, ಮನಸ್ಸೂ, ಕಂಠಪ್ರದೇಶದಲ್ಲಿ ಸಭಾರೂಪವಾಗಿ ಸೇರಿದಾಗ ಅಲ್ಲಿ ಉದಾನ ಪ್ರಾಣರೂಪದಲ್ಲಿ ಅವುಗಳಿಗೆ ನಾಯಕನಾಗಿ ಅವುಗಳನ್ನೆಲ್ಲಾ ಶರೀರದಿಂದ ಕರ್ಮಾನುಬದ್ಧವಾಗಿ ಎಳೆದುಕೊಂಡು ಹೋಗುವ ಉದಾನ ವಾಯುರೂಪನೂ, ಪೂರ್ಣದಯಾಸಾಗರನೂ ಆದ ರಾಘವನನ್ನು ಯಾವಾಗಲೂ ಭಜಿಸುತ್ತೇನೆ.

ವಂದೇ ಸಾತ್ತ್ವಿಕ ತತ್ವಮುದ್ರಿತತನುಂ ವಂದೇ ಸಭಾನಾಯಕಂ |
ವಂದೇ ಚಾರು ಚತುರ್ಭುಜಂ ಮಣಿನಿಭಂ ವಂದೇ ಷಡಂಗಸ್ಥಿತಂ |
ವಂದೇ ಬ್ರಹ್ಮ ಪಿಪೀಲಿಕಾದಿನಿಲಯಂ ವಂದೇ ವಿರಾಡ್ವಿಗ್ರಹಂ |
ವಂದೇ ಪನ್ನಗ ತಲ್ಪ ಶಾಯಿನಮಹಂ ವಂದೇ ಸದಾ ರಾಘವಂ ||

ಸತ್ವಗುಣಪ್ರಧಾನವಾದ ತತ್ವಗಳಿಂದ ಕೂಡಿದ ಶರೀರವುಳ್ಳ, ಹಿಂದಿನ ಶ್ಲೋಕದಲ್ಲಿ ಹೇಳಿದಂತೆ ಸಭಾ ನಾಯಕನಾದ, ಮನೋಹರವಾದ ಚತುರ್ಭುಜಗಳಿಂದ ಕೂಡಿ, ನವರತ್ನಗಳ ಕಾಂತಿಯಿಂದ ಹೊಳೆಯುವ, ಶಿಕ್ಷ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ ಎಂಬ ಷಟ್ಶಾಸ್ತ್ರಗಳಿಗೆ ಆಧಾರಭೂತನಾದ, ಬ್ರಹ್ಮ ನಿಂದ ಸ್ತಂಬಪರ್ಯಂತ ಸಮಸ್ತ ಜೀವಿಗಳ ಹೃದಯದಲ್ಲಿರುವ, ವಿಶ್ವರೂಪಿಯಾದ, ಆದಿಶೇಷನ ತಲ್ಪದಲ್ಲಿ ಮಲಗಿರುವ ರಾಘವನನ್ನು ವಂದಿಸುತ್ತೇನೆ.

ತಾರಕ ರಾಮ ಸ್ತೋತ್ರ

ಆನಂದನಂದಮರುಣಾಧರಮಂಬುಜಾಕ್ಷಂ |
ಆಪೀತವಸ್ತ್ರಮತಸೀ ಕುಸುಮೋಜ್ಜ್ವಲಾಂಗಂ |
ಅಕ್ಷಾಂತವರ್ಣಮಕಲಂಕ ಮಮೇಯಮಾದ್ಯಂ |
ಮರ್ತ್ಯಾಕೃತಿಂ ರಘುಪತಿಂ ಶರಣಾಗತೋಸ್ಮಿ ||

ಆನಂದವೆಂಬ ನಂದನವನದಲ್ಲಿರುವವನೂ, ಅಂದರೆ ನಿತ್ಯಾನಂದನೂ, ಕೆಂಪು ತುಟಿಗಳಿಂದ ಕೂಡಿರುವವನೂ, ಕಮಲಾಕ್ಷನೂ, ಪೀತಾಂಬರಧಾರಿಯೂ, ಕರಿ ಅಗಸೆ ಹೂವಿನಂತೆ ನೀಲವಾದ ಕಾಂತಿಯುಳ್ಳವನೂ, ಅಕಾರಾದಿ ಕ್ಷಕಾರಾಂತ ವರ್ಣಗಳಿಗೆ ಅಧಿದೇವತೆಯೂ, ಕಳಂಕರಹಿತನೂ, ಅಳತೆಗೆ ಸಿಕ್ಕದವನೂ, ಸರ್ವಾಧಾರನೂ, ಮಾನುಷ ರೂಪಧಾರಿಯೂ ಆದ ರಘುಪತಿಯನ್ನು ಶರಣು ಹೊಂದುತ್ತೇನೆ.

ರಾಕಾಚಂದ್ರನಿಭಾನನಂ ರತಿಪತಿದ್ವೇಷಿಪ್ರಿಯಂ ರಾಕ್ಷಸಾ |
ಧೀಶಗ್ರೀವವಿಭೇದನ ಸ್ಫುಟಪಟು ಪ್ರಖ್ಯಾತ ಬಾಣೋಜ್ಜ್ವಲಂ |
ರತ್ನಾಲಂಕೃತ ಪಾದುಕಾಂಚಿತ ಪದಾಂಭೋಜಂ ರಮಾವಲ್ಲಭಂ |
ರಾಗದ್ವೇಷ ವಿಹೀನಚಿತ್ತ ಸುಲಭಂ ರಾಮಂ ಭಜೇ ತಾರಕಂ ||

ಪೂರ್ಣಚಂದ್ರ ಸದೃಶನೂ, ದುಂಡು ಮುಖವುಳ್ಳವನೂ, ಪರಮೇಶ್ವರನ ಸಖನೂ, ರಾವಣನ ತಲೆಯನ್ನು ಕತ್ತರಿಸುವುದರಲ್ಲಿ ವಿಜಯಿಗಳಾದ ಬಾಣಗಳಿಂದ-ಶೋಭಿಸುವವನೂ, ನವರತ್ನಗಳಿಂದ ಅಲಂಕೃತವಾದ ಪಾದುಕೆಗಳನ್ನು ಧರಿಸಿದ ಪಾದಕಮಲಗಳುಳ್ಳವನೂ, ಸೀತಾಪತಿಯೂ, ಸಾತ್ವಿಕವಾದ ಮನಸ್ಸಿಗೆ ಸುಲಭವಾಗಿ ಸಿಕ್ಕುವವನೂ ಆದ ತಾರಕರಾಮನನ್ನು ಭಜಿಸುತ್ತೇನೆ.

ಆ ಲೋಲ ಸ್ಫುಟರತ್ನ ಕುಂಡಲಧರಂ ಆವಿಸ್ಮಿತಾಲಂಕೃತಂ |
ಆಧಾರಾಧಿಕ ಚಕ್ರಮಂಡಲಗತಂ ಆನಂದ ಕಂದಾಂಕುರಂ |
ಆವಿರ್ಭೂತ ಕೃಪಾಂತರಂಗಜಲಧಿಂ ಅಕ್ಷಾಂತವರ್ಣಾಶ್ರಯಂ |
ಆಪನ್ನಾರ್ತಿ ನಿದಾಘಮೇಘಸಮಯಂ ರಾಮಂ ಭಜೇ ತಾರಕಂ ||

ಮನೋಹರವಾಗಿ ಪ್ರಕಾಶಿಸುವ ರತ್ನಕುಂಡಲಗಳಿಂದ ಕೂಡಿ, ಮನರಂಜಕವಾಗಿ ಅಲಂಕೃತನಾದ, ಚಂದ್ರ ಮಂಡಲದವರೆಗೂ ಮತ್ತು ಮೇಲಕ್ಕೂ ವ್ಯಾಪಕವಾದ ಬ್ರಹ್ಮಾಂಡಕ್ಕೆ ಆಧಾರನೂ ಆನಂದಕ್ಕೆ ಮೂಲಸ್ಥಾನನೂ ಅಂದರೆ ಆನಂದವೇ ತಾನಾಗಿರುವವನೂ, ಕೃಪಾ ಪೂರಿತವಾದ ಅಂತರಂಗದಿಂದ ಕೂಡಿದವನೂ, ಅಕಾರಾದಿ ಕ್ಷಕಾರಾಂತ ಬೀಜಾಕ್ಷರಗಳಿಗೆ ಆಶ್ರಯನೂ, ಗಾಳಿಯಿಂದ ಕೂಡಿದ ಗ್ರೀಷ್ಮ ಋತುವಿನಲ್ಲಿ ಮೇಘಗಳು ಚಲ್ಲಾಪಿಲ್ಲಿಯಾಗಿ ಓಡಿ ಹೋಗುವಂತೆ ಭಕ್ತರ ಆಪತ್ತುಗಳನ್ನು ಪರಿಹರಿಸುವವನೂ ಆದ ಶ್ರೀ ತಾರಕರಾಮನನ್ನು ಭಜಿಸುತ್ತೇನೆ.

ಸಾಕೇತಾಂತರ ತಾರಮಂಟಪ ಮಹಾಮಾಣಿಕ್ಯ ಸಿಂಹಾಸನೇ |
ತನ್ಮಧ್ಯೇಷ್ಟದಳಾಂಬುಜೇ ಸ್ಫುಟತರೇ ಚಿತ್ಕರ್ಣಿಕೇ ಸಂಸ್ಥಿತಂ |
ಸೌಮಿತ್ರ್ಯಂಬುಜ ಮಿತ್ರಸೂನು ಭರತ ಶ್ರೀವಾಯುಪುತ್ರೈಸ್ತುತಂ |
ಮುದ್ರಾಲಂಕೃತ ಪಾಣಿಸಾರಸಮುಜಂ ರಾಮಂ ಭಜೇ ತಾರಕಂ ||

ಅಯೋಧ್ಯೆಯಲ್ಲಿ, ನಕ್ಷತ್ರದೋಪಾದಿಯಲ್ಲಿ ಮಿಂಚುವ ಮಂಟಪದಲ್ಲಿ, ಮಣಿಖಚಿತ ಸಿಂಹಾಸನದ ಮಧ್ಯದಲ್ಲಿ, ಲಕ್ಷ್ಮಣ, ಸುಗ್ರೀವ, ಭರತ ಆಂಜನೇಯಾದಿಗಳಿಂದ ಸೇವಿಸಿಕೊಳ್ಳುತ್ತಿರುವ, ಮತ್ತು ಅಷ್ಟದಳಗಳುಳ್ಳ ಹೃದಯ ಕಮಲದಲ್ಲಿ ಜ್ಯೋತಿರೂಪನಾಗಿಯೂ ಚಿಚ್ಛಕ್ತಿರೂಪನಾಗಿಯೂ ಇರುವ, ಮತ್ತು ಚಿನ್ಮುದ್ರೆಯನ್ನು ಧರಿಸಿ, ಆ ಚಿಜ್ಜ್ಯೋತಿಸ್ವರೂಪವಾದ ಪರಮಾತ್ಮ ವಸ್ತುವೇ ಜೀವಾತ್ಮನೆಂದು ಬೋಧಿಸುತ್ತಿರುವ, ಓಂಕಾರಕ್ಕೆ ಅಧಿದೈವ ವಾದ ತಾರಕ ರಾಮನನ್ನು ಭಜಿಸುತ್ತೇನೆ.

ಅಜ್ಞಾನ ಗಾಢ ತಿಮಿರಾಪಹ ಭಾನುಮೂರ್ತಿಂ |
ಆರಕ್ತ ಚಾರುನಯನಾಂಬುಜಮಾದಿಬೀಜಂ |
ಅಂಭೋಧಿ ಮಧ್ಯ ವಟಪತ್ರ ಶಯಾನಮಾದಿ |
ಮಧ್ಯಾಂತ ಶೂನ್ಯಮಖಿಲಾಸ್ಪದ ರಾಮಚಂದ್ರಂ ||

ಅಜ್ಞಾನವೆಂಬ ಗಾಢಾಂಧಕಾರಕ್ಕೆ ಸೂರ್ಯನಂತಿರುವ, ಅಂದರೆ ಯಾರನ್ನು ಧ್ಯಾನ ಮಾಡಿದರೆ ಆತ್ಮಜ್ಞಾನ ಉಂಟಾಗಿ ಮೋಕ್ಷ ಸಿಕ್ಕುವುದೋ ಅಂತಹ ಮೂರ್ತಿಯಾದ, ಪ್ರಪಂಚದ ಉತ್ಪತ್ತಿಗೆ ಮೂಲಕಾರಣನಾದ, ಎಳೆಗೆಂಪಿನ ಮನೋಹರವಾದ ಕಣ್ಣುಗಳುಳ್ಳ, ಕ್ಷೀರಸಮುದ್ರದ ಮಧ್ಯದಲ್ಲಿ ವಟಪತ್ರಶಾಯಿಯಾಗಿ ಶೋಭಿಸುವ, ಆದಿ, ಮಧ್ಯ, ಅಂತ್ಯಗಳೊಂದೂ ಇಲ್ಲದ, ಸಮಸ್ತ ಭಕ್ತರುಗಳಿಗೂ ಆಶ್ರಯ ಕೊಡುವ, ಅಂದರೆ ತನ್ನನ್ನಾಗಿಯೇ ಮಾಡಿಕೊಳ್ಳುವ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ನಾದಂ ನಾದವಿಲೀನಚಿತ್ತರಮಣಂ ನಾದಾಂತ ತತ್ವಪ್ರಿಯಂ |
ನಾಮಾಕಾರ ವಿವರ್ಜಿತಂ ನವಘನಶ್ಯಾಮಾಂಗ ನಾದಪ್ರಿಯಂ |
ನಾದಾಂಭೋಜ ಘರಾಗ ಮತ್ತ ವಿಲಸದ್ಭೃಂಗಂ ಮದಂತಃಸ್ಥಿತಂ |
ನಾದಾಂತ ಧ್ರುವಮಂಡಲಾಬ್ಜರುಚಿರಂ ರಾಮಂ ಭಜೇ ತಾರಕಂ ||

ಟಿಪ್ಪಣಿ :—ಯಾರು, ಶರೀರದಲ್ಲಿ ಅನಾಹತ ಚಕ್ರದಲ್ಲಿ ನಾದಬ್ರಹ್ಮನಾಗಿರುವನೋ, ಯಾವ ಯೋಗಿಯು ಪ್ರಾಣಾಯಾಮ ಪೂರ್ವಕವಾಗಿ ಧ್ಯಾನ ಬಲದಿಂದ ಅನಾಹತ ಚಕ್ರದಲ್ಲಿನ ಪ್ರಣವನಾದವನ್ನು ತನ್ನ ಅಂತರ್ಮುಖದಲ್ಲಿ ಕೇಳುವಂತೆ ಮಾಡಿಕೊಂಡು ಅದನ್ನು ಆಜ್ಞಾಚಕ್ರದಲ್ಲಿನ 'ಮ'ಕಾರ ರೂಪಾತ್ಮಕ ಪರಮಾತ್ಮನಲ್ಲಿ ಅಂತ್ಯಗೊಳಿಸುವನೋ, ಅಂತಹ ಯೋಗಿಯು ವಿಲೀನಚಿತ್ತದಲ್ಲಿ ರಮಿಸಲು ಯಾರು ಇಚ್ಛಿಸುವರೋ, ಯಾವ ಯೋಗಿಯು ತಾನು ನಾದಾಂತವಾದ ಆಜ್ಞಾಚಕ್ರದಲ್ಲಿ ಮೇಲೆ ಹೇಳಿದಂತೆ ವಿಲೀನಚಿತ್ತನಾಗಿ ಜೀವ ಭಾವವನ್ನು ಬಿಟ್ಟು ಕಳಾರೂಪದಿಂದ ಸಹಸ್ರಾರಚಕ್ರಕ್ಕೆ ಹೋಗಿ ಅಲ್ಲಿ ಅಭೇದ ಐಕ್ಯನಾಗುವನೋ, ಅಂತಹ ಐಕ್ಯತೆಯೆಂಬ ನಾದಾಂತ ತತ್ವದಲ್ಲಿ ಯಾರು ಪ್ರಿಯನಾಗಿರುವನೋ, ಯಾರು ನಾಮರೂಪಗಳಿಲ್ಲದೆ ನಿರ್ಗುಣಬ್ರಹ್ಮನಾಗಿರುವನೋ, ಯಾರು ನೀಲಮೇಘಶ್ಯಾಮನೋ, ಯಾರು ನಾದಬ್ರಹ್ಮವಾದ ಓಂಕಾರದಲ್ಲಿ ಸಾಕ್ಷಾತ್ಕರಿಸಿ ನಾದಪ್ರಿಯನಾಗಿರುವನೋ, ಯಾರು ಆನಂದಕ್ಕೆ ಆಶ್ರಯವಾದ ನಾದಬ್ರಹ್ಮಮಯವಾದ ಅನಾಹತಚಕ್ರದಲ್ಲಿನ ದ್ವಾದಶಾರ ಕಮಲದಲ್ಲಿ ಹತ್ತು ಸಾವಿರ ಸೂರ್ಯರಿಗೆ ಸಮಾನವಾದ ಬಾಣಲಿಂಗರೂಪದಲ್ಲಿ ಅಲ್ಲಿನ ಕಮಲದ ಪರಾಗದಲ್ಲಿ, ಮಧುಪಾನದಿಂದ ಮತ್ತನಾಗಿರುವ ಭ್ರಮರದಂತೆ ಆನಂದಮೂರ್ತಿಯಾಗಿರುವನೋ, ಯಾರು ನನ್ನ ಚಿತ್ತದಲ್ಲಿಯೇ ನೆಲಸಿರುವನೋ, ಯಾರು ನಾದಾಂತವಾದ ಆಜ್ಞಾ ಚಕ್ರದಮೇಲೆ ಧ್ರುವಮಂಡಲದೋಪಾದಿಯಲ್ಲಿ ಎಲ್ಲಾ ಚಕ್ರಗಳಿಗೂ ಮೇಲಿರುವ ಸಹಸ್ರಾರ ಕಮಲವನ್ನು ಪ್ರಕಾಶಗೊಳಿಸುತ್ತಿರುವನೋ, ಅಂತಹ ತಾರಕರಾಮನನ್ನು ಭಜಿಸುತ್ತೇನೆ.

ನಾನಾ ಭೂತ ಹೃದಾಬ್ಜ ಪದ್ಮನಿಲಯಂ ನಾಮೋಜ್ಜ್ವಲಾಭೂಷಣಂ ।
ನಾಮಸ್ತೋತ್ರ ಪವಿತ್ರಿತ ತ್ರಿಭುವನಂ ನಾರಾಯಣಾಷ್ಟಾಕ್ಷರಂ ।
ನಾದಾಂತೇಂದುಗಳತ್ಸುಧಾಪ್ಲುತತನುಂ ನಾದಾತ್ಮ ಚಿನ್ಮಾತ್ರಕಂ ।
ನಾನಾ ಕೋಟಿ ಯುಗಾಂತ ಭಾನುಸದೃಶಂ ರಾಮಂ ಭಜೇ ತಾರಕಂ ॥

ಟಿಪ್ಪಣಿ :—ಸಮಸ್ತ ಪ್ರಾಣಿಗಳ ಹೃದಯಕಮಲದಲ್ಲಿ (ಅಂದರೆ ಅನಾಹತ ಚಕ್ರದಲ್ಲಿ) ಓಂಕಾರ, ನಾದ ರೂಪವಾಗಿ ನೆಲಸಿರುವವನಾದ, ಶ್ರೇಷ್ಠವಾದ ತೇಜಃಪುಂಜವಾದ ನಾಮದಿಂದ ಕೂಡಿದವನಾದ, ತನ್ನ "ಓಂನಮೋ ನಾರಾಯಣಾಯ" ಎಂಬ ಅಷ್ಟಾಕ್ಷರೀ ಮಂತ್ರದಿಂದ ಮೂರು ಲೋಕಗಳನ್ನೂ ಪವಿತ್ರಗೊಳಿಸುವವನಾದ, ಜೀವ ರೂಪದಿಂದ ಮುಮುಕ್ಷುವಾಗಿ ವರ್ತಿಸುತ್ತಾ, ತನ್ನ ಧ್ಯಾನಾಭ್ಯಾಸ ಬಲದಿಂದ ತನ್ನ ಜ್ಞಾನ ಶ್ರೋತ್ರಕ್ಕೆ ಅನಾಹತ ಚಕ್ರದಲ್ಲಿ ಓಂಕಾರನಾದವು ಕೇಳಿಬರಲಾಗಿ, ಆನಾದಾನುಸಂಧಾನವನ್ನು ಮುಂದುವರಿಸುತ್ತಾ, ನಾದಾಂತವಾದ ಆಜ್ಞಾಚಕ್ರಕ್ಕೆ ಹೋಗಿ, ಅಲ್ಲಿ ಸಹಸ್ರಾರ ಚಕ್ರದಲ್ಲಿನ ಸಹಸ್ರಾರ ಕಮಲದ ಚಂದ್ರಮಂಡಲದಿಂದ ತಂಪಾದ ಅಮೃತಧಾರೆಯು ಸುರಿಯಲು, ಆ ವೃಷ್ಟಿಯನ್ನು ಅನುಭವಿಸುತ್ತಾ ಯಾರು ಜೀವಭ್ರಾಂತಿಯನ್ನು ಬಿಟ್ಟು ಸಂತುಷ್ಟನಾಗುವನೋ, ಯಾರು ಓಂಕಾರನಾದಕ್ಕೆ ಬೀಜಭೂತನೋ, ಯಾರು ಚಿನ್ಮಾತ್ರಕನೆಂದರೆ ಜ್ಞಾನ ಮುದ್ರಾಸ್ವರೂಪನೋ, ಅಂದರೆ, ಜ್ಞಾನೇಂದ್ರಿಯಗಳನ್ನು ಬಂಧಿಸುವದರ ಮೂಲಕ, ಅವಿದ್ಯೆಯ ವೃತ್ತಿಗಳನ್ನು ಕಟ್ಟಿಹಾಕಿ, ಅಂತರ್ಮುಖದ ತೇಜಸ್ಸು ಮತ್ತು ಅಂತರ್ಮುಖದ ಓಂಕಾರ ನಾದ, ಇವುಗಳು ಉದ್ಬುದ್ಧವಾಗಲು "ಸೋಹಂ" ಭಾವದಿಂದ ಕೂಡಿ, ಧ್ಯಾನಮಾಡಲು ಸಹಾಯ ಮಾಡತಕ್ಕ ಮುದ್ರೆಯಾದ ಚಿನ್ಮುದ್ರಾತ್ಮಕನಾಗಿ, ಯಾರು ಇರುವನೋ, ಅಥವಾ, ಯಾರು ಸಮಸ್ತ ಪ್ರಾಣಿಗಳಲ್ಲೂ ಸಾಕ್ಷಿಯಾಗಿ ಪ್ರಕಾಶಿಸುತ್ತಿರುವನೋ, ಯಾರು ಕೋಟಿ, ಕೋಟಿ ಯುಗಗಳ ಅಂತ್ಯಗಳಲ್ಲೂ ಪ್ರಕಾಶಿಸುವ ಸೂರ್ಯಸದೃಶ ತೇಜಸ್ಸಿನಿಂದ ಕೂಡಿರುವನೋ, ಅಂತಹ ತಾರಕಬ್ರಹ್ಮನಾದ ಶ್ರೀರಾಮನನ್ನು ಭಜಿಸುತ್ತೇನೆ.

ಖಶ್ಯಾಮಂ ಖಗವಾಹನಂ ಖರರಿಪುಂ ಖದ್ಯಾದಿ ಭೂತಾತ್ಮಕಂ ।
ಖಾತೀತಂ ಖಗಮಂತ್ರ ತತ್ಪರಪದಂ ಖದ್ಯೋತ ಕೋಟ್ಯುಜ್ಜ್ವಲಂ ।
ಖಾವಾಚ್ಯಂ ಖಗಮಂಡಲೋಪರಿನುತಂ ಖರ್ಪಾಟ ಶೃಂಗಾಲಯಂ ।
ಖಾಗಾರ್ಯಂಚ ಖರಂಧ್ರ ಪೀಠನಿಲಯಂ ರಾಮಂ ಭಜೇ ತಾರಕಂ ॥

ನೀಲಾಕಾಶದಂತೆ ನೀಲವರ್ಣನೂ, ಗರುಡವಾಹನನೂ, ಖರಾದಿ ರಾಕ್ಷಸ ಶತ್ರುವೂ, ಪೃಥಿವಿ, ಅಪ್ಪು, ತೇಜ, ವಾಯು, ಆಕಾಶಾದಿ, ಸೂಕ್ಷ್ಮ, ಸ್ಥೂಲ ಪಂಚಭೂತಾತ್ಮಕನೂ ಮತ್ತು ಅವುಗಳಿಗೂ ಅತೀತನೂ, ಸೂರ್ಯಮಂತ್ರ ಧ್ಯಾನಪರನೂ ಕೋಟಿಸೂರ್ಯಪ್ರಕಾಶನೂ, ಬಯಲು ಮಾತಿನವನಲ್ಲದೆ, ಕೇವಲ ಸತ್ಯವಾಚ್ಯನೂ, ಆಕಾಶದ ಮೇಲೆ ಧ್ರುವಮಂಡಲದವರೆಗೂ ಸಮಸ್ತರಿಂದ ಸ್ತುತಿಸಿಕೊಳ್ಳತಕ್ಕವನೂ, ಚಿತ್ರಕೂಟವಿಹಾರಿಯೂ, ಸೂರ್ಯ ವಂಶೀಯರಲ್ಲಿ ಪೂಜ್ಯನೂ, ಹೃದಯಾಕಾಶನಿವಾಸಿಯೂ ಆದ ಶ್ರೀರಾಮನನ್ನು ಭಜಿಸುತ್ತೇನೆ.

ವೇದ್ಯಂ ವೇದಗುರುಂ ವಿರಿಂಚಿಜನಕಂ ವೇದಾಂತಮೂರ್ತಿಸ್ಫುರ |
ದ್ವೇದಂ ವೇದಕಲಾಪ ಮೂಲ ಮಹಿಮಾಧಾರಾಂತ ಕಂದಾಂಕುರಂ |
ವೇದಶೃಂಗಸಮಾನ ಶೇಷಶಯನಂ ಕಾಮಾರಿಮಿತ್ರಂ ಹರಿಂ |
ವೇದಾರಾಧಿತ ಪಾದಪಂಕಜಮಹಂ ರಾಮಂ ಭಜೇ ತಾರಕಂ ||

ನಾನು, ನಾನು ಎಂಬ ಪ್ರತ್ಯಯದಿಂದ ಆ ಬಾಲಗೋಪವಿದಿತನೂ, ಬ್ರಹ್ಮನ ತಂದೆಯೂ, ವೇದಾಂತದಲ್ಲಿ ಮೂರ್ತಿಮತ್ತಾಗಿ ಪ್ರತಿಪಾದಿತನೂ, ವೇದಗಳಲ್ಲಿ ಹೇಳಿರುವ ಸರ್ವಕ್ಕೂ ಆಧಾರಸ್ತಂಭನೂ ಮತ್ತು ತಾವರೆಗೆಡ್ಡೆಯ ಮೊಳಕೆಯಂತೆ ಬೀಜಭೂತನೂ, ವೇದಶಿರವಾದ ವೇದಾಂತಗಳಿಗೆ ಸಮಾನವಾದ ಆದಿಶೇಷನಮೇಲೆ ಮಲಗಿರುವವನೂ, ವೇದಗಳಿಂದ ಪೂಜಿತವಾದ ಪಾದಕಮಲಗಳುಳ್ಳವನೂ, ಈಶ್ವರಸಖನೂ, ವಿಷ್ಣುಸ್ವರೂಪಿಯೂ ಆದ ತಾರಕಬ್ರಹ್ಮನನ್ನು ನಾನು ಭಜಿಸುತ್ತೇನೆ.

ಮಜ್ಜೀವಂ ಮದನುಗ್ರಹಂ ಮದಧಿಪಂ ಮದ್ಭಾವಮಂತಸ್ಸುಖಂ |
ಮತ್ತಾತಂ ಮಮಸದ್ಗುರುಂ ಮಧುಕರಂ ಮೋಹಾಂಧ ವಿಚ್ಛೇದನಂ |
ಮತ್ಪುಣ್ಯಂ ಮದನೇಕ ಬಾಂಧವಜನಂ ಮಜ್ಜೀವನಂ ಮನ್ನಿಧಿಂ |
ಮತ್ಸಿದ್ಧಿಂ ಮಮಸರ್ವಕರ್ಮಸುಕೃತಂ ರಾಮಂ ಭಜೇ ತಾರಕಂ ||

ನನ್ನ ಜೀವವಾದ, ನನಗೆ ಅನುಗ್ರಾಹಕನೂ ನನ್ನ ಒಡೆಯನೂ ನನ್ನ ಹೃದಯದ ಭಾವನೆಗಳಿಲ್ಲಿ ಸೌಖ್ಯದಾತೃವೂ, ನನ್ನ ತಂದೆಯೂ, ನನ್ನ ಗುರುವೂ, ಆಹ್ಲಾದಕರನೂ, ಮೋಹವೆಂಬ ಕತ್ತಲೆಯನ್ನು ಭೇದಿಸತಕ್ಕವನೂ, ನನ್ನ ಪುಣ್ಯಮೂರ್ತಿಯೂ ಆದ ನನ್ನ ಏಕೈಕಬಂಧುವಾದ, ನನ್ನ ಜೀವನವೇ ಆಗಿರುವ, ನನ್ನ ಸಂಪತ್ತೂ, ನನ್ನ ಸಮಸ್ತ ಪುಣ್ಯಕಾರ್ಯಗಳ ಸಿದ್ಧಿಯೂ ಆದ, ತಾರಕಬ್ರಹ್ಮನಾದ ಶ್ರೀರಾಮನನ್ನು ಭಜಿಸುತ್ತೇನೆ.

ನಿತ್ಯಂ ನೀರಜಲೋಚನಂ ನಿರುಪಮಂ ನೀವಾರಶೂಕೋಪಮಂ |
ನಿರ್ಭೇದಾನುಭವಂ ನಿರಂತರಗುಣಂ ನೀಲಾಂಗರಾಗೋಜ್ಜ್ವಲಂ |
ನಿಷ್ಪಾಪಂ ನಿಗಮಾಗಮಾರ್ಚಿತಪದಂ ನಿತ್ಯಾತ್ಮಕಂ ನಿರ್ಮಲಂ |
ನಿಷ್ಪುಣ್ಯಂ ನಿಖಿಲಂ ನಿರಂಜನಪದಂ ರಾಮಂ ಭಜೇ ತಾರಕಂ ||

ನಿತ್ಯನೂ, ಕಮಲಾಕ್ಷನೂ, ಅಸದೃಶಮೂರ್ತಿಯೂ, ಸದೃಶವನ್ನು ಹೇಳಲು ಹೊರಟರೆ, ಹುಲ್ಲುಬೀಜವನ್ನೋ ಅಥವಾ ಬೆಳ್ಳುಳ್ಳಿಯನ್ನೋ ಬಿಡಿಸುತ್ತಾ ಹೋದರೆ ಕೊನೆಗೆ ಏನೂ ಉಳಿಯದಂತೆ ಹೇಗೆ ಆಗುವುದೋ ಹಾಗೆ ಸಾದೃಶ್ಯವು ಸಿಕ್ಕದೆ ಇರುವವನೂ, ಭೇದಿಸಲು ಅಸಾಧ್ಯವಾದ ಅನುಭವವುಳ್ಳವನೂ, ವೇದಾದಿಗಳಿಂದ ಪೂಜಿತವಾದ ಪಾದಗಳುಳ್ಳವನೂ, ಶಾಶ್ವಿತನೂ, ಪರಿಶುದ್ಧನೂ, ಪಾಪ, ಪುಣ್ಯಗಳ ಸಂಬಂಧವಿಲ್ಲದವನೂ ಅಂದರೆ ಯಾವ ಕರ್ಮಗಳ ಸೋಂಕೂ ಇಲ್ಲದವನೂ, ವಿಶ್ವರೂಪನೂ, ಮೋಕ್ಷಸ್ಥಾನವೂ ಆದ ತಾರಕಬ್ರಹ್ಮನನ್ನು ಭಜಿಸುತ್ತೇನೆ.

ಸತ್ಯಂ ಜ್ಞಾನಮನಂತಮಚ್ಯುತಮಜಂ ಅವ್ಯಾಕೃತಂ ತತ್ಪರಂ |
ಕೂಟಸ್ಥಾದಿ ಸಮಸ್ತ ಸಾಕ್ಷಿಮನಘಂ ಸಾಕ್ಷಾದ್ವಿರಾಟ್ತತ್ತ್ವದಂ |
ವೇದ್ಯಂ ವಿಶ್ವಮಯಂಚಲೀನ ಭವನ ಸ್ವರಾಜ್ಯ ಸೌಖ್ಯಪ್ರದಂ |
ಪೂರ್ಣಂ ಪೂರ್ಣತರಂ ಪುರಾಣ ಪುರುಷಂ ರಾಮಂ ಭಜೇ ತಾರಕಂ ||

ಸಚ್ಚಿದಾನಂದಸ್ವರೂಪನೂ, ಅಗೋಚರನೂ, ನಾಶರಹಿತನೂ, ಪರಬ್ರಹ್ಮನೂ, ಕೂಟಸ್ಥನೂ (ಅಂದರೆ ನಿರ್ವಿಕಾರನೂ), ಸಾಕ್ಷಿಯೂ (ಅಂದರೆ ರಾಗದ್ವೇಷಗಳಿಲ್ಲದೆ ದೇಹಾದಿಗಳಲ್ಲಿ ಉದಾಸೀನನೂ, ಸಮೀಪವರ್ತಿಯೂ, ಚೇತನನೂ ಆಗಿ ಅಚೇತನವಸ್ತುಗಳನ್ನು ಪ್ರಕಾಶಮಾಡುತ್ತಾ, ಪ್ರಾಣಿಕರ್ಮಗಳ ದ್ರಷ್ಟಾರನಾದವನೂ), ಪಾಪ ರಹಿತನೂ, ವಿರಾಡ್ರೂಪಿಯೂ, 'ತತ್ತ್ವಮಸೀ' ಮಹಾವಾಕ್ಯದ ತತ್‌ಪದದಿಂದ ವ್ಯವಹರಿಸಲ್ಪಡತಕ್ಕವನೂ, ಸರ್ವವ್ಯಾಪಿಯೂ, ಆತ್ಮಜ್ಞಾನೋತ್ಪತ್ತಿಯಾಗಿ, ಮನೋಲಯ, ತನ್ಮೂಲಕ ಪ್ರಪಂಚ ಲಯವಾದಾಗ ಬ್ರಹ್ಮಾನಂದ ಕೊಡತಕ್ಕವನೂ ಆದ, ಸಮಸ್ತರಲ್ಲೂ ಪೂರ್ಣನಾಗಿ ತುಂಬಿರುವವನೂ, ಅಂದರೆ, ಎಲ್ಲೆಲ್ಲೂ ಕಾಣುವುದೆಲ್ಲಾ ಕೇವಲ ಮಾಯಿಕ, ಎಲ್ಲೆಡೆಯಲ್ಲಿರುವುದೂ ಬ್ರಹ್ಮವಸ್ತುವೇ, ಹೀಗೆ ಪೂರ್ಣವೆಂದು ತೋರಿ ಕೊಳ್ಳುವವನೂ ಆದ, ಮಾಯೆಗಿಂತಲೂ ಸೂಕ್ಷ್ಮನಾದವನೂ ಆದಿಪುರುಷನೂ ಆದ, ತಾರಕಬ್ರಹ್ಮನಾದ ಶ್ರೀರಾಮ ನನ್ನು ಭಜಿಸುತ್ತೇನೆ.

ರಾಮಂ ರಾಕ್ಷಸವಂಶನಾಶನಕರಂ ರಾಕೇಂದು ಬಿಂಬಾನನಂ |
ರಕ್ಷೋರಿಂ ರಘುವಂಶ ವರ್ಧನಕರಂ ರಕ್ತಾಧರಂ ರಾಘವಂ |
ರಾಕಾಚಂದ್ರನಿಭಾನನಂ ರವಿನಿಭಂ ರಮ್ಯಂ ರಮಾನಾಯಕಂ |
ರಂಧ್ರಾಂತರ್ಗತಶೇಷ ಶಾಯಿನಮಹಂ ರಾಮಂ ಭಜೇ ತಾರಕಂ ||

ರಾಕ್ಷಸವಂಶನಾಶಕನೂ, ಪೂರ್ಣಚಂದ್ರಸದೃಶ ದುಂಡು ಮುಖ ಉಳ್ಳವನೂ, ರಾಕ್ಷಸಶತ್ರುವೂ, ರಘು ವಂಶಾಭಿವೃದ್ಧಿಕರನೂ, ಕೆಂಪುತುಟಿಯುಳ್ಳವನೂ, ಪೂರ್ಣಚಂದ್ರಮುಖನೂ, ಸೂರ್ಯಸದೃಶನೂ, ಮನೋಹರನೂ, ಲಕ್ಷ್ಮೀಪತಿಯೂ, ಹೃದಯಕುಹರದಲ್ಲಿ ಸುಷುಮ್ನಾ ನಾಡಿ ಎಂಬ ಆದಿಶೇಷನಮೇಲೆ ಮಲಗಿರು ವವನೂ ಆದ, ತಾರಕಬ್ರಹ್ಮನಾದ ಶ್ರೀರಾಮನನ್ನು ಭಜಿಸುತ್ತೇನೆ.

ನಿಜಾನಂದಾಕಾರಂ ನಿಗಮ ತುರಗಾರಾಧಿತ ಪದಂ |
ಪರಬ್ರಹ್ಮಾರಮ್ಯಂ ಪರಮಪದಯುಗಂ ಪಾಪಹರಣಂ |
ಕೃಪಾಪಾರಾವಾರಂ ಪರಮ ಪುರುಷಂ ಪದ್ಮನಿಲಯಂ |
ಭಜೇ ರಾಮಂ ಶ್ಯಾಮಂ ಪ್ರಕೃತಿರಹಿತಂ ನಿರ್ಗುಣಮಹಂ ||

ಆತ್ಮಾನಂದದಾಯಕನೂ, ವೇದಗಳೆಂಬ ಅಶ್ವಗಳಿಂದ ಆರಾಧಿಸಲ್ಪಟ್ಟ ಪಾದಗಳುಳ್ಳವನೂ, ಪರಬ್ರಹ್ಮನೂ, ಮೋಕ್ಷದಾಯಕನೂ, ಪಾಪನಾಶಕನೂ, ಕೃಪಾಜಲಧಿಯೂ, ಪುರುಷೋತ್ತಮನೂ, ಹೃದಯಕಮಲದಲ್ಲಿರು ವವನೂ, ಶ್ಯಾಮಲನೂ, ಮಾಯಾಸಂಬಂಧರಹಿತನೂ, ನಿರ್ಗುಣನೂ ಆದ, ಪರಬ್ರಹ್ಮನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಸನಂದನ ಮುನಿಪ್ರಿಯಂ ಸಕಲ ಶಾಸ್ತ್ರವೇದಾತ್ಮಕಂ |
ಸಮಸ್ತ ನಿಗಮಾಗಮಾ ಸ್ಫುರಿತ ತತ್ವಸಿಂಹಾಸನಂ |
ಸಹಸ್ರನಯನ ಕಮಲಜಾದ್ಯಮರಬೃಂದ ಸಂಸೇವಿತಂ |
ಸಮಷ್ಟಿ ಪುರವಲ್ಲಭಂ ದಶರಥಾತ್ಮಜಂ ಚಿಂತಯೇ ||

ಬ್ರಹ್ಮನ ಮಾನಸಪುತ್ರನಾಗಿ, ಜ್ಞಾನವೈರಾಗ್ಯ ತತ್ವೋಪದೇಶಕ್ಕೆ ಪರಮಾತ್ಮನಿಂದ ಆಜ್ಞಾಪಿಸಲ್ಪಟ್ಟ ಸನಂದನ ಮುನಿಗೆ ಪ್ರಿಯನಾದ, ಸಕಲಶಾಸ್ತ್ರ ಮತ್ತು ವೇದಗಳ ರೂಪದಿಂದ ಇರುವವನೂ, ಸಮಸ್ತ ವೇದ ಮತ್ತು ಆಗಮಗಳಿಂದ ಪ್ರಕಾಶಿಸಲ್ಪಟ್ಟ ತತ್ವಗಳಿಂದ ಶೋಭಿತನೂ, ಇಂದ್ರ, ಬ್ರಹ್ಮ ಮುಂತಾದ ದೇವತೆಗಳಿಂದ ಸೇವಿತನೂ, ಸಮಷ್ಟಿಯೆಂದರೆ ನಾಮರೂಪ ಪ್ರಪಂಚ, ಇದಕ್ಕೆ ಒಡೆಯನಾದ, ತಾರಕಬ್ರಹ್ಮನಾದ, ದಶರಥ ಪುತ್ರನಾದ ಶ್ರೀರಾಮಚಂದ್ರನನ್ನು ಧ್ಯಾನಿಸುತ್ತೇನೆ.

ರಾಮ ಯೋಗ ಖಂಡ

ಯೋಗಗಮ್ಯ ರಾಮ ಸ್ತೋತ್ರ

ಮೂಲಾದಿ ಷಟ್ಸರಸಿಜಾಂತ ಸಹಸ್ರ ಪದ್ಮ ।
ಪತ್ರಾಂತರಾಳನಿಲಯಂ ಭವಬಂಧನಾಶಂ ।
ನಾದಾಂತ ಚಂದ್ರಗಳಿತಾಮೃತ ಸಿಕ್ತರೂಪಂ ।
ನಾದಾಂತನಾದ ಮಹಿಮಾಸ್ಪದ ರಾಮಮೀಳೇ ॥

ಟಿಪ್ಪಣಿ :– ನಮ್ಮ ಶರೀರದಲ್ಲಿ ಸೊಂಟದ ಕೆಳಭಾಗದಿಂದ ಶಿರಸ್ಸಿನವರೆಗೂ ಇರುವ (1) ಮೂಲಾಧಾರ, (2) ಸ್ವಾಧಿಷ್ಠಾನ, (3) ಮಣಿಪೂರಕ, (4) ಅನಾಹತ, (5) ವಿಶುದ್ಧಿ, (6) ಆಜ್ಞಾ ಎಂಬ ಷಟ್ಚಕ್ರಗಳಲ್ಲಿರುವ ಕಮಲದಳಗಳಲ್ಲಿ ಬೀಜಾಕ್ಷರಗಳ ರೂಪದಿಂದ ಅಕ್ಷರಶಕ್ತಿಯಾಗಿರುವ, ಅಲ್ಲದೆ ಓಂಕಾರ ಬೀಜಾಕ್ಷರಗಳಾದ, ಅಕಾರ, ಉಕಾರ, ಮಕಾರಗಳನ್ನು ಮೂಲಾಧಾರ, ಅನಾಹತ, ಆಜ್ಞಾಚಕ್ರಗಳಲ್ಲಿ ಹೊಂದಿ, ತದ್ರೂಪವಾಗಿ ಗೋಚರಿಸುವ, ಶಿರಸ್ಸಿನಲ್ಲಿರುವ ಏಳನೆಯದಾದ ಸಹಸ್ರಾರ ಚಕ್ರದಲ್ಲಿ ಚಿಜ್ಜ್ಯೋತಿಯಾಗಿ ಓಂಕಾರಸ್ವರೂಪವಾಗಿ ಕಾಣುವ, ಮೂಲಾಧಾರ ಚಕ್ರದಲ್ಲಿ ಕುಂಡಲಿನೀ ಶಕ್ತಿಯಾಗಿ ಸ್ಫುರಿಸುವ, ಹೀಗೆ ಮೂಲಾಧಾರವೇ ಆದಿಯಾಗಿ ಷಟ್ಚಕ್ರಗಳಲ್ಲಿಯೂ, ಕೊನೆಯದಾದ ಸಹಸ್ರಾರ ಚಕ್ರದಲ್ಲಿಯೂ ನೆಲಸಿರುವ, ಜನನ, ಮರಣ, ಸಂಸಾರ ಶೃಂಖಲೆಗಳನ್ನು ನಾಶಪಡಿಸುವ ಮತ್ತು ಯೋಗಿಗೆ ತನ್ನ ಧ್ಯಾನಾಭ್ಯಾಸ ಬಲದಿಂದ ಅಂತರ್ಮುಖದಲ್ಲಿ ಅನಾಹತ ಚಕ್ರದಲ್ಲಿ ಪ್ರಣವನಾದವು ಗೋಚರವಾಗಿ ಅದರ ಅನುಸಂಧಾನದಲ್ಲಿ ಅವನು ಮುಂದುವರಿವಾಗ, ಆ ನಾದಕ್ಕೆ ಆಜ್ಞಾಚಕ್ರದಲ್ಲಿ ಅಂತ್ಯವಾಗಲು ಅಂದರೆ ನಾದಾಂತವಾಗಲು, ಆತನು ಪರಬ್ರಹ್ಮನಲ್ಲಿ ಸಹಸ್ರಾರ ಚಕ್ರದಲ್ಲಿ ಅಭೇದವಾಗಿ ಐಕ್ಯವಾಗುವ ದೆಶೆಯಲ್ಲಿ, ಆ ಸಹಸ್ರಾರ ಚಕ್ರದ ಚಂದ್ರಮಂಡಲದಿಂದ ಅಮೃತರಸವು ಸ್ರವಿಸಲು, ಆ ಅಮೃತಸೇಚನೆಯಿಂದ ಆ ಯೋಗಿಯ ದೇಹವು ಶ್ವೇತವರ್ಣವಾಗಿ ಶೋಭಿಸಲು, ಅಂತಹ ಯೋಗಿಯು ಜೀವರೂಪನಾಗಿ ಕಾಣುವ, ಅಲ್ಲದೆ, ನಾದಬ್ರಹ್ಮಮಯವಾದ ಅನಾಹತ ಚಕ್ರದಲ್ಲೂ, ನಾದಾಂತವಾದ ಆಜ್ಞಾಚಕ್ರದಲ್ಲಿಯೂ, ತನ್ನ ಹಿರಿಮೆಯನ್ನು ಚೆನ್ನಾಗಿ ವ್ಯಕ್ತಪಡಿಸುವ, ಅಂದರೆ, ಅನಾಹತ ಚಕ್ರದಲ್ಲಿ ಯೋಗಿಯು ಪ್ರಾಣವನ್ನೇ ಪ್ರಣವ ಸ್ವರೂಪವನ್ನಾಗಿ ಮಾಡುವ, ಮತ್ತು ಆಜ್ಞಾಚಕ್ರದಲ್ಲಿ ಜೀವನನ್ನು ಪರಬ್ರಹ್ಮನೊಡನೆ ಅಭೇದವಾಗಿ ಐಕ್ಯಗೊಳಿಸಲು ಸಿದ್ಧಪಡಿಸುವ ತಾರಕಬ್ರಹ್ಮನಾದ ಶ್ರೀರಾಮನನ್ನು ಸ್ಮರಿಸುತ್ತೇನೆ.

ಮೂಲಾಧಾರಧನಂಜಯ ಸ್ಫುಟಪಟುಜ್ವಾಲಾ ಸಮಾಲಿಂಗಿತಂ ।
ಮೂರ್ಧನ್ಯಾಂತಿ ಶಶಾಂಕ ಮಂಡಲಗತಿಂ ಕ್ಷೀರಾಭಿಷೇಕಪ್ರಿಯಂ ।
ಪ್ರಖ್ಯಾತೈಸ್ತ್ರಿಗುಣೈರ್ಜನಾಧಿಪಗಣೈಃ ಶಾಖಾಮೃಗೈಸ್ಸೇವಿತಂ ।
ಮುಕ್ತಾ ಶೋಭಿತಮೌಳಿಭಿರ್ಮುನಿವರೈರಾರಾಧಿತಂ ಭಾವಯೇ ॥

ಟಿಪ್ಪಣಿ :–ಯೋಗಿಯು ತನ್ನ ಪ್ರಾಣಾಯಾಮ ಬಲದಿಂದಲೂ, ಜಾಲಂಧರ, ಓಡ್ಯಾಣ ಮೊದಲಾದ ಮುದ್ರೆಗಳ ಪ್ರಭಾವದಿಂದಲೂ, ತನ್ನ ಧ್ಯಾನಾಭ್ಯಾಸ ಬಲದಿಂದಲೂ, ಓಂಕಾರದ, ಅಕಾರ, ಉಕಾರ, ಮಕಾರ ತತ್ವಗಳಾದ (1) ಮೂಲಾಧಾರ ಚಕ್ರದಲ್ಲಿ ಗಾರ್ಹಪತ್ಯಾಗ್ನಿಯನ್ನೂ (ಓಂಕಾರದಲ್ಲಿನ ಅಕಾರ), (2) ಅನಾಹತ ಚಕ್ರದಲ್ಲಿ ದಾಕ್ಷಿಣಾಗ್ನಿಯನ್ನೂ (ಓಂಕಾರದಲ್ಲಿನ ಉಕಾರ), (3) ಆಜ್ಞಾಚಕ್ರದಲ್ಲಿ ಆಹವನೀಯಾಗ್ನಿಯನ್ನೂ (ಓಂಕಾರದಲ್ಲಿನ ಮಕಾರ) ಪ್ರಜ್ವಲಿಸಲಾಗಿ ಆ ಅಗ್ನಿಗಳೆಲ್ಲಾ ಏಕೀಭವಿಸಿ, ಶರೀರದ ಶಿರಸ್ಥಾನದಲ್ಲಿರುವ ಸಹಸ್ರಾರ

ಚಕ್ರದ ಬ್ರಹ್ಮಾಗ್ನಿಯನ್ನು (ಅಂದರೆ ಪರಬ್ರಹ್ಮಸ್ವರೂಪವಾದ ಓಂಕಾರವನ್ನು) ಸೇರುವುವು. ಅಂದರೆ ನಾನು ಬೇರೆ, ಪರಬ್ರಹ್ಮ ಬೇರೆ ಎಂಬ ಭೇದಜ್ಞಾನ ಹೋಗಿ, ನಾನೇ ಪರಬ್ರಹ್ಮನೆಂಬ ಅಭೇದ ಐಕ್ಯಜ್ಞಾನ ಸಂಭವಿಸುವುದು. ಹೀಗೆ ಮೂಲಾಧಾರಾದಿಗಳಲ್ಲಿನ ಅಗ್ನಿಗಳ ಪ್ರಜ್ವಲನದಿಂದ, ಸಹಸ್ರಾರದಲ್ಲಿರುವ ಪರಬ್ರಹ್ಮನು ಆಲಂಗಿಸಲ್ಪಡುವನು. ಹೀಗೆ ಈ ಅಗ್ನಿಗಳು ಸಹಸ್ರಾರ ಕಮಲದಲ್ಲಿ ಸೇರಲು, ಇವುಗಳ ಶಾಖದಿಂದ ಆ ಕಮಲದ ಚಂದ್ರಮಂಡಲದಲ್ಲಿ ಘನೀಭೂತವಾಗಿದ್ದ ಅಮೃತವು ಕರಗಿ, ಸ್ರವಿಸುವುದು. ಅಂತಹ ಅಮೃತಧಾರಾಭಿಷೇಚನದಿಂದ ತೃಪ್ತನಾಗುವನಾದ, ತ್ರಿಗುಣಾತ್ಮಕವಾದ ಮಾಯೆಯ ಉಪಾಧಿಯಿಂದ ತಾನು ನಿರ್ಗುಣನಾದರೂ, ಸಕಲ ಗುಣಗಳಿಂದ ಶೋಭಿಸುವ, ಪರಬ್ರಹ್ಮವಸ್ತುವಾದ, ರಾಜರುಗಳಲ್ಲಿ ಪ್ರಖ್ಯಾತನಾದ, ಕಪಿವರರಿಂದ ಸೇವಿತನಾದ, ಮಾಣಿಕ್ಯ ಕಿರೀಟಗಳಿಂದ ಶೋಭಿಸುತ್ತಿರುವ, ಮುನಿವರರಿಂದ ಆರಾಧಿಸಲ್ಪಡುತ್ತಿರುವ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ತಾರಾಕಾರ ವಿಮಾನ ಮಧ್ಯನಿಲಯಂ ತತ್ವತ್ರಯಾರಾಧಿತಂ |
ತತ್ರಾಧೀಶ್ವರ ಯೋಗಿ ನಿರ್ಗುಣ ಮಹಾಸಿದ್ಧೈಸ್ಸಮಾರಾಧಿತಂ |
ತತ್ಸಂಗಂ ತರುಣೇಂದುಶೇಖರಸಖಂ ತಾರಾತ್ರಯಾಂತರ್ಗತಂ |
ತಪ್ತಸ್ವರ್ಣ ಕಿರೀಟ ಕುಂಡಲಯುಗಂ ರಾಮಂ ಭಜೇ ತಾರಕಂ ||

ಟಿಪ್ಪಣಿ :–ಶರೀರದಲ್ಲಿ ಮೂಲಾಧಾರ ಚಕ್ರ ಮೊದಲ್ಗೊಂಡು ಆಜ್ಞಾಚಕ್ರದವರೆವಿಗೆ ಪ್ರತಿ ಚಕ್ರದ ಊರ್ಧ್ವ ಮತ್ತು ಅಧೋಭಾಗಗಳಲ್ಲಿ ಎರಡೆರಡು ಗ್ರಂಥಿಗಳಿವೆ. ಈ ಆರು ಚಕ್ರಗಳ ಹನ್ನೆರಡು ಗ್ರಂಥಿಗಳೇ ನಕ್ಷತ್ರಗಳು. ಈ ನಕ್ಷತ್ರಗಳ ಆಕಾರದಲ್ಲಿರುವ ವಿಮಾನಗಳ ಮಧ್ಯೆ ಅಂದರೆ ಮೂಲಾಧಾರದಿಂದ ಬ್ರಹ್ಮರಂಧ್ರದವರೆಗಿನ ಸುಷುಮ್ನಾ ನಾಡಿಯ ಒಳಪ್ರದೇಶದಲ್ಲಿ ಅಕಾರ, ಉಕಾರ, ಮಕಾರ ರೂಪದಲ್ಲಿರುವವನಾದ, ತತ್ವತ್ರಯಗಳು, ಅಂದರೆ ಯೋಗಿಯು ತಾನು ಜ್ಞಾನ, ಜ್ಞೇಯ, ಜ್ಞಾತೃ ಎಂಬ ತ್ರಿಪುಟೀಭಾವದಿಂದ ಕೂಡಿದ, ಸಂಪ್ರಜ್ಞಾತ ಸಮಾಧಿಯಲ್ಲಿರುವಾಗ ( ) ತನ್ನ ಪರಿಮಿತವಾದ ಮನಸ್ಸಿನಲ್ಲಿ ಆರೋಪಿಸುವ ಅಪರಿಮಿತವಾದ ಬ್ರಹ್ಮತತ್ವ, (2) ತನ್ನ ಖಂಡವಾದ ಚಿತ್ತವೃತ್ತಿಯಲ್ಲಿ ಆರೋಪಿಸುವ ಅಖಂಡ ಬ್ರಹ್ಮತತ್ವ, (3) ತನ್ನ ಖಂಡವಾದ ಚಿತ್ತವೃತ್ತಿಯಲ್ಲಿ ಆರೋಪಿಸುವ ಅಖಂಡವಾದ ಚಿತ್ತತ್ವ—ಇಂತಹ ಮೂರು ತತ್ವಗಳಿಂದ ಆರಾಧಿಸಲ್ಪಡುವವನಾದ ಮತ್ತು ಆ ಮೂರು ತತ್ವಗಳಿಗೆ ಅಧಿಷ್ಠಾತೃವಾದ, ಯೋಗಿಗಳಿಂದಲೂ ನಿರ್ಗುಣ ಬ್ರಹ್ಮೋಪಾಸಕರಾದ ಮಹಾಸಿದ್ಧರಿಂದಲೂ ಆರಾಧಿತನಾದವನೂ, ಅವರ ಸಂಗವನ್ನು ಆಶಿಸುವವನೂ, ಈಶ್ವರನ ಸಖನೂ, ಮೂರು ತಾರೆಗಳ ಒಳಗಡೆ ಇರುವ ಅಂದರೆ ಅಕಾರ, ಉಕಾರ, ಮಕಾರಗಳೆಂಬ ಮೂರು ತಾರೆಗಳಲ್ಲಿ ಅಂತರ್ಗತನಾಗಿರುವವನೂ, ಪುಟವಿಟ್ಟ ಚಿನ್ನದಿಂದ ರಚಿಸಿದ ಕಿರೀಟ ಕುಂಡಲಧಾರಿಯೂ, ತಾರಕಬ್ರಹ್ಮನೂ ಆದ ಶ್ರೀರಾಮನನ್ನು ಭಜಿಸುತ್ತೇನೆ.

ತಾರಂ ತಾರಕಮಂಡಲೋಪರಿ ಲಸಜ್ಜ್ಯೋತಿಸ್ಫುರತ್ತಾರಕಾ |
ತೀತಂ ತತ್ತ್ವಮಸೀತಿ ವಾಕ್ಯಮಹಿಮಾಧಾರಂ ತಟಿತ್ಸನ್ನಿಭಂ |
ತತ್ವಜ್ಞಾನ ಪವಿತ್ರಿತ ತ್ರಿಭುವನಂ ತಾರಾಸನಾಂತರ್ಗತಂ |
ತಾರಾಂತಧ್ರುವ ಮಂಡಲಾಬ್ಜ ರುಚಿರಂ ರಾಮಂ ಭಜೇ ತಾರಕಂ ||

ಸಂಸಾರದಿಂದ ದಾಟಿಸುವವನಾದ, ನಕ್ಷತ್ರಮಂಡಲದವರೆವಿಗೂ ಚೆನ್ನಾಗಿ ಹರಡಿರುವ ಜ್ಯೋತಿಪ್ರಭೆಯುಳ್ಳ ಮತ್ತು ಅದಕ್ಕೂ ಅತೀತವಾದ ಕಾಂತಿಯಿಂದ ಕೂಡಿದ,ಪರಮಾತ್ಮನೇ ಜೀವಾತ್ಮನೆಂಬ' ತತ್ತ್ವಮಸಿ'ಮಹಾವಾಕ್ಯಕ್ಕೆ ಹಾಗೂ "ಹಂಸ" ಮಂತ್ರಕ್ಕೆ ಆಧಾರಭೂತನಾದ, ವಿದ್ಯುತ್‌ಕಾಂತಿಯಂತೆ ಪ್ರಭಾವಶಾಲಿಯಾದ,ತತ್ವಬೋಧೆಯಿಂದ

ಮೂರು ಲೋಕಗಳನ್ನೂ ಪವಿತ್ರಮಾಡುತ್ತಾ ಪ್ರತಿ ಪ್ರಾಣಿಗಳ ಶರೀರದಲ್ಲಿ ತಾರೆಗಳಂತಿರುವ ಗ್ರಂಥಿಗಳಲ್ಲಿ ಸ್ಫುರಣೆಗೊಳ್ಳುವ, ಮತ್ತು ಅಲ್ಲಿಂದ ಮೇಲೆ ಧ್ರುವಮಂಡಲದಂತಿರುವ ಬ್ರಹ್ಮರಂಧ್ರಸ್ಥಾನದಲ್ಲಿ ಪ್ರಕಾಶಿಸುತ್ತಾ ಯೋಗಿಗಳಿಗೆ ಆನಂದವನ್ನುಂಟುಮಾಡುವ, ತಾರಕಬ್ರಹ್ಮನಾದ ಶ್ರೀರಾಮುನನ್ನು ಭಜಿಸುತ್ತೇನೆ.

ಧ್ಯಾಯೇತ್ವಾಂ ಹೃದಯಾಂಬುಜೇ ರಘುಪತಿಂ ವಿಜ್ಞಾನ ದೀಪಾಂಕುರಂ |
ಹಂಸೋ ಹಂಸ ಪರಂಪರಾದಿ ಮಹಿಮಾಧಾರಂ ಜಗನ್ಮೋಹನಂ |
ಹಸ್ತಾಂಭೋಜ ಗದಾಬ್ಜ ಚಕ್ರಮತುಲಂ ಪೀತಾಂಬರಂ ಕೌಸ್ತುಭಂ |
ಶ್ರೀವತ್ಸಂ ಪುರುಷೋತ್ತಮಂ ಮಣಿನಿಭಂ ರಾಮಂ ಹರಿಂ ತಾರಕಂ ||

ರಘುಶ್ರೇಷ್ಠನೂ, ಜೀವನ ಬುದ್ಧಿಯಲ್ಲಿ ಜ್ಯೋತಿರೂಪನಾಗಿ ಬೆಳಗುತ್ತಿರುವವನೂ, ಶರೀರದಲ್ಲಿ ಅಂತಃಕರಣದಲ್ಲಿ ಅಭಿಮಾನಿಸಿ ತಾದಾತ್ಮ್ಯವನ್ನು ಹೊಂದಿ, ಆ ಶರೀರದಲ್ಲಿ ಪ್ರಾಣವಾಯುಗಳ ರೂಪದಿಂದ ನಾಸಿಕದ್ವಾರಗಳ ಮೂಲಕ, ಇಡಾ, ಪಿಂಗಳ, ನಾಡಿಗಳಲ್ಲಿ ರೇಚಕ, ಪೂರಕವಾಗಿ, ಒಳಕ್ಕೆ, ಹೊರಕ್ಕೆ ಹೋಗುತ್ತಾ ಬರುತ್ತಾ, ಅಂದರೆ, ಹಕಾರರೂಪದಿಂದ, ಈಚಗೆ ಬರುತ್ತಾ, ಸಕಾರರೂಪದಿಂದ ಹಿಂದಕ್ಕೆ ಹೋಗುತ್ತಾ, ತನಗೆ ತಾನೇ ಹ, ಸ ಅಕ್ಷರಗಳೆರಡನ್ನೂ ಜಪಿಸಿಕೊಳ್ಳುತ್ತಾ ಹಂಸರೂಪನಾಗಿ, ಜೀವಭಾವದಿಂದಿರುವವನೂ, ಯೋಗಿಯು ತನ್ನ ಧ್ಯಾನಭ್ಯಾಸಬಲದಿಂದ, ಅಂದರೆ, ಹಂಸಮಂತ್ರಾಕ್ಷರ ಧ್ಯಾನದಿಂದ ಸ್ಥಿರತ್ವವನ್ನು ಸಂಪಾದಿಸಿ, "ಹಂಸೋಹಂಸೋ" ಎಂದು ಧಾರಾಕಾರವಾಗಿ ಉಚ್ಚರಿಸುವಲ್ಲೂ, ಹಂಸ, ಪರಂಪರೆಯ ಪರಿಣಾಮವಾಗಿ, "ಸೋಹಂ" ಅಂದರೆ ಪರಮಾತ್ಮನೇ ತಾನು ಎಂಬ ಅದ್ವೈತತತ್ವಜ್ಞಾನವನ್ನು ಹೊಂದಿ ಮೋಕ್ಷಕ್ಕೆ ಅಧಿಕಾರಿಯಾಗುವಂತೆ ಮಾಡುವಂತಹ ಮಹಿಮೆಗೆ ಆಧಾರನಾದವನೂ ಜಗನ್ಮೋಹನನೂ, ಹಸ್ತಗಳಲ್ಲಿ ಕಮಲ, ಗದೆ, ಶಂಖ, ಚಕ್ರಗಳನ್ನು ಧರಿಸಿ, ಪೀತಾಂಬರ, ಕೌಸ್ತುಭ ಶ್ರೀವತ್ಸಗಳಿಂದ ಕೂಡಿ, ವಿಷ್ಣುರೂಪನಾದವನೂ, ತಾರಕಬ್ರಹ್ಮನೂ ಆದ ರಾಮನೇ, ನಿನ್ನನ್ನು ನಾನು ನನ್ನ ಹೃದಯದಲ್ಲಿ ಧ್ಯಾನಿಸುತ್ತೇನೆ.

ಮೂಲಾಧಾರಸರೋರುಹೇ ಹುತವಹಸ್ಥಾನೇ ತ್ರಿಕೋಣಾಂತರೇ |
ಕಂದೇ ಕುಂದವಿಕಾ ಸುಷುಪ್ತಿ ಪಟಲೀ ವಾಸಾಂತವರ್ಣಾಶ್ರಯೇ |
ಬಾಲಾರ್ಕ ಪ್ರತಿಮಂ ವರಾಭಯಕರಂ ಪಾಶಾಂಕುಶಾಲಂಕೃತಂ |
ಭೂತತ್ಯಾಶ್ರಯಮಾದಿ ಪೂರುಷಮ 'ಓಂ' ರಾಮಂ ಭಜೇ ತಾರಕಂ ||

ಟಿಪ್ಪಣಿ :–ಶರೀರದಲ್ಲಿ ಸೊಂಟದ ಕೆಳಗಡೆ ಗಾರ್ಹಪತ್ಯಾಗ್ನಿಯಿಂದ ಕೂಡಿದ ತ್ರಿಕೋಣದ ಅಗ್ರಭಾಗದಲ್ಲಿ ಒಂದು ಚಕ್ರವಿದೆ. ಯೋಗಿಗಳ ಧ್ಯಾನಕ್ಕೆ ಮಾತ್ರ ಸಾಧ್ಯವಾದ ಮಾರ್ಗವನ್ನು ಹೊಂದಿರುವ ಬೆನ್ನು ಹುರಿಯೊಳಗಿರುವ ಸುಷುಮ್ನಾ ನಾಡಿಯು ಇಲ್ಲಿಂದ ಪ್ರಾರಂಭವಾಗಿ (ಮೂಲವಾಗಿ) ಶಿರಸ್ಸಿನವರೆವಿಗೆ ಹೋಗುವುದರಿಂದ ಇದನ್ನು ಮೂಲಾಧಾರಚಕ್ರವೆಂದೂ (ಅಥವಾ ಮೂಲಾಧಾರ ಪದ್ಮವೆಂದೂ) ಕರೆಯುತ್ತಾರೆ. ಈ ಪದ್ಮದ ಪದರಗಳಲ್ಲಿ ಜೀವನಿಗೆ ಆವಾರಕವಾಗಿ ಸತ್ವ, ರಜಸ್ತಮೋಗುಣಾತ್ಮಕವಾದ ಮೂಲಪ್ರಕೃತಿಯು ಕುಂಡಲಿನೀ ರೂಪದಿಂದ ಆವರಿಸಿಕೊಂಡು ಜೀವನನ್ನು ಸುಷುಪ್ತಿ ಅವಸ್ಥೆಯಲ್ಲಿ ಅಂದರೆ ನಿದ್ರಾವಸ್ಥೆಯಲ್ಲಿ ಇರುವಂತೆ ಅಂದರೆ, ಬ್ರಹ್ಮವಿಷಯದಲ್ಲಿ ಅಜ್ಞಾನಿಯಾಗಿರುವಂತೆ ಮಾಡಿ ಬಹಿರ್ವ್ಯಾಪಾರದ ಕಡೆಗೇನೇ ಅವನನ್ನು ತಿರುಗಿಸಿಬಿಟ್ಟಿರುತ್ತದೆ. ಈ ಪದ್ಮಕ್ಕೆ ನಾಲ್ಕು ದಳಗಳಿವೆ. ಅವುಗಳಲ್ಲಿ ವ, ಶ, ಷ, ಸ ಎಂಬ ನಾಲ್ಕು ಬೀಜಾಕ್ಷರಗಳು ಇವೆ. ಈ ಚಕ್ರದಿಂದ ಇನ್ನು ಎರಡು ನಾಡಿಗಳು ಸುಷುಮ್ನಾ ನಾಡಿಯು ಹೊರಗಡೆ ಎಡಕ್ಕೂ, ಬಲಕ್ಕೂ ಹೊರಡುತ್ತವೆ. ಇವುಗಳಲ್ಲಿ ಬಲಗಡೆ ಪಿಂಗಳಾ (ಬೆನ್ನು ಹುರಿಯೊಳಗಿನ ಕ್ರಿಯಾವಾಹಿನಿ, ಸೂರ್ಯನಾಡಿ ಅಥವಾ ಪುರುಷರೂಪನಾಡಿ) ನಾಡಿ ಮತ್ತು ಎಡಗಡೆ ಇಡಾ (ಚಂದ್ರನಾಡಿ ಅಥವಾ ಪ್ರಕೃತಿಸ್ವರೂಪನಾಡಿ, ಜ್ಞಾನವಾಹಿನಿ) ನಾಡಿಗಳು ಇವೆ.

ಇವು ಈ ಚಕ್ರದಿಂದ ಮೇಲ್ಗಡೆಗೆ ಭ್ರೂಮಧ್ಯೆ ಇರುವ ಆಜ್ಞಾಚಕ್ರದವರೆವಿಗೂ ಹೋಗುತ್ತವೆ. ಪ್ರಾಣಿಗಳ ಪ್ರಾರಬ್ಧಾನುಸಾರವಾಗಿ ದೇಹವು ಸೃಷ್ಟಿಯಾಗಿ, ದೇಹದ ಹೊರಗಿನ ವ್ಯಾಪಾರಗಳು ಇಡಾ, ಪಿಂಗಳಾ, ನಾಡಿಗಳ ಮೂಲಕ ನಡೆಯಲು, ಗೆಡ್ಡೆಯಲ್ಲಿ ಮೊಳೆಯುವ ಶಕ್ತಿ ಹೇಗೆ ಇರುವುದೋ ಹಾಗೆ, ಸೃಷ್ಟಿಸುವ ಶಕ್ತಿಯು, ಇಲ್ಲಿ ಸೃಷ್ಟಿತತ್ವಪ್ರತಿಪಾದಕವಾದ, ಓಂಕಾರದ "ಅ"ಕಾರವಾಗಿ ಇರುವುದು. ಇದೇ ಕುಂಡಲಿನೀ ಶಕ್ತಿ. ಈ ಶಕ್ತಿಯು ಸುಷುಪ್ತಿ ಕಾಲದಲ್ಲೂ ಪ್ರಳಯದಲ್ಲೂ ಗಡಿಯಾರದ ಸ್ಪ್ರಿಂಗಿನಂತೆ ಮುದುರಿ ಮುಚ್ಚಿಕೊಂಡಿದ್ದು ಸೃಷ್ಟಿ ಮತ್ತು ಎಚ್ಚರ ಕಾಲಗಳಲ್ಲಿ ಪುನಃ ಬಿಟ್ಟುಕೊಳ್ಳುತ್ತ ಪ್ರಾಣಿಗಳ ಕರ್ಮಾನುಸಾರವಾಗಿ ಜಾತ್ಯಾಯುರ್ಭೋಗರೂಪ ದಿಂದ ಅನುಭವ ಕೊಡುತ್ತ ಪ್ರಪಂಚ ವ್ಯಾಪಾರವನ್ನೆಲ್ಲಾ ನಡೆಸುವುದು. ಸೃಷ್ಟಿಯನ್ನೆಲ್ಲಾ ಜೀವದಲ್ಲಿ ಮನೆ ಮಾಡಿ ಮೂಲಾಧಾರದಲ್ಲಿ ಮುಚ್ಚಿಡುವುದು. ಪ್ರಾಣಶಕ್ತಿ ಸಹಿತ ಸರ್ವಶಕ್ತಿಗಳಿಗೂ ಮೂಲವಾದ 'ಅ' ಕಾರ ರೂಪ ಸೃಷ್ಟಿಶಕ್ತಿಯ, ಸುಪ್ತ ವಿಶ್ರಾಂತ ರೂಪವೇ ಕುಂಡಲಿನೀ. ಈ 'ಅ'ಕಾರ ರೂಪ ಕುಂಡಲಿನಿಯು ಬ್ರಹ್ಮಾಂಡ ದಲ್ಲಿರುವ ಸಕಲ ತತ್ವಗಳಿಗೂ ಸಪ್ತಲೋಕಗಳಿಗೂ ಕೇಂದ್ರವಾಗಿದೆ. ಇಂದ್ರಿಯಗಳಿಂದಲೂ ಅಂತಃಕರಣ ದಿಂದಲೂ ಅನುಭವವಾದ ಸಕಲ ವಿಷಯಗಳೂ ಸಂಸಾರ ರೂಪೇಣ ಇಲ್ಲಿ ಪರಿಚಿತವಾಗುತ್ತದೆ. ಇಲ್ಲಿರುವ ಸರ್ವ ಶಕ್ತಿಗಳನ್ನು ಉಕಾರ, ಮಕಾರಗಳ ಮೂಲಕ ಸಹಸ್ರಾರಕ್ಕೆ ಒಯ್ಯಬೇಕು. ಈ ಕುಂಡಲಿನಿಗೆ ವಿಶ್ವವ್ಯಾಪಿ ವಿದ್ಯುಚ್ಛಕ್ತಿ ಎಂದು ಹೆಸರು. ಇಲ್ಲಿ ಸೃಷ್ಟಿಶಕ್ತಿ ಸಹಿತನಾದ ಬಾಲಾರ್ಕನಂತೆ ಕೆಂಪು ಬಣ್ಣವುಳ್ಳ, ವರದ ಅಭಯಹಸ್ತಗಳಿಂದ ಕೂಡಿದ, ಪಾಶ, ಅಂಕುಶಗಳನ್ನು ಹಸ್ತದಲ್ಲಿ ಧರಿಸಿರುವ, ಸಮಸ್ತ ಭೂತಗಣಗಳಿಗೂ ಆಶ್ರಯನಾಗಿಯೂ, ಆದಿಪೂಜ್ಯ ನಾಗಿಯೂ ಇರುವ, ಪ್ರಾಣಿಗಳ ಕರ್ಮಗಳಿಗೆ ಫಲದಾತೃವಾದ ಗಣಪತಿಯು ಅಧಿಷ್ಠಾತೃ ದೇವತೆಯಾಗಿರುವನು. ಪುಷ್ಟಿ, ಶಕ್ತಿ ಸಹಿತ ಗಣಪತಿಯೇ ಸೃಷ್ಟಿತತ್ವಪ್ರತಿಪಾದಕವಾದ, 'ಅ'ಕಾರವೆಂಬ ಬೀಜಾಕ್ಷರವು, ಇವನೇ ಪರಬ್ರಹ್ಮನು. ಇಂತಹ ಗಣಪತಿಯ ರೂಪನಾದ ಶ್ರೀ ತಾರಕರಾಮನನ್ನು ಭಜಿಸುತ್ತೇನೆ.

ಸ್ವಾಧಿಷ್ಠಾನ ಸರೋರುಹೇ ಪ್ರವಿಲಸದ್ಬಾಲಾಂತ ವರ್ಣಾಶ್ರಯಂ |
ಬ್ರಹ್ಮಗ್ರಂಥಿ ಮಹೋನ್ನತೇ ಕರತಲೇ ಶ್ರೀ ಕುಂಡಿಕಾಮಾಲಿಕಾಂ |
ಪೀಠೇ·ರತ್ನನಿಭಂ ವರಾಭಯಕರಂ ವಾಣೀಯುತಂ ಬಿಭೃತಂ |
ಸಾಕ್ಷಾದ್ಬೋಧಮನನ್ಯ ಮಂಗಳಕರಂ ರಾಮಂ ಭಜೇ ತಾರಕಂ ||

ಟಿಪ್ಪಣಿ :–ನಮ್ಮ ಶರೀರದಲ್ಲಿ ಎರಡನೆಯದಾದ ಸ್ವಾಧಿಷ್ಠಾನ ಚಕ್ರವು ಮೂಲಾಧಾರದ ಮೇಲ್ಗಡೆ ಪಾಯು ಸ್ಥಾನದಲ್ಲಿದೆ. ಇದಕ್ಕೆ ಆರು ದಳಗಳಿವೆ. ಪ್ರತಿ ದಳದಲ್ಲೂ ಕ್ರಮವಾಗಿ, ಬ, ಭ, ಮ, ಯ, ರ, ಲ ಎಂಬ ಆರು ಬೀಜಾಕ್ಷರಗಳಿವೆ. ಮೂಲಾಧಾರ ಚಕ್ರದಲ್ಲಿ, ಪ್ರಾಣಿಗಳಿಗೆ ಫಲಧಾತೃವಾಗಿ ಸೃಷ್ಟಿಗೆ ಅಂಕುರನಾಗಿ ಗಣಪತಿಯಿದ್ದರೆ, ಈ ಚಕ್ರದಲ್ಲಿ ಸರಸ್ವತೀ ಸಹಿತನಾದ ಚತುರ್ಮುಖಬ್ರಹ್ಮನು ಸೃಷ್ಟಿತತ್ವಪ್ರತಿಪಾದಕನಾಗಿ ಸೃಷ್ಟಿಯನ್ನು ಅಲ್ಲಿರುವ ತನ್ನ ಶಕ್ತಿಯಾದ ಬ್ರಹ್ಮಗ್ರಂಥಿಯಿಂದ ಮುಂದುವರಿಸುತ್ತಾ ಆ ಚಕ್ರದ ಅಧಿಷ್ಠಾತೃವಾಗಿ ನೆಲಸಿರುವನು. ಇಲ್ಲಿ ತಿಳಿಯಬೇಕಾದ್ದೇನೆಂದರೆ ಓಂಕಾರದ 'ಅ'ಕಾರ ರೂಪವಾದ ಸೃಷ್ಟಿಶಕ್ತಿಯು ಕುಂಡಲಿನಿ ಶಕ್ತಿ ಎನ್ನಿಸಿಕೊಂಡು, ಮೂಲಾಧಾರ, ಸ್ವಾಧಿಷ್ಠಾನ ಎರಡು ಚಕ್ರಗಳಿಗೂ ಸಂಬಂಧವುಳ್ಳದ್ದಾಗಿರುವುದು. ಆ 'ಅ'ಕಾರ ಸೃಷ್ಟಿಶಕ್ತಿಯ ಅಧಿಷ್ಠಾತೃವು ಮೂಲಾಧಾರದಲ್ಲಿ ಪುಷ್ಟಿಸಹಿತ ಗಣಪತಿಯಾಗಿಯೂ, ಸ್ವಾಧಿಷ್ಠಾನದಲ್ಲಿ ಸರಸ್ವತೀ ಸಹಿತ ಚತುರ್ಮುಖಬ್ರಹ್ಮನಾಗಿಯೂ ಇರುವುದು. ಹೀಗೆ ಕಮಂಡಲ ಅಕ್ಷಮಾಲಾಧರನೂ, ನವರತ್ನ ಪೀಠಾಸೀನನೂ, ವರದ, ಅಭಯ ಹಸ್ತಗಳಿಂದ ಕೂಡಿದವನೂ, ಸರಸ್ವತೀಸಮೇತನೂ, ಉಪಾಸಕರ ಮನಸ್ಸು ಶ್ರೇಯಸ್ಕರವಾದ ದಾರಿಯಲ್ಲಿ ಮುಂದುವರಿಯಲು ತನಗೆ ತಾನೇ ಬೋಧೆಯಾಗುವಂತೆ ಮಾಡಿ, ಅನನ್ಯ ಮಂಗಳ ವನ್ನುಂಟುಮಾಡುವವನೂ, ಅಂದರೆ ನಿಃಶ್ರೇಯಸವನ್ನು ಹೊಂದಿಸುವವನೂ ಆಗಿರುವ ತಾರಕಬ್ರಹ್ಮನಾದ ಶ್ರೀರಾಮನನ್ನು ಭಜಿಸುತ್ತೇನೆ.

ಈ ಸಂದರ್ಭದಲ್ಲಿ ಈ ಕೆಳಗೆ ಕಂಡಂತೆ ಸ್ವಲ್ಪ ವಿಚಾರ ಮಾಡಬೇಕಾಗಿದ್ದಿದೆ.

ನಿರ್ಗುಣ ಬ್ರಹ್ಮವು ಬಹುವಾಗಬೇಕೆಂಬ ಇಚ್ಛೆಯಿಂದ ಮೊದಲು ಅನಾದಿಯಾದ ಅವ್ಯಕ್ತ ಶಕ್ತಿಯು, ಸತ್ವಗುಣ ಪ್ರಧಾನಮಾಯೆಯಲ್ಲಿ ಓಂಕಾರ ನಾದರೂಪವಾಗಿ ಪ್ರಾದುರ್ಭವಿಸಿತು. ಅದರೊಡನೆ ಅವ್ಯಕ್ತ ಶಕ್ತಿಯ ಸಂಯೋಗ ದಿಂದ 'ಬಿಂದು' ಉತ್ಪನ್ನವಾಯ್ತು. ಈ 'ನಾದ' 'ಬಿಂದು'ಗಳೇ "ಕಾಮಕಲಾ" ಎಂಬ ಇಚ್ಛಾ, ಜ್ಞಾನ ಕ್ರಿಯಾ ಶಕ್ತಿ ರೂಪಗಳಾದುವು. ಮತ್ತು ಕ್ರಮಕ್ರಮವಾಗಿ ಅಕಾರ, ಉಕಾರ, ಮಕಾರ ಬೀಜಾಕ್ಷರ ಶಕ್ತಿರೂಪವಾಗಿ ಪ್ರಪಂಚದ ಸೃಷ್ಟಿ, ಸ್ಥಿತಿ, ಲಯ, ತತ್ವಾತ್ಮಕವಾದುವು. ಅಲ್ಲದೆ ಆ ನಿರ್ಗುಣ ಬ್ರಹ್ಮವು ಅಕಾರ, ಉಕಾರ, ಮಕಾರಗಳಲ್ಲಿ ಅಧಿಷ್ಠಾತೃ ರೂಪದಲ್ಲಿ ಪುಂ (ನಾದ) ಸ್ತ್ರೀ (ಬಿಂದು) ರೂಪದಿಂದ ಕೂಡಿ ಪ್ರಾದುರ್ಭವಿಸಿತು.

'ಅ'ಕಾರದಲ್ಲಿ ಬ್ರಹ್ಮ ಸರಸ್ವತೀ ರೂಪದಿಂದ ಪ್ರಪಂಚದ ಸೃಷ್ಟಿಕಾರ್ಯಗಳಲ್ಲಿ ಪ್ರವರ್ತಿಸುತ್ತಾ, 'ಉ'ಕಾರ ದಲ್ಲಿ ವಿಷ್ಣು ಲಕ್ಷ್ಮೀರೂಪದಿಂದ ಸ್ಥಿತಿಕಾರ್ಯಗಳಲ್ಲಿ ಪ್ರವರ್ತಿಸುತ್ತಾ, 'ಮ'ಕಾರದಲ್ಲಿ ಶಿವ, ಪಾರ್ವತಿ ರೂಪದಿಂದ ಲಯ ಮತ್ತು ಮೋಕ್ಷ ಕಾರ್ಯಗಳಲ್ಲಿ ಪ್ರವರ್ತಿಸುತ್ತಾ, ಅನಾದಿಯೂ ಅನಿರ್ವಚನೀಯವೂ ಅವಿದ್ಯಾತ್ಮಕವೂ ಜಡವೂ ತ್ರಿಗುಣಾತ್ಮಕವೂ ಆದ ಅವ್ಯಕ್ತದ ಭಾಗವಾದ ತಮಃಪ್ರಧಾನ ಪ್ರಕೃತಿಯನ್ನು ಉಪಾದಾನ (ಸಾಮಗ್ರಿ) ಕಾರಣವನ್ನಾಗಿ ಮಾಡಿಕೊಂಡು ಮೊದಲು ಸಮಷ್ಟಿ ಸೂಕ್ಷ್ಮ ಸ್ಥೂಲ, ಶರೀರಾತ್ಮಕವಾದ ಹಿರಣ್ಯಗರ್ಭ ವಿರಾಟ್ ಗಳನ್ನು ಸೃಷ್ಟಿಸಿತು. ಹಾಗೆಯೇ ಸೂಕ್ಷ್ಮ ಸ್ಥೂಲ, ಪಂಚಭೂತಗಳೂ, ಸಮಸ್ತ ದೇವತೆಗಳೂ, ನಾಮರೂಪಾತ್ಮಕ ವಾದ ಪ್ರಪಂಚವೂ, ದೇಹೇಂದ್ರಿಯಾದಿಗಳೂ, ಪ್ರಾಣಗಳೂ ಮತ್ತು ಅಂತಃಕರಣವೂ ಸೃಷ್ಟಿಯಾದುವು. ಇವಿಷ್ಟೂ ಶರೀರದ ಹೊರಗಿನ ಸೃಷ್ಟಿಯ ವಿಚಾರ.

ಶರೀರದಲ್ಲಿ, ಅನಾಹತ ಚಕ್ರದಲ್ಲಿ ಸೃಷ್ಟಿಯಾದ ಈ ಅಂತಃಕರಣವು, ವಿಶುದ್ಧಿಚಕ್ರದಲ್ಲಿ ಮನೋ ರೂಪವಾಗಿಯೂ, ಆಜ್ಞಾಚಕ್ರದಲ್ಲಿ ಬುದ್ಧಿರೂಪವಾಗಿಯೂ ತೋರಿಬಂದಿತು. ಆ ನಿರ್ಗುಣ ಬ್ರಹ್ಮವೇ ಈ ಅವಿದ್ಯಾತ್ಮಕವಾದ ಅಂತಃಕರಣದಲ್ಲಿ ಪ್ರತಿಫಲಿಸಿ ಜೀವಭ್ರಾಂತಿಯನ್ನು ಹೊಂದಿ 'ಹಂಸ' ರೂಪದಿಂದ (ಅಂದರೆ ಜೀವ ರೂಪದಿಂದ) ಕಾಣಿಸಿಕೊಂಡು, ತಾನು ಜೀವನಾಗಿ ಮಾಡಿದ ಅನಾದಿಯಾದ ಪಾಪ, ಪುಣ್ಯ ಕರ್ಮಗಳ ಫಲವಾಗಿ, ಜನನ ಮರಣ ರೂಪವಾದ ಸಂಸಾರ ಚಕ್ರದಲ್ಲಿ ಸಿಕ್ಕಿ ಭ್ರಮಿಸಹತ್ತಿತು. ಅಲ್ಲದೆ ಆ ನಿರ್ಗುಣ ಬ್ರಹ್ಮವೇ ಪ್ರಾಣಿಗಳ ಶರೀರದ ಒಳಗಡೆ ಮೂಲಾಧಾರ ಮೊದಲುಗೊಂಡು ಪ್ರತಿ ಚಕ್ರದಲ್ಲಿಯೂ ಪುಷ್ಟಿಗಣಪತಿ ರೂಪದಲ್ಲೂ, ಬ್ರಹ್ಮ ಸರಸ್ವತೀ ರೂಪದಲ್ಲೂ, ಲಕ್ಷ್ಮೀ ವಿಷ್ಣು ರೂಪದಲ್ಲೂ, ಪಾರ್ವತಿ ಶಿವ ರೂಪದಲ್ಲೂ, ಶರೀರ ಜೀವಾತ್ಮರೂಪದಲ್ಲೂ, ಮೋಕ್ಷಲಕ್ಷ್ಮೀ, ಪರಮಾತ್ಮ ರೂಪದಲ್ಲೂ ಅಲ್ಲದೆ ಸುಷುಮ್ನಾ ನಾಡಿಯಲ್ಲಿರುವ ಮೂಲಾಧಾರ, ಅನಾಹತ, ಆಜ್ಞಾ ಚಕ್ರಗಳಲ್ಲಿ ಅಕಾರ, ಉಕಾರ, ಮಕಾರ ರೂಪವಾಗಿಯೂ, ಪುಂ, ಸ್ತ್ರೀ ರೂಪದಲ್ಲಿ ಪ್ರಾದುರ್ಭವಿಸಿತು. ಏಕೆಂದರೆ ನಿಷ್ಕ್ರಿಯವಾದ ನಿರ್ಗುಣ ಬ್ರಹ್ಮದಿಂದ ಪ್ರಪಂಚ ವ್ಯಾಪಾರ ನಡೆಯಲು ಸ್ತ್ರೀ, ಪುಂ ರೂಪಗಳ ಅಂದರೆ, ಪ್ರಕೃತಿ ಪುರುಷರ, ಏಕೀಕರಣ ಅಗತ್ಯ.

ಹೀಗೆ ನಿರ್ಗುಣ ಬ್ರಹ್ಮವು ಜೀವ (ಹಂಸ) ರೂಪನೆಂದು ತಾನೇ ಭ್ರಾಂತಿಯನ್ನು ಹೊಂದಿ, ಅಂತಃಕರಣ ಪರಿಣಾಮಗಳಾದ ಮನಸ್ಸು ಬುದ್ಧಿಗಳ ಮೂಲಕ ಇಂದ್ರಿಯಗಳಲ್ಲಿ ವ್ಯಾಪ್ತವಾಗಿ, ತನ್ಮೂಲಕ ವಿಷಯಗಳನ್ನು ಗ್ರಹಿಸುತ್ತಾ, ಆ ವಿಷಯಗಳ ಲಾಭಾಲಾಭ, ವೃದ್ಧಿ, ಕ್ಷಯ ಸ್ಥಿತಿ ನಾಶಗಳಲ್ಲಿ ಹರ್ಷಾಮರ್ಷಗಳನ್ನು ಹೊಂದುತ್ತಾ ಅನೇಕ ವಾಸನೆಗಳನ್ನು ತನ್ನ ಮನಸ್ಸಿನಲ್ಲಿ ಗಳಿಸಿ ಬಂಧಕ್ಕೆ ಕಾರಣವಾಯಿತು. ಈ ಬಂಧನದಿಂದ ತಪ್ಪಿಸಿಕೊಳ್ಳಲು ಜೀವನು ತನ್ನ ಮನಸ್ಸಿನಲ್ಲಿರುವ ದುಷ್ಟವಾಸನೆಗಳನ್ನು ನಿಗ್ರಹಿಸಿ, ಆ ಮನಸ್ಸನ್ನು ಶುದ್ಧಿಗೊಳಿಸಿ, ಏಕಾಗ್ರತೆಗೆ ತಂದು, ಆತ್ಮಜ್ಞಾನ ಸಾಧನೆಯೆಂಬ ಸದ್ವಾಸನೆಯಿಂದ ಆ ಶುದ್ಧ ಮನಸ್ಸನ್ನು ಕೂಡಿಸಿ, ಪರಮಾತ್ಮನಲ್ಲಿ ಲೀನ ಗೊಳಿಸಿದರೆ, ಆ ಜೀವನಿಗೆ ದೇಹಭ್ರಾಂತಿಯಳಿದು, ಪರಮಾತ್ಮನಲ್ಲಿ ಅಭೇದವಾದ ಐಕ್ಯ ಸಂಭವಿಸಿ, ಪರಮಸುಖ ಉಂಟಾಗುವುದು. ಹೀಗೆ ಮನಸ್ಸನ್ನು ಲಯಗೊಳಿಸಲು, ಮೊದಲು ಪ್ರಾಣವನ್ನು ಬಂಧನಮಾಡಬೇಕು.

ಏಕೆಂದರೆ ಪ್ರಾಣನಿರೋಧದಿಂದಲೇ ಚಿತ್ತವೃತ್ತಿನಿರೋಧವು. ಆದಪ್ರಯುಕ್ತ ಪ್ರಾಣಾಯಾಮದಿಂದ ಪ್ರಾಣ ಬಂಧನ ಮಾಡಿ, ಯೋಗಾಭ್ಯಾಸದ ಮೂಲಕ ಶರೀರದ ಮೂಲಾಧಾರ ಚಕ್ರದಲ್ಲಿರುವ ಅಪಾನವಾಯುವನ್ನು, ವ್ಯವಹಾರ ಮಾರ್ಗಗಳಾದ ಇಡಾ, ಪಿಂಗಳಾ ನಾಡಿಗಳ ಕಡೆಗೆ ಹೋಗಗೊಡದೆ, ಸುಷುಮ್ನಾ ನಾಡಿಯ ಮೂಲಕ, ಅನಾಹತ ಚಕ್ರದಲ್ಲಿರುವ ಪ್ರಾಣವಾಯುವಿನೊಡನೆ ಐಕ್ಯಗೊಳಿಸಿ, ಮನಸ್ಸನ್ನು ಆ ವಾಯುವಿನ ಜೊತೆಯಲ್ಲಿ ಏಕಾಗ್ರತಾಪೂರ್ವಕಧ್ಯಾನದಿಂದ ಪರಮಾತ್ಮನಲ್ಲಿ ಸ್ಥಿರಗೊಳಿಸುತ್ತಾ ಹೋಗಬೇಕು.

ಒಟ್ಟಿನಲ್ಲಿ ಮನೋನಿಗ್ರಹಕ್ಕೆ (1) ಅಧ್ಯಾತ್ಮಜ್ಞಾನ, (2) ಸತ್ಸಂಗ, (3) ಚಿತ್ತವೃತ್ತಿನಿರೋಧಪೂರ್ವಕ ವಾಸನಾಕ್ಷಯ, (4) ಪ್ರಾಣನಿರೋಧಗಳು ಮುಖ್ಯವಾದುವು. ಈ ಜಗತ್ತು ಎಲ್ಲಿಂದ ಬಂದಿತು ? ಈ ದೇಹಕ್ಕೂ ನನಗೂ ಸಂಬಂಧವೇನು ? ಈ ಜನನ, ಮರಣದಿಂದ ಕೂಡಿದ ಸಂಸಾರದ ಸುಖದುಃಖಗಳು ನನಗೆ ಹೇಗೆ ಬಂದುವು ? ಇವುಗಳಿಂದ ತಪ್ಪಿಸಿಕೊಳ್ಳುವುದು ಹೇಗೆ ? ನಾನು ಯಾರು ? ನನ್ನ ನಿಜರೂಪವೇನು ? ಇವುಗಳನ್ನು ಸತ್ಸಂಗತ್ವೇನ ಸತ್ಪುರುಷರಲ್ಲೂ, ಸದ್ಗುರುಗಳಲ್ಲೂ, ಭಕ್ತಿಯಿಂದ ಕೇಳಿ ತಿಳಿದುಕೊಂಡು, ತನ್ನ ನಿಜಸ್ವರೂಪವನ್ನು ಅನುಭವಕ್ಕೆ ತಂದುಕೊಳ್ಳಬೇಕು. ಇದೇ ಅಧ್ಯಾತ್ಮ ಜ್ಞಾನ ಮತ್ತು ಸತ್ಸಂಗವೆನ್ನಿಸಿಕೊಳ್ಳುವುದು.

ಆಮೇಲೆ ಚಿತ್ತವೃತ್ತಿ ನಿರೋಧಕ್ಕೆ, ಮೊದಲು, ಪ್ರಾಣಾಯಾಮಪೂರ್ವಕ ಪ್ರಾಣನಿರೋಧ ಮಾಡಿ, ಅನಂತರ, ಯೋಗಾಭ್ಯಾಸ ಮಾಡಿದರೆ, ಆ ಯೋಗದಿಂದ ಆತ್ಮಜ್ಞಾನ ಶೀಘ್ರವಾಗಿ ದೊರಕುವುದು. ಇಂತಹ ಯೋಗದ ಪ್ರಕ್ರಿಯೆಗಳು ದ್ವಿತೀಯಾಶ್ವಾಸದ ಹಲವು ಶ್ಲೋಕಗಳಲ್ಲ ಅಲ್ಲಲ್ಲಿ ಕಂಡುಬರುವುವು.

ಯೋಗವೆಂದರೆ, ಜೀವ, ಪರಮಾತ್ಮರ ಐಕ್ಯಜ್ಞಾನ. ಇದು ಚಿತ್ತವೃತ್ತಿ ನಿರೋಧದಿಂದ ಸಾಧಿಸತಕ್ಕದ್ದು. ಯಮ, ನಿಯಮ, ಆಸನಾದಿಗಳನ್ನು ಆಚರಿಸಿ, ಅವುಗಳಲ್ಲಿ ಸಿದ್ಧಿ ಹೊಂದಿ, ಪ್ರಾಣಾಯಾಮಪೂರ್ವಕವಾಗಿ ಶ್ವಾಸೋಚ್ಛ್ವಾಸಗಳನ್ನು ಬಂಧಿಸಿ, ಪ್ರತ್ಯಾಹಾರಪೂರ್ವಕವಾಗಿ ಶಬ್ದಾದಿ ವಿಷಯಗಳಲ್ಲಿ ಸ್ವೇಚ್ಛೆಯಾಗಿ ಸಂಚರಿಸುವ ಇಂದ್ರಿಯಗಳನ್ನು ಬಲಾತ್ಕಾರವಾಗಿ ವಿಷಯಗಳಿಂದ ಹಿಂತಿರುಗಿಸಿ, ಅನಂತರ ಧಾರಣಪೂರ್ವಕವಾಗಿ, ಸಮಾಹಿತ ವಾದ ಮನಸ್ಸನ್ನು ಪರಮಾತ್ಮನಲ್ಲಿ ನೆಲೆಗೊಳಿಸಿ, ಮೂಲಾಧಾರದಲ್ಲಿ ಅಪಾನವಾಯುವನ್ನು ನಿಗ್ರಹಿಸಿ ಅದು ಊರ್ಧ್ವಕ್ಕೆ ಹೋಗುವ ಹಾಗೆ ಮಾಡುತ್ತಾ, ಅಲ್ಲಿರುವ ಪ್ರಣವದ 'ಅ'ಕಾರವನ್ನೂ ಅಕಾರಾತ್ಮಕವಾದ ಕುಂಡಲಿನಿ ಶಕ್ತಿಯನ್ನೂ ನಾಲ್ಕು ಬೀಜಾಕ್ಷರಗಳನ್ನೂ, ಆ ಚಕ್ರವನ್ನು ಪ್ರಜ್ವಲಿಸುವ ಗಾರ್ಹಪತ್ಯಾಗ್ನಿಯನ್ನೂ, ಪುಷ್ಟಿಶಕ್ತಿ ಸಹಿತನಾದ ಗಣಪತಿಯನ್ನೂ, ಏಕವಾಗಿ, ಪರಬ್ರಹ್ಮನೆಂದು ಪ್ರಣಿಧಾನಪೂರ್ವಕವಾಗಿ ಧ್ಯಾನಿಸುತ್ತಲೂ, ತಾನೇ ಆ ಪರಬ್ರಹ್ಮನೆಂದು ಭಾವಿಸುತ್ತಲೂ ಧ್ಯಾನಾಭ್ಯಾಸವು ಮುಂದುವರಿದರೆ ಮೂಲಾಧಾರ ಚಕ್ರದ ಕೆಳಗಿರುವ ಗಾರ್ಹಪತ್ಯಾಗ್ನಿಯು ಪ್ರಜ್ವಲನವಾಗಿ, ಮೂಲಾಧಾರ ಚಕ್ರದ ರಂಧ್ರವು ತೆರೆಯಲ್ಪಟ್ಟು, ಆ ಮೂಲಕ ಸುಷುಮ್ನಾ ನಾಡಿಯ ಮಾರ್ಗವು ಕಾಣುವುದು. ಅಲ್ಲಿಂದ ಸುಷುಮ್ನಾ ನಾಡಿಯ ಒಳಗಿರುವ ಸ್ವಾಧಿಷ್ಠಾನ ಚಕ್ರಕ್ಕೆ ಬಂದು, ಅಲ್ಲಿ ಅಧಿಷ್ಠಾತೃವಾದ ಸರಸ್ವತಿ ಶಕ್ತಿಸಹಿತನಾದ ಚತುರ್ಮುಖಬ್ರಹ್ಮನನ್ನೂ, ಆ ಚಕ್ರದ ಬೀಜಾಕ್ಷರ ಗಳನ್ನೂ ಧ್ಯಾನಿಸಿ, ಆ ಚತುರ್ಮುಖಬ್ರಹ್ಮನೇ ತಾನೆಂದು ಭಾವಿಸಿ ಈ ಸಾಧನೆಗಳಿಂದ ಅಲ್ಲಿರುವ ಬ್ರಹ್ಮಗ್ರಂಥಿ ಯನ್ನು ಭೇದಿಸಿ ಮುಂದೆ ಹೋದರೆ, ಮನಸ್ಸು ವಿಶ್ವತ್ವವೆನಿಸುವ ಬಹಿರ್ವ್ಯಾಪಾರ (ಸ್ಥೂಲ ದೇಹದ ಕ್ರಿಯಾಶಕ್ತಿ) ಉಪಸಂಹಾರವೆಂಬ ಒಂದು ಘಟ್ಟವನ್ನು ದಾಟಿದಂತಾಗುವುದು.

ಡಾಫಾಂತ್ಯಕ್ಷರ ಪಂಕಜೇ ದಶದಳೇ ಮಾಣಿಕ್ಯಸಂಪೂರಿತೇ |
ವಿಷ್ಣುಗ್ರಂಥಿಮಯೇ ವರಾಭಯಕರಂ ಆಶಂಖ ಚಕ್ರಾನ್ವಿತಂ |
ಮಾರ್ತಾಂಡ ದ್ಯುತಿ ಮಂಜುನಾಭಮತುಲಂ ಪೀತಾಂಬರಂ ಕೌಸ್ತುಭಂ|
ಸರ್ವಂ ಸರ್ವಗಮಿಂದಿರಾಸಹಚರಂ ರಾಮಂ ಭಜೇ ತಾರಕಂ ||

ಶರೀರದಲ್ಲಿ ಮೂರನೇ ಚಕ್ರವು ಮಣಿಪೂರ ಚಕ್ರವು. ಇದು ನಾಭಿ ಪ್ರದೇಶದಲ್ಲಿದೆ. ಇದಕ್ಕೆ ಹತ್ತು ದಳಗಳಿವೆ. ಪ್ರತಿಯೊಂದು ದಳದಲ್ಲಿಯೂ ಕ್ರಮವಾಗಿ, ಡ, ಢ, ಣ, ತ, ಥ, ದ, ಧ, ನ, ಪ, ಫ ಎಂಬ ಹತ್ತು ಬೀಜಾಕ್ಷರಗಳಿವೆ. ನಾನಾ ಮಣಿಗಳಂತೆ ಇದರ ದಳಗಳು ತೋರಿ, ಈ ಚಕ್ರವು ಮಾಣಿಕ್ಯದಿಂದ ತುಂಬಿದಂತೆ ಕಾಣುವುದು. ಇಲ್ಲಿ ವರದ ಅಭಯ ಹಸ್ತಗಳುಳ್ಳವನೂ, ಶಂಖ ಚಕ್ರಾನಿತ್ವನೂ, ಮನೋಹರವಾದ ಮತ್ತು ಸೂರ್ಯನಂತೆ ದುಂಡಾಗಿ ಪ್ರಕಾಶಮಾನವಾದ ನಾಭಿ ಪ್ರದೇಶವುಳ್ಳವನೂ, ಎಣೆಯಿಲ್ಲದವನೂ, ಪೀತಾಂಬರ ಕೌಸ್ತುಭಧಾರಿಯೂ, ಎಲ್ಲೆಲ್ಲಿಯೂ ಪರಿಪೂರ್ಣನೂ, ತನ್ನ ಚೈತನ್ಯದಿಂದ ಸರ್ವವೂ ಆಗಿರುವವನೂ, ಲಕ್ಷ್ಮೀಶಕ್ತಿ ಸಹಿತನೂ ಆದ ವಿಷ್ಣುವು ಅಧಿದೇವತೆಯಾಗಿರುವನು. ಇಲ್ಲಿ ಸ್ಥಿತಿ, ತತ್ವ ಪ್ರತಿಪಾದಕವಾದ ಆತನ ವಿಷ್ಣು ಗ್ರಂಥಿ ಇರುವುದು. ಉಪಾಸಕನು ಇಲ್ಲಿ ಅಪಾನವಾಯುವನ್ನು ಮೇಲಕ್ಕೆ ಎಳೆದುಕೊಂಡು, ಅಲ್ಲಿಗೆ ಅಧಿಷ್ಠಾತೃವಾದ ಲಕ್ಷ್ಮೀಸಮೇತ ವಿಷ್ಣುವನ್ನು ಧ್ಯಾನಿಸಿ, ಆ ವಿಷ್ಣುವನ್ನೂ ಆ ಚಕ್ರದ ಹತ್ತು ಬೀಜಾಕ್ಷರಗಳನ್ನೂ ಪರಬ್ರಹ್ಮವೆಂದೂ, ತಾನೂ ಪರಬ್ರಹ್ಮವೆಂದೂ ಧ್ಯಾನ ಮಾಡುತ್ತಾ, ಸವಿಕಲ್ಪಸಮಾಧಿ ಧ್ಯಾನಯೋಗದಲ್ಲಿ (ಅಂದರೆ ಧ್ಯಾನ ಮಾಡುವವನೂ, ಧ್ಯಾನ ಮಾಡಿಸಿಕೊಳ್ಳತಕ್ಕವನೂ, ಧ್ಯಾನ ಎಂಬ ತ್ರಿಪುಟಿಗಳಿಂದ ಕೂಡಿದ ಯೋಗದಲ್ಲಿ) ಆರೂಢನಾದರೆ, ಆ ವಿಷ್ಣುಗ್ರಂಥಿಯು ಭೇದಿಸಲ್ಪಡುವುದು. ಹೀಗೆ ಸಾಧಕನು ದೇಹದಲ್ಲೆಲ್ಲಾ ತುಂಬಿರುವ ಪ್ರಾಣವಾಯುವನ್ನು ಕ್ರಮ ಕ್ರಮವಾಗಿ ನಿಗ್ರಹಿಸುತ್ತಾ, ಮನಸ್ಸನ್ನು ಆಕರ್ಷಣೆ ಮಾಡಿ ಮಣಿಪೂರ ಚಕ್ರದಿಂದ ಮೇಲಕ್ಕೆ ಹೋಗಬೇಕು. ಹೀಗೆ ಮಣಿಪೂರ ಚಕ್ರದ ಅಧಿದೇವತೆಯಾಗಿ ಬೆಳಗುವ ತಾರಕಬ್ರಹ್ಮನಾದ ಶ್ರೀರಾಮನನ್ನು ಭಜಿಸುತ್ತೇನೆ.

ಹೃತ್ಪದ್ಮೇ ನಿಲಯಾರ್ಕ ಕೋಟಿ ಸದೃಶಂ ಕಂಠಾಂತವರ್ಣೋಜ್ಜ್ವಲೇ|
ಪ್ರಾಣಾಂತ ಪ್ರಣವಾಂತರೇ ಪ್ರವಿಲಸದ್ಯೋಡ್ಯಾಣ ಪೀಠಾಂತರೇ |
ಸೂರ್ಯೇ ಹಂಸಮಯಾ ಸದಾಶಿವಪದಂ ಕೋದಂಡ ದೀಕ್ಷಾಗುರುಂ |
ವಾಸಾ ಹೈಮವತೀಸಮೇತಮನಿಶಂ ರಾಮಂ ಭಜೇ ತಾರಕಂ ||

ಶರೀರದ ನಾಲ್ಕನೇ ಚಕ್ರವು ಹೃದಯ ಪ್ರದೇಶದಲ್ಲಿದೆ. ಇಲ್ಲಿನವರೆಗೆ ಬಂದ ಉಪಾಸಕನು, ತನ್ನ ಸವಿಕಲ್ಪಕ ಸಮಾಧಿ ಧ್ಯಾನಾಭ್ಯಾಸಬಲದಿಂದ, ತನ್ನ ಅಂತರ್ಮುಖದಲ್ಲಿ ತೇಜಸ್ಸನ್ನು ಕಾಣುವನು. ಅದು ಕೋಟಿ ಸೂರ್ಯಪ್ರಕಾಶವಾಗಿರುವುದು. ಇಂತಹ ಸೂರ್ಯ ತೇಜಸ್ಸಿನಿಂದ ಕೂಡಿದ ದ್ವಾದಶದಳಗಳುಳ್ಳದ್ದಾಗಿಯೂ, 'ಕ'ಕಾರದಿಂದ 'ಠ' ಕಾರದವರೆಗಿನ ಹನ್ನೆರಡು ಬೀಜಾಕ್ಷರಗಳಿಂದ ಕೂಡಿಯೂ ಇರತಕ್ಕದ್ದಾದ, ಧ್ಯಾನಕಾಲದಲ್ಲಿ ಯೋಗಿಯು ಹೊಟ್ಟೆಯನ್ನು ಆಕಳಿಸಿ, ಸೊಂಟದಿಂದ ಮೇಲಕ್ಕೆ ಎದೆಯ ಸಮೀಪದವರೆವಿಗೆ ಹೊಟ್ಟೆಯನ್ನು ತಂದು ಆ ರೀತಿ, ಓಡ್ಯಾಣ ಮುದ್ರೆಯನ್ನು ಆಚರಿಸುವಲ್ಲೂ, ಅಪಾನವಾಯುವು ಮೂಲಾಧಾರದಿಂದ ಸುಷುಮ್ನಾ ನಾಡಿಯಲ್ಲಿ ಮೇಲೆ ಮೇಲಕ್ಕೆ ಏರಿ, ಹೃದಯಸ್ಥಾನಕ್ಕೆ ಬಂದು ಅಲ್ಲಿ ಪ್ರಾಣವಾಯುವಿನೊಡನೆ ಐಕ್ಯವಾಗುವುದು. ಹೀಗೆ ಯೋಗಿಯ ಮನಸ್ಸು ಅಪಾನ, ಪ್ರಾಣವಾಯುಗಳೊಡನೆ ಒಟ್ಟುಗೂಡತಕ್ಕ ಓಡ್ಯಾಣಪೀಠ ಪ್ರದೇಶವಾದ, ಪ್ರಾಣವಾಯುವಿಗೂ ಪ್ರಣವದ ಅಂತರವಾದ 'ಉ'ಕಾರಕ್ಕೂ ಸ್ಥಾನವಾದ ಅನಾಹತ ಚಕ್ರದಲ್ಲಿ ಇರುವವನೂ, ಸೂರ್ಯಸದೃಶನೂ, ಪ್ರಾಣತತ್ವಕ್ಕೆ ಆಧಾರಭೂತನೂ, ಈ ಅನಾಹತ ಚಕ್ರದಲ್ಲಿ ಹಂಸ ಎಂದರೆ ಜೀವರೂಪ

ದಿಂದ ಇರುವವನೂ ಆದ ಮತ್ತು ಈ ಚಕ್ರಕ್ಕೆ ಅಧಿಷ್ಠಾತೃವಾಗಿ ಸದಾಶಿವನೆಂದು ಧ್ಯಾನಿಸಿಕೊಳ್ಳುವವನೂ, ಪಾರ್ವತೀಸಮೇತನೂ, ಆತ್ಮಾರಾಮನೂ, ಕೋದಂಡಧಾರಿಯೂ ಆದ ತಾರಕರಾಮನನ್ನು ಭಜಿಸುತ್ತೇನೆ.

ಆಸನ, ಪ್ರಾಣಾಯಾಮ, ಧ್ಯಾನ ಬಲಗಳಿಂದ, ಈ ಅನಾಹತ ಚಕ್ರದಲ್ಲಿ, ಅಪಾನ, ಪ್ರಾಣಗಳು ಒಂದ ಕ್ಕೊಂದು ಐಕ್ಯಹೊಂದಲು, ಯೋಗಿಯು ಅವುಗಳನ್ನೂ, ಮೂಲಾಧಾರದಿಂದ ಈ ಚಕ್ರದವರೆಗಿನ ಬೀಜಾಕ್ಷರ ರೂಪವಾದ ಶಕ್ತಿಗಳನ್ನೂ, ಆಯಾಯಾ ಅಧಿಷ್ಠಾತೃ ದೇವತೆಗಳನ್ನೂ, ಇಲ್ಲಿಂದ ಹೊರಡುವ ನಾಡಿ ಸಹಸ್ರದಲ್ಲಿ ಜೀವರೂಪವಾಗಿ ಸಂಚರಿಸುವ ಇತರ ಪ್ರಾಣವಾಯುಗಳನ್ನೂ, ಮೂಲಾಧಾರ ಚಕ್ರದ 'ಓಂ'ಕಾರದ 'ಅ'ಕಾರ ವನ್ನೂ, ದೇಹಸ್ಥಿತಿಗೆ ಕಾರಣವಾದ 'ಉ'ಕಾರ ರೂಪ ವಿಷ್ಣುಶಕ್ತಿಯಲ್ಲಿ ಲೀನಗೊಳಿಸಿ ; ಇವುಗಳೆಲ್ಲವನ್ನೂ, ಇಲ್ಲಿರುವ ದಕ್ಷಿಣಾಗ್ನಿಯನ್ನೂ, ಇಲ್ಲಿನ ಬೀಜಾಕ್ಷರಗಳನ್ನೂ, ಒಟ್ಟಿನಲ್ಲಿ ಪರಬ್ರಹ್ಮವೆಂದು ಧ್ಯಾನಿಸಿ, ಆ ಪರಬ್ರಹ್ಮವೇ ತಾನೆಂದು ಭಾವಿಸಿ, ಧ್ಯಾನನಿರತನಾಗಿ ಮುಂದುವರೆದರೆ, ತೈಜಸತ್ವ ಎನಿಸುವ ಸ್ವಪ್ನಸದೃಶವಾದ ತನ್ನ ಸವಿಕಲ್ಪಸ್ಥಿತಿಯು ಉಪಸಂಹಾರವಾಗುವುದಕ್ಕೆ ಪ್ರಾರಂಭವಾಗುವುದು. ಅಲ್ಲದೆ, ತನ್ನ ಸೂಕ್ಷ್ಮಶರೀರದ ಇಚ್ಛಾ ಶಕ್ತಿಯು ಲೀನವಾಗುತ್ತಾ ಬರುವುದು. ಈ ಅನಾಹತ ಚಕ್ರದಲ್ಲಿ, ಅಂತರ್ಮುಖನಾದ ಉಪಾಸಕನು, ಶಾಂಭವೀ (ಷಣ್ಮುಖಿ) ಮುದ್ರೋಪಾಸನೆ ಮಾಡಿ, ಜ್ಞಾನೇಂದ್ರಿಯಗಳನ್ನು ಬಂಧಿಸಿ, ಅವಿದ್ಯಾ ಪ್ರವೃತ್ತಿಗಳನ್ನು :ಕಟ್ಟಿಹಾಕಿದರೆ, ಮೇಲೆ ಹೇಳಿದ ಧ್ಯಾನಕ್ಕೆ ಸಂಬಂಧಪಟ್ಟ ಸಮಸ್ತವೂ ನಿಗ್ರಹವಾಗಿ ಎಡೆಬಿಡದೆ ಸ್ವತಸ್ಸಿದ್ಧವಾದ ಒಂದು ಶಬ್ದ ಮಾತ್ರ ಕೇಳುವುದು. ಅದಕ್ಕೆ ಪ್ರಣವನಾದವೆಂದು ಹೆಸರು. ಆ ನಾದ ವನ್ನು ಕೇಳುತ್ತಾ ಯೋಗಿಯು ತನ್ನ ಧ್ಯಾನದಲ್ಲಿ ಮುಂದುವರಿದರೆ, ಒಂದು ಜ್ಯೋತಿಯು ಕಾಣಿಸುವುದು. ಅದರ ಮೇಲೆ ಮತ್ತೊಂದು ಬ್ರಹ್ಮತೇಜಸ್ಸು ಗೋಚರವಾಗುವುದು. ಈ ಬ್ರಹ್ಮತೇಜಸ್ಸಿನ ಗೋಚರದಿಂದ ಉಪಾಸಕನ ಸಂಶಯವೆಲ್ಲಾ ನಿವಾರಣೆಯಾಗುವುದು. ಈ ಬ್ರಹ್ಮತೇಜಸ್ಸನ್ನೇ ತಾನೆಂದು ಭಾವಿಸಿ ಧ್ಯಾನ ಮಾಡುತ್ತಾ ಬಂದರೆ, ಧ್ಯಾನದಲ್ಲಿ ಸ್ಥಿರತೆಯುಂಟಾಗುವುದು. ಈ ಸ್ಥಿರತೆಯೇ 'ಸೋಹಂ' ಆಗುವಿಕೆ. ಹೀಗೆ ಇಲ್ಲಿಗೆ ಬರುವ ಯೋಗಿಯು, ಅವಿದ್ಯಾಶಕ್ತಿಗಳನ್ನೆಲ್ಲಾ ನಿಗ್ರಹಿಸಿಕೊಂಡು, 'ಸೋಹಂ' ಎಂಬ ಭಾವದಿಂದ ಇರುವನು. ಈ ಅನಾಹತ ಚಕ್ರದ ಮಧ್ಯದಲ್ಲಿ, ಹೃದಯಕಮಲವೆಂಬ ಅಷ್ಟದಳ ಪದ್ಮ ಒಂದಿರುವುದು. ಅದು ಮೂರು ರೇಖಾವಲಯದಿಂದ ಕೂಡಿರುವುದು. ಅದರ ಮಧ್ಯದಲ್ಲಿ ಹೆಬ್ಬೆಟ್ಟು ಮಾತ್ರ ಪ್ರಮಾಣದ ದಹರಾಕಾಶ ವಿರುವುದು. ಪರಬ್ರಹ್ಮ ಚೈತನ್ಯವು ಇಲ್ಲಿ ಅಂತಃಕರಣದಲ್ಲಿ ಪ್ರತಿಫಲಿಸಿ, ಇಲ್ಲಿರುವ ಅಂತಃಕರಣಾಭಿಮಾನಿಯಾದ ಪ್ರಾಣದಲ್ಲಿ ಏಕತ್ವವನ್ನು ಹೊಂದಿ ತಾನೇ ಪ್ರಾಣನೆಂದೂ, ಅಂತಃಕರಣವೆಂದೂ ತಿಳಿದುಕೊಂಡು, ಜೀವತ್ವದಿಂದ ಕಾಣಿಸಿಕೊಂಡಿರುವುದು. ಪ್ರಾಣವಾಯುವೂ ಅಂತಃಕರಣವೂ ಎಲ್ಲೆಲ್ಲಿ ಸಂಚರಿಸಿದರೆ ಅಲ್ಲೆಲ್ಲಾ ತಾನೇ ಹೋದೆನೆಂದು ತಿಳಿದುಕೊಳ್ಳುವುದು. ಇಲ್ಲಿರುವ ಅಷ್ಟದಳ ಪದ್ಮದ ದಳಗಳಲ್ಲಿಯೂ ಅಲ್ಲಿನ ರೇಖಾವಲಯ ಗಳಲ್ಲಿಯೂ ಪ್ರಾಣವಾಯುವೂ ಅಂತಃಕರಣವೂ ಸಂಚರಿಸಲಾಗಿ, ಒಂದೊಂದು ದಳಕ್ಕೆ ಅಥವಾ ಒಂದೊಂದು ರೇಖಾವಲಯಕ್ಕೆ ಅವುಗಳು ಬಂದಾಗ ಜೀವರೂಪನಾಗಿ ತೋರುವ ಆ ಬ್ರಹ್ಮಚೈತನ್ಯವು, ದೇಹಭ್ರಾಂತಿಯಿಂದ ರೇಖಾವಲಯಗಳಿಗೆ ಅನುಸಾರಿಯಾಗಿ, ನಾನಾ ವಿಧವಾದ ಬುದ್ಧಿಯುಳ್ಳದ್ದಾಗಿ ಭ್ರಮಿಸುತ್ತಿರುವಂತೆ ಭಾಸ ವಾಗುವುದು. ಹೀಗೆ ಅನಾಹತ ಚಕ್ರದಲ್ಲಿ ಪ್ರಾಣ ಅಂತಃಕರಣಗಳಲ್ಲಿ ಪ್ರತಿಫಲಿಸಿ, ಜೀವನಂತೆ ತೋರುತ್ತಿರು ವವನೂ ಮತ್ತು ಆ ಚಕ್ರದಲ್ಲಿ ಓಂಕಾರದ ಅಕಾರ, ಉಕಾರಗಳೊಡನೆ ಸೇರಿ ಓಕಾರವಾಗಿ ಭಾಸವಾಗುವವನೂ ಪರಮಾತ್ಮನೇ ಎಂದು ತಿಳಿದುಕೊಂಡು, ಯೋಗಿಯು ತಾನು ಜೀವನಲ್ಲವೆಂದೂ, ಜೀವತ್ವವು ತನಗೆ ಕೇವಲ ಭ್ರಾಂತಿಯೆಂದೂ, ತಾನೇ ಪರಬ್ರಹ್ಮನೆಂದೂ ಸೋಹಂ ಭಾವದಿಂದ ಕೂಡಿ ಮುಂದೆ ವಿಶುದ್ಧಿಚಕ್ರಕ್ಕೆ ತಲಪಬೇಕು.

ಸಾಕ್ಷಾತ್ಷೋಡಶ ದಿವ್ಯ ಪತ್ರಕಮಲೇ ಜೀವಾತ್ಮ ಸಂಸ್ಥಾಪಿತೇ |
ರುದ್ರಗ್ರಂಥಿಮಯೇ ಮನೋನ್ಮನಿ ಪಥೇ ಜಾಲಂಧ್ರ ಪೀಠಾಂತರೇ |
ಶುಭ್ರಂ ಜ್ಯೋತಿಮಯಂ ಶರೀರಸಹಿತಂ ಸಂಸ್ಥಂ ಸುಧಾ ಶೀತಲಂ |
ಶಬ್ದಬ್ರಹ್ಮ ನಿವಾಸಭೂತ ವದನಂ ರಾಮಂ ಭಜೇ ತಾರಕಂ ||

ಶರೀರದ ಐದನೇ ಚಕ್ರವಾದ ವಿಶುದ್ಧಿ ಚಕ್ರವು ಕಂಠಪ್ರದೇಶದಲ್ಲಿದೆ. ಇದಕ್ಕೆ ಹದಿನಾರು ದಳಗಳಿವೆ. ಇದರಲ್ಲಿ 'ಅ'ಕಾರದಿಂದ 'ಅಃ' ಕಾರದವರೆಗಿನ ಹದಿನಾರು ಸ್ವರ ಬೀಜಾಕ್ಷರಗಳು ಇವೆ. ಇದು ಮನೋಮಯ ಕೋಶವಾಗಿಯೂ, ಆಕಾಶ ತತ್ವಕ್ಕೆ ಪ್ರಧಾನವಾದ ಸ್ಥಳವಾಗಿಯೂ ಇದೆ. ಇದಕ್ಕೆ ಶರೀರಾಭಿಮಾನಿಎಯಾ ಜೀವಾತ್ಮನು ಅಧಿದೇವತೆ. ಇಲ್ಲಿ ಲಯತತ್ವ ಪ್ರತಿಪಾದಕವಾದ ರುದ್ರಗ್ರಂಥಿ ಇವೆ. ಇಲ್ಲಿ ಉಪಾಸಕನು ತಾನು ಜೀವನಲ್ಲವೆಂಬ ಅಂಶವನ್ನು ತಿಳಿದು ತನ್ನ ಅವಿದ್ಯಾ ಕರ್ಮವೆಲ್ಲಾ ಲಯಹೊಂದಲಾಗಿ ತನ್ನ ಬುದ್ಧಿರೂಪವಾದ ಮನಸ್ಸಿನಲ್ಲಿ 'ಸೋಹಂ' ಭಾವವನ್ನು ಮಾತ್ರ ಹೊಂದಿ, ರುದ್ರಗ್ರಂಥಿಯನ್ನು ಭೇದಿಸಿಕೊಂಡು ತಾನು ವಿಶುದ್ಧನಾಗಿ ಮುಂದೆ ಆಜ್ಞಾಚಕ್ರವನ್ನು ತಲಪುವನು. ಶಬ್ದಬ್ರಹ್ಮ ನಿವಾಸವಾದ ವಿಶುದ್ಧಿ ಚಕ್ರದಲ್ಲಿ ಮೃದಂಗದ ಧ್ವನಿಯ ಹಾಗೆ ಇರುವ ಓಂಕಾರದ ಸೌಮ್ಯವಾದ ತೇಜೋನಾದವು ಉಪಾಸಕನ ಅನುಭವಕ್ಕೆ ಬರುತ್ತದೆ. ಈ ವಿಶುದ್ಧಿ ಚಕ್ರದಲ್ಲಿ ಪದ್ಮಾಸನದಲ್ಲಿ ಕುಳಿತು ಗಲ್ಲವನ್ನು ಕತ್ತಿನ ಕೆಳಭಾಗಕ್ಕೆ ಅದುಮಿಕೊಂಡು ಭ್ರೂಮಧ್ಯದಲ್ಲಿ ದೃಷ್ಟಿಯನ್ನಿಟ್ಟು "ಸೋಹಂ" ಎಂದು ಜಾಲಂಧರ ಮುದ್ರೆಯಿಂದ ಧ್ಯಾನಮಾಡುತ್ತಾ ಬಂದರೆ, ಯೋಗಿಯು ಆಜ್ಞಾಚಕ್ರಕ್ಕೆ ಸೇರಿ ಅಲ್ಲಿ ಪ್ರಪಂಚ ವ್ಯವಹಾರವಿಲ್ಲದವನಾಗಿ ಅವನಿಗೆ ಬ್ರಹ್ಮಾನಂದದಲ್ಲಿ ಮಗ್ನತೆಯುಂಟಾಗಿ, ಸಹಸ್ರಾರದಿಂದ ಬರುವ ಅಮೃತಧಾರಾಭಿಷೇಚನದಿಂದ ತಂಪುಂಟಾಗುವುದು. ಈ ಮನಸ್ಸಿನ ಸ್ಥಿತಿಗೆ "ಉನ್ಮನ್ಯಾವಸ್ಥೆ" ಎಂದು ಹೆಸರು. ಇಂತಹ ಅವಸ್ಥೆಗೆ ದಾರಿಯಾದ "ಮನೋನ್ಮನಿ" ಪಥದಲ್ಲಿರುವ, ಈ ವಿಶುದ್ಧ ಚಕ್ರಕ್ಕೆ, ಜೀವರೂಪದಲ್ಲಿ ಅಧಿದೇವತೆ ಯಾಗಿ ಕಾಣುವ ತಾರಕಬ್ರಹ್ಮನಾದ ಶ್ರೀರಾಮನನ್ನು ಭಜಿಸುತ್ತೇನೆ.

ಭ್ರೂಮಧ್ಯೇ ನಿಗಮಾಗಮೋಜ್ವಲಪದೇ ಚಂದ್ರೇ ತ್ರಿಮಾರ್ಗಾಂತರೇ |
ನಿರ್ದ್ವಂದ್ವೇ ನಿಖಿಲಾರ್ಥತತ್ವ ವಿಲಸತ್ಸಾಕ್ಷಾತ್ಸುಷುಮ್ನೋನ್ಮುಖೇ |
ಆಸೀನಂ ಪ್ರಳಯಾರ್ಕ ಭಾಸುರಪರಂಜ್ಯೋತಿ ಸ್ವರೂಪಾತ್ಮಕಂ |
ಕರ್ಣಾಮಂಚಿತ ಮೋಕ್ಷಲಕ್ಷ್ಮಿಸಹಿತಂ ರಾಮಂ ಭಜೇ ತಾರಕಂ ||

ಶರೀರದಲ್ಲಿ ಆರನೇ ಚಕ್ರವು ಆಜ್ಞಾಚಕ್ರವು. ಇದನ್ನು ತಂತ್ರಶಾಸ್ತ್ರದಲ್ಲಿ ಶಿವನ ತೃತೀಯ ನೇತ್ರವೆನ್ನುವರು (Organ of Clair Voyance).ಇದು ಭ್ರೂಮಧ್ಯದಲ್ಲಿದೆ. ಇದು ಎರಡು ಕರ್ಣಗಳ ನಡುವೆ ಇದೆ.ಇದೇ ಬ್ರಹ್ಮ ಸಾಕ್ಷಾತ್ ಸಾಧನೆಗೆ ಕೊನೇ ಚಕ್ರವು. ಇಲ್ಲಿ ಯೋಗಿಯು ತ್ರಿನೇತ್ರನಾಗಿ ದಿವ್ಯದೃಷ್ಟಿಯನ್ನು ಹೊಂದುವನು. ಇದು ಎರಡು ದಳಗಳಿಂದ ಕೂಡಿದೆ. ಅವುಗಳ ಬೀಜಾಕ್ಷರಗಳು ಹ, ಕ್ಷ. ಈ ಚಕ್ರವು ಬುದ್ಧಿತತ್ವಾತ್ಮಕವಾದುದು. ಇದಕ್ಕೆ ಅಧಿಷ್ಠಾತೃ ಮೋಕ್ಷಲಕ್ಷ್ಮಿ ಸಮೇತ ಪರಮೇಶ್ವರನು. ಇದು ಓಂಕಾರದ 'ಮ'ಕಾರಸ್ಥಾನವಾಗಿದೆ. ಈ ಚಕ್ರದಲ್ಲಿ ಮನಸ್ಸನ್ನು ಸ್ಥಾಪಿಸತಕ್ಕ ಉಪಾಸಕನಿಗೆ ಸಮಸ್ತ ಜ್ಞಾನವೂ ಲಭ್ಯವಾಗಿ ಜ್ಞಾನಧಾರೆ ಪ್ರವಹಿಸುತ್ತದೆ. ಈ ಜ್ಞಾನ ಪ್ರವಾಹಗಳನ್ನು ತಡೆದು 'ಸೋಹಂ' ಎಂಬ ಆತ್ಮಸ್ವರೂಪ ವಿಷಯಕವಾದ ಪ್ರತ್ಯಯಗಳನ್ನು ಏಕತಾನವಾಗುವಂತೆ ಮಾಡಿಕೊಳ್ಳಬೇಕು. ಇಲ್ಲಿ ವಿಕಾಸವನ್ನು ಹೊಂದಿ ಮೇಲುಮುಖವಾಗಿರುವ ಚಿಚ್ಛಕ್ತಿಯನ್ನು ಸಾಕ್ಷಾತ್ಕರಿಸಿಕೊಳ್ಳ ಬೇಕು. ಇಲ್ಲಿಂದ ಊರ್ಧ್ವಗಮನ ಮಾಡುವ ಜೀವನನ್ನು ಶಿರಸ್ಸಿನಲ್ಲಿ ಸಹಸ್ರಾರ ಚಕ್ರದಲ್ಲಿರುವ ಪರಮಾತ್ಮನು ನೋಡುತ್ತಿರುವನು. ವಿಶುದ್ಧಿಚಕ್ರದಲ್ಲಿ ಓಂಕಾರದ ತೇಜೋನಾದಾನುಸಂಧಾನ ಮಾಡುತ್ತಾ ಬರುವ ಉಪಾಸಕನಿಗೆ, ಇಲ್ಲಿ ಆಂದರೆ ಸಮಸ್ತವನ್ನೂ ಬೀಜಾತ್ಮಕವಾಗಿ ಧರಿಸಿರುವ, ಮಹಾಬಿಂದುವಾದ ಈ ಆಜ್ಞಾಚಕ್ರದಲ್ಲಿ, ಅನಾದವೂ

ಮತ್ತು ಇದುವರೆಗೆ ಅಕಾರ, ಉಕಾರಗಳಲ್ಲಿ ಲೀನವಾಗಿ ಬಂದ ಸಮಸ್ತ ಸೂಕ್ಷ್ಮ ಶಕ್ತಿಗಳೂ, ಅತಿ ಸೂಕ್ಷ್ಮವಾಗಿ ಮಾರ್ಪಟ್ಟು, ಇಲ್ಲಿ ಮಕಾರದಿಂದ ಲಭ್ಯವಾಗುವ ಜ್ಞಾನಧಾರೆಯಿಂದ, ತಾನೇ ಪರಮಾತ್ಮನೆಂಬ ಶುದ್ಧ ಜ್ಞಾನ ರೂಪವಾದ ಕಳಾರೂಪವಾಗಿ ಓಂಕಾರದಲ್ಲಿ ಅಂತರ್ಗತವಾಗಿ, ಸಹಸ್ರಾರದಲ್ಲಿ ಓಂಕಾರ ರೂಪವಾಗಿ ಸೇರಿಹೋಗುವುದು. ಈ ಚಕ್ರದಲ್ಲಿ ಬಿಂದು ಸ್ಥಾನವಾದ ಭ್ರೂಮಧ್ಯ ಸ್ಥಾನವೇ ಸಮಸ್ತ ವೇದ, ಆಗಮಗಳಿಗೂ ಆಶ್ರಯಸ್ಥಾನ. ಇಲ್ಲಿರುವ ಓಂಕಾರದ ಮಕಾರದಲ್ಲಿ "ಅ, ಉ"ಗಳನ್ನು ದಾಟಿ ಬಂದ ಉಪಾಸಕನಿಗೆ 'ಮ' ಕಾರವೂ ಸೇರಿ 'ಓಂ'ಕಾರದ ಶಕ್ತಿಯ ಬೆಳಕು ಕಾಣುತ್ತದೆ. ಇಲ್ಲಿ ಚಂದ್ರ ಸ್ವರೂಪದ ಇಡಾನಾಡಿಯು ಸೂರ್ಯ ಸ್ವರೂಪದ ಪಿಂಗಳ ನಾಡಿಯೂ ಕೊನೆಗೊಳ್ಳುತ್ತದೆ. ಇಲ್ಲೇ ಅಗ್ನಿ ಸ್ವರೂಪವಾದ ಸುಷುಮ್ನಾನಾಡಿಯ ತುದಿಯು ಸಹಸ್ರಾರ ಚಕ್ರವನ್ನು ಮುಟ್ಟುತ್ತದೆ. ಹೀಗೆ ಚಂದ್ರ, ಸೂರ್ಯ, ಅಗ್ನಿ ಎಂಬ ಮೂರು ನಾಡಿಗಳ ಮೂಲಕವಾಗಿ ಆಜ್ಞಾಚಕ್ರವನ್ನು ತಲಪಬಹುದು. ಅದರಿಂದಲೇ ಈ ಚಕ್ರಕ್ಕೆ ತ್ರಿಮಾರ್ಗಾಂತರೇ ಎಂದು ಹೇಳಿರುತ್ತದೆ. ಇಲ್ಲಿನ ಸೂಕ್ಷ್ಮವಾದ ಬುದ್ಧಿತತ್ವ ಶಕ್ತಿಯಿಂದ ಉಪಾಸಕನ ಸಕಲ ದ್ವಂದ್ವಗಳೂ (ಸಂಶಯಗಳೂ) ನಾಶಹೊಂದುತ್ತವೆ. ಇಲ್ಲಿ ಸಮಸ್ತ ಪ್ರಪಂಚವನ್ನೂ ಲಯಮಾಡುವ ಶಕ್ತಿಯುಳ್ಳ ನಾದಾಂತವಾದ ಕಳಾಸ್ವರೂಪದಿಂದ ಇರುವ ಪರಮಾತ್ಮನು ಉಪಾಸಕನ ಸಮಸ್ತ ಸಂಕಲ್ಪ ವಿಕಲ್ಪಗಳನ್ನೂ ದ್ವೈತ ಪ್ರಪಂಚವನ್ನೂ ಲಯ ಮಾಡುವನು.

ಪ್ರಾಣಾದಿ ಷೋಡಶಕಲೆಗಳು ಕೇವಲ ಅಜ್ಞಾನದಿಂದ ತೋರಿಬಂದವೆಂದೂ, ಆ ಕಲೆಗಳು ಅಂದರೆ ಪ್ರಾಣ, ಶ್ರದ್ಧೆ, ಆಕಾಶ, ವಾಯು, ತೇಜಸ್ಸು, ಅಪ್ಪು, ಪೃಥ್ವಿ, ಇಂದ್ರಿಯಗಳು, ಮನಸ್ಸು, ಅನ್ನ, ವೀರ್ಯ, ತಪಸ್ಸು, ವೇದಗಳು, ಕರ್ಮ, ಲೋಕಗಳು, ಹೆಸರುಗಳು ಇವುಗಳೆಲ್ಲವೂ ಮಾಯಿಕವಾಗಿ ಸೃಷ್ಟಿಯಾದುವೆಂದೂ, ಪರಬ್ರಹ್ಮನಿಗಿಂತ ಬೇರೆ ಇರದೆ, ಪರಬ್ರಹ್ಮನಲ್ಲೇ ಅಡಗುವುವು ಎಂದೂ, ಎಲ್ಲವೂ ಪರಬ್ರಹ್ಮನೇ ಎಂದೂ, ನಿಖಿಲ ಅರ್ಥತತ್ವವನ್ನು ಚೆನ್ನಾಗಿ ತಿಳಿದು ಉಪಾಸಕನು ಇಲ್ಲಿಂದ 'ಓಂ'ಕಾರ ರೂಪಿಯಾಗಿ ಸಹಸ್ರಾರಕ್ಕೆ ತಲಪಿ, ನಿಷ್ಕಲನೂ ಅಮೃತನೂ ಆಗುವನು. ಇಂತಹ ಆತ್ಮ ಸಾಕ್ಷಾತ್ಕಾರಕ್ಕೆ ಜ್ಞಾನದಾತೃವಾಗಿ, ಮೋಕ್ಷಲಕ್ಷ್ಮಿಯಿಂದ ಕೂಡಿ ಆಜ್ಞಾಚಕ್ರದಲ್ಲಿ ಪ್ರಕಾಶಿಸುವ, ಪರಬ್ರಹ್ಮನಾದ ತಾರಕ ರಾಮನನ್ನು ಭಜಿಸುತ್ತೇನೆ.

ಶೀರ್ಷಾಂಭೋರುಹ ಕರ್ಣಿಕೇ ನಿರುಪಮೇ ಶ್ರೀ ಷೋಡಶಾಂತೇ ಶಶಿ |
ಪ್ರಖ್ಯಾತ್ಮೈಕ್ಯಕೃತ ವಾರ್ಧಿವೀಚಿಲಹರೀ ನಿರ್ವಾಣ ಪೀಠಾಂತರೇ |
ಶಬ್ದ ಬ್ರಹ್ಮಪರಂ ಚರಾಚರಗುರುಂ ತೇಜಃಪರಂ ಶಾಶ್ವತಂ |
ಸತ್ಯಾಸತ್ಯಮಗೋಚರಂ ಹೃದಿ ಸದಾ ಸೀತಾಸಮೇತಂ ಭಜೇ ||

ಶರೀರದಲ್ಲಿ ನೆತ್ತಿಯಲ್ಲಿ ಸ್ವಲ್ಪ ಮುಂಭಾಗದ ಬ್ರಹ್ಮರಂಧ್ರದಲ್ಲಿ ಏಳನೆಯದೂ ಕೊನೆಯದೂ ಆದ ಸಹಸ್ರಾರ ಚಕ್ರವಿದೆ. ಇದು ಆಜ್ಞಾ ಚಕ್ರದ ಮೇಲೆ ಇದೆ. ಇಲ್ಲಿಗೆ ತಲಪುವ ಉಪಾಸಕನಿಗೆ ಇಲ್ಲಿನ ಚಂದ್ರಮಂಡಲ ದಿಂದ ಪ್ರವಹಿಸುವ ಜ್ಞಾನಾಂಬುಧಿಯ ಸುಧಾಪೂರಿತ ಅಲೆಗಳು ತಂಪನ್ನುಂಟುಮಾಡುತ್ತವೆ. ಈ ಚಕ್ರದಲ್ಲಿ ಉಪಾಸಕನ ಸರ್ವ ಉಪಾಧಿಗಳೂ ಹಿಂದಿನ ಶ್ಲೋಕದಲ್ಲಿ ಹೇಳಿದ ಸಮಸ್ತ ಷೋಡಶ ಕಲೆಗಳೂ ವಿಲೀನವಾಗಿ, ಸಮಸ್ತ ಸೃಷ್ಟಿ, ಸ್ಥಿತಿ, ಲಯ ಕರ್ಮಗಳಿಗೆ ಕಾರಣವಾದ ಮನಸ್ಸೂ ಲಯ ಹೊಂದಿ, ಸಮಸ್ತ ಪ್ರಾಪಂಚಿಕ ಕ್ರಿಯೆಗಳೂ ನಿವೃತ್ತಿಯಾಗಿ, ಹೀಗೆ ಮನಸ್ಸು ಲೀನವಾದ ನಂತರ, ಉಪಾಸಕನು ಅಖಂಡರೂಪವಾದ ಇಲ್ಲಿನ ಬ್ರಹ್ಮ ಚೈತನ್ಯದಲ್ಲಿ ಬ್ರಹ್ಮಾನಂದ ಅಮೃತದಲ್ಲಿ ಮುಳುಗಿ ಲೀನವಾಗುವನು. ಪ್ರಣವಸ್ವರೂಪವಾದ ಸಕಲ ನಾಮ ರೂಪಗಳ ಉಗಮಸ್ಥಾನವೂ, ವೇದರೂಪವೂ, ಸಾಮಾನ್ಯರಿಗೆ ವೈಖರೀಶಬ್ದವಾಗಿಯೂ, ಪರಿಣತ ಯೋಗಿಗೆ ಮಧುರ ವಾಣಿಯಾಗಿಯೂ, ಧ್ಯಾನಸ್ಥ ಯೋಗಿಗೆ ಪ್ರಶಾಂತ ವಾಣಿಯಾಗಿಯೂ, ಸಕಲ ವೇದಾಕ್ಷರಗಳಿಗೂ ಮಂತ್ರಗಳಿಗೂ ಮೂಲವೂ ಆದ ಶಬ್ದಬ್ರಹ್ಮವು ಇಲ್ಲಿ ಅಂತ್ಯಗೊಳ್ಳುವುದು. ಇಂತಹ ಮೋಕ್ಷಪೀಠವಾದ

ಸಹಸ್ರಾರ ಚಕ್ರದಲ್ಲಿ ನಿರ್ಗುಣ ಬ್ರಹ್ಮನಾಗಿರುತ್ತಾ ಉಪಾಸ್ಯ ಜೀವನನ್ನು ತನ್ನೊಡನೆ ಅಭೇದದಿಂದ ಐಕ್ಯ ಗೊಳಿಸಿಕೊಳ್ಳುವ ಸತ್ಯವೂ ಅಲ್ಲದೆ ಅಸತ್ಯವೂ ಅಲ್ಲದೆ ಅನಿರ್ವಚನೀಯವಾಗಿ ಇರುವ ಪ್ರಪಂಚಕ್ಕೂ, ಅಗೋಚರ ನಾಗಿ ಸಮಸ್ತ ಪ್ರಾಣಿಗಳಿಗೂ ಗುರುವಾಗಿ, ತೇಜಸ್ವಿಯೂ ಶಾಶ್ವಿತನೂ ಆದ, ತಾರಕಬ್ರಹ್ಮನಾದ, ಸೀತಾ ಸಮೇತನಾದ ರಾಮಚಂದ್ರನನ್ನು ಭಜಿಸುತ್ತೇನೆ.

ಇನ್ನು ಹಂಸಮಂತ್ರಾತ್ಮಕವಾಗಿ ಯೋಗಮಾರ್ಗದಲ್ಲಿ ಸಹಸ್ರಾರದಲ್ಲಿ ಬ್ರಹ್ಮಸ್ವರೂಪವನ್ನು ಪಡೆಯುವ ಯೋಗಿಯ ವಿಚಾರ ಕೆಳಗೆ ವಿವರಿಸಿದೆ.

ನಮ್ಮ ಶರೀರದಲ್ಲಿರುವ ಏಳು ಚಕ್ರಗಳಲ್ಲಿ 'ಸ'ಕಾರವು ಮೂಲಾಧಾರ ಚಕ್ರದಲ್ಲೂ, 'ಹ'ಕಾರವು ಆಜ್ಞಾ ಚಕ್ರದಲ್ಲೂ ಇದೆ. 'ಸ'ಕಾರವೇ ಚಂದ್ರಶಕ್ತಿ. ಇದೇ ಉಚ್ಛ್ವಾಸ ರೂಪಿನಲ್ಲಿ ಪ್ರಾಣವಾಯುವಿನ ಮೇಲ್ಭಾಗದ ಸಂಚಾರವಾಗಿದೆ. 'ಹ'ಕಾರವೇ ಸೂರ್ಯಶಕ್ತಿ, ನಿಶ್ವಾಸ ರೂಪದಲ್ಲಿ ಪ್ರಾಣವಾಯುವಿನ ಕೆಳಭಾಗದ ಸಂಚಾರ ವಾಗಿದೆ. 'ಹ'ಕಾರ ರೂಪನಾದ ಸೂರ್ಯನೂ, 'ಸ'ಕಾರ ರೂಪನಾದ ಚಂದ್ರನೂ, ಒಂದಕ್ಕೊಂದು ಆಕರ್ಷಿಸು ವುದರಿಂದ ಸ್ಪಂದನ ಶಕ್ತಿಯುಂಟಾಗಿ, ಪಂಚಪ್ರಾಣಗಳ ಮತ್ತು ಶ್ವಾಸೋಚ್ಛ್ವಾಸಗಳ ಕಾರ್ಯಗಳು ನಡೆಯುವುವು. ಈ ಸ್ಪಂದನಕಾರ್ಯಗಳು ಸುಷುಮ್ನಾ ನಾಡಿಯ ಎಡ, ಬಲ ಭಾಗಗಳಲ್ಲಿರುವ ಚಂದ್ರನಾಡಿ ಅಂದರೆ ಇಡಾನಾಡಿ, ಸೂರ್ಯನಾಡಿ ಅಂದರೆ ಪಿಂಗಳನಾಡಿಗಳಿಂದ ನಡೆಯುವುವು. ಈ ಸ್ಪಂದನದಿಂದ ಉಂಟಾಗುವ "ಹಂಸಃ ಹಂಸಃ" ಎಂಬ ಮಂತ್ರವನ್ನು ಜೀವನು ತನ್ನಷ್ಟಕ್ಕೆ ತಾನೇ ನಿತ್ಯವೂ 21,600 ಸಾರಿ ಪುನರಾವೃತ್ತಿ ಮಾಡುತ್ತಲೇ ಇರುವನು. ಈ ಪುನರಾವೃತ್ತಿಯನ್ನು ಪ್ರತಿನಿತ್ಯವೂ ಕೊಂಚ ಕಾಲ ಚಿತ್ತೈಕಾಗ್ರತೆ ಯಿಂದ ಮಾಡುತ್ತಾ ಬಂದರೆ (ಅಹಂ, ಸಃ) ಎಂಬುದಾಗಿ, ಕೊನೆಗೆ "ಸೋಹಂ" ಆಗುವುದು. "ಸೋಹಂ" ಅಂದರೆ ಆ ಪರಮಾತ್ಮನೇ ಜೀವರೂಪವಾದ ನಾನು ಎಂಬ ಅರ್ಥ. ಈ ಸೋಹಂನಲ್ಲಿ ಸ್+ಅ+ಉ+ಹ+ಮ್ ಇವುಗಳು ಇವೆ. ಉಪಾಸಕನ ಉಪಾಸನೆಯಿಂದ ಸ ಅಕ್ಷರಶಕ್ತಿಯು ಅಲ್ಲಿರುವ ಅಕಾರದೊಡನೆ ಸೇರಿ, ಸುಷುಮ್ನಾ ನಾಡಿಯೊಳಗೆ ಪ್ರವೇಶಿಸಿ ಅನಾಹತ ಚಕ್ರದಲ್ಲಿ ಓಂಕಾರದ ಉಕಾರ ವನ್ನು ಸೇರಿ, ಸೋ ಆಗುವುದು. ನಂತರ, ಆಜ್ಞಾಚಕ್ರದಲ್ಲಿನ ಹಕಾರ ಶಕ್ತಿಯನ್ನೂ, ಅಲ್ಲಿನ ಓಂಕಾರದ ಮಕಾರವನ್ನೂ ಸೇರಿ "ಸೋಹಮ್" (ಸೋಹಂ) ಆಗುವುದು. ಈ ರೀತಿ ಹಂಸ ಮಂತ್ರವು ಓಂಕಾರ ಮಂತ್ರವನ್ನು ಸೇರಿ, ಅಂದರೆ ಹಂಸ ಮಂತ್ರಾರ್ಥದ ಜೀವನೂ, ಓಂಕಾರ ಮಂತ್ರಾರ್ಥದ ಪರಮಾತ್ಮನೂ ಸೇರಿ, ಸಹಸ್ರಾರದಲ್ಲಿ ಬ್ರಹ್ಮನೊಡನೆ ಅಭೇದವಾಗಿ ಐಕ್ಯವನ್ನು ಹೊಂದುವನು.

ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರಿಂದ ರಚಿತವಾದ ಈ ರಾಮಕರ್ಣಾಮೃತದ ದ್ವಿತೀಯಾ ಶ್ವಾಸದಲ್ಲಿ ಬಂದಿರುವ ಶ್ಲೋಕಗಳ ಆಧಾರದ ಮೇಲೆ, ಉಪನಿಷತ್ತುಗಳು, ಯೋಗಗ್ರಂಥಗಳು, ದೇವೀ ಪರ ನಾಮ ಭಾಷ್ಯಗಳು, ಪುರಾಣಗಳು ಮುಂತಾದ ಆಧಾರಗಳನ್ನೂ ಸಮಯೋಚಿತವಾಗಿ ಸಮನ್ವಯ ಮಾಡಿಕೊಂಡು, ಮೇಲ್ಕಂಡಂತೆ ಟಿಪ್ಪಣಿಗಳನ್ನು ಬರೆದು, ಒಂದು ಚಿತ್ರವನ್ನು ಕೊಡಲಾಗಿದೆ. ಈ ಅಂಶಗಳೆಲ್ಲಾ ರಹಸ್ಯ ವಾದ್ದರಿಂದಲೂ, ಉಪಾಸಕರಿಗೆ ಅನುಭವಕ್ಕೆ ಬರಲು ಅವರ ಅರ್ಹತೆಗಳನ್ನು ತಿಳಿದು, ಅದಕ್ಕೆ ಅನುಸಾರವಾಗಿ ಉಪದೇಶಿಸುವ, ಶ್ರೇಷ್ಠನಾದ, ಸಾಕ್ಷಾತ್ಕಾರ ಪಡೆದ ಗುರುವು ಅವಶ್ಯಕವಾಗಿ ಬೇಕಾಗುವುದರಿಂದಲೂ, ಇಲ್ಲಿ ಇನ್ನು ಹೆಚ್ಚಾಗಿ ವಿವರಿಸಿಲ್ಲ. ಮೇಲಾಗಿ ವಿವರಿಸಲು ಅನುಭವವಿಲ್ಲದೆ, ಅಷ್ಟು ಪಾಂಡಿತ್ಯ ಸಾಲದೆ, ಕೇವಲ ಹಲವು ಗ್ರಂಥಗಳ ಅವಲೋಕನದಿಂದ ಈ ರಾಮ ಕರ್ಣಾಮೃತವನ್ನು ಕನ್ನಡಿಸಿದ ಲೇಖಕನಿಗೆ ಅಷ್ಟು ಶಕ್ತಿಯೂ ಸಾಲದು. ಅಂತರ್ಜ್ಯೋತಿಯಾದ, ಆತ್ಮಾರಾಮನ ಅಂತಃಪ್ರೇರಣೆಯಲ್ಲದೆ ಬೇರೆ ಯಾವ ಶಕ್ತಿಯೂ ಇಲ್ಲದ್ದರಿಂದ, ಜ್ಞಾನಿಗಳು ಈ ಕನ್ನಡಿಸಿದ ಲೇಖಕನ ಕಾರ್ಯದಲ್ಲಿ ದೋಷಗಳೇನಾದರೂ ಇದ್ದರೆ ಮನ್ನಿಸಿ, ಹಂಸಕ್ಷೀರ ನ್ಯಾಯದಂತೆ ಶ್ಲಾಘ್ಯಾಂಶಗಳನ್ನು ಗ್ರಹಿಸಬೇಕಾಗಿ ಪ್ರಾರ್ಥನೆ.

ಅಲ್ಲದೆ, ಯೋಗಸಿದ್ಧರು ಬರೆದ ಗ್ರಂಥಗಳಲ್ಲೂ ಕೂಡ, ಯೋಗಪ್ರಕ್ರಿಯೆಗಳಲ್ಲಿ ಬಹಳ ವ್ಯತ್ಯಾಸಗಳಿವೆ. ಏಕೇ೦ದರೆ ಆ ಗ್ರಂಥಕರ್ತೃಗಳಾದ ಯೋಗಿಗಳು, ತಮತಮಗೆ ಸಿದ್ಧಿಯಾದ ಅನುಭವಗಳ ಆಧಾರದ ಮೇಲೆ ಗ್ರಂಥ ರಚಿಸಿದ್ದಾರೆ. ಅವರ ಅನುಭವಗಳು ಅವರ ಶರೀರ ಪ್ರಕೃತಿ, ಉಪಾಸನೆಯ ಸೌಕರ್ಯ, ಇಚ್ಛಾ ವಿಶೇಷ ಇವುಗಳನ್ನು ಅವಲಂಬಿಸಿವೆ.

ಅನರ್ಘ್ಯ ಮಣಿಪೂರಕೋಲ್ಲಸಿತ ದಿವ್ಯತೇಜಃಪರಂ ।
ಅನಾಹತ ಸರೋರುಹಂ ಸ್ಫುರಿತ ಹಂಸ ನಾದಾನ್ವಿತಂ ।
ಅನಂತದಳಪಂಕಜಂ ಸ್ಫುಟಮೃಗಾಂಕ ಬಿಂಬಾಮೃತಂ ।
ಪ್ಲುತಾಂಗಮಖಿಲಾಸ್ಪದಂ ದಶರಥಾತ್ಮಜಂ ಚಿಂತಯೇ ॥

ಶರೀರದಲ್ಲಿ ನಾಭಿ ಪ್ರದೇಶದಲ್ಲಿರುವ ಶ್ರೇಷ್ಠವಾದ ಮಣಿಪೂರ ಚಕ್ರವನ್ನು ಉಪಾಸನೆ ಮಾಡಿ, ಧ್ಯಾನಾಭ್ಯಾಸ ದಿಂದ ಅನಾಹತ ಚಕ್ರವನ್ನು ಹೊಂದಿದ ಯೋಗಿಗೆ, ಅಲ್ಲಿ ಅಂತರ್ಮುಖದಲ್ಲಿ ಕೋಟಿ ಸೂರ್ಯಪ್ರಕಾಶವಾದ ದಿವ್ಯ ತೇಜೋರೂಪದಿಂದ ಕಾಣುವವನಾದ, ಆ ಅನಾಹತ ಚಕ್ರದಲ್ಲಿ ಯೋಗಿಯು ಅಪಾನ ವಾಯುವನ್ನು ಪ್ರಾಣ ವಾಯುವಿನೊಡನೆ, ಐಕ್ಯಮಾಡಿ ಧ್ಯಾನಮಗ್ನನಾದಾಗ, ಅವನಿಗೆ, ಹಂಸ ಅಥವಾ ಪ್ರಣವನಾದಧ್ವನಿಯಾಗಿ ಕೇಳಿ ಬರುವವನಾದ, ಅಲ್ಲಿಂದ ಮುಂದುವರಿದ ಯೋಗಿಗೆ ಅನಂತದಳಪದ್ಮವಾದ ಸಹಸ್ರಾರ ಚಕ್ರವನ್ನು ತಲಪುವ ವೇಳೆ ಯಲ್ಲಿ, ಅಲ್ಲಿರುವ ಚಂದ್ರಮಂಡಲದಿಂದ ಸ್ರವಿಸುವ ಸುಧಾ ಪ್ರವಾಹದಿಂದ ಅಭಿಷೇಚನವಾಗಿ, ಅವನಿಗೆ ಬ್ರಹ್ಮ ಸಾಕ್ಷಾತ್ಕಾರವಾದಾಗ ಪರಬ್ರಹ್ಮನೊಡನೆ ನಿರ್ಗುಣ ಬ್ರಹ್ಮ ರೂಪದಲ್ಲಿ ಜೀವರೂಪ ಭ್ರಾಂತಿಯನ್ನು ಬಿಟ್ಟು ಅಭೇದ ಐಕ್ಯಹೊಂದುವವನಾದ, ತಾರಕಬ್ರಹ್ಮನಾದ, ಸದ್ರೂಪದಲ್ಲಿ ಸಕಲಕ್ಕೂ ಆಶ್ರಯನಾದ, ದಶರಥ ಪುತ್ರನಾದ ಶ್ರೀರಾಮನನ್ನು ಧ್ಯಾನಿಸುತ್ತೇನೆ.

ಜಾಗ್ರತ್ಸ್ವಪ್ನ ಸುಷುಪ್ತಿಕಾಲ ವಿಲಸತ್ತತ್ವಾತ್ಮ ಚಿನ್ಮಾತ್ರಕಂ ।
ಚೈತನ್ಯಾತ್ಮಮನಾದಿ ಪಾಪರಹಿತಂ ಭೂಮ್ಯಾದಿ ತನ್ಮಾತ್ರಕಂ ।
ಶಾಂಭವ್ಯಾದಿ ಸಮಸ್ತಯೋಗ ಕುಳಕಂ ಸಾಂಖ್ಯಾದಿ ತತ್ವಾತ್ಪರಂ ।
ಶಬ್ದಾವಾಚ್ಯಮಹಂ ನಮಾಮಿ ಸತತಂ ಉತ್ಪತ್ತಿ ನಾಶಾತ್ಪರಂ ॥

ಪ್ರಾಣಿಗಳ ಶರೀರದಲ್ಲಿ ಜಾಗ್ರತ್ ಸ್ವಪ್ನ ಸುಷುಪ್ತಿ (ಗಾಢನಿದ್ರೆ) ಎಂಬ ಮೂರು ಅವಸ್ಥೆಗಳಲ್ಲೂ, ಆತ್ಮ ಜ್ಯೋತಿಯಾಗಿಯೂ ಚೈತನ್ಯನಾಗಿಯೂ ಇರತಕ್ಕವನೂ, ಜನ್ಮವಿಲ್ಲದವನೂ, ಪಾಪರಹಿತನೂ, ಭೂಮಿ ಆಕಾಶವೇ ಮೊದಲಾದ ಪಂಚತನ್ಮಾತ್ರಗಳಲ್ಲೂ ವ್ಯಾಪಕನೂ, ಶಾಂಭವೀ, ಷಣ್ಮುಖಿ ಮೊದಲಾದ ದಶಮುದ್ರಾಯೋಗಗಳ ಮೂಲಕ ಯೋಗಿಗಳಿಂದ ಹೊಂದಲ್ಪಡತಕ್ಕವನೂ ಆದ (ಸಾಂಖ್ಯರು ಪ್ರಕೃತಿಯನ್ನು ಶಾಶ್ವಿತವೆನ್ನುತ್ತಾರೆ. ಪ್ರಕೃತಿ ಯಿಂದ ಪ್ರಪಂಚ ಹುಟ್ಟಿತು ಎನ್ನುತ್ತಾರೆ. ಪ್ರಪಂಚ ಉತ್ಪತ್ತಿಗೆ ಈಶ್ವರನನ್ನೂ ಒಪ್ಪುವುದಿಲ್ಲ ಮತ್ತು ಕಾರ್ಯ ಕಾರಣ, ತಾದಾತ್ಮ್ಯವನ್ನು ಒಪ್ಪುತ್ತಾರೆ. ಅಂದರೆ ಕಾರ್ಯ ಹೋದರೆ ಕಾರಣ ಹೋಗಬೇಕು ಎನ್ನುತ್ತಾರೆ. ಹೀಗಿದ್ದ ಮೇಲೆ, ಪ್ರಪಂಚ ಹೋದರೆ ಪ್ರಪಂಚಕ್ಕೆ ಕಾರಣವಾದ ಪ್ರಕೃತಿಯೂ ಹೋಗಬೇಕು. ಅವರ ಮತ ದಂತೆ ಪ್ರಕೃತಿ ಶಾಶ್ವಿತವಾಗುವ ಹಾಗಿಲ್ಲ. ಇಂತಹ), ನಿರೀಶ್ವರವಾದಿಗಳಾದ ಸಾಂಖ್ಯರ ತತ್ವಕ್ಕೆ ದೂರನಾದ, ಹೀಗೆಯೇ ಸರಿಯೆಂದು ವಾಚಾ ಹೇಳಲು ಅಸಾಧ್ಯನಾದ, ಉತ್ಪತ್ತಿ ನಾಶಗಳಿಲ್ಲದ, ಪರಬ್ರಹ್ಮ ವಸ್ತುವಾದ ಶ್ರೀರಾಮನನ್ನು ಭಜಿಸುತ್ತೇನೆ.

ಏಕಾಂತೇ ಕಮಲೇ ಜಲೇ ವಿಕಸಿತೇ ಚಂದ್ರೀಕೃತ ಸ್ಥಾಪಿತೇ |
ಸ್ಥಾನೇ ತಾರಕಮಂಟಪೇ ತನುಬಿಲ ವ್ಯಾಪ್ತೇ ಸುಧಾ ಮಂಟಪೇ |
ಅಬ್ಜಾರ್ಕಾನಲ ಮಂಡಲೋಪರಿ ಮಹಾ ಶ್ರೀಷೋಡಶಾಂತೇ ಸದಾ |
ನಾದಾಂತೇ ಜನಕಾತ್ಮಜಾನ್ವಿತಮಹಂ ರಾಮಂ ಭಜೇ ತಾರಕಂ ||

ಚಂದ್ರ, ಅಗ್ನಿ, ಸೂರ್ಯ ಮಂಡಲಗಳಾದ, ಮೂಲಾಧಾರ, ಮಣಿಪೂರ, ಆಜ್ಞಾಚಕ್ರಗಳ ಮೇಲ್ಭಾಗದಲ್ಲಿ ಮತ್ತು ಹದಿನಾರು ದಳಗಳುಳ್ಳ ವಿಶುದ್ಧಿಚಕ್ರದ ಮೇಲ್ಗಡೆಯಲ್ಲಿ ಇರುವ,ಯೋಗಿಗೆ ಧ್ಯಾನಕಾಲದಲ್ಲಿ ಅಂತಶ್ರೋತ್ರಕ್ಕೆ ಕೇಳಿಬಂದ ಪ್ರಣವನಾದವು ಕಳಾರೂಪವಾಗಿ ಪರಿಣಾಮ ಹೊಂದಿ ಲಯವಾಗುವ ಸ್ಥಳವಾದ, ಚಂದ್ರನಂತೆ ಸೀತಳವಾದ ಅಮೃತಧಾರೆಯ ಪ್ರವಾಹದಲ್ಲಿ ಅರಳಿರುವ ಸಹಸ್ರಾರ ಕಮಲದಲ್ಲಿ, ಬ್ರಹ್ಮರಂಧ್ರ ಪ್ರದೇಶದಲ್ಲಿ, ನಕ್ಷತ್ರದಂತೆ ಪ್ರಕಾಶಿಸುವ, ಅಮೃತಪ್ರಾಯವಾದ ಮಂಟಪದಲ್ಲಿ ಏಕಾಂತವಾಗಿರುವ, ತಾರಕಬ್ರಹ್ಮನಾದ, ಜಾನಕೀ ಸಮೇತನಾದ ಶ್ರೀರಾಮುನನ್ನು ಯಾವಾಗಲೂ ಭಜಿಸುತ್ತೇನೆ.

ಸಾಕೇತೇ ಮಣಿಮಂಟಪೇ ಸುರತರುಪ್ರಾಂತೇಷ್ವವರ್ಣೋಲ್ಲಸ |
ತ್ಪತ್ರೇ ತಾರಕ ಕರ್ಣಿಕೇ ಪ್ರವಿಲಸತ್ಕಲ್ಪ ಪ್ರಸೂನಾಂಚಿತೇ |
ಪದ್ಮೇ ವೇದಚತುಷ್ಕ ಮಂಡಲಸಿತೇ ನಾದಾಂತಶಯ್ಯಾತಲೇ |
ತಂ ಸೇವೇ ಧ್ರುವಮಂಡಲೇಂದು ವಿಗಳೇ ಪೀಯೂಷಧಾರಾವೃತಂ ||

ಅಯೋಧ್ಯಾ ಪಟ್ಟಣದಲ್ಲಿ, ರತ್ನಖಚಿತವಾದ ಮಂಟಪದಲ್ಲಿ ಶೋಭಿಸುವ ಮತ್ತು ಪ್ರಕಾಶಮಾನವಾದ ನಾನಾ ಬಣ್ಣದ ಎಲೆಗಳಿಂದಲೂ, ನಕ್ಷತ್ರದಂತೆ ಜಾಜ್ವಲ್ಯಮಾನವಾದ ಕೇಸರಗಳಿಂದಲೂ ಒಪ್ಪುವ ಹೂವುಗಳಿಂದಲೂ ಕೂಡಿದ ಕಲ್ಪವೃಕ್ಷದ ಪ್ರದೇಶದಲ್ಲಿ ನಾಲ್ಕು ವೇದಗಳೆಂಬ ದಳಗಳಿಂದ ಕೂಡಿದ, ಪದ್ಮದಲ್ಲಿ ಮಂಡಿಸಿರುವ, ಅರ್ಥಾತ್ ನಾಲ್ಕು ದಳಗಳುಳ್ಳ ಮೂಲಾಧಾರದಲ್ಲಿ ಸಕಾರ ರೂಪವಾಗಿಯೂ ನಾದಾಂತವಾದ ಆಜ್ಞಾ ಚಕ್ರದಲ್ಲಿ 'ಹ' ಕಾರ ರೂಪವಾಗಿಯೂ ನೆಲಸಿರುವ, ಧೃವ ಮಂಡಲವಾದ ಸಹಸ್ರಾರ ಚಕ್ರದಲ್ಲಿ ಅಲ್ಲಿ ಪ್ರವಹಿಸುವ ಚಂದ್ರಮಂಡಲದ ಅಮೃತಧಾರೆಯಿಂದ ಅಭಿಷಿಕ್ತನಾಗಿಯೂ ಇರುವ, ಆತ್ಮಾರಾಮನಾದ ಶ್ರೀರಾಮುನನ್ನು ಸೇವಿಸುತ್ತೇನೆ.

ವಸಂತಾಕ್ಷರಾಖ್ಯೇ ಚತುಷ್ಪತ್ರಪದ್ಮೇ |
ತ್ರಿಕೋಣಾಂತ ಕಂಠೇ ಧರಾತತ್ವಯುಕ್ತೇ |
ವರಾಭೀತಿ ಪಾಶಾಂಕುಶಂ ವಿದ್ರುಮಾಭಂ |
ಗಜೇಂದ್ರದಾಸ್ಯದೇವಂ ಭಜೇ ರಾಮಚಂದ್ರಂ ||

ಶರೀರದಲ್ಲಿ, ಗುದಾ ಪ್ರದೇಶದಲ್ಲಿ, ಗಾರ್ಹ್ಯಪತ್ಯಾಗ್ನಿಯಿಂದ ಕೂಡಿದ ತ್ರಿಕೋನಾಕಾರದ, ಅಗ್ನಿ ಚಕ್ರದ ಮೇಲಣ ತುದಿಯಲ್ಲಿ, ವ, ಶ, ಷ, ಸ ಎಂಬ ನಾಲ್ಕು ಬೀಜಾಕ್ಷರಗಳನ್ನೊಳಗೊಂಡು ಶೋಭಿಸುವ ನಾಲ್ಕು ದಳಗಳಿರುವ ಮೂಲಾಧಾರ ಚಕ್ರದಲ್ಲಿ, ಅಭಯ ವರದ ಹಸ್ತಗಳಿಂದಲೂ ಪಾಶಾಂಕುಶದಿಂದಲೂ ಕೂಡಿ, ಹವಳದ ಕಾಂತಿಯಿಂದ ಬೆಳಗುತ್ತಾ, ಪುಷ್ಟಿ ಶಕ್ತಿ ಸಹಿತನಾಗಿ, ಗಜಾನನನೆಂಬ ಹೆಸರಿನಿಂದ ಅಧಿದೇವತೆಯಾಗಿರುವ, ಧರಾತತ್ವಾತ್ಮಕನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಬಲಾಂತಕ್ಷರಾಖ್ಯಾಂ ಚ ಷಟ್ಪತ್ರ ಪದ್ಮೇ।
ಲಸತ್ತೋಯ ತತ್ವೇ ವರಾಭೀತಿಹಸ್ತೇ।
ಮಹಾಕುಂಡಿಕಾಂಚಾಕ್ಷಮಾಲಾನಹಂತಂ।
ಚತುರ್ವಕ್ತ್ರರೂಪಂ ಭಜೇ ರಾಮಚಂದ್ರಂ॥

ಶರೀರದಲ್ಲಿ ಮೂಲಾಧಾರ ಚಕ್ರಕ್ಕೆ ಮೇಲೆ ಅಂದರೆ ಗುಹ್ಯಪ್ರದೇಶದಲ್ಲಿ ಆರು ದಳಗಳುಳ್ಳ ಬ, ಭ, ಮ, ಯ, ರ, ಲ ಎಂಬ ಆರು ಬೀಜಾಕ್ಷರಗಳುಳ್ಳ ಜಲತತ್ವ ಪ್ರಧಾನವಾದ, ಸ್ವಾಧಿಷ್ಠಾನ ಚಕ್ರದಲ್ಲಿ, ಅಧಿದೈವತೆಯಾಗಿ, ವರದ, ಅಭಯ ಹಸ್ತಗಳಿಂದಲೂ, ಕಮಂಡಲು ಅಕ್ಷಮಾಲೆಗಳಿಂದಲೂ ಕೂಡಿ ಪ್ರಕಾಶಿಸುವವನಾದ, ಸರಸ್ವತೀ ಸಹಿತನಾದ, ಚತುರ್ಮುಖ ಬ್ರಹ್ಮರೂಪಿಯಾದ ಶ್ರೀರಾಮಚಂದ್ರಮೂರ್ತಿಯನ್ನು ಭಜಿಸುತ್ತೇನೆ.

ಡಫಾಂತಾಕ್ಷರಾಖ್ಯಾಮಣೀ ಪಾತ್ರ ಪೂರೇ।
ರಥಾಂಗಾಬ್ಜ ಹಸ್ತಂ ಮಹೇಂದ್ರೋಪಲಾಗಂ।
ಲಸದ್ವಹ್ನಿ ತತ್ವಂ ನಿಷಣ್ಣಂ ಗದಾಂಕಂ।
ಮಹಾವಿಷ್ಣುರೂಪಂ ಭಜೇ ರಾಮಚಂದ್ರಂ॥

ಶರೀರದಲ್ಲಿ ನಾಭಿಪ್ರದೇಶದಲ್ಲಿ ಹತ್ತು ದಳಗಳುಳ್ಳ ಮತ್ತು ಡ, ಢ, ಣ, ತ, ಥ, ದ, ಧ, ನ, ಪ, ಫ ಎಂಬ ಹತ್ತು ಬೀಜಾಕ್ಷರಗಳುಳ್ಳ, ಮಣಿಪೂರ ಚಕ್ರದಲ್ಲಿ ಅಗ್ನಿ ತತ್ವಾತ್ಮಕವಾಗಿ, ಆ ಚಕ್ರಕ್ಕೆ ಅಧಿದೇವತೆಯಾಗಿ, ಶಂಖ ಚಕ್ರಧಾರಿಯಾಗಿ, ನೀಲಮೇಘಶ್ಯಾಮನಾಗಿ ಇರುವ, ಬಾಹು ಬಂದಿಗಳಿಂದ ಅಲಂಕೃತನಾದ, ಲಕ್ಷ್ಮೀ ಸಮೇತನಾದ, ಮಹಾವಿಷ್ಣು ರೂಪಿಯಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಕಠಾಂತಾಕ್ಷರಾಖ್ಯೇ ಜಗತ್ಪ್ರಾಣ ತತ್ವೇ।
ವರಾಭೀತಿಹಸ್ತಂ ತ್ರಿಶೂಲಂ ದಧಾನಂ।
ಉಮಾನಾಥಮಬ್ಜಾರಿ ಖಂಡೋಜ್ಜ್ವಲಾಂಕಂ।
ಮಹಾತೇಜರೂಪಂ ಭಜೇ ರಾಮಚಂದ್ರಂ॥

ಹೃದಯ ಪ್ರದೇಶದಲ್ಲಿ,ಹನ್ನೆರಡು ದಳಗಳಿಂದಲೂ,'ಕ' ಯಿಂದ 'ಠ' ವರೆಗಿನ ಹನ್ನೆರಡು ಬೀಜಾಕ್ಷರಗಳಿಂದಲೂ ಕೂಡಿ ಪ್ರಾಣತತ್ವಾತ್ಮಕವಾದ, ಅನಾಹತ ಚಕ್ರದಲ್ಲಿ, ವರದ, ಅಭಯ ಹಸ್ತಗಳಿಂದ ಶೋಭಿತನಾಗಿ, ತ್ರಿಶೂಲವನ್ನು ಧರಿಸಿ ಅರ್ಧ ಚಂದ್ರಾಂಕಿತನಾಗಿ, ಮಹಾ ತೇಜಸ್ಸಿನಿಂದ ಪಾರ್ವತೀ ಸಮೇತನಾಗಿ, ಸದಾಶಿವ ಸ್ವರೂಪದಿಂದ ಅಧಿದೇವತೆಯಾಗಿ ಬೆಳಗುವ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ವಿಶುದ್ಧಾಧಿ ಪದ್ಮೇ ನಭೋತತ್ವರಮ್ಯೇ |
ಅರೂಪಂ ನಿರೂಪಂ ಸಮಸ್ತೇಷುವಾಸಂ |
ವಿಶಿಷ್ಟಂ ಮನೋಗಮ್ಯಮೇಕಂ ಅನಾದಿಂ |
ಭಜೇಹಂ ವಿಶುದ್ಧಂ ಶರೀರಾತ್ಮರಾಮಂ ||

ಕಂಠ ಪ್ರದೇಶದಲ್ಲಿ ಹದಿನಾರು ದಳಗಳುಳ್ಳ 'ಅ'ಯಿಂದ 'ಅಃ' ವರೆಗಿನ ಹದಿನಾರು ಸ್ವರ ಬೀಜಾಕ್ಷರಗಳುಳ್ಳ, ಆಕಾಶ ತತ್ವಾತ್ಮಕವಾದ ವಿಶುದ್ಧಿ ಚಕ್ರದಲ್ಲಿ ರೂಪವಿಲ್ಲದವನಾಗಿ ಒಂದು ವೇಳೆ ಮಾಯೆಯಿಂದ ರೂಪ ಕಂಡರೂ ಅದರ ಸಂಬಂಧರಹಿತನಾಗಿರುವ, ಸಮಸ್ತ ಪ್ರಾಣಿಗಳಲ್ಲೂ ಚೈತನ್ಯರೂಪದಿಂದ ಇರುವ, ಸತ್ವಪ್ರಧಾನವಾದ ಮನಸ್ಸಿಗೆ ಗೋಚರನೂ, ಅದ್ವಯನೂ, ಆದಿಯಿಲ್ಲದವನೂ, ಶರೀರದಲ್ಲಿ ಜೀವಾತ್ಮನಾಗಿ ಕಾಣಿಸಿಕೊಳ್ಳುವವನೂ ಆದ ಪರಬ್ರಹ್ಮ ಸ್ವರೂಪಿಯಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ದ್ವಿಪತ್ರಾಬ್ಜ ಮಧ್ಯೇ ಮನೋತತ್ವಗಮ್ಯೇ |
ಜಗತ್ಕಾರಣಂ ಜ್ಯೋತಿರಾನಂದರೂಪಂ |
ಲಸದ್ಭಾವ ವಿಷ್ಣುಂ ಮನೋಭಾವ ದೀಪ್ತಂ |
ಪರಾತ್ಮ ಸ್ವರೂಪಂ ಭಜೇ ರಾಮಚಂದ್ರಂ ||

ಶರೀರದಲ್ಲಿ ಭ್ರೂಮಧ್ಯದಲ್ಲಿರುವ ಎರಡು ದಳಗಳುಳ್ಳ, ಹ, ಕ್ಷ ಎಂಬ ಎರಡು ಬೀಜಾಕ್ಷರಗಳುಳ್ಳ ಮನೋತತ್ವಾತ್ಮಕವಾದ, ಆಜ್ಞಾಚಕ್ರದಲ್ಲಿ ಅಧಿಷ್ಠಾತೃವಾಗಿ ಜಗತ್ಕಾರಣನೂ, ಆನಂದರೂಪನೂ, ಸರ್ವ ವ್ಯಾಪಕನೂ ಆದ ಮೋಕ್ಷಲಕ್ಷ್ಮೀಸಹಿತ ಪರಮಾತ್ಮನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಸದಾನಂದದೇವೇ ಸಹಸ್ರಾರಪದ್ಮೇ |
ಗಳಚ್ಚಂದ್ರ ಪೀಯೂಷ ಧಾರಾಮೃತಾಂತೇ |
ಸ್ಥಿತಂ ರಾಮಮೂರ್ತಿನ್ನಿಷೇವೇ ನಿಷೇವೇ |
ನ್ಯದೈವಂ ನಸೇವೇ ನಸೇವೇ ನಸೇವೇ ||

ಸದಾ ಆನಂದಮೂರ್ತಿಯಾಗಿ, ಶರೀರದಲ್ಲಿ ಶಿರಸ್ಸಿನಲ್ಲಿ ಸಹಸ್ರಾರ ಚಕ್ರದಲ್ಲಿ ಪ್ರಕಾಶಿಸುತ್ತಾ, ಅಲ್ಲಿನ ಚಂದ್ರ ಮಂಡಲದ ಅಮೃತಧಾರೆಯಿಂದ ಕ್ಷೀರಾಭಿಷಿಕ್ತನಾಗಿ ಸಂತೃಪ್ತನಾಗಿರುವ ಪರಬ್ರಹ್ಮರೂಪಿಯಾದ ಶ್ರೀರಾಮಚಂದ್ರ ಮೂರ್ತಿಯನ್ನು ಸೇವಿಸುತ್ತೇನೆ. ಇತರ ದೇವರುಗಳನ್ನು ನಾನು ಸೇವಿಸುವುದಿಲ್ಲ. ಸೇವಿಸುವುದಿಲ್ಲ. ಖಂಡಿತ ಸೇವಿಸುವುದಿಲ್ಲ.

ಚಿದಂಶಂ ಸಮಾನಂದಮಾನಂದಕಂದಂ |
ಸುಷುಮ್ನಾಖ್ಯ ರಂಧ್ರಾಂತರಂಗಸ್ಥಹಂಸಂ |
ಸಚಕ್ರಂ ಸಶಂಖಂ ಸ ಪೀತಾಂಬರಾಂಕಂ |
ಪರಂಚಾನ್ಯದೈವಂ ನಜಾನೇ ನಜಾನೇ ||

ಸಚ್ಚಿದಾನಂದನೂ, ಬ್ರಹ್ಮಾನಂದದಾಯಕನೂ, ಸುಷುಮ್ನಾ ನಾಡಿಯ ಮೇಲ್ಗಡೆಯ ಬ್ರಹ್ಮರಂಧ್ರದ ಒಳಗಡೆ ಹಂಸಮಂತ್ರಾರ್ಥರೂಪಿಯಾಗಿ ಪ್ರಕಾಶಿಸುತ್ತಿರುವವನೂ ಆದ, ಪರಬ್ರಹ್ಮನಾದ, ಶಂಖ, ಚಕ್ರ, ಪೀತಾಂಬರಧರನಾದ, ಶ್ರೀರಾಮಚಂದ್ರನನ್ನು ಧ್ಯಾನಿಸುತ್ತೇನೆ. ಬೇರೆ ದೇವರನ್ನು ಧ್ಯಾನಿಸುವುದಿಲ್ಲ.

ರಾಮ ತತ್ವ ಖಂಡ

ಜೀವಾತ್ಮೈಕ್ಯ (ಅದ್ವೈತ) ಬೋಧ ಆತ್ಮಾರಾಮ ಸ್ತೋತ್ರ

ವೈದೇಹೀಂ ಪ್ರಮದಾಭಿಜಾತಪುಲಕಾಂ ಗಾಢಂ ಸಮಾಲಿಂಗರ್ಯ |
ವಾಮೇಣಸ್ತನ ಚೂಚುಕಂ ಪುಲಕಿತಂ ವಾಮಂ ಕರೇಣ ಸ್ಪೃರ್ಶ |
ತತ್ವಂ ದಕ್ಷಿಣಪಾಣಿನಾ ಕಲಿತಯಾ ಚಿನ್ಮುದ್ರಯಾ ಬೋಧರ್ಯ |
ರಾಮೋ ಮಾರುತಿಸೇವಿತೇ ವಿಜಯತೇ ಸಾಮ್ರಾಜ್ಯ ಸಿಂಹಾಸನೇ||

ವೈದೇಹಿ (ಸೀತೆ) ಯನ್ನು ತನ್ನ ವಾಮಹಸ್ತದಿಂದ ಗಾಢವಾಗಿ ಆಲಂಗಿಸಿಕೊಂಡು ಆಕೆಗೆ ಮೋದವನ್ನುಂಟು ಮಾಡಿ ತತ್ಪ್ರಯುಕ್ತ ಆಕೆಗೆ ಶರೀರದಲ್ಲೆಲ್ಲಾ ಸಂತೋಷದಿಂದ ರೋಮಾಂಚನವುಂಟಾಗುವಂತೆ ಮಾಡುತ್ತಾ, ಬಲ ಹಸ್ತದಲ್ಲಿ ಚಿನ್ಮುದ್ರೆಯನ್ನು ಪ್ರಕಾಶಿಸಿ ತತ್ಪ್ರಯುಕ್ತ ಅದ್ವೈತ ತತ್ವಬೋಧೆ ಮಾಡುತ್ತಾ, ಆಂಜನೇಯನಿಂದ ಸೇವಿತ ನಾಗಿ ಸಾಮ್ರಾಜ್ಯ ಸಿಂಹಾಸನದಲ್ಲಿ ಆಸೀನನಾದ ಆ ಶ್ರೀರಾಮಚಂದ್ರನು ವಿರಾಜಿಸುತ್ತಾನೆ.

ತಾರಾಕಾರಂ ನಿಖಿಲನಿಲಯಂ ತತ್ತ್ವಮಸ್ಯಾದಿಲಕ್ಷ್ಯಂ |
ಶಬ್ದಾವಾಚ್ಯಂ ತ್ರಿಗುಣರಹಿತಂ ವ್ಯೋಮಮಂಗುಷ್ಠಮಾತ್ರಂ |
ನಿರ್ವಾಣಾಖ್ಯಂ ಸಗುಣಮಗುಣಂ ವ್ಯೋಮರಂಧ್ರಾಂತರಸ್ಥಂ |
ಸ್ವಾಷುಮ್ನಾಂತಃ ಪ್ರಣವರಹಿತಂ ರಾಮಚಂದ್ರಂ ಭಜೇಹಂ||

ನಕ್ಷತ್ರದಂತೆ ಶೋಭಿಸುವ, ಸರ್ವವ್ಯಾಪಿಯಾಗಿ 'ತತ್ತ್ವಮಸಿ' ಎಂಬ ಉಪನಿಷನ್ಮಂತ್ರಕ್ಕೆ ಆಧಾರನಾಗಿ, (ಅಂದರೆ ಪರಮಾತ್ಮನೇ ಜೀವಾತ್ಮನೆಂದು ಬೋಧಿಸತಕ್ಕ ಅದ್ವೈತ ಪ್ರತಿಪಾದನೆಗೆ ಆಧಾರವಾಗಿ), ಚಿಜ್ಜ್ಯೋತಿ ಯಾಗಿ ಬೆಳಗುವ, ಶಬ್ದಗಳಿಂದ ತಿಳಿಯಲಾಗದ, ತ್ರಿಗುಣಾತ್ಮಕವಾದ ಮಾಯೆಗೆ ಸಿಕ್ಕದ, ಅಂಗುಷ್ಠ ಮಾತ್ರದಲ್ಲಿ ಕಾಣುವ ಹೃದಯದ ದಹರಾಕಾಶದಲ್ಲಿ ಬೆಳಗುವ, ಮೋಕ್ಷಸ್ವರೂಪಿಯಾದ, ಮಾಯೆಯಿಂದ ಕೂಡಿ ಸಗುಣ ಬ್ರಹ್ಮನೂ, ಮಾಯಾವಿರಹಿತನಾಗಿ ನಿರ್ಗುಣ ಬ್ರಹ್ಮನೂ-ಆದ, ಹೃದಯರಂಧ್ರದಲ್ಲಿ ಸ್ಫುರಿಸುವವನೂ, ಸುಷುಮ್ನಾ ನಾಡಿಯಲ್ಲಿ ಓಂಕಾರ ಸ್ವರೂಪದಿಂದ ಇರುವವನೂ, ಸಮಾಧಿಯೋಗದಿಂದ ಸಹಸ್ರಾರ ಚಕ್ರಕ್ಕೆ ತಲಪಿದ ಯೋಗಿ ಗಳಿಗೆ ಓಂಕಾರ ನಾದವು ಕಳಾರೂಪದಲ್ಲಿ ಲಯ ಹೊಂದಲು ನಿರ್ಗುಣ ಬ್ರಹ್ಮನಾಗಿ ತೋರುವವನೂ ಆದ ಶ್ರೀರಾಮ ಚಂದ್ರನನ್ನು ಭಜಿಸುತ್ತೇನೆ.

ಮುಕ್ತೇರ್ಮೂಲಂ ಮುನಿವರ ಹೃದಾನಂದಕಂದಂ ಮುಕುಂದಂ |
ಕೂಟಸ್ಥಾಖ್ಯಂ ಸಕಲವರದಂ ಸರ್ವಚೈತನ್ಯರೂಪಂ |
ನಾದಾತೀತಂ ಕಮಲನಿಲಯಂ ನಾದನಾದಾಂತ ತತ್ವಂ |
ಮಾಯಾತೀತಂ ಪ್ರಕೃತಿರಹಿತಂ ರಾಮಚಂದ್ರಂ ಭಜೇಹಂ||

ಮೋಕ್ಷಕ್ಕೆ ಮೂಲವೂ, ಋಷಿಶ್ರೇಷ್ಠರ ಹೃದಯಗಳಿಗೆ ಆನಂದದಾಯಕನೂ, ಮಹಾವಿಷ್ಣು ಸ್ವರೂಪಿಯೂ, ಅಚಲನೂ, ಸಕಲಾಭೀಷ್ಟದಾಯಕನೂ, ಸಮಸ್ತಕ್ಕೂ ಚೈತನ್ಯ ಕೊಟ್ಟು ಅವುಗಳನ್ನು ಪ್ರಕಾಶಪಡಿಸುವವನೂ, ಉಚ್ಛ್ವಾಸ, ನಿಶ್ವಾಸ ರೂಪವಾದ ಪ್ರಾಣವಾಯುವನ್ನು ನಿರೋಧಿಸಿ ಧ್ಯಾನಮಾಡುವ ಯೋಗಿಗಳಿಗೆ ಅನಾಹತ ಚಕ್ರದಲ್ಲಿ ತೋರುವ ನಾದಕ್ಕೂ ದೂರನಾದವನೂ, ಹೃದಯಕಮಲದಲ್ಲಿ ಇರುವವನೂ, ಓಂಕಾರ ನಾದ ರೂಪಿಯೂ, ಈ ನಾದವು ಆಜ್ಞಾಚಕ್ರದಲ್ಲಿ ಲಯವಾದ ಮೇಲೆ ಸಹಸ್ರಾರ ಚಕ್ರದಲ್ಲಿ ಸ್ಫುರಿಸುವವನೂ ಆದ, ಮೂಲ ಮಾಯೆಗೂ, ಅಧ್ಯಾಸಕ್ಕೂ (ತಪ್ಪು ತಿಳಿವಳಿಕೆ) ದೂರನಾದ, ನಿರ್ಗುಣ ರಾಮನನ್ನು ಭಜಿಸುತ್ತೇನೆ.

ಹೃದಯಕುಹರಮಧ್ಯೇ ಜ್ಯೋತಿತಂ ಮಂತ್ರಸಾರಂ | [ಹೃಜ್ಯೋತಿತನ್ಮಂತ್ರ
ಂತು ಮ] ನಿಗಮಮಯಮಗಮ್ಯಂ ವೇದಶಾಸ್ತ್ರೈರಚಿಂತ್ಯಂ |
ಹರಿಹರ ವಿಧಿವಂದ್ಯಂ ಹಂಸಮಂತ್ರಾಂತರಸ್ಥಂ |
ದಶರಥಸುತಮೀಳೇ ದೈವತಂ ದೇವತಾನಾಂ ||

ಹೃತ್ಕಮಲದ ಮಧ್ಯದಲ್ಲಿರುವ (ಅಂದರೆ ಹನ್ನೆರಡು ದಳಗಳುಳ್ಳ ಅನಾಹತ ಪದ್ಮದ ಒಳಗಡೆಯಿರುವ, ಅಷ್ಟದಳ ಪದ್ಮದ ದಹರಾಕಾಶದಲ್ಲಿ) ಚಿತ್‌ಪ್ರಕಾಶವಾಗಿ ಗೋಚರಿಸುವ, ಸಮಸ್ತ ಮಂತ್ರಗಳ ಸಾರಭೂತನೂ, ವೇದಮಯನೂ, ಯೋಗಿಗಳಿಗೂ ಹೊಂದಲು ಕಷ್ಟಸಾಧ್ಯನೂ, ವೇದ ಶಾಸ್ತ್ರಗಳಿಗೂ ಸಿಗದವನೂ, ಹರಿ ಹರ ಬ್ರಹ್ಮರಿಂದ ಸ್ತುತಿಸಲ್ಪಟ್ಟವನೂ, ಪರಬ್ರಹ್ಮಸ್ವರೂಪನೂ ಆದ, ದಶರಥನ ಸುತನಾದ, ದೇವತೆಗಳಿಗೂ ದೇವನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಕೋದಂಡ ದೀಕ್ಷಾ ಗುರುಮಾದಿಮೂಲಂ |
ಗುಣಾಶ್ರಯಂ ಚಂದನ ಕುಂಕುಮಾಂಕಂ |
ಸಲಕ್ಷ್ಮಣಂ ಸರ್ವ ಜನಾಂತರಸ್ಥಂ |
ಪರಾತ್ಪರಂ ರಾಮಮಹಂ ನಮಾಮಿ ||

ಅನಾದಿಯೂ, ಕೋದಂಡಧರನಾಗಿ ರಾಕ್ಷಸ ವಿನಾಶಕ್ಕೆ ಪಣತೊಟ್ಟವನೂ, ಸದ್ಗುಣಗಳಿಗೆ ಆಶ್ರಯನೂ, ಚಂದನ ಕುಂಕುಮಗಳಿಂದ ಅಲಂಕೃತನೂ, ಲಕ್ಷ್ಮಣಸಮೇತನೂ, ಸಮಸ್ತರ ಹೃದಯಕಮಲದಲ್ಲಿ ನೆಲಸಿರುವವನೂ, ಶ್ರೇಷ್ಠರಲ್ಲಿ ಶ್ರೇಷ್ಠನೂ ಆದ ಶ್ರೀರಾಮಚಂದ್ರನನ್ನು ನಾನು ಭಜಿಸುತ್ತೇನೆ.

ಓತಪ್ರೋತ ಸಮಸ್ತವಸ್ತು ನಿಚಯಂ ಓಂಕಾರ ಬೀಜಾಕ್ಷರಂ |
ಓಂಕಾರ ಪ್ರಕೃತಿಷ್ಷಡಕ್ಷರ ಹಿತಂ ಓಂಕಾರ ಕಂದಾಂಕುರಂ |
ಓಂಕಾರಸ್ಫುರ ಭೂರ್ಭುವಸ್ಸುಪರಿಧಿಂ ಓಘತ್ರಯಾರಾಧಿತಂ |
ಓಂಕಾರೋಜ್ಜ್ವಲ ಸಿಂಹಪೀಠನಿಲಯಂ ರಾಮಂ ಭಜೇ ತಾರಕಂ ||

ಓಂಕಾರದಿಂದ ಸಮಸ್ತ ವೇದಗಳೂ, ಸಮಸ್ತ ವರ್ಣಗಳೂ, ಸಪ್ತಸ್ವರಗಳೂ, ಚರಾಚರ ರೂಪಗಳಾದ ಮೂರು ಲೋಕಗಳೂ, ನಮಗೆತೋರಿ ಬರುತ್ತಿರುವ ಸರ್ವಪ್ರಪಂಚವೂ ಉಂಟಾಗಿರುತ್ತೆಯಾಗಿ, ಓಂಕಾರವು ಸಮಸ್ತ ವಸ್ತುಗಳಲ್ಲೂ ಹಾಸುಹೊಕ್ಕಾಗಿ ಇದೆ. ಇಂತಹ ಓಂಕಾರ ಬೀಜಾಕ್ಷರವಾಗಿ, ಶಿರಸ್ಸಿನ ಸಹಸ್ರಾರ ಚಕ್ರದಲ್ಲಿರತಕ್ಕವನೂ, ನಮ್ಮ ಶರೀರದ ಸ್ವಾಧಿಷ್ಠಾನ ಚಕ್ರದಲ್ಲಿನ ಆರು ದಳಗಳುಳ್ಳ ಕಮಲದಲ್ಲಿ ಬ, ಭ, ಮ, ಯ, ರ, ಲ ಎಂಬ ಆರು ಅಕ್ಷರಗಳಿಂದ ಕೂಡಿ ಬೆಳಗುವವನೂ, ಮೂಲಾಧಾರ ಚಕ್ರದಲ್ಲಿ ಓಂಕಾರ ಮೂಲವಾದ 'ಅ'ಕಾರ ರೂಪವಾದ ಕುಂಡಲಿನೀ ಶಕ್ತಿಯಿಂದ ಕೂಡಿ ಇರುವವನೂ, ಓಂಕಾರದಿಂದ ಪ್ರಜ್ವಲಿಸುತ್ತಾ ಭೂಃ, ಭುವಃ, ಸುವಃ ಎಂಬ ವ್ಯಾಹೃತಿಗಳನ್ನುಳ್ಳ ಗಾಯಿತ್ರೀ ಮಂತ್ರಸ್ವರೂಪನೂ, ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ಓಘತ್ರಯದಿಂದ ಆರಾಧಿತನಾದವನೂ, ಓಂಕಾರವೆಂಬ ಉಜ್ಜ್ವಲ ಸಿಂಹಾಸನದಲ್ಲಿ ಅಂದರೆ ಶಿರಸ್ಸಿನ ಸಹಸ್ರಾರ ಚಕ್ರದಲ್ಲಿ ನೆಲಸಿರುವವನೂ ಆದ, ಪರಬ್ರಹ್ಮಸ್ವರೂಪಿಯಾದ, ಶ್ರೀ ತಾರಕಬ್ರಹ್ಮನಾದ ರಾಮಚಂದ್ರನನ್ನು ಭಜಿಸುತ್ತೇನೆ.

ಸಾಕೇತೇ ಧವಳೇ ಸುರದ್ರುಮೆತಲೇ ಸೌಧೇ ವಿಮಾನಾಂತರೇ।
ಆದಿಕ್ಷಾಂತ ಸಮಸ್ತವರ್ಣಕಮಲೇ ದಿವ್ಯೇ ಮೃಗೇಂದ್ರಾಸನೇ।
ಓಂಕಾರೋಜ್ಜ್ವಲ ಕರ್ಣಿಕೇ ಸುರಗೃಹೈರ್ಮಧ್ಯೇ ಸುಸಂಸ್ಥಾಪಿತೇ।
ದೇವರ್ಷ್ಯಾ ಮುನೀಶ್ವರಾದ್ಯಭಿನುತಂ ರಾಮಂ ಭಜೇ ತಾರಕಂ॥

ಅಯೋಧ್ಯೆಯಲ್ಲಿ, ಕಲ್ಪತರುವಿನಂತಿರುವ ಶ್ವೇತಛತ್ರದ ಅಡಿಯಲ್ಲಿ ದಿವ್ಯಮಂದಿರದಲ್ಲಿನ ವಿಮಾನದೊಳಗೆ, ಸಿಂಹಾಸನದಲ್ಲಿ ಪ್ರಕಾಶಿಸುವ, ಶರೀರದ ಅಕಾರಾದಿ ಕ್ಷಕಾರಾಂತ ಅಕ್ಷರಗಳಿಗೆ ಬೀಜಭೂತವಾಗಿ ಓಂಕಾರಯುಕ್ತವಾದ ಸುಷುಮ್ನಾ ನಾಡಿಯ ಕಮಲಗಳಲ್ಲಿ ಬೆಳಗುತ್ತಿರುವ, ದೇವತೆಗಳ ಮಧ್ಯದಲ್ಲಿ ಶೋಭಿಸುವ, ನಾರದಾದಿ ಮುನಿಗಳಿಂದ ಹೊಗಳಿಸಿಕೊಳ್ಳುವ ತಾರಕರಾಮನನ್ನು ಭಜಿಸುತ್ತೇನೆ.

ವಂದೇ ಶೌನಕ ಗೌತಮಾದ್ಯಭಿನುತಂ ವಂದೇ ಘನಶ್ಯಾಮಲಂ।
ವಂದೇ ತಾರಕ ಪೀಠಮಧ್ಯನಿಲಯಂ ವಂದೇ ಜಗನ್ನಾಯಕಂ।
ವಂದೇ ಭಕ್ತ ಜನೌಘ ದೇವ ವಿಟಪಂ ವಂದೇ ಧನುರ್ವಲ್ಲಭಂ।
ವಂದೇ ತತ್ತ್ವಮಸೀತಿ ವಾಕ್ಯಜನಕಂ ವಂದೇ ಸದಾ ರಾಘವಂ॥

ಶೌನಕ, ಗೌತಮ ಮುಂತಾದ ಋಷಿಗಳಿಂದ ಸ್ತುತಿಸಿಕೊಳ್ಳುತ್ತಾ ಇರುವ, ಮೇಘಬಣ್ಣದ ಶರೀರ ಕಾಂತಿಯುಳ್ಳ, ತಾರಕಬ್ರಹ್ಮಪೀಠವಾದ ಸಹಸ್ರಾರ ಕಮಲದಲ್ಲಿ ನೆಲಸಿರುವ, ಜಗನ್ನಾಯಕನಾದ, ಜನಗಳಿಗೆ ಕಲ್ಪವೃಕ್ಷದಂತೆ ಸಕಲ ಅಭೀಷ್ಟಪ್ರದನಾದ, ಧನುಸ್ಸನ್ನು ತನ್ನ ವಶವರ್ತಿಯಾಗಿ ಮಾಡಿಕೊಂಡಿರುವ, 'ತತ್ತ್ವಮಸಿ' ಎಂಬ ಜೀವಪರಮರ ಅಭೇದ ಸೂಚಿಯಾದ ಉಪನಿಷನ್ಮಹಾವಾಕ್ಯಕ್ಕೆ ಆಶ್ರಯನಾದ ರಾಘವನನ್ನು ವಂದಿಸುತ್ತೇನೆ.

ಲಸದ್ದಿವ್ಯ ಶೇಷಾಚಲೇ ಯೋಗಪೀಠೇ।
ಸದಾನಂದ ವೈಮಾನಿಕೇ ಮಾಸಹಾಯಂ।
ಮುನೀನಾಂ ಹೃದಾನಂದಮೋಂಕಾರಗಮ್ಯಂ।
ಸದಾ ಭೂಮಿಜಾಯುಕ್ತಮೀಳೇ ಹೃದಂತೇ॥

ಪ್ರಕಾಶಮಾನವಾದ ಸುಷುಮ್ನಾನಾಡಿ ಎಂಬ ಶೇಷಾಚಲದ ಮೇಲ್ಗಡೆ ಯೋಗಪೀಠವಾದ ಸಹಸ್ರಾರ ಚಕ್ರದಲ್ಲಿ ಸದಾ ಆನಂದರೂಪನಾಗಿ ಪರಬ್ರಹ್ಮರೂಪದಲ್ಲಿ ಪ್ರಕಾಶಿಸುವವನೂ, ಪುಷ್ಪಕಾರೂಢನೂ, ಲಕ್ಷ್ಮೀಸಹಾಯನಾದ ವಿಷ್ಣುರೂಪಿಯೂ, ಮುನಿಗಳ ಹೃದಯಕ್ಕೆ ಆನಂದದಾಯಕನೂ, ಪ್ರಣವಮಂತ್ರಕ್ಕೆ ಸುಲಭನೂ, ಸೀತಾಸಮೇತನೂ ಆದ ಶ್ರೀರಾಮಚಂದ್ರಮೂರ್ತಿಯನ್ನು ನನ್ನ ಮನಸ್ಸಿನಲ್ಲಿ ಸದಾ ಧ್ಯಾನಿಸುತ್ತೇನೆ.

ಮನಸ್ಥಂ ಮನಾಂತಸ್ಥಮಾದ್ಯಂತ ಹೀನಂ।
ಮನೋವಾಗತೀತಂಚ ವೇದಾಂತವೇದ್ಯಂ।
ಮನೋಬುದ್ಧ್ಯಹಂಕಾರ ಚಿತ್ತಾದಿ ಸಾಕ್ಷಿಂ।
ಪರಂ ಸ್ವಪ್ರಕಾಶಂ ಭಜೇ ರಾಮಚಂದ್ರಂ॥

ಆಶ್ರಿತರ ಸಾತ್ವಿಕ ಚಿತ್ತಕ್ಕೆ ಸುಲಭನಾದ, ಪ್ರತಿಯೊಬ್ಬರ ಹೃದಯಕಮಲದಲ್ಲಿ ನೆಲಸಿರುವ, ಆದಿ ಅಂತ್ಯಗಳಿಲ್ಲದ, ಏಕಾಗ್ರತೆಯಿಲ್ಲದ ಮನಸ್ಸಿಗೂ ವಾಕ್ಕಿಗೂ ದೂರನಾದ, ಉಪನಿಷತ್ತುಗಳಿಂದಲೇ ತಿಳಿಯಲ್ಪಡುವವನಾದ, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ ಇವುಗಳಿಗೆ ಕೂಟಸ್ಥ ಸಾಕ್ಷಿಯಾದ, ಪರನಾಗಿಯೂ ಸ್ವಯಂಪ್ರಕಾಶನಾಗಿಯೂ ಇರುವ, ಪರಬ್ರಹ್ಮಸ್ವರೂಪಿಯಾದ ರಾಮಚಂದ್ರನನ್ನು ಸ್ಮರಿಸುತ್ತೇನೆ.

ಪರಾನಂದವಸ್ತು ಸ್ವರೂಪಾದಿಸಾಕ್ಷಿಂ |
ಲಸದ್ಬುದ್ಧಿಗಮ್ಯಂ ಪರಂಜ್ಯೋತಿ ಮೂರ್ತಿಂ |
ಪರಾಶಕ್ತಿಮೂರ್ತಿ ಪ್ರಿಯಾರಾಧಿತಾಂಘ್ರಿಂ |
ಪರಂಧಾಮರೂಪಂ ಭಜೇ ರಾಮಚಂದ್ರಂ ||

ಪರಮಾನಂದವಸ್ತುವಾಗಿಯೂ, ಜೀವಸ್ವರೂಪಕ್ಕೆ ಆದಿಸಾಕ್ಷಿಯಾಗಿಯೂ, ಏಕಾಗ್ರವಾದ ಮನಸ್ಸಿಗೆ ಸಿಕ್ಕತಕ್ಕವನಾಗಿಯೂ, ಪರಂಜ್ಯೋತಿಸ್ವರೂಪನಾಗಿಯೂ, ಪರಾಶಕ್ತಿಯೇ ಅಂದರೆ ಆದಿಮಾಯೆಯೇ ಮೂರ್ತೀಭವಿಸಿ ಪಾರ್ವತಿ ಎನಿಸಿಕೊಂಡರೆ, ಆ ದೇವಿಗೆ ಪ್ರಿಯನಾದ ಪರಮೇಶ್ವರನಿಂದ ಪೂಜಿತನಾದವನಾಗಿಯೂ, ಮೋಕ್ಷಸ್ವರೂಪಿಯಾಗಿಯೂ ಇರುವ ರಾಮಚಂದ್ರನನ್ನು ಭಜಿಸುತ್ತೇನೆ.

ಪರಂ ಪವಿತ್ರಂ ಪರವಾಸುದೇವಂ |
ಪರಾತ್ಪರಂ ತಂ ಪರಮೇಶ್ವರಾಖ್ಯಂ |
ಗುಣತ್ರಯಾರಾಧಿತ ಮೂಲ ಕಂದ |
ಮಾದಿತ್ಯವರ್ಣಂ ತಮಸಃ ಪರಸ್ತಾತ್ ||

ಶ್ರೇಷ್ಠನೂ, ಶುದ್ಧನೂ, ಮಾಯೋಪಹಿತ ಪರಮಾತ್ಮನೂ, ಶ್ರೇಷ್ಠಕ್ಕೂ ಅತಿಶ್ರೇಷ್ಠನೂ, ಪರಮೇಶ್ವರನೂ, ಗುಣತ್ರಯ ಪ್ರಧಾನರಾದ ಬ್ರಹ್ಮ, ವಿಷ್ಣು, ರುದ್ರರೆಂಬ ತ್ರಿಮೂರ್ತಿಗಳಿಂದ ಆರಾಧಿಸಲ್ಪಟ್ಟು ಅವರಿಗೂ ಮೂಲ ಕಾರಣನಾದವನೂ, ಜ್ಯೋತಿಸ್ವರೂಪನೂ, ಅಜ್ಞಾನವೆಂಬ ಕತ್ತಲೆಗೆ ಬಲು ದೂರನೂ ಮತ್ತು ಅದನ್ನು ನಾಶ ಮಾಡತಕ್ಕವನೂ ಆದ, ಪರಬ್ರಹ್ಮನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಸಹಸ್ರ ಪತ್ರಾಂಬುಜ ಕರ್ಣಿಕಾಂತ |
ಜ್ಯೋತಿಪ್ರಕಾಶಂ ಪರಮಾದಿಮೂಲಂ |
ತೇಜೋಮಯಂ ಜನ್ಮಜರಾವಿಹೀನಂ |
ರಾಮಂ ವಿಭುಂ ನಿತ್ಯಮಹಂ ನಮಾಮಿ ||

ಶರೀರದಲ್ಲಿ ಬ್ರಹ್ಮರಂಧ್ರದಲ್ಲಿ ಸಹಸ್ರಾರ ಚಕ್ರದಲ್ಲಿ ಜ್ಯೋತಿರೂಪದಿಂದ ಪ್ರಕಾಶಿಸುತ್ತಲಿರುವ, ಅನಾದಿಯೂ' ಎಲ್ಲಕ್ಕೂ ಪರನೂ (ಶ್ರೇಷ್ಠನೂ) ಆದ, ದಿವ್ಯ ತೇಜಸ್ಸಿನಿಂದ ಕೂಡಿದ, ಜನ್ಮಜರೆಗಳಿಗೆ (ಮುಪ್ಪು) ದೂರನಾದ, ಪರಬ್ರಹ್ಮನಾದ ಶ್ರೀರಾಮನನ್ನು ಭಜಿಸುತ್ತೇನೆ.

ನಹಿ ಮಾತಾ ನಹಿ ತಾತೋ | ನಹಿ ಮಮ ತನಯಾಶ್ಚ ನೈವ ಸೋದರ್ಯಃ |
ಸಂಪ್ರಾಪ್ತೇ ಸನ್ನಿಹಿತೇ ಮೃತ್ಯೌ | ರಘುಪತಿರಯಮೇವ ಬಂಧುರಾಸನ್ನಃ ||

ನನಗೆ ಮರಣ ಸನ್ನಿಹಿತವಾಗಲು, ಆಗ ನನ್ನ ಬಂಧುಗಳೆನಿಸಿದ ತಾಯಿ, ತಂದೆ, ಮಕ್ಕಳು, ಸಹೋದರರು ರಕ್ಷಕರಾಗುವುದಿಲ್ಲ. ಶ್ರೀರಾಮಚಂದ್ರನೊಬ್ಬನೇ ಆಪದ್ಬಂಧುವೂ, ರಕ್ಷಕನೂ ಆಗುವನು.

ವೇದಾಂತನಾದಂ ಸ್ವಕೃತೈಕದಾಸಂ |
ಹತಾಭಿಮಾನಂ ತ್ರಿದಶ ಪ್ರಧಾನಂ |
ಗಜೇಂದ್ರಯಾನಂ ವಿಗತಾವಸಾನಂ |
ಶ್ರೀರಾಮಚಂದ್ರಂ ಸತತಂ ನಮಾಮಿ ||

ವೇದಾಂತಗಳಲ್ಲಿ ರೂಪಿಸುವ ಓಂಕಾರನಾದ ಸ್ವರೂಪನಾಗಿರುವ, ತಾನು ಮರಣರಹಿತನಾದರೂ, ತನ್ನ ಲೀಲಾ ವಿಲಾಸದಿಂದ ತಾನೇ ದೇಹೇಂದ್ರಿಯಾದಿಗಳಲ್ಲಿ ಅಭಿಮಾನಿಸಿ, ಮಾಯೆಗೆ ದಾಸನಾಗಿರುವಂತೆ ತೋರಿಸಿಕೊಳ್ಳುವ ಜೀವಾತ್ಮನಾದ, ಹೀಗೆ ಜೀವರೂಪನಾದರೂ ಜೀವವೆಂಬ ಅಭಿಮಾನಕ್ಕೆ ದೂರನಾದ, ಸಗುಣಬ್ರಹ್ಮನಾಗಿ ದೇವತೆಗಳಿಗೂ ಒಡೆಯನೆನಿಸಿಕೊಂಡ, ಅಯೋಧ್ಯೆಯಲ್ಲಿ ಗಜೇಂದ್ರನ ಮೇಲೆ ಕುಳಿತು ವಿಹರಿಸುವ ಅವತಾರಪುರುಷನಾಗಿ ಮೆರೆಯುವ, ಹೀಗೆ ನಿರ್ಗುಣ, ಸಗುಣ ಜೀವರೂಪದಲ್ಲಿಯೂ ಅಯೋಧ್ಯೆಯಲ್ಲಿ ಅವತಾರಪುರುಷನಾಗಿ ಪಟ್ಟಾಭಿರಾಮನಾಗಿಯೂ ಪ್ರಕಾಶಿಸುವ, ಏಕೈಕ ಚಿದ್ರೂಪನಾದ ಶ್ರೀರಾಮಚಂದ್ರನನ್ನು ಯಾವಾಗಲೂ ನಮಿಸುತ್ತೇನೆ.

ಶಾಂತಂ ಶಾರದ ಚಂದ್ರ ಕೋಟಿ ಸದೃಶಂ ಚಂದ್ರಾಭಿರಾಮಾನನಂ |
ಚಂದ್ರಾರ್ಕಾಗ್ನಿ ವಿಕಾಸಿ ಕುಂಡಲಧರಂ ಚಂದ್ರಾವತಂಸಸ್ತುತಂ |
ವೀಣಾಪುಸ್ತಕ ಸಾಕ್ಷಸೂತ್ರ ವಿಲಸದ್ವ್ಯಾಖ್ಯಾನ ಮುದ್ರಾಕರಂ |
ದೇವೇಶಂ ಭರತಾದಿಭಿಃ ಪರಿವೃತಂ ರಾಮಂ ಭಜೇ ಶ್ಯಾಮಲಂ ||

ಶಾಂತಮೂರ್ತಿಯೂ, ಶರತ್ಕಾಲದ ಕೋಟಿಚಂದ್ರರ ಸಮಾನವಾದ ತೇಜಸ್ಸಿನಿಂದ ಕೂಡಿದವನೂ, ಚಂದ್ರನಂತೆ ಮನೋಹರವಾದ ಮುಖವುಳ್ಳವನೂ, ಸೂರ್ಯ, ಚಂದ್ರ, ಅಗ್ನಿಗಳ ಪ್ರಕಾಶದಂತೆ ಹೊಳೆಯುವ ರತ್ನ ಕುಂಡಲಧಾರಿಯೂ, ಚಂದ್ರನನ್ನು ಶಿರೋಭೂಷಣವಾಗಿಯುಳ್ಳ ಈಶ್ವರನಿಂದ ಸ್ತುತಿಸಲ್ಪಟ್ಟವನೂ, ದಕ್ಷಿಣಾಮೂರ್ತಿ ರೂಪದಲ್ಲಿ ವೀಣಾ ಪುಸ್ತಕ ಅಕ್ಷಮಾಲೆಗಳನ್ನು ಧರಿಸಿರುವವನೂ, ದಿವ್ಯವಾದ ಅದ್ವೈತ ತತ್ವ ಬೋಧಕ ಚಿನ್ಮುದ್ರೆಯನ್ನು ಕರಾಗ್ರದಲ್ಲಿ ಸೂಚಿಸುವವನೂ, ದೇವತೆಗಳಿಗೆ ಒಡೆಯನಾದವನೂ, ಭರತಾದಿಗಳಿಂದ ಕೂಡಿ ಶ್ಯಾಮಲಾಂಗನಾಗಿ ಪ್ರಕಾಶಿಸುವವನೂ ಆದ ರಾಮಚಂದ್ರನನ್ನು ಭಜಿಸುತ್ತೇನೆ.

ನಜಾನೇ ಜಾನಕೀಜಾನೇ |
ತವ ತತ್ವಮಪಿ ಪ್ರಭೌ |
ಧಿಃಕುರ್ಯಾದ್ಯಮ ದೂತಾನ್ಯೋ |
ಮುನಿಸ್ತತ್ತತ್ವ ಮೀಹತೇ ||

ಶ್ರೀರಾಮನೇ, ನಿನ್ನ ಪರಬ್ರಹ್ಮ ತತ್ವದ ನಿರ್ಣಯಾರ್ಥ ಪ್ರಭೆಗಳು ನನಗೆ ತಿಳಿಯವು. ಅವುಗಳು ಯಮದೂತರನ್ನು ಧಿಕ್ಕರಿಸುತ್ತವೆ (ಅಂದರೆ ಆ ತತ್ತ್ವಗಳನ್ನು ತಿಳಿದವರು ಮರಣಕ್ಕೆ ಅಂಜುವುದಿಲ್ಲ). ಮುನಿಗಳು ಆ ತತ್ವವನ್ನು ಇಚ್ಛಿಸುತ್ತಾರೆ.

ರಾಮತತ್ವ 'ಅರ್ಥಾತ್' ಅದ್ವೈತ ತತ್ವಸಾರ ಸಂಗ್ರಹಃ

ಓಂ

ಸದ್ಗುರು ಸ್ತುತಿಃ

ನಿತ್ಯಾನಂದಂ ಪರಮಸುಖದಂ ಕೇವಲಂ ಜ್ಞಾನಮೂರ್ತಿಂ |
ವಿಶ್ವಾತೀತಂ ಗಗನಸದೃಶಂ ತತ್ತ್ವಮಸ್ಯಾದಿಲಕ್ಷ್ಯಂ |
ಏಕಂನಿತ್ಯಂ ವಿಮಲಮಚಲಂ ಸರ್ವಧೀ ಸಾಕ್ಷಿರೂಪಂ |
ಭಾವಾತೀತಂ ತ್ರಿಗುಣರಹಿತಂ ಸದ್ಗುರುಂ ತಂ ನಮಾಮಿ ||

ರಾಮಕರ್ಣಾಮೃತೇ, ಚತುರ್ಥಭಾಗೇ, ರಾಮ ತತ್ವ ಖಂಡೇ,
ರಾಮತತ್ವ ಅರ್ಥಾತ್ ಅದ್ವೈತ ತತ್ವ ಸಾರ ಸಂಗ್ರಹ ಪ್ರಾರಂಭಃ

'ರಾಮೇತತ್ವಮಪಿಪ್ರಭೌ ;' 'ಚಿನ್ಮುದ್ರಯಾಬೋಧಯನ್ ;'
'ತತ್ತ್ವಮಸೀತಿವಾಕ್ಯಮಹಿಮಾಧಾರಂ'

ಈ ಮೇಲ್ಕಂಡಂತೆ "ರಾಮ ಕರ್ಣಾಮೃತ"ದಲ್ಲಿ ಸೂಚಿತವಾಗಿರುವ ಚಿನ್ಮುದ್ರೆಯಿಂದ "ತತ್ವಮಪಿ" ಎಂದು ಬೋಧಿತವಾದ ರಾಮತತ್ವವನ್ನು ವಿಚಾರಮಾಡೋಣ.

ಅಜ್ಞಾನಾಂತರ್ಗಹನಪತಿತಾನಾತ್ಮವಿದ್ಯೋಪದೇಶೈಃ |
ತ್ರಾತುಂ ಲೋಕಾನ್ ಭವದವಶಿಖಾ ತಾಪ ಪಾಪಚ್ಯಮಾನಾನ್ |
ಮುಕ್ತ್ವಾಮೌನಂ ವಟವಿಟಪಿನೋ ಮೂಲತೋ ನಿಷ್ಪತಂತೀ |
ಶಂಭೋ ಮೂರ್ತಿಶ್ಚರತಿ ಭುವನೇ ಶಂಕರಾಚಾರ್ಯ ರೂಪಾ ||

ಎಂಬ ಶ್ರೀ ವಿದ್ಯಾರಣ್ಯೋಕ್ತಿಯಂತೆ ದುಃಖಸಂತಪ್ತರಾದ ಸಂಸಾರಿಗಳನ್ನು ಆತ್ಮವಿದ್ಯೆಯ ಉಪದೇಶದಿಂದ ಉದ್ಧರಿಸಲು ಶ್ರೀ ಶಂಕರನು ವಟವೃಕ್ಷ ಮೂಲದಲ್ಲಿ ದಕ್ಷಿಣಾಮೂರ್ತಿ ರೂಪದಲ್ಲಿದ್ದ ತನ್ನ ಮೌನವನ್ನು ಬಿಟ್ಟು ಶ್ರೀ ಶಂಕರಾಚಾರ್ಯರ ರೂಪದಿಂದ ಭೂಮಿಯಲ್ಲಿ ಅವತರಿಸಿದನು.

ಈ ದಕ್ಷಿಣಾಮೂರ್ತಿಯು ಚಿನ್ಮುದ್ರೆಯಿಂದ ತೋರಿದ ಮೌನ ವ್ಯಾಖ್ಯಾನವೆಂತಿದ್ದಿತೆಂದರೆ

ಚಿತ್ರಂ ವಟತರೋರ್ಮೂಲೇ ವೃದ್ಧಾಶ್ಶಿಷ್ಯಾ ಗುರುರ್ಯುವಾ |
ಗುರೋಸ್ತು ಮೌನಂ ವ್ಯಾಖ್ಯಾನಂ ಶಿಷ್ಯಾಸ್ತುಚ್ಛಿನ್ನ ಸಂಶಯಾಃ |

ಅಂದರೆ ವಟವೃಕ್ಷದ ಬುಡದಲ್ಲಿ ಅಶ್ಚರ್ಯವೊಂದು ಕಾಣಬರುತ್ತಿತ್ತು. ಅದೇನೆಂದರೆ, ಶಿಷ್ಯರು ಮುದುಕರು, ಗುರು ಯುವಕ, ಅಲ್ಲದೆ ಗುರು ಮೌನಿಯಾಗಿದ್ದನು. ಆದರೂ ಶಿಷ್ಯರು ಛಿನ್ನ ಸಂಶಯರಾದರು.

ಪ್ರಪಂಚ ಸೃಷ್ಟಿಯಾದಮೇಲೆ ಈಶ್ವರನು ದಕ್ಷಿಣಾಮೂರ್ತಿಯಾಗಿ ಆವಿರ್ಭವಿಸಿದನು. ಹೀಗೆ ಗುರು ದಕ್ಷಿಣಾ ಮೂರ್ತಿಯು ಪ್ರಪಂಚ ಸೃಷ್ಟಿಯ ಈಚೆಗೆ ಆವಿರ್ಭವಿಸಿದಂತಾದನು. ಆದ್ದರಿಂದ 'ಯುವ'. ಆದರೆ ಶಿಷ್ಯರಾದ ಸನಕ ಸನಂದನಾದಿ ಋಷಿಗಳೋ ಎಂದರೆ ಸೃಷ್ಟ್ಯಾದಿಯಲ್ಲೇ ಇದ್ದವರು. ಆದ್ದರಿಂದ 'ವೃದ್ಧರು'

ಆಲೋಢ್ಯ ಸರ್ವ ಶಾಸ್ತ್ರಾಣಿ ವಿಚಾರ್ಯೈವ ಪುನಃ ಪುನಃ ।
ಇದಮೇಕಂ ಸುನಿಷ್ಪನ್ನಂ ಜೀವೋಬ್ರಹ್ಮೈವನಾಪರಃ ||

ಅಂದರೆ ಸಮಸ್ತ ಶಾಸ್ತ್ರಗಳನ್ನೂ ಚೆನ್ನಾಗಿ ನೋಡಿ ಪುನಃ ಪುನಃ ವಿಚಾರ ಮಾಡಿ ತಿಳಿದಿರುವುದೇನೆಂದರೆ, "ಜೀವನು ಬ್ರಹ್ಮನೇ, ಬೇರೆ ಅಲ್ಲ." ಇದೇ ಚೆನ್ನಾಗಿ ಮಥಿಸಿ ತಿಳಿದ ಅಂಶ.

ಹೀಗೆಂಬುದನ್ನು ದಕ್ಷಿಣಾಮೂರ್ತಿಯು, ಶಿಷ್ಯರಾದ ಸನಕಸನಂದನಾದಿಗಳಿಗೆ "ಚಿನ್ಮುದ್ರಯಾ ಬೋಧರ್ಯ" ಎಂದರೆ ಚಿನ್ಮುದ್ರೆಯಿಂದ ಮೌನವಾಗಿ ಉಪದೇಶ ಮಾಡಿದನು.

ದಕ್ಷಿಣಾಮೂರ್ತಿಯ, ಶ್ರೀ ಶಂಕರಾಚಾರ್ಯರ, ಶ್ರೀ ರಾಮಚಂದ್ರನ, ಚಿತ್ರಗಳಲ್ಲಿ ಈ ಚಿನ್ಮುದ್ರೆಯನ್ನು ಕಾಣಬಹುದು.

ಈ ಚಿನ್ಮುದ್ರೆಯ ಲಕ್ಷಣವೇನು ? ಎಂಬುದನ್ನು ವಿವರಿಸೋಣ. ಅಂಗುಷ್ಠ ತರ್ಜನಿಗಳು ಒಟ್ಟಾಗಿದ್ದು, ಇತರ ಬೆರಳುಗಳು ಬೇರೆ ಬೇರೆಯಾಗಿ, ಈ ಮುದ್ರೆಯು ತೋರುತ್ತದೆ. ಈ ಅಂಗುಷ್ಠ ತರ್ಜನಿಗಳ ಒಟ್ಟು ಗೂಡುವುದರ ಅರ್ಥ, "ಜೀವ ಪರಬ್ರಹ್ಮರ ಐಕ್ಯ"ವೆಂದು. ಉಳಿದ ಮೂರು ಬೆರಳುಗಳು ಬೇರೆಯಾಗಿರುವುದರ ಅರ್ಥವೇನೆಂದರೆ, "ಜೀವ ಬ್ರಹ್ಮೈಕ್ಯ"ವಾದಾಗ ತ್ರಿವಿಧ ತಾಪಗಳು· ಅಂದರೆ, ಆಧ್ಯಾತ್ಮಿಕ, ಆಧಿ ದೈವಿಕ, ಆಧಿ ಭೌತಿಕ ತಾಪಗಳು ದೂರವಾಗುವುವು. ಅಲ್ಲದೆ ಸತ್ವ, ರಜ, ತಮ ಎಂಬ ತ್ರಿಗುಣರೂಪವಾದ ಮಾಯೆಯು ದೂರವಾಗುವುದು.

ಈ ಮುದ್ರೆಯನ್ನು 'ಕಂಟಕನಿವಾರಿಣಿ ಮುದ್ರೆ' ಎಂದೂ ಕರೆಯಬಹುದು. ಹೇಗೆಂದರೆ, ದಾರಿಯಲ್ಲಿ ಹೋಗುತ್ತಿದ್ದಾಗ, ಕಾಲಿಗೆ ಒಂದು ಕಂಟಕವು (ಮುಳ್ಳು) ಚುಚ್ಚಿದರೆ, ಆಗ ಇದೇ ರೀತಿಯಾಗಿ ಅಂಗುಷ್ಠ ತರ್ಜನೀ ಸಂಯೋಗ ಮಾಡಿಯೇ ಮುಳ್ಳನ್ನು ತೆಗೆಯುತ್ತೇವೆ. ಸಂಶಯರೂಪ ಕಂಟಕಗ್ರಸ್ತರಾಗಿ ಬಂದ ಶಿಷ್ಯರಿಗೆ ದಕ್ಷಿಣಾಮೂರ್ತಿಯು ಈ ಮುದ್ರೆಯನ್ನು ತೋರಿಸುತ್ತಾ, "ನಿಮ್ಮ ಹೃದಯದಲ್ಲಿರುವ ಸಂಶಯ ಕಂಟಕವನ್ನು ಕೀಳುತ್ತೇನೆ." ಎಂದ ಹಾಗೆ ಇದರ ಭಾವ.

ವಿಜ್ಞಾನ ದೃಷ್ಟಿಯಿಂದ ಹೇಳುವುದಾದರೆ, ಪ್ರತಿಯೊಬ್ಬರ ಶರೀರದಲ್ಲಿಯೂ, ತಕ್ಕಷ್ಟು ವಿದ್ಯುತ್ತು ಹರಿಯುತ್ತಿರುತ್ತದೆ. ವಿದ್ಯುತ್ತಿನಲ್ಲಿ 'ಪಾಸಿಟಿವ್' ಮತ್ತು 'ನೆಗೆಟಿವ್' ಎಂಬ ಎರಡು ಪ್ರವಾಹಗಳಿವೆ. ಇವೆರಡೂ ಬೇರೆ ಬೇರೆಯಾಗಿದ್ದಾಗ ಪ್ರಕಾಶವನ್ನು ಕೊಡಲಾರವು ಎರಡೂ ಕೂಡಿದ ಕೂಡಲೇ ಪ್ರಕಾಶ ಉಂಟಾಗುವುದು. ಇದರಂತೆ ಅಂಗುಷ್ಠ ತರ್ಜನಿಗಳ ಸಂಯೋಗದಿಂದ, ಶರೀರದಲ್ಲಿ ಒಂದು ಶಕ್ತಿಯುಂಟಾಗಿ, ಅಲ್ಲಿನ ಧಮನಿಗಳಿಂದ ಹಿಂದಕ್ಕೆ ಹೋಗಿ, ಮಸ್ತಿಷ್ಕ ಕೇಂದ್ರಕ್ಕೆ ತಲಪಿ, ಅಲ್ಲಿ ಒಂದು ನಿರಂತರ ಕ್ರಿಯೆಯನ್ನುಂಟು ಮಾಡಿ, ತತ್ಕಾರ್ಯವಾಗಿ ಮನಶ್ಶಾಂತಿಯಾಗಿ, ಬೋಧಿಸುವ ಗುರುವನ್ನು "ವೀರ್ಯವತ್ತರ" ನನ್ನಾಗಿ ಮಾಡುವುದು. ಯೋಗಶಾಸ್ತ್ರದಲ್ಲಿಯೂ ಈ ಜ್ಞಾನಮುದ್ರೆಯಿಂದ ಚಿತ್ತೈಕಾಗ್ರತೆ ಶೀಘ್ರವಾಗಿ ಫಲಿಸುವುದೆಂದು ಹೇಳಿದೆ. ಜ್ಞಾನರೂಪ ಸಾಕ್ಷಾತ್ ಬ್ರಹ್ಮಸ್ವರೂಪವೇ ಆದ ಮತ್ತು ಶ್ರೋತ್ರಿಯನೂ ಅಕಾಮಹತನೂ ಆದ, ಸದ್ಗುರುವು ಶ್ರವಣ ಮನನ ನಿದಿಧ್ಯಾಸನಾದಿಗಳಿಂದ ಸಮಾಹಿತ ಚಿತ್ತನಾದ ಸಚ್ಛಿಷ್ಯನ ಎದುರಿಗೆ ನಿಂತು, ಚಿನ್ಮುದ್ರಾಂಕಿತನಾಗಿ ದರ್ಶನ ಕೊಟ್ಟನೆಂದರೆ, ಆ ಗುರುವಿನ ಮೌನ ಉಪದೇಶವೇ ಸಾಕು, ಶಿಷ್ಯನ ಅಜ್ಞಾನ ರೂಪವಾದ ಸಂಶಯ

ಗಳನ್ನು ನಿವಾರಿಸುವುದಕ್ಕೆ, ಸೂರ್ಯನ ಎದುರಿನಲ್ಲಿ ಕತ್ತಲೆ ನಿಲ್ಲಲು ಸಾಧ್ಯವೇ ? ಇದಕ್ಕೆ ದಕ್ಷಿಣಾಮೂರ್ತಿ ರೂಪನಾದ ಶಂಕರನು ಸನಕ ಸನಂದನಾದಿಗಳಿಗೆ ಚಿನ್ಮುದ್ರಾಂಕಿತನಾಗಿ ಮೌನದಿಂದ ಉಪದೇಶ ಮಾಡಿದುದೆ ಉದಾಹರಣೆಯಾಗಿದೆ. ಗುರು ಶಿಷ್ಯರು ಎಂತಿರಬೇಕೆಂಬುದನ್ನು ಮುಂಡಕೋಪನಿಷತ್ತು :

ತಸ್ಮೈ ಸವಿದ್ವಾನುಪಸನ್ನಾಯ ಸಮ್ಯಕ್ |
ಪ್ರಶಾನ್ತ ಚಿತ್ತಾಯ, ಶಮಾನ್ವಿತಾಯ |
ಯೇನಾಕ್ಷರಂ ಪುರುಷಂ ವೇದ ಸತ್ಯಂ |
ಪ್ರೋವಾಚತಾಂ ತತ್ವತೋ ಬ್ರಹ್ಮವಿದ್ಯಾಮ್ ||

ಎಂದು ಹೇಳಿದೆ.

ಕೃತ, ತ್ರೇತಾ, ದ್ವಾಪರ ಯುಗಗಳಲ್ಲಿ ಶ್ರವಣ, ಮನನ, ನಿದಿಧ್ಯಾಸನ ಯಮ, ನಿಯಮಾದಿ ಸಕಲ ಸಾಧನ ಗಳಿಂದ ಮನಸ್ಸನ್ನು ಪರಿಪಕ್ವಗೊಳಿಸಿ, ಕೇವಲ ಆತ್ಮಜ್ಞಾನೋಪದೇಶದಿಂದ ಮುಕ್ತರಾಗುವ ಸ್ಥಿತಿಯಲ್ಲಿರುವ ಶಿಷ್ಯ ವೃಂದವಿರುತ್ತಿದ್ದಿತು. ಅವರಿಗೆ ಸದ್ಗುರುವಿನ ಮೌನ ಚಿನ್ಮುದ್ರಾಂಕಿತ ಉಪದೇಶವು ಫಲದಾಯಕವಾಗುತ್ತಿದ್ದಿತು.

ಆದರೆ, ಕಲಿಯುಗದಲ್ಲಿ ಮನುಷ್ಯನು ವ್ಯವಹಾರದೆಸೆಯಲ್ಲಿ ಬಹಳ ದೂರ ಪ್ರವೇಶಿಸಿ, ಚಿತ್ತಶುದ್ಧಿ, ಚಿತ್ತೈಕಾಗ್ರತೆಗಳಿಲ್ಲದೆ, ಆಧ್ಯಾತ್ಮಿಕ ವಿಷಯದಲ್ಲಿ ಅನೇಕ ವಿಧವಾದ ಸಂಶಯ ವಿಪರ್ಯಾಸಗಳನ್ನು ತಾಳು ವಂತಾದನು. ಆದಕಾರಣ ಶಂಕರನು ವಟವೃಕ್ಷದ ಅಡಿಯ ಮೌನ ಬೋಧೆಯನ್ನು ಬಿಟ್ಟು, ಶಂಕರಾಚಾರ್ಯ ರೂಪೇಣ ಅವತರಿಸಿ, ಶಿಷ್ಯರಿದ್ದ ಬಳಿಗೆ ತಾನೇ ಹೋಗಿ, ಶಾಸ್ತ್ರಾರ್ಥಮಾಡಿ, ಅವರ ಸಂಶಯಗಳನ್ನು ನಿವಾರಿಸಿ, ದುರ್ವಾದಿಗಳನ್ನು ಖಂಡಿಸಿ, ಬ್ರಹ್ಮವೊಂದೇ ಸತ್ಯವೆಂದೂ, ಪ್ರಪಂಚ ಮಿಥ್ಯೆ ಎಂದೂ, ಜೀವನೇ ಬ್ರಹ್ಮನೆಂದೂ, ಅನೇಕ ವಿಧಗಳಲ್ಲಿ ದೃಢಪಡಿಸಿಕೊಟ್ಟು, ಆ ತತ್ವ ಪ್ರತಿಪಾದನೆಗಾಗಿ, ಅನೇಕ ಗ್ರಂಥಗಳನ್ನೂ, ಗೀತಾ, ಸೂತ್ರ ಭಾಷ್ಯ, ಉಪನಿಷದಾದಿಗಳಿಗೆ ಭಾಷ್ಯಗಳನ್ನೂ ಬರೆದು, ಆತ್ಮ ಸಾಕ್ಷಾತ್ಕಾರ ಪಡೆಯಲು ದಾರಿ ತೋರಿಸಿ, ಧರ್ಮೋದ್ಧಾರ ಮಾಡಿದನು.

ಹೀಗೆ ಚಿನ್ಮುದ್ರೆಯಿಂದ ಮೌನವಾಗಿ ಬೋಧೆಮಾಡಿದ ಶ್ರೀರಾಮ ಮತ್ತು ದಕ್ಷಿಣಾಮೂರ್ತಿಗಳ ತತ್ವವನ್ನೇ ಶ್ರೀಮಚ್ಛಂಕರರು ಬೋಧಿಸಿದರು. ಆ ತತ್ವವೇ "ಅದ್ವೈತ ತತ್ವ" "ಜೀವ ಬ್ರಹ್ಮೈಕ್ಯ" ಎಂಬುದು.

ಉಪನಿಷದಾದಿಗಳಲ್ಲಿ ಮಹಾ ವಾಕ್ಯಗಳು ಕೂಡಾ, ಈ ಅದ್ವೈತ ತತ್ವವನ್ನೇ ಸಾರುತ್ತವೆ. ಅವುಗಳನ್ನು ಈ ಕೆಳಗೆ ಉದಹರಿಸಿದೆ :—

1.	'ಪ್ರಜ್ಞಾನಂ ಬ್ರಹ್ಮ	ಋಗ್ವೇದ ಮಹಾ ವಾಕ್ಯ (ಐತರೇಯ ಉಪನಿಷತ್)	ಆನಂದರೂಪವಾದ ಪ್ರಜ್ಞಾನವು ಬ್ರಹ್ಮ ವಾಗಿದೆ. ಅಂದರೆ, ಮನೋವೃತ್ತಿಯುಳ್ಳ ಜೀವನೂ, ಮಾಯಾವೃತ್ತಿಯುಳ್ಳ ಈಶ್ವರನೂ, ತನ್ಮ ವೃತ್ತಿರಹಿತ ಚೈತನ್ಯ ರೂಪೇಣ ಒಂದು.
2	'ಅಹಂ ಬ್ರಹ್ಮಾಸ್ಮಿ'	ಯಜುರ್ವೇದ ಮಹಾ ವಾಕ್ಯ (ಬೃಹದಾರಣ್ಯಕೋಪನಿಷತ್)	ನಾನು ಬ್ರಹ್ಮನಾಗಿದ್ದೇನೆ. (ಭಾಗತ್ಯಾಗಲಕ್ಷಣಯಾ)

3.	'ತತ್ತ್ವಮಸಿ'	ಸಾಮವೇದ ಮಹಾ ವಾಕ್ಯ (ಛಾಂದೋಗ್ಯೋಪನಿಷತ್)	ಜೀವ ಸ್ವರೂಪನಾದ ನೀನು ಸದ್ವಸ್ತುವಾದ ಬ್ರಹ್ಮನಾಗಿದ್ದೀಯೆ. (ಭಾಗತ್ಯಾಗಲಕ್ಷಣಯಾ)
4.	'ಅಯಮಾತ್ಮಾಬ್ರಹ್ಮಾ'	ಅಥರ್ವಣವೇದ ಮಹಾ ವಾಕ್ಯ (ಮಾಂಡೂಕ್ಯೋಪನಿಷತ್)	ಪ್ರಾಣ, ಮನಸ್ಸು, ಇಂದ್ರಿಯಾದಿಗಳ ಸಂಘಾತದ ಒಳಗಡೆ ಅದಕ್ಕೆ ಆಧಾರವಾಗಿರುವ ಈ ಪ್ರತ್ಯಗಾತ್ಮನಾದ ಜೀವನೇ ಬ್ರಹ್ಮ.

ಮೇಲೆ ಹೇಳಿದ ಮಹಾ ವಾಕ್ಯಗಳಿಂದ ಆತ್ಮ ಪರಮಾತ್ಮರುಗಳು ಒಂದೇ ಎಂಬುದು ತಿಳಿಯಬರುತ್ತದೆ, ಎಂಬ ಅಂಶವನ್ನು ಅಧ್ಯಾತ್ಮ ರಾಮಾಯಣದಲ್ಲಿ ಶ್ರೀರಾಮ ಹೃದಯವನ್ನು ಹೇಳುವಲ್ಲೂ,

ಐಕ್ಯಜ್ಞಾನಂಯದೋತ್ಪನ್ನಂ, ಮಹಾ ವಾಕ್ಯೇನ ಚಾತ್ಮನೋಃ ।

ಎಂದು ಹೇಳಿದೆ.

ಈ ನಾಲ್ಕು ವಾಕ್ಯಗಳಲ್ಲಿ "ತತ್ತ್ವಮಸಿ" ಎಂಬುದು ಉಪದೇಶ ವಾಕ್ಯವಾಗಿಯೂ, ಮಿಕ್ಕವುಗಳು ಅನುಭವ ವಾಕ್ಯಗಳಾಗಿಯೂ ಇವೆ.

ಇವುಗಳಲ್ಲದೇ ಇನ್ನೂ ಅನೇಕ ಕಡೆಗಳಲ್ಲಿ ಈ ಅದ್ವೈತ ತತ್ವವೇ ಪ್ರತಿಪಾದಿತವಾಗಿರುತ್ತದೆ. ಅವುಗಳಲ್ಲಿ ಕೆಲವನ್ನು ಈ ಕೆಳಗೆ ಉದಹರಿಸಿದೆ.

1.	'ಏಕಮೇವಾದ್ವಿತೀಯಂ'	ಛಾಂದೋಗ್ಯೋಪನಿಷತ್	ಎರಡನೆಯದಿಲ್ಲದೆ, ಅಂದರೆ ಸಜಾತೀಯ, ವಿಜಾತೀಯ, ಸ್ವಗತ ಭೇದವಿಲ್ಲದೇ, ತ್ರಿಕಾಲದಲ್ಲೂ ಒಂದೇ ಆಗಿರುವ ವಸ್ತು ಬ್ರಹ್ಮ ಒಂದೇ.
2.	"ಉದರ ಮಂತರಂ ಕುರುತೇ ಅಥತಸ್ಯ ಭಯಂ ಭವತಿ"	ತೈತ್ತಿರೀಯ ಉಪನಿಷತ್	ಯಾರು, ಜೀವ ಬ್ರಹ್ಮದಲ್ಲಿ ಐಕ್ಯತೆಯನ್ನು ಬಿಟ್ಟು ಸ್ವಲ್ಪವಾದರೂ ಭೇದವೆಣಿಸುವರೋ ಅವರಿಗೆ ಅನರ್ಥವುಂಟಾಗುವುದು.
3.	'ಮೃತ್ಯೋಸ್ಸಮೃತ್ಯು ಮಾಪ್ನೋತಿ ಯಇಹ ನಾನೇವಪಶ್ಯತಿ'	ಕಠೋಪನಿಷತ್	ಯಾರು ಬ್ರಹ್ಮ ಒಂದೇ ಸತ್ಯ ಎಂಬುದನ್ನು ಬಿಟ್ಟು, ಅನೇಕವಾಗಿ ಇರುವಂತೆ ನೋಡುವರೋ, ಅವರಿಗೆ, ಜನನ ಮರಣ ಪರಂಪರೆ ತಪ್ಪಿದ್ದಲ್ಲ.

4. ಸರ್ವ ಭೂತಸ್ಥಿತಂ ಯೋಮಾಂ | ಭಜತ್ಯೇಕತ್ವಮಾಸ್ಥಿತಃ | ಸರ್ವಥಾ ವರ್ತಮಾನೋಪಿ | ಸಯೋಗೀ ಮಯಿವರ್ತತೇ ||	ಗೀತಾ	ಸರ್ವಭೂತಗಳಿಗೂ ಅಧಿಷ್ಠಾನನಾಗಿ ಸತ್ತಾ ಸ್ಫುರಣರೂಪದಿಂದ ಅನಸ್ಯೂತವಾಗಿರುವ 'ತತ್' ಪದದ ಲಕ್ಷ್ಯಾರ್ಥವಾದ ಈಶ್ವರನಾದ ನನ್ನನ್ನು, ಅಭೇದ ಬುದ್ಧಿಯಿಂದ (ತಾನೇ ಬ್ರಹ್ಮವೆಂಬ ಏಕತ್ವ ಭಾವನೆಯಿಂದ) ಯಾವ ಯೋಗಿಯು ಕಾಣುವನೋ, ಆ ಯೋಗಿಯು ಹೇಗೆ ಇದ್ದರೂ ನನ್ನಲ್ಲಿಯೇ ಇರುವನು, ಅಂದರೆ ಅವನು ಎಂದೆಂದಿಗೂ ನಿತ್ಯಮುಕ್ತನೇ.
5. ಮಾಯಾಮಾತ್ರ ಮಿದಂದ್ವೈತಂ | ಅದ್ವೈತಂ ಪರಮಾರ್ಥತಃ | ಶಾಂತಂ ಶಿವಂ ಅದ್ವೈತಂ | ಚತುರ್ಥಂ ಮನ್ಯಂತೇ ಸಆತ್ಮಾ |	ಮಾಂಡೂಕ್ಯೋಪನಿಷತ್	"ನಮಗೆ ಕಾಣುವ ದ್ವೈತ ಪ್ರಪಂಚವೆಲ್ಲಾ ಮಾಯಿಕ. ಅದ್ವೈತವಾದ ಬ್ರಹ್ಮ ಒಂದೇ ಸತ್ಯ. ಜೀವನ ಅವಸ್ಥಾತ್ರಯವೂ ತುರೀಯದಲ್ಲಿ ಕಲ್ಪಿತ" ಎಂದು ಹೇಳಿ, ಆ ತುರೀಯವಾದ ಆತ್ಮವು ನಿಷ್ಕ್ರಿಯವೂ ಆನಂದ ಸ್ವರೂಪವೂ ದ್ವೈತವಿಲ್ಲದ್ದೂ ಆದ ಬ್ರಹ್ಮವೆಂದಿದೆ.
6. ಯೋಮಾಂ ಪಶ್ಯತಿ ಸರ್ವತ್ರ | ಸರ್ವಂಚಮಯಿ ಪಶ್ಯತಿ | ತಸ್ಯಾಹಂನಪ್ರಣಶ್ಯಾಮಿ | ಸಚಮೇ ನಪ್ರಣಶ್ಯತಿ ||	ಗೀತಾ	ಯಾರು ಪ್ರತಿಯೊಬ್ಬನ ಆತ್ಮನಾಗಿರುವ ವಾಸುದೇವನಾದ ನನ್ನನ್ನು ಎಲ್ಲೆಲ್ಲಿಯೂ ಅಂದರೆ ಎಲ್ಲಾ ಪ್ರಾಣಿಗಳಲ್ಲಿಯೂ ಕಾಣುವನೋ ಮತ್ತು ಎಲ್ಲವನ್ನು ಅಂದರೆ ಬ್ರಹ್ಮಾದಿ ಭೂತ ಜಾತಗಳನ್ನೆಲ್ಲಾ ನನ್ನಲ್ಲಿ ಕಲ್ಪಿತವೆಂದು ಯಾರು ಕಾಣುವನೋ, ಅವನಿಗೆ ಅಂದರೆ, ಹೀಗೆ ಆತ್ಮನು ಒಬ್ಬನೇ ಎಂದು ಕಂಡುಕೊಳ್ಳುವವನಿಗೆ, ನಾನು ಹೊರಗಲ್ಲ ಮತ್ತು ನನಗೆ ಅವನೂ ಹೊರಗಲ್ಲ. ಇಬ್ಬರೂ ಒಂದೇ.
7. ಅನ್ನಂಚ ಬ್ರಹ್ಮ ಅಹಂಚ ಬ್ರಹ್ಮ | ಭೋಕ್ತಾಚ ಬ್ರಹ್ಮ ಸರ್ವಂ ಖಲ್ವಿದಂಬ್ರಹ್ಮ ||	ಯಜುರಾರಣ್ಯಕ	ಅನ್ನವೂ ಬ್ರಹ್ಮವೇ ನಾನೂ ಬ್ರಹ್ಮವೇ ಊಟ ಮಾಡುವವನೂ ಬ್ರಹ್ಮವೇ ಎಲ್ಲವೂ ಬ್ರಹ್ಮವೇ ಅಲ್ಲವೇ.

8. ಬ್ರಹ್ಮಾರ್ಪಣಂ ಬ್ರಹ್ಮ ಹವಿರ್ಬ್ರಹ್ಮಾಗ್ನೌ ಬ್ರಹ್ಮಣಾಹುತಂ।
ಬ್ರಹ್ಮೈವ ತೇನ ಗನ್ತವ್ಯಂ ಬ್ರಹ್ಮ ಕರ್ಮಸಮಾಧಿನಾ ॥

(ಗೀತಾ)

ಬ್ರಹ್ಮಜ್ಞಾನಿಗೆ ಹೋಮ, ಹೋಮಸಾಧನ ಅಗ್ನಿ, ಫಲ ಎಂಬಿವು ಬ್ರಹ್ಮಕ್ಕಿಂತ ಬೇರೆಯಾಗಿ ಕಾಣುವುದಿಲ್ಲ. ಅಧಿಷ್ಠಾನವಾದ ಬ್ರಹ್ಮದ ಸಾಕ್ಷಾತ್ಕಾರದಿಂದ ಕ್ರಿಯಾಕಾರಕಾದಿ ಸರ್ವ ವ್ಯವಹಾರಗಳೂ ಬಾಧಿತವಾಗಿ ಬ್ರಹ್ಮ ಒಂದೇ ಕಾಣುವುದು.

9. (ಗೀತಾ) ಜ್ಞಾನೀತ್ವಾತ್ಮೈವಮೇ ಮತಂ.

ಜೀವ ಬ್ರಹ್ಮ ಅಭೇದವನ್ನು ತಿಳಿದು ಆತ್ಮಜ್ಞಾನವನ್ನು ಪಡೆದ ಜ್ಞಾನಿಯೇ ನಾನು ಎಂದು ನನ್ನ ಮತ, ಎಂದು ಶ್ರೀಕೃಷ್ಣನು ಹೇಳಿರುವನು.

10. "ಇದಂ ಶರೀರಂ ಕೌಂತೇಯ ಕ್ಷೇತ್ರಮಿತ್ಯಭಿಧೀಯತೇ
ಏತದ್ಯೋವೇತ್ತಿತಂಪ್ರಾಹುಃ ಕ್ಷೇತ್ರಜ್ಞ ಇತಿ ತದ್ವಿದಃ
ಕ್ಷೇತ್ರಜ್ಞಂ ಚಾಪಿಮಾಂ ವಿದಿ ಸರ್ವಕ್ಷೇತ್ರೇಷು ಭಾರತ." (ಗೀತಾ)

ಈ ಶರೀರವೇ ಕ್ಷೇತ್ರ, ಇದನ್ನು ಅರಿಯುವವನು ಜೀವನು. ಅವನೇ ಕ್ಷೇತ್ರಜ್ಞ, ಸರ್ವ ಕ್ಷೇತ್ರಗಳಲ್ಲಿ ಅಂದರೆ ಶರೀರಗಳಲ್ಲಿ, ಕ್ಷೇತ್ರಜ್ಞನಾಗಿ ಅಂದರೆ ಜೀವನಾಗಿ ಇರುವವನು, ಪರಬ್ರಹ್ಮನಾದ ನಾನೇ.

11. ಗೀತಾ :— ಅಹಮಾತ್ಮಾ ಗುಡಾಕೇಶ, ಸರ್ವಭೂತಾಶಯಸ್ಥಿತಃ।

"ಸಕಲ ಪ್ರಾಣಿಗಳ ಹೃದಯ ಅಂತರ್ವರ್ತಿಯಾದ, ಪ್ರತ್ಯಗಾತ್ಮನಾದ ಜೀವನು, ಬ್ರಹ್ಮಸ್ವರೂಪಿಯಾದ ನಾನು" ಎಂದಿದ್ದಾನೆ ಶ್ರೀ ಕೃಷ್ಣಪರಮಾತ್ಮ.

12. ಪುರುಷಸೂಕ್ತ :- "ಪುರುಷ ಏವೇದಂ ಸರ್ವಮ್। ಯದ್ಭೂತಂ ಯಚ್ಚಭವ್ಯಮ್।"

ನಮಗೆ ಕಂಡುಬರುವ ಚೇತನ ಜಡಾತ್ಮಕವಾದ ವಿಶ್ವವೆಲ್ಲಾ ಬ್ರಹ್ಮಸ್ವರೂಪವೇ ಎಂದೂ ಮತ್ತು 'ಅಜಾಯಮಾನೋ ಬಹುಧಾವಿಜಾಯತೇ' ಎಂಬಲ್ಲಿ ಬ್ರಹ್ಮವು ಷಡ್ಭಾವ ವಿಕಾರಶೂನ್ಯವೆನಿಸಿದ್ದರೂ ಮಾಯಾ ಕಲ್ಪಿತ ರೂಪದಿಂದ ಬಹುವಾಗಿ ಕಾಣಿಸಿಕೊಳ್ಳುತ್ತದೆ. ಎಂದೂ ಅದ್ವೈತವನ್ನು ಹೇಳಿದೆ.

13. ಶ್ರುತಿ :— "ನೇತಿನೇತಿ" (ಛಾಂದೋಗ್ಯ)

ಇಲ್ಲಿ ಆತ್ಮನಿಂದ ಭಿನ್ನವಾದ ಸಕಲ ಮೂರ್ತಾ ಮೂರ್ತ ಪ್ರಪಂಚವೂ, ಇಲ್ಲವೆಂದು ನಿಷೇಧಿಸಿದೆ.

14. ಶ್ರುತಿ :— "ನೇಹ ನಾನಾಸ್ತಿಕಿಂಚನ." (ಬೃಹದಾರಣ್ಯಕ)

ಒಂದಕ್ಕಿಂತ ಹೆಚ್ಚಾಗಿ ಸ್ವಲ್ಪವೂ ಇಲ್ಲ. ಬ್ರಹ್ಮ ಒಂದೇ ಇರುವುದು. ಇಲ್ಲಿ ಪ್ರತ್ಯಗಭಿನ್ನ ಬ್ರಹ್ಮದಲ್ಲಿ, ಜೀವೇಶ್ವರ ಜಗದ್ರೂಪ ದ್ವೈತಪ್ರಪಂಚದ ಅತ್ಯಂತಾಭಾವವನ್ನು ಹೇಳಿರುತ್ತೆ.

15. ಬೃಹದಾರಣ್ಯಕ :– ಆತ್ಮಾನಂಚೇದ್ವಿಜಾನೀಯಾತ್ ಅಯಮಸ್ಮೀತಿ ಪೂರುಷಃ |
ಕಿಮಿಚ್ಛನ್ ಕಸ್ಯ ಕಾಮಾಯ ಶರೀರ ಮನುಸಂಜ್ವರೇತ್ |

"ಪರಿಪೂರ್ಣವಾಗಿಯೂ ಅದ್ವಿತೀಯವಾಗಿಯೂ ಇರುವ ಬ್ರಹ್ಮವು ನಾನು," ಹೀಗೆಂದು ಯಾವಾಗ ಆತ್ಮನನ್ನು ತಿಳಿದುಕೊಳ್ಳುವನೋ, ಆಗಲೇ ಆ ಬ್ರಹ್ಮಜ್ಞಾನಿಯು ಯಾವ ವಸ್ತುವನ್ನಿಚ್ಛಿಸುತ್ತಾ ಯಾವ ಪ್ರಯೋಜನಕ್ಕೋಸುಗ ಈ ಶರೀರವನ್ನು ಅನುಸರಿಸಿ ತಾನು ಸಂಕಟಪಡುವನು ?

16. ಶ್ರೀಮದ್ಭಾಗವತದ ದ್ವಾದಶಸ್ಕಂಧದ 5ನೇ ಅಧ್ಯಾಯದ, 11ನೇ ಶ್ಲೋಕದಲ್ಲಿ ಶುಕನು ಪರೀಕ್ಷಿದ್ರಾಜನಿಗೆ ಆತ್ಮ ವಿಚಾರ ತಿಳಿಸುವಲ್ಲೂ "ನಾನು ಪರಮ ಧಾಮ" ಅಂದರೆ "ನಿರತಿಶಯ ಸ್ವರೂಪ ಬ್ರಹ್ಮನಾಗಿರುವೆನು" ಎಂದು ಹೇಳಿರುವನು.

17- ಶ್ರುತಿ ॥ "ಯತ್ಸಾಕ್ಷಾದಪರೋಕ್ಷಾದ್ಬ್ರಹ್ಮ"

ಅಂದರೆ ಬ್ರಹ್ಮವು ಸರ್ವಕ್ಕೂ ಆತ್ಮರೂಪವಾದ್ದರಿಂದ ಸಾಕ್ಷಾದಪರೋಕ್ಷವಾಗಿದೆ.

ಹೀಗೆ ಇಲ್ಲಿ ಬ್ರಹ್ಮನ ಅದ್ವಿತೀಯತ್ವವನ್ನೂ ಹೇಳಿದೆ.

18. ರಾಮ ಉತ್ತರತಾಪನಿಯೋಪನಿಷತ್ :—

"ಯೊವೈ ಶ್ರೀರಾಮಚಂದ್ರಸ್ಸಭಗವಾನ್ ಅದ್ವೈತ ಪರಮಾನಂದ ಆತ್ಮಾ
ಯೋಜೀವಾತ್ಮಾ, ಭೂರ್ಭುವಸ್ಸುವಃ ತಸ್ಮೈವೈನಮೋ ನಮಃ"

ಇಲ್ಲಿಯೂ ಜೀವಾತ್ಮನೇ ಪರಬ್ರಹ್ಮನೆಂದು ಹೇಳಿದೆ.

ಹೀಗೆ ಬ್ರಹ್ಮನ ಅದ್ವಿತೀಯತ್ವವನ್ನೂ, ಜೀವಬ್ರಹ್ಮೈಕ್ಯವನ್ನೂ, ತಿಳಿಸುವ ಸರ್ವ ಶ್ರುತಿ ಸ್ಮೃತಿಗಳ ಅರ್ಥವಾದ ಅದ್ವೈತ ತತ್ವವನ್ನು ಈ ಕೆಳಗಿನ ಶ್ಲೋಕದಲ್ಲಿ ಸಂಗ್ರಹವಾಗಿ ಹೇಳಿದೆ.

ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥಕೋಟಿಭಿಃ |
ಬ್ರಹ್ಮಸತ್ಯಂ ಜಗನ್ಮಿಥ್ಯಾ, ಜೀವೋಬ್ರಹ್ಮೈವ, ನಾಪರಃ |

ಅಂದರೆ, ಬ್ರಹ್ಮಸತ್ಯವಾದದ್ದು. ಜಗತ್ತು ಮಿಥ್ಯಾಭೂತವಾದದ್ದು. ಜೀವನು ಬ್ರಹ್ಮನೇ. ಬ್ರಹ್ಮಕ್ಕಿಂತ ಬೇರೆ ಅಲ್ಲ, ಎಂದರ್ಥ

ಈ ರೀತಿ ಸಂಗ್ರಹವಾಗಿ ಹೇಳಿರುವ ಅದ್ವೈತ ತತ್ವವನ್ನು ಸ್ವಲ್ಪ ವಿವರಿಸೋಣ.

ಮೊದಲು ಬ್ರಹ್ಮನ ಲಕ್ಷಣಗಳೇನು, ನೋಡೋಣ. ಬ್ರಹ್ಮಕ್ಕೆ ಯಾವ ಲಿಂಗವೂ ಇಲ್ಲ. ಆದರೆ ಬಹ್ಮ ಶಬ್ದ ಸಾಧುವಾಗಲು ಒಂದು ಲಿಂಗಬೇಕು. ಅದಕ್ಕಾಗಿ ವೇದಾಂತಿಗಳು ಬ್ರಹ್ಮವನ್ನು, ಸಾಮಾನ್ಯವಾಗಿ ಶಬ್ದದಿಂದ ನಪುಂಸಕಲಿಂಗವೆಂದು ಹೇಳುತ್ತಾರೆ.

ಬ್ರಹ್ಮವು ಕಾಲಾತ್ರಯಗಳಲ್ಲೂ ಇರತಕ್ಕದು. ನಿರತಿಶಯ ಅಪರಿಚ್ಛಿನ್ನ ಆನಂದಸ್ವರೂಪವಾದುದು. ಇದನ್ನೇ ತೈತ್ತಿರೀಯ ಉಪನಿಷತ್ತಿನಲ್ಲಿ.

"ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂದು ಹೇಳಿದೆ.

ಈ ಸಚ್ಚಿದಾನಂದಗಳನ್ನು ಬ್ರಹ್ಮದಲ್ಲಿ ಪರಸ್ಪರ ಅಭಿನ್ನಗಳೆಂದು ತಿಳಿಯಬೇಕು. ಇದರಿಂದ ಬ್ರಹ್ಮದ ಅಖಂಡೈಕರಸತ್ವವು ಸ್ಪಷ್ಟವಾಗುತ್ತದೆ. ಇಲ್ಲಿ ಬ್ರಹ್ಮಕ್ಕೆ ಅಭೇದೇನ ವಿಶೇಷಣವನ್ನು ಹೇಳಿದೆ. ಇದು ಸರ್ವ ವ್ಯಾಪಿಯಾದುದು. ಅಶನ, ಪಿಪಾಸಾದಿ ಸಮಸ್ತ ಸಂಸಾರದುಃಖವರ್ಜಿತವಾದುದು. ಪರಿಪೂರ್ಣವಾದುದು, ಅದ್ವಿತೀಯುವಾದುದು. ಮತ್ತು ನಿರ್ವಿಶೇಷವಾದುದು.

ನಿರ್ಗುಣ ಬ್ರಹ್ಮವನ್ನು ವಿದ್ಯಾರಣ್ಯ ಸ್ವಾಮಿಗಳು "ಬ್ರಹ್ಮವಿದಾಶೀರ್ವಾದ ಪದ್ಧತಿಃ" ಎಂಬ ತಮ್ಮ ಗ್ರಂಥ ದಲ್ಲಿ, ನಿತ್ಯನಿರ್ವಿಕಾರಾಸಂಗಾದ್ವಿತೀಯ ಪರಿಪೂರ್ಣ ಸಚ್ಚಿದಾನಂದ ಸ್ವಪ್ರಕಾಶವೆಂದೂ, ಸಜಾತಿಯ ವಿಜಾತೀಯ ಸ್ವಗತ ಭೇದರಹಿತ ನಿತ್ಯಶುದ್ಧ ಬುದ್ಧಸತ್ಯ ಪರಮಾನಂದಾದ್ವಿತೀಯವೆಂದೂ, ಹೇಳಿರುವರು. ಹೀಗೆ ಇದು ಸಚ್ಚಿದಾನಂದ ಸ್ವರೂಪವಾದುದು. ಇದನ್ನು ವೇದಾಂತದಲ್ಲಿ ನಿರ್ಗುಣ ಬ್ರಹ್ಮವೆನ್ನುವರು.

ಇಂತಹ ನಿರ್ಗುಣ ಬ್ರಹ್ಮವನ್ನು ಅನಾದಿಯೂ, ಅನಿರ್ವಚನೀಯವೂ ಆದ ಒಂದು "ಅವ್ಯಕ್ತ" ಶಕ್ತಿಯು ಅನಾದಿಯಾಗಿ ಆಶ್ರಯಿಸಿಕೊಂಡಿದೆ. ಇದನ್ನು ತ್ರಿಕಾಲಾಬಾಧ್ಯವಾದ ಸದ್ವಸ್ತುವಿನಂತೆ, "ಇದೆ" ಯೆಂದು ಹೇಳಲೂ ಬಾರದು. ಯಾವಾಗಲೂ ಇಲ್ಲದ ಅಸದ್ವಸ್ತುವಿನಂತೆ, "ಇಲ್ಲ" ವೆಂದು ಹೇಳಲೂ ಬಾರದು. ಹೀಗಾಗಿ ಇದು "ಮಿಥ್ಯೆ" ಎನ್ನಿಸಿಕೊಂಡಿದೆ.

ಇದನ್ನು ಕೆಲವರು 'ಚಿಚ್ಛಕ್ತಿ' ಅಂದರೆ ಚಿದ್ರೂಪವಾದ ಬ್ರಹ್ಮಶಕ್ತಿ ಎಂದು ಕರೆಯುವರು. ಇದನ್ನು ಪರಮಾತ್ಮನೆಂದಾಗಲಿ, ಅವನಿಗಿಂತ ಬೇರೆ ಎಂದಾಗಲೀ ನಿರ್ಣಯಿಸಲು ಸಾಧ್ಯವಿಲ್ಲವಾಗಿ ಇದು ಅನಿರ್ವಚ ನೀಯವೆನ್ನಿಸಿಕೊಂಡಿದೆ. ಇದು ನಾಮರೂಪವಾಗಿ ಬಿಡಿಬಿಡಿಯಾಗಿ ಅಂದರೆ ವ್ಯಾಕೃತವಾಗಿ ಕಾಣುವ ಜಗತ್ತಿನ ಸೃಷ್ಟಿಗೆ ಪೂರ್ವದಲ್ಲಿ ಅವ್ಯಾಕೃತವಾಗಿದ್ದಿತು.

ಶ್ರುತಿ :— ತದೈಕ್ಷತ ಬಹುಸ್ಯಾಂ ಪ್ರಜಾಯೇಯ' ಅಂದರೆ

"ನಾನು ಏಕನಾಗಿದ್ದೇನೆ ಬಹುರೂಪಗಳಾಗಿ ತೋರಬೇಕು" ಎಂಬ ನಿರ್ಗುಣ ಬ್ರಹ್ಮದ ಸಂಕಲ್ಪದಿಂದ, ಅದರ ಆಶ್ರಯದಲ್ಲಿದ್ದ ಅವ್ಯಕ್ತಕ್ಕೆ ಕ್ಷೋಭವಾಗಿ, ಅದು ತ್ರಿಗುಣಾತ್ಮಕವಾಗಿ, ಸತ್ವಗುಣಪ್ರಧಾನವಾಗಿ ಮಾಯೆ ಯೆಂದೂ, ರಜೋಗುಣಪ್ರಧಾನವಾಗಿ ಅವಿದ್ಯೆಯೆಂದೂ, ತಮೋಗುಣಪ್ರಧಾನವಾಗಿ ತಮಃಪ್ರಧಾನ ಪ್ರಕೃತಿ ಯೆಂದೂ ತೋರಿಕೊಂಡಿತು. "ಯಾಮಾ ಸಾಮಾಯಾ" ಅಂದರೆ ಯಾವುದು ಇಲ್ಲವೋ ಅದು ಮಾಯಾ. "ಯಾ, ನ ವಿದ್ಯತೇ, ಸ, ಅವಿದ್ಯಾ" ಯಾವುದು ಬ್ರಹ್ಮಾತ್ಮೈಕ್ಯಜ್ಞಾನರೂಪವಾದ ವಿದ್ಯೆಯಿಂದ ನಿವೃತ್ತಿ ಯಾಗುವುದೋ ಅದು ಅವಿದ್ಯಾ. ಅವ್ಯಕ್ತವು ನಿರ್ಗುಣ ಬ್ರಹ್ಮವನ್ನು ಯಾವಾಗಿನಿಂದ ಆಶ್ರಯಿಸಿಕೊಂಡಿದೆ ಎಂದು ಪ್ರಶ್ನಿಸಿದರೆ, ಆ ಪ್ರಶ್ನೆಯು, ಪ್ರಶ್ನೆ ಮಾಡುವವನ ಮತ್ತು ಉತ್ತರ ಕೊಡುವವನ ಇಬ್ಬರ ಮನಸ್ಸಿಗೂ ಕಾರಣವಾದ, ಮತ್ತು ವಾಕ್ಕಿಗೂ ಕಾಲಕ್ಕೂ ಜನಕವಾದ, ಅವ್ಯಕ್ತವನ್ನು ಕುರಿತದ್ದಾಯಿತು. ಇಂತಹ ಕಾಲಕ್ಕೂ, ಮನಸ್ಸಿಗೂ, ವಾಕ್ಕಿಗೂ ಹಿಂದಿನದ್ದಾದ ಅವ್ಯಕ್ತವನ್ನು ಅನಿರ್ವಚನೀಯವೆಂದೇ ಹೇಳಬೇಕು. ಅಲ್ಲದೆ ಆ ಅವ್ಯಕ್ತವೇ ಆವರಣ ಶಕ್ತಿ, ವಿಕ್ಷೇಪ ಶಕ್ತಿ ಎಂಬ ಎರಡು ಶಕ್ತಿರೂಪವಾಗಿಯೂ ಕಾಣಿಸಿಕೊಂಡಿತು. ಇದನ್ನೇ "ದೃಗ್ದೃಶ್ಯವಿವೇಕ" ಗ್ರಂಥದಲ್ಲಿ "ಶಕ್ತಿದ್ವಯಂ ಹಿ ಮಾಯಾಯಾ ವಿಕ್ಷೇಪಾವೃತಿ ರೂಪಕಂ" ಎಂದು ಹೇಳಿದೆ.

ಮಾಯೆಯಲ್ಲಿ ಪ್ರತಿಬಿಂಬಿಸಿದ ನಿರ್ಗುಣ ಬ್ರಹ್ಮವು, ಸಗುಣಬ್ರಹ್ಮ ಅಥವಾ ಈಶ್ವರನೆನಿಸಿಕೊಂಡು ತನ್ನ ಕಲ್ಪಿತ ಗುಣಗಳಿಂದ ಸತ್ಯಕಾಮತ್ವ, ಸರ್ವಜ್ಞತ್ವ, ಜಗತ್ಕಾರಣತ್ವ, ಸರ್ವನಿಯಂತೃತ್ವ ಇವುಗಳಿಂದ ಪ್ರಕಟವಾಯಿತು. ಈಶ್ವರನಿಗೆ ಆವಾರಕವಾದುದು, ಶುದ್ಧಸತ್ವಗುಣಪ್ರಧಾನವಾದ ಮಾಯೆಯಾದ್ದರಿಂದ, ಅದು ಸ್ವಚ್ಛವಾದದ್ದಾಗಿ, ಅದರಿಂದ ಈಶ್ವರನಿಗೆ ಸ್ವಸ್ವರೂಪ ತಿರೋಹಿತವಾಗಲಿಲ್ಲ. ಅಲ್ಲದೆ, ಆ ಮಾಯೆಯು ಈಶ್ವರನ ಅಧೀನವಾಗಿ

ವರ್ತಿಸಿತು. ವಿಕ್ಷೇಪಶಕ್ತಿಯಿಂದ ಕೂಡಿ, ಈಶ್ವರನು ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾದನು. ಆವರಣ ಶಕ್ತಿಯಿಂದ ಆವಾರಕವಾದ ನಿರ್ಗುಣಬ್ರಹ್ಮವು ಮಲಿನ ರಜೋಗುಣ ಪ್ರಧಾನವಾದ ಅವಿದ್ಯೆಯಲ್ಲಿ ಪ್ರತಿಬಿಂಬಿಸಿ "ಜೀವ" ನೆನಿಸಿಕೊಂಡಿತು. ಅಂದರೆ ಅದು ಪರಿಚ್ಛಿನ್ನವೂ, ಬಹುವೂ ಆದ ಅವಿದ್ಯಾತ್ಮಕ ಅಂತಃಕರಣಗಳಲ್ಲಿ ಪ್ರತಿಬಿಂಬಿಸಿದ್ದರಿಂದ, ಪರಿಚ್ಛಿನ್ನವೂ ಬಹುವೂ ಆಯಿತು. ಇದರಿಂದ ಅನೇಕ ಜೀವರುಗಳಾದರು. ಹೀಗೆ ಜೀವನಿಗೆ ಸ್ವಸ್ವರೂಪ ತಿರೋಹಿತವಾಗುವಂತೆ ಆವರಿಸಿ, ಅವನಿಗೆ ತಾನು ನಿರ್ಗುಣಬ್ರಹ್ಮವು ಎಂಬ ತಿಳಿವನ್ನು ಸ್ವಲ್ಪವೂ ಆಗದಂತೆ ಮಾಡಿ, ಜೀವನ ಆವರಣಕ್ಕೆ ಕಾರಣವಾದ, ಆವರಣಶಕ್ತಿ ಪ್ರಧಾನವಾಗಿ ಉಳ್ಳ ವಸ್ತುವೇ "ಮೂಲಾಜ್ಞಾನ" ಎನ್ನುವುದು. ಇದಾದಮೇಲೆ ಈ ಮೂಲಾಜ್ಞಾನದಿಂದ ಸ್ವಸ್ವರೂಪ ತಿರೋಹಿತನಾದ ಜೀವನನ್ನು ಮೂಲಾಜ್ಞಾನದ ವಿಕ್ಷೇಪಶಕ್ತಿಯು (ಅಧ್ಯಾಸ ಅಥವಾ ಕಾರ್ಯವಿದ್ಯೆಯು) ಬುದ್ಧಿ ದೇಹೇಂದ್ರಿಯಾದಿಗಳಲ್ಲಿ ತಾನು ಅಭಿಮಾನಿಸಿ, ಅನ್ಯೋನ್ಯತಾದಾತ್ಮ್ಯ ಸಂಬಂಧವನ್ನು ಹೊಂದುವಂತೆ ಮಾಡಿ, ತತ್ಪ್ರಯುಕ್ತ ಶೋಕ ಮೋಹ ಸುಖದುಃಖಾದಿಗಳನ್ನು ಹೊಂದಿಸಿ, ಜನನ ಮರಣ ಸಂಸಾರದಲ್ಲಿ ತೊಳಲುವಂತೆ ಮಾಡಿತು.

ಅವ್ಯಕ್ತದ ವಿಕ್ಷೇಪಶಕ್ತಿಯಿಂದ ಕೂಡಿದ ಈಶ್ವರನು, ಜೀವರುಗಳ ಪರಿಪಕ್ವವಾದ ಕರ್ಮರೂಪ ನಿಮಿತ್ತದಿಂದ, ನಾಮರೂಪಾತ್ಮಕವಾದ ಪ್ರಪಂಚ ಸೃಷ್ಟಿಯನ್ನು ಸಂಕಲ್ಪಿಸಿದನು.

ತನ್ನ ಚೇತನಾಂಶದಿಂದ ಮಡಕೆ ಮಾಡುವ ಕುಂಬಾರನಂತೆ, ಪ್ರಪಂಚ ಸೃಷ್ಟಿಗೆ ನಿಮಿತ್ತ ಕಾರಣನಾದನು. ಹೀಗೆ ನಿಮಿತ್ತ ಕಾರಣನಾದ ಪರಮೇಶ್ವರನಿಂದ 'ಅವ್ಯಕ್ತದ' ತಮಃಪ್ರಧಾನ ಪ್ರಕೃತಿಯು ಪ್ರಪಂಚವಾಗಿ ಪರಿಣಾಮ ಹೊಂದಿ, ಮಡಕೆಗೆ ಮಣ್ಣು ಆದಂತೆ ಪರಿಣಾಮ ಉಪಾದಾನ ಕಾರಣವಾಯಿತು.

ಅಲ್ಲದೆ, ಕಲ್ಪಿತ ಸರ್ಪಕ್ಕೆ ಹಗ್ಗವು ಅಧಿಷ್ಠಾನವಾಗಿರುವಂತೆ, ಕಲ್ಪಿತ ಪ್ರಪಂಚಕ್ಕೆ ಪರಮೇಶ್ವರನೇ ತನ್ನ ಚೈತನ್ಯದ ಸದಂಶದಿಂದ ಅಧಿಷ್ಠಾತೃವಾಗಿ, ಪ್ರಪಂಚಕ್ಕೆ ವಿವರ್ತೋಪಾದಾನ ಕಾರಣನೆನಿಸಿದನು. ಹಗ್ಗವಿಲ್ಲದೆ ಕಲ್ಪಿತ ಸರ್ಪವನ್ನು ಕಾಣುವುದಕ್ಕೆ ಆಗದಂತೆ, ಬ್ರಹ್ಮದ ಸದಂಶ (ಪರಮೇಶ್ವರನ ಚೈತನ್ಯ)ವಿಲ್ಲದೆ ಪ್ರಪಂಚದ ಇರುವಿಕೆಯೇ ಇಲ್ಲ.

ಚಿನ್ನದಲ್ಲಿ ಕಲ್ಪಿತವಾದ ಕುಂಡಲ ಉಂಗುರಾದಿಗಳು, ಚಿನ್ನದಿಂದ ಭಿನ್ನವಾಗಿಲ್ಲದಂತೆ, ನಿರ್ಗುಣ ಬ್ರಹ್ಮದಲ್ಲಿ ಕಲ್ಪಿತನಾದ ಸಕಲ ಭೂತಗಳೂ ಆ ಬ್ರಹ್ಮದಿಂದ ಭಿನ್ನವಾಗಿಲ್ಲ. ಎಲ್ಲವೂ ಅಧಿಷ್ಠಾನವಾದ ಬ್ರಹ್ಮವೇ ಆಗಿರುವುದು. ಚಿನ್ನದಿಂದ ಆದ ಕುಂಡಲ ಉಂಗುರಗಳು ಚಿನ್ನಕ್ಕಿಂತ ಕೇವಲ ಕಲ್ಪಿತ 'ನಾಮ' "ರೂಪ"ಗಳಲ್ಲಿ ಭೇದವೇ ಹೊರತು, ಅವೆಲ್ಲಕ್ಕೂ ಚಿನ್ನವೇ ಆಧಾರ. ಇದನ್ನೇ ಶ್ರುತಿಯು "ಸರ್ವಂ ಹ್ಯೇತದ್ಬ್ರಹ್ಮ". ಈ ಸರ್ವ ಜಗತ್ತೂ ಬ್ರಹ್ಮಸ್ವರೂಪವೇ ಎಂದಿದೆ. ತತ್ವವೇತ್ತನು ಕೇವಲ ನಾಮರೂಪಗಳಿಂದ ಮಾತ್ರ ಭೇದವೆಂದು ತಿಳಿಯುವನು. ಈ ಅಂಶವನ್ನು ಗೀತೆಯಲ್ಲೂ "ಶುನಿಚೈವಶ್ವಪಾಕೇಚ ಪಂಡಿತಾಸ್ಸಮದರ್ಶಿನಃ". "ನಿರ್ದೋಷಂಹಿ ಸಮಂ ಬ್ರಹ್ಮ" ಎಂದು ಹೇಳಿದೆ.

'ಸಮ' ಎಂದರೆ ಒಂದೇ ಆಗಿ ಯಾವ ವಿಕಾರವೂ ಇಲ್ಲದೆ ಇರುವ ಬ್ರಹ್ಮವನ್ನು, ಕಾಣುವ ಸ್ವಭಾವವು ಯಾವುದೋ, ಅದನ್ನುಳ್ಳ ಪಂಡಿತರು, ಸಮದರ್ಶಿಗಳು. ಅವರು ಪ್ರಪಂಚದ ಎಲ್ಲ ವಸ್ತುಗಳಲ್ಲೂ ಬ್ರಹ್ಮವೊಂದನ್ನೇ ನೋಡುತ್ತಾರೆ ಎಂದಿದೆ.

ಪ್ರಪಂಚವು ಅಸ್ತಿ, ಭಾತಿ, ಪ್ರಿಯ, ನಾಮ, ರೂಪಗಳೆಂಬ ಐದು ಅಂಶಗಳಿಂದ ವಿದಿತವಾಗುತ್ತಿದೆ. ಅಸ್ತಿ, ಭಾತಿ, ಪ್ರಿಯ ಎಂಬ ಅಂಶಗಳು ಚೇತನವಾದ ಬ್ರಹ್ಮಕ್ಕೆ ಸೇರಿದುವು. ನಾಮರೂಪಗಳು ಜಡವಾದ ತಮಃ ಪ್ರಧಾನ ಪ್ರಕೃತಿಗೆ ಸೇರಿದುವು.

ಪರಮೇಶ್ವರನು ತನ್ನ ಇಚ್ಛಾಮಾತ್ರದಿಂದ ತಮಃಪ್ರಧಾನ ಪ್ರಕೃತಿಯನ್ನು ಪರಿಣಾಮಿ ಉಪಾದಾನ ಕಾರಣವನ್ನಾಗಿ ಮಾಡಿಕೊಂಡು, ತಾನು ನಿಮಿತ್ತ ಕಾರಣನಾಗಿ, ನಿರ್ಗುಣ ಬ್ರಹ್ಮದ ಸದ್ರೂಪದ ಆಧಾರದ ಮೇಲೆ, ಪ್ರಪಂಚವನ್ನು ಕಲ್ಪಿಸಿದನೆಂದು ಹಿಂದೆ ಹೇಳಿತಷ್ಟೆ.

ಪ್ರಪಂಚದ ಸೃಷ್ಟಿಗೆ ಆರಂಭದಲ್ಲಿ ಮೊದಲು ಓಂಕಾರನಾದ ಆವಿರ್ಭವಿಸಿತು. ನಿರ್ಗುಣಬ್ರಹ್ಮಕ್ಕೂ ಸಕ್ರಿಯ ಅವ್ಯಕ್ತ ಶಕ್ತಿಗೂ, ನಿರ್ಗುಣಬ್ರಹ್ಮದ ಬಹುವಾಗಬೇಕೆಂಬ ಇಚ್ಛಾಮಾತ್ರ ಸಂಯೋಗದ ಪರಿಣಾಮವಾಗಿ ಈ ನಾದವು ಉತ್ಪನ್ನವಾಯಿತು. ಈ ನಾದದಿಂದ 'ಮಹಾಬಿಂದು' ಉತ್ಪನ್ನವಾಯಿತು. ಈ 'ನಾದ' 'ಮಹಾ ಬಿಂದುಗಳು' ಕ್ರಿಯಾ ಶಕ್ತಿರೂಪಗಳು. ಇವುಗಳು 'ಕಾಮಕಲಾ' ಎನಿಸಿ 3 ಶಕ್ತಿಗಳಾಗಿ ವಿಭಾಗವಾದುವು. ಹೀಗಾಗಿ ಆ ಓಂಕಾರ ನಾದವೇ 'ಅ'ಕಾರ, 'ಉ'ಕಾರ, 'ಮ'ಕಾರ ಬೀಜಾಕ್ಷರ ಶಕ್ತಿರೂಪಗಳಾದುವು. ಅವುಗಳಲ್ಲಿ ಈಶ್ವರನು ಪ್ರತಿಬಿಂಬಿಸಿ ಕ್ರಮವಾಗಿ ಪ್ರಪಂಚದ ಸೃಷ್ಟಿ, ಸ್ಥಿತಿ, ಲಯ, ತತ್ವಾತ್ಮಕನಾದನು. ಅಲ್ಲದೆ 'ಅ'ಕಾರ, 'ಉ'ಕಾರ, 'ಮ'ಕಾರಗಳಲ್ಲಿ ಅಧಿಷ್ಠಾತೃ ರೂಪದಲ್ಲಿ ಪುಂ ಸ್ತ್ರೀ ರೂಪದಿಂದ ಕೂಡಿ ಪ್ರಾದುರ್ಭವಿಸಿದನು.

'ಅ'ಕಾರದಲ್ಲಿ ಬ್ರಹ್ಮ ಸರಸ್ವತೀ ರೂಪದಿಂದ ಪ್ರಪಂಚದ ಸೃಷ್ಟಿ ಕಾರ್ಯಗಳಲ್ಲಿಯೂ, 'ಉ'ಕಾರದಲ್ಲಿ ವಿಷ್ಣು, ಲಕ್ಷ್ಮೀ ರೂಪದಿಂದ ಸ್ಥಿತಿಕಾರ್ಯಗಳಲ್ಲಿಯೂ, 'ಮ'ಕಾರದಲ್ಲಿ ಶಿವ ಪಾರ್ವತೀ ರೂಪದಿಂದ ಲಯ ಮತ್ತು ಮೋಕ್ಷ ಕಾರ್ಯಗಳಲ್ಲೂ ಪ್ರವರ್ತಿಸಹತ್ತಿದನು. ಮಾಯೋಪಾಧಿಕ ಈಶ್ವರನ ಸದಂಶದ ಕಲ್ಪಿತ ಅಧಿಷ್ಠಾನದಿಂದಲೂ, ತಮಃಪ್ರಧಾನ ಪ್ರಕೃತಿಯ ಪರಿಣಾಮಿ ಉಪಾದಾನದಿಂದಲೂ, ಮೊದಲು ಸೂಕ್ಷ್ಮ ಆಕಾಶ ಹುಟ್ಟಿತು. ಅದರಿಂದ ಸೂಕ್ಷ್ಮ ವಾಯು. ಅದರಿಂದ ಸೂಕ್ಷ್ಮ ತೇಜಸ್ಸು. ಅದರಿಂದ ಸೂಕ್ಷ್ಮ ಜಲ. ಅದರಿಂದ ಸೂಕ್ಷ್ಮ ಪೃಥಿವಿ. ಹೀಗೆ ಅಪಂಚೀಕೃತ ಸೂಕ್ಷ್ಮ ಪಂಚಭೂತಗಳುಂಟಾದುವು. ಇವುಗಳಿಗೆ ತನ್ಮಾತ್ರೆಗಳೆಂದೂ ಹೆಸರು. ಈ ಸೂಕ್ಷ್ಮ ಪಂಚಭೂತಗಳೇ ಪಂಚೀಕರಣವಾಗಿ ಸ್ಥೂಲ ಪಂಚಭೂತಗಳೂ ಆದುವು.

ಪಂಚೀಕರಣವಾದುದು ಹೇಗೆಂದರೆ :—

ಪಂಚ ಸೂಕ್ಷ್ಮಭೂತಗಳಲ್ಲಿ ಪ್ರತಿಯೊಂದನ್ನೂ ಸರಿಯಾಗಿ ಎರಡು ಭಾಗ ಮಾಡಬೇಕು. ಆ ಎರಡು ಭಾಗ ಗಳಲ್ಲಿ ಒಂದನ್ನು ತೆಗೆದುಕೊಂಡು ಅದರಲ್ಲಿ ಮತ್ತೆ ನಾಲ್ಕು ಸರಿಯಾದ ಭಾಗ ಮಾಡಬೇಕು. ಆ ನಾಲ್ಕು ಭಾಗ ಗಳಲ್ಲಿ ಒಂದೊಂದನ್ನು ಉಳಿದ ನಾಲ್ಕು ಭೂತಗಳಲ್ಲಿ ಒಂದೊಂದಕ್ಕೆ ಸೇರಿಸಬೇಕು. ಇದೇ ಪಂಚೀಕರಣ.

ಉದಾಹರಣೆಗೆ :—ಆಕಾಶ $\frac{1}{2}$+ವಾಯು $\frac{1}{8}$+ತೇಜಸ್ಸು $\frac{1}{8}$+ಅಪ್ಪು $\frac{1}{8}$+ಪೃಥ್ವಿ $\frac{1}{8}$=ಪಂಚೀಕೃತ ಸ್ಥೂಲ ಆಕಾಶ. ಹೀಗೆಯೇ ಉಳಿದ ಪಂಚೀಕೃತ ಸ್ಥೂಲಭೂತಗಳು ಉತ್ಪತ್ತಿಯಾದುವು. (ಸ್ಥೂಲವೆಂದರೆ ಇಂದ್ರಿಯ ಗೋಚರವೆಂದರ್ಥ)

ಈ ಪಂಚೀಕರಣದಿಂದ ಪಂಚ ಮಹಾ ಭೂತಗಳು ಮತ್ತು ಅವುಗಳ ಇಪ್ಪತ್ತೈದು ತತ್ವಗಳುಂಟಾದುವು. ಆ ತತ್ವಗಳ್ಯಾವುವೆಂದರೆ :—

ಆಕಾಶ ತತ್ವ :–ಕಾಮ, ಕ್ರೋಧ, ಶೋಕ, ಮೋಹ, ಭಯ.
ವಾಯು ತತ್ವ :–ಚಲನ, ವಲನ, ಧಾವನ, ಪ್ರಸಾರಣ, ಆಕುಂಚನ.
ತೇಜೋ ತತ್ವ :–ಕ್ಷುಧಾ, ತೃಷಾ, ಆಲಸ್ಯ, ನಿದ್ರಾ, ಕಾಂತಿ.
ಜಲ ತತ್ವ :–ಶುಕ್ಲ, ಶೋಣಿತ, ಶ್ಲೇಷ್ಮ ಮೂತ್ರ, ಸ್ವೇದ.
ಪೃಥಿವಿ ತತ್ವ :–ಅಸ್ಥಿ, ಮಾಂಸ, ನಾಡೀ, ತ್ವಕ್, ರೋಮ.

ಸೂಕ್ಷ್ಮ ಪಂಚಭೂತಗಳ ಸತ್ವಗುಣ ಭಾಗಗಳ ಪ್ರತ್ಯೇಕಗಳಿಂದ, ಕ್ರಮವಾಗಿ ಶ್ರೋತ್ರ, ತ್ವಕ್, ಚಕ್ಷುಸ್ಸು, ರಸನ, ಘ್ರಾಣಗಳೆಂಬ ಪಂಚಜ್ಞಾನೇಂದ್ರಿಯಗಳಾದುವು. ಅದೇ ಸೂಕ್ಷ್ಮ ಪಂಚಭೂತಗಳ ರಜೋಗುಣ ಭಾಗಗಳ ಪ್ರತ್ಯೇಕಗಳಿಂದ ಕ್ರಮವಾಗಿ, ವಾಕ್, ಪಾಣಿ,ಪಾದ, ಉಪಸ್ಥ, ಪಾಯುಗಳೆಂಬ ಪಂಚಕರ್ಮೇಂದ್ರಿಯಗಳಾದುವು. ಸತ್ವಗುಣೋಪೇತವಾಗಿ ಒಟ್ಟುಗೂಡಿದ ಈ ಸೂಕ್ಷ್ಮ ಪಂಚಭೂತಗಳಿಂದ, ಅಂತಃಕರಣ ಉಂಟಾಯಿತು. ಈ ಅಂತಃಕರಣವೇ, ಸಂಶಯ, ನಿಶ್ಚಯ, ಗರ್ವ, ಸ್ಮರಣ, ರೂಪಪರಿಣಾಮ ಎಂಬ ನಾಲ್ಕು ಭೇದಗಳಿಂದ ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ ಎನಿಸಿಕೊಂಡಿತು. ರಜೋಗುಣೋಪೇತವಾಗಿ ಒಟ್ಟುಗೂಡಿದ ಈ ಸೂಕ್ಷ್ಮ ಪಂಚ ಭೂತಗಳಿಂದ ಪ್ರಾಣ, ಅಪಾನ, ಸಮಾನ, ಉದಾನ ಮತ್ತು ವ್ಯಾನಗಳೆಂಬ ಪಂಚಪ್ರಾಣಗಳಾದುವು.

ಹೀಗೆ ಅಪಂಚೀಕೃತ ಸೂಕ್ಷ್ಮ ಪಂಚಭೂತಗಳಿಂದ ಸ್ಥೂಲ ಪಂಚೀಕೃತ ಪಂಚ ಮಹಾ ಭೂತಗಳಾದುವು. ಅವುಗಳಿಂದ ಇಪ್ಪತ್ತೈದು ತತ್ವಗಳಾದುವು, ಅವುಗಳಿಂದ ಭೂಮಿಯೇ ಮೊದಲಾದ ಹದಿನಾಲ್ಕು ಲೋಕಗಳುಳ್ಳ ಬ್ರಹ್ಮಾಂಡವೂ, ಅಂಡಜ, ಸ್ವೇದಜ, ಉದ್ಭಿಜ, ಜರಾಯುಜ ಎಂಬ ಚತುರ್ವಿಧ ಸ್ಥೂಲ ಶರೀರಗಳೂ ಉಂಟಾದುವು.

ಈಶ್ವರನು ಸ್ಥೂಲ, ಸೂಕ್ಷ್ಮ, ಪಂಚ ಮಹಾ ಭೂತಗಳನ್ನೂ ಸೂಕ್ಷ್ಮ ಶರೀರವನ್ನೂ (ಲಿಂಗ ಶರೀರವನ್ನೂ) ಅಂದರೆ ಪಂಚ ಕರ್ಮೇಂದ್ರಿಯಗಳು, ಪಂಚ ಜ್ಞಾನೇಂದ್ರಿಯಗಳು, ಪಂಚಪ್ರಾಣಗಳು, ಅಂತಃಕರಣ, ಬುದ್ಧಿ ಇವುಗಳನ್ನೂ, ಹಿರಣ್ಯಗರ್ಭ, ವಿರಾಟ್‌ಗಳ ಸ್ಥೂಲ ಶರೀರವನ್ನೂ, ಸಾಕ್ಷಾತ್ತಾಗಿ ತಾನೇ ಮಾಡಿ, ಇನ್ನುಳಿದ ಪ್ರಪಂಚವನ್ನೆಲ್ಲಾ ಹಿರಣ್ಯಗರ್ಭನ ಮೂಲಕ ಉಂಟುಮಾಡಿದನು. ಪಂಚ ಅಂತಃಕರಣಗಳು, ಪಂಚಪ್ರಾಣಗಳು, ದಶೇಂದ್ರಿಯಗಳು, ಪಂಚತನ್ಮಾತ್ರೆಗಳು, ಇವುಗಳ ಒಟ್ಟಿನ ಸೂಕ್ಷ್ಮ ಶರೀರದ ಸಮಷ್ಟಿ ಅಭಿಮಾನಿಯಾದ ಈಶ್ವರನೇ ಹಿರಣ್ಯಗರ್ಭ. ಸಮಷ್ಟಿ ಸ್ಥೂಲ ಶರೀರಾಭಿಮಾನಿಯಾದ ಈಶ್ವರನೇ ವಿರಾಟ್ಪುರುಷನು.

ಈಶ್ವರನು ಸಮಸ್ತ ದೇವತೆಗಳಾಗಿ ತಾನೇ, ಸತ್ವಗುಣಪ್ರಧಾನವಾದ ತನ್ನ ಮಾಯೆಯಿಂದ ಪ್ರಕಟವಾದನು. ಜೀವನ, ಸ್ಥೂಲ, ಸೂಕ್ಷ್ಮ ಶರೀರಗಳಿಗೆ ಉಪಾದಾನವಾದ ಅವಿದ್ಯೆಯು ಕಾರಣ ಶರೀರವೆನಿಸಿತು.

ಪ್ರಪಂಚ ಸೃಷ್ಟಿಯನ್ನು ಹೇಳುವ ಉದ್ದಿಶ್ಯವು, "ಬ್ರಹ್ಮಸ್ವರೂಪ ಒಂದೇ ಸತ್ಯವೆಂದೂ, ಸೃಷ್ಟಿಯೆಲ್ಲಾ ಮಿಥ್ಯಾ, ಎಂದೂ" ತೋರಿಸುವುದೇ ಆಗಿರುತ್ತೆ. ಪ್ರಪಂಚ ಸೃಷ್ಟಿಯನ್ನು ಒಂದೊಂದು ಉಪನಿಷತ್ತಿನಲ್ಲಿ ಒಂದೊಂದು ವಿಧದಲ್ಲಿ ಹೇಳಿದೆ. ಉಪನಿಷತ್ತುಗಳಿಗೆ ಮಿಥ್ಯಾ ಜಗತ್ತಿನ ಸೃಷ್ಟಿಯಲ್ಲಿ ಅಷ್ಟು ಪ್ರಾಮುಖ್ಯವಿಲ್ಲ. ಬ್ರಹ್ಮವನ್ನು ತಿಳಿಸುವುದೇ ಅದರ ಮುಖ್ಯ ಧ್ಯೇಯ. ಏಕೆಂದರೆ 'ಬ್ರಹ್ಮವೇ ತಾನೆಂಬ' ಐಕ್ಯಜ್ಞಾನದಿಂದಲೇ ಮೋಕ್ಷವು.

ಇನ್ನು ಪ್ರಲಯವೆಂದರೇನು ಎಂಬುದನ್ನು ವಿವರಿಸೋಣ.

ಪ್ರಲಯವು, ನಿತ್ಯ, ನೈಮಿತ್ತಿಕ, ಪ್ರಾಕೃತ, ಆತ್ಯಂತಿಕ ಎಂದು ನಾಲ್ಕು ವಿಧಗಳಾಗಿರುತ್ತದೆ.

ಮನುಷ್ಯನಿಗೆ ಸಂಭವಿಸುವ ಪ್ರತಿದಿನದ ಜಾಗ್ರತ್‌ಸ್ವಪ್ನ, ಸುಷುಪ್ತಿ ಅವಸ್ಥೆಗಳಲ್ಲಿ, ಸುಷುಪ್ತಿ ಅವಸ್ಥೆಯೇ ನಿತ್ಯಪ್ರಲಯ. ಕಾರ್ಯ ಬ್ರಹ್ಮನ (ಸಹಸ್ರಯುಗ ಪರ್ಯಂತವಾದ) ದಿವಸಾವಸಾನವೇ ನೈಮಿತ್ತಿಕ ಪ್ರಲಯ. ಆಕಾರ್ಯ ಬ್ರಹ್ಮನ ವಿನಾಶವು ಪ್ರಾಕೃತ ಪ್ರಲಯ, ಮೋಕ್ಷವು ಆತ್ಯಂತಿಕ ಪ್ರಲಯ.

ಮೇಲೆ ಹೇಳಿದ ಪ್ರಪಂಚದ ಉತ್ಪತ್ತಿ ಪ್ರಲಯಗಳು ಇಂದ್ರ ಜಾಲಿಕನ ಮಾಯಾ ಪ್ರಪಂಚದಂತೆಯೂ, ಸ್ವಪ್ನ ಪ್ರಪಂಚದಂತೆಯೂ ಅಸಂಭವವಾದುದು. ಮಿಥ್ಯಾಪದಾರ್ಥವಾದ ಪ್ರಪಂಚಕ್ಕೆ, ಉತ್ಪತ್ತಿ ಪ್ರಳಯ ಗಳನ್ನು ಹೇಳುವಂತಿಲ್ಲ.

ಪ್ರಪಂಚ 'ಮಿಥ್ಯಾ' ಎಂದರೇನೆಂಬುದನ್ನು ಹಿಂದೆಯೇ ತಿಳಿಸಿದೆ. ಪ್ರಪಂಚವು ವ್ಯವಹಾರ ದೃಷ್ಟಿಯಲ್ಲಿ ತೋರುವುದರಿಂದ ಅಸತ್ತಲ್ಲ. ಆತ್ಮಸಾಕ್ಷಾತ್ಕಾರವಾದೊಡನೆ ಇಲ್ಲದಂತಾಗುವುದರಿಂದ 'ಸತ್' ಎನ್ನಲೂ ಆಗುವುದಿಲ್ಲ. ಇದು ಶಶವಿಷಾಣದಂತೆ ಕೇವಲ 'ಅಸತ್ತೂ' ಅಲ್ಲ. ಇದನ್ನು ಕೇವಲ "ವ್ಯಾವಹಾರಿಕಸತ್" ಎನ್ನಬೇಕು. ಬ್ರಹ್ಮವೊಂದೇ ಪಾರಮಾರ್ಥಿಕಸತ್.

ಕಲ್ಪಿತವಾದ ಸರ್ಪಕ್ಕೆ ಹಗ್ಗವು ಅಧಿಷ್ಠಾನವಾಗಿದ್ದು ಕಲ್ಪಿತಸರ್ಪದ, ಉತ್ಪತ್ತಿ, ಸ್ಥಿತಿ, ನಾಶ, ಎಲ್ಲವೂ ಹಗ್ಗದಲ್ಲೇ ಸಂಭವಿಸುವಂತೆ, ತಮಃ ಪ್ರಧಾನ ಭೂತ ಕಾರ್ಯರೂಪವಾದ ಪ್ರಪಂಚವೆಲ್ಲಾ ಬ್ರಹ್ಮದಲ್ಲೇ ಕಲ್ಪಿತ ವಾಗಿ ಹುಟ್ಟಿ, ಬ್ರಹ್ಮದಲ್ಲೇ ಕಲ್ಪಿತವಾಗಿ ಕಾಣಿಸಿಕೊಂಡು, ಬ್ರಹ್ಮದಲ್ಲೇ ಲಯಿಸುವುದು. ಇದರಿಂದಲೇ ಗೀತೆ ಯಲ್ಲಿ ಪರಬ್ರಹ್ಮನಾದ ಶ್ರೀಕೃಷ್ಣನು.

"ಅಹಮಾದಿಶ್ಚ ಮಧ್ಯಂಚ ಭೂತಾನಾಮಂತ ಏವಚ" ಎಂದು ಬ್ರಹ್ಮನಿಗೆ ಸರ್ವ ಭೂತೋತ್ಪತ್ತಿ ಲಯಾ ಧಾರ ಕಲ್ಪನೆಯನ್ನು ಹೇಳಿದ್ದಾನೆ.

ಮಣ್ಣಿನಲ್ಲಿ ಹುಟ್ಟಿ, ಮಣ್ಣಿನೊಡನೆ ಇದ್ದು ಮಣ್ಣಿನಲ್ಲೇ ಲಯವಾಗುವ ಮಡಕೆಯು ಮಣ್ಣನ್ನು ಬಿಟ್ಟು ಹೇಗೆ ಬೇರೆ ಇಲ್ಲವೋ, ಹಾಗೆಯೇ ಭೂತವರ್ಗವೂ ತನ್ನ ಉತ್ಪತ್ತಿ ಸ್ಥಿತಿಲಯಗಳಿಗೆ ಆಧಾರವಾದ ಬ್ರಹ್ಮಕ್ಕೆ ಬೇರೆಯಾಗಿಲ್ಲ. ಕೇವಲ ನಾಮರೂಪ ತೋರಿಕೆ ಮಾತ್ರ.

ಇದುವರೆಗೆ ಬ್ರಹ್ಮ, ಅವ್ಯಕ್ತ. ಮತ್ತು ಪ್ರಪಂಚ ವಿಷಯಗಳನ್ನು ಹೇಳಿದ್ದಾಯಿತು. ಇನ್ನು ಜೀವನ ವಿಚಾರವನ್ನು ತೆಗೆದುಕೊಳ್ಳೋಣ. ಯಾವಾಗ ಅಂತಃಕರಣವು ಚೇತನಕ್ಕೆ ವಿಶೇಷಣವಾಗುವುದೋ, ಆಗ ಆ ಚೇತನಕ್ಕೆ ಜೀವನೆಂದು ಹೆಸರು. (ಅಂತಃಕರಣ ವಿಶಿಷ್ಟಚೇತನ) ಯಾವಾಗ ಅಂತಃಕರಣವು ಚೇತನಕ್ಕೆ ಉಪಾಧಿ ಯಾಗುವುದೋ ಆಗ ಅದೇ ಚೇತನವನ್ನು "ಸಾಕ್ಷಿ" ಎನ್ನುತ್ತಾರೆ. (ಅಂತಃಕರಣ ಉಪಹಿತ ಚೇತನ)

ಜೀವನು ಹೇಗೆ ಸೃಷ್ಟನಾದನೆಂಬುದನ್ನು ಹಿಂದೆಯೇ ತಿಳಿಸಿದೆ. ಈ ಜೀವನಿಗೆ, ಸ್ಥೂಲ, ಸೂಕ್ಷ್ಮ, ಕಾರಣ ಗಳೆಂಬ ಮೂರು ಶರೀರಗಳಿರುವುವು.

ಸ್ಥೂಲ ಶರೀರವು ಹಿಂದೆ ಹೇಳಿದ ಪಂಚೀಕೃತ ಪಂಚಮಹಾಭೂತಗಳ ಇಪ್ಪತ್ತೈದು ತತ್ವಗಳಿಂದ ಆಗಿದೆ. ಇದು ನಾವು ಮಾಡಿದ ಪುಣ್ಯ ಪಾಪಗಳ ಫಲ ಭೋಗಸ್ಥಾನವು. ಇದು ಇಂದ್ರಿಯಗೋಚರವಾದುದು. ಇದು ಸಪ್ತಧಾತು ಅಂದರೆ ರೇತಸ್ಸು, ರಕ್ತ, ಮಾಂಸ, ಮಜ್ಜ, ಮೇದಸ್ಸು, ಅಸ್ಥಿ, ಚರ್ಮ, ಮಯವಾಗಿಯೂ, ಷಡ್ಭಾವ ವಿಕಾರದಿಂದ ಅಂದರೆ ಜಾಯತೆ, ವರ್ಧತೆ, ಅಸ್ತಿ, ವಿಪರಿಣಮತೆ, ಅಪಕ್ಷೀಯತೆ, ವಿನಶ್ಯತಿ ಎಂಬ ಆರು ವಿಕಾರಗಳಿಂದ ಕೂಡಿದ್ದಾಗಿಯೂ ದಶ ದೋಷಗಳನ್ನು, ಅಂದರೆ, ಅಶುದ್ಧ, ಅಶೌಚ, ದುರ್ಗಂಧ, ಅಸ್ಥಿರ, ಸ್ಥೂಲ, ಖಂಡ, ದಗ್ಧ, ಶಿಥಿಲ, ನಾನಾರೋಗ ಗ್ರಸ್ತವಾಗಿಅಧ್ರುವ, ಆಮಿಷಗಳನ್ನು ಹೊಂದಿದ್ದಾಗಿಯೂ ಇದೆ. ಇದು ಜಡವಾದುದು.

ಸೂಕ್ಷ್ಮಶರೀರವು ಅಪಂಚೀಕೃತ ಭೂತಗಳ ಕಾರ್ಯವಾಗಿದೆ. ಇದು ಸಪ್ತದಶ (17) (ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಪಂಚಪ್ರಾಣ, ಮನಸ್ಸು, ಬುದ್ಧಿ) ತತ್ವಗಳಿಂದ ಕೂಡಿದೆ. ಇದು ಪ್ರಾಣಿಗಳ ಪಾಪ, ಪುಣ್ಯ ಫಲವಾದ ಭೋಗಾನುಭವಕ್ಕೆ ಸಾಧಕವಾದುದು, ಇದು ಇಂದ್ರಿಯಕ್ಕೆ ಅಗೋಚರ. ಇದು ಅನಾತ್ಮ ರೂಪವಾದುದು. ಇದು ಮೋಕ್ಷಪರ್ಯಂತ ಇರುತ್ತದೆ. ಲಿಂಗಶರೀರದಲ್ಲಿ ಯಾವನು ತಾದಾತ್ಮ್ಯಧ್ಯಾಸ ಮಾಡುವನೋ, ಅವನು, ಬುದ್ಧಿ, ರಾಗ, ದ್ವೇಷ, ಪ್ರಯತ್ನ, ಸಂಸಾರ, ಧರ್ಮ, ಅಧರ್ಮ, ಸುಖ, ದುಃಖ ಎಂಬ ನವಗುಣಗಳಿಂದ ಗ್ರಸಿತನಾಗಿ ಸುಖ ದುಃಖಗಳನ್ನು ಅನುಭವಿಸುವನು. ಒಟ್ಟಿನಲ್ಲಿ ಸ್ಥೂಲ ಶರೀರವು

ಪ್ರಾಣಿಗಳ ಪಾಪಪುಣ್ಯಗಳ ಫಲಗಳ ಭೋಗಸ್ಥಾನವಾಗಿಯೂ, ಸೂಕ್ಷ್ಮ ಶರೀರವು (ಇಂದ್ರಿಯಾದಿಗಳು) ಭೋಗ ಸಾಧನವಾಗಿಯೂ, ಆಭಾಸಯುಕ್ತ ಬುದ್ಧಿಯು ಭೋಕ್ತೃವಾಗಿಯೂ ವಿಷಯಗಳು ಬೋಧ್ಯವಾಗಿಯೂ, ಇರುವುವು.

ಈ ನಾಲ್ಕನ್ನೂ ಆತ್ಮನು ಪ್ರಕಾಶಪಡಿಸುತ್ತಾ ಸಾಕ್ಷಿಯಾಗಿರುವನು.

ಮೇಲೆ ಹೇಳಿದ ಸ್ಥೂಲ, ಸೂಕ್ಷ್ಮ ಶರೀರಗಳೆರಡಕ್ಕೂ ಅವಿದ್ಯೆಯು (ಮಲಿನರಜೋಗುಣಪ್ರಧಾನ ಅವ್ಯಕ್ತವು) ಉಪಾದಾನ ಕಾರಣವು. ಇದೇ ಕಾರಣ ಶರೀರವು. ಇದು ಆವರಣ ವಿಕ್ಷೇಪವೆಂಬ ತನ್ನ ಎರಡು ಶಕ್ತಿಗಳುಳ್ಳದ್ದಾಗಿದೆ. ಇದು ಪ್ರತಿ ಅಂತಃಕರಣದಲ್ಲಿಯೂ ಪರಿಚ್ಛಿನ್ನವಾಗಿ, "ಮೂಲಾಜ್ಞಾನ," "ಅಧ್ಯಾಸಕಾರ್ಯ" ಎಂದು ತೋರುತ್ತಿರುತ್ತದೆ. ಈ ಮೂಲಾಜ್ಞಾನವು ಸುಷುಪ್ತಿಯಲ್ಲಿ ಹೆಚ್ಚಾಗಿ ಪ್ರಕಟವಾಗುವುದು.

ಮೇಲೆ ಹೇಳಿದ, ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಮೂರು ಶರೀರಗಳಲ್ಲಿ ಇರುವುದೇ ಜೀವನ ಪಂಚ ಕೋಶಗಳು.

ಪಂಚಕೋಶಗಳು

ಇವುಗಳು 1. ಅನ್ನಮಯಕೋಶ, 2. ಪ್ರಾಣಮಯಕೋಶ, 3. ಮನೋಮಯಕೋಶ, 4. ವಿಜ್ಞಾನ ಮಯಕೋಶ, ಮತ್ತು 5. ಆನಂದಮಯ ಕೋಶಗಳು.

ಈ ಕೋಶಗಳೆಲ್ಲದರ ಒಳಗೆ ಸಾಕ್ಷಿ ಚೈತನ್ಯವು ಜೀವರೂಪದಿಂದಿದೆ. ಈ ಪಂಚಕೋಶಗಳೂ ಆತ್ಮನಲ್ಲ.

ತೈತ್ತಿರಿಯ ಉಪನಿಷತ್ತಿನಲ್ಲಿ :—

> ತಸ್ಮಾದ್ವಾ ಏತಸ್ಮಾದನ್ನರಸಮಯಾತ್ । ಅನ್ಯೋಽಂತರ ಆತ್ಮಾ ಪ್ರಾಣಮಯಃ।....
> ಅನ್ಯೋಽಂತರ ಆತ್ಮಾ ಆನಂದಮಯಃ । ಬ್ರಹ್ಮಪುಚ್ಛಂಪ್ರತಿಷ್ಠಾ ।

ಎಂಬಲ್ಲಿ ಪಂಚಕೋಶಗಳನ್ನು ಪಕ್ಷಿರೂಪವಾಗಿ ವರ್ಣಿಸಿ, ಕಡೆಗೆ ಪಂಚಕೋಶಗಳಿಂದ ಪರವಾದ ಆತ್ಮನನ್ನು ತೋರಿಸಿದೆ.

ಪಂಚಕೋಶಗಳಲ್ಲಿ, ಅನ್ನಮಯ ಕೋಶವು ಸ್ಥೂಲ ಶರೀರವಾಗಿದೆ. ಪ್ರಾಣಮಯ ಕೋಶ (ಪಂಚ ಕರ್ಮೇಂದ್ರಿಯ ಸಹಿತ ಪಂಚಪ್ರಾಣ) ಮನೋಮಯ ಕೋಶ (ಪಂಚ ಜ್ಞಾನೇಂದ್ರಿಯದಿಂದ ಕೂಡಿದ ಮನಸ್ಸು) ವಿಜ್ಞಾನಮಯಕೋಶ (ಪಂಚ ಜ್ಞಾನೇಂದ್ರಿಯದಿಂದ ಕೂಡಿದ ಬುದ್ಧಿ) ಈ ಮೂರು ಕೋಶಗಳು, ಸೂಕ್ಷ್ಮ ಶರೀರ ದಲ್ಲಿರುವುವು. ಆನಂದಮಯಕೋಶವು ಕಾರಣ ಶರೀರವಾಗಿದೆ (ಸುಷುಪ್ತಿಯಲ್ಲಿ ಅವ್ಯಕ್ತದ ಆವರಣ ಶಕ್ತಿಯಿಂದ ಆವರಿಸಲ್ಪಟ್ಟ ಪ್ರತಿಬಿಂಬ ರೂಪವಾದ ಆನಂದಾಭಿಮಾನದ ಹೆಸರು ಆನಂದಮಯಕೋಶ). ತಿಳಿದುಕೊಳ್ಳುವವನು ತಿಳಿದುಕೊಳ್ಳುವ ವಸ್ತುವಿಗಿಂತ ಬೇರೆಯಾಗಿರಬೇಕಾಗಿ ಪಂಚಕೋಶಗಳನ್ನೂ ಆತ್ಮನು ತಿಳಿದುಕೊಳ್ಳುವನಾದ್ದರಿಂದ, ಆತ್ಮನು ಪಂಚಕೋಶಗಳಿಂದ ಬೇರೆ ಎಂದು ತಿಳಿಯಬೇಕು.

ಆತ್ಮನೆಂದರೆ ನಮ್ಮ ದೇಹದಲ್ಲಿರುವ ಸಾಕ್ಷಿ ಚೈತನ್ಯ ಜೀವನೆಂದೇ ಅರ್ಥವು.

ಈ ಅರ್ಥವನ್ನೇ, "ಯಚ್ಚಾಪ್ನೋತಿ ಯದಾದತ್ತೇ
ಯಚ್ಚಾತ್ತಿ ವಿಷಯಾಣಿಹ
ಯಚ್ಚಾಸ್ಯ ಸಂತತೋ ಭಾವಃ
ತಸ್ಮಾದಾತ್ಮೇತಿ ಗೀಯತೇ ||" ಎಂಬಲ್ಲಿ,

ಯಾರು ಎಲ್ಲಾ ಕಡೆಗಳಲ್ಲೂ ವ್ಯಾಪಿಸಿ ಸರ್ವ ವಿಷಯವನ್ನೂ ಗ್ರಹಿಸುವನೋ ಮತ್ತು ಯಾರು ಸರ್ವ ವಿಷಯುಗಳನ್ನೂ ಅನುಭವಿಸುವನೋ ಅಲ್ಲದೆ ಯಾರು ಶಾಶ್ವತನೋ, ಅವನೇ "ಆತ್ಮ" ಎಂದು ವಿವರಿಸಿದೆ.

ಈ ಆತ್ಮನಿಗೆ ಅಂದರೆ ಜೀವನಿಗೆ, ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳಿರುವುವು.

ಜಾಗ್ರದವಸ್ಥೆ :– ಇಂದ್ರಿಯ ಜನ್ಯವೃತ್ತಿಗಳಿಂದ ಯಾವಾಗ ಜೀವನು ವಸ್ತುವನ್ನು ತಿಳಿಯುತ್ತಾನೋ, ಅಂದರೆ ಯಾವಾಗ ಇಂದ್ರಿಯಗಳಿಂದ ವಿಷಯಗಳನ್ನು ಸಂಗ್ರಹಿಸುತ್ತಾ, ಸ್ಥೂಲ ಶರೀರದ ಭೋಗಗಳನ್ನು ಅನುಭವಿಸುವನೋ, ಆಗ ಅವನಿರುವ ಅವಸ್ಥೆಗೆ 'ಜಾಗ್ರತ್' ಎನ್ನುವರು. ಆಗ ಜೀವನು ಮೂರ್ತ ಪದಾರ್ಥಭೋಕ್ತನಾದ 'ವಿಶ್ವ'ನೆನಿಸುವನು, ಏಕೆಂದರೆ ಆಗ ಜೀವನು ಸಮಸ್ತ ದೇಹೇಂದ್ರಿಯಾದಿಗಳಲ್ಲಿ ಪ್ರವೇಶಗೊಂಡಿರುವನು ಮತ್ತು ಸರ್ವ ಶರೀರದಲ್ಲಿ ವ್ಯಾಪಕನಾಗಿರುವನು.

ಸ್ವಪ್ನಾವಸ್ಥೆ :—ನಿದ್ರಾರೂಪವಾದ ತಾಮಸೀವೃತ್ತಿಯಿಂದ ಸ್ಥೂಲದೇಹದ ಅಭಿಮಾನವು ದೂರವಾಗಿ, ಇಂದ್ರಿಯ ಸಮೂಹವು ನಿರ್ವ್ಯಾಪಾರದಿಂದ ಲೀನವಾಗಿ ಯಾವ ವಿಷಯದ ಒಡನೆಯೂ ಸಂಬಂಧ ಹೊಂದದೆ, ಇಂದ್ರಿಯ ಜನ್ಯವಲ್ಲದ ಅಂತಃಕರಣವೃತ್ತಿಗಳಿಂದ ಸೂಕ್ಷ್ಮದೇಹದ ಭೋಗಗಳನ್ನು ಅನುಭವಿಸುವಕಾಲ ಸ್ವಪ್ನಾವಸ್ಥೆ. ಇಲ್ಲಿ ಭೋಕ್ತೃತ್ವಾದಿ ಸಕಲ ಪ್ರಪಂಚವನ್ನೂ ಜೀವನು ಮನಸ್ಸಿನಿಂದಲೇ ಕಲ್ಪಿಸಿಕೊಳ್ಳುತ್ತಾನೆ. ಮನಸ್ಸೇ ವಿಷಯಾಕಾರವೂ ಆಗುತ್ತದೆ. ಆ ವಿಷಯವನ್ನು ನೋಡುವುದೂ ಮನಸ್ಸೆ ಆಗಿರುತ್ತೆ. ಸ್ವಪ್ನದ ಅಭಿಮಾನಿಗೆ ಸೂರ್ಯಾದಿ ಪ್ರಕಾಶಗಳಿಲ್ಲದೇನೇ ಮನಸ್ಸು ಸಮಸ್ತ ವಿಷಯಗಳನ್ನೂ ಸ್ವಪ್ನದಲ್ಲಿ ಪ್ರಕಾಶಗೊಳಿಸುವುದರಿಂದ, ಸ್ವಪ್ನದಲ್ಲಿ ಭೋಕ್ತನಾದ ಜೀವನಿಗೆ 'ತೈಜಸ' ನೆನ್ನುತ್ತಾರೆ. ಆಗ ಇವನು ಅಮೂರ್ತ ಪದಾರ್ಥದ ಭೋಕ್ತನಾಗಿರುತ್ತಾನೆ. ಸ್ವಪ್ನವು, ಕೇಳಲ್ಪಟ್ಟ ಮತ್ತು ಭೋಗಿಸಲ್ಪಟ್ಟ ಸಂಸ್ಕಾರ ಜನ್ಯವಾದುದು. ಅಲ್ಲದೆ ನಿದ್ರಾದೋಷ, ಪ್ರಾರಬ್ಧ ಕರ್ಮಗಳಿಂದಲೂ ಜನ್ಯವಾದುದಾಗಿರುತ್ತೆ.

ಸುಷುಪ್ತ್ಯವಸ್ಥೆ :—ಸುಷುಪ್ತಿ ಅವಸ್ಥೆಯಲ್ಲಿ ಜಾಗತ್ಸ್ವಪ್ನಗಳಲ್ಲಿ ಭೋಗವನ್ನು ಕೊಡುವ ಕರ್ಮಗಳು, ಉಪರಮವಾಗುತ್ತವೆ. ಸ್ಥೂಲ, ಸೂಕ್ಷ್ಮ ಶರೀರಗಳ ಅಭಿಮಾನ ನಿವೃತ್ತಿಯಾಗಿ, ಅದರಿಂದ ಬುದ್ಧಿಗೆ ಸರ್ವ ವಿಶೇಷ ಜ್ಞಾನಗಳ ಉಪರಾಮತ್ವವುಂಟಾಗುತ್ತದೆ. ಅನಂತರ ಆ ಬುದ್ಧಿಯು, ಕಾರಣಾಜ್ಞಾನರೂಪದಿಂದ ಸ್ಥಿತಿಯನ್ನು ಪಡೆಯುತ್ತದೆ. ಈ ಅವಸ್ಥೆಯಲ್ಲಿ ಅಂತಃಕರಣ ಲಯವಾಗುತ್ತದೆಯಾಗಿ, ಜಾಗ್ರತ್‌ಸ್ವಪ್ನ ಪದಾರ್ಥಗಳ ಜ್ಞಾನದ ಅಭಾವವಿರುತ್ತದೆ. ಆದರೆ ಈ ಅವಸ್ಥೆಯಲ್ಲಿ "ನಾನು ಸುಖವಾಗಿ ನಿದ್ದೆ ಮಾಡಿದೆ," 'ನನಗೆ ಯಾವ ಜ್ಞಾನವೂ ಇರಲಿಲ್ಲ.' ಎಂದು ನಿದ್ದೆಯಿಂದೆದ್ದಮೇಲೆ ಜೀವನು ಹೇಳುತ್ತಾನೆ. ಈ ಅಜ್ಞಾನ ಮತ್ತು ಸುಖಾನುಭವಗಳು ಸುಷುಪ್ತಿಯಲ್ಲಿ ಹೇಗೆ ಬಂದುವು ಎಂಬುದು ತಿಳಿಯಬೇಕಾದ ಅಂಶ. ಸುಷುಪ್ತಿಯಲ್ಲಿ ಕಾರಣ ಶರೀರವಾದ, ವಿಕ್ಷೇಪ ರೂಪ ಅವಿದ್ಯೆ, ಮನಸ್ಸು ಮತ್ತು ಅಂತಃಕರಣಗಳು, ಆವರಣ ಶಕ್ತಿ ರೂಪವಾದ ಅವಿದ್ಯೆಯಲ್ಲಿ (ಮೂಲಜ್ಞಾನದಲ್ಲಿ) ಲೀನವಾಗಿರುತ್ತೆಯಾಗಿ, ಅಹಂತಾ ಮಮತಾಧ್ಯಾಸಗಳಿರುವುದಿಲ್ಲ. ಅಂದರೆ ಸುಷುಪ್ತಿಯಲ್ಲಿ ಕೇವಲ ಸಾಕ್ಷೀ ಚೈತನ್ಯ ಮತ್ತು ಮೂಲಾಜ್ಞಾನಗಳಿರುತ್ತವೆ. ಪೂರ್ವ ಸಂಸ್ಕಾರಗಳು ಬೀಜರೂಪಗಳಾಗಿ ಮೂಲಾಜ್ಞಾನದೊಳಗೆ ಸೇರಿ ಇರುತ್ತವೆ. ಈ ಸುಷುಪ್ತಿ ಅವಸ್ಥೆಯ ಅಭಿಮಾನಿಯು ಸುಷುಪ್ತ್ಯವಸ್ಥೆಯಲ್ಲಿ,

ಸಮಸ್ತ ಸಂಶಯ ಮೊದಲಾದ ವಿಶೇಷ ಜ್ಞಾನದಿಂದ ರಹಿತನಾಗಿರುವುದರಿಂದ, "ಪ್ರಾಜ್ಞ"ನೆನಿಸಿಕೊಂಡಿರುವನು. ಮೇಲೆ ಹೇಳಿದ, 'ನನಗೆ ಯಾವ ಜ್ಞಾನವೂ ಇರಲಿಲ್ಲ' ಎಂಬುದು, ಎಚ್ಚರವಾದ ಮೇಲೆ ಹೇಳುವ ಸ್ಮೃತಿ. ಈ ಸ್ಮೃತಿಗೆ ನಮ್ಮ ಮೊದಲಿನ ಅನುಭವ ಬೇಕು. ಅಂದರೆ ನಾವು ಗಾಢನಿದ್ರೆಯಲ್ಲಿ ಅಜ್ಞಾನವನ್ನು ಅನುಭವಿಸಿರಬೇಕು. ಇದರಿಂದ ಗಾಢ ನಿದ್ರೆಯಲ್ಲಿ ಮೂಲಾಜ್ಞಾನವಿರುತ್ತೆಂದೂ, ಅದು ಸಾಕ್ಷಿಭಾಸ್ಯವಾಗಿರುತ್ತೆಂದೂ, ಆಗ ವಿಶೇಷ ಜ್ಞಾನಕ್ಕೆ ಸಾಧನವಾದ ಇಂದ್ರಿಯ ಅಂತಃಕರಣಗಳಿರುವುದಿಲ್ಲವಾಗಿ ಭಾಸವಾಗಲಿಲ್ಲವೆಂದೂ ತಿಳಿಯಬೇಕು. ನಿದ್ರೆಯಿಂದೆದ್ದಾಗ, ಇಂದ್ರಿಯ ಅಂತಃಕರಣಗಳು ಹೊರಬರುತ್ತವೆ. ಆಗ ಸುಷುಪ್ತಿಯಲ್ಲಿ ಅನುಭವ ಮಾಡಿದ ಸಾಕ್ಷೀರೂಪವಾದ ನಿತ್ಯಚೇತನಸಂಬಂಧದ ಸ್ಮೃತಿ ಮತ್ತು ಭಾವರೂಪವಾದ ಮೂಲಾಜ್ಞಾನದ ಸ್ಮೃತಿ ಇವುಗಳು ಅಂತಃಕರಣ ವಿಶೇಷ ಜ್ಞಾನಕ್ಕೆ ಭಾಸವಾಗಿ, ಆಗ ನಾವು, ಅಜ್ಞಾನ ಮತ್ತು ಸುಖಾನುಭವಗಳನ್ನು ಹೇಳಿಕೊಳ್ಳುತ್ತೇವೆ. ಶ್ರುತಿಯಲ್ಲಿ "ಸುಷುಪ್ತಿ ಕಾಲೇ ಸಕಲೇ ವಿಲೀನೇ, ತಮೋಭಿಭೂತಃ ಸುಖರೂಪಮೇತಿ" ಎಂದಿರುವಂತೆ ಅವ್ಯಕ್ತದ ಆವರಣ ಶಕ್ತಿಯಲ್ಲಿ (ಮೂಲಾಜ್ಞಾನದಲ್ಲಿ) ಅಂತಃಕರಣ ಮೊದಲುಗೊಂಡು ಸಮಸ್ತವೂ ಸೂಕ್ಷ್ಮರೂಪದಲ್ಲಿ ಅಡಗುವುವು. ಆದರೆ 'ತಮೋಭಿಭೂತಃ' ಎಂದು ಹೇಳಿರುವಂತೆ ಭಾವರೂಪವಾದ ಈ ಅನಾದಿ ಮೂಲಾಜ್ಞಾನ ಮಾತ್ರವಿದ್ದು, ಜೀವನಿಗೆ ಏನೂ ಗೊತ್ತಾಗದಂತೆ ಮಾಡಿ, ಎಚ್ಚರವಾದ ಕೂಡಲೇ, ಪ್ರಪಂಚದ ಕಾರ್ಯದಲ್ಲಿ ಜೀವನನ್ನು ತೊಡಗಿಸುತ್ತದೆ. ಲಿಂಗಶರೀರವು ಸೂಕ್ಷ್ಮರೂಪದಿಂದ ಮೂಲಾಜ್ಞಾನದಲ್ಲಿರುತ್ತದೆ. ಯಾರು ಮಲಗುವರೋ ಅವರೇ ಏಳುತ್ತಾರೆ. ಪುಣ್ಯಪಾಪಗಳೂ ಕೂಡ ಮೂಲಾಜ್ಞಾನದಲ್ಲಿ ಅಡಗಿರುತ್ತವೆ.

'ಸತಾಸೌಮ್ಯ ತದಾ ಸಂಪನ್ನೋಭವತಿ' ಇಂತಹ ಕೆಲವು ಶ್ರುತಿಗಳಲ್ಲಿ, ಬ್ರಹ್ಮದೊಡನೆ ಸುಷುಪ್ತಿ ಕಾಲದಲ್ಲಿ ಅಭೇದ ಹೇಳಿದಂತೆ ತೋರಿದರೂ, ಅದು ಜೀವನಿಗೆ ಶರೀರ ಮೊದಲಾದ ವಸ್ತುಗಳಲ್ಲಿ ಆ ಕಾಲದಲ್ಲಿ ಅಭಿಮಾನವಿಲ್ಲವೆಂದು ತೋರಿಸಲು ಹೇಳಿದೆ. ಸುಷುಪ್ತಿ ಕಾಲದಲ್ಲಿ ವಾಸ್ತವವಾಗಿ ಅಭೇದ ಹೇಳಿದರೆ, ಆಗ ಜೀವನಿಗೆ ಮುಕ್ತಿಯೇ ಆಗಬೇಕಾಗಿತ್ತು. ಹಾಗಿಲ್ಲ. ಅದಕ್ಕೇನೇ ಛಾಂದೋಗ್ಯೋಪನಿಷತ್ತಿನಲ್ಲಿ 'ನಪಾಪ್ಮಾಸ್ಪೃಶತಿ' ; ಪಾಪಗಳು ಗಾಢ ನಿದ್ರೆಯಲ್ಲಿ ಜೀವನನ್ನು ಮುಟ್ಟುವುದಿಲ್ಲ ಎಂದು ಹೇಳಿದೆಯೇ ಹೊರ್ತು ಪಾಪವೇ ಇರುವುದಿಲ್ಲ ಎನ್ನಲಿಲ್ಲ.

ಬೃಹದಾರಣ್ಯಕೋಪನಿಷತ್ತಿನಲ್ಲಿಯೂ ಕೂಡ 'ಯದ್ವೈತನ್ನವಿಜಾನಾತಿ (೪-೩-೩೦)....ತತೋನ್ಯದ್ ವಿಭಕ್ತಂಯ ದ್ವಿಜಾನೀಯಾತ್' ಎಂಬಲ್ಲಿ, ನಿದ್ರೆಯಲ್ಲಿ ಅರಿಯದೇ ಇರುವಾಗಲೂ ಅರಿವು ಉಳ್ಳವನಾಗಿಯೇ ಇರುತ್ತಾನೆಂದೂ ಆದರೆ ಅಲ್ಲಿ ತನಗಿಂತ 'ವಿಭಕ್ತವಾಗಿ' ಎರಡನೆಯದು ಕಾಣುವುದಿಲ್ಲವೆಂದೂ ಹೇಳಿದೆ. ಇದರಿಂದ ಎರಡನೆಯ ವಸ್ತುವು ವಿಭಕ್ತವಾಗದೆ, ಮೂಲಾಜ್ಞಾನದಲ್ಲಿ ಅವಿಭಕ್ತವಾಗಿತ್ತೆಂದು ಹೇಳಿದಹಾಗಾಯಿತು. ಅಲ್ಲದೆ, ಸೂತ್ರಭಾಷ್ಯದಲ್ಲಿ, 'ಅಯಮಪಿ ಬುದ್ಧಿ ಸಂಬಂಧಃ, ಶಕ್ತ್ಯಾತ್ಮನಾ ವಿದ್ಯಮಾನ ಏವ, ಸುಷುಪ್ತ ಪ್ರಲಯಯೋಃ, ಪುನಃಪ್ರಬೋಧ ಪ್ರಸವಯೋರಾವಿರ್ಭವತಿ' ಎಂಬಲ್ಲಿ, ಬುದ್ಧಿ (ಅಂತಃಕರಣ) ಎಂಬ ಉಪಾಧಿ ಸಂಬಂಧದಿಂದಲೇ ಪರಮಾತ್ಮನಲ್ಲಿ ಜೀವತ್ವ ಬುದ್ಧಿಯುಂಟಾಗಿದೆ. ನಿಜವಾಗಿ ಪರಮಾತ್ಮನಿಗಿಂತ ಬೇರೆಯಾದ ಜೀವನೇ ಇರುವುದಿಲ್ಲ. ಈ ಸಂಬಂಧವು ಮಿಥ್ಯಾಜ್ಞಾನದಿಂದಲೇ ತೋರುತ್ತದೆ. ಈ ಅಂತಃಕರಣ ಸಂಬಂಧವು ಸುಷುಪ್ತಿ ಪ್ರಳಯಗಳಲ್ಲಿ ಅವ್ಯಕ್ತಶಕ್ತಿರೂಪದಿಂದ ಇದ್ದುಕೊಂಡಿರುತ್ತಾ ಎಚ್ಚರ ಸೃಷ್ಟಿಕಾಲಗಳಲ್ಲಿ ಮತ್ತೆ ತೋರಿಕೊಳ್ಳುತ್ತದೆ ಎಂದು ಹೇಳಿರುತ್ತಾರೆ

ಇದರಿಂದ ಸುಷುಪ್ತಿಯಲ್ಲಿ ಮೂಲಾಜ್ಞಾನವು (ಅವ್ಯಕ್ತಶಕ್ತಿಯು) ಇದೆ ಎಂದು ಸಿದ್ಧಪಡುತ್ತದೆ.

ಈ ರೀತಿ ಜೀವಬ್ರಹ್ಮರಲ್ಲಿ ಭೇದವನ್ನುಂಟುಮಾಡುವ ಮೂಲಾಜ್ಞಾನವು ಮುಕ್ತಿಪರ್ಯಂತವೂ ಇದ್ದು, ಮುಕ್ತಾವಸ್ಥೆಯಲ್ಲಿ ಇಲ್ಲದಂತಾಗುತ್ತದೆ.

ಇದನ್ನೇ ಭಾಮತಿಕಾರರು 'ಅಮುಕ್ತೇರ್ಭೇದ ಏವ ಸ್ಯಾತ್ ಜೀವಸ್ಯಚ ಪರಸ್ಯಚ, ಮುಕ್ತಸ್ಯತುನ ಭೇದೋಸ್ತಿ ಭೇದಹೇತೋರಭಾವತಃ" ಎಂದು ಮುಕ್ತಿಪರ್ಯಂತ ಜೀವ ಬ್ರಹ್ಮರಲ್ಲಿ ಭೇದವಿರುತ್ತೆಂದೂ, ಮುಕ್ತಾವಸ್ಥೆಯಲ್ಲಿ ಭೇದವನ್ನು ಉತ್ಪತ್ತಿಮಾಡುವ ಮೂಲಾಜ್ಞಾನವು ಇರುವುದಿಲ್ಲವಾಗಿ, ಆಗ ಅಭೇದವಿರುತ್ತದೆಂದೂ ಹೇಳಿರುವರು.

ಬ್ರಹ್ಮಸ್ವರೂಪವು ನಮಗೆ ಯಾವಾಗಲೂ ಇರುವುದರಿಂದ, ನಾವು ಬ್ರಹ್ಮಸ್ವರೂಪರೆಂದು ಅನುಭವದಿಂದ ತಿಳಿದುಕೊಳ್ಳುವುದೇ ಮೋಕ್ಷವು. ಅಂದರೆ ಈ ತಿಳುವಳಿಕೆಗೆ ಅಡ್ಡವಾಗಿರುವ ಮೂಲಾಜ್ಞಾನವು ನಮಗೆ ಇಲ್ಲದಂತಾಗಬೇಕು. ಇದು ಇರುವುದರಿಂದ ನಾವು ಸುಷುಪ್ತಿಕಾಲದಲ್ಲಿ ಬ್ರಹ್ಮನಲ್ಲಿ ಸೇರಿದ್ದರೂ ಪುನಃ ನಾವೇ ಸಂಸಾರಿಗಳಾಗಿಯೇ ಎಚ್ಚರಗೊಳ್ಳುತ್ತೇವೆ. ಇದರಿಂದಲೇ ಪಶುಪಕ್ಷಿ ಮೃಗಾದಿಗಳಿಗೂ, ಸುಷುಪ್ತಿ ಅವಸ್ಥೆಯಾದರೂ, ಅವು ಮುಕ್ತವಾಗಿಲ್ಲ. ಹುಚ್ಚರು ಸುಷುಪ್ತಿಗೆ ಹೋದರೂ, ಹುಚ್ಚರಾಗಿಯೇ ಎಚ್ಚರಗೊಳ್ಳುತ್ತಾರೆ. ಸುಷುಪ್ತಿಯಲ್ಲಿ ಜೀವನು ಬ್ರಹ್ಮನಲ್ಲಿ ಒಂದಾಗಿ ಸೇರಿಹೋಗುವುದಿಲ್ಲ. ಪುನಃ ಆ ಜೀವನೇ ಏಳುತ್ತಾನೆ. ಮತ್ತೊಬ್ಬ ಜೀವನಲ್ಲ. ನಿಷ್ಪ್ರಪಂಚವಾದ ನಮ್ಮ ಸ್ವರೂಪವನ್ನು ಗುರ್ತಿಸುವುದಕ್ಕೆ ಪ್ರಕೃತಿಯಿಂದ ಅನುಗ್ರಹೀತವಾದ ಅವಸ್ಥೆಯೆಂದರೆ ಈ ಸುಷುಪ್ತಾವಸ್ಥೆ. ಆದರೆ ಸುಷುಪ್ತಾವಸ್ಥಾ ರೂಪವಾದ ಈ ನಿದ್ರಾವೃತ್ತಿಗೂ ಜ್ಞಾನವೃತ್ತಿಗೂ ವ್ಯತ್ಯಾಸವಿದೆ ಎಂದಮೇಲೆ ಸುಷುಪ್ತಾವಸ್ಥೆಯು ನಿಜವಾದ ಮೋಕ್ಷಾವಸ್ಥೆಯಲ್ಲ. ಒಟ್ಟಿನಲ್ಲಿ ಹೇಳುವುದಾದರೆ, ಸ್ವಪ್ನವು ಜಾಗ್ರತ್ತಿನಲ್ಲಿ ಸುಳ್ಳಾಗುತ್ತದೆ. ಮತ್ತು ಜಾಗ್ರತ್ತು ಸ್ವಪ್ನಸುಷುಪ್ತಿಗಳಲ್ಲಿ ಇರುವುದಿಲ್ಲ. ಹೀಗೆ ಈ ಮೂರು ಅವಸ್ಥೆಗಳೂ ಒಂದಕ್ಕೊಂದು ವ್ಯತಿರೇಕವಾಗಿವೆ. ಮತ್ತು ಈ ಮೂರು ಅವಸ್ಥೆಗಳಿಗೂ ಸಾಕ್ಷಿಯಾದ ಆತ್ಮನು ಮೂರರಲ್ಲೂ ಅನ್ವಯುನಾಗಿರುವನು. ಹೀಗಾಗಿ ಈ ಮೂರು ಅವಸ್ಥೆಗಳೂ ಜೀವನಿಗಿಲ್ಲ. ಜೀವನು ಇವಕ್ಕೆಲ್ಲಾ ಕೇವಲ ಸಾಕ್ಷಿ ಅಷ್ಟೆ ಎಂದು ತಿಳಿದುಕೊಳ್ಳಬೇಕು.

ಇದನ್ನೇ ಶ್ರುತಿಯು 'ಸಾಕ್ಷೀಚೇತಾ ಕೇವಲೋ ನಿರ್ಗುಣಶ್ಚ' ಎಂದಿದೆ. ಇನ್ನು ಜೀವನ ಬಂಧಕ್ಕೆ ಕಾರಣವೇನೆಂಬುದನ್ನೂ ಅದು ನಿವೃತ್ತಿಯಾಗಲು ಪರಿಹಾರವೇನೆಂಬುದನ್ನೂ ವಿಚಾರಿಸೋಣ.

ಜೀವನು ತನ್ನ ಅವಿದ್ಯೆಯ (ಮಲಿನ ರಜೋಗುಣಪ್ರಧಾನ ಅವ್ಯಕ್ತಶಕ್ತಿಯ) ಆವರಣ ಶಕ್ತಿಯಾದ ಮೂಲಾಜ್ಞಾನದಿಂದ ತನ್ನ ಸ್ವಸ್ವರೂಪವಾದ ನಿರ್ಗುಣ ಬ್ರಹ್ಮಸ್ವರೂಪದಿಂದ ತಿರೋಹಿತನಾಗಿ, ತನ್ನ ಅವಿದ್ಯೆಯ ವಿಕ್ಷೇಪಶಕ್ತಿಯಾದ, ಕಾರ್ಯಾವಿದ್ಯೆಯಿಂದ ತನ್ನ ವಿರುದ್ಧ ಸ್ವಭಾವದ ಜಡರೂಪವಾದ ಅಂತಃಕರಣ ಶರೀರ ಇಂದ್ರಿಯಾದಿಗಳಲ್ಲಿ ಅಭಿಮಾನಿಸಿ, ತಾನೇ ದೇಹಿಯೆಂದೂ, ಶರೀರತ್ರಯದಿಂದರುವೆನೆಂದೂ, ಅವಸ್ಥಾತ್ರಯವೂ ತನಗೆ ಉಂಟೆಂದೂ, ತಾನೇ ಪಂಚಕೋಶಗಳುಳ್ಳವನೆಂದೂ, ಅನ್ಯೋನ್ಯ ತಾದಾತ್ಮ್ಯ ಭ್ರಾಂತಿಯನ್ನು ಹೊಂದಿ ಸುಖ ದುಃಖಗಳನ್ನು ಹೊಂದುವನಾದನು. ಇದರಿಂದಾಗಿ, ತಾನು ಮನುಷ್ಯ, ತಾನು ಬ್ರಾಹ್ಮಣ, ತಾನು ಸ್ಥೂಲ, ವೃದ್ಧ ಬಧಿರ, ಮೂಕ, ಕರ್ತ, ದುಃಖಿ, ಈಶರೀರ ತನ್ನದು, ಇದು ತನ್ನ ಕಣ್ಣು, ತನ್ನ ಕಿವಿ, ಇದು ತನ್ನ ಮನಸ್ಸು ಎಂದು ಅಧ್ಯಾಸ ಹೊಂದಿದನು. ಅಲ್ಲದೆ ಶರೀರದ ಹೊರಗಣ ಪತ್ನಿ ಪುತ್ರಾದಿಗಳು ಸುಖಿಗಳಾದರೆ ತಾನು ಸುಖಿ ಎನ್ನತೊಡಗಿದನು. ಅವರಿಗೆ ದುಃಖ ಪ್ರಾಪ್ತವಾದರೆ ತಾನೂ ದುಃಖಿಸುವನು. ಅವರ ಧರ್ಮಗಳನ್ನು ಹೀಗೆ ತನ್ನಲ್ಲಿ ಅಧ್ಯಾಸ ಮಾಡಿಕೊಳ್ಳುವನಾದನು. ಹೀಗೆ ಮೊದಲು ಮೊದಲಿನ ಅಧ್ಯಾಸಗಳು ಮುಂದು ಮುಂದಿನ ಅಧ್ಯಾಸ ಪರಂಪರೆಗಳಿಗೆ ಕಾರಣವಾಗುತ್ತಾ ಹೋಗಿ ಮುಂದು ಮುಂದಿನ ಶರೀರದ ದುಃಖಾನುಭವಗಳು ಹಿಂದು ಹಿಂದಿನ ಭ್ರಮಜನ್ಯ ಸಂಸ್ಕಾರದಿಂದ ಹುಟ್ಟುತ್ತಾ ಹೋಗಿ, ಅನಾದಿ ಸಂಸಾರವು ಬೆಳೆಯುತ್ತಾ ಬಂದಿತು.

ಹೀಗೆ ಬ್ರಹ್ಮಸ್ವರೂಪನಾದ ಜೀವನಿಗೆ ತನ್ನ ಅವಿದ್ಯೆಯ ಆವರಣ ಶಕ್ತಿಯಿಂದ (ಮೂಲಾಜ್ಞಾನದಿಂದ) ಆದ ತನ್ನ ಸ್ವರೂಪ ಅಜ್ಞಾನವೇ, ಬಂಧಕವಾಯ್ತು. ಇಂದ್ರಿಯ ಶಬ್ದಾದಿಗಳ ಸಂಯೋಗದಿಂದುಂಟಾಗುವ ಸುಖದುಃಖಾದಿಗಳು ನಿತ್ಯವಲ್ಲದವುಗಳಾಗಿದ್ದರೂ ಮತ್ತು ಅವುಗಳು ಕೇವಲ ಅಂತಃಕರಣ

ಧರ್ಮಗಳಾಗಿದ್ದರೂ ತನ್ನ ಅವಿದ್ಯೆಯ ವಿಕ್ಷೇಪ ಶಕ್ತಿಯಾದ ಕಾರ್ಯಾವಿದ್ಯೆಯ ಫಲವಾಗಿ, ಆ ಅಂತಃಕರಣ ಧರ್ಮಗಳನ್ನು ತನ್ನದೆಂದೇ ಅಧ್ಯಾಸ ಮಾಡಿಕೊಂಡು, ಶೋಕ ಮೋಹಾದಿಗಳಿಂದ ಕೂಡಿ ಸುಖದುಃಖಗಳನ್ನೂ ಜನನ ಮರಣಗಳನ್ನೂ ಅನುಭವಿಸುವವನಾದನು. ಈ ಆವರಣ ವಿಕ್ಷೇಪ ಶಕ್ತಿಗಳೇ ಜೀವನ ಬಂಧನಕ್ಕೆ ಕಾರಣವೆಂಬು ದನ್ನು ಗೀತೆಯಲ್ಲಿ "ಅಜ್ಞಾನೇ ನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ" ಎಂದರೆ ಆತ್ಮಜ್ಞಾನವು ಅವಿದ್ಯೆಯ ಆವರಣ ಶಕ್ತಿಯಾದ ಮೂಲಾಜ್ಞಾನದಿಂದ ಮುಚ್ಚಿಕೊಂಡಿದೆಯೆಂದೂ ಮತ್ತು ಅದರ ವಿಕ್ಷೇಪ ಶಕ್ತಿಯಿಂದ ಅಂದರೆ ಕಾರ್ಯವಿದ್ಯೆಯಿಂದ ಜೀವನು ತಾನು ಮಾಡುತ್ತೇನೆ, ತಾನು ಅನುಭವಿಸುತ್ತೇನೆ ಎಂದು ಮೋಹಗೊಂಡು ಸುಖ ದುಃಖಗಳಿಗೆ ಗುರಿಯಾಗುವನೆಂದೂ ಹೇಳಿದೆ. ಹೀಗೆ ಇಲ್ಲಿ, ಮೂಲಾಜ್ಞಾನಕ್ಕೆ ಬ್ರಹ್ಮಸ್ವರೂಪದ ಆವರಣತ್ವವನ್ನು ಹೇಳಿದೆ ಆ ಆವರಣತ್ವವು ಭಾವ ಪದಾರ್ಥಗಳಲ್ಲಿಯೇ ಇರುವುದು. ಆದಕಾರಣ ಮೂಲಾಜ್ಞಾನವನ್ನು ಭಾವರೂಪವೆಂದೇ ಅಂಗೀಕರಿಸಬೇಕು. ಇದೇ ವಿಷಯವನ್ನೇ ಗೀತಾಭಾಷ್ಯ (13 ನೇ ಅಧ್ಯಾಯ, 2 ನೇ ಶ್ಲೋಕ) ದಲ್ಲಿ ಆಚಾರ್ಯರು "ತಾಮಸೋಹಿ ಪ್ರತ್ಯಯಃ :-ಆವರಣಾತ್ಮಕತ್ವಾದ ವಿದ್ಯಾ, ವಿಪರೀತ ಗ್ರಾಹಕಃ. ಸಂಶಯೋಪ ಸ್ಥಾಪಕೋ ವಾ ಅಗ್ರಹಣಾತ್ಮಕೋ ವಾ", ಎಂದು ವಿಪರೀತ ಗ್ರಹಣಾದಿಗಳು ಆವರಣಾತ್ಮಕವಾದ ಮೂಲಾ ಜ್ಞಾನದಿಂದ ಹುಟ್ಟಿದುವೆಂದೂ ಮೂಲಾಜ್ಞಾನವು ಕಾರ್ಯಾವಿದ್ಯೆಗೆ ಕಾರಣವೆಂದೂ ಹೇಳಿರುತ್ತಾರೆ. ಗೀತಾ ಭಾಷ್ಯದ ಉಪೋದ್ಘಾತದಲ್ಲಿ ಆಚಾರ್ಯರು ಗೀತೆಯ ಪ್ರಯೋಜನ ಮೋಕ್ಷವೆಂದು ಹೇಳಿ, ಆ ಮೋಕ್ಷವೆಂದರೆ "ಸಹೇತುಕಸ್ಯ ಸಂಸಾರಸ್ಯ ಅತ್ಯಂತೋಪರಮ ಲಕ್ಷಣ" ಎಂದಿದ್ದಾರೆ. ಇಲ್ಲಿ 'ಸಹೇತುಕಸ್ಯ' 'ಅತ್ಯಂತ ಉಪರಮ' ಎಂಬುದರಿಂದ ಮೂಲಾಜ್ಞಾನವನ್ನು ಸೂಚಿಸಿರುತ್ತಾರೆ. ದಿನವಹಿ ಸುಷುಪ್ತಿಯಲ್ಲಿ ಸಂಸಾರವು ಉಪರಮವಾದರೂ ಮೂಲಾಜ್ಞಾನ ಸಹಿತವಾಗಿ ಅತ್ಯಂತ ಉಪರಮವಾಗುವುದು ಮೋಕ್ಷದಲ್ಲೆಂದು ಸೂಚಿಸಿದ್ದಾರೆ.

ಇದೇ ಅರ್ಥವನ್ನೇ ಕೇನೋಪನಿಷತ್ತಿನ ಭಾಷ್ಯದಲ್ಲಿ ಬ್ರಹ್ಮಜ್ಞಾನ ಪ್ರಯೋಜನವನ್ನು ಹೇಳುವ ಕಡೆಯಲ್ಲಿ ಆತ್ಮಸ್ವರೂಪಜ್ಞಾನದಿಂದ, "ಸಂಸಾರಬೀಜಮಜ್ಞಾನಂ ಕಾಮುಕರ್ಮ ಪ್ರವೃರ್ತಿಕಾರಣಂ ಅಶೇಷತೋ ನಿವರ್ತತೇ" ಎಂಬಲ್ಲಿ ಹೇಳಿರುತ್ತಾರೆ.

ಹೀಗೆಯೇ ಮುಂಡಕೋಪನಿಷತ್ತಿನ ಭಾಷ್ಯದಲ್ಲಿ ಉಪನಿಷತ್ ಎಂಬುದಕ್ಕೆ ಅರ್ಥ ಹೇಳುವಲ್ಲೂ, ಯಾರು ಶ್ರದ್ಧಾಭಕ್ತಿಗಳಿಂದ ಈ ಬ್ರಹ್ಮವಿದ್ಯೆಯನ್ನು "ಉಪಉಪಯನ್ತಿ," ಬಳಿ ಸಾರುವರೋ, ಅಂದರೆ ಈ ಬ್ರಹ್ಮವು ತಾ :ೀ ಎಂದು ಮನಗಾಣುವರೋ, ಅವರ ಸಂಸಾರ ದುಃಖವನ್ನು 'ನಿಷತ್,=ವಿನಾಶಯತಿ,' ನಾಶಮಾಡುತ್ತೆ ಎಂದು ಹೇಳುವಲ್ಲೂ, 'ವಿನಾಶಯತಿ' ಎನ್ನುವ ಕಡೆ, "ಅವಿದ್ಯಾದಿ ಸಕಾರಣಂಚ ಅತ್ಯಂತಂ ವಿನಾಶಯತಿ" ಎಂದು ಹೇಳಿರುತ್ತಾರೆ.

ಶ್ರುತಿಯಲ್ಲಿ ಒಂದು ಕಡೆ "ದೇವಾತ್ಮಶಕ್ತಿಂ ಸ್ವಗುಣೈರ್ನಿಗೂಢಾಂ" ಅಂದರೆ ಸತ್ವ, ರಜ, ತಮ ರೂಪ ವಾದ ಯಾವ ಗುಣ ಉಂಟೋ ಅದರಿಂದ ಮಿಳಿತವಾದ ಅಜ್ಞಾನವನ್ನು (ಮೂಲಾಜ್ಞಾನವನ್ನು) ಶಕ್ತಿರೂಪ ವಾಗಿ ಹೇಳಿದೆ. ಆಚಾರ್ಯಕೃತವಾದ ವಿವೇಕಚೂಡಾಮಣಿಯಲ್ಲೂ, ಅವ್ಯಕ್ತನಾಮ್ನೀ ಪರಮೇಶ ಶಕ್ತಿಃ, ಅನಾದ್ಯವಿದ್ಯಾ ತ್ರಿಗುಣಾತ್ಮಿಕಾಯಾ ॥ (ಶೋಕ ೧೧೦) ಅಂದರೆ ಮಾಯೆಯು ಪರಮೇಶ್ವರನ ಅವ್ಯಕ್ತಶಕ್ತಿ ಎಂದೂ, ಅದಕ್ಕೆ ಆದಿ ಇಲ್ಲವೆಂದೂ, ಗುಣತ್ರಯಗಳಿಂದ ಕೂಡಿ ಅವಿದ್ಯಾರೂಪಿಯಾಗಿ:ತ್ತದೆಯೆಂದೂ ಹೇಳಿದೆ. ಇದರಿಂದಲೂ ಮೂಲಾಜ್ಞಾನವು ಭಾವರೂಪವೆಂದು ಹೇಳಿದ ಹಾಗಾಯ್ತು. ಹಾಗೆಯೇ "ಅಜಾಮೇಕಾಂ ಲೋಹಿತ ಶುಕ್ಲ ಕೃಷ್ಣಾಂ" ಎಂಬ ಶ್ರುತಿಯೂ ಕೂಡ ಈ ಮೂಲಾಜ್ಞಾನವನ್ನೇ ತ್ರಿಗುಣರೂಪವಾಗಿ ಹೇಳಿರು ತ್ತದೆ. ಇದರಿಂದಲೂ ಈ ಅಜ್ಞಾನದ ಭಾವರೂಪ ಸ್ವರೂಪವು ಹೇಳಲ್ಪಟ್ಟಂತಾಯಿತು. ಇದರ ಲಕ್ಷಣವನ್ನು ಶ್ರುತಿಯು, "ಸದಸದ್ವಿಲಕ್ಷಣಮಜ್ಞಾನಂ" ಎಂದು ಹೇಳಿದೆ. ಮೂಲಾಜ್ಞಾನಕ್ಕೆ ಸತ್ಯತ್ವವಿಲ್ಲ. ಅದು ಬ್ರಹ್ಮಜ್ಞಾನ

ದಿಂದ ನಾಶವಾಗುತ್ತದೆ. ಹೀಗೆಂದು ಅದಕ್ಕೆ ಅಸತ್ಯತ್ವವನ್ನು ಅಂಗೀಕರಿಸಿದರೆ ಅದು ವಂಧ್ಯಾಪುತ್ರನಂತೆ ಪ್ರತ್ಯಕ್ಷವಾಗಕೂಡದು. ಆದರೆ ಈ ಅಜ್ಞಾನವು, ನಾನು ಬ್ರಹ್ಮವನ್ನು ಅರಿಯಲಿಲ್ಲ ಎಂಬ ಪ್ರತ್ಯಕ್ಷಾನುಭವದಿಂದ ಪ್ರತೀತವಾಗಿದೆ. ಈ ಕಾರಣದಿಂದ ಈ ಮೂಲಾಜ್ಞಾನವನ್ನು ಅನಿರ್ವಚನೀಯವನ್ನಾಗಿ ಹೇಳಿದೆ.

ಅಹಂಕಾರವನ್ನು ಉಪಾಧಿಯಾಗಿ ಹೊಂದಿ, ಕರ್ತೃತ್ವ ಭೋಕ್ತೃತ್ವರೂಪದಲ್ಲಿ ಈ ಮೂಲಾಜ್ಞಾನವು ತೋರುವುದರಿಂದ, ವಿಕ್ಷೇಪಶಕ್ತಿರೂಪವಾದ ಕಾರ್ಯಾವಿದ್ಯೆಗೆ ಉಪಾದಾನ ಕಾರಣವಾಗಿ ಆವರಣ ಶಕ್ತಿರೂಪವಾದ ಮೂಲಾಜ್ಞಾನವಿದೆ ಎಂದು ಗೊತ್ತಾಗುತ್ತದೆ. ಈ ಮೂಲಾಜ್ಞಾನದ ನಿವೃತ್ತಿ, ಆತ್ಮಜ್ಞಾನದಿಂದಲೇ ಆಗಬೇಕಾಗಿದೆ. ಅಂಧಕಾರವು ಸೂರ್ಯನ ಉದಯವನ್ನೇ ಕೊನೆಯಾಗಿ ಉಳ್ಳಂತೆ, ಮೂಲಾಜ್ಞಾನವು ಆತ್ಮವಿಚಾರವೆಂಬ ಸೂರ್ಯನ ಉದಯವನ್ನು ಕೊನೆಯಾಗಿಉಳ್ಳದ್ದಾಗಿದೆ. ಸೂರ್ಯೋದಯವಾದ ಕೂಡಲೇ ಅಂಧಕಾರವು ಕಾಣಿಸದೇ ಹೋಗುವಂತೆ, ಆತ್ಮವಿಚಾರದಿಂದ ನಿಶ್ಚಯಜ್ಞಾನವು ಹುಟ್ಟಿದ ಕ್ಷಣದಲ್ಲಿಯೇ, ಮೂಲಾಜ್ಞಾನವೂ ಅದರ ಸಂಬಂಧಿಗಳಾದ ಕಾರ್ಯವಿದ್ಯೆ, ಅಹಂಕಾರ ಮಮಕಾರಾದಿಗಳಿಂದ ಕೂಡಿದ ಸಂಸಾರವೂ ನಿವೃತ್ತವಾಗುವುವು.

ಸ್ವಪ್ರಕಾಶ ಆತ್ಮನು ಮೂಲಾಜ್ಞಾನಕ್ಕೆ ಅಧಿಷ್ಠಾನವಾಗಿ ಸಾಧಕನಾಗಿರುತ್ತಾ ವಿರೋಧಿಯಾಗದೇ ಇದ್ದರೂ, ಮನನದಿಂದ ಹುಟ್ಟುವ 'ನಾನೇ ಬ್ರಹ್ಮ'ನೆಂಬ ಅಂತಃಕರಣದ ಅಖಂಡಾಕಾರವೃತ್ತಿಯಲ್ಲಿರುವ ಅದೇ ಆತ್ಮನು, ಮೂಲಾಜ್ಞಾನಕ್ಕೆ ವಿರೋಧಿಯಾಗುತ್ತಾ ಅದನ್ನು ನಿವೃತ್ತಿಗೊಳಿಸುವನು. ಸೂರ್ಯನ ಕಿರಣವು ಸ್ವತಃ ತೃಣಾದಿಗಳನ್ನೆಲ್ಲಾ ಪ್ರಕಾಶಪಡಿಸುತ್ತಾ, ಅವುಗಳ ಪ್ರಕಾಶಕ್ಕೆ ಸ ಧಕವೇ ಆಗಿ, ವಿರೋಧಿಯಾಗದೇ ಇದ್ದರೂ, ಸೂರ್ಯಕಾಂತ (Lens) ಮಣಿಯಲ್ಲಿದ್ದುಕೊಂಡು, ಅದೇ ತೃಣಾದಿಗಳಿಗೆ ವಿರೋಧಿಯಾಗಿ ನಾಶಕವಾಗಿರುವುದೇ ಇದಕ್ಕೆ ಉದಾಹರಣೆಯಾಗಿದೆ.

ಮೂಲಾಜ್ಞಾನವು ಬ್ರಹ್ಮನಲ್ಲಿ ಕಲ್ಪಿತವಾದ್ದರಿಂದ (ಮೂಲಾಜ್ಞಾನಕ್ಕೆ ಬ್ರಹ್ಮನು ಅಧಿಷ್ಠಾನವಾದ್ದರಿಂದ) ಕಲ್ಪಿತವಾದ ಮೂಲಾಜ್ಞಾನದ ಅಭಾವವೂ ಅಂದರೆ ನಿವೃತ್ತಿಯೂ ಕಲ್ಪಿತವೇ ಆಗಬೇಕಾಗಿ ಮೂಲಾಜ್ಞಾನ ನಿವೃತ್ತಿರೂಪ ಮೋಕ್ಷವೂ ಕಲ್ಪಿತವೇ ಆಗಬೇಕೆಂದು ಸಂಶಪಡಯಬೇಕಾದುದಿಲ್ಲ. ಕಲ್ಪಿತ ಸರ್ಪ ರಜತಾದಿಗಳ ಅಭಾವವು, ರಜ್ಜು ಶುಕ್ತ್ಯಾದಿ ಅಧಿಷ್ಠಾನಗಳಿಂದ ಭಿನ್ನವಾಗಿರದೇ ಇರುವಂತೆ, ಕಲ್ಪಿತ ಅವಿದ್ಯೆಯ ನಿವೃತ್ತಿಯೂ, ಅಧಿಷ್ಠಾನವಾದ ಬ್ರಹ್ಮಕ್ಕಿಂತ ಬೇರೆ ಇರದೇ ಬ್ರಹ್ಮರೂಪವೇ ಆಗಿರುತ್ತದೆ. ಆದಕಾರಣ ಅವಿದ್ಯಾ ನಿವೃತ್ತಿಯೇ ಮೋಕ್ಷವೆಂಬುದು ನಿಸ್ಸಂದೇಹವು. ಈ ಸಂದರ್ಭದಲ್ಲಿ ಕೆಲವು ಸಂದೇಹಗಳು ಈ ಕೆಳಗೆ ಕಂಡಂತೆ ಏಳಬಹುದು. (1) ಮೂಲಾಜ್ಞಾನವು ಬ್ರಹ್ಮನಂತೆ ಅನಾದಿಯೂ ಭಾವಪದಾರ್ಥವೂ ಆದಮೇಲೆ, ಬ್ರಹ್ಮನಿಗೆ ನಾಶವಿಲ್ಲವೆಂಬಂತೆ ಮೂಲಾಜ್ಞಾನಕ್ಕೂ ನಾಶ ಹೇಳಕೂಡದು. (2) ಅಲ್ಲದೆ ಅನಾದಿಭಾವ ಪದಾರ್ಥದ ನಾಶವನ್ನು ನಾವು ಕಂಡಿಲ್ಲ. ಹೀಗೆ ಹೇಳುವುದಾದರೆ ಇದಕ್ಕೆ ಈ ಕೆಳಗಿನ ಉತ್ತರಗಳು ಸಮಂಜಸವೆನ್ನಬಹುದು.

(i a) ಶ್ರುತಿಸ್ಮೃತಿಗಳಲ್ಲಿ ಬ್ರಹ್ಮಕ್ಕೆ ನಾಶವಿಲ್ಲವೆಂದೂ ಮೂಲಾಜ್ಞಾನಕ್ಕೆ ನಾಶ ಉಂಟೆಂದೂ ಕಂಡುಬರುತ್ತದೆಯಾಗಿ ಮೂಲಾಜ್ಞಾನಕ್ಕೆ ನಾಶ ಒಪ್ಪಬೇಕು.

ಗೀತಾ :— "ಅನಾದಿತ್ವಾನ್ನಿರ್ಗುಣತ್ವಾತ್, ಪರಮಾತ್ಮಾಯಮವ್ಯಯಃ." (೧೩–೩೧)

ಅನಾದಿಯಾದ್ದರಿಂದಲೂ, ನಿರ್ಗುಣನಾದ್ದರಿಂದಲೂ ಈ ಪರಮಾತ್ಮನು 'ಅವ್ಯಯ' ಅಂದರೆ ಜನ್ಮ ಮರಣಾದಿ ವಿಕಾರ ರಹಿತನು ಎಂದಿದೆ.

ಬೃಹದಾರಣ್ಯಕ ಷಷ್ಠಾಧ್ಯಾಯ ಶ್ರುತಿಃ :—"ಅವಿನಾಶೀವಾಅರೇಽಯಮಾತ್ಮಾನುಚ್ಛಿತ್ತಿಧರ್ಮಾ."

"ಓ ಮೈತ್ರೇಯಿ, ಈ ಆತ್ಮನು ಸ್ವರೂಪದಿಂದಲೂ ನಾಶಾದಿ ವಿಕಾರಗಳಿಲ್ಲದವನು" ಎಂದಿದೆ. ಅಲ್ಲದೆ " ಏತದಮೃತಮಭಯಮೇತದ್ಬ್ರಹ್ಮ. "

ಈ ಬ್ರಹ್ಮವೇ ಅಮೃತರೂಪವೆಂತಲೂ ಅಭಯವೆಂತಲೂ ಹೇಳಿದೆ.

(i b) ಮೂಲಾಜ್ಞಾನಕ್ಕೆ ನಾಶ ಉಂಟೆಂಬುದಕ್ಕೆ ಈ ಕೆಳಗಿನ ಶ್ರುತಿಸ್ಮೃತಿಗಳು ಸಾಕಾಗಿವೆ.

ಗೀತಾ :— 'ಮಾಯಾಮೇತಾಂ ತರಂತಿತೇ.'

ಶ್ರುತಿಃ :— 'ಭೂಯಶ್ಚಾಂತೇ ವಿಶ್ವಮಾಯಾ ನಿವೃತ್ತಿಃ' (ಜೀವನ್ಮುಕ್ತಾವಸ್ಥೆಯಲ್ಲಿ ಸ್ವಲ್ಪ ಮಾಯೆ ಇದ್ದು ಅದೂ ತಿರುಗಿ ಕೊನೆಯಲ್ಲಿ ಅಂದರೆ ವಿದೇಹ ಕೈವಲ್ಯದಲ್ಲಿ ನಿವೃತ್ತಿಯಾಗುತ್ತದೆ.)

ಹೀಗೆ ಶ್ರುತಿಸ್ಮೃತಿಗಳ ಆಧಾರದ ಮೇಲೆ ಮೂಲಾಜ್ಞಾನವು ಅನಾದಿ ಭಾವಪದಾರ್ಥವಾದರೂ ನಾಶ ಹೊಂದುತ್ತದೆ. ಪರಬ್ರಹ್ಮವಸ್ತು ಮಾತ್ರ ಶಾಶ್ವತವಾಗಿರುತ್ತದೆ ಎಂದು ತಿಳಿಯಬೇಕು. ಏಕೆಂದರೆ ಪರಬ್ರಹ್ಮ ವಸ್ತುವು ಅನಾರೋಪಿತ ಅನಾದಿಭಾವಪದಾರ್ಥ. ಮೂಲಾಜ್ಞಾನವಾದರೋ ಬ್ರಹ್ಮನಲ್ಲಿ ಆರೋಪಿತ. ಹೀಗಾಗಿ ಮುಲಾಜ್ಞಾನವು ಬ್ರಹ್ಮಜ್ಞಾನದಿಂದ ನಿವೃತ್ತವಾಗುವುದು.

(ii) ಇನ್ನು ಅನಾದಿಭಾವ ಪದಾರ್ಥ ನಾಶಹೊಂದುತ್ತೆಂಬುದಕ್ಕೆ ಉದಾಹರಣೆಯಾಗಿ ಅನಾದಿಭಾವ ಪದಾರ್ಥವಾದ 'ಘಟಪ್ರಾಗಭಾವ'ವನ್ನು' ತೆಗೆದುಕೊಳ್ಳೋಣ. 'ಘಟಪ್ರಾಗಭಾವ'ವೆಂದರೆ ಘಟವು ಹುಟ್ಟುವುದಕ್ಕೆ ಮುಂಚೆ ಇದ್ದ ಅವಸ್ಥೆ. ಇದು ಘಟ ಹುಟ್ಟುವಿಕೆಯಿಂದ ನಾಶವಾಗುವುದು. ಘಟಪ್ರಾಗಭಾವವು ಭಾವ ಪದಾರ್ಥವಲ್ಲವೆನ್ನುವುದಾದರೆ, ಅದು ಅಭಾವವೆನ್ನಬೇಕು. ಹಾಗೆಂದರೆ, ಅಭಾವದಿಂದ ಭಾವಪದಾರ್ಥವಾದ ಘಟ ಹುಟ್ಟಿತೆನ್ನಬೇಕು. ಇದು ನ್ಯಾಯ ವಿರುದ್ಧ. ಅಲ್ಲದೆ ಇದನ್ನು ಒಪ್ಪಿದರೆ ಅಭಾವದಿಂದ ಏನು ಬೇಕಾದರೂ ಹುಟ್ಟಬಹುದು. ಇದು ಅನುಭವ ವಿರುದ್ಧವು. ಆದಪ್ರಯುಕ್ತ ಘಟಪ್ರಾಗಭಾವವನ್ನು ಭಾವಪದಾರ್ಥ ವೆಂದೇ ಒಪ್ಪಬೇಕು. ಇನ್ನು ಘಟಪ್ರಾಗಭಾವವು ಅನಾದಿ ಅಲ್ಲವೆಂದು ಹೇಳುವುದಾದರೆ. ಘಟ ಹುಟ್ಟುವುದಕ್ಕೆ ಮುಂಚೆ ಯಾವಾಗಿನಿಂದ ಈ ಘಟಪ್ರಾಗಭಾವವು ಇದ್ದಿತೆಂಬುದನ್ನು ಹೇಳಬೇಕಾಗುವುದು. ಇದನ್ನು ಹೇಳಲು ಸಾಧ್ಯವಿಲ್ಲ. ಯಾವುದಾದರೂ ಹೊಸ ವಿಷಯವನ್ನು ತಿಳಿದುಕೊಂಡವನು 'ನನಗೆ ಇದುವರೆಗೆ ಈ ವಿಷಯ ತಿಳಿದಿರಲಿಲ್ಲ, ಈಗ ತಿಳಿಯಿತು' ಎಂದು ಹೇಳಿದರೆ, ಅವನನ್ನು ಯಾರಾದರೂ, 'ನಿನಗೆ ಯಾವಾಗಿನಿಂದ ತಿಳಿ ದಿರಲಿಲ್ಲ' ಎಂದು ಪ್ರಶ್ನಿಸುವುದಿಲ್ಲ. ಅಂದಮೇಲೆ ಘಟಪ್ರಾಗಭಾವವನ್ನು ಮೂಲಾಜ್ಞಾನದಂತೆ ಅನಾದಿ ಎನ್ನಬೇಕು. ಪುನಃ ಹೇಳುವುದಾದರೆ ಮೂಲಾಜ್ಞಾನವು ಅನಾದಿಭಾವ ರೂಪವಾದಾಗ್ಯೂ, ಬ್ರಹ್ಮದಲ್ಲಿ ಆರೋಪಿತ ವಾಗಿದೆಯಾಗಿ (ಕಲ್ಪಿತವಾಗಿದೆಯಾಗಿ) ಬ್ರಹ್ಮಜ್ಞಾನದಿಂದ ನಿವೃತ್ತವಾಗುವುದು. ಅನಾರೋಪಿತ ಅನಾದಿ ಭಾವಪದಾರ್ಥವೆಂಬುದು, ಅಧಿಷ್ಠಾನಬ್ರಹ್ಮ ಒಂದೇ. ಆದಪ್ರಯುಕ್ತ ಅದೊಂದೇ ಪರಮಾರ್ಥ ನಿತ್ಯ ವಾಗಿರುತ್ತದೆ.

'ಅಹಂ ಬ್ರಹ್ಮಾಸ್ಮಿ' ಎಂಬ ಜ್ಞಾನದಿಂದ ದ್ವೈತಭ್ರಮದ ನಿವೃತ್ತಿಯಾಗಿ ಅಖಂಡೈಕ ರಸಾನಂದವು ಸ್ಫೂರ್ತಿಯಾಗುವುದು.

ಕೇದಾರ ಕ್ಷೇತ್ರದಲ್ಲಿ, ಇಹಲೋಕ ವ್ಯಾಪಾರವನ್ನು ತ್ಯಜಿಸಿ, ಕೈಲಾಸಗಾಮಿಗಳಾಗಲು ಸಿದ್ಧರಾದ ಶಂಕರರು ಈ ಅಖಂಡೈಕ ರಸಾನುಭವವನ್ನು ಪಡೆಯುತ್ತಾ ಅಪ್ಪಣೆ ಕೊಡಿಸಿದ ಈ ಶ್ಲೋಕ ಎಷ್ಟು ಮನೋಹರ ವಾಗಿದೆ ನೋಡಿ.

ಭಸ್ಮೋದ್ಧೂಲನ ಭದ್ರಮಸ್ತು ಭವತೇ। ರುದ್ರಾಕ್ಷಮಾಲೇ ಶುಭಂ।
ಹಾ! ಸೋಪಾನಪರಂಪರೇ। ಗಿರಿಸುತಾಕಾಂತಾಲಯಾಲಂಕೃತೇ ॥
ಆದ್ಯಾರಾಧನ ತೋಷಿತೇನ ವಿಭುನಾ। ಯುಷ್ಮತ್ಸಪರ್ಯಾಸುಖಾ।
ಲೋಕೋಚ್ಛೇದಿನಿ ಮೋಕ್ಷನಾ ಮನಿಮಹಾ। ಮೋಹೇ ನಿಲೀಯಾಮಹೇ ॥

ಇದೇ ಮೋಕ್ಷದ ಅಭಿವ್ಯಕ್ತಿ. ಇಂತಹ ಮಹಾ ವಾಕ್ಯಾರ್ಥಜ್ಞಾನವು ತತ್ತ್ವಂಪದಾರ್ಥಗಳ ಜ್ಞಾನದಿಂದಲೇ ಸಂಭವಿಸುವುದು. ಆ ಪದಾರ್ಥಗಳ ಜ್ಞಾನವು ಆತತ್ತ್ವಂಪದಾರ್ಥಗಳ ನಿರೂಪಣೆಯಿಂದ ಉಂಟಾಗುವುದು.

ಇನ್ನು ಬ್ರಹ್ಮಜ್ಞಾನದಿಂದ, ಅಜ್ಞಾನ ನಿವೃತ್ತಿ ವಿಚಾರ.

ಯಾರ ಮನೆಯಲ್ಲಿ ದೀಪ ಪ್ರಜ್ಜ್ವಲಿಸುವುದೋ, ಆ ಮನೆಯೊಳಗೆ ಅಂಧಕಾರ ತೊಲಗುವುದೇ ವಿನಹಾ, ಅನ್ಯಗೃಹಾಂತರದ ತಮವು ಹೋಗುವುದಿಲ್ಲ. ಹಾಗೆಯೇ ಯಾರ ಅಂತಃಕರಣ ವೃತ್ತಿಯಲ್ಲಿ, ಸ್ವರೂಪಜ್ಞಾನವು ಪ್ರಕಟವಾಗುವುದೋ, ಅವರ ಹೃದಯದೊಳಗಣ ಅಜ್ಞಾನನಾಶವಾಗುವುದು. ಇತರರ ಅಜ್ಞಾನ ಹೋಗುವುದಿಲ್ಲ, ಅಜ್ಞಾನ, ಆವರಣ, ವಿಕ್ಷೇಪ, ಆದಿಯಾದ ಎಲ್ಲಾ ಅವಸ್ಥೆಗಳೂ, ಸಾಭಾಸ ಅಂತಃಕರಣಕ್ಕೆ ಇರುವುದು. ಕೂಟಸ್ಥ ಆತ್ಮನಿಗೆ ಯಾವ ಅವಸ್ಥೆಯೂ ಇಲ್ಲ. ಆದಪ್ರಯುಕ್ತ ಅಂತಃಕರಣ ವೃತ್ತಿಯಲ್ಲಿ ಸ್ವರೂಪಜ್ಞಾನವು ಚೆನ್ನಾಗಿ ಪ್ರತಿಫಲಿಸುವಂತೆ, ಶ್ರವಣ ಮನನಾದಿಗಳನ್ನು ಆಚರಿಸಬೇಕು.

ಕೇವಲ ಶ್ರವಣ ಮಾತ್ರದಿಂದ ನಾನು ಬ್ರಹ್ಮನೆಂಬ ತಿಳಿವಳಿಕೆಯು ಮೂಲಾಜ್ಞಾನವನ್ನು ನಾಶಮಾಡಲಾರದು. ಮನನದ ಅಭಾವವೂ ಮೂಲಾಜ್ಞಾನದ ಇರುವಿಕೆಗೆ ಕಾರಣ. ವೇದಾಂತ ಶ್ರವಣದಿಂದ "ಅಹಂಬ್ರಹ್ಮ" ಎಂಬ ಅಖಂಡಜ್ಞಾನ ಉಂಟಾಗಿದ್ದರೂ, ಅಸಂಭಾವನಾದಿಗಳಿಂದ ಪ್ರತಿಬದ್ಧವಾಗಿರುತ್ತಾ ಮಣಿ ಮಂತ್ರಾದಿಗಳಿಂದ ಪ್ರತಿಬದ್ಧವಾಗಿರುವ ಅಗ್ನಿಯು ಆದರಲ್ಲಿ ಬಿದ್ದಿರುವ ಹುಲ್ಲನ್ನು ಸುಡಲಾರದಂತೆ, ಅಜ್ಞಾನ ನಿವರ್ತಕವಾಗದೇ ಇರುತ್ತದೆ. ಸುಖದುಃಖಾದಿಗಳು ಕೇವಲ ಚೈತನ್ಯಕ್ಕಾಗಲಿ ಅಥವಾ ಕೇವಲ ಅಂತಃಕರಣಾದಿಗಳಿಗಾಗಲೀ, ಇಲ್ಲ. ಕೇವಲ ಅರಶಿನಕ್ಕಾಗಲೀ ಅಥವ ಕೇವಲ ಸುಣ್ಣಕ್ಕಾಗಲಿ, ಕೆಂಪು ಬಣ್ಣವಿಲ್ಲದೆ, ಅವೆರಡರ ಸಂಯೋಗದಿಂದ ಕೆಂಪು ಬಣ್ಣ ತೋರುವಂತೆ, ಶರೀರ, ಇಂದ್ರಿಯ, ಅಂತಃಕರಣಾದಿಗಳನ್ನು ತಾನೆಂದು ಅವಿದ್ಯೆಯಿಂದ ಭಾವಿಸಿದ, ಚೈತನ್ಯದ ಪ್ರತಿಬಿಂಬವಾದ ಜೀವಕ್ಕೆ ಈ ಸುಖ ದುಃಖಾದಿಗಳು ಅನುಭವಕ್ಕೆ ಬರುತ್ತವೆ. ಹೀಗಾಗಿ :—

"ನನಿರೋಧೋ ನಚೋತ್ಪತ್ತಿಃ
ನಬದ್ಧೋ ನಚ ಸಾಧಕಃ
ನಮುಮುಕ್ಷುಃ ನವೈಮುಕ್ತಾಃ
ಇತ್ಯೇಷಾ ಪರಮಾರ್ಥತಾ

(ಕಾರಿಕ) ಎಂಬಂತೆ ಮೂಲಾಜ್ಞಾನ ರೂಪವಾದ ನಿದ್ರೆಯಲ್ಲಿ ಸರ್ವ ಕಲ್ಪನೆಗಳೂ ಇವೆಯೇ ಹೊರ್ತು, ಪರಮಾರ್ಥ ದೃಷ್ಟಿಯಿಂದ ನೋಡಿದರೆ, ಯಾವ ಬಂಧವೂ ಇಲ್ಲ, ಯಾವ ಮುಕ್ತಿಯೂ ಇಲ್ಲ, ಜನಿಸುವುದೂ ಇಲ್ಲ, ಮರಣವೂ ಇಲ್ಲ, ಬದ್ಧನೂ ಇಲ್ಲ, ಸಾಧಕನೂ ಇಲ್ಲ, ಮುಮುಕ್ಷುವೂ ಇಲ್ಲ, ಮುಕ್ತಿಯೂ ಇಲ್ಲ. ಹೀಗೆ ನಿರ್ಗುಣಬ್ರಹ್ಮವು ನಿತ್ಯಮುಕ್ತ. ಆದರೆ ನಾವು ಅಜ್ಞಾನ ದೆಸೆಯಲ್ಲಿ ನಿದ್ರೆಯಲ್ಲಿದ್ದೇವೆ. ಈ ಮೂಲಾಜ್ಞಾನ, ಕಾರ್ಯಾ ವಿದ್ಯೆಗಳನ್ನು ನಿವಾರಣೆ ಮಾಡಿಕೊಳ್ಳಲು ನಮ್ಮಲ್ಲಿರುವ ಪಾಶ ಕ್ಲೇಶಗಳನ್ನು ಕಳೆದುಕೊಳ್ಳಬೇಕು. ನಮಗೆ ಉಂಟಾಗಿರುವ ಪಾಶಗಳು ಯಾವುವೆಂದರೆ :—

(1) ಜ್ಞಾನಕ್ರಿಯಾ ಶಕ್ತಿಗಳನ್ನು ಮುಚ್ಚುವ ದೋಷವಾದ 'ಮಲ'.
(2) ರಾಗದ್ವೇಷಾದಿಗಳಿಗೆ ಕಾರಣವಾದ 'ಮಾಯಾ'.

(3) ಪುಣ್ಯ, ಪಾಪ, ಮಿಶ್ರ ಎಂಬ ತ್ರಿವಿಧ 'ಕರ್ಮ.'
(4) ಅಜ್ಞಾನದಿಂದ ಆಗತಕ್ಕ 'ತತ್ವತಿರೋಧಾನ'.

ನಮ್ಮಲ್ಲಿರುವ ಕ್ಲೇಶಗಳು ಯಾವುವೆಂದರೆ :—

(1) ಅವಿದ್ಯೆ, (2) ಅಸ್ಮಿತ, (3) ರಾಗ, (4) ದ್ವೇಷ, (5) ಅಭಿನಿವೇಶ. ಇವುಗಳಲ್ಲಿ ಮುಖ್ಯವಾದ ಅವಿದ್ಯೆ ವಿಚಾರವನ್ನು ನೋಡೋಣ. ಇದು ಇಲ್ಲವಾದರೆ ಮಿಕ್ಕವೂ ಇಲ್ಲವಾಗುವುವು.

ಅವಿದ್ಯೆಯಲ್ಲಿ 4 ವಿಧಗಳಿವೆ :—

(1) ಅನಿತ್ಯದಲ್ಲಿ ನಿತ್ಯಬುದ್ಧಿ. (2) ಅಶುಚಿಯಲ್ಲಿ ಶುಚಿಬುದ್ಧಿ. (3) ದುಃಖದಲ್ಲಿ ಸುಖಬುದ್ಧಿ. (4) ಅನಾತ್ಮನಲ್ಲಿ ಆತ್ಮಬುದ್ಧಿ. ಇವುಗಳನ್ನು ವಿಚಾರಮಾಡೋಣ.

(1) ಅನಿತ್ಯದಲ್ಲಿ ನಿತ್ಯಬುದ್ಧಿ :-

ಜಗತ್ತೆಲ್ಲಾ ಅನಿತ್ಯವಾಗಿರುವುದು. ಅದನ್ನು ಮಿಥ್ಯೆಯೆಂದು ಸರ್ವಶ್ರುತಿ ಸ್ಮೃತಿಗಳೂ ಹೇಳಿರುವುವು. ಅನುಭವಸಿದ್ಧವೂ ಆಗಿರುವುದು. ಆದರೂ ಇದರಲ್ಲಿ ನಿತ್ಯ ಬುದ್ಧಿಇದೆ. ಇದನ್ನು ಅನುಮಾನಾದಿ ಪ್ರಮಾಣಗಳಿಂದ ಮನನಮಾಡಿ ಬಗೆಹರಿಸಿಕೊಳ್ಳಬೇಕು.

ಹೇಗೆಂದರೆ :— (A) ಗಂಧರ್ವ ನಗರದಂತೆಯೂ, ಸ್ವಪ್ನದಂತೆಯೂ, ಇದು ಪ್ರತ್ಯಕ್ಷಪ್ರಮಾಣದಿಂದ ಅನಿತ್ಯ.

(B) ರಜ್ಜುವಿನಲ್ಲಿ ಸರ್ಪವನ್ನು ಕಲ್ಪಿಸಿರುವಂತೆ, ಬ್ರಹ್ಮನಲ್ಲಿ ಇದು ಕಲ್ಪಿತವೆಂದು ಅನುಮಾನದಿಂದಲೂ ಇದು ಅನಿತ್ಯ.

(C) 'ನೇಹನಾನಾಸ್ತಿ' "ನೇತಿ, ನೇತಿ" ಇತ್ಯಾದಿ ಶ್ರುತಿರೂಪವಾದ ಪ್ರಮಾಣದಿಂದಲೂ ಅನಿತ್ಯ.

(D) "ಸ್ವಪ್ನೋಪಮಮಿದಂ ಸರ್ವಂ" ಇಂತಹ ಉಪಮಾನದಿಂದಲೂ ಇದು ಅನಿತ್ಯ

(E) ಆತ್ಮಜ್ಞಾನದಿಂದ ಇದು ನಿವೃತ್ತಿ ಯಾಗುವುದು ನಿತ್ಯವಸ್ತುವಾಗಿದ್ದರೆ ಜ್ಞಾನದಿಂದ ನಿವೃತ್ತಿ ಯಾಗುತ್ತಿರಲಿಲ್ಲ. ಹೀಗೆಂಬ ಅರ್ಥಾಪತ್ತಿಯಿಂದಲೂ ಅನಿತ್ಯ.

(F) ಪರಮಾರ್ಥವಾಗಿ ಜಗತ್ತು ನಿತ್ಯವಾಗಿ ಇದ್ದರೆ, ವ್ಯವಹಾರೀ ಪ್ರತೀತಿಯಂತೆ ಅದು ಪರಮಾರ್ಥವಾಗಿ ತೋರುತ್ತಿರಬೇಕು ಹಾಗಿಲ್ಲವಾಗಿ, ಅನುಪಲಬ್ಧಿಯಿಂದಲೂ ಜಗತ್ತು ಅನಿತ್ಯ.

ಹೀಗಾಗಿ, ಈ ಜಗತ್ತಿನಲ್ಲಿ ನಮಗಿರುವ ನಿತ್ಯತ್ವ ಬುದ್ಧಿಯೇ ಕಾರ್ಯಾವಿದ್ಯೆಯು. ಇದನ್ನು ಬಿಡಬೇಕು.

(2) ಅಶುಚಿಯಲ್ಲಿ ಶುಚಿಬುದ್ಧಿ :—

ಶರೀರಾದಿಗಳು ಅಶುಚಿ ಇದರಲ್ಲಿ ಶುಚಿತ್ವ ಬುದ್ಧಿಯಿದೆ. ಇದನ್ನು ಬಿಡಬೇಕು. ಅವಿದ್ಯೆಯ ಕಾರ್ಯವಾದ ಮಲವು ಅನ್ನವೆಂಬ ಜಡದ್ರವ್ಯದ ಪರಿಣಾಮವೆಂದೂ, ಅದು ಅನಾತ್ಮವೆಂದೂ ತಿಳಿಯುತ್ತೇವೆ. ಹಾಗೆಯೇ ಅನ್ನದ ಪರಿಣಾಮವೇ ಆದ ನಮ್ಮ ದೇಹವನ್ನು ಸಾಯುವವರೆಗೂ ನಮ್ಮ ದೇಹ, ನಾವೇ ಅದು ಎಂದು ಅಭಿಮಾನಿಸುತ್ತೇವೆ. ಅದೇ ದೇಹದ ತಲೆಯನ್ನೇ ನಾಯಿಯು ಕಾಲಿನಿಂದ ಹಿಡಿದುಕೊಂಡು,

"ಈ ಹೆಣ ನನ್ನದು, ಇದರ ಸಮೀಪಕ್ಕೆ ನಿಮ್ಮನ್ನು ಬರಮಾಡಿಸಲಾರೆನು" ಎಂದು ಸೂಚಿಸುವಂತೆ, ಉಳಿದ ನಾಯಿಗಳಿಗೆ ಬೊಗಳುತ್ತದೆ. ಒಮ್ಮೆ ನಮ್ಮದಾದ ದೇಹವು, ಇನ್ನೊಮ್ಮೆ ನಾಯಿಯದಾಗುತ್ತದೆ. ಹೀಗಿರುವುದರಿಂದ ಇದರಲ್ಲಿ ಅಭಿಮಾನವನ್ನು ಬಿಡಬೇಕು.

(3) ದುಃಖದಲ್ಲಿ ಸುಖಬುದ್ಧಿ :—

ಇಂದ್ರಿಯಗಳ ಸಂಬಂಧವನ್ನು ಪಡೆದ ವಿಷಯಗಳೆಲ್ಲವೂ ದುಃಖರೂಪವೇ. ಇಂಥಾದ್ದರಲ್ಲಿ ಸುಖಬುದ್ಧಿ ಯಾವುದೋ ಅದು ಅವಿದ್ಯೆಯ ಕಾರ್ಯ. ಇಂದ್ರಿಯಗಳಿಗೂ ಶಬ್ದಾದಿ ವಿಷಯಗಳಿಗೂ ಉಂಟಾಗುವ ಸಂಯೋಗದಿಂದ ಸುಖದುಃಖಾದಿಗಳು ಬರುತ್ತವೆ. ಮನಸ್ಸಿನಿಂದ ಈ ಸಂಯೋಗವಾಗದಂತೆ ನೋಡಿಕೊಳ್ಳಬೇಕು.

(4) ಅನಾತ್ಮನಲ್ಲಿ ಆತ್ಮಬುದ್ಧಿ :—

ಅನಾತ್ಮರೂಪವಾದ ಪಂಚಕೋಶಗಳಲ್ಲಿ ಆತ್ಮಬುದ್ಧಿ ಇರುವುದೇ ಅವಿದ್ಯೆಯ ಕಾರ್ಯ. ಈ ಪಂಚಕೋಶಗಳೂ ನಾನಲ್ಲವೆಂದು ತಿಳಿದು ಅವುಗಳ ಅಭಿಮಾನ ಬಿಡಬೇಕು. ಈ ರೀತಿಯಾದ ಸಾಧನಗಳನ್ನು ವ್ಯಾಸರು ಬ್ರಹ್ಮಸೂತ್ರದಲ್ಲಿ ಪ್ರಾರಂಭದಲ್ಲೇ

'ಅಥಾತೋ ಬ್ರಹ್ಮಜಿಜ್ಞಾಸಾ' ಎಂದು ಹೇಳುವುದರಲ್ಲಿ ಸೂಚಿಸಿದ್ದಾರೆ. ಬ್ರಹ್ಮವಿಚಾರ ಮಾಡುವವನು ಚತುಷ್ಟಯ ಸಾಧನವನ್ನು ಹೊಂದಿ ಉತ್ಕಟ ಜಿಜ್ಞಾಸುವಾಗಿರಬೇಕು ಎಂದು. ಇದಕ್ಕೆ ಶಂಕರರು ಭಾಷ್ಯ ಮಾಡಿರುತ್ತಾರೆ. ಈ ಸಾಧನ ಚತುಷ್ಟಯಗಳ್ಯಾವುವೆಂದರೆ (1) ನಿತ್ಯಾನಿತ್ಯ ವಸ್ತು ವಿವೇಕ, (2) ವೈರಾಗ್ಯ, (3) ಶಮಾದಿಷಟ್ ಸಂಪತ್ತು, (4) ಮುಮುಕ್ಷುತ್ವ. ಇಷ್ಟನ್ನು ಸಂಪಾದಿಸಿದ ಮೇಲೆ, ಶ್ರವಣ ಮನನ ನಿದಿಧ್ಯಾಸನಗಳಿಂದ ಆತ್ಮಸಾಕ್ಷಾತ್ಕಾರವನ್ನು ಹೊಂದಲು ಸಾಧ್ಯವಾಗುತ್ತದೆ ಇದನ್ನೇ ಬೃಹದಾರಣ್ಯಕದ ವಾಕ್ಯವು ಮೈತ್ರೇಯೀ ಬ್ರಾಹ್ಮಣದಲ್ಲಿ 'ಆತ್ಮಾವಾ ಅರೇ ದ್ರಷ್ಟವ್ಯಶ್ರೋತವ್ಯೋ ನಿದಿಧ್ಯಾಸಿತವ್ಯೋ' ಎಂದು ಹೇಳಿದೆ.

ಯೋಗಸಾಧನಗಳು :—

ಯೋಗವಾಸಿಷ್ಠದಲ್ಲಿ (1) ಸತ್ಯವೆಂಬುದು ಎರಡನೆಯದಿಲ್ಲದ ಒಂದೇ ಎಂಬ ದೃಢಜ್ಞಾನ ಸಂಪಾದನೆ, (2) ಪ್ರಾಣವಾಯುಗಳ ಸ್ವಾಧೀನತೆ ಮತ್ತು ಸಮತೆ, (3) ಮನಸ್ಸಿನ ಸ್ತಬ್ಧತೆ, (4) ಸಮಾಧಾನ, ಶಮ, ಇವುಗಳೇ ಆತ್ಮಸಾಕ್ಷಾತ್ಕಾರಕ್ಕೆ ಸಾಧನಗಳೆಂದು ಹೇಳಿರುತ್ತದೆ.

ರಾಮಕರ್ಣಾಮೃತದ ಪ್ರಸ್ತಾವನೆಯಲ್ಲೂ ಅದರ 'ಯೋಗ ಖಂಡದ' ಅನುವಾದದಲ್ಲೂ ಯೋಗರೀತ್ಯಾ ಅಷ್ಟಾಂಗ ಸಾಧನಗಳನ್ನು ವಿಸ್ತಾರವಾಗಿ ಹೇಳಿದೆ– ಆದರೂ ಕೆಲವು ವಿಷಯಗಳನ್ನು ಇಲ್ಲಿಯೂ ತಿಳಿಸಿದೆ.

ಯೋಗದಲ್ಲಿ, (1) ಹಠಯೋಗ, (2) ಲಯಯೋಗ ಅಥವಾ ಕುಂಡಲಿನೀ ಶಕ್ತಿಯೋಗ, (3) ರಾಜಯೋಗ ಅಥವಾ ಜ್ಞಾನಯೋಗ ಎಂಬ ಅನೇಕ ಭೇದಗಳಿವೆ.

ಮುಮುಕ್ಷುಗಳು ಇವುಗಳಲ್ಲಿ ಮುಖ್ಯವಾಗಿ ರಾಜಯೋಗವನ್ನೇ ಸಾಧಿಸುವುದು ಒಳ್ಳಿತು.

ಹಠಯೋಗಿಯು ದೇಹದಿಂದಲೂ, ಪ್ರಾಣದಿಂದಲೂ ಸಾಧನ ಆರಂಭ ಮಾಡಿದರೆ, ರಾಜಯೋಗಿಯು ಮನಸ್ಸಿನಿಂದಲೇ ಸಾಧನೆಯನ್ನು ಪ್ರಾರಂಭಿಸುವನು. ಅವನು ಬುದ್ಧಿಶಕ್ತಿಯನ್ನೂ, ಇಚ್ಛಾಶಕ್ತಿಯನ್ನೂ ಉಪಯೋಗಿಸುವನು. ಅವನು ಮನಸ್ಸಿನ ಸ್ವಭಾವಗಳ ಮರ್ಮವನ್ನೂ ಅದನ್ನು ವಶಪಡಿಸಿಕೊಳ್ಳುವ ರೀತಿಯನ್ನೂ ತಿಳಿದುಕೊಂಡು ಅದರಂತೆ ನಡೆಯುವನು.

ಪ್ರಾಣಿಗಳ ಶರೀರದಲ್ಲಿ ಮೂಲಾಧಾರ ಚಕ್ರದಲ್ಲಿ 'ಅ'ಕಾರ ರೂಪವಾಗಿ ಕುಂಡಲಿನಿಯು, ಪ್ರಳಯಕಾಲದಲ್ಲಿ, ಗಡಿಯಾರದ ಸ್ಪ್ರಿಂಗಿನಂತೆ ಮುದುರಿಕೊಂಡು ಇದ್ದು ಸೃಷ್ಟಿಕಾಲದಲ್ಲಿ ಪುನಃ ಬಿಚ್ಚಿಕೊಳ್ಳುತ್ತದೆ. ಪ್ರಾಣಿಗಳ ಕರ್ಮಾನುಗುಣವಾಗಿ, ಪ್ರಪಂಚದ ವ್ಯಾಪಾರವನ್ನು ನಡೆಸುತ್ತಾ, ಸೃಷ್ಟಿಯನ್ನೆಲ್ಲಾ ಮಾಡಿ ಜೀವರಲ್ಲಿ ಮೂಲಾಧಾರ ಚಕ್ರದಲ್ಲಿ 'ಅ'ಕಾರದಲ್ಲಿ ಸೇರಿ ಮಲಗಿ ನಿದ್ರಿಸುತ್ತದೆ. ಹೀಗೆ, ಪ್ರಾಣಶಕ್ತಿಸಹಿತ ಸರ್ವಶಕ್ತಿಗಳಿಗೂ ಮೂಲವಾದ ಸೃಷ್ಟಿಶಕ್ತಿಯು ನಿದ್ರಿತ ವಿಶ್ರಾಂತ ರೂಪವೇ ದೇಹದಲ್ಲಿ ಮೂಲಾಧಾರದಲ್ಲಿ 'ಅ'ಕಾರ ರೂಪ ಕುಂಡಲಿನಿ. (ಚಿದಗ್ನಿ ಅಂದರೆ Spirit Fire ಅಥವಾ Cosmic Electricity ಅಂದರೆ ವಿಶ್ವವ್ಯಾಪಿ ವಿದ್ಯುಚ್ಛಕ್ತಿ.)

ಬ್ರಹ್ಮಾಂಡದಲ್ಲಿರುವ ಸಮಸ್ತ ತತ್ವಗಳೂ, ಸಪ್ತಲೋಕಗಳೂ, ಬ್ರಹ್ಮಾದಿ ದೇವತೆಗಳೂ, ಪಿಂಡಾಂಡದ ಮೂಲಾಧಾರಾದಿ ಸಪ್ತಚಕ್ರಗಳಿಲ್ಲಿವೆ. ಮೂಲಾಧಾರವೇ ಭೂಲೋಕ. ಸ್ವಾಧಿಷ್ಠಾನವು ಭುವರ್ಲೋಕ. ಮಣಿಪೂರವು ಸುವರ್ಲೋಕ. ಅನಾಹತವು ಜನೋಲೋಕ. ವಿಶುದ್ಧವು ತಪೋಲೋಕ. ಆಜ್ಞಾಚಕ್ರವು ಮಹರ್ಲೋಕ. ಸಹಸ್ರಾರವೇ ಸತ್ಯಲೋಕ. ಪ್ರತಿ ಚಕ್ರವೂ ಕಮಲವೆಂದೂ ಅದರ ಸುತ್ತಲೂ ಇರುವ ಮುಖ್ಯ ಸೂಕ್ಷ್ಮನಾಡಿಗಳು ಕಮಲದಳಗಳೆಂದೂ ಹೇಳಲ್ಪಡುವುವು. ಎಲ್ಲಾ ಚಕ್ರಗಳ ಒಟ್ಟು ದಳಗಳು ಸಂಸ್ಕೃತ ಅಕ್ಷರಮಾಲಿಕೆಯ 50 ಅಕ್ಷರಗಳಿಗೆ ಸರಿಯಾಗಿ 50 ಇರುವುವು. ಈ ದಳಗಳು ಸೂಕ್ಷ್ಮವಾದ ಶಬ್ದಶಕ್ತಿಯನ್ನು ಪಡೆದಿರುತ್ತವೆ. ಪ್ರತಿ ಪ್ರಾಣಿಯ ಬೆನ್ನುಹುರಿಯೊಳಗಿರುವ 'ಜ್ಞಾನವಾಹೀ' 'ಕ್ರಿಯಾವಾಹೀ' ನಾಡಿಗಳೇ ಯೋಗಿಗಳ 'ಇಡಾ' 'ಪಿಂಗಳಾ' ನಾಡಿಗಳು.

ಹೊರಗಿನಿಂದ ಬರುವ ಶಬ್ದಾದಿ ವಿಷಯಗಳ ಇಂದ್ರಿಯ ಸಂವೇದನೆಯು 'ಇಡಾ' ನಾಡಿಯ ಮೂಲಕ ಮೆದುಳಿನಲ್ಲಿ ಒಳಗೆ ಮನಸ್ಸಿಗೂ, ಮತ್ತು ಆ ಮೆದುಳಿನಲ್ಲಿ ಪ್ರಕಟವಾಗುವ ಮನಸ್ಸಿನ ಪ್ರತಿಕ್ರಿಯಾ ಶಕ್ತಿ ಪ್ರವಾಹವು, 'ಪಿಂಗಳಾ'ನಾಡಿಯ ಮೂಲಕ ಹೊರಗೂ ಹರಿಯುತ್ತವೆ. ಒಳಹೊರಗಿನ ಶಕ್ತಿವಾಹಿನಿಗಳಿಗೆ ಇವುಗಳೇ ಮುಖ್ಯನಾಳಗಳು. ಬೆನ್ನುಹುರಿಯ ಮಧ್ಯದಲ್ಲಿ 'ಸುಷುಮ್ನಾ' ಎನ್ನುವ ಸೂಕ್ಷ್ಮವಾದ ಒಂದು ನಾಡಿ ಇದೆ.

ಮೂಲಾಧಾರ ಚಕ್ರದಲ್ಲಿರುವ ಸುಷುಮ್ನಾನಾಡಿಯ ಕವಾಟವು ಮುಚ್ಚಿಕೊಂಡಿದೆ. ಇದರ ಕ್ರಿಯೆ ಅಭಿವ್ಯಕ್ತವಾಗಿರುವುದಿಲ್ಲ. ಆದರೆ ಶರೀರದ ಬೇರೆ ಬೇರೆ ಭಾಗಗಳಿಗೆ ಶಕ್ತಿಯನ್ನು ಪ್ರಸರಿಸುವ ಇಡಾ ಪಿಂಗಾಳಾ ನಾಡಿಗಳ ಕ್ರಿಯೆಯು ಅಭಿವ್ಯಕ್ತವಾದುದ್ದಾಗಿದೆ. ಎಡಗಡೆಯ ಮೂಗಿನ ರಂಧ್ರದಿಂದ ಬಿಳಿಯ ಬಣ್ಣದ ಚಂದ್ರ ನಾಡಿಯಾದ ಇಡಾ ನಾಡಿಯೂ, ಬಲಗಡೆಯ ಮೂಗಿನ ರಂಧ್ರದಿಂದ ಕೆಂಪು ಬಣ್ಣವುಳ್ಳ ಸೂರ್ಯ ನಾಡಿಯಾದ ಪಿಂಗಳಾ ನಾಡಿಯೂ ಹರಿದಿದೆ.

ಯೋಗಿಗೆ ಮಾತ್ರ ಸುಷುಮ್ನಾನಾಡಿಯ ಬಾಗಿಲು ತೆರೆಯುತ್ತದೆ. ಬೆನ್ನುಹುರಿ (ಮೇರುದಂಡ) ಒಳಗಿರುವ ಸುಷುಮ್ನಾನಾಡಿಯು ಅಗ್ನಿಸ್ವರೂಪವಾದುದು.

ಇಂದ್ರಿಯಗಳಿಂದಲೂ ಅಂತಃಕರಣದಿಂದಲೂ ಅನುಭವವಾದ ಸಕಲ ವಿಷಯಗಳೂ ಸಂಸಾರ ರೂಪದಿಂದ 'ಅ'ಕಾರರೂಪ ಕುಂಡಲಿನಿಯಲ್ಲಿ ಸಂಗ್ರಹವಾಗಿರುತ್ತದೆ. ಕುಂಡಲಿನಿಯಲ್ಲಿರುವ ಎಲ್ಲಾ ಶಕ್ತಿಗಳನ್ನೂ ಸುಷುಮ್ನೆಯ ಮೂಲಕ ಸಹಸ್ರಾರಕ್ಕೆ ಸೇರಿಸುವುದಕ್ಕೇ ಕುಂಡಲಿನೀ ಶಕ್ತಿಯೋಗವೆಂದು ಹೆಸರು.

ಆದರೆ, ಭಕ್ತಿಯಿಂದಲೂ, ತತ್ವಜ್ಞಾನವಿಚಾರ ಶಕ್ತಿಯಿಂದಲೂ, ಈ ಕುಂಡಲಿನೀ ಶಕ್ತಿಯನ್ನು 'ಅ'ಕಾರದಲ್ಲಿ ಜಾಗ್ರತಗೊಳಿಸಿ ಮೇಲಕ್ಕೇರಿಸಬಹುದು. ಇದಕ್ಕೆ 'ರಾಜಯೋಗ' ಅಥವಾ 'ಜ್ಞಾನಯೋಗ' ಅಥವಾ 'ಅಷ್ಟಾಂಗಯೋಗ' ಎಂದು ಕರೆಯುತ್ತಾರೆ. ಇದೇ ಉತ್ತಮವಾದ ಯೋಗಸಾಧನವು.

ಈ ಸಾಧನೆಯಲ್ಲಿ ಧಾರಣ, ಧ್ಯಾನ, ಸಮಾಧಿಗಳು ಮೂರೂ ಒಟ್ಟುಗೂಡಿದ ಸಂಯಮವೇ ಯೋಗ ವೆನ್ನಿಸುವುದು.

ಇದರಲ್ಲಿ :—

(1) ಯಮ, ನಿಯಮಗಳ ಸಾಧನೆಗಳಿಂದ ಮೊದಲು ಚಿತ್ತಶುದ್ಧಿಯನ್ನು ಸಂಪಾದಿಸಬೇಕು.

(2) ಅನಂತರ ಆಸನ, ಪ್ರಾಣಾಯಾಮಗಳ ಅಭ್ಯಾಸದಿಂದ ಶರೀರದ ಮತ್ತು ಮನಸ್ಸಿನ ಸ್ಥಿರತೆಯನ್ನೂ ನಾಡಿಗಳ ಶುದ್ಧಿಯನ್ನೂ ಗಳಿಸಬೇಕು.

(3) ಅನಂತರ ಪ್ರತ್ಯಾಹಾರ, ಧಾರಣ, ಧ್ಯಾನಗಳಿಂದ ಸಮಾಧಿಸ್ಥಿತಿಯನ್ನು ಸಂಪಾದಿಸಬೇಕು.

(4) ಸಂಯಮ ಬಲದಿಂದ ಅನೇಕ ಸಿದ್ಧಿಗಳನ್ನು ಗಳಿಸಿದರೂ, ಆ ಸಿದ್ಧಿರೂಪವಾಗಿ ಮನಸ್ಸಿನಲ್ಲಿ ಏಳುವ ಎಲ್ಲಾ ವೃತ್ತಿಗಳನ್ನೂ ತಡೆಹಿಡಿದು ಮುಂದುವರಿಯಬೇಕು.

(5) ಹೀಗೆಯೇ ಮುಂದುವರಿದರೆ, ಸಮಾಧಿಸ್ಥಿತಿಯಲ್ಲಿ, ಯೋಗಿಯು ಬ್ರಹ್ಮೈಕ್ಯಜ್ಞಾನವನ್ನು ಪಡೆಯುವನು. ಅವನ ಅಜ್ಞಾನ ಹೃದ್ಗ್ರಂಥಿಯು ಕತ್ತರಿಸಿಹೋಗುತ್ತದೆ.

ಚಕ್ರಗಳಲ್ಲಿ ಆಜ್ಞಾ ಮತ್ತು ಸಹಸ್ರಾರ ಚಕ್ರಗಳು ಮುಖ್ಯವಾದವುಗಳು.

ಆಜ್ಞಾಚಕ್ರವೇ ಈಶ್ವರನ ಹಣೆಗಣ್ಣೆಂಬುದು. ಇದರ ಉನ್ಮೀಲನದಿಂದ ಯೋಗಿಯು ತ್ರಿನೇತ್ರನಾಗುವನು. ಇದೇ ದಿವ್ಯದೃಷ್ಟಿಯ ಸಾಧನವು (Organ of clairvoyance). ಇದರ ಮೇಲೆ ಮಸ್ತಕದ ಮುಂಭಾಗ ದಲ್ಲಿ ಬ್ರಹ್ಮರಂಧ್ರದಲ್ಲಿ ಸಹಸ್ರಾರ ಚಕ್ರವಿದೆ. ಆಜ್ಞಾಚಕ್ರದಲ್ಲಿ ಸಮಸ್ತ ಶಕ್ತಿಗಳೂ ಅತಿಸೂಕ್ಷ್ಮತ್ವವನ್ನು ಹೊಂದಿ ಕೊನೆಗೆ ಸಹಸ್ರಾರದಲ್ಲಿ ಕಳಾರೂಪದಲ್ಲಿ ಪರಬ್ರಹ್ಮನಲ್ಲಿ ಸೇರಿಹೋಗುವುವು.

ಒಟ್ಟಿನಲ್ಲಿ ಬ್ರಹ್ಮನನ್ನು 'ಅ'ಕಾರ, 'ಉ'ಕಾರ , 'ಮ'ಕಾರಗಳೆಂಬ ಮೂರು ಮಾತ್ರೆಗಳುಳ್ಳ 'ಓಂ' ಎಂಬ ಅಕ್ಷರದ ಮೂಲಕವಾಗಿ ಉಪಾಸನೆ ಮಾಡಿ, ಬ್ರಹ್ಮರೂಪವಾದ ಪ್ರಣವವನ್ನು ತಿಳಿದುಕೊಂಡು ಮೂಲಾಧಾರಾದಿ ಸಪ್ತ ಚಕ್ರಾರ್ಥಗಳನ್ನು ತಾನೇ ಎಂಬ ಜ್ಞಾನದಿಂದ ತಿಳಿದು ತಾನೇ ಆಗಿರುವಂಥಾದ್ದೇ 'ಜ್ಞಾನಯೋಗವು'. ಜ್ಞಾನದ ಪ್ರಕಾಶವೇ ಯೋಗಾಂಗವು. ಜ್ಞಾನವೇ ಯೋಗವು. ಉಭಯವೂ ತಾನೆಂತಲೂ, ತಾನೆಂಬ ಭಾವನೆಯು ತನಗೆ ಅಭಿನ್ನವಾದ್ದರಿಂದ, ಆ ಭಾವನೆಯೇ ಜ್ಞಾನಯೋಗವೆಂತಲೂ ತಿಳಿಯಬೇಕು.

ಅಲ್ಲದೆ, ಸಪ್ತಭೂಮಿಕೆಗಳಾದ. (1) ಶುಭೇಚ್ಛಾ, (2) ಸುವಿಚಾರಣಾ, (3) ತನುಮಾನಸಾ, (4) ಸತ್ವಾಪತ್ತಿ, (5) ಅಸಂಸಕ್ತಿ, (6) ಪದಾರ್ಥಭಾವಿನಿ, (7) ತುರೀಯಗ, ಇವುಗಳಿಂದಲೂ ಆತ್ಮ ಸಾಕ್ಷಾತ್ಕಾರ ಪಡೆಯಬಹುದು.

ಜ್ಞಾನಿಗಳು ಹೇಳುವಂತೆ ಚಕ್ರಾನುಭವಗಳಿಗೂ ಸಪ್ತಭೂಮಿಕಾನುಭವಗಳಿಗೂ ಅಷ್ಟಾಂಗ ಯೋಗ ಸಾಧನೆಗಳಿಗೂ ಏನೂ ಭೇದವಿಲ್ಲ. ಎಲ್ಲವೂ ಸಮ್ಮತವಾದ ಸಾಧನಗಳು. (1) ಅಷ್ಟಾಂಗ ಯೋಗ ಸಾಧನೆ ಗಳನ್ನು ರಾಮ ಕರ್ಣಾಮೃತದ ಅನುವಾದದಲ್ಲಿ ವಿಸ್ತರಿಸಿ ತಿಳಿಸಿದೆ.

(2) ಇನ್ನು ಸಪ್ತ ಭೂಮಿಕೆಗಳೆಂಬ ಸಾಧನಗಳನ್ನೂ, (3) ಸಾಧನ ಚತುಷ್ಟಯಗಳೆಂಬ ಸಾಧನಗಳನ್ನೂ ವಿವರಿಸೋಣ. ಮೇಲೆ ಹೇಳಿದ ಮೂರರಲ್ಲಿ ಯಾವುದನ್ನಾದರೂ ಸಾಧಕನು ತನ್ನ ಶಕ್ತಿ ಅಭಿರುಚಿಗಳಿಗೆ ಅನುಸಾರವಾಗಿ ಉಪಯೋಗಿಸಿಕೊಳ್ಳಬಹುದು.

ಸಪ್ತ ಭೂಮಿಕೆಗಳು : (1) ಶುಭೇಚ್ಛೆ :— ಆತ್ಮನನ್ನು ತಿಳಿಯುವದರಲ್ಲಿ ಉಂಟಾಗುವ ತೀವ್ರೇಚ್ಛೆ. ಇದು ಪೂರ್ವಜನ್ಮದ ಅಥವಾ ಈ ಜನ್ಮದ ನಿಷ್ಕಾಮ ಕರ್ಮದಿಂದಲೂ, ಉಪಾಸನೆಯಿಂದಲೂ ದೊರೆಯುತ್ತದೆ. ಶುದ್ಧವಾದ ಮತ್ತು ಏಕಾಗ್ರವಾದ ಚಿತ್ತ ಉಳ್ಳವರಿಗೆ ವಿವೇಕ, ವೈರಾಗ್ಯ, ಶಮಾದಿ ಷಟ್ಸಂಪತ್ತಿ ಮೋಕ್ಷೇಚ್ಛೆಗಳೆಂಬ ಸಾಧನಗಳುಂಟಾಗಿ, ಆದರಿಂದ ಈ ಶುಭೇಚ್ಛೆ ಫಲಿಸುವುದು.

(2) ಸುವಿಚಾರಣಾ :— ಗುರುವಿಗೆ ಶರಣಾಗತನಾಗಿ, ಗುರುವಿನಿಂದ ಜೀವಬ್ರಹ್ಮದ ಏಕತ್ವವನ್ನು ಬೋಧಿಸುವ ವೇದಾಂತ ವಾಕ್ಯವನ್ನು ಶ್ರವಣಮಾಡಿ, ಅದರ ಅರ್ಥವನ್ನು ತನ್ನ ಮನದಲ್ಲಿ ದೃಢಪಡಿಸುವುದಕ್ಕಾಗಿ ಅನೇಕ ಯುಕ್ತಿಗಳಿಂದ ಮನನ ಮಾಡುವುದು.

(3) ತನುಮಾನಸಾ :— ಪರಬ್ರಹ್ಮನ ಏಕತ್ವರೂಪವಾದ ಅರ್ಥವನ್ನು ನಿರಂತರ ಚಿಂತನ ರೂಪವಾದ ನಿದಿಧ್ಯಾಸನದಿಂದ ಧ್ಯಾನಿಸುವುದೇ 'ತನುಮನಾಸಾ'.

(4) ಸತ್ವಾಪತ್ತಿ :— ಶ್ರವಣ ಮನನ ನಿದಿಧ್ಯಾಸನಗಳಿಂದ ಸಂಶಯ ವಿಪರ್ಯಗಳು ಹೋಗಿ ನಿರ್ವಿಕಲ್ಪ ಸ್ಥಿತಿಯಾಗಲು, ಶುದ್ಧ ಸತ್ತ್ವಗುಣವು ಯಾವ ಚಿತ್ತದಲ್ಲಿ ಪ್ರಾಪ್ತವಾಗುವುದೋ ಅದು ಸತ್ವಾಪತ್ತಿ.

(5) ಅಸಂಸಕ್ತಿ :— ನಿರ್ವಿಕಲ್ಪ ಸಮಾಧಿಯಲ್ಲಿ ಅಹಂಕಾರ ಮಮಕಾರಗಳು ಹೋಗಿ ಆಸಕ್ತಿ ಅಭಾವವಾಗುವುದೇ ಅಸಂಸಕ್ತಿ.

(6) ಪದಾರ್ಥ ಭಾವನಿ :— ನಿರ್ವಿಕಲ್ಪ ಸಮಾಧಿಯ ಅಭ್ಯಾಸದಿಂದ ಸರ್ವಪದಾರ್ಥಗಳೂ ಅಧಿಷ್ಠಾನ ಬ್ರಹ್ಮರೂಪದಿಂದ ಪ್ರತೀತವಾಗಲು, ಪದಾರ್ಥ ಅಭಾವ ಅಂದರೆ ಪ್ರತೀತಿಯಾಗಲು, ಪದಾರ್ಥ ಭಾವನಿ.

(7) ತುರೀಯಗಾ :— ಆ ಅಭಾವರೂಪ ಪ್ರತೀತಿಯೂ ಉಂಟಾಗದೆ, ತನ್ನಿಂದಲೂ ಪರರಿಂದಲೂ ಉತ್ಥಾನರಹಿತವಾದ ತುರೀಯ ಪದದಲ್ಲಿ ಮನವು ಸ್ಥಿರವಾಗಲು ತುರೀಯಗಾ.

1, 2, 3 ನೇ ಭೂಮಿಕೆಗಳು : ತತ್ವಜ್ಞಾನದ ಸಾಧನ.

4 ನೇ ಭೂಮಿಕೆ ಜೀವನ್ಮುಕ್ತಿ ಮತ್ತು ವಿದೇಹ ಕೈವಲ್ಯಕ್ಕೆ ಸಾಧನ.

5, 6, 7 ನೇ ಭೂಮಿಕೆಗಳು ಜೀವನ್ಮುಕ್ತಿಯ ವಿಲಕ್ಷಣಾನಂದಕ್ಕೆ ಸಾಧನ.

ಸಾಧನ ಚತುಷ್ಟಯ

(1) ನಿತ್ಯಾನಿತ್ಯ ವಸ್ತುವಿವೇಕ :—ಆತ್ಮನು ನಿತ್ಯನು ಮತ್ತು ಸುಖರೂಪನು. ಅವನಿಗೆ ಭಿನ್ನವಾದ ಈ ದೃಶ್ಯ ಪ್ರಪಂಚವೆಲ್ಲವೂ ಅನಿತ್ಯ ಮತ್ತು ದುಃಖರೂಪವಾದುದು. ಹೀಗೆಂದು ಅರಿಯುವುದೇ ವಿವೇಕವು. ಇದನ್ನೇ ಶ್ರೀಕೃಷ್ಣನು ಗೀತೆಯಲ್ಲಿ

'ಅಸಕ್ತಿರನಭಿಷ್ವಂಗಃ ಪುತ್ರದಾರಗೃಹಾದಿಷು' ಎಂದು ಹೇಳಿದ್ದಾನೆ. ಈ ವಿವೇಕದಿಂದ ವೈರಾಗ್ಯವು ಸಿದ್ಧಿಸುವುದು.

(2) ವೈರಾಗ್ಯ :—ಈ ಲೋಕದಿಂದ ಹಿಡಿದು ಬ್ರಹ್ಮಲೋಕದ ಪರಿಯಂತ ಕಾಣುವ ಎಲ್ಲಾ ಭೋಗಗಳೂ, ನಶ್ವರವೂ ದುಃಖರೂಪವೂ ಎಂದು ತಿಳಿದು ಅವುಗಳನ್ನು ತ್ಯಜಿಸುವುದು ಮತ್ತು ಆ ಭೋಗಗಳಲ್ಲಿ ಆಶೆಯನ್ನು ಪೂರ್ಣವಾಗಿ ಬಿಡುವುದು.

(3) ಶಮಾದಿ ಷಟ್‌ಸಂಪತ್ತಿ :—ಇವುಗಳು (1) ಶಮ, (2) ದಮ, (3) ಶ್ರದ್ಧಾ, (4) ಸಮಾಧಾನ, (5) ಉಪರತಿ, (6) ತಿತಿಕ್ಷಾ ಎಂಬುವುಗಳು.

ಶಮ :—ವೇದಾಂತ ಶ್ರವಣಕ್ಕೆ ವಿರುದ್ಧವಾದ ಲೌಕಿಕ ವ್ಯಾಪಾರಗಳಿಂದ ಮನಸ್ಸನ್ನು ತಿರೋಧಾನ ಮಾಡುವುದು.

ದಮ :—ಪ್ರಾಣಾಯಾಮ ಪೂರ್ವಕವಾಗಿ ಬಾಹ್ಯೇಂದ್ರಿಯಗಳನ್ನು ನಿಗ್ರಹಮಾಡುವುದು.

ಶ್ರದ್ಧಾ:—ವೇದದಲ್ಲಿ, ಗುರುವಿನ ವಾಕ್ಯದಲ್ಲಿ ವಿಶ್ವಾಸವಿಡುವುದು. ಗೀತೆಯಲ್ಲಿ 'ಶ್ರದ್ಧಾವಾನ್ ಲಭತೇ ಜ್ಞಾನಂ' ಎಂದು ಹೇಳಿರುವಂತೆ ಈ ಶ್ರದ್ಧಾವಂತನಿಗೇ ಆತ್ಮಜ್ಞಾನ ಉಂಟಾಗುವುದು.

ಸಮಾಧಾನ :—ನಿದ್ರಾ, ಆಲಸ್ಯ, ಪ್ರಮಾದಗಳನ್ನು ಬಿಟ್ಟು ಮನಸ್ಸನ್ನು ಶುದ್ಧಬ್ರಹ್ಮದಲ್ಲಾಗಲಿ ಅಥವಾ ಶ್ರವಣದಲ್ಲಾಗಲಿ ನಿಲ್ಲಿಸುವುದು. ಅಂದರೆ ನಿರ್ಗುಣಬ್ರಹ್ಮನಲ್ಲಿ ಮನಸ್ಸನ್ನು ಚೆನ್ನಾಗಿ ಸ್ಥಾಪಿಸುವುದು. ಇದು ನಿರ್ಗುಣಬ್ರಹ್ಮೋಪಾಸನೆಗೆ ಅಂಕುರಾರ್ಪಣ. (ಸಮ್ಯಕ್ = ಚೆನ್ನಾಗಿ, ಆಧಾನ = ಸ್ಥಾಪಿಸುವುದೇ ಸಮಾಧಾನವು).

ನಿರ್ಗುಣಬ್ರಹ್ಮಧ್ಯಾನವಾದ ಗಾಯತ್ರೀ ಮಂತ್ರಪುರಶ್ಚರಣೆಯು ಈ 'ಸಮಾಧಾನ' ಸ್ಥಿತಿಯನ್ನುಂಟು ಮಾಡುವುದು.

ಉಪರತಿ :—ಆತ್ಮಜ್ಞಾನಾರ್ಥವಾಗಿ ಸರ್ವಕರ್ಮಗಳಲ್ಲೂ, ಅವುಗಳ ಫಲಗಳಲ್ಲೂ ಅಭಿಲಾಷೆ ಇಲ್ಲದಿರುವುದು.

ತಿತಿಕ್ಷಾ :—ಶೀತೋಷ್ಣಾದಿ ದ್ವಂದ್ವಗಳಲ್ಲಿ ಅಂದರೆ ಸಂಸಾರದ ಸುಖದುಃಖಗಳಲ್ಲಿನ ಸಹನೆ.

(4) ಮುಮುಕ್ಷುತ್ವ :—ನೀರಿನಲ್ಲಿ ಮುಳುಗಿದವನು ಹೇಗಾದರೂ ಮಾಡಿ ತನ್ನ ಪ್ರಾಣರಕ್ಷಣೆ ಮಾಡಿ ಕೊಳ್ಳಲು ಹೇಗೆ ನೀರಿನಲ್ಲಿ ಒದ್ದಾಡಿ ಅವಲಂಬನೆಗೆ ಹಾತೊರೆಯುತ್ತಿರುವನೋ ಹಾಗೆ ಸಂಸಾರಸಾಗರದಲ್ಲಿ ಮುಳುಗಿರುವ ಮುಮುಕ್ಷುವು ತಾನು ಹೇಗಾದರೂ ಈ ಸಂಸಾರದಿಂದ ಪಾರಾಗಬೇಕೆಂದು ತನ್ನ ಆತ್ಮಸಾಕ್ಷಾತ್ಕಾರ ಸಂಪಾದನೆಗೆ ತೀವ್ರವಾಗಿ ಇಚ್ಛಿಸುತ್ತಾ ಅದನ್ನು ಸಾಧಿಸಲು ಪ್ರಯತ್ನಪಡಬೇಕು. ಇದೇ ಮುಮುಕ್ಷುತ್ವ. ಈ ಸಾಧಕನು ಇಹಪರ ಸುಖಗಳೊಂದನ್ನೂ ಅಪೇಕ್ಷಿಸದೆ, ತಾನು ಹೇಗೆ ಮುಕ್ತನಾದೇನೆಂಬುದೊಂದನ್ನೇ ಸರ್ವದಾ ತೀವ್ರವಾಗಿ ಚಿಂತಿಸುತ್ತಿರುವನು.

ಈ ಮೇಲ್ಕಂಡ ಸಾಧನ ಚತುಷ್ಟಯವುಳ್ಳವನಿಗೇನೇ ವೇದಾಂತ ಶ್ರವಣ ಮನನಾದಿಗಳು. ಅವುಗಳಿಲ್ಲದೇ ಮಾಡಿದ ವೇದಾಂತ ಶ್ರವಣಾದಿಗಳಿಂದ ಪ್ರಯೋಜನವಾಗಲಾರದು. ಪಥ್ಯಸೇವನೆ ಮಾಡದೇ ಕೇವಲ ಔಷಧಿ ಕುಡಿದ ರೋಗಿಯ ರೋಗ ನಿವೃತ್ತವಾಗದೆ, ಆ ಔಷಧಿಯು ವ್ಯರ್ಥವಾಗುವಂತೆ ಅವು ವ್ಯರ್ಥವಾಗುತ್ತವೆ. ಸಾಧನ ಚತುಷ್ಟಯಗಳಲ್ಲಿ ಒಂದಾದ 'ಸಮಾಧಾನ' ಸ್ಥಿತಿಯನ್ನು ಸಾಧಿಸುವುದೇ ಅವುಗಳ ಮುಖ್ಯಗುರಿಯು.

ಮೇಲ್ಕಂಡ ಸಾಧನ ಚತುಷ್ಟಯಗಳು ಸಾಧನವಾದಮೇಲೆ ಅಂದರೆ 'ಸಮಾಧಾನ' ಸ್ಥಿತಿಯು ಪ್ರಾಪ್ತವಾದ ಮೇಲೆ ಶ್ರವಣ ಮನನ ನಿದಿಧ್ಯಾಸನಗಳು ಸಾಧಕನನ್ನು ಮೋಕ್ಷಮಾರ್ಗದತ್ತ ಸುಲಭವಾಗಿ ಸಾಗಿಸುವುವು.

ಶ್ರವಣ :—ಸದ್ಗುರುಮುಖೇನ ಜೀವನಿಗೆ ಅಭಿನ್ನವಾದ ಅದ್ವಿತೀಯ ಬ್ರಹ್ಮದಲ್ಲಿ ಸರ್ವ ವೇದಾಂತ ವಿಷಯವೂ ಹೇಗೆ ನಿರ್ಣಯವೆಂಬುದನ್ನೂ, ಓಂಕಾರ ಸ್ವರೂಪವನ್ನೂ, ಹಂಸ ಮಂತ್ರಾರ್ಥವನ್ನೂ ತಿಳಿದುಕೊಳ್ಳಬೇಕು. ಯೋಗ ಪ್ರಕ್ರಿಯೆಯಂತೆ ನಮ್ಮ ಶರೀರದಲ್ಲಿ ಜೀವೇಶ್ವರ ಸಂಬಂಧ ಹೇಗೆಂಬುದನ್ನು ತಿಳಿಯಬೇಕು. ಮತ್ತು ವೇದಾಂತದಲ್ಲಿ ಜೀವ ಬ್ರಹ್ಮೈಕ್ಯ ಬೋಧಕವಾದ "ತತ್ತ್ವಮಸಿ", "ಅಹಂ ಬ್ರಹ್ಮಾಸ್ಮಿ", "ಅಯಮಾತ್ಮಾ ಬ್ರಹ್ಮ", "ಪ್ರಜ್ಞಾನಂ ಬ್ರಹ್ಮ" ಎಂಬ ಮಹಾವಾಕ್ಯಗಳನ್ನು ಗುರುಮುಖೇನ ಚೆನ್ನಾಗಿ ಅರ್ಥಮಾಡಿ ತಿಳಿದುಕೊಳ್ಳಬೇಕು. ಮಿಕ್ಕ ವೇದಾಂತ ವಾಕ್ಯಗಳೂ ಪರಂಪರೆಯಾ ಅಥವಾ ಶೇಷವಾಗಿ ಮಹಾವಾಕ್ಯದ ಅರ್ಥಕ್ಕೆ ಸಹಾಯಕಗಳಾಗಿವೆ ಎಂಬುವನ್ನು ತಿಳಿದುಕೊಳ್ಳಬೇಕು. ಪ್ರಸ್ಥಾನತ್ರಯಗಳನ್ನು ಶ್ರೀಮಚ್ಛಂಕರರ ಭಾಷ್ಯ ಸಮೇತ ಗುರುಮುಖೇನ ತಿಳಿದುಕೊಳ್ಳಬೇಕು. ಈ ರೀತಿ ಜೀವನಿಗೆ ಅಭಿನ್ನವಾಗಿ ಅದ್ವಿತೀಯ ಬ್ರಹ್ಮನಲ್ಲಿ ನಿರ್ಣೀತವಾದ ತಾತ್ಪರ್ಯವಿದೆ ಎಂಬುದನ್ನು ತಿಳಿದು ಸಂಪಾದಿಸುವುದು ಬ್ರಹ್ಮನ ಪರೋಕ್ಷ ಜ್ಞಾನ.

ಮನನ :—ಅಂದರೆ, ನಾನು ಹೇಗೆ ಬ್ರಹ್ಮ ? ಪ್ರತ್ಯಕ್ಷದಲ್ಲಿ ಹಾಗಿಲ್ಲವಲ್ಲಾ ! ಜೀವ ಪರಮಾತ್ಮರ ಭೇದವೇ ಕಾಣುವುದಲ್ಲಾ ! ನಾನು ಅಲ್ಪಜ್ಞ ! ಪರಮಾತ್ಮನು ಸರ್ವಜ್ಞ ! ಎಂಬ ಅನುಮಾನ ಸಹಜವಾಗಿ ಉಂಟಾಗಲು, ವೇದಾಂತ ಮಹಾವಾಕ್ಯಗಳಿಂದ ಉಂಟಾದ ಜ್ಞಾನ ಮತ್ತು ಅವುಗಳ ಅರ್ಥ ವಿಷಯಕ ಯುಕ್ತಿಗಳ ಅನುಸಂಧಾನದಿಂದಲೂ ಗುರುಮುಖದಿಂದಲೂ ಶಂಕಾ ನಿವೃತ್ತಿ ಮಾಡಿಕೊಳ್ಳಬೇಕು.

ಉದಾಹರಣೆಗಾಗಿ :—

"ಶರೀರಸ್ಥೋಽಪಿ ಕೌಂತೇಯ ನ ಕರೋತಿ ನ ಲಿಪ್ಯತೇ ।
ಯಥಾ ಸರ್ವಗತಂ ಸೌಕ್ಷ್ಮ್ಯಾತ್ ಆಕಾಶನ್ನೋಪಲಿಪ್ಯತೇ ।
ಸರ್ವತ್ರಾವಸ್ಥಿತೋ ದೇಹೇ ತಥಾತ್ಮಾ ನೋಪಲಿಪ್ಯತೇ ॥

ಎಂದು ಗೀತೆಯಲ್ಲಿ ಹೇಳಿರುವಂತೆ ಆತ್ಮನು ಶರೀರಾದಿ ಧರ್ಮ ಸಂಬಂಧ ಶೂನ್ಯನೆಂದೂ, ಸುಷುಪ್ತಿ ಸಮಾಧಿ ಅವಸ್ಥೆಗಳಲ್ಲಿ ಇದು ಸ್ಪಷ್ಟಪಡುವುದೆಂದೂ ಆಕಾಶದಂತೆ ಆತ್ಮನು ನಿರವಯವನೆಂದೂ, ಜೀವನ ಕಿಂಚಿಜ್ಞತ್ವ, ಕರ್ತೃತ್ವ ದುಃಖತ್ವಾದಿಗಳು ಅಂತಃಕರಣ ಧರ್ಮವೆಂದೂ "ಪ್ರಜಹಾತಿ ಯದಾ ಕಾಮಾನ್ ಸರ್ವಾನ್ ಪಾರ್ಥ ಮನೋಗತಾನ್" ಎಂಬಂತೆ ಮನೋಗತವಾದ ಅಂತಃಕರಣ ಧರ್ಮಗಳನ್ನು ಉಳಿದು, ಜೀವಭಾವವು ಅಂತಃಕರಣೋಪಾಧಿಯಿಂದಲೂ, ಈಶ್ವರ ಭಾವವು ಮಾಯೋಪಾಧಿಯಿಂದಲೂ ಕಾಣುತ್ತದೆಯೇ ವಿನಾ, ಶೋಧಿತನಾದ ಸ್ವಪ್ರಕಾಶ ಚಿದ್ರೂಪ ಜೀವನಿಗೆ ಸತ್ಯಜ್ಞಾನಾನಂದ ಸ್ವರೂಪ ಪರಿಪೂರ್ಣನಾದ ಶುದ್ಧಬ್ರಹ್ಮನಲ್ಲಿ ಐಕ್ಯವಿರುತ್ತೆಂಬ ಅಂಶವನ್ನು "ಮನನ" ಮಾಡಿ ನಿಶ್ಚಯಿಸಿಕೊಳ್ಳಬೇಕು.

"ಅಹಂ ಬ್ರಹ್ಮಾಸ್ಮಿ" ಜ್ಞಾನದಿಂದ ಅಪ್ರಮಾಣವಾದ ಶಂಕೆಯನ್ನು ನಿವಾರಿಸಿಕೊಂಡು ಬ್ರಹ್ಮಸಾಕ್ಷಾತ್ಕಾರ ಪ್ರತಿಬಂಧಕವಾದ ವಿಪರೀತ ಭಾವನೆಯನ್ನು ಅಂದರೆ, ಜಗತ್ತು ಸತ್ಯವೋ ? ಜೀವಬ್ರಹ್ಮರ ಭೇದ ಸತ್ಯವೋ ? ಅಥವಾ ಅವರ ಅಭೇದ ಸತ್ಯವೋ? ಎಂಬ ಸಂಶಯವನ್ನು ನಿವಾರಿಸಿಕೊಳ್ಳಬೇಕು. ಇದಕ್ಕಾಗಿ ವ್ಯಾಸವಿರಚಿತ ಬ್ರಹ್ಮಸೂತ್ರ ಅಥವಾ ಶಾರೀರಿಕ ಭಾಷ್ಯದ ನಾಲ್ಕು ಅಧ್ಯಾಯಗಳನ್ನೂ, ಅದರ ವ್ಯಾಖ್ಯಾನಗಳನ್ನೂ ವಿಚಾರಮಾಡಿ ತಿಳಿದು, ಈಶ್ವರಗತ ಸಂಶಯ, ಜೀವಗತ ಸಂಶಯ, ಸಾಧನಗತ ಸಂಶಯ, ಫಲಗತ ಸಂಶಯವೆಂಬ ಚತುರ್ವಿಧ ಸಂಶಯಗಳನ್ನು ನಿವಾರಿಸಿಕೊಳ್ಳಬೇಕು. ಇದೇ ಮನನವು. ಬ್ರಹ್ಮಸೂತ್ರದ ಮೊದಲನೇ ಅಧ್ಯಾಯವು "ಸಮನ್ವಯಾ ಧ್ಯಾಯವು". ಇದು ವಿಭಿನ್ನ ಶ್ರುತಿಗಳಿಗೆ ಬ್ರಹ್ಮನೇ ಅರ್ಥವೆಂದು ನಿರ್ಣಯಿಸಿದೆ.

ಎರಡನೇ ಅಧ್ಯಾಯವು 'ಅವಿರೋಧಾಧ್ಯಾಯವು'. ಇದು ಇತರ ಮತಗಳಿಂದ ವೇದಾಂತ ಮತಕ್ಕೆ ಇರುವ ವಿರೋಧವನ್ನು ಪರಿಹರಿಸುತ್ತದೆ. ಮೂರನೇ ಅಧ್ಯಾಯವು ಸಾಧನಾಧ್ಯಾಯವು. ಇದು ಬ್ರಹ್ಮಸಾಕ್ಷಾತ್ಕಾರ

ಹೊಂದುವ ಉಪಾಯವನ್ನು ತಿಳಿಸುತ್ತದೆ. ನಾಲ್ಕನೆಯದಾದ ಕೊನೆಯ ಅಧ್ಯಾಯವು "ಫಲಾಧ್ಯಾಯವು". ಇದ ಬ್ರಹ್ಮಸಾಕ್ಷಾತ್ಕಾರಕ್ಕೆ ಫಲವಾದ ಮುಕ್ತಿಯ ಸ್ವರೂಪವನ್ನು ಬೋಧಿಸುತ್ತದೆ.

ಇನ್ನು ನಿದಿಧ್ಯಾಸನ :—ಸರ್ವ ವಿಷಯಗಳಿಂದ ಮನಸ್ಸನ್ನು ನಿರೋಧಪಡಿಸಿ, ಪರಮಾತ್ಮನಲ್ಲಿ ಆ ಮನದ ಸ್ಥಿತಿಗೋಸ್ಕರ ಯಾವ ಕ್ರಿಯೆಯು ಮನಸ್ಸಿನಲ್ಲಿ ಇರುತ್ತಿರುವುದೋ ಅದರ ಹೆಸರು ನಿದಿಧ್ಯಾಸನ. ಇದರಿಂದ ವಿಪರ್ಯಯಜ್ಞಾನ ಅಂದರೆ "ದೇಹಸತ್ಯ", "ನಾನು ದೇಹರೂಪನು ಎಂಬ ಜ್ಞಾನ" ನಷ್ಟವಾಗುತ್ತದೆ.

ಪ್ರಮಾಣ, ಸಂಶಯ, ವಿಕಲ್ಪ, ನಿದ್ರಾ, ಸ್ಮೃತಿ ಈ ವೃತ್ತಿಗಳೆಲ್ಲವೂ ವಿಜಾತೀಯ ವೃತ್ತಿಗಳು. ಇವುಗಳನ್ನು ತಿರಸ್ಕರಿಸಿ, ತೈಲಧಾರೆಯಂತೆ ನಿರಂತರ ಬ್ರಹ್ಮಾಕಾರವಾದ ವೃತ್ತಿಯ ಪ್ರವಾಹವನ್ನು ನಿದಿಧ್ಯಾಸನದಿಂದ ಹೊಂದುತ್ತೇವೆ. ಇದೇ '**ಸಮಾಧಿ**' ಎಂಬುವುದು. ಇಲ್ಲಿ ಜೀವ ಪರಮಾತ್ಮರ ಭೇದವು ನಷ್ಟವಾಗಿ, ಧ್ಯಾನ, ಧ್ಯಾತೃ, ಧ್ಯೇಯವೆಂಬ ತ್ರಿಪುಟಿಶೂನ್ಯವಾಗಿ, ಸರ್ವ ಸಂಕಲ್ಪಗಳೂ ಲಯಹೊಂದುವುವು. ಈ ಮೇಲ್ಕಂಡ ಶ್ರವಣ, ಮನನ, ನಿದಿಧ್ಯಾಸನ, ಸಮಾಧಿ ಎಂಬ ನಾಲ್ಕು ಸಾಧನೆಗಳಿಂದ ಪ್ರತಿಬಂಧವಿಲ್ಲದೆ ಉಂಟಾಗುವ ವಿದ್ಯಾರೂಪ ಚರಮಾವೃತ್ತಿಯಿಂದ, ಬ್ರಹ್ಮಸಾಕ್ಷಾತ್ಕಾರವಾಗುವುದು. ಇದನ್ನೇ 'ಜೀವನ್ಮುಕ್ತಿ ಸ್ಥಿತಿ' ಎನ್ನುವರು. ಹೀಗೆ, ಮನೋವೃತ್ತಿಯಿಂದಲೇ ಬ್ರಹ್ಮಸಾಕ್ಷಾತ್ಕಾರ, ಮತ್ತು ಸ್ವರೂಪಾನಂದಕ್ಕೆ ಆವಾರಕವಾದ ಮೂಲಭಾವ ನಿವೃತ್ತಿ. ಅದಕ್ಕಾಗಿಯೇ ಶ್ರುತಿಯಲ್ಲಿ 'ಮನಸೈವಾನುದ್ರಷ್ಟವ್ಯಂ' ಎಂದಿದೆ.

ವಿಚಾರ್ಯಾಪ್ಯಾ ಪರೋಕ್ಷೇಣ ಬ್ರಹ್ಮಾತ್ಮಾನಂ ನ ವೇತ್ತಿ ಚೇತ್।
ಅಪರೋಕ್ಷಾವಭಾಸತ್ವಾತ್ ಭೂಯೋ ಭೂಯೋ ವಿಚಾರಯೇತ್ ॥

ಎಂಬಂತೆ ವಿಚಾರ ಮಾಡಿಯೂ ತಾನೇ ಬ್ರಹ್ಮನೆಂಬ ಸಾಕ್ಷಾತ್ಕಾರವು ಯಾರಿಗೆ ಉದಯಿಸಲಿಲ್ಲವೋ ಅವರು ಅಪರೋಕ್ಷಾನುಭವವನ್ನು ಹೊಂದುವುದಕ್ಕಾಗಿ ಮತ್ತೆ ಮತ್ತೆ ವಿಚಾರ ಮಾಡುತ್ತಾ ಬರಬೇಕು. ಅಂದರೆ ಅವಿದ್ಯಾ ನಿವೃತ್ತಿಯಾಗುವವರೆಗೂ ತಿರುಗಿ ತಿರುಗಿ ಮನನ ನಿದಿಧ್ಯಾಸಗಳನ್ನು ಮಾಡಬೇಕು. ಹೀಗೆ ಮಾಡುವುದರಿಂದ ಬ್ರಹ್ಮಸಾಕ್ಷಾತ್ಕಾರದ ಪ್ರತಿಬಂಧಕಗಳೆಲ್ಲಾ ನಾಶವಾಗಿ, ಬ್ರಹ್ಮಸಾಕ್ಷಾತ್ಕಾರವು ದೃಢೀಕರಿಸಲ್ಪಡುತ್ತದೆ. ಇದನ್ನೇ ವಿದ್ಯಾರಣ್ಯರು, "ಶಮಾದಿ ಪೂರ್ವಕ ಶ್ರವಣ ಮನನ ನಿದಿಧ್ಯಾಸನಾಭ್ಯಾಸ ಬಲಾತ್, ವಿಷಯಾಸಕ್ತಿಃ, ಪ್ರಜ್ಞಾಮಾಂದ್ಯಂ, ಕುತರ್ಕಃ, ವಿಪರ್ಯಯ ದುರಾಗ್ರಹಶ್ಚೇತಿ ವರ್ತಮಾನ ಪ್ರತಿಬಂಧಾಪರೋಕ್ಷಬ್ರಹ್ಮ ಸಾಕ್ಷಾತ್ಕಾರೋ ದೃಢೀ ಭೂಯಾತ್" ಎಂದಿದ್ದಾರೆ. ನಿದಿಧ್ಯಾಸನ ಮೂಲಕ ಸಮಾಧಿನಿಷ್ಠೆಯಿಂದ ಅಂತಃಕರಣವು ಬ್ರಹ್ಮಾಕಾರವಾಗಿ ಪರಿಣಮಿಸಲು, ಆ ಅಂತಃಕರಣದಲ್ಲಿದ್ದ ಪ್ರತಿಬಿಂಬವು ಬ್ರಹ್ಮಸ್ವರೂಪದೊಳಗೆ ಐಕ್ಯವಾಗಿ, ಬ್ರಹ್ಮ ಒಂದೇ ಪ್ರಕಾಶಿಸುವುದು. ಆಗ ಜೀವನೆಂಬ ವ್ಯವಹಾರವಿಲ್ಲದೆ ಹೋಗುವುದು. ಅದೇ "ಜೀವನ್ಮುಕ್ತಿ" ಎನಿಸುವುದು.

ಈ ಜೀವನ್ಮುಕ್ತಿಯಲ್ಲಿ ತ್ರಿಪುಟಿ ನಾಶವಾಗಿರುವುದರಿಂದ, ಅದೇ ಮನೋನಾಶವೆಂತಲೂ, ವೃತ್ತಿಶೂನ್ಯವಾಗಿರುವುದರಿಂದ ಅದೇ ವಾಸನಾಕ್ಷಯವೆಂತಲೂ, ಹೇಳಿಸಿಕೊಳ್ಳುವುದು.

ಘಟವು ನಾಶವಾಗಲು ಘಟದ ಒಳಗಿನ ಆಕಾಶವು ಹೇಗೆ ಮಹಾಕಾಶವಾಗುವುದೋ ಹಾಗೆ ಪ್ರಾರಬ್ಧ ನಾಶವಾದ ನಂತರ ಆಭಾಸಮಾತ್ರವಾಗಿದ್ದ ಜೀವವ್ಯವಹಾರ ನಾಶವಾಗಿ, ಪರಿಪೂರ್ಣ ಅದ್ವಿತೀಯ ಬ್ರಹ್ಮಮಾತ್ರವಾಗುವುದು. ಇದೇ "ವಿದೇಹಮುಕ್ತಿ". ಹೀಗೆ ಆತ್ಮೈಕ್ಯ ತತ್ವವನ್ನು ಸಾಕ್ಷಾತ್ಕಾರ ಮಾಡಿಕೊಂಡ ಮಹಾತ್ಮನಿಗೆ ಸ್ವಪ್ರಕಾಶಾಪರಿಮಿತಾನಂದಬ್ರಹ್ಮರೂಪವಾದ ವಿದೇಹಮುಕ್ತಿಯೂ, ಪ್ರಾರಬ್ಧಕರ್ಮ ಕ್ಷಯಪರ್ಯಂತರವೂ, ದೇಹೇಂದ್ರಿಯಾದಿ ಪ್ರತಿಭಾ ಸಹಿತವಾಗಿ, ಅಂತಹ ಬ್ರಹ್ಮಸ್ವರೂಪದಿಂದ ಇರುಪಿಕೆಯೆಂಬ ಜೀವನ್ಮುಕ್ತಿಯೂ ಸಹ ಕರತಲಾಮಲಕವಾಗುವುದು. ಅಂತಹವನನ್ನು

ಶ್ರುತಿಯು. ಅತ್ರ ಬ್ರಹ್ಮ ಸಮಶ್ನುತೇ|
ನ ತಸ್ಯ ಪ್ರಾಣಾ ಉತ್ಕ್ರಾಮಂತಿ|
ಅತ್ರೈವ ಸಮವಲೀಯಂತೇ|| ಎಂದು ಹೇಳಿದೆ.

ಇಂಥ ಮುಕ್ತನ ಪುಣ್ಯವೆಂತಹುದೆಂದರೆ :

ಕುಲಂಪವಿತ್ರಂ ಜನನೀಕೃತಾರ್ಥಾ |
ವಿಶ್ವಂಭರಾ ಪುಣ್ಯವತೀಚ ತೇನ |
ಅಪಾರ ಸಚ್ಚಿತ್ಸುಖ ಸಾಗರೇಸ್ಮಿನ್ |
ಲೀನಂ ಪರೇ ಬ್ರಹ್ಮಣಿ ಯಸ್ಯ ಚೇತಃ||

ಎಂಬಂತಿರುವುದು. ಇಂತಹ ಮುಕ್ತನಾದವನೂ ಪುನರ್ಜನ್ಮವನ್ನು ಪಡೆಯುವನೋ ಏನೋ ಎಂದು ಶಂಕಿಸಿದರೆ, ಅದಕ್ಕೆ ಕಾರಣವಿಲ್ಲವೆಂದು ಶ್ರುತಿ, ವ್ಯಾಸಸೂತ್ರ ಯೋಗಭಾಷ್ಯಾದಿಗಳು ಹೇಳಿವೆ.

ಶ್ರುತಿ :—'ನ ಚಪುನರಾವರ್ತತೇ, ನ ಪುನರಾವರ್ತತೇ ||'
ಮುಕ್ತನಾದ ಪುರುಷನು ಪುನರ್ಜನ್ಮ ಪಡೆಯುವುದಿಲ್ಲ, ಪುನರ್ಜನ್ಮ ಪಡೆಯುವುದಿಲ್ಲ.

ವ್ಯಾಸಸೂತ್ರ :—'ಅನಾವೃತ್ತಿಶ್ಶಬ್ದಾತ್, ಅನಾವೃತ್ತಿಶ್ಶಬ್ದಾತ್||'
ಜ್ಞಾನಿಯಾದವನಿಗೆ ಪುನರಾವೃತ್ತಿ ಅಂದರೆ ಪುನರ್ಜನ್ಮವಾಗುವುದಿಲ್ಲ.

ಹೀಗೆ ಶ್ರುತಿಪ್ರಮಾಣವಿರುವದ್ದರಿಂದ ಪುನರ್ಜನ್ಮವಾಗುವುದಿಲ್ಲ.

ಯೋಗಭಾಷ್ಯ :—ನ ಜನಿಷ್ಯತಿ, ಇತರಸ್ತು ಜನಿಷ್ಯತಿ||"
ಗೀತಾ :— "ಯದ್ಗತ್ವಾ ನ ನಿವರ್ತಂತೇ, ತದ್ಧಾಮ ಪರಮಂ ಮಮ ||"

ಯಾವ ಪುರುಷನು ಪ್ರಕೃತಿ ಪುರುಷರ ವಿವೇಕವುಳ್ಳವನೋ ಮತ್ತು ಸರ್ವ ಪದಾರ್ಥಗಳಿಂದ ನಿವೃತ್ತಿಸಲ್ಪಟ್ಟ ಇಚ್ಛೆಯುಳ್ಳವನಾಗಿರುವನೋ ಅವನು ಪುನರ್ಜನ್ಮವನ್ನು ಹೊಂದುವುದಿಲ್ಲ.

ಇಷ್ಟು ಆತ್ಮ ಸಾಕ್ಷಾತ್ಕಾರವನ್ನು ಹೊಂದಿದವರ ವಿಷಯವಾಯ್ತು. ಇನ್ನು ಸಾಧನ ಮಾರ್ಗದಲ್ಲಿ ಉಪನಿಷತ್ತುಗಳಲ್ಲಿ ಉಕ್ತವಾದ ಸಗುಣಬ್ರಹ್ಮ ಉಪಾಸನೆಯನ್ನು ಸಾಧಿಸಿದವರು ಮತ್ತು ಓಂಕಾರ ಉಪಾಸನೆ ಮಾಡಿದವರು, ದೇಹಪಾತವಾಗುತ್ತಲೂ ಅರ್ಚಿರಾದಿ ಮಾರ್ಗದಿಂದ ಬ್ರಹ್ಮಲೋಕಕ್ಕೆ ಹೋಗಿ, ಅಲ್ಲಿ ಸಗುಣ ಬ್ರಹ್ಮ ಸಾರೂಪ್ಯವನ್ನು ಪಡೆಯುತ್ತಾರೆ. ಅಲ್ಲಿ ನಿರ್ಗುಣ ಬ್ರಹ್ಮವಿಚಾರ ಸಾಧನೆಗಳಿಂದ ನಿರ್ಗುಣ ಬ್ರಹ್ಮಸಾಕ್ಷಾತ್ಕಾರವನ್ನು ಪಡೆದು, ಬ್ರಹ್ಮನ (ಹಿರಣ್ಯಗರ್ಭನ) ಜೊತೆಯಲ್ಲಿ ಅವನ ಅಂತ್ಯದಲ್ಲಿ ಶುದ್ಧ ಬ್ರಹ್ಮಭಾವ ಪರಮಮುಕ್ತಿಯನ್ನು ಪಡೆಯುತ್ತಾರೆ. ಓಂಕಾರವು ಪರಬ್ರಹ್ಮಕ್ಕೂ ಅಪರ ಬ್ರಹ್ಮಕ್ಕೂ ಪ್ರತೀಕ. ಯಾವ ದೃಷ್ಟಿಯಲ್ಲಿ ಅದನ್ನು ಉಪಾಸನೆ ಮಾಡಿದರೆ ಆ ಬ್ರಹ್ಮನನ್ನು ಉಪಾಸಕರು ಪಡೆಯಲು ಅದು ಸಾಧಕವಾಗುತ್ತದೆ.

ಓಂಕಾರದ ಒಂದು ಮಾತ್ರೆಯನ್ನು ಅಂದರೆ 'ಅ'ಕಾರವನ್ನು ಅದರ ಅರ್ಥ ತಿಳಿದು ಉಪಾಸನೆ ಮಾಡಿದರೆ ಸಾಕು, ಅಷ್ಟಕ್ಕೇ ಆ ಸಾಧಕನು ಮನುಷ್ಯ ಲೋಕದಲ್ಲಿ ಬ್ರಾಹ್ಮಣಶ್ರೇಷ್ಠನಾಗಿ ಹುಟ್ಟಿ, ಬ್ರಹ್ಮಚರ್ಯೆ, ತಪಸ್ಸು ಇವುಗಳಿಂದ ಪ್ರಸಿದ್ಧಿ ಪಡೆಯುತ್ತಾನೆ. ಎರಡು ಮಾತ್ರೆಗಳ ಜ್ಞಾನದಿಂದ ('ಅ+ಉ'ಕಾರಗಳ ಜ್ಞಾನದಿಂದ)

ಓಂಕಾರೋಪಾಸನೆ ಮಾಡಿದರೆ, ಸೋಮಲೋಕವನ್ನು ಪಡೆಯುತ್ತಾನೆ. ಮೂರು ಮಾತ್ರೆಗಳ ('ಅ+ಉ+ಮ' ಕಾರಗಳ) ಜ್ಞಾನದಿಂದ ಓಂಕಾರೋಪಾಸನೆ ಮಾಡಿದರೆ ಬ್ರಹ್ಮಲೋಕವನ್ನೇ ಪಡೆಯುತ್ತಾನೆ. ಅಲ್ಲಿಂದ ಮುಂದೆ ಜ್ಞಾನವನ್ನು ಹೊಂದಿ ಸಾಕ್ಷಾತ್ಕಾರ ಪಡೆಯುತ್ತಾನೆ.

ನಾವುಗಳು ಈಗಿನ ವಾತಾವರಣದಲ್ಲಿ ಮಾಡಬೇಕಾದ ಕರ್ತವ್ಯವೇನೆಂದರೆ:— ನಮ್ಮ ಚಿತ್ತಕ್ಕೆ ಅಂಟಿರುವ ಮಾಲಿನ್ಯವು ಅಂದರೆ ನಾವು ಮಾಡಿದ ದುಷ್ಕೃತ್ಯಗಳ ಫಲವಾದ ಪಾಪವು ನಾಶವಾಗಲು,

'ಧರ್ಮೇಣ ಪಾಪಮಪನುದತಿ'
ಯೋಗಿನಃ ಕರ್ಮಕುರ್ವಂತಿ
ಸಂಗಂ 'ತ್ಯಕ್ತ್ವಾತ್ಮಶುದ್ಧಯೇ'

ಎಂಬ ಶಾಸ್ತ್ರಗಳಂತೆ, ಶಾಸ್ತ್ರೋಕ್ತವಾದ ಕರ್ಮಾನುಷ್ಠಾನ ಮಾಡಿ ಪಾಪವನ್ನು ನಿವೃತ್ತಿಗೊಳಿಸಿಕೊಳ್ಳಬೇಕು. ಆದಕಾರಣ ಪ್ರಥಮತಃ, ಚಿತ್ತಶುದ್ಧಿಗಾಗಿ ಶಾಸ್ತ್ರೋಕ್ತವಾದ ನಿತ್ಯ ಕರ್ಮಾದಿಗಳನ್ನು ಶಾಸ್ತ್ರರೀತ್ಯಾ ಅವಶ್ಯ ಅನುಷ್ಠಿಸಬೇಕು. ಮತ್ತು ಪರಮೇಶ್ವರನನ್ನು ಧ್ಯಾನ ಪೂಜಾದಿಗಳಿಂದ ಒಲಿಸಿಕೊಳ್ಳಬೇಕು. ಪರಮೇಶ್ವರನು ತನ್ನನ್ನು ಭಜಿಸಿದ ಭಕ್ತರಿಗೆ ಅನುಕಂಪದಿಂದ ಪ್ರೀತಿಪೂರ್ವಕವಾಗಿ ವಿವೇಕವನ್ನುಂಟುಮಾಡಿ ಜ್ಞಾನಯೋಗದಿಂದ ಆತ್ಮ ತತ್ವವನ್ನು ಹೊಂದಲು ಸಹಾಯ ಮಾಡುವನು. ಆದಕಾರಣ ಕರ್ಮಗಳನ್ನು ಅನುಷ್ಠಿಸುತ್ತಲೇ ಬಂದರೆ 'ನಾಭುಕ್ತಂ ಕ್ಷೀಯತೇ ಕರ್ಮ' ಎಂಬ ನ್ಯಾಯದಂತೆ ಸಂಸಾರವು ಬೆಳೆಯುತ್ತಲೇ ಹೋಗುವುದೆಂದು ಭಯಪಡಬೇಕಾಗಿಲ್ಲ. ಕರ್ಮಗಳ ಫಲಗಳಲ್ಲಿ ಆಸಕ್ತಿ ಯನ್ನಿಟ್ಟುಕೊಂಡು ಆಚರಿಸಿದರೇನೆ, ಅವುಗಳ ಫಲಗಳು ಅವಶ್ಯವಾಗಿ ಅನುಭವಿಸಲ್ಪಡಬೇಕಾಗುವುದು. ನಿಷ್ಕಾಮನಾಗಿ ಮಾಡಿದರೆ ಆ ಕರ್ಮವು ಚಿತ್ತಶುದ್ಧಿ ಪರಮೇಶ್ವರಾನುಗ್ರಹಗಳನ್ನು ಉಂಟುಮಾಡುವುದು. ಇದೇ **'ಕರ್ಮಯೋಗ'**. ಇದರಿಂದ ವಿವೇಕವು ಜನಿಸಿ ನಿಜವಾದ ವೈರಾಗ್ಯವು ನೆಲಸುವುದು. ದೃಢ ವಿರಕ್ತಿ ಹುಟ್ಟುವುದೇ ಚಿತ್ತಶುದ್ಧಿಯಾದುದಕ್ಕೆ ಗುರ್ತು. ನಿಷ್ಕಾಮ ಕರ್ಮದಿಂದ ಚಿತ್ತಶುದ್ಧಿ ಪರಮೇಶ್ವರನ ಅನುಗ್ರಹಗಳನ್ನು ಹೊಂದಿತೆಂದರೆ ವಿವೇಕವು ಮೂಡಿ ವಿರಕ್ತಿಯು ದೃಢವಾಗಿ, ಅನಂತರ ಗುರುಮೂಲಕ ಸ್ವಸ್ವರೂಪ ಸಾಕ್ಷಾತ್ಕಾರ ಜ್ಞಾನವಾಗಿ ಪುರುಷಾರ್ಥವು ಅನಾಯಾಸವಾಗಿ ಸಿದ್ಧಿಸುವುದು.

"ಬಂಧಮೋಚನ ಕರ್ತಾತು ಸ್ವಸ್ಮಾದನ್ಯೋ ನ ಕಶ್ಚನ"

ಎಂಬಂತೆ ಅವಿದ್ಯಾ ಬಂಧ ರೂಪವಾದ ಸಂಸಾರದಿಂದ ಬಿಡುಗಡೆ ಮಾಡಿಕೊಳ್ಳಲು ನಮಗೆ ನಮ್ಮನ್ನು ಬಿಟ್ಟರೆ ಬೇರೆ ಯಾವನೂ ಇಲ್ಲ.

ಇಂತು ಕೇವಲ ಸ್ವಸ್ವರೂಪ ಸಾಕ್ಷಾತ್ಕಾರ ಜ್ಞಾನದಿಂದಲೇ ಮೋಕ್ಷವೆಂದು ಸ್ಪಷ್ಟವಾಗಿ ಮೇಲೆ ಹೇಳಿರುವಂತೆ ಪ್ರತಿಪಾದಿತವಾದರೂ, ಕೆಲವು ವೇಳೆ ಭಕ್ತಿ, ಉಪಾಸನೆ ಕರ್ಮಗಳಿಂದಲೇ ಮೋಕ್ಷಸಾಧಿಸಲಾಗದೆ? ಎಂದು ಸಂಶಯಗಳು ತಲೆದೋರಿದರೆ, ಆ ಸಂಶಯಗಳನ್ನು ನಿವಾರಿಸಲು ಕರ್ಮ, ಭಕ್ತಿ, ಉಪಾಸನೆಗಳ ವಿಚಾರವಾಗಿ ಸ್ವಲ್ಪ ವಿವರಿಸೋಣ.

ಕರ್ಮ :—ಪ್ರಾಣಿಸಾಮಾನ್ಯಕ್ಕೆ ಕರ್ಮವು ಅನಾದಿಯಾಗಿ ಜನ್ಮ ಜನ್ಮಾಂತರಗಳಿಂದ ವಾಸನಾಪೂರ್ವಕವಾಗಿ ಬೆನ್ನುಹತ್ತಿ ಬಂದಿದೆ. ಇದನ್ನು ಸುಖದುಃಖಗಳ ಅನುಭವರೂಪೇಣ ಅನೇಕ ಜನ್ಮಗಳಲ್ಲಿ ಅನುಭವಿಸಬೇಕು. ಇವುಗಳಲ್ಲಿ ಈಶ್ವರ ನಿಯಾಮಕದಂತೆ, ಈ ಜನ್ಮದಲ್ಲಿ ಅನುಭವಿಸಬೇಕಾದ ಭಾಗಕ್ಕೆ ಪ್ರಾರಬ್ಧಕರ್ಮವೆಂದು ಹೆಸರು. ಇದು ಅನುಭವಿಸಿಯೇ ಮುಗಿಯಬೇಕು. ಈವರೆಗೆ ಅನುಭವಿಸಿದ ಕರ್ಮಗಳನ್ನೂ, ಪ್ರಾರಬ್ಧಕರ್ಮವನ್ನೂ ಬಿಟ್ಟು ಉಳಿದ ಕರ್ಮಭಾಗಕ್ಕೆ 'ಸಂಚಿತ'ವೆಂದು ಹೆಸರು. ಈ ಜನ್ಮದಲ್ಲಿ ನಾವು ಗಳಿಸುವ ಕರ್ಮ

ಭಾಗಕ್ಕೆ 'ಆಗಾಮಿ' ಎಂದು ಹೆಸರು. ಪ್ರಾರಬ್ಧಾನುಸಾರವಾಗಿ ನಮಗೆ ಶಬ್ದಾದಿ ವಿಷಯಗಳಲ್ಲಿ ರಾಗದ್ವೇಷಗಳು ಉಂಟಾಗುತ್ತವೆ. ಇದನ್ನು ತಪ್ಪಿಸಲು ಸಾಧ್ಯವಿಲ್ಲ. ಆದರೆ ಈ ರಾಗದ್ವೇಷಪೂರ್ವಕವಾದ ಇಚ್ಛೆಗಳನ್ನು ನಮ್ಮ ಪುರುಷಪ್ರಯತ್ನದ ಮೂಲಕ ತಡೆಗಟ್ಟಬಹುದು. ಉದಾಹರಣೆಗಾಗಿ ರೈಲುಬಂಡಿಯು ಪೂರ್ವದಿಂದ ಪಶ್ಚಿಮಕ್ಕೆ ಓಡುತ್ತಿರುವುದನ್ನು ರೈಲಿನಲ್ಲಿರುವ ಪ್ರಯಾಣಿಕನು ತಡೆಯಲು ಸಾಧ್ಯವಿಲ್ಲವಾದರೂ ಆತನು ರೈಲಿನೊಳಗೇ ತನ್ನ ಇಚ್ಛೆಯಿಂದ, ಪಶ್ಚಿಮದಿಂದ ಪೂರ್ವಕ್ಕೆ ತಿರುಗಾಡಬಹುದು. ವಿಷಯಕ್ಕೂ ಇಂದ್ರಿಯಕ್ಕೂ ಇರುವ ಸಂಬಂಧವೇ ಸುಖದುಃಖಕ್ಕೆ ಕಾರಣ. ಅವು ನಮಗೆ ಸಂಬಂಧಪಟ್ಟವುಗಳಲ್ಲವೆಂದು ತಿಳಿದುಕೊಳ್ಳಬೇಕು. ಉದಾಹರಣೆಗಾಗಿ "ಬುದ್ಧಿಃ ಕರ್ಮಾನುಸಾರಿಣೀ" ಎಂಬಂತೆ ಪ್ರಾರಬ್ಧವಶಾತ್ ಒಬ್ಬನಿಗೆ ಕದಿಯಬೇಕೆಂಬ ಬುದ್ಧಿ ಹುಟ್ಟುತ್ತೆ. ಆಗ ಅವನು ಕದಿಯುವುದರಿಂದ ಉಂಟಾಗುವ ಸಕಲ ದೋಷಗಳನ್ನೂ ಅನುಸಂಧಾನ ಮಾಡಿ, ಅದರಿಂದ ಉಂಟಾಗುವ ಸಮಸ್ತ ಅಪಮಾನ, ಕಷ್ಟದುಃಖಗಳನ್ನು ಮನಸ್ಸಿನಲ್ಲಿ ಯೋಚಿಸಿ, ಆ ಕೆಲಸ ಮಾಡಲು ಪ್ರಾರಬ್ಧದಿಂದ ಎಷ್ಟು ಪ್ರೇರಣೆಯುಂಟಾದರೂ, ಆ ಕೆಲಸವನ್ನು ನಿಗ್ರಹಿಸುತ್ತಲೇ ಬರಬೇಕು. ಕದಿಯುವುದಕ್ಕೆ ಸಮಯ ದೊರೆತಾಗ ಲೆಲ್ಲಾ ಪೂರ್ವಜನ್ಮದ ವಾಸನೆಯಿಂದ ಕದಿಯುವ ಬುದ್ಧಿಯೇನೋ ಹುಟ್ಟುತ್ತದೆ. ಹಾಗೆ ಹುಟ್ಟಿದಾಗಲೆಲ್ಲಾ ಮೇಲೆ ಹೇಳಿದ ರೀತಿಯಲ್ಲಿ ತಡೆಗಟ್ಟಬೇಕು. ಹೀಗೆ ಮಾಡುವದರಿಂದ ಅಂತಹ ಮನುಷ್ಯನು ಆ ಪ್ರಾರಬ್ಧವನ್ನು ಕದಿಯಬೇಕೆಂಬ ಕೇವಲ ಇಚ್ಛಾಮಾತ್ರದಿಂದಲೇ ಅನುಭವಿಸಿ, ಕಳೆದುಕೊಳ್ಳುತ್ತಾನೆ. ಅಲ್ಲದೆ ಯಾವ ಕಾರ್ಯ ವನ್ನು ಮಾಡುವಾಗಲೂ, ಯಾವ ಕಾಮನೆಯನ್ನೂ ಹೊಂದದೇ ನಿಷ್ಕಾಮನಾಗಿ ಈಶ್ವರಾರ್ಪಣ ಬುದ್ಧಿಯಿಂದ ಮಾಡುತ್ತಾ ಬಂದರೆ, ಚಿತ್ತಶುದ್ಧಿಯಾಗಿ ಪ್ರಾರಬ್ಧವಶಾತ್ ಸಂಭವಿಸುವ ದೇಹಮೂಲಕವಾದ ಸುಖದುಃಖಗಳು ಬಾಧಿಸುವುದಿಲ್ಲ. ಇದನ್ನೇ ಮತ್ಸ್ಯಪುರಾಣದಲ್ಲಿ

"ಪ್ರತಿಕೂಲಂ ತಥಾ ದೈವಂ ಪೌರುಷೇಣ ವಿಹನ್ಯತೇ"

ಅಂದರೆ ದೈವವು (ಪ್ರಾರಬ್ಧಕರ್ಮ) ಪ್ರತಿಕೂಲವಾಗಿದ್ದರೂ ಪುರುಷಪ್ರಯತ್ನದಿಂದ ಹತವಾಗುತ್ತದೆ. ಇದಕ್ಕೆ ಮಾರ್ಕಂಡೇಯ ಸಾವಿತ್ರಿಗಳು ಸಾಕ್ಷಿಗಳು. ಪೂರ್ವಜನ್ಮದ ಪುಣ್ಯವನ್ನು ಅನುಭವಿಸುವ ಸಮಯದಲ್ಲಿ ಯಾರು ಯಾವ ದುಷ್ಕಾರ್ಯವನ್ನು ಮಾಡುತ್ತಿದ್ದರೂ, ಅದರ ಫಲವು ಆಗಲೇ ಬರುವುದಿಲ್ಲ. ಅದರಿಂದಲೇ ದುಷ್ಕಾರ್ಯಗಳನ್ನು ಮಾಡುವವರು ಪ್ರಕೃತದಲ್ಲಿ ತಪ್ಪಿಸಿಕೊಂಡಿರುವರು. ಆದರೆ ಅವರು ಮಾಡುವ ದುಷ್ಕಾರ್ಯದ ಫಲವನ್ನು ಅವರು ಮುಂದೆ ಅನುಭವಿಸಿಯೇ ತೀರಬೇಕು. ಇದಕ್ಕೆ ರಾವಣಾದಿಗಳೇ ಸಾಕ್ಷಿ. ಆತ್ಮಜ್ಞಾನ ಬಂದವನು ಪ್ರಾರಬ್ಧವನ್ನು ಅನುಭವಿಸಿ ಕಳೆಯುತ್ತಾನೆ. ಪ್ರಾರಬ್ಧ ಕರ್ಮಗಳು ದೇಹಕ್ಕೆ ತಾಪಕೊಡುವವೇ ಹೊರ್ತು ತನಗೂ ಅವಕ್ಕೂ ಸಂಬಂಧವಿಲ್ಲವೆಂದು ಅವನು ತಿಳಿದಿರುವುದರಿಂದ ಅವನು ತಾಪಪಡುವುದಿಲ್ಲ. ಆತ್ಮಜ್ಞಾನಿಗೆ ಆಗಾಮಿ ಕರ್ಮ ಬರುವ ಸಂಭವವೇ ಇಲ್ಲ. ಸಂಚಿತ ಕರ್ಮಗಳೆಲ್ಲಾ ಆತ್ಮಜ್ಞಾನದಿಂದ ದಗ್ಧ ವಾಗುತ್ತವೆ.

ಕೆಲವರು ಕೇವಲ ಕರ್ಮದಿಂದ ಮುಕ್ತಿ ಎನ್ನುವರು. ಮತ್ತೆ ಕೆಲವರು ಕೇವಲ ಉಪಾಸನೆಯಿಂದ ಮುಕ್ತಿ ಎನ್ನುವರು. ಇನ್ನು ಕೆಲವರು ಕರ್ಮ ಉಪಾಸನೆ ಇವೆರಡರ ಸಮುಚ್ಚಯದಿಂದ ಮುಕ್ತಿ ಎನ್ನುವರು. ಇವು ಗಳ್ಯಾವುವೂ ಸರಿಯಲ್ಲ. ಮುಕ್ತಿಯು ಶಾಶ್ವತವಾದುದು. "ನಾಸ್ತ್ಯಕೃತಃ ಕೃತೇನ" ಎಂಬ ಶ್ರುತಿಯಂತೆ ಇದು ಕ್ರಿಯಾತ್ಮಕವಾದ ಕರ್ಮ ಉಪಾಸನಾದಿಗಳಿಂದ ಬರುವುದಲ್ಲ. ಕರ್ಮ ಉಪಾಸನಾದಿಗಳನ್ನು ಮಾಡಲು ದೇಹಾದಿ ಪಂಚಕೋಶಗಳ ಅಭಿಮಾನ ಫಲಾಪೇಕ್ಷೆ ಅವಿದ್ಯೆಗಳಿರಬೇಕು. ಅಲ್ಲದೆ ಕರ್ಮಫಲಗಳು ಉತ್ಪತ್ತಿ, ಪ್ರಾಪ್ತಿ, ಸಂಸ್ಕಾರ, ವಿಕಾರ ಎಂಬುವುಗಳಿಂದ ಕೂಡಿರುತ್ತವೆ. ಇವುಗಳು ಮೋಕ್ಷಕ್ಕೆ ಸಂಬಂಧಪಟ್ಟುವೇ ಅಲ್ಲ ಮತ್ತು ಅಕಾಮನಿಗೇನೇ ಮೋಕ್ಷ ಪ್ರಾಪ್ತಿಯು.

ವೇದವು ಜನಗಳ ಯೋಗ್ಯತೆ ನೋಡಿ, ಅವರಿಗೆ ಏನು ಬೇಕೋ ಅದನ್ನು ಉಪದೇಶಮಾಡುತ್ತದೆ. ಐಹಿಕ ಸುಖಗಳೂ ಸ್ವರ್ಗಾದಿಗಳೂ ಬೇಕಾದವರಿಗೆ ಕರ್ಮಕಾಂಡವನ್ನೂ, ಮೋಕ್ಷ ಬೇಕೆಂಬುವವರಿಗೆ ಜ್ಞಾನಕಾಂಡವನ್ನೂ ಬೋಧಿಸಿದೆ. ಕರ್ಮಫಲಗಳನ್ನು ಕೇಳುವವರೇ ಹೆಚ್ಚಾದ್ದರಿಂದ ಅದಕ್ಕಾಗಿ ವೇದದಲ್ಲಿ ಕರ್ಮಕಾಂಡ ವಿಸ್ತಾರವಾಗಿ ಹೊರಟಿದೆ.

ಕರ್ಮಗಳನ್ನು ಈಶ್ವರಾರ್ಪಣ ಬುದ್ಧ್ಯಾ ನಿಷ್ಕಾಮನೆಯಿಂದ ಆಚರಿಸಿದರೆ ಇದ್ದ ದುರಿತಗಳು ನಿವಾರಣೆಯಾಗಿ ಮಲಿನ ಸಂಸ್ಕಾರಗಳೆಲ್ಲಾ ಹೋಗಿ ಚಿತ್ತಶುದ್ಧಿಯಾಗುತ್ತದೆ ಅಷ್ಟೆ. ಚಿತ್ತಶುದ್ಧಿಯಾದಮೇಲೆ ಸಾಧನ ಚತುಷ್ಟಯ ಸಂಪನ್ನನಾಗಿ ಶ್ರವಣ ಮನನಾದಿಗಳನ್ನು ಮಾಡಿಯೇ ಜ್ಞಾನಸಂಪಾದನೆ ಮಾಡಬೇಕು. ಭಕ್ತಿ, ಕರ್ಮ ಮತ್ತು ಉಪಾಸನೆಗಳು ಚಿತ್ತಶುದ್ಧಿ, ಚಿತ್ತೈಕಾಗ್ರತೆಗಳ ಮೂಲಕ ಆತ್ಮಜ್ಞಾನ ಸಂಪಾದನೆಗೆ **ಸಾಧನಗಳೇ ಹೊರತು ಜ್ಞಾನಾಂಗಗಳಲ್ಲ.** ಭಕ್ತಿಯು ಜ್ಞಾನಕ್ಕೆ ಸಾಧನವೆಂಬುದನ್ನು ಗೀತೆಯಿಂದಲೂ ತಿಳಿಯಬಹುದು. ಅದರಲ್ಲಿ, ಜ್ಞಾನಸಾಧನಗಳಾದ 'ಅಮಾನಿತ್ವಾ'ದಿಗಳನ್ನು ಹೇಳುವಲ್ಲೂ, "ಮಯಿಚಾನನ್ಯ ಯೋಗೇನ ಭಕ್ತಿರವ್ಯಭಿಚಾರಿಣೀ" ಎಂದು ಅನನ್ಯ ಮನಸ್ಸಿನ ಪರಮಾತ್ಮಧ್ಯಾನವೆಂಬ ಭಕ್ತಿಯು ಮೋಕ್ಷಕ್ಕೆ ಒಂದು ಸಾಧನವೆಂದು ತಿಳಿಸಿದೆ. ಜ್ಞಾನ ದಿಂದ ಮೋಕ್ಷ ಬರಲು ಯಾವ ಸಹಕಾರಿಗಳೂ ಬೇಕಿಲ್ಲ. ಉದಾಹರಣೆಗಾಗಿ, ದೀಪದಿಂದ ಕತ್ತಲೆ ಹೋಗುತ್ತದೆ. ಆದರೆ ಕತ್ತಲೆ ಹೋಗಿಸಲು, ದೀಪದ ಜೊತೆಗೆ ಬೇರೆ ಸಹಾಯ ಬೇಕಿಲ್ಲ. ದೀಪ ತರಲು ಇತರ ಸಹಾಯ ಬೇಕಾದರೆ ಬೇಕಾಗಬಹುದು ಅಷ್ಟೆ. ಇದರಂತೆಯೇ ಜ್ಞಾನಕ್ಕೆ ಭಕ್ತಿ ಉಪಾಸನೆ ಕರ್ಮಗಳ ಸಂಬಂಧ.

ಧ್ಯಾನರೂಪಕರ್ಮವಾದ ಭಕ್ತಿ, ಉಪಾಸನೆ ಮತ್ತು ಕರ್ಮಗಳಿಗೆ ಸಮುಚ್ಚಯ ಹೇಳಬಹುದೇ ಹೊರತು, ಇವುಗಳಿಗೂ ಆತ್ಮಜ್ಞಾನಕ್ಕೂ ಸಮುಚ್ಚಯವಿಲ್ಲ.

ಇದನ್ನೇ ಶ್ರೀಮಚ್ಛಂಕರರು ಗೀತಾಭಾಷ್ಯದಲ್ಲಿ
"ಗೀತಾಶಾಸ್ತ್ರೇ ಕೇವಲಾದೇವ, ತತ್ವಜ್ಞಾನಾತ್ ಮೋಕ್ಷಪ್ರಾಪ್ತಿಃ, ನ ಕರ್ಮಸಮುಚ್ಚಿತಾತ್, ಇತಿ ನಿಶ್ಚಿತೋರ್ಥ" ಅಂದರೆ ಬರಿಯ ಆತ್ಮತತ್ವಜ್ಞಾನ ಒಂದರಿಂದಲೇ ಮೋಕ್ಷ ದೊರಕುವುದೇ ಹೊರತು ಕರ್ಮದೊಡನೆ ಸೇರಿದ ಜ್ಞಾನದಿಂದ ದೊರಕುವುದಿಲ್ಲ ಎಂದಿದ್ದಾರೆ.

ಉಪಾಸನೆಗಳಲ್ಲಿ ಎರಡು ವಿಧ :— (1) ನಿರ್ಗುಣೋಪಾಸನೆ
(2) ಸಗುಣೋಪಾಸನೆ.

ಮೊದಲು ನಿರ್ಗುಣ ಬ್ರಹ್ಮೋಪಾಸನೆಯನ್ನು ತೆಗೆದುಕೊಳ್ಳೋಣ.

ನಿರ್ಗುಣಬ್ರಹ್ಮವು ನಿರಾಕಾರವಾದ್ದರಿಂದ ಅದರ ಉಪಾಸನೆಯು ಅಸಂಭವವಲ್ಲವೆ? ಎಂದರೆ, ಅಲ್ಲ. ಬ್ರಹ್ಮ ಸೂತ್ರದಲ್ಲಿ ವ್ಯಾಸರು ಹೇಳಿರುವಂತೆ, ನಿರ್ಗುಣ ಬ್ರಹ್ಮದಲ್ಲಿ ಆನಂದ, ವಿಜ್ಞಾನ, ನಿತ್ಯಶುದ್ಧ, ನಿತ್ಯಮುಕ್ತ, ನಿರಂಜನ, ವ್ಯಾಪಕ, ಪರ, ಚಿದೇಕರಸ, ಅದ್ವಿತೀಯ, ಪ್ರತ್ಯಗಾತ್ಮ ಮುಂತಾದ ಗುಣಗಳನ್ನು ಗ್ರಹಿಸಿಕೊಂಡಾಗಲಿ, ನಿರ್ಗುಣಬ್ರಹ್ಮ ಸ್ಥೂಲವಲ್ಲ, ಅಣುವಲ್ಲ, ಇದು ಎಂದು ತೋರಿಸತಕ್ಕದ್ದಲ್ಲ, ನಾಶವಿಲ್ಲದ್ದು ಎಂದು ಇಲ್ಲದ ಗುಣ ಗಳನ್ನು ಗ್ರಹಿಸಿಕೊಂಡಾಗಲಿ, ಉಪಾಸನೆ ಮಾಡಬಹುದೆಂದಿದ್ದಾರೆ. ಗುಣಗಳು ಬ್ರಹ್ಮನಲ್ಲಿಲ್ಲದಿದ್ದರೂ ಅವು ಬ್ರಹ್ಮ ವನ್ನು ನಿಲುಕಿಸಿಕೊಡುತ್ತವೆ. ಅಖಂಡೈಕ ರಸರೂಪವಾದ ಯಾವ ನಿರ್ಗುಣ ಬ್ರಹ್ಮವು ಆನಂದ ಮೊದಲಾದ ಇರತಕ್ಕ ಗುಣಗಳ ಮೂಲಕವೂ, ಸ್ಥೂಲವಲ್ಲವೆಂಬುದೇ ಮೊದಲಾದ ಇಲ್ಲದ ಗುಣಗಳ ಮೂಲಕವೂ ನಿಲುಕು ವುದೋ, ಅದೇ ತಾನೆಂದೂ ಮತ್ತು ತಾನೇ ಅದೆಂದೂ ಉಪಾಸನೆ ಮಾಡುವುದು ನಿರ್ಗುಣೋಪಾಸನೆಯು. ಷಟ್ಸಂಪತ್ತಿಯಲ್ಲಿನ 'ಸಮಾಧಾನ' ಸ್ಥಿತಿಯಲ್ಲಿ, ಮನಸ್ಸು ನಿರ್ಗುಣಬ್ರಹ್ಮದಲ್ಲಿ ಸ್ಥಾಪಿತವಾಗಿ, ಆ ನಿರ್ಗುಣಬ್ರಹ್ಮವೇ ತಾನೆಂದು ಸಾಧಕನು ಜಪಿಸಿದರೂ ಅವನಿಗೆ ಜೀವಬ್ರಹ್ಮರ ಅಭೇದವು ದೃಢವಾಗಿರುವುದಿಲ್ಲ. ಸಾಧನ ಚತುಷ್ಟಯ

ವನ್ನು ಸಾಧಿಸಿದ ಮೇಲೆ ಈ 'ಸಮಾಧಾನ' ಚಿತ್ತನು ನಿರ್ಗುಣೋಪಾಸನೆಯಿಂದ, ನಿರ್ಗುಣಬ್ರಹ್ಮವೇ ತಾನೆಂದೂ ತಾನೇ ನಿರ್ಗುಣಬ್ರಹ್ಮವೆಂದೂ ಪೃಥಕ್ವಾಗಿ ವಿಶದವಾಗಿ ತಿಳಿದುಕೊಳ್ಳುವನು. ಈ ನಿರ್ಗುಣೋಪಾಸನೆಯೇ 'ಅಹಂ ಗ್ರಹೋಪಾಸನೆ' ಅಥವಾ 'ಏಕಾಂತ ಭಕ್ತಿ'. ಇದರಲ್ಲಿ ಸ್ವಸ್ವರೂಪ ಸಂಧಾನ ಹೇಗಿರಬೇಕೆಂಬುದನ್ನು ಯೋಗವಾಸಿಷ್ಠದ ನಿರ್ವಾಣ ಪ್ರಕರಣದಲ್ಲಿ ಈ ಕೆಳಗೆ ಕಂಡಂತೆ ವಿಶದವಾಗಿ ವಿವರಿಸಿದೆ.

ಶುದ್ಧಾತ್ಮನಾದ ತಾನು, ನಿಷ್ಕಲನು (ಭಾಗಗಳಿಲ್ಲದವನು). ಆದರೂ ಮಾಯೆಯನ್ನು ಅಂತಃಕರಣದಲ್ಲಿ ಅಭಿಮಾನಿಸಿದ್ದರಿಂದ ಸಕಲನು (ಭಾಗಗಳುಳ್ಳವನು). ಅಂತಃಕರಣೋಪಾಧಿಯಿಂದ ತಾನು ದೇಹದಲ್ಲಿರುವವನು. ಮಾಯೋಪಾಧಿಕವಾಗಿ ತಾನು ಆಕಾಶದ ತುಂಬಾ ತುಂಬಿರುವನು. ಯಾವುದರಲ್ಲೂ ಆಸಕ್ತಿಯಿಲ್ಲದವನು. ಆದರೆ ದೇಹಾಧ್ಯಾಸದಿಂದ ತಾನು ಎಲ್ಲದರಲ್ಲೂ ಆಸಕ್ತಿಯುಳ್ಳವನು, ನಿತ್ಯನು. ಅಂಗಾಂಗಗಳಲ್ಲಿ ಬೋಧರೂಪದಿಂದ ತಾನು ತುಂಬಿರುವವನು. ಮನಸ್ಸಿನಲ್ಲಿ ತಾನು ಮನನಶಕ್ತಿಯಾಗಿರುವವನು, ಪ್ರಾಣಾಪಾನಗಳ ಮಧ್ಯದಲ್ಲಿ ತಾನು ಗೋಚರವಾಗುವವನು. ಹೃದಯ, ಕಂಠ, ತಾಲು, ಮಧ್ಯಗಳಲ್ಲಿ ತಾನು ಇರುವವನು. ಭ್ರೂಮಧ್ಯ, ನಾಸಾಪುಟಗಳು ಎಂಬ ಪೀಠಗಳಲ್ಲಿ ತಾನು ಇರುವವನು.

ಮನಸ್ಸೆಂಬವನು ತನ್ನ ದ್ವಾರಪಾಲಕನು. ಅವನು ಜಗತ್ರಯಗಳಲ್ಲಿ ನಡೆಯುವುದನ್ನೆಲ್ಲಾ ತನಗೆ ತಿಳಿಸುತ್ತಾ ತನ್ನ ಮನೆಯೆಂಬ ದೇಹದಲ್ಲಿ, ಬಾಗಿಲಲ್ಲಿ ನಿಂತಿರುವನು. ಚಿಂತೆಯೆಂಬ ತನ್ನ ದೂತನು ಶುದ್ಧರೂಪದಿಂದ ಬಾಗಿಲಿನಲ್ಲಿ ತನ್ನ ಅಪ್ಪಣೆಯನ್ನು ನಿರೀಕ್ಷಿಸುತ್ತಾ ನಿಂತಿರುವನು. ತನ್ನಿಂದಲೇ ಜನಿಸಿರುವ ಬುದ್ಧಿ ಎಂಬ ಶಕ್ತಿಯೂ ತನಗಾಗಿ ಕೆಲಸಮಾಡುವುದು. ಚಿತ್ರ ವಿಚಿತ್ರವಾದ ಜ್ಞಾನಗಳು ತನ್ನ ಅಂಗಗಳಲ್ಲಿ ತೊಟ್ಟಿರುವ ಭೂಷಣಗಳು.

ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳ ದ್ವಾರ ತಾನು ದೇಶ, ಕಾಲೋಪಾಧಿಗಳಿಂದ ತನ್ನ ಮೂಲ ಸ್ವಭಾವವನ್ನು ಬಿಟ್ಟು ಆಕೃತಿಯನ್ನು ವಹಿಸಿದಂತೆ ತೋರುತ್ತಿದ್ದರೂ ತಾನೇ ಅನಂತನಾದ ಆತ್ಮನು.

"ಅಹಂ" ಶಬ್ದವಾಚ್ಯನಾದ ತಾನು ಈ ಬ್ರಹ್ಮಾಂಡವನ್ನೆಲ್ಲಾ ತುಂಬಿ ಏಕಾತ್ಮನಾಗಿ ಎಲ್ಲಕ್ಕೂ ಪೂರ್ಣತೆಯನ್ನು ಕೊಡುವ ಪೂರ್ಣನಾಗಿರುವವನು. ಎಲ್ಲಾ ಪ್ರಾಣಿಗಳ ಒಳಗೆ ಇರುವವನಾಗಿ, ಸರ್ವವೂ ತಾನೇ ಆಗಿ, ಸರ್ವರಿಗೂ ಇಷ್ಟಾರ್ಥ ಸಾಧನೆಗೆ ಏಕೈಕ ಸಾಧನನಾಗಿರುವವನೂ ತಾನೇ.

"ಚಿದ್ರೂಪಂ ಸೂರ್ಯಲಕ್ಷಾಭಂ ಸಮಸ್ತಾಭಾಸ ಭಾಸನಂ ।
ಅಂತಸ್ಥ ಚಿತ್ಪ್ರಕಾಶಂತಂ ಅಹಂತಾಸಾರಮಾಶ್ರಯೇತ್ !

—(ಯೋಗವಾಸಿಷ್ಠ, ನಿರ್ವಾಣ ಪ್ರಕರಣ, 38ನೇ ಸರ್ಗ 6ನೇ ಶ್ಲೋಕ)

ಎಂಬಂತೆ ಚಿದ್ರೂಪನೂ, ಲಕ್ಷ ಸೂರ್ಯರಷ್ಟು ಪ್ರಕಾಶವುಳ್ಳವನೂ, ಬೆಳಗುವ ಸಮಸ್ತಕ್ಕೂ ಬೆಳಕು ಕೊಡುವವನೂ ಅಂತಸ್ಥವಾಗಿ ಚಿತ್ಪ್ರಕಾಶದಿಂದ ಬೆಳಗುತ್ತಿರುವವನೂ, "ಅಹಂ" ಎಂಬುದಕ್ಕೆ ಸಾರವಾಗಿರುವವನೂ ತಾನೇ. ತಾನು ಅಸ್ತನಾಗುವುದಿಲ್ಲ, ಉದಯನಾಗುವುದೂ ಇಲ್ಲ. ಇಂತಹ ವಿಕಾರರಹಿತನಾದ ತನ್ನನ್ನು, ಸರ್ವವೂ ತಾನೇ ಎಂದು ಹೀಗೆ ತಿಳಿದಿರುವ ಬುದ್ಧಿಯಿಂದ ಸ್ವಸ್ವರೂಪಾನುಸಂಧಾನ ಮಾಡಿ ಧ್ಯಾನಿಸಬೇಕು.

ಜಗತ್ತಿನ ಸ್ಥಿತಿಗೆ ಕಾರಣವಾದ ಮತ್ತು ಆ ಸ್ಥಿತಿಯಿಂದ ಸಂಭವಿಸುವ, ಸಮಸ್ತ ವ್ಯಾಪಾರಗಳನ್ನೂ ಆತ್ಮಾರಾಮನಾದ ತನಗೆ ಒಪ್ಪಿಸಿ, ಮೃತಿ, ಜೀವಿತ, ಸ್ವಪ್ನಾದಿಗಳಲ್ಲಿ ನಡೆಯುವ ಸಮಸ್ತ ಕಾರ್ಯಗಳ ಫಲಗಳನ್ನು ತನಗೇ ಸಮರ್ಪಿಸಿ, ತನ್ನನ್ನು ಪೂಜಿಸಿ ಧ್ಯಾನಿಸಬೇಕು.

> ದಾರಿದ್ರ್ಯೇಣಾಥ ರಾಜ್ಯೇನ, ಪ್ರವಾಹಪತಿತಾತ್ಮನಾ |
> ವಿಚಿತ್ರ ಚೇಷ್ಟಾ ಪುಷ್ಪೇಣ ಶುದ್ಧಾತ್ಮಾನಂ ಸಮರ್ಚಯೇತ್ ||

(ಯೋಗವಾಸಿಷ್ಠ, ನಿರ್ವಾಣ ಪ್ರಕರಣ, 39ನೇ ಸರ್ಗ, 48ನೇ ಶ್ಲೋಕ)

ಎಂಬಂತೆ, ದರಿದ್ರನಾಗಲಿ, ರಾಜ್ಯಭೋಗವನ್ನು ಭೋಗಿಸುತ್ತಲೇ ಇರಲಿ, ಪ್ರಾರಬ್ಧವಶದಿಂದ ಸಂಪ್ರಾಪ್ತವಾಗಿರುವ ತನ್ನ ಅವಸ್ಥೆಗೆ ಅನುಸಾರವಾಗಿ, ತಾನು ಮಾಡುವ ಚಿತ್ರವಿಚಿತ್ರ ಕಾರ್ಯರೂಪವಾದ ಪುಷ್ಪಗಳನ್ನು ಈ ನಾನೆಂಬ ಆತ್ಮಾರಾಮನಿಗೆ ಅರ್ಪಿಸಿ ಆತನನ್ನು ಧ್ಯಾನಿಸಬೇಕು.

ಪ್ರಾಪ್ತವಾಗುವ ಭೋಗಗಳು ವಿಹಿತವಾಗಿರಲಿ, ನಿಷಿದ್ಧವಾಗಿರಲಿ, ಯಾವಾಗಲೂ ಅವುಗಳಲ್ಲಿ ತ್ಯಾಗಬುದ್ಧಿಯುಳ್ಳವನಾಗಿ ವೈರಾಗ್ಯಸಂಪನ್ನನಾಗಿ ಶುದ್ಧನಾದ ಆತ್ಮಾರಾಮನನ್ನು ಅರ್ಚಿಸಬೇಕು. ವ್ಯವಹಾರದ ದೆಶೆಯಲ್ಲಿ, ನಷ್ಟಗಳಲ್ಲಿಯೂ, ಪ್ರಾಪ್ತಿಗಳಲ್ಲಿಯೂ ನಿರ್ವಿಕಾರನಾಗಿರುವುದೇ ಆತ್ಮಾರಾಮನಿಗೆ ಪರಮಪ್ರಿಯವಾದ ಅರ್ಚನವು.

> ಅಯಂ ಸೋಹಮಯಂ ನಾಹಂ, ವಿಭಾಗಮಿತಿ ಸಂತ್ಯಜೇತ್ |
> ಸರ್ವಂ ಬ್ರಹ್ಮೇತಿ ನಿಶ್ಚಿತ್ಯ ನಿತ್ಯಾತ್ಮಾರ್ಚಾವ್ರತಂ ಚರೇತ್ ||

(ಎಂದು ಯೋಗವಾಸಿಷ್ಠದ ನಿರ್ವಾಣ ಪ್ರಕರಣದ 39 ನೇ ಸರ್ಗದ 48 ನೇ ಶ್ಲೋಕದಲ್ಲಿ ಹೇಳಿರುವಂತೆ)

ಇದು ತಾನು, ಇದು ತಾನಲ್ಲ ಎಂಬ ವಿಭಾಗವನ್ನು ಬಿಟ್ಟು ಸರ್ವವೂ ಬ್ರಹ್ಮವೇ ಎಂದು ನಿಶ್ಚಯಿಸಿಕೊಂಡು ನಿತ್ಯವ್ರತವನ್ನು ಆಚರಿಸಬೇಕು. ಅಲ್ಲದೆ ಅನಂತ ಶಕ್ತಿಯುಳ್ಳವನಾಗಿಯೂ, ಅವಿದ್ಯೆಯೆಂಬ ಮಾಯೆಗೆ ನಿಯಂತೃವಾಗಿಯೂ, ಸರ್ವಪ್ರಪಂಚವನ್ನು ತಿಳಿದವನಾಗಿಯೂ, ಪರಿಪೂರ್ಣಾನಂದಘನನಾಗಿಯೂ, ಭಕ್ತಜನೋದ್ಧರಣಕ್ಕಾಗಿ ಶ್ರೀರಾಮ ಕೃಷ್ಣಾದಿ ಅನೇಕ ಅವತಾರಗಳನ್ನು ಧರಿಸುವವನಾಗಿಯೂ, ಶಿವ, ವಿಷ್ಣು, ದೇವಿ ಮುಂತಾದ ದೇವತಾರೂಪಾತ್ಮಕನಾಗಿಯೂ, ಓಂಕಾರರೂಪನಾಗಿಯೂ, ಹೀಗೆ ಸಗುಣ ಬ್ರಹ್ಮರೂಪದಲ್ಲಿ ತೋರಿಕೊಳ್ಳುವವನೂ ತಾನೇ ಎಂದೂ, ನಿರ್ಗುಣ ಬ್ರಹ್ಮನನ್ನು ಉಪಾಸನೆ ಮಾಡಿದರೆ, ಇಂತಹ ನಿರ್ಗುಣೋಪಾಸನೆಯೇ ಉತ್ತಮವಾದ ಏಕಾಂತ ಭಕ್ತಿಯು. ಮತ್ತು ಸಮಸ್ತ ಕರ್ಮಗಳನ್ನೂ ಅವನಿಗೆ ಸಮರ್ಪಿಸಿ, ನಿಷ್ಕಾಮಕರ್ಮ ಮಾಡುತ್ತಾ ಅವನನ್ನೇ ಅನನ್ಯ ಶರಣು ಹೊಂದಿ, ಅವನನ್ನೇ ನಿರಂತರ ಚಿಂತಿಸುತ್ತಾ, ಅವನ ಪ್ರೇಮದಿಂದ ಹುಟ್ಟಿದ ಮಹತ್ತಾದ ಆನಂದ ಸಮುದ್ರದಲ್ಲಿ ಮುಳುಗಿದರೆ, ಉಪಾಸಕನ ಅಂತಃಕರಣವು ಜ್ಞಾನಪ್ರತಿಬಂಧಕವಾದ ಪಾಪಗಳನ್ನು ಕಳೆದುಕೊಂಡು, ಜ್ಞಾನಾನುಕೂಲವಾದ ಪುಣ್ಯಗಳಿಂದ ಯುಕ್ತವಾಗುತ್ತದೆ. ಶಮ ದಮ ಸಮಾಧಾನಪೂರ್ವಕ ನಿಷ್ಕಾಮ ಕರ್ಮದಿಂದ ಹೊಳಪುಗೊಂಡ ನಿರ್ಗುಣ ಉಪಾಸನೆಯು ಬ್ರಹ್ಮಜ್ಞಾನಿಯಾದ ಗುರುವಿನ ಸಮೀಪದಲ್ಲಿ ಆಚರಿಸಲ್ಪಡುವ ಶ್ರವಣ, ಮನನಗಳಿಂದ ಸಂಸ್ಕಾರ ಹೊಂದುತ್ತದೆ. ಹೀಗಾಗಲಾಗಿ ಇಂತಹ ಸಾಧಕನ ಸ್ವಚ್ಛವಾದ ಅಂತಃಕರಣದಲ್ಲಿ ನಿದಿಧ್ಯಾಸನಗಳ ಸಾಧನೆಯಿಂದ, ನಾನು ಬ್ರಹ್ಮನಾಗಿರುವೆನು ಎಂಬ ಸಾಕ್ಷಾತ್ಕಾರ ರೂಪವಾದ ವೃತ್ತಿಯುಂಟಾಗುವುದು. ಇದೇ ಗುರುವಿನಿಂದ ಉಪದೇಶವಾಗುವ 'ತತ್ತ್ವಮಸಿ' ಎಂಬ ವೇದಾಂತ ಮಹಾವಾಕ್ಯಜನ್ಯ ಬ್ರಹ್ಮಜ್ಞಾನ.

ಇಂತಹ ಸಾಕ್ಷಾತ್ಕಾರನೆಂಬ ವೃತ್ತಿಯಲ್ಲಿ ಚೈತನ್ಯವು ಪ್ರತಿಬಿಂಬಿಸಲಾಗಿ, ಸ್ವಾಶ್ರಯವೂ ಸ್ವವಿಷಯವೂ ಆದ ಮೂಲಾಜ್ಞಾನವು ನಿವೃತ್ತವಾಗುವುದು. ಮೂಲಾಜ್ಞಾನವು ನಿವೃತ್ತವಾದ ಮೇಲೆ ಅದರ ವೃತ್ತಿಯೂ ಅದರಿಂದೊಡಗೂಡಿದ ಸಮಸ್ತ ಕಾರ್ಯಪ್ರಪಂಚವೂ ತನ್ನಷ್ಟಕ್ಕೆ ತಾನೇ ನಿವೃತ್ತವಾಗುವುದು. ಜೀವನು ಸರ್ವ ಉಪಾಧಿಗಳನ್ನು ಕಳೆದುಕೊಂಡು ಕೇವಲ ಸಚ್ಚಿದಾನಂದರೂಪದಿಂದ ಇರುವನು.

"ಬ್ರಹ್ಮವೇದ ಬ್ರಹ್ಮೈವ ಭವತಿ" ಎಂಬ ಶ್ರುತಿಯಂತೆ, 'ನಾನು ಬ್ರಹ್ಮರೂಪವು' ಎಂದು ಸಾಕ್ಷಾತ್ಕಾರ ಪಡೆದ ಜ್ಞಾನಿಯು ಬ್ರಹ್ಮರೂಪವೇ ಆಗುವನು. ಹೀಗೆ ನಿರ್ಗುಣಬ್ರಹ್ಮೋಪಾಸಕನು ಪರಮಾತ್ಮನನ್ನು ತಾನಾಗಿಯೇ ಹೊಂದುವನು ಇವನನ್ನೇ ಗೀತೆಯಲ್ಲಿ

ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ|
ಪ್ರಿಯೋಹಿ ಜ್ಞಾನಿನೋತ್ಯರ್ಥಂ ಅಹಂ ಸಚ ಮಮ ಪ್ರಿಯಃ||

ಅಂದರೆ ಇಂತಹ ನಿರ್ಗುಣೋಪಾಸಕನಾದ ಜ್ಞಾನಿಯು ಸಮಸ್ತ ವಿಕ್ಷೇಪಗಳನ್ನೂ ಕಳೆದುಕೊಂಡು ಪ್ರತ್ಯಗಭಿನ್ನನಾದ ಪರಮಾತ್ಮನಲ್ಲಿ ಸದಾ ಸಮಾಹಿತ ಚಿತ್ತವುಳ್ಳವನಾಗಿ ನಿತ್ಯಯುಕ್ತನೆನಿಸಿಕೊಳ್ಳುವನು, ಅಲ್ಲದೆ ಪ್ರತ್ಯಗಭಿನ್ನ ಪರಮಾತ್ಮನಲ್ಲೇ ಅನುರಕ್ತಿ ಎಂಬ ಭಕ್ತಿಯನ್ನು ಹೊಂದಿ, ಇತರ ಯಾವುದರಲ್ಲಿಯೂ ಆ ಭಕ್ತಿಯನ್ನು ಹೊಂದದೆ 'ಏಕಭಕ್ತಿ' ಎನ್ನಿಸಿಕೊಳ್ಳುವನು. ಆ ಜ್ಞಾನಿಗೆ ನಾನು ಅತ್ಯಂತ ಪ್ರಿಯನು ಮತ್ತು ಅವನು ನನಗೆ ಅತ್ಯಂತ ಪ್ರಿಯನು ಏಕೆಂದರೆ ನಾನು ಜ್ಞಾನಿಯ ಸ್ವರೂಪವೇ ಆಗಿರುವೆನು ಎಂಬುದಾಗಿ ಶ್ರೀಕೃಷ್ಣನು ಹೇಳಿರುವನು.

ನಿರ್ಗುಣೋಪಾಸನೆಯು ಮರಣಾದಿ ಕಾರಣಗಳಿಂದ ಇಹದಲ್ಲಿ ಸಾಕ್ಷಾತ್ಕಾರಪರ್ಯಂತ ಸಾಧಿತವಾಗದೇ ಇದ್ದರೂ ಅದು ಹಿರಣ್ಯಗರ್ಭಲೋಕದಲ್ಲಿ ಸಾಂಗವಾಗಿ ಸಾಕ್ಷಾತ್ಕಾರವನ್ನುಂಟುಮಾಡಿ ಮೋಕ್ಷವನ್ನು ಅಂದರೆ ಆ ನಿರ್ಗುಣಬ್ರಹ್ಮನಲ್ಲಿ ಏಕತ್ವವನ್ನು ಹೊಂದಿಸುತ್ತದೆ. ರತ್ನದ ಕಾಂತಿಯನ್ನು ನೋಡಿ ಆ ಕಾಂತಿಯೇ ರತ್ನವೆಂದು ಭ್ರಮಿಸಿ ರತ್ನವನ್ನು ಹೊಂದುವುದಕ್ಕೆ ಪ್ರವೃತ್ತನಾದ ಪುರುಷನಿಗೆ ರತ್ನದ ಕಾಂತಿಯ ಮೂಲಕ ರತ್ನವು ದೊರೆಯುವಂತೆ ಆ ನಿರ್ಗುಣ ಬ್ರಹ್ಮೋಪಾಸನೆಯಿಂದ ಈ ಅಧಿಕಾರಿ ಪುರುಷನಿಗೆ ಆ ನಿರ್ಗುಣ ಬ್ರಹ್ಮಪ್ರಾಪ್ತಿ ರೂಪ ಫಲವಾಗುವುದು. ಸದ್ಗುರು ಉಪದೇಶ ಮಾಡಿದರೂ, ಯಾವುದಾದರೂ ಪ್ರತಿಬಂಧಕದಿಂದ ನಿರ್ಗುಣ ಬ್ರಹ್ಮ ಸ್ವರೂಪವು ಅನುಭವಕ್ಕೆ ಬಾರದೆಹೋದರೂ, ಅವನು ಶ್ರುತಿ, ಗುರುಗಳ ವಾಕ್ಯಗಳಲ್ಲಿ ನಂಬಿಕೆಯಿಟ್ಟು ತನ್ನ ಸ್ವರೂಪವು ನಿರ್ಗುಣ ಬ್ರಹ್ಮವಾಗಿದೆ ಎಂದು ಸದಾ ಚಿಂತಿಸುತ್ತಿದ್ದರೆ, ಕೆಲವು ಕಾಲಗಳಲ್ಲಿ ಅವನ ಸ್ವರೂಪ ಸಾಕ್ಷಾತ್ಕಾರದ ಪ್ರತಿಬಂಧಕಗಳು ಹೋಗಿ ಅವನ ಅಂತಃಕರಣವು ಪರಿಶುದ್ಧವಾಗಿ, ಅವನಿಗೆ ತನ್ನ ನಿರ್ಗುಣ ಬ್ರಹ್ಮಸ್ವರೂಪವು ಅನುಭವಕ್ಕೆ ಬರುವುದು. ಈ ವಿಷಯವನ್ನು

ಅನುಭೂತೇರಭಾವೇಪಿ, ಬಹ್ಮಾಸ್ಮೀತ್ಯೇವ ಚಿಂತ್ಯತಾಂ|

ಎಂಬಲ್ಲಿ ಪರಬ್ರಹ್ಮಸ್ವರೂಪವು ತನ್ನ ಅನುಭವಕ್ಕೆ ಬಾರದೇ ಹೋದರೂ ತಾನು ಪರಬ್ರಹ್ಮನಾಗಿದ್ದೇನೆ ಎಂದು ಅವನು ಸದಾ ಚಿಂತಿಸಲಿ ಎಂದು ಹೇಳಿದೆ. ಏಕೆಂದರೆ "ಕೀಟ ಭ್ರಮರ ಯೋಗೇನ ಕೀಟೋಪಿ ಭ್ರಮರಾಯತೇ" ಎಂಬ ಯುಕ್ತಿಯಂತೆ ಭ್ರಮರವಲ್ಲದ ಕೀಟವು ಭ್ರಮರ ಧ್ಯಾನದಿಂದ ಭ್ರಮರವಾಗುವಾಗ, ನಿರ್ಗುಣ ಬ್ರಹ್ಮ ಸ್ವರೂಪವೇ ಆಗಿರುವ ಪುರುಷನು ನಿರ್ಗುಣ ಬ್ರಹ್ಮದ ಉಪಾಸನೆ, ಮಾಡಲು ಅವನ ನಿರ್ಗುಣ ಬ್ರಹ್ಮಸ್ವರೂಪವು ಅವನಿಗೆ ಕ್ರಮವಾಗಿ ಸಾಕ್ಷಾತ್ಕಾರವಾಗುವುದರಲ್ಲಿ ಸಂದೇಹವಿಲ್ಲ.

ಇದನ್ನೇ, "ಜ್ಞಾನಪ್ರಸಾದೇನ ವಿಶುದ್ಧ ಸತ್ವಸ್ತತಸ್ತುತಂ ಪಶ್ಯತಿ ನಿಷ್ಕಲಂ, ಧ್ಯಾಯಮಾನಃ" ಅಂದರೆ ನಿರ್ಗುಣ ಬ್ರಹ್ಮೋಪಾಸನೆಯಿಂದ ಯಾವನ ಚಿತ್ತವು ಪರಿಶುದ್ಧವಾಗಿದೆಯೋ ಅಂಥ ಪುರುಷನು ನಿರ್ಗುಣ ಬ್ರಹ್ಮವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೆ. ಗೀತೆಯಲ್ಲಿ ಜ್ಞಾನಕಾಂಡದಲ್ಲಿ ಹೇಳಿರುವ ಸಗುಣೋಪಾಸನೆ ಮತ್ತು ನಿರ್ಗುಣೋಪಾಸನೆಗಳ ಮುಖ್ಯ ಫಲವು, ಚಿತ್ತೈಕಾಗ್ರತಾ ದ್ವಾರ ಬ್ರಹ್ಮಸಾಕ್ಷಾತ್ಕಾರವೇ ಆಗಿರುತ್ತದೆ. ಬ್ರಹ್ಮಲೋಕಾದಿಗಳ ಪ್ರಾಪ್ತಿಯು ಉಪಾಸನೆಗಳ ಅವಾಂತರ ಫಲವೇ ಹೊರತು ಮುಖ್ಯ ಫಲವಲ್ಲ. ಈ ಕಾರಣದಿಂದಲೇ ವ್ಯಾಸರು ಉಪಾಸನೆಗಳ ವಿಚಾರವನ್ನು ಬ್ರಹ್ಮಸೂತ್ರದಲ್ಲಿ ಜ್ಞಾನಕಾಂಡದಲ್ಲಿಯೇ ಮಾಡಿದ್ದಾರೆ.

ನಿರ್ಗುಣ ಬ್ರಹ್ಮೋಪಾಸನೆಯು ದೇಹಾಭಿಮಾನ ಉಳ್ಳವರಿಗೆ ಸುಲಭವಲ್ಲ. ಯಮ ನಿಯಮಾದಿಗಳಿಲ್ಲದೆ, ಎತ್ತಿಕೊಳ್ಳುತ್ತಲೇ ಈ ಉಪಾಸನೆಯನ್ನು ಸಾಧಿಸುವುದು ಸುಲಭವಲ್ಲ. **ನಿತ್ಯಾನಿತ್ಯ ವಸ್ತುವಿವೇಕ, ವೈರಾಗ್ಯ, ಶಮಾದಿ ಷಟ್ಸಂಪತ್ತಿ, ಮೋಕ್ಷೇಚ್ಛೆ**ಗಳೆಂಬ ಸಾಧನ ಚತುಷ್ಟಯಗಳು, **ಸರ್ವಕರ್ಮ ಸನ್ಯಾಸ,** ಗುರೂಪದೇಶ, ಮಹಾವಾಕ್ಯ ವಿಚಾರ ಮುಂತಾದ ಸಾಧನಗಳು ಪ್ರಯಾಸದಿಂದ ಸಿದ್ಧಿಸತಕ್ಕವುಗಳಾಗಿವೆ.

ಆದ್ದರಿಂದ ಶ್ರೀಕೃಷ್ಣನು ಗೀತೆಯಲ್ಲಿ ಹೇಳಿರುವಂತೆ ಇದಕ್ಕೆ ಅಶಕ್ತರಾದವರು ಎಲ್ಲಕ್ಕೂ ಆದಿಯಲ್ಲಿ ಚಿತ್ತಶುದ್ಧಿಗಾಗಿ ಸಗುಣ ಬ್ರಹ್ಮೋಪಾಸನೆಯನ್ನು ಮಾಡಬೇಕು. ಚಿತ್ತಶುದ್ಧಿಯಾಯಿತೆಂದರೆ, ಸಾಧನ ಚತುಷ್ಟಯಗಳನ್ನು ಸಾಧಿಸಲು ಸುಲಭವಾಗುವುದು.

ಇನ್ನು ಸಗುಣೋಪಾಸನೆಯ ವಿಷಯವನ್ನು ತೆಗೆದುಕೊಳ್ಳೋಣ.

ಉಪನಿಷತ್ತುಗಳಲ್ಲಿ ಸಗುಣೋಪಾಸನೆಗಳನ್ನು ಅನೇಕವಾಗಿ ಕಾಣಬಹುದು. ಛಾಂದೋಗ್ಯದಲ್ಲಿ ಪಂಚಾಗ್ನಿ ಉಪಾಸನೆ, ಉದ್ಗೀಥೋಪಾಸನೆ (ಪ್ರಾಣೋಪಾಸನೆ), ಓಂಕಾರೋಪಾಸನೆಗಳಿವೆ. ಬೃಹದಾರಣ್ಯಕದಲ್ಲಿ ಆದಿತ್ಯ ಮಂಡಲದಲ್ಲಿರುವ ಪುರುಷನ ಉಪಾಸನೆಯನ್ನೂ,ಬಲಗಣ್ಣಿನಲ್ಲಿರುವ ಪುರುಷನ ಉಪಾಸನೆಯನ್ನೂ ಹೇಳಿದೆ. ಇನ್ನೂ ಕೆಲವು ಕಡೆಗಳಲ್ಲಿ ಹಿರಣ್ಯಗರ್ಭೋಪಾಸನೆ, ವೈಶ್ವಾನರ ವಿದ್ಯೋಪಾಸನೆ, ದಹರೋಪಾಸನೆ, ಶಾಂಡಿಲ್ಯ ಉಪಾಸನೆ, 'ತದ್ವನ' ಉಪಾಸನೆ ಮುಂತಾದ ಉಪಾಸನೆಗಳಿವೆ. ತೈತ್ತಿರೀಯದಲ್ಲಿ ವ್ಯಾಹೃತಿರೂಪವಾದ ಬ್ರಹ್ಮೋಪಾಸನೆಯನ್ನೂ, ಓಂಕಾರರೂಪ ಬ್ರಹ್ಮೋಪಾಸನೆಯನ್ನೂ, ಬ್ರಹ್ಮವನ್ನು ಬೇರೆ ಬೇರೆ ಧರ್ಮಗಳುಳ್ಳವನೆಂದು ಮಾಡುವ 'ತತ್ ಪ್ರತಿಷ್ಠೇತ್ಯುಪಾಸೀತ' ಮುಂತಾದ ಉಪಾಸನೆಗಳನ್ನೂ ಹೇಳಿದೆ. ಈಶಾವಾಸ್ಯದಲ್ಲಿ ವ್ಯಾಕೃತ, ಅವ್ಯಾಕೃತ ಉಪಾಸನೆಗಳನ್ನೂ ಹೇಳಿದೆ. ಕಾಠಕೋಪನಿಷತ್ತಿನಲ್ಲಿ ಓಂಕಾರವು ಬ್ರಹ್ಮನಿಗೆ ವಾಚಕವೂ, ಪ್ರತೀಕವೂ ಆಗಿ ಉಪಾಸನೆಗೆ ಅಳವಡಿಸಿದೆ. ಈ ಉಪಾಸನೆಗಳ ವಿಷಯವು ಬ್ರಹ್ಮಸೂತ್ರದ ಮೂರನೇ ಅಧ್ಯಾಯದಲ್ಲಿ ಚರ್ಚಿತವಾಗಿದೆ. ಆದರೆ ಈಗ ನೋಡುವಲ್ಲಿ, ಇಂತಹ ವೈದಿಕ ಉಪಾಸನೆಗಳ ಅನುಷ್ಠಾನವು ಬಹಳ ಅಪರೂಪವಾಗಿ ಕೇವಲ ತಂತ್ರಶಾಸ್ತ್ರಕ್ಕೆ ಸಂಬಂಧಿಸಿದ ಉಪಾಸನೆಗಳೇ ಅನುಷ್ಠಾನದಲ್ಲಿ ಕಂಡುಬರುತ್ತವೆ. ಈ ವೈದಿಕ ಉಪಾಸನೆಗಳನ್ನು ಸಾಧಿಸಿದವರು ದೇಹಪಾತವಾಗುತ್ತಲೂ ಅರ್ಚಿರಾದಿ ಮಾರ್ಗದಿಂದ ಬ್ರಹ್ಮಲೋಕಕ್ಕೆ ಹೋಗಿ ಅಲ್ಲಿ ನಿರ್ಗುಣ ಬ್ರಹ್ಮವಿಚಾರ ಸಾಧನೆಗಳಿಂದ ಬ್ರಹ್ಮಸಾಕ್ಷಾತ್ಕಾರವನ್ನು ಪಡೆಯುವರೆಂಬ ಅಂಶವನ್ನು ಮೇಲೆಯೇ ಹೇಳಿದೆ. ನಿತ್ಯಕರ್ಮದೊಡನೆ ತಾಂತ್ರಿಕ ಸಗುಣ ಉಪಾಸನೆಗಳನ್ನು ಮಾಡಿದವರು ಚಿತ್ತಶುದ್ಧಿಯನ್ನೂ, ಪರಮೇಶ್ವರನ ಅನುಗ್ರಹವನ್ನೂ ಪಡೆದು, ಸಾಧನ ಚತುಷ್ಟಯಸಂಪನ್ನರಾಗಿ ಮುಕ್ತಿಪಥದಲ್ಲಿ ಕ್ರಮಕ್ರಮವಾಗಿ ಮುಂದೆ ಸಾಗುತ್ತಾರೆ.

ಸಗುಣೋಪಾಸನೆಯಲ್ಲಿ ಫಲಾಕಾಂಕ್ಷಿಗಳಾದ ಮಂದಮತಿಗಳಿಗೆ ತಾವು ಯಾವ ಯಾವ ಆಕಾರದಿಂದ ಸಗುಣಮೂರ್ತಿಯನ್ನು ಉಪಾಸಿಸಿ ಸಾಕ್ಷಾತ್ಕರಿಸುವರೋ ಆಯಾಯಾ ಆಕಾರದಿಂದ ಆ ಮೂರ್ತಿಯು ಪ್ರಸನ್ನನಾಗಿ ಅವರವರ ಇಷ್ಟಾರ್ಥಗಳನ್ನು ಕೊಡುತ್ತಾನೆ.

ಸಾಧಕನಿಗೆ ತಾನು ಮಾಡುವ ಭಾವನೆಯ ತಾರತಮ್ಯದಿಂದ ಸಾರ್ಷ್ಟಿ, ಸಾರೂಪ್ಯ, ಸಾಮೀಪ್ಯ, ಸಾಲೋಕ್ಯ ಎಂಬ ನಾಲ್ಕು ವಿಧ ಫಲಗಳು ಪ್ರಾಪ್ತವಾಗುವುವು. ಅವನು ತನ್ನ ಮಂದ ಭಾವನೆಗಳ ತಾರತಮ್ಯಗಳಿಗೆ ಅನುಸಾರವಾಗಿ ಮೇಲ್ಕಂಡ ನಾಲ್ಕು ಫಲಗಳಲ್ಲಿ ಯಾವುದಾದರೂ ಒಂದನ್ನು ಹೊಂದುತ್ತಾನೆ.

ಕೈಲಾಸ, ವೈಕುಂಠ, ಸತ್ಯಲೋಕ ಎಂಬ ಮೂರು ಲೋಕಗಳಿಲ್ಲದೆ, ಹಿರಣ್ಯಗರ್ಭಲೋಕ ಒಂದೇ ಇರುತ್ತದೆ. ಪರಮೇಶ್ವರನನ್ನು ವಿಷ್ಣುರೂಪದಿಂದ ಉಪಾಸನೆ ಮಾಡಿದರೆ ಹಿರಣ್ಯಗರ್ಭನೇ ವಿಷ್ಣುರೂಪದಿಂದ ತೋರುವನು. ಹಿರಣ್ಯಗರ್ಭನ ಲೋಕವೇ ಅವನಿಗೆ ವೈಕುಂಠವಾಗಿ ತೋರುವುದು. ಪರಮೇಶ್ವರನನ್ನು ಶಿವರೂಪದಿಂದ ಉಪಾಸಿಸಿದರೆ, ಹಿರಣ್ಯಗರ್ಭನು ಶಿವನ ರೂಪದಿಂದಲೇ ತೋರುತ್ತಾನೆ. ಹಿರಣ್ಯಗರ್ಭನ ಲೋಕವೇ ಕೈಲಾಸವಾಗಿ ತೋರುತ್ತದೆ. ಈ ಲೋಕಗಳೆಲ್ಲಾ ಮಾಯಿಕ. ಸಾಧಕನು ಈ ಲೋಕಗಳಲ್ಲಿ ಸುಖವನ್ನು ಅನುಭವಿಸಿಯಾದಮೇಲೆ ಪುನಃ ಭೂಲೋಕಕ್ಕೆ ಹಿಂದಿರುಗುವನು.

ಸಗುಣೋಪಾಸನೆಯ ಕ್ರಮವನ್ನು ಒಟ್ಟಿನಲ್ಲಿ ಒಂದು 'ವೃಕ್ಷನಕ್ಷೆ'ಯಂತೆ ಹೇಳುವುದಾದರೆ

(1) ಆತ್ಮಸಾಕ್ಷಾತ್ಕಾರ (ಸಗುಣೋಪಾಸನೆಯ ಗುರಿ)

(2) ನಿದಿಧ್ಯಾಸನ ಸಮಾಧಿಗಳು

(3) ಮನನ

(4) ಶ್ರವಣ (ಸದ್ಗುರುಮುಖೇನ ವೇದಾಂತ ಮಹಾವಾಕ್ಯಾರ್ಥ ವಿಚಾರ ಶ್ರವಣ)

(5) ನಿರ್ಗುಣೋಪಾಸನೆ (ಏಕಾಂತ ಭಕ್ತಿ ಅಹಂಗ್ರಹೋಪಾಸನೆ)

(6) ಸಾಧನ ಚತುಷ್ಟಯ

- ನಿತ್ಯಾ ನಿತ್ಯವಸ್ತು ವಿವೇಕ
- ವೈರಾಗ್ಯ
- ಶಮಾದಿ ಷಟ್ಸಂಪತ್ತಿ
  - ಶಮ
  - ದಮ
  - ಉಪರತಿ
  - ತಿತಿಕ್ಷೆ
  - ಶ್ರದ್ಧೆ
  - ಸಮಾಧಾನ (ನಿರ್ಗುಣ ಬ್ರಹ್ಮನಲ್ಲಿ ಮನಸ್ಸನ್ನು ಚೆನ್ನಾಗಿ ಸ್ಥಾಪಿಸುವುದು. ಇದೇ ಸಾಧನ ಚತುಷ್ಟಯದ ಗುರಿ)
- ಮುಮುಕ್ಷತ್ವ

(7) ದುರಿತಕ್ಷಯ, ಚಿತ್ತಶುದ್ಧಿ, ಪರಮೇಶ್ವರಾನುಗ್ರಹದ ಸಾಧನೆಗಳು

- A ಉಪನಿಷತ್ತುಗಳಲ್ಲಿ ಉಕ್ತವಾದ ಸಗುಣ ಉಪಾಸನೆಗಳು.
- B ಪ್ರಾಣಾಯಾಮ ಪ್ರಣವ ಗಾಯಿತ್ರಿ ಜಪಪೂರ್ವಕ ಸಂಧ್ಯಾ ನಿತ್ಯಕರ್ಮ ತದಂಗಗಳಾದ ಸ್ನಾನ ಭಸ್ಮಧಾರಣಾದಿಗಳು (ಶಾಸ್ತ್ರರೀತ್ಯಾ ನಿತ್ಯಕರ್ಮಗಳೆಂದರೆ ಸಂಧ್ಯಾ ಸ್ನಾನಂ ಜಪೋ'ಹೋಮೋ ದೇವತಾರ್ಚನಮೇವಚ, ಆತಿಥ್ಯಂ ವೈಶ್ವದೇವಂಚ ಷಟ್ಕರ್ಮಾಣಿ ದಿನೇ ದಿನೇ" ಎಂದು ಉಕ್ತವಾಗಿದೆ)
- C ತ್ರಾಂತಿಕ ಜಪ ಪಾರಾಯಣಾದಿಗಳು
- D ದೇವತಾರ್ಚನೆ, ಮೂರ್ತಿಪೂಜೆ ಮತ್ತು ಮೂರ್ತಿಧ್ಯಾನ
  - F ಶ್ರವಣ (ದೇವತಾ ಸ್ತೋತ್ರಾದಿ ಶ್ರವಣ)
  - G ಕೀರ್ತನ
  - H ಸ್ಮರಣ
  - I ಪಾದ ಸೇವನ
  - J ಅರ್ಚನ
  - K ವಂದನ
  - L ದಾಸ್ಯ
  - M ಸಖ್ಯ
  - N ಆತ್ಮನಿವೇದನ
- E ಪುರಾಣಶ್ರವಣ, ಪರಮಾತ್ಮ ಗುಣಗಾನ, ಹರಿಕಥಾ ಶ್ರವಣ ಮುಂತಾದುವುಗಳು

I. ಪ್ರಥಮತಃ, ದುರಿತಕ್ಷಯ, ಪರಮೇಶ್ವರ ಪ್ರೀತಿ, ಚಿತ್ತಶುದ್ಧಿಗಳಿಗಾಗಿ ಮಾಡುವ ಸಮಸ್ತ ಕರ್ಮ, ಭಕ್ತಿ, ಉಪಾಸನೆಗಳನ್ನೂ ನಿತ್ಯಕರ್ಮಗಳೊಡನೆ ನಿಷ್ಕಾಮನೆಯಿಂದ ಅಂದರೆ ಫಲಾಪೇಕ್ಷೆಯಿಲ್ಲದೆ ಶ್ರದ್ಧೆಯಿಂದ, ವಿಧಿಪೂರ್ವಕವಾಗಿ ಆಚರಿಸಿದರೆ ಅವು ಫಲದಾಯಕವಾಗುವುದರಲ್ಲಿ ಸಂದೇಹವಿಲ್ಲ. ಸಾಧಕನು ಚಿತ್ತಶುದ್ಧಿಯ ನಂತರ, ಸಾಧನ ಚತುಷ್ಟಯಗಳನ್ನು ಸಂಪಾದಿಸುತ್ತಾ ಮುಂದೆ ಹೊರಟನೆಂದರೆ, ಕ್ರಮಕ್ರಮವಾಗಿ, ಆತ್ಮಸಾಕ್ಷಾತ್ಕಾರವನ್ನು ಪಡೆಯುವನು. ಹೀಗೆ ಸಾಧನೆಯಲ್ಲಿ ಶ್ರದ್ಧೆಯಿಂದ ನಿರತನಾದವನು ಸಾಧನಾಮಧ್ಯದಲ್ಲಿ ಮರಣ ಹೊಂದಿದರೂ, ಆವನಿಗೆ ಮೋಕ್ಷಸಾಧನೆಗೆ ಅನುಕೂಲವಾಗುವಂಥ ಉತ್ತಮ ಗತಿಯು ದೊರಕುವುದು.

ಮೇಲ್ಕಂಡವುಗಳನ್ನು ಕೇವಲ ಇಹ ಮತ್ತು ಸ್ವರ್ಗದ ಫಲಕ್ಕಾಗಿ ಆಚರಿಸಿದರೆ, ಕೇವಲ ಅಲ್ಪಸ್ವಲ್ಪ ಫಲಗಳು ದೊರಕಿ ಅವುಗಳು ತೀರಿದಮೇಲೆ ಸಾಧಕನು ತನ್ನ ಪ್ರಾರಬ್ಧಾನುಸಾರ ಜನ್ಮವೆತ್ತುವನು. ಶ್ರದ್ಧೆಯಿಲ್ಲದೆ ಮಾಡಿದರಂತೂ ಅವನಿಗೆ ಯಾವ ಫಲವೂ ದೊರೆಯುವುದಿಲ್ಲ.

II. ಉಪನಿಷತ್ತುಗಳಲ್ಲಿ ಉಕ್ತವಾದ ಸಗುಣೋಪಾಸನೆಗಳ ವಿಷಯವನ್ನು ಮೇಲೆಯೇ ಹೇಳಿಯಾಗಿದೆ.

III. ಪ್ರಾಣಾಯಾಮ, ಪ್ರಣವ, ಗಾಯತ್ರಿ ಜಪ ಪೂರ್ವಕ ಸಂಧ್ಯಾವಂದನಾದಿ ನಿತ್ಯಕರ್ಮಗಳ ವಿಷಯವಾಗಿ ಹೇಳುವುದಾದರೆ—

ಉಪನಿಷತ್ತುಗಳಲ್ಲಿ ಉಕ್ತವಾದ ಸಗುಣೋಪಾಸನೆಗಳಿಗೆ ಪ್ರತೀಕವಾಗಿಯೂ ನಿರ್ಗುಣ ಬ್ರಹ್ಮಧ್ಯಾನಕ್ಕಾಗಿಯೂ, ಮಹರ್ಷಿಗಳು ಬ್ರಾಹ್ಮಣನಿಗೆ ಗರ್ಭಾಷ್ಟಮದಿಂದ ಆಚರಿಸಲು ಅನುಕೂಲಿಸುವಂತೆ ಸಂಧ್ಯಾವಂದನ, ಗಾಯತ್ರಿ ಜಪಗಳನ್ನು ನಿತ್ಯಕರ್ಮವನ್ನಾಗಿ ತಿಳಿದು ವಿಧಿಸಿರುತ್ತಾರೆ. ಅಲ್ಲದೆ ಇವುಗಳನ್ನು ಆಚರಿಸದೆ ಬಿಟ್ಟರೆ 'ಪ್ರತ್ಯವಾಯ' ವುಂಟೆಂಬುದನ್ನೂ ಮನಗಂಡು ತಿಳಿಸಿರುತ್ತಾರೆ. ಇವು ತೈತ್ತಿರೀಯ ಉಪನಿಷತ್ತಿನ ಚತುರ್ಥ ಪ್ರಶ್ನೆಯಲ್ಲಿಯೂ, ಇನ್ನೂ ಹಲವು ಕಡೆಗಳಲ್ಲೂ ಉಪನಿಷತ್ತುಗಳಲ್ಲಿ ಉಕ್ತವಾಗಿ ವೈದಿಕ ಉಪಾಸನೆಗಳೇ ಆಗಿರುತ್ತವೆ. ಅಲ್ಲದೆ ಗಾಯತ್ರಿಯು ಸಮಸ್ತ ವೇದಗಳ ಸಾರವೆಂದೂ, ಮಂತ್ರ ರಾಜನೆಂದೂ ಪ್ರಸಿದ್ಧವಾಗಿದೆ.

'ಸಂಧ್ಯಾಯೇನಾನುಪಾಸಿತಾ, ಮೃತಃ ಶ್ವಾಚಾಪಿ ಜಾಯತೇ' ಅಂದರೆ ಸಂಧ್ಯಾಕರ್ಮವನ್ನು ಆಚರಿಸದ ಬ್ರಾಹ್ಮಣನು ಸತ್ತಮೇಲೆ ನಾಯಿಯಾಗಿ ಹುಟ್ಟುವನೆಂದೂ 'ಸಂಧ್ಯಾಹೀನೋಶುಚಿರ್ನಿತ್ಯಂ | ಅನರ್ಹಸ್ಸರ್ವಕರ್ಮಸು' ಅಂದರೆ ಸಂಧ್ಯಾಕರ್ಮವನ್ನು ಬಿಟ್ಟವನು ನಿತ್ಯವೂ ಅಶುಚಿಯು ಮತ್ತು ಅವನು ಯಾವ ಕರ್ಮಕ್ಕೂ ಯೋಗ್ಯನಲ್ಲವೆಂದೂ ಶಾಸ್ತ್ರಗಳು ತಿಳಿಸುತ್ತವೆ.

ಈ ಸಂಧ್ಯಾಕರ್ಮವು ಫಲಾಪೇಕ್ಷೆಗಳಿಲ್ಲದೆ, ಕೇವಲ ದುರಿತಕ್ಷಯ, ಚಿತ್ತಶುದ್ಧಿ, ಪರಮೇಶ್ವರ ಪ್ರೀತಿಗಾಗಿ ಆಚರಿಸತಕ್ಕದ್ದಾಗಿದೆ.

ಇದರಲ್ಲಿ ಅಂತಃಶುದ್ಧಿ, ಬಹಿಶ್ಶುದ್ಧಿಗಾಗಿ ಸ್ನಾನವಿಧಿ, ಭಸ್ಮಧಾರಣವಿಧಿ, ಆಚಮನ ಪ್ರೋಕ್ಷಣಗಳನ್ನೂ, ಚಿತ್ತೈಕಾಗ್ರತೆಗಾಗಿ ಪ್ರಾಣಾಯಾಮವನ್ನೂ, ಪರಮೇಶ್ವರನ ಪ್ರೀತಿ ಸಂಪಾದನೆಗಾಗಿ ಅರ್ಘ್ಯ, ದೇವತಾಸ್ತೋತ್ರ, ದೇವತಾ ನಮಸ್ಕಾರ, ಉಪಸ್ಥಾನಾದಿಗಳನ್ನೂ, ಸಾಧನ ಚತುಷ್ಟಯದಲ್ಲಿನ 'ಸಮಾಧಾನ' ಸ್ಥಿತಿಯನ್ನು (ಅಂದರೆ ನಿರ್ಗುಣ ಬ್ರಹ್ಮನಲ್ಲಿ ಮನಸ್ಸನ್ನು ಸ್ಥಾಪಿಸುವಿಕೆಯನ್ನು) ಪಡೆಯಲು ಗಾಯತ್ರಿ ಜಪವನ್ನೂ ವಿಧಿಸಿರುತ್ತೆ. ಈ ಗಾಯತ್ರಿ ಮಂತ್ರವು ಬ್ರಾಹ್ಮಣನಿಗೆ ನಿತ್ಯಾನುಷ್ಠಾನ ಮಂತ್ರವು. ಇದು ನಿರ್ಗುಣ ಬ್ರಹ್ಮನನ್ನು ಪ್ರತಿಪಾದಿಸುತ್ತದೆ. 'ಸರ್ವ ದೇವತಾತ್ಮನೂ, ಸರ್ವ ಶಕ್ತನೂ, ಸರ್ವಾವಭಾಸಕ ತೇಜೋಮಯನೂ ಆದ ಪರಮಾತ್ಮನ ಸರ್ವಾತ್ಮಕತ್ವವನ್ನು ಪ್ರಕಾಶಪಡಿಸಲು ಸರ್ವಾತ್ಮಕ ಬ್ರಹ್ಮಪ್ರತಿಪಾದಕವಾದುದು ಈ ಗಾಯತ್ರಿ ಮಂತ್ರವು. ಪ್ರಣವವೇ ಆದಿಯಾಗಿ, ಸಪ್ತ ವ್ಯಾಹೃತಿಗಳಿಂದಲೂ, ಶಿರಸ್ಸಿನಿಂದಲೂ ಕೂಡಿರುವ ಈ ಗಾಯತ್ರಿಯು ವೇದಸಾರವೆಂದು ಪ್ರಸಿದ್ಧವಾಗಿದೆ.

ಈ ವಿಶಿಷ್ಟವಾದ ಗಾಯತ್ರಿಯನ್ನು ಪ್ರಾಣಾಯಾಮದಿಂದಲೂ, ಪ್ರಣವದಿಂದಲೂ, ವ್ಯಾಹೃತಿಗಳಿಂದಲೂ ಉಪಾಸನೆ ಮಾಡಬೇಕು. ಇದರಲ್ಲಿ ಶುದ್ಧ ಗಾಯತ್ರಿಯು ಜೀವಬ್ರಹ್ಮೈಕ್ಯವನ್ನು ಬೋಧಿಸುತ್ತದೆ. ಈ ಮಂತ್ರದಲ್ಲಿನ 'ಧಿಯೋಯೋನಃಪ್ರಚೋದಯಾತ್'' ಎಂಬುದರಿಂದ ನಮ್ಮ ಬುದ್ಧಿಯನ್ನು ಅಂದರೆ ಸರ್ವಬುದ್ಧಿ ಸಂಜ್ಞಕವಾದ ನಮ್ಮ ಅಂತಃಕರಣವನ್ನು ಪ್ರೇರಿಸಲಿ ಅಥವಾ ಪ್ರಕಾಶಿಸಲಿ ಎಂದರ್ಥವಾಗುವುದು.

ತತ್, ಸವಿತೃ, ವರೇಣ್ಯಂ, ಭರ್ಗೋ ದೇವಸ್ಯ ಧೀಮಹಿ, ಎಂಬ ಈ ಗಾಯತ್ರಿ ಮಂತ್ರಭಾಗದ ಅರ್ಥವು ಈ ಕೆಳಗೆ ಕಂಡಂತೆ ಇದೆ:—

'ತತ್'' ಎಂದರೆ ಪ್ರಸಿದ್ಧವಾದ ಪ್ರತ್ಯಗಾತ್ಮಭೂತ, ಸ್ವತಃಸಿದ್ಧ ಪರಬ್ರಹ್ಮವೆಂದರ್ಥ.

'ಸವಿತೃ' ಎಂದರೆ ಸೃಷ್ಟಿ ಸ್ಥಿತಿ ಪ್ರಳಯ ಉಪಲಕ್ಷಿತವೂ, ಸರ್ವಪ್ರಪಂಚಕ್ಕೂ ಅಧಿಷ್ಠಾತೃವೂ ಆದ ಪರಬ್ರಹ್ಮನೆಂದರ್ಥವು.

'ವರೇಣ್ಯಂ' ಎಂದರೆ ನಿರತಿಶಯ ಆನಂದಸ್ವರೂಪವಾದ ಪರಬ್ರಹ್ಮವೆಂದರ್ಥ.

'ಭರ್ಗ' ಎಂದರೆ ಅವಿದ್ಯಾದಿ ದೋಷಭರ್ಜನಾತ್ಮಕವಾದ ಪರಬ್ರಹ್ಮವೆಂದರ್ಥ.

'ದೇವ' ಎಂದರೆ ಅಖಂಡ ಚಿತ್ಸ್ವರೂಪ, ಸ್ವಪ್ರಕಾಶ ಚಿದಾತ್ಮಕ ಪರಬ್ರಹ್ಮವೆಂದರ್ಥ.

ಇಂತಹ ಸರ್ವಾತ್ಮಕವಾದ ಬ್ರಹ್ಮವು ಸರ್ವಸಾಕ್ಷಿ ಪ್ರತ್ಯಗಾತ್ಮನಾದ ಜೀವನೊಡನೆ ತಾದಾತ್ಮ್ಯ ಐಕ್ಯತೆಯನ್ನು ಹೊಂದಿ, ನನ್ನ ಅಂತಃಕರಣದಲ್ಲಿ ಪ್ರಕಾಶಿಸಲಿ ಎಂದು ನಿರ್ಗುಣಬ್ರಹ್ಮವನ್ನು 'ನಾನು' ಎಂಬ ಐಕ್ಯಜ್ಞಾನ ಬೋಧಕವಾಗಿ ಧ್ಯಾನಿಸುವುದೇ ಗಾಯತ್ರಿ ಮಂತ್ರದ ರಹಸ್ಯ. ಈ ಧ್ಯಾನವನ್ನು ಸಾಧಿಸುತ್ತಾ ಬಂದರೆ ಸಾಧನ ಚತುಷ್ಟಯವೂ ಕರಗತವಾಗಿ, ಶ್ರವಣ ನಿದಿಧ್ಯಾಸನಗಳಿಗೆ ಬೇಕಾದ ನಿರ್ಗುಣೋಪಾಸನೆಯು ಸುಲಭವಾಗಿ ದೊರಕೊಳ್ಳುವುದು. ಆದಪ್ರಯುಕ್ತ ಪ್ರತಿಯೊಬ್ಬ ಬ್ರಾಹ್ಮಣನೂ ಅವಶ್ಯಂಭಾವಿಯಾಗಿ, ಈ ಸಂಧ್ಯಾಕರ್ಮ ಗಾಯತ್ರಿ ಜಪಗಳನ್ನು ನಿತ್ಯವೂ ನಿಷ್ಕಾಮನೆಯಿಂದ, ಶ್ರದ್ಧಾಪೂರ್ವಕವಾಗಿ, ವಿಧಿವತ್ತಾಗಿ ಆಚರಿಸಬೇಕು.

ಈ ಸಂಧ್ಯಾಗಾಯತ್ರಿಯು ಯೋಗಸ್ವರೂಪವೇ ಆಗಿರುತ್ತದೆ. ಭಗವತೀ ಪುರಾಣದಲ್ಲಿ

ಇಡೈಕಾಸ್ಯ ಮಹಾಕಾಳೀ |
ಮಹಾಲಕ್ಷ್ಮೀತು ಪಿಂಗಳಾ |
ಏಕವೀರಾಸುಷುಮ್ನೇಯ |
ಮೇವಂ ಸಂಧ್ಯಾ ತ್ರಯಾತ್ಮಿಕಾ ||

ಪ್ರಾತಃಕಾಲ, ಮಧ್ಯಾಹ್ನಕಾಲ, ಸಾಯಂಕಾಲದ ಸಂಧ್ಯಾರೂಪವನ್ನು ಯೋಗದಲ್ಲಿನ ಇಡಾ, ಪಿಂಗಳಾ, ಸುಷುಮ್ನಾ ನಾಡಿಗಳೆಂದು ಹೇಳಿದೆ.

ಈ ಸಂಧ್ಯಾ ನಿತ್ಯಕರ್ಮದ ಫಲವನ್ನೂ ಗಾಯತ್ರೀ ಮಹತ್ವವನ್ನೂ ಗಾಯತ್ರಿ ಋಷಿಯಾದ ವಿಶ್ವಾಮಿತ್ರರು ತಮ್ಮ ಗಾಯತ್ರಿಸ್ತವರಾಜದಲ್ಲಿ ಹೀಗೆ ಹೇಳಿದ್ದಾರೆ:—

ಸಂಧ್ಯಾ ನಿತ್ಯಕರ್ಮದ ಫಲ :—

"ಸ್ವಸ್ತಿಶ್ಯ್ರದ್ಧಾತಿಮೇಧಾಂ ಸುಮತಿಚ ಮಧುರಾ |
ಶ್ರೀರ್ಯಶಃ ಪ್ರಜ್ಞಕಾಂತಿಂ ||

ವಿದ್ಯಾಬುದ್ಧಿರ್ಬಲಂ ಶ್ರೀರತುಲ ಧನಮತಿ |
ಸೌಸ್ವಮ್ಯ ವಾಕ್ಯಾನುವರ್ತಿಃ ||

ಮೇಧಾ ಪ್ರಜ್ಞಾ ಪ್ರತಿಷ್ಠಾ ಮೃದುಮಧುರ ಗಿರಾ |
ಪೂರ್ಣವಿದ್ಯಾ ಪ್ರಪೂರ್ಣ ||

ಪ್ರಾಪ್ತಾಪ್ರತ್ಯೂಷ ಚಿಂತ್ಯಪ್ರಣವ ಪರವಶಾ |
ಪ್ರಾಣಿನಾಂ ನಿತ್ಯಕರ್ಮ ||"

ಗಾಯತ್ರಿ ಮಹಿಮೆ :—

"ಗಾಯತ್ರೀ ಸಕಲಾಗಮಾರ್ಥಫಲದಾಂ |
ಸಾರಸ್ಯಬೀಜೇಶ್ವರೀಂ ||

ಸರ್ವಾಮ್ನಾಯ ಸಮಸ್ತ ಮಂತ್ರ ಜನನೀಂ |
ಸರ್ವಜ್ಞ ಧಾಮೇಶ್ವರೀಂ ||

ಬ್ರಹ್ಮಾದಿ ತ್ರಯ ಸಂಪುಟದ್ರಿ ಕರಣೀಂ |
ಸಂಸಾರ ಸಂಶೋಷಿಣೀಂ ||

ಸಂಧ್ಯಾ ಸರ್ವಸಮಾನ ತಂತ್ರ ಪರಮ |
ಬ್ರಹ್ಮಾನು ಸಂಧಾಯಿನೀಂ ||

ಹೀಗೆ ಸಂಧ್ಯಾವಂದನೆ, ಪ್ರಾಣಾಯಾಮ ಪ್ರಣವಪೂರ್ವಕ ಗಾಯತ್ರಿ ಜಪಗಳು ನಿತ್ಯವೂ ಕಾಲಕ್ಕೆ ಸರಿಯಾಗಿ ಭಕ್ತಿ ಶ್ರದ್ಧೆಗಳಿಂದಲೂ, ನಿಷ್ಕಾಮನೆಯಿಂದಲೂ ಆಚರಿಸಲ್ಪಟ್ಟರೆ, ಅಂತಹ ಬ್ರಾಹ್ಮಣನು ಚಿತ್ತಶುದ್ಧಿಯನ್ನು ಹೊಂದಿ ಪರಮೇಶ್ವರನ ಅನುಗ್ರಹಯುಕ್ತನಾಗಿ ನಿರ್ಗುಣೋಪಾಸನೆಗೆ ಅಂಕುರವಾದ 'ಸಮಾಧಾನ' ಸ್ಥಿತಿಯನ್ನೂ, ತನ್ಮೂಲಕ ಸಾಧನ ಚತುಷ್ಟಯವನ್ನೂ ಪಡೆದು ನಿರ್ಗುಣೋಪಾಸನೆಯನ್ನು ಸುಲಭವಾಗಿ ಆಚರಿಸಿ ಶ್ರವಣಾದಿಗಳ ಮೂಲಕ ಬ್ರಹ್ಮ ಸಾಕ್ಷಾತ್ಕಾರವನ್ನು ಸಂಪಾದಿಸುವುದರಲ್ಲಿ ಸಂದೇಹವಿಲ್ಲ.

ಚಿತ್ತಶುದ್ಧಿ, ಚಿತ್ತೈಕಾಗ್ರತೆ, ಪರಮೇಶ್ವರನ ಅನುಗ್ರಹಗಳು ಶೀಘ್ರವಾಗಿ ಬಲಯುಕ್ತವಾಗಿ ಸಾಧನವಾಗಲು ಸಾಧಕನಿಗೆ ಈ ಸಂಧ್ಯಾ ನಿತ್ಯಕರ್ಮದ ಜೊತೆಗೆ ಇತರ, ನಿಷ್ಕಾಮನೆಯಿಂದ ಮಾಡಿದ ಸಗುಣೋಪಾಸನಾದಿಗಳು ಅಂದರೆ ತ್ರಾಂತಿಕ ಜಪ, ಪಾರಾಯಣಾದಿಗಳು, ದೇವತಾರ್ಚನೆ, ಭಕ್ತಿಪ್ರಧಾನವಾದ ಭಾಗವತ ಧರ್ಮಗಳು, ಪುರಾಣ ಹರಿಕಥಾ ಶ್ರವಣಾದಿಗಳು, ಪರಮಾತ್ಮನ ಗುಣಗಾನಗಳು, ತೀರ್ಥಯಾತ್ರೆಗಳು ಸಹಾಯವಾಗುತ್ತವೆ.

ಕೇವಲ ಮಂದಮತಿಯಾದವನು ನಿಷ್ಕಾಮ ಕರ್ಮ ಮಾಡುತ್ತಾ ತನ್ನಲ್ಲಿರುವ ಶ್ರದ್ಧಾ, ಭಕ್ತಿ, ಆಸ್ತಿಕತೆಗಳಿಂದ ಪುರಾಣ, ಹರಿಕಥಾ ಶ್ರವಣ, ಭಗವಂತನ ಗುಣಗಾನ ಶ್ರವಣಾದಿಗಳಲ್ಲಿ ತತ್ಪರನಾಗಿರುತ್ತಾ, ಬಂದು ಕ್ರಮಕ್ರಮವಾಗಿ ಭಾಗವತ ಧರ್ಮವನ್ನು ಆಚರಿಸುತ್ತಾ ಬಂದರೆ ದುರಿತಗಳು ಕ್ಷಯವಾಗಿ ಚಿತ್ತಶುದ್ಧಿಯಾಗಿ, ಪರಮೇಶ್ವರನ ಅನುಗ್ರಹವಾಗಿ, ಮೋಕ್ಷಮಾರ್ಗದತ್ತ ಹೋಗಲು ಅನುಕೂಲಿಸುತ್ತದೆ.

ಒಟ್ಟಿನಲ್ಲಿ ಕರ್ಮ, ಭಕ್ತಿ, ಉಪಾಸನೆಗಳಲ್ಲೆಲ್ಲಾ ನಿರ್ಗುಣ ಬ್ರಹ್ಮೋಪಾಸನೆಯೆಂಬ 'ಏಕಾಂತ ಭಕ್ತಿ'ಯೇ ಶ್ರೇಷ್ಠವಾದುದು. ಇದು ಸಾಧಕನನ್ನು ಶ್ರವಣ ಮನನ ನಿದಿಧ್ಯಾಸನ ಸಮಾಧಿಗಳ ದ್ವಾರ ಮೋಕ್ಷಕವಾಟಕ್ಕೆ ಸೇರಿಸುವುದು.

ಕೊನೆಯದಾಗಿ ಭಾಗವತ ಧರ್ಮವನ್ನು ಸ್ವಲ್ಪ ವಿವರಿಸೋಣ. ಭಗವಂತನ ಪ್ರತಿಮೆಗಳಲ್ಲಿ ಈಶ್ವರ ಬುದ್ಧಿಯನ್ನಿಟ್ಟು ಅವುಗಳಿಗೆ ಅನನ್ಯ ಶರಣತೆಯಿಂದಲೂ, ನಿರತಿಶಯ ಪ್ರೀತಿಯಿಂದಲೂ, ಸಾತ್ವಿಕವಾದ ಶ್ರದ್ಧೆಯಿಂದಲೂ ಪೂಜಾದಿಗಳನ್ನು ಸಲ್ಲಿಸುವುದೇ ಭಾಗವತ ಧರ್ಮವು. "ಅವಿಜ್ಞಾನಾಂ ಭಾವನಾರ್ಥಾಯ, ಪ್ರತಿಮಾಃ ಪರಿಕಲ್ಪಿತಾಂ" ಎಂಬ ಸೂತಸಂಹಿತೋಕ್ತಿಯಂತೆ ಮಂದಮತಿಗಳಿಗೆ ಅಂತಃಕರಣ ವೃತ್ತಿಗಳು ವಿಷಯ ಪ್ರವೃತ್ತಿಗಳ ಕಡೆ ಪ್ರಚಲಿತವಾಗದಂತೆ ಮಾಡುವುದೇ ಮೂರ್ತಿಧ್ಯಾನದ ಸಾರ. ಇದರಿಂದ ಚಿತ್ತಶುದ್ಧಿ, ಚಿತ್ತೈಕಾಗ್ರತೆ, ಪರಮೇಶ್ವರ ಅನುಗ್ರಹಗಳು ಸಾಧಿತವಾಗುತ್ತವೆ. ಪ್ರತಿಮೆಗಳಲ್ಲಿ "ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ। ಅರ್ಚನಂ ವಂದನಂ ದಾಸ್ಯಂ, ಸಖ್ಯಮಾತ್ಮ ನಿವೇದನಂ" ಎಂಬ ನವವಿಧ ಭಕ್ತಿರೂಪವಾದ ಭಾಗವತ ಧರ್ಮವನ್ನು ಆಚರಿಸಬೇಕು. ಶ್ರುತಿ, ಸ್ಮೃತಿ, ಪುರಾಣಗಳಲ್ಲಿ ವಿವರಿಸಿರುವ ಗಣಪತಿ, ಶಿವ, ವಿಷ್ಣು, ಆದಿತ್ಯ, ಅಂಬಿಕಾ, ರಾಮ ಕೃಷ್ಣಾದಿ ಅವತಾರ ಪುರುಷರುಗಳ ಪ್ರತಿಮೆಗಳನ್ನು ಪೂಜಿಸುವುದು ಸೂಕ್ತವು. ಶಾಸ್ತ್ರ ರೀತ್ಯಾ ಇವುಗಳಲ್ಲಿ ಭಗವತ್ಸಾನ್ನಿಧ್ಯವು ಅತಿಶಯವಾಗಿರುತ್ತದೆ. ಈ ಮೂರ್ತಿಗಳ ನಾಮಶ್ರವಣ, ಆ ನಾಮೋ-ಚ್ಚಾರಣ, ಆ ಮೂರ್ತಿ ಸ್ತೋತ್ರ ಪಠನ, ಆ ದೇವತೆಗಳ ನಿತ್ಯಸ್ಮರಣ, ಅವರ ಪಾದಸೇವನ, ಗಂಧ ಅಕ್ಷತಾದಿಗಳಿಂದ ಅರ್ಚನ, ಶರೀರ ಮನಸಾದಿಗಳಿಂದ ನಮಸ್ಕಾರ, ಆ ದೇವನಲ್ಲೇ ದಾಸ್ಯಭಾವದಿಂದಿರುವುದು, ಬಳಿಕ ತನ್ನ ಶರೀರವನ್ನೇ ಆ ದೇವನಿಗಾಗಿ ಮೀಸಲಾಗಿಡುವುದು. ಇವೇ ಭಾಗವತ ಧರ್ಮಗಳು. ಈ ಭಕ್ತಿಪ್ರಧಾನವಾದ ಭಾಗವತ ಧರ್ಮವು ಮೋಕ್ಷಮಾರ್ಗಕ್ಕೆ ಸಾಧನವು. ಇದನ್ನೇ ಶಾಸ್ತ್ರಗಳಲ್ಲಿ 'ಮೋಕ್ಷಸಾಧನ ಸಾಮಗ್ರ್ಯಾಂ, ಭಕ್ತಿರಿತ್ಯಭಿಧೀಯತೇ' ಎಂದು ಹೇಳಿದೆ. ಮೋಕ್ಷಗಾಮಿಗೆ ಇದರಿಂದ ಕ್ರಮಕ್ರಮವಾಗಿ ಚಿತ್ತಶುದ್ಧಿದ್ವಾರ ಸಾಧನ ಚತುಷ್ಟಯಗಳು ಕರಗತವಾಗುತ್ತವೆ.

ನಿರ್ಗುಣ ಬ್ರಹ್ಮಜ್ಞಾನಿಗಳು ಈ ಲೋಕದಲ್ಲಿಯೇ ಲಿಂಗಶರೀರವನ್ನು ಕಳೆದುಕೊಂಡು ಬ್ರಹ್ಮನೊಡನೆ ಒಂದಾಗುವರು. ಅವರು ಪರಲೋಕಕ್ಕೆ ಹೋಗುವ ಸಂಭವವೇ ಇಲ್ಲ.

ಅರ್ಚಿರಾದಿ ಮಾರ್ಗದಿಂದ ಬ್ರಹ್ಮಲೋಕಕ್ಕೆ ಹೋಗುವ ಸಗುಣೋಪಾಸಕನ ಹಿಂದೆ ಸಗುಣ ಬ್ರಹ್ಮೋಪಾಸನೆಯು ಹೋಗುತ್ತದೆ. ಕತ್ತಲೆಯ ದಾರಿಯಿಂದ ಸ್ವರ್ಗಕ್ಕೆ ಹೋಗುವ ಕರ್ಮಿಯ ಹಿಂದೆ ಅವನ ಕರ್ಮವು ಬೆನ್ನು ಹತ್ತುತ್ತದೆ. ಸಗುಣ ಬ್ರಹ್ಮೋಪಾಸನೆಯು ಬ್ರಹ್ಮಲೋಕದ ಪ್ರಾಪ್ತಿಗೆ ಸ್ವತಂತ್ರವಾದ ಸಾಧನವಾದರೆ, ಕರ್ಮಗಳು ಸ್ವರ್ಗಕ್ಕೆ ಸ್ವತಂತ್ರ ಸಾಧನವು. ಜೀವನೂ ಬ್ರಹ್ಮನೂ ಒಂದೇ ಎಂಬ ಸಾಕ್ಷಾತ್ಕಾರ ಬಂದೊಡನೆ ಸಮಸ್ತ ಕರ್ಮಗಳೂ ಅಳಿದುಹೋಗುತ್ತವೆ. ಜೀವನು ತಾನು ಮಾಡುವವನೆಂಬ ಮತ್ತು ಅನುಭವಿಸುವವನೆಂಬ ಧರ್ಮಗಳೂ, ಸಮಸ್ತ ಕರ್ಮಗಳೂ, ಅನುಭವಿಸುವ ಸ್ವರ್ಗ ಮೊದಲಾದ ಫಲಗಳೂ, ಸುಳ್ಳಾದವುಗಳೆಂದು ಗೊತ್ತಾಗಿಬಿಡುತ್ತದೆ. ಈಶ್ವರನ ಸರ್ವಜ್ಞತ್ವಾದಿ ಗುಣಗಳೂ ಕಲ್ಪನೆಯೆಂದಾಗಿಬಿಡುತ್ತದೆ. ಹೆಚ್ಚು ಹೇಳುವುದೇನು, ಆತ್ಮಸಾಕ್ಷಾತ್ಕಾರ ಜ್ಞಾನಸಂಪಾದನೆಯಿಂದಲೇ ಮೋಕ್ಷವೆಂಬುದು ಸಿದ್ಧವು.

"ವದಂತು ಶಾಸ್ತ್ರಾಣಿ ಯಜಂತು ದೈವಾನ್ |
ಕುರ್ವಂತು ಶಾಸ್ತ್ರಾಣಿ ಭಜಂತು ದೇವತಾಃ |
ಆತ್ಮೈಕ ಬೋಧೇನ ವಿನಾಪಿ ಮುಕ್ತಿಃ |
ನ ಸಿದ್ಧ್ಯತಿ ಬ್ರಹ್ಮಶತಾಂತರೇಪಿ ||"

ಎಂಬ ಶಾಸ್ತ್ರಾರ್ಥವೂ ಇದಕ್ಕೆ ಸಹಕಾರಿಯಾಗಿದೆ.

ಒಟ್ಟಿನಲ್ಲಿ ಸಂಗ್ರಹವಾಗಿ ಅದ್ವೈತ ತತ್ತ್ವ ಸಾರವನ್ನು ತಿಳಿಸಿದೆ. ವೇದಾಂತ ತತ್ತ್ವವಾದ ಈ ಅದ್ವೈತ ತತ್ತ್ವವು ಬಹಳ ಗಹನವಾದುದು. ಇದರಲ್ಲಿ ಉಂಟಾಗುವ ಸಕಲ ಸಂದೇಹಗಳನ್ನೂ ನಿವಾರಿಸುವಂತೆ ಸಂಗ್ರಹವಾಗಿ ಕೇವಲ ಬರವಣಿಗೆಯಲ್ಲಿ ಅಳವಡಿಸುವುದು ಬಹಳ ಕಷ್ಟ. ಅಲ್ಲದೆ ಅಲ್ಪಮತಿಯಾದ ನಾನು ಇದಕ್ಕೆ ಪ್ರಯತ್ನಪಟ್ಟಿರುವುದು 'ಪಂಗುಂ ಲಂಘಯತೇ ಗಿರಿಂ' ಎಂಬಂತೆ ಹೆಳವನು ಬೆಟ್ಟವನ್ನು ದಾಟಿದಂತೆ ಸಾಹಸವೇ ಸರಿ. ಅಲ್ಲಲ್ಲಿ ಸಂಭವಿಸಬಹುದಾದ ಸಂದೇಹಗಳನ್ನು ಗುರುಮುಖೇನ ನಿವಾರಿಸಿಕೊಳ್ಳಬೇಕಲ್ಲದೆ ಕೇವಲ ಪುಸ್ತಕ ಪರಿಚಯದಿಂದ ಸಾಧ್ಯವಿಲ್ಲ.

ಈ ಗ್ರಂಥವನ್ನು ಮನನ ಮಾಡಿ, ಸದ್ಗುರುವಿನ ಸಹಾಯದಿಂದ ಸಂದೇಹಗಳನ್ನು ಪರಿಹರಿಸಿಕೊಂಡು, ಅನುಭವವನ್ನು ಹೊಂದುತ್ತಾ ಬಂದರೆ ಮುಮುಕ್ಷುವು ಕ್ರಮಕ್ರಮವಾಗಿ ಮೋಕ್ಷಕವಾಟವನ್ನು ತಲಪುವುದರಲ್ಲಿ ಸಂಶಯವಿಲ್ಲ.

ಇದರಲ್ಲಿ ನನ್ನ ಅವಿಜ್ಞತೆಯಿಂದ ದೋಷಗಳು ಕಂಡುಬರುವುದು ಸಹಜ. ಹಾಗೆ ಬಂದಲ್ಲಿ ಅದನ್ನು ಪಂಡಿತರು ಮನ್ನಿಸಿ ಉಪಯೋಗಾಂಶವನ್ನು ಸ್ವೀಕರಿಸಬೇಕೆಂದು ಸವಿನಯ ವಿನಂತಿ.

ಪಂಡಿತೋತ್ತಮರ ಪ್ರವಚನಗಳನ್ನು ನಾನು ಕೇಳಿದ್ದರೂ, ನನ್ನ ಮಂದಬುದ್ಧಿಯಿಂದ ನಾನು ಸರಿಯಾಗಿ ಗ್ರಹಿಸದೆ, ತತ್ತ್ವಯುಕ್ತ ನನ್ನ ಈ ವಿಷಯ ನಿರೂಪಣೆಯಲ್ಲಿ ಲೋಪದೋಷಗಳು ಉಂಟಾಗಿರಬಹುದು. ತತ್ವವೇತ್ತರು ಈ ದೋಷಗಳಿಗಾಗಿ ನನ್ನನ್ನು ಕ್ಷಮಿಸಬೇಕಾಗಿ ಪುನಃ ಬೇಡುತ್ತೇನೆ.

ಆನಂದಮಾನಂದಕರಂ ಪ್ರಪನ್ನಂ |
ಜ್ಞಾನಸ್ವರೂಪಂ ನಿಜಬೋಧಯುಕ್ತಂ |
ಯೋಗೀಂದ್ರ ಮೀಡ್ಯಂ ಭವರೋಗ ವೈದ್ಯಂ |
ಅಸ್ಮದ್ಗುರುಂ ಸಂತತ ಮಾನತೋಸ್ಮಿ ||

ಶ್ರೀ ರಾಮಾರ್ಪಣಮಸ್ತು

ಇಂತಿಲ್ಲಿಗೆ ಗುರು ದತ್ತಾತ್ರೇಯರ ಮಂಗಳ ಶ್ಲೋಕದೊಡನೆ ಉಪಸಂಹಾರವು.

ಸರ್ವ ಭೂತಾಂತರಸ್ಥಾಯ ನಿತ್ಯಮುಕ್ತ ಚಿದಾತ್ಮನೇ |
ಪ್ರತ್ಯಕ್ ಚೈತನ್ಯರೂಪಾಯ ಮಹ್ಯಮೇವ ನಮೋ ನಮಃ ||

ಸರ್ವ ಪ್ರಾಣಿಗಳ ಹೃದಯದಲ್ಲಿರುವ, ಸದಾ ಮುಕ್ತನಾದ, ಚಿತ್ ಪ್ರಕಾಶದಿಂದ ವ್ಯಾಪಕನಾಗಿರುವ, ಶರೀರ ತ್ರಯ, ಅವಸ್ಥಾತ್ರಯ ಪಂಚಕೋಶಾದಿಗಳೆಲ್ಲಕ್ಕೂ ಮೂಲಕಾರಣವಾದ ಅಜ್ಞಾನದಿಂದ ಉಂಟಾಗುವ

ಕರ್ತೃತ್ವ, ಭೋಕ್ತೃತ್ವ, ಪಾಪ, ಪುಣ್ಯ, ಇವುಗಳ ಫಲವಾದ ಸುಖದುಃಖಗಳ ಸ್ಪರ್ಶವಿಲ್ಲದೆ ಸಾಕ್ಷಿರೂಪದಿಂದ ಚಿದ್ರೂಪನಾಗಿರುವ ನನಗೆ ಪುನಃ ಪುನಃ ನಮಸ್ಕಾರವು.

ಇತಿ, ಸ್ಮಾರ್ತಬ್ರಾಹ್ಮಣಃ, ಗಾರ್ಗ್ಯಸಗೋತ್ರೋದ್ಭವಃ, ಬಬ್ರೂರುಕವಾಸೀ, ಯಜುಶ್ಶಾಖಾಧ್ಯಾಯೀ, ಶ್ರೀಕಂಠಶರ್ಮಣಃಪುತ್ರಃ ಕಪನೀಪತಿ ಶರ್ಮನ್, ಅಭಿವಂದತಿ.

ದಿನಾಂಕ ೬-೩-೧೯೬೮
ಮೈಸೂರು

ಸಶೇಷ ರಾಮ ಸ್ತೋತ್ರ ಖಂಡ

ಸಶೇಷ ರಾಮ ಸ್ತೋತ್ರಗಳು

ಶ್ರೀರಾಮಂ ಬಲವೈರಿನೀಲಚಿಕುರಂ ಸ್ಮೇರಾನನಂ ಶ್ಯಾಮಲಂ ।
ಕರ್ಣಾಂತಾಯತಲೋಚನಂ ಸುರವರಂ ಕಾರುಣ್ಯಪಾಥೋನಿಧಿಂ ।
ಶೋಣಾಂಭೋರುಹ ಪಾದಪಲ್ಲವಯುಗಂ ಕ್ಷೋಣೀತನೂಜಾಯುತಂ ।
ರಾಜತ್ಕುಂಡಲ ಗಂಡಭಾಗಯುಗಳಂ ರಾಮಂ ಸದಾಹಂ ಭಜೇ ॥

ಇಂದ್ರನೀಲಸದೃಶವಾದ ಮುಂಗುರುಳುಗಳಿಂದ ಕೂಡಿದವನೂ, ಮನೋಹರವಾದ ಮುಖವುಳ್ಳವನೂ, ಶ್ಯಾಮಲಮೂರ್ತಿಯೂ, ಆಕರ್ಣಾಂತವಾದ ವಿಶಾಲನೇತ್ರನೂ, ದೇವತೆಗಳಲ್ಲಿ ಅಗ್ರಗಣ್ಯನೂ, ಕರುಣಾ ಸಮುದ್ರನೂ, ಕಮಲದಂತೆ ಕೆಂಪಾದ ಪಾದಗಳುಳ್ಳವನೂ, ಸೀತಾಸಮೇತನೂ, ಕುಂಡಲಗಳಿಂದ ಶೋಭಿಸುವ ಕಪೋಲ ಭಾಗಗಳುಳ್ಳವನೂ ಆದ ಶ್ರೀರಾಮಚಂದ್ರನನ್ನು ನಾನು ಸದಾ ಭಜಿಸುತ್ತೇನೆ.

ಶ್ರೀರಾಮಂ ಜಗದೀಶ್ವರಂ ಜನಕಜಾಜಾನಿಂ ಜನಾನಂದದಂ ।
ಜಂತೂನಾಂ ಜನಕಂ ಜನಾರ್ತಿಹರಣಂ ಲೋಕೇಶ್ವರಂ ಶಾಶ್ವತಂ ।
ಜಾಬಾಲ್ಯಾದಿ ಮುನೀಶ್ವರೈಃ ಪರಿವೃತಂ ಜಾಜ್ವಲ್ಯಮಾನಂ ಸದಾ ।
ಜಂಘಾಲಂ ಜಮದಗ್ನಿ ಸೂನುಮಥನಂ ಜಾತಾನುಕಂಪಂ ಭಜೇ ॥

ಜಗದೀಶ್ವರನೆನಿಸಿ, ಸೀತಾ ಪ್ರಾಣನಾಯಕನಾಗಿ, ಪ್ರಜೆಗಳಿಗೆ ಆನಂದವನ್ನುಂಟುಮಾಡುತ್ತಾ, ಸಮಸ್ತ ಪ್ರಾಣಿಗಳಿಗೂ ಜನಕನಂತಿರುವ, ಜನಗಳ ಕಷ್ಟಗಳನ್ನು ಪರಿಹರಿಸುವವನಾಗಿ, ಲೋಕೇಶ್ವರನೂ, ಶಾಶ್ವತನೂ ಆದ, ಜಾಬಾಲಿ, ಆದಿಯಾದ ಋಷಿಗಳ ಸಂಗಡ ಕೂಡಿದ್ದು, ತೇಜಸ್ವಿಯೆನಿಸಿ, ಸದಾ ವೇಗಾತಿಶಯದಿಂದ ಕೂಡಿದ ಪರಶುರಾಮನ ಗರ್ವವನ್ನು ಭಂಗಿಸಿ, ಅವನಿಗೆ ದಯೆ ತೋರಿದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ರಾಮಂ ಲಕ್ಷ್ಮಣಪೂರ್ವಜಂ ರಘುವರಂ ಸೀತಾಪತಿಂ ಸುಂದರಂ ।
ಕಾಕುತ್ಸ್ಥಂ ಕರುಣಾಕರಂ ಗುಣನಿಧಿಂ ವಿಪ್ರಪ್ರಿಯಂ ಧಾರ್ಮಿಕಂ ।
ರಾಜತ್ಕುಂಡಲ ಮಂಡಿತಾನನರುಚಿಂ ರಾತ್ರಿಂಚರ ಧ್ವಂಸಿನಂ ।
ಶಂಪಾಕೋಟಿ ಸಮಾನಕಾಂತಿ ವಿಲಸನ್ಮಾಯಾಮೃಗಘ್ನಂ ಭಜೇ ॥

ಲಕ್ಷ್ಮಣನಿಗೆ ಅಣ್ಣನೂ, ರಘುಕುಲಶ್ರೇಷ್ಠನೂ, ಸೀತಾಪತಿಯೂ, ಮನೋಹರನೂ, ಕಕುತ್ಸ್ಥವಂಶಜನೂ, ಕರುಣಾಮೂರ್ತಿಯೂ ಆದ, ಸದ್ಗುಣಗಳ ಖನಿಯಾದ, ವಿಪ್ರರಿಗೆ ಪ್ರಿಯನಾದ, ಧರ್ಮನಿರತನೂ, ಪ್ರಕಾಶಮಾನನೂ, ಕುಂಡಲ ಕಿರೀಟಗಳಿಂದ ಅಲಂಕೃತನೂ, ರಾಕ್ಷಸಧ್ವಂಸಿಯೂ, ಕೋಟಿ ಮಿಂಚುಗಳ ಕಾಂತಿಯುಳ್ಳವನೂ, ಮಾಯಾಮೃಗರೂಪಿಯಾದ ಮಾರೀಚನನ್ನು ಸಂಹರಿಸಿದವನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ವಾಮಾಂಕಸ್ಥಿತ ಜಾನಕೀ ಪರಿಸಲತ್ಕೋದಂಡ ದಂಡಂ ಕರೇ |
ಚಕ್ರಂ ಚೋರ್ಧ್ವಕರೇಣ ಬಾಹುಯುಗಳೇ ಶಂಖಂ ಶರಂ ದಕ್ಷಿಣೇ |
ವಿಭ್ರಾಜಂ ಜಲಜಾತಪತ್ರನಯನಂ ಭದ್ರಾದಿ ಮೂರ್ಧ್ನಿಸ್ಥಿತಂ |
ಕೇಯೂರಾದಿ ವಿಭೂಷಿತಂ ರಘುಪತಿಂ ರಾಮಂ ಭಜೇ ಶ್ಯಾಮಲಂ ||

ತನ್ನ ಎಡ ತೊಡೆಯಮೇಲೆ ಸೀತೆಯು ಕುಳಿತಿರಲು, ಆಕೆಯನ್ನು ಆಲಂಗಿಸಿಕೊಂಡಿರುವ ಹಸ್ತದಲ್ಲಿ ಧನುಸ್ಸನ್ನು ಹಿಡಿದುಕೊಂಡು, ಅದೇ ಎಡಭಾಗದಲ್ಲಿ ಮೇಲಕ್ಕೆ ಎತ್ತಿರುವ ಇನ್ನೊಂದು ಹಸ್ತದಲ್ಲಿ ಚಕ್ರವನ್ನು ಧರಿಸಿ, ಬಲಭಾಗದ ಎರಡು ಕೈಗಳಲ್ಲಿ ಒಂದರಲ್ಲಿ ಬಾಣವನ್ನೂ ಒಂದರಲ್ಲಿ ಶಂಖವನ್ನೂ ಧರಿಸಿ, ಪ್ರಕಾಶಿಸುತ್ತಾ, ಕಮಲಾಕ್ಷನೂ, ಯೋಗಿಯ ಬ್ರಹ್ಮರಂಧ್ರದಲ್ಲಿ ನೆಲಸಿರುವವನೂ, ಕೇಯೂರಾದಿ ಆಭರಣಗಳಿಂದ ಅಲಂಕೃತನೂ, ರಘುಶ್ರೇಷ್ಠನೂ, ನೀಲಮೇಘಶ್ಯಾಮನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಸೀತಾಯಾ ದಕ್ಷಿಣೇ ಪಾರ್ಶ್ವೇ ಲಕ್ಷ್ಮಣಶ್ಚಾನ್ಯ ಪಾರ್ಶ್ವಕೇ |
ವಿಭ್ರಾಜಂ ರಾಘವಂ ವಂದೇ ಧನುರ್ಬಾಣಧರಂ ಹರಿಂ ||

ಸೀತೆಯು ಬಲಭಾಗದಲ್ಲೂ, ಲಕ್ಷ್ಮಣನು ಎಡಭಾಗದಲ್ಲೂ ಇರಲು ಮಧ್ಯೆ ಧನುರ್ಬಾಣಧಾರಿಯಾಗಿ ಶೋಭಿಸುವ ಶ್ರೀರಾಮನನ್ನು ನಮಿಸುತ್ತೇನೆ.

ಚಂದ್ರೋಪಮಂ ಮಲಯ ಚಂದನ ಚರ್ಚಿತಾಂಗಂ |
ಮಂದಾರಪುಷ್ಪ ಪರಿಪೂಜಿತ ಪಾದಪದ್ಮಂ |
ಬ್ರಹ್ಮೇಂದ್ರ ವಂದ್ಯಮನಿಶಂ ಮುನಿಬೃಂದಸೇವ್ಯಂ |
ವಂದೇ ರವೀಂದುನಯನಂ ರಘುರಾಮಚಂದ್ರಂ ||

ಚಂದ್ರನಂತೆ ಮನೋಹರನಾದ, ಶ್ರೀಗಂಧಲೇಪನದಿಂದ ಕೂಡಿದ, ಮಂದಾರ ಪುಷ್ಪಗಳಿಂದ ಪೂಜಿತವಾದ ಪಾದಕಮಲಗಳುಳ್ಳ, ಸರ್ವದಾ ಬ್ರಹ್ಮ ಇಂದ್ರಾದಿಗಳಿಂದಲೂ, ಮುನಿಗಳಿಂದಲೂ ಸ್ತುತಿಸಿಕೊಳ್ಳುತ್ತಲೂ, ಸೇವಿಸಿಕೊಳ್ಳುತ್ತಲೂ ಇರುವ ಸೂರ್ಯಚಂದ್ರರಂತೆ ಹೊಳೆಯುವ ಕಣ್ಣುಗಳುಳ್ಳ ರಘುರಾಮಚಂದ್ರನನ್ನು ವಂದಿಸುತ್ತೇನೆ.

ಇಕ್ಷ್ವಾಕುನಂದನಂ ಸುಗ್ರೀವ ಪೂಜಿತಂ |
ತ್ರೈಲೋಕ್ಯರಕ್ಷಕಂ ಸತ್ಯಸಂಧಂ ಸದಾ |
ರಾಘವಂ ರಘುಪತಿಂ ರಾಜೀವಲೋಚನಂ |
ರಾಮಚಂದ್ರ ಭಜೇ ರಾಘವೇಶಂ ಭಜೇ ||

ಇಕ್ಷ್ವಾಕುವಂಶ ಸಂಭೂತನೂ, ಸುಗ್ರೀವನಿಂದ ಪೂಜಿತನೂ, ಮೂರು ಲೋಕಗಳನ್ನೂ ರಕ್ಷಿಸುವವನೂ, ಸದಾ ಸತ್ಯಸಂಧನೂ, ರಘುಕುಲಶ್ರೇಷ್ಠನೂ, ಕಮಲಾಕ್ಷನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಜನನೀ ಜಾನಕೀ ಸಾಕ್ಷಾಜ್ಜನಕೋ ರಘುನಂದಂನಃ |
ಲಕ್ಷ್ಮಣೋ ಮಿತ್ರಮಸ್ಮಾಕಂ ಕೋವಿಚಾರಃ ಕುತೋಭಯಂ ||

ನನ್ನ ತಾಯಿಯು ಸಾಕ್ಷಾತ್ ಜಾನಕೀ ಮಾತೆಯು, ನನ್ನ ತಂದೆ ರಘುನಂದನನಾದ ಶ್ರೀರಾಮನು, ನನ್ನ ಮಿತ್ರನು ಲಕ್ಷ್ಮಣದೇವನು. ಇನ್ನು ನಾನು ವಿಚಾರ ಮಾಡತಕ್ಕದ್ದೇನಿದೆ? ಏತಕ್ಕೆ ತಾನೇ ನಾನು ಹೆದರಬೇಕು?

ಜನಕೋ ರಾಮಚಂದ್ರೋ ಮೇ ಜನನೀ ಜನಕಾತ್ಮಜಾ |
ಹನೂಮತ್ಪ್ರಮುಖಾಸ್ಸರ್ವೇ ಹರಯೋ ಮಮ ಬಾಂಧವಾಃ ||

ರಾಮಚಂದ್ರನೇ ನನ್ನ ತಂದೆಯು, ನನ್ನ ತಾಯಿಯು ಜನಕಾತ್ಮಜೆಯಾದ ಸೀತಾದೇವಿಯು, ಹನುಮಂತನೇ ಮುಂತಾದ ಕಪಿಶ್ರೇಷ್ಠರು ನನ್ನ ಬಂಧುಗಳು.

ಶ್ವೇತ ಪುಷ್ಪಕಮಾರುಹ್ಯ ಸೀತಯಾ ಸಹ ರಾಘವ |
ಸುಗ್ರೀವಾದಿ ಭವದ್ಭಕ್ತೈರ್ಮನೋಮಧ್ಯೇ ರಮಸ್ವಮೇ ||

ಓ! ಶ್ರೀರಾಮ! ಬಿಳಿಯ ಪುಷ್ಪಕವಿಮಾನವನ್ನು ಏರಿ, ಸೀತಾಸಮೇತನಾಗಿ, ಸುಗ್ರೀವಾದಿ ನಿನ್ನ ಭಕ್ತರಿಂದ ಒಡಗೂಡಿ, ನನ್ನ ಹೃದಯಕಮಲದಲ್ಲಿ ರಂಜಿಸು.

ರಘುನಂದನ ಏವ ದೈವತಂನೋ ರಘುವಂಶೋದ್ಭವ ಏವ ದೈವತಂ |
ಭರತಾಗ್ರಜ ಏವ ದೈವತಂನೋ ಭಗವಾನ್ ರಾಘವ ಏವ ದೈವತಂ ||

ನಮಗೆ ರಘುನಂದನನಾದ ಶ್ರೀರಾಮನೊಬ್ಬನೇ ದೈವವು, ರಘುವಂಶೋದ್ಭವನಾದ ಶ್ರೀರಾಮನೊಬ್ಬನೇ ದೈವವು, ಭರತಾಗ್ರಜನಾದ ಶ್ರೀರಾಮನೊಬ್ಬನೇ ದೈವವು, ಭಗವಂತನಾದ ರಘುರಾಮನೊಬ್ಬನೇ ದೈವವು.

ರಾಜೀವಾಯತಲೋಚನಂ ರಘುವರಂ ನೀಲೋತ್ಪಲ ಶ್ಯಾಮಲಂ |
ಮಂದಾರಾಂಚಿತಮಂಡಪೇ ಸುಲಲಿತೇ ಸೌವರ್ಣಕೇ ಪುಷ್ಪಕೇ |
ಆಸ್ಥಾನೇ ನವರತ್ನ ರಾಜಿಖಚಿತೇ ಸಿಂಹಾಸನೇ ಸಂಸ್ಥಿತಂ |
ಸೀತಾಲಕ್ಷ್ಮಣ ಲೋಕಪಾಲ ಸಹಿತಂ ವಂದೇ ಮುನೀಂದ್ರಾಸ್ಪದಂ ||

ಕಮಲಾಕ್ಷನೂ, ರಘುವರನೂ, ನೈದಿಲೆಯಂತೆ ನೀಲವರ್ಣನೂ, ಮಂದಾರಪುಷ್ಪಗಳಿಂದ ಅಲಂಕೃತವಾದ ಮಂಟಪದಲ್ಲಿ ಮಧುರವಾದ ಸುವರ್ಣಖಚಿತವಾದ ಪುಷ್ಪಕರಥದಲ್ಲಿ ನವರತ್ನಖಚಿತವಾದ ಸಿಂಹಾಸನದಲ್ಲಿ ಮಂಡಿಸಿ, ಸೀತಾಲಕ್ಷ್ಮಣರು ಅಧಿರಾಜರುಗಳು ಮುಂತಾದವರಿಂದ ಕೂಡಿ, ಶೋಭಾಯಮಾನನಾದ, ಮುನಿಶ್ರೇಷ್ಠರ ದಿವ್ಯಮನಸ್ಸಿಗೆ ಸಿಕ್ಕುವ ಶ್ರೀರಾಮಚಂದ್ರನಿಗೆ ನಮಸ್ಕರಿಸುತ್ತೇನೆ.

ರಾಮಚಂದ್ರ ದಯಾಸಾಂದ್ರ ರಘುವೀರ ನೃಪೋತ್ತಮ |
ಲೋಚನಾಭ್ಯಾಂ ಕೃಪಾಪೂರ, ಪೂರ್ಣಾಭ್ಯಾಂ ಮಾಂ ವಿಲೋಕಯ ||

ಹೇ ರಾಮಚಂದ್ರ! ದಯಾಸಮುದ್ರನೇ! ರಘುವೀರನೇ! ನೃಪಾಗ್ರಣಿಯೆ! ನಿನ್ನ ಎರಡು ಕಣ್ಣುಗಳಿಂದಲೂ ನನ್ನನ್ನು ಕೃಪಾದೃಷ್ಟಿಯಿಂದ ನೋಡು, ಅಂದರೆ "ನನ್ನಲ್ಲಿ ಸಂಪೂರ್ಣ ಕಟಾಕ್ಷವನ್ನಿಡು".

ಸಂಪೂರ್ಣ ಚಂದ್ರವದನಂ ಸರಸೀರುಹಾಕ್ಷಂ |
ಮಾಣಿಕ್ಯ ಕುಂಡಲಧರಂ ಮುಕುಟಾಭಿರಾಮಂ |
ಚಾಂಪೇಯ ಗೌರವಸನಂ ಶರಚಾಪಹಸ್ತಂ |
ಶ್ರೀರಾಮಚಂದ್ರಮನಿಶಂ ಮನಸಾಸ್ಮರಾಮಿ ||

ಪೂರ್ಣಚಂದ್ರನಂತೆ ದುಂಡುಮುಖದಿಂದ ಕೂಡಿ, ಕಮಲಾಕ್ಷನೆನಿಸಿ, ಮುತ್ತಿನ ಕುಂಡಲ ಕಿರೀಟವನ್ನು ಧರಿಸಿ, ರಂಜಕನಾಗಿ, ಸಂಪಿಗೆ ಹೂವಿನ ಬಣ್ಣದ ಪೀತಾಂಬರಧಾರಿಯಾಗಿ, ಬಿಲ್ಲನ್ನು ಧರಿಸಿರುವ ಶ್ರೀರಾಮಚಂದ್ರ ನನ್ನು ಮನಸ್ಸಿನಲ್ಲಿ ಸ್ಮರಿಸುತ್ತೇನೆ.

ಇಂದ್ರನೀಲಮಣಿ ಸನ್ನಿಭದೇಹಂ |
ವಂದನೀಯಮಸಕೃನ್ಮುನಿಬೃಂದೈಃ |
ಲಂಬಮಾನ ತುಲಸೀವನಮಾಲಂ |
ಚಿಂತಯಾಮಿ ಸತತಂ ರಘುವೀರಂ ||

ಇಂದ್ರನೀಲಮಣಿಯಿಂದ ನೀಲವರ್ಣನಾದ, ಮುನಿಗಳಿಂದ ಸರ್ವದಾ ಸ್ತುತಿಸಿಕೊಳ್ಳುವ, ದೀರ್ಘವಾದ ತುಳಸೀಮಾಲೆಯನ್ನು ಧರಿಸಿರುವ, ರಘುಶ್ರೇಷ್ಠನಾದ, ಶ್ರೀರಾಮಚಂದ್ರನನ್ನು ಯಾವಾಗಲೂ ಧ್ಯಾನಿಸುತ್ತೇನೆ.

ಜಯ ಜಯ ರಘುರಾಮ ಶ್ರೀಮುಖಾಂಭೋಜ ಭಾನೋ |
ಜಯ ಜಯ ರಘುವೀರ ಶ್ರೀಮದಂಭೋಜ ನೇತ್ರಾ |
ಜಯ ಜಯ ರಘುನಾಥ ಶ್ರೀಕರಾಭ್ಯಾರ್ಚಿತಾಂಘ್ರೇ |
ಜಯ ಜಯ ರಘುವರ್ಯ ಶ್ರೀಶ ಕಾರುಣ್ಯ ಸಿಂಧೋ ||

ಸೀತಾ ಮುಖಕಮಲಕ್ಕೆ ಆಹ್ಲಾದವನ್ನುಂಟುಮಾಡುವ ರಘುರಾಮನಿಗೆ ಜಯಜಯಕಾರವು. ಕಮಲ ನೇತ್ರನಾದ ರಘುವೀರನಿಗೆ ಜಯ, ಜಯಕಾರವು. ಸೀತಾದೇವಿಯ ಹಸ್ತಗಳಿಂದ ಅರ್ಚಿತವಾದ ಪಾದಗಳುಳ್ಳ ರಘುನಾಥನಿಗೆ ಜಯಜಯಕಾರವು. ಸೀತಾಪತಿಯೂ ಕರುಣಾಸಮುದ್ರನೂ ಆದ ರಘುವರ್ಯನಿಗೆ ಜಯಜಯಕಾರವು.

ಜಯ ಜಯ ವರಶಂಖ ಶ್ರೀಗದಾ ಚಕ್ರ ಧಾರಿನ್ |
ಜಯ ಜಯ ನಿಜದಾಸ ಪ್ರಾಪ್ಯದುರ್ಲಭ್ಯಕಾಮ |
ತ್ರಿಭುವನಮಯ ಸರ್ವಪ್ರಾಣಿ ಭಾವಜ್ಞ ವಿಷ್ಣೋ |
ಶ್ಚರಣ ಮುಪಗತೋಽಹಂ ತ್ವಾಂ ಶರಣ್ಯಂ ವರೇಣ್ಯಂ ||

ಶಂಖ ಚಕ್ರ ಗದಾಧಾರಿಯಾದ ಶ್ರೀರಾಮನಿಗೆ ಜಯಜಯಕಾರವು, ಆಶ್ರಿತರಿಗೆ, ಅಸದಳವಾದ ಚಿಂತಿತಾರ್ಥಗಳನ್ನು ಕೊಡುವ ಶ್ರೀರಾಮನಿಗೆ ಜಯಜಯಕಾರವು, ಮೂರು ಲೋಕಗಳಲ್ಲೂ ವ್ಯಾಪ್ತನಾಗಿ ಸರ್ವಜ್ಞನಾಗಿ ಪ್ರಾಣಿಗಳ ಅಂತರಾತ್ಮನಾಗಿ ಇರುವ ಶ್ರೀರಾಮನಿಗೆ ಜಯಜಯಕಾರವು. ಶ್ರೀರಾಮನೇ, ಶರಣರಿಗೆ ಯೋಗ್ಯವೂ ಶ್ರೇಷ್ಠವೂ ಆಗಿರುವ ನಿನ್ನ ಚರಣಗಳನ್ನು ನಾನು ಸೇವಿಸುತ್ತೇನೆ.

ವೇದ ವೇದ್ಯೇ ಪರೇಪುಂಸಿಜಾತೇ ದಶರಥಾತ್ಮಜೇ |
ವೇದಃ ಪ್ರಾಚೇತಸಾದಾಸೀತ್ ಸಾಕ್ಷಾದ್ರಾಮಾಯಣಾತ್ಮನಾ ||

ವೇದವೇದ್ಯನಾದ ಪುರುಷೋತ್ತಮನು, ದಶರಥನ ಮಗನಾಗಿ ಹುಟ್ಟಲಾಗಿ ವೇದಗಳು ವಾಲ್ಮೀಕಿ ಮಹರ್ಷಿಯಿಂದ ರಾಮಾಯಣವಾಗಿ ಪರಿಣತವಾದುವು.

ಶ್ರೀರಾಮಾಯಣಮಾದಿ ಕಾವ್ಯಮೃಷಿಣಾ ವಾಲ್ಮೀಕಿನಾನಿರ್ಮಿತಂ |
ವೇದಾಂತಾರ್ಥ ವಿಶಾರದೈರನುದಿನಂ ಸ್ತುತ್ಯಂ ಸುರೈರರ್ಚಿತಂ |
ಶ್ರೋತೃಣಾಮಘನಾಶನಂ ಸುರತರೋಸ್ತುಲ್ಯಂತು ಮುಕ್ತಿಪ್ರದಂ |
ಯೇಶ್ರುಣ್ವಂತಿ ಪಠಂತಿ ರಾಮಚರಿತಂ ತೇ ಯಾಂತಿ ವಿಷ್ಣೋಃ ಪದಂ ||

ಆದಿಕಾವ್ಯವಾದ, ವಾಲ್ಮೀಕಿ ಋಷಿಗಳಿಂದ ರಚಿತವಾದ, ಜ್ಞಾನಿಗಳಿಂದ ಪ್ರತಿದಿನವೂ ಸ್ತುತಿಸಲ್ಪಟ್ಟ, ದೇವತೆಗಳಿಂದಲೂ ಅರ್ಚಿತವಾದ, ಶ್ರೀ ರಾಮಾಯಣವು, ಕೇಳುವವರ ಪಾಪಗಳನ್ನು ನಾಶಮಾಡುತ್ತದೆ. ಕಲ್ಪವೃಕ್ಷದಂತೆ ಸಕಲ ಇಷ್ಟಾರ್ಥಗಳನ್ನೂ ಕೊಡುತ್ತದೆ. ಅಲ್ಲದೆ, ಕೊನೆಗೆ ಪರಮಪದವನ್ನು ಕೊಡುತ್ತದೆ. ಇದನ್ನು ಯಾರು ಕಿವಿಯಿಂದ ಕೇಳುತ್ತಾರೆಯೋ ಯಾರು ಪಠಿಸುತ್ತಾರೆಯೋ ಅವರೆಲ್ಲರೂ ಪರಮಪದವನ್ನು ಹೊಂದುವರು.

ಶ್ರೀರಾಮಂ ಜನಕಕ್ಷಿತೀಶ್ವರಸುತಾ ವಕ್ತ್ರಾಂಬುಜಾ ಹಾರಿಣಂ |
ಶ್ರೀಮದ್ಭಾನು ಕುಲಾಬ್ಧಿ ಕೌಸ್ತುಭಮಣಿಂ ಶ್ರೀರತ್ನ ವಕ್ಷಸ್ಥಲಂ |
ಶ್ರೀಕಂಠಾದ್ಯಮರೌಘ ರತ್ನ ಮಕುಟಾಲಂಕಾರ ಪಾದಾಂಬುಜಂ |
ಶ್ರೀವತ್ಸೋಜ್ಜ್ವಲಮಿಂದ್ರ ನೀಲಸದೃಶಂ ಶ್ರೀರಾಮಚಂದ್ರಂ ಭಜೇ ||

ಜನಕ ಮಹಾರಾಜನ ಸುತೆಯಾದ ಸೀತಾದೇವಿಯ ಮುಖ ಕಮಲಕ್ಕೆ ಆಹ್ಲಾದವನ್ನುಂಟುಮಾಡುವ, ಕ್ಷೀರ ಸಮುದ್ರದಲ್ಲಿ ಶ್ರೇಷ್ಠವಾದ ಕೌಸ್ತುಭಮಣಿಯು ಉದಯಿಸಿದಂತೆ, ಸೂರ್ಯವಂಶದಲ್ಲಿ ಜನಿಸಿದ, ವಕ್ಷಸ್ಥಳದಲ್ಲಿ ಲಕ್ಷ್ಮೀದೇವಿ ಎಂಬ ರತ್ನವನ್ನು ಧರಿಸಿರುವ, ಈಶ್ವರನೇ ಮೊದಲಾದ ದೇವತೆಗಳ ರತ್ನ ಕಿರೀಟಗಳಿಂದ ಅಲಂಕೃತವಾದ ಪಾದಕಮಲಗಳುಳ್ಳ, ಶ್ರೀವತ್ಸ ಚಿಹ್ನೆಯಿಂದಲೂ ಇಂದ್ರನೀಲ ಸದೃಶ ದೇಹಕಾಂತಿಯಿಂದಲೂ ಕೂಡಿರುವ, ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಶ್ರೀರಂಗೇಶ ಪದಾಬ್ಜಲಗ್ನ ಹೃದಯಂ ಶ್ರೀಶಂಖ ಚಕ್ರಾನ್ವಿತಂ |
ಶ್ರೀಮನ್ನಿರ್ಜರಪಾದಪ ಸ್ಫುಟಪದಂ ಶ್ರೀಸಿಂಹ ಪೀಠಸ್ಥಿತಂ |
ಶ್ರೀವೈಕುಂಠ ಸಹಸ್ರಮಸ್ತಕಲಸದ್ಭೋಗಾಸನೇ ಶಾಯಿನಂ |
ಶ್ರೀಭೂಮಿಸುತಯಾಯುತಂ ಶ್ರಿತನಿಧಿಂ ಶ್ರೀರಾಮಮೂರ್ತಿಂಭಜೆ ||

ಶ್ರೀ ರಂಗನಾಥಧ್ಯಾನ ತತ್ಪರನೂ, ಶಂಖ, ಚಕ್ರಾಂಕಿತನೂ, ಕಲ್ಪವೃಕ್ಷದಂತಿರುವ ಶ್ವೇತಚ್ಛತ್ರದ ಅಡಿಯಲ್ಲಿ ಸಿಂಹಾಸನದಲ್ಲಿ ಮಂಡಿಸಿರುವವನೂ. ವೈಕುಂಠದಲ್ಲಿ ಸಹಸ್ರ ಹೆಡೆಗಳಿಂದ ಕೂಡಿದ ಆದಿಶೇಷನ ತಲ್ಪದಲ್ಲಿ ಪವಡಿಸಿಯಿರುವವನೂ, ಸೀತಾ ಸಮೇತನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಅನರ್ಘ್ಯಮಾಣಿಕ್ಯವಿರಾಜಮಾನಂ ಶ್ರೀಪಾದುಕಾಲಂಕೃತಿ ಶೋಭನಾಭ್ಯಾಂ ।
ಅಶೇಷಬೃಂದಾರಕ ವಂದಿತಾಭ್ಯಾಂ ನಮೋನಮೋರಾಮ ಪದಾಂಬುಜಾಭ್ಯಾಂ ।

ಅತಿಶ್ರೇಷ್ಠ ಮುತ್ತುಗಳಿಂದ ವಿರಾಜಮಾನವಾದ ಪಾದುಕೆಗಳಿಂದ ಶೋಭಿಸುವ, ಸರ್ವದೇವತೆಗಳಿಂದಲೂ ವಂದಿಸಲ್ಪಡುವ, ಶ್ರೀರಾಮಚಂದ್ರನ ಪಾದಕಮಲಗಳಿಗೆ ನಮಸ್ಕಾರವು.

ಧ್ವಜಾಂಬುಜಚ್ಛತ್ರರಥಾಂಗ ಶಂಖಂ ದಂಭೋಳಿ ಪಾಶಾಂಕುಶ ಮತ್ಸ್ಯಚಿಹ್ನಂ ।
ಬ್ರಹ್ಮೇಂದ್ರದೇವಾದಿ ಕಿರೀಟಕೋಟಿ ಸಂಶೋಭಿಪಾದಾಂಬುಜ ಯುಗ್ಮಮೀಳೇ ॥

ಧ್ವಜ ಕಮಲ ಚಕ್ರ ಶಂಖ ಪಾಶ ಅಂಕುಶ ಮತ್ಸ್ಯಚಿಹ್ನೆ ಇವುಗಳಿಂದ ಕೂಡಿದ, ಬ್ರಹ್ಮ ಇಂದ್ರಾದಿ ದೇವತೆಗಳ ಕಿರೀಟಗಳ ಕೊನೆಯಿಂದ ಚೆನ್ನಾಗಿ ಶೋಭಿತವಾದ, ಶ್ರೀರಾಮಚಂದ್ರನ ಪಾದಕಮಲಗಳನ್ನು ಭಜಿಸುತ್ತೇನೆ.

ದೇವೇಂದ್ರನೀಲ ನವಮೇಘ ವಿನಿರ್ಜಿತಾಂಗಂ ।
ಪೂರ್ಣೇಂದು ಬಿಂಬವದನಂ ಶರಚಾಪಹಸ್ತಂ ।
ಸೀತಾಸಮೇತಮನಿಶಂ ಶರಣಂ ಶರಣ್ಯಂ ।
ಚೇತೋಮದೀಯ ಮಭಿವಾಂಛತಿ ರಾಮಚಂದ್ರಂ ॥

ಇಂದ್ರ ನೀಲಮಣಿಯ ಮತ್ತು ನವಮೇಘದ ಕಾಂತಿಯಂತೆ ಶ್ಯಾಮಲಾಂಗನಾದ, ಪೂರ್ಣಚಂದ್ರನಂತೆ ದುಂಡಾದ ಮುಖವುಳ್ಳ, ಬಾಣ, ಬಿಲ್ಲುಗಳನ್ನು ಹಿಡಿದ ಹಸ್ತಗಳುಳ್ಳ, ಸೀತಾಸಮೇತನಾದ, ಯಾವಾಗಲೂ ಆಶ್ರಿತ ವತ್ಸಲನಾದ, ಶ್ರೀರಾಮಚಂದ್ರನನ್ನು ನನ್ನ ಮನಸ್ಸಿನಲ್ಲಿ ಧ್ಯಾನಿಸುತ್ತೇನೆ.

ಶ್ರೀಮದ್ವೈಕುಂಠನಾಥಂ ಸುರಮುನಿಮುಕುಟ ಜ್ಯೋತೀತಸ್ವರ್ಣಪೀಠಂ ।
ನೀಲಾಂಗಂ ಚಂದ್ರವಕ್ತ್ರಂ ಮಣಿಮಯಮುಕುಟಂ ಬಾಣಕೋದಂಡಹಸ್ತಂ ।
ಪದ್ಮಾಕ್ಷಂ ಪಾಪನಾಶಂ ಪ್ರಣವಮಯ ಮಹಾರತ್ನ ಸಿಂಹಾಸನಸ್ಥಂ ।
ಶ್ರೀಸೀತಾವಾಮಭಾಗಂ ಶ್ರಿತಜನವರದಂ ರಾಮಚಂದ್ರಂ ಭಜೇಹಂ ॥

ವೈಕುಂಠಾಧಿಪತಿಯೂ, ದೇವಋಷಿಗಳ ಕಿರೀಟಗಳ ಕಾಂತಿಯಿಂದ ಶೋಭಿತವಾದ ಸುವರ್ಣಪೀಠವುಳ್ಳವನೂ, ಶ್ಯಾಮಲವರ್ಣನೂ, ಚಂದ್ರನಂತೆ ದುಂಡಾದ ಮುಖವುಳ್ಳವನೂ, ರತ್ನಖಚಿತವಾದ, ಕಿರೀಟದಿಂದ ಕೂಡಿದವನೂ, ಬಿಲ್ಲು ಬಾಣಗಳಿಂದ ಕೂಡಿದ ಹಸ್ತಗಳುಳ್ಳವನೂ, ಪದ್ಮನೇತ್ರನೂ, ಪಾಪಗಳನ್ನು ನಾಶಮಾಡತಕ್ಕವನೂ, ಸುವರ್ಣಪೀಠದಮೇಲೆ ಪ್ರಣವಮಯವಾದ ಶ್ರೇಷ್ಠವಾದ ಸಿಂಹಾಸನದಲ್ಲಿ ಕುಳಿತಿರುವವನೂ, ವಾಮಭಾಗದಲ್ಲಿ ಸೀತಾಸಮೇತನೂ, ಆಶ್ರಿತವರದನೂ, ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ವಂದೇ ರಾಮಮನಾದಿ ಪೂರುಷಮಜಂ ವಂದೇರಮಾನಾಯಕಂ ।
ವಂದೇ ಹಾರಕಿರೀಟ ಕುಂಡಲಧರಂ ವಂದೇಂದ್ರ ನೀಲದ್ಯುತಿಂ ।
ವಂದೇ ಚಾಪಕದಂಬಕೋಜ್ಜ್ವಲಕರಂ ವಂದೇ ಜಗನ್ಮಂಗಳಂ ।
ವಂದೇ ಪಙ್ಕ್ತಿರಥಾತ್ಮಜಂ ಮಮಗುರುಂ ವಂದೇ ಸದಾರಾಘವಂ ॥

ಅನಾದಿ ಪುರುಷನೂ, ಉತ್ಪತ್ತಿರಹಿತನೂ, ಲಕ್ಷ್ಮೀಪತಿಯೂ, ಹಾರ ಕಿರೀಟಕುಂಡಲ ಧಾರಿಯೂ ಇಂದ್ರ ನೀಲದ ಕಾಂತಿಯಿಂದ ಕೂಡಿದ ಶರೀರಉಳ್ಳವನೂ, ಬಿಲ್ಲು, ಬಾಣ, ಅಸ್ತ್ರಗಳಿಂದ ಪ್ರಕಾಶಿಸುವವನೂ, ಜಗತ್ತಿಗೆ ಮಂಗಳಪ್ರದನೂ, ದಶರಥಪುತ್ರನೂ, ನನ್ನ ಗುರುವೂ ಆದ, ರಾಘವಮೂರ್ತಿಯನ್ನು ವಂದಿಸುತ್ತೇನೆ.

ವಂದೇ ಸೂರ್ಯಶಶಾಂಕ ಲೋಚನಯುಗಂ ವಂದೇ ಜಗತ್ಪಾವನಂ |
ವಂದೇ ಪತ್ರಸಹಸ್ರ ಪದ್ಮನಿಲಯಂ ವಂದೇ ಪುರಾರಿಪ್ರಿಯಂ |
ವಂದೇ ರಾಕ್ಷಸವಂಶ ನಾಶನಕರಂ ವಂದೇ ಸುಧಾಶೀತಲಂ |
ವಂದೇ ಧೀರಕಪೀಂದ್ರ ಕೋಟಿವಿನುತಂ ವಂದೇ ಸದಾರಾಘವಂ ||

ಸೂರ್ಯ ಚಂದ್ರರನ್ನೇ ಕಣ್ಣುಗಳಾಗಿಉಳ್ಳ, ವಿರಾಟ್‌ಮೂರ್ತಿಯಾದ, ಜಗತ್ತನ್ನೇ ಪಾವನಗೊಳಿಸುವ, ನಮ್ಮ ಶರೀರದಲ್ಲಿ ಶಿರಸ್ಸಿನಲ್ಲಿರುವ ಸಹಸ್ರಾರ ಪದ್ಮದಲ್ಲಿ ನೆಲೆಸಿರುವ, ಪರಮೇಶ್ವರನ ಸಖನೂ ರಾಕ್ಷಸವಂಶ ನಿರ್ಮೂಲನೂ ಅಮೃತಪ್ರಾಯನೂ, ಧೀರರಾದ ಕೋಟ್ಯಾನುಕೋಟಿ ಕಪಿಶ್ರೇಷ್ಠರಿಂದ ಸ್ತುತಿಸಲ್ಪಟ್ಟವನೂ, ಆದ ರಾಘವನನ್ನು ವಂದಿಸುತ್ತೇನೆ.

ವಂದೇ ಸಾಗರಗರ್ವಭಂಗವಿಶಿಖಂ ವಂದೇ ಜಗಜ್ಜೀವನಂ |
ವಂದೇ ಕೌಶಿಕ ಯಾಗರಕ್ಷಣಕರಂ ವಂದೇ ಗುರೂಣಾಂಗುರುಂ |
ವಂದೇ ಬಾಣಶರಾಸನೋಜ್ಜ್ವಲಕರಂ ವಂದೇ ಜಟಾವಲ್ಕಲಂ |
ವಂದೇ ಲಕ್ಷ್ಮಣ ಭೂಮಿಜಾನ್ವಿತಕರಂ ವಂದೇ ಸದಾರಾಘವಂ ||

ಸಮುದ್ರರಾಜನ ದರ್ಪವನ್ನಡಗಿಸಿದವನೂ, ಜಗತ್ತಿಗೆ ಪ್ರಾಣನೂ, ವಿಶ್ವಾಮಿತ್ರನ ಯಾಗರಕ್ಷಣೆ ಮಾಡಿದವನೂ, ಗುರುಗಳಿಗೆಲ್ಲಾ ಗುರುವೂ, ಬಾಣ ಬಿಲ್ಲುಗಳಿಂದ ಕೂಡಿದ ಹಸ್ತಗಳುಳ್ಳವನೂ, ಜಟಾವಲ್ಕಲಧಾರಿಯೂ, ಲಕ್ಷ್ಮಣ ಸೀತಾಸಮೇತನೂ, ಆದ ರಾಘವನನ್ನು ಸದಾ ವಂದಿಸುತ್ತೇನೆ.

ಧ್ಯಾಯೇತ್ವಾಂ ರವಿಮಂಡಲೇಂದು ಧವಳೇ ಪದ್ಮೇ ನಿಷಣ್ಣಂ ಹರಿಂ|
ಸ್ವರ್ಣಾಭಂ ಕರಶಂಖಚಕ್ರ ಲಲಿತಂ ಪೀತಾಂಬರಂ ಕೌಸ್ತುಭಂ |
ಸ್ವರ್ಣಾ ಶ್ಮಶ್ರು ನಖಾಲಕಂ ಲಲನಯಾ ಯುಕ್ತಂ ಕಿರೀಟಾಂಗದಂ|
ಹಾರಾಲಂಕೃತ ವಕ್ಷಸಂ ಪದಯುಗಂ ಶ್ರೀ ಪಾದುಕಾಲಂಕೃತಂ ||

ಶಶಿ ಸೂರ್ಯರಂತೆ ಧವಳಿಸುವ ಪದ್ಮದಲ್ಲಿ ಸುವರ್ಣಸದೃಶವಾದ ಕಾಂತಿಯಿಂದ ಕೂಡಿ, ಶಂಖಚಕ್ರ ಪೀತಾಂಬರ, ಕೌಸ್ತುಭಧಾರಿಯಾಗಿ, ಚಿನ್ನದ ಬಣ್ಣವನ್ನು ಹೋಲುವ ಗಡ್ಡ ಮೀಸೆಗಳಿಂದಲೂ ಉಗುರು, ಮುಂಗುರುಗಳುಗಳಿಂದಲೂ, ಕಿರೀಟ, ಅಂಗದ, (ತೋಳುಬಂದಿ) ಹಾರಗಳಿಂದಲೂ, ಶೋಭಿತನಾಗಿ, ದಿವ್ಯವಾದ ಪಾದುಕೆಗಳನ್ನು ಧರಿಸಿ ಪ್ರಕಾಶಿಸುವ ಶ್ರೀರಾಮುನನ್ನು ಭಜಿಸುತ್ತೇನೆ.

ಸುಪರ್ವಾಣವೃಕ್ಷೋ ಜ್ಜ್ವಲಸ್ಸ್ವರ್ಣ ಪೀಠೇ|
ವಸಿಷ್ಠಾದಿಭಿರ್ಮೌನಿ ಭಿಸ್ಸೇವ್ಯಮಾನಂ|
ಸಿತಂ ಪುಷ್ಪವೃಷ್ಟ್ಯಾವೃತಂ ರಾಮಮೂರ್ತಿಂ|
ಸದಾ ಭೂಮಿಜಾಯುಕ್ತ ಮೀಳೇ ಹೃದಂತೇ||

ಕಲ್ಪವೃಕ್ಷದಂತಿರುವ ಶ್ವೇತಚ್ಛತ್ರದ ಅಡಿಯಲ್ಲಿ ಸುವರ್ಣಪೀಠದಲ್ಲಿ ವಸಿಷ್ಠಾದಿ ಮುನಿಗಳಿಂದ ಸೇವಿಸಿಕೊಳ್ಳುತ್ತಾ ಸೀತಾಸಮೇತನಾಗಿ ಪುಷ್ಪವೃಷ್ಟಿಯನ್ನು ಕರೆಸಿಕೊಳ್ಳುತ್ತಾ ಶೋಭಿಸುತ್ತಿರುವ ಶ್ರೀರಾಮುನನ್ನು ಸದಾ ಧ್ಯಾನಿಸುತ್ತೇನೆ.

ಶ್ರೀರಾಮೋಸಿತಕಂಧರಸ್ಯ ಧನುಷಸ್ಸಂಭೇದನಪ್ರಾಪಿತಾಂ।
ಸೀತಾಂ ಕಾಂಚನ ಸನ್ನಿಭಾಂ ಪರಿಣತಾಮೂಕಲ್ಪ ರತ್ನೋಜ್ಜ್ವಲಾಂ।
ವಾಮಾಂಕೋಪರಿ ಲಜ್ಜಯಾನತಮುಖೀ ಮಾಲೋಕಯನ್ಮೋದಿತಃ।
ಶ್ರೀಮದ್ಭಾನು ಶಶಾಂಕ ಕೋಟಿಸದೃಶಃ ಪಾಯಾತ್ಸವೋ ರಾಘವಃ॥

ಈಶ್ವರನ ಧನುರ್ಭಂಗದಿಂದ ಪ್ರಾಪ್ತಳಾದ, ಸುವರ್ಣ ಕಾಂತಿಯುಕ್ತಳಾದ, ವಿದ್ಯಾಪರಿಣತಳೂ, ಕಲ್ಪವೃಕ್ಷದ ರತ್ನಗಳಂತೆ ತೇಜಸ್ವಿನಿಯೂ ಆದ ಸೀತಾದೇವಿಯು ತನ್ನೊಡನೆ ಸಿಂಹಾಸನದಲ್ಲಿ ತನ್ನ ವಾಮಾಂಕದಲ್ಲಿ, ಲಜ್ಜಾಯುಕ್ತಳಾಗಿ ಮುಖವನ್ನು ಸ್ವಲ್ಪ ತಗ್ಗಿಸಿಕೊಂಡು ಮಂಡಿಸಿರಲು, ಆಕೆಯನ್ನು ಮುದದಿಂದ ಅವಲೋಕಿಸುತ್ತಾ ಕುಳಿತಿರುವ ಕೋಟಿ ಸೂರ್ಯಚಂದ್ರರಿಗೆ ಸದೃಶವಾದ ಕಾಂತಿಯುಳ್ಳ ರಾಘವನು ನಮ್ಮನ್ನು ಕಾಪಾಡಲಿ.

ಶ್ರೀರಾಮಂ ಭುವನೈಕಸುಂದರತನುಂ ಧಾರಾಧರ ಶ್ಯಾಮಲಂ।
ರಾಜೀವಾಯತಲೋಚನಂ ರಘುವರಂ ರಾಕೇಂದು ಬಿಂಬಾನನಂ।
ಕೋದಂಡಾದಿ ನಿಜಾಯುಧಾಶ್ರಿತ ಭುಜೈಃ ಭಾಂತಂ ವಿದೇಹಾತ್ಮಜಾ।
ಧೀಶಂ ಭಕ್ತಜನಾವನಂ ರಘುವರಂ ಶ್ರೀರಾಮಚಂದ್ರಂ ಭಜೇ॥

ಜಗತ್ತಿಗೇ ಸುಂದರನೂ, ನೀಲಮೇಘಶ್ಯಾಮನೂ, ಕಮಲಾಕ್ಷನೂ, ರಘುಶ್ರೇಷ್ಠನೂ, ಪೂರ್ಣಚಂದ್ರಸದೃಶದುಂಡು ಮುಖವುಳ್ಳವನೂ, ಕೋದಂಡವೇ ಮುಂತಾದ ಆಯುಧಗಳಿಗೆ ಆಶ್ರಯವಾದ ಭುಜಗಳುಳ್ಳವನೂ, ತೇಜಸ್ವಿಯೂ, ಸೀತಾಪತಿಯೂ, ಭಕ್ತರನ್ನು ಕಾಪಾಡತಕ್ಕವನೂ, ರಘುಶ್ರೇಷ್ಠನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ರಾಮಂ ರಾಜಶಿಖಾಮಣಿಂ ರಘುವರಂ ರಾಕೇಂದು ಬಿಂಬಾನನಂ।
ರಾಜೀವಾಯತಲೋಚನಂ ರಣಹತಾನೇಕಾಸುರಂ ರಾಘವಂ।
ಸೀತಾ ಚಾರುಪಯೋಧರಾಂಚಿತ ಲಸತ್ಕಾಶ್ಮೀರ ಗಂಧಾಂಚಿತಂ।
ರಾಜತ್ಕುಂಡಲ ಮಂಡಿತಂ ಶುಭಕರಂ ರಾಮಾಭಿರಾಮಂ ಭಜೇ॥

ರಾಜಶಿಖಾಮಣಿಯೂ, ರಘುಶ್ರೇಷ್ಠನೂ. ಪೂರ್ಣಚಂದ್ರಸದೃಶವಾದ ದುಂಡು ಮುಖವುಳ್ಳವನೂ, ಕಮಲಾಕ್ಷನೂ, ಅನೇಕ ರಾಕ್ಷಸರನ್ನು ಯುದ್ಧದಲ್ಲಿ ಸಂಹರಿಸಿದವನೂ, ಸೀತೆಯ ಆಲಿಂಗನದಿಂದ ಕೂಡಿದ ವಕ್ಷಸ್ಥಳವುಳ್ಳವನೂ, ಪ್ರಕಾಶಮಾನವಾದ ಕುಂಡಲಗಳಿಂದ ಭೂಷಿತನಾದ ಮಂಗಳಮೂರ್ತಿಯೂ, ಮನೋಹರನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ರಾಮಂ ಕೋಮಲ ನೀಲಮೇಘವಿಲಸದ್ಗಾತ್ರಂ ಪಯೋಜಾನನಂ।
ಕಾಕುತ್ಸ್ಥಂ ದಶಕಂಠ ಬಾಹು ವಿದಳತ್ಕೋದಂಡ ಬಾಣಾನ್ವಿತಂ।
ಪಾಪಘ್ನಂ ವಿಶದಾಯತಾಕ್ಷಿಯುಗಳಂ ಸೌಮಿತ್ರಿ ಸಂಸೇವಿತಂ।
ಭಕ್ತಾನಾಂ ಪರಮೌಷಧಂ ಮುನಿವರ್ಯೈಃ ಸಂಸ್ತೂಯಮಾನಂ ಭಜೇ॥

ಕೋಮಲನೂ, ನೀಲಮೇಘಶ್ಯಾಮನೂ, ಮನೋಹರವಾದ ರೂಪ ಉಳ್ಳವನೂ, ಕಮಲಮುಖನೂ, ಕಕುತ್ಸ್ಥವಂಶಜನೂ, ರಾವಣನ ಬಾಹುಗಳನ್ನು ಕತ್ತರಿಸಿದವನೂ, ಕೋದಂಡ ಬಾಣಗಳಿಂದ ಕೂಡಿದವನೂ, ಪಾಪನಾಶಕನೂ, ವಿಶಾಲ ನೇತ್ರಯುಗ್ಮನೂ, ಲಕ್ಷ್ಮಣನಿಂದ ಸೇವಿತನೂ, ಭಕ್ತರ ಪಾಪಗಳನ್ನು ನಾಶಪಡಿಸಿ, ಅವರಿಗೆ ಮೋಕ್ಷ ಕೊಡಿಸುವುದರಲ್ಲಿ ಅಮೃತವೆಂಬ ಔಷಧಿಯಂತಿರುವವನೂ, ಋಷಿ ಶ್ರೇಷ್ಠರಿಂದ ಹೊಗಳಿಸಿಕೊಳ್ಳುವವನೂ, ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ರಾಮಂ ಶ್ಯಾಮಲ ಮೇಘಕೋಮಲರುಚಿಂ ರಾಕೇಂದು ಬಿಂಬಾನನಂ |
ರಕ್ಷೋಘ್ನಂ ರವಿಜಾರ್ಚಿತಂ ರಘುವರಂ ರತ್ನೋಜ್ವಲತ್ಕುಂಡಲಂ |
ರಾಜೀವಾಕ್ಷ ಸಮಂ ಮಹಾ ರಣ ಬಲೋದಗ್ರಂ ದಯಾನುಗ್ರಹಂ |
ರಾಜೇಂದ್ರಂ ರಮಣೀಯರೂಪಮಸಕೃದ್ಧ್ಯಾಯೇ ಜ್ಜಗನ್ಮೋಹನಂ ||

ನೀಲಮೇಘಶ್ಯಾಮನೂ, ಪೂರ್ಣಚಂದ್ರನಂತೆ ಮುಖವುಳ್ಳವನೂ, ರಾಕ್ಷಸನಾಶಕನೂ, ಸುಗ್ರೀವನಿಂದ ಪೂಜಿತನೂ, ರಘುಶ್ರೇಷ್ಠನೂ, ಪ್ರಕಾಶಮಾನವಾದ ಕುಂಡಲಗಳನ್ನು ಧರಿಸಿದವನೂ, ಕಮಲಾಕ್ಷನೂ, ವಿಷ್ಣು ರೂಪಿಯೂ, ಮಹಾಯುದ್ಧದಲ್ಲಿ ಪ್ರಚಂಡನೂ, ಆಶ್ರಿತರಲ್ಲಿ ದಯಾಮೂರ್ತಿಯೂ, ಚಕ್ರವರ್ತಿಯೂ, ಮನೋಹರವಾದ ರೂಪಿನಿಂದ ಕೂಡಿದವನೂ, ಜಗನ್ಮೋಹನನೂ ಆದ ಶ್ರೀರಾಮನನ್ನು ಸರ್ವದಾ ಭಜಿಸುತ್ತೇನೆ.

ರಾಜೀವನೇತ್ರ ರಘುಪುಂಗವ ರಾಮಭದ್ರ |
ರಾಕೇಂದು ಬಿಂಬಸದೃಶಾನನ ನೀಲಗಾತ್ರ |
ರಾಮಾಭಿರಾಮ ರಘುವಂಶ ಸಮುದ್ಭವತ್ವಂ |
ಶ್ರೀರಾಮಚಂದ್ರ ಮಮದೇಹಿ ಕರಾವಲಂಬಂ ||

ಕಮಲನೇತ್ರನೇ, ರಘುಶ್ರೇಷ್ಠನಾದ ರಾಮಭದ್ರನೇ, ಪೂರ್ಣಚಂದ್ರನಂತೆ ಮುಖ ಕಾಂತಿಯುಳ್ಳವನೆ, ಶ್ಯಾಮಲಾಂಗನೆ, ಪ್ರಪಂಚ ರಂಜಕನೇ, ರಘುವಂಶೋದ್ಭವನೇ, ಶ್ರೀರಾಮಚಂದ್ರಾ, ನೀನು ನನಗೆ ಅಭಯ ಹಸ್ತವನ್ನು ದಯಪಾಲಿಸು.

ಶ್ರೀರಾಮಂ ನವರತ್ನ ಕುಂಡಲಧರಂ ಶ್ರೀರಾಮರಕ್ಷಾಮಣಿಂ |
ಶ್ರೀರಾಮಂಚ ಸಹಸ್ರಭಾನುಸದೃಶಂ ಶ್ರೀರಾಮಚಂದ್ರೋದಯಂ |
ಶ್ರೀರಾಮಶ್ರುತಕೀರ್ತಿ ಮಂಗಳಕರಂ ಶ್ರೀರಾಮಮುಕ್ತಿಪ್ರದಂ |
ಶ್ರೀರಾಮಂ ರಘುನಂದನಂ ಭಯಹರಂ ಶ್ರೀರಾಮಚಂದ್ರಂ ಭಜೇ ||

ನವರತ್ನಕುಂಡಲಧಾರಿಯೂ, ಶ್ರೀರಾಮರೂಪದಲ್ಲಿ ಎಲ್ಲರಿಗೂ ರಕ್ಷಕನೂ, ಸಹಸ್ರ ಸೂರ್ಯರಿಗೆ ಸದೃಶನೂ, ಚಂದ್ರೋದಯವಾದಂತೆ ಸೂರ್ಯವಂಶದಲ್ಲಿ ಅವತರಿಸಿದವನೂ, ಆನಂದದಾಯಕಪಾದ ಕೀರ್ತಿಗಳಿಸಿ ಎಲ್ಲರಿಗೂ ಪ್ರಸಿದ್ಧನಾದವನೂ, ಮಂಗಳಮೂರ್ತಿಯೂ, ಮೋಕ್ಷದಾಯಕನೂ, ರಘುಕುಲೋತ್ಪನ್ನನೂ, ಸಂಸಾರಭಯ ನಾಶಕನೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ರಾಮ ಮಿಂದೀವರ ಶ್ಯಾಮಂ |
ರಾಜೀವಾಯತಲೋಚನಂ |
ಜ್ಯಾಘೋಷ ನಿರ್ಜಿತಾರಾತಿಂ |
ಜಾನಕೀರಮಣಂ ಭಜೇ ||

ನೈದಿಲೆಯಂತೆ ಶ್ಯಾಮಲವರ್ಣನೂ ಕಮಲಾಕ್ಷನೂ ತನ್ನ ಬಿಲ್ಲಿನ ಹೆದೆಯ ಟಂಕಾರದಿಂದ ಶತ್ರುಗಳನ್ನು ನಡುಗಿಸತಕ್ಕವನೂ, ಸೀತಾಪತಿಯೂ ಆದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಕೌಸಲ್ಯಾನಯನೇಂದುಂ ದಶರಥ ಮುಖಾರವಿಂದ ಮಾರ್ತಾಂಡಂ ।
ಸೀತಾಮಾನಸಹಂಸಂ ರಾಮಂ ರಾಜೀವಲೋಚನಂ ವಂದೇ ।
ದೀರ್ಘಬಾಹುಮರವಿಂದ ಲೋಚನಂ ದೀನವತ್ಸಲಮನಾಥರಕ್ಷಣಂ ।
ದೀಕ್ಷಿತಂ ಸಕಲಲೋಕ ರಕ್ಷಣೇ ದೈವತಂ ದಶರಥಾತ್ಮಜಂ ಭಜೇ ॥

ಕೌಸಲ್ಯೆಯ ಕಣ್ಣುಗಳಿಗೆ ಚಂದ್ರನಂತೆ ಆಹ್ಲಾದಕರವಾಗಿರುವ, ದಶರಥನ ಮುಖಕಮಲಕ್ಕೆ ಸೂರ್ಯನಂತಿರುವ, ಸೀತೆಯ ಮನಸ್ಸೆಂಬ ಸರೋವರಕ್ಕೆ ಹಂಸಪಕ್ಷಿಯಂತಿರುವ, ಕಮಲಾಕ್ಷನಾದ ರಾಮಚಂದ್ರನನ್ನು ಭಜಿಸುತ್ತೇನೆ. ಆಜಾನುಬಾಹುವೂ, ಕಮಲಲೋಚನನೂ, ದೀನಬಂಧುವೂ, ಅನಾಥರನ್ನು ರಕ್ಷಿಸುವವನೂ, ಸಕಲ ಲೋಕಗಳನ್ನು ಕಾಪಾಡಲು ದೀಕ್ಷಾಬದ್ಧನಾಗಿರುವವನೂ, ಪರದೇವತೆಯೂ, ದಶರಥಪುತ್ರನೂ ಆದ ಶ್ರೀರಾಮನನ್ನು ಭಜಿಸುತ್ತೇನೆ.

ಶ್ರೀರಾಮಚಂದ್ರೇತಿ ದಯಾಪರೇತಿ ।
ಭಕ್ತಪ್ರಿಯೇತಿ ಭವ ಬಂಧನ ಮೋಚನೇತಿ ।
ನಾಥೇತಿ ನಾಗಶಯನೇತಿ ಸದಾಸ್ತುವಂತಂ ।
ಮಾಂಪಾಹಿ ಭೀತಮನಿಶಂ ಕೃಪಣಂ ಕೃತಘ್ನಂ ॥

ಶ್ರೀರಾಮಚಂದ್ರ ದಯಾನಿಧೆ, ಭಕ್ತಪ್ರಿಯಾ ಸಂಸಾರದುಃಖನಾಶನಾ, ನಾಥಾ, ಶೇಷಶಯನಾ, ಎಂದು ಸದಾ ನಿನ್ನನ್ನು ಕೂಗಿ ಸ್ತುತಿಸುತ್ತಿರುವ, ಕೃಪಣನೂ ಕೃತಘ್ನನೂ ತತ್ಪ್ರಯುಕ್ತ ಭೀತನೂ ಆದ ನನ್ನನ್ನು ಕಾಪಾಡು.

ಕದಾ ಸುರತರುಸ್ಥಲೇ ಕನಕಮಂಟಪೇ ಪುಷ್ಪಕೇ ।
ವರಾಸನ ಮುಪೇಯುಷಂ ವಸುದಳಾರವಿಂದೋಜ್ವಲಂ ॥
ಕರೇಣ ಹೃದಯಸ್ಪೃಶಾಕಲಿತ ಚಿನ್ಮುದ್ರಿಕಾ ಶೋಭಿತಂ ।
ಸದಾಮನಸಿಭಾವಯೇ ಸುದೃಢಬದ್ಧ ವೀರಾಸನಂ ॥

ಒಂದೊಂದು ವೇಳೆ ಕಲ್ಪವೃಕ್ಷ ಪ್ರದೇಶದಲ್ಲಿ ಪುಷ್ಪಕದ ರತ್ನಮಂಟಪದಲ್ಲಿ ಅಷ್ಟದಳ ಪದ್ಮದಮೇಲೆ ಕುಳಿತಿರುತ್ತಾ, ತನ್ನ ವಕ್ಷಸ್ಥಳಕ್ಕೆ ಸೋಂಕುವಂತೆ ತನ್ನ ಬಲಗೈಯ್ಯಿನ ಚಿನ್ಮುದ್ರಿಕೆಯಿಂದ ಕೂಡಿ ಪ್ರಕಾಶಿಸುವ ವೀರಾಸನಾಧಿಷ್ಠಿತನಾದ ಶ್ರೀರಾಮಚಂದ್ರನನ್ನು ನನ್ನ ಮನಸ್ಸಿನಲ್ಲಿ ಸದಾ ಧ್ಯಾನಿಸುತ್ತೇನೆ.

ಅಯೋಧ್ಯಾ ನಾಥರಾಜೇಂದ್ರ ಸೀತಾಕಾಂತ ಜಗತ್ಪತೇ ।
ಶ್ರೀರಾಮ ಪುಂಡರೀಕಾಕ್ಷ ರಾಮಚಂದ್ರ ನಮೋಸ್ತುತೆ ॥

ಅಯೋಧ್ಯಾದಿ ಪತಿಯೇ ! ರಾಜಾಧಿರಾಜನೇ ! ಸೀತಾಪತಿಯೇ ! ಜಗದೊಡಯನೆ ! ಶ್ರೀರಾಮ ! ಕಮಲಾಕ್ಷ ! ರಾಮಚಂದ್ರ ! ನಿನಗೆ ನಮಸ್ಕಾರವು.

ದಕ್ಷಿಣೇ ಲಕ್ಷ್ಮಣೋಧನ್ವೀ ವಾಮತೋ ಜಾನಕೀ ಶುಭಾ ।
ಪುರತೋ ಮಾರುತಿರ್ಯಸ್ಯ ತನ್ನಮಾಮಿ ರಘೂತ್ತಮಂ ॥

ಬಲಭಾಗದಲ್ಲಿ ಧನುರ್ಧರನಾದ ಲಕ್ಷ್ಮಣನಿಂದಲೂ, ಎಡಭಾಗದಲ್ಲಿ ಮಂಗಳಮೂರ್ತಿಯಾದ ಸೀತಾದೇವಿಯಿಂದಲೂ, ಮುಂಭಾಗದಲ್ಲಿ ಪರಮಭಕ್ತನಾದ ಆಂಜನೇಯನಿಂದಲೂ ಕೂಡಿದವನಾಗಿಯಿರುವ, ರಘುಶ್ರೇಷ್ಠನಾದ ಶ್ರೀರಾಮಚಂದ್ರನನ್ನು ನಮಸ್ಕರಿಸುತ್ತೇನೆ.

ದಶರಥಸುತಮಿಾಶಂ ದಂಡಕಾರಣ್ಯವಾಸಂ ।
ಶತಮುಖ ಮಣಿನೀಲಂ ಜಾನಕೀ ಪ್ರಾಣಲೋಲಂ ।
ಸಕಲ ಭುವನಮೋಹಂ ಸನ್ನುತಾಂಭೋರುಹಾಕ್ಷಂ ।
ಬಹುಳನುತ ಸಮುದ್ರಂ ಭಾವಯೇ ರಾಮಭದ್ರಂ॥

ದಶರಥಪುತ್ರನಾದ, ದಂಡಕಾರಣ್ಯದಲ್ಲಿ ಸಂಚರಿಸಿದ, ಇಂದ್ರನೀಲಮಣಿ ಸದೃಶವಾದ ದೇಹಕಾಂತಿಯುಳ್ಳ, ಸೀತಾಪತಿಯೂ, ಸಕಲ ಪ್ರಪಂಚಕ್ಕೂ ಮೋಹಕನೂ, ದಿವ್ಯಕಮಲನೇತ್ರನೂ, ಸಮುದ್ರರಾಜನಿಂದ ಬಹಳವಾಗಿ ಸ್ತುತಿಸಲ್ಪಟ್ಟವನೂ ಆದ ರಾಮಭದ್ರನನ್ನು ಚಿಂತಿಸುತ್ತೇನೆ.

ರಾಮನಾಮ ತವನಾಮ ಜಪಂತಃ।
ಪಾಮರಾ ಅಪಿತರಂತಿ ಭವಾಬ್ಧಿಂ।
ಅಂಗಸಂಗಿ ಭವದಂಗುಳಿಮುದ್ರಃ।
ಕಿಂ ವಿಚಿತ್ರ ಮತರತ್ಕಪಿರಬ್ಧಿಂ॥

ಶ್ರೀರಾಮಮೂರ್ತಿಯೆ ! ನಿನ್ನ ನಾಮವಾದ "ರಾಮ" ಎಂಬ ನಾಮವನ್ನು ಜಪಿಸಿದರೆ ನೀಚನಾದರೂ ದುಃಖರೂಪವಾದ ಈ ಅಪಾರ ಸಂಸಾರ ಸಾಗರವನ್ನೇ ದಾಟುತ್ತಾನೆ. ಹೀಗಿರುವಲ್ಲಿ ಈ ನಿನ್ನ ಉಂಗುರದ ಸಂಬಂಧದಿಂದ ಆಂಜನೇಯನು ಸಾಧಾರಣವಾದ ಒಂದು ಸಮುದ್ರವನ್ನು ದಾಟುವುದೇನಾಶ್ಚರ್ಯ.

ನಿತ್ಯಂ ನಿರ್ಜಿತ ಪಂಕಸಂಭವ ಮಹಾ ನೇತ್ರಶ್ರಿಯಂ ರಾಘವಂ ।
ರಾಮಂ ಪೂರ್ಣಿಮಚಂದ್ರ ಚಾರುವದನಂ ದಿಕ್ಪಾಲಕೈಸ್ಸೇವಿತಂ ।
ಕರ್ಪೂರಾಗರು ಚಂದನಾರ್ದ್ರ ಹೃದಯಂ ಮಂದಾರ ಮಾಲಾಂಕಿತಂ ।
ವಿದ್ಯುತ್ಪುಂಜ ನಿಭಾಂಬರಾವೃತ ತನುಂ ರಾಮಂ ಭಜೇ ಶ್ಯಾಮಲಂ ॥

ಶಾಶ್ವತನಾದ, ಅಜೇಯನಾದ, ಕಮಲಸದೃಶವಾದ ನೇತ್ರಗಳ ಮಹಾತೇಜಸ್ಸಿನಿಂದ ಕೂಡಿದ, ರಘುಪತಿಯಾದ, ಹುಣ್ಣಿಮೆಯ ಚಂದ್ರನಂತೆ ಮನೋಹರವಾದ ಮುಖವುಳ್ಳ, ಅಷ್ಟದಿಕ್ಪಾಲರುಗಳಿಂದ ಸೇವಿತನೂ, ಕರ್ಪೂರ ಅಗರು ಚಂದನಾದಿ ಸುಗಂಧದ್ರವ್ಯಗಳಿಂದ ಲೇಪಿತವಾದ ವಕ್ಷಸ್ಥಳವುಳ್ಳವನೂ, ಮಂದಾರ ಪುಷ್ಪದ ಮಾಲಿಕೆಯಿಂದ ಅಲಂಕೃತನೂ, ಮಿಂಚಿನ ಸಮೂಹಗಳ ಕಾಂತಿಯುಳ್ಳ ಥಳಥಳಿಸುವ ವಸ್ತ್ರಗಳಿಂದ ಕೂಡಿದವನೂ, ಶ್ಯಾಮಲ ಮೂರ್ತಿಯೂ ಆದ ಶ್ರೀರಾಮನನ್ನು ಭಜಿಸುತ್ತೇನೆ.

ಶ್ರೀರಾಮಚಂದ್ರಮನಿಶಂ ಹೃದಿ ಸ್ಥಿತಂ ।
ಶ್ರೀರಾಮಮಿಂದುವದನಂ ಪ್ರವಿಭಾಸಂ ।
ಭಾವಯಾಮಿ ನಿಗಮಾಂತ ನಿವಾಸಂ ।
ಭಾರತೀ ಪತಿನುತಂ ಭುವಿ ವಂದ್ಯಂ॥

ಯಾವಾಗಲೂ ನನ್ನ ಹೃದಯದಲ್ಲಿರತಕ್ಕವನೂ, ಚಂದ್ರಮುಖನೂ, ತೇಜಃಪುಂಜನೂ, ವೇದಾಂತ ಶಾಸ್ತ್ರಗಳಲ್ಲಿ ಧ್ಯೇಯವಸ್ತುವೂ, ಬ್ರಹ್ಮನಿಂದ ಸ್ತುತಿಸಲ್ಪಟ್ಟವನೂ, ಲೋಕದಲ್ಲಿ ಸರ್ವವಂದ್ಯನೂ ಆದ ಶ್ರೀರಾಮನನ್ನು ಭಜಿಸುತ್ತೇನೆ.

ಇಂದೀವರದಳಶ್ಯಾಮಮಿಂದು ಕೋಟಿ ನಿಭಾನನಂ |
ಕಂದರ್ಪ ಕೋಟಿ ಲಾವಣ್ಯಂ ವಂದೇಹಂ ರಘುನಂದನಂ ||

ನೈದಿಲೆಯಂತೆ ನೀಲವರ್ಣನೂ, ಕೋಟಿ ಚಂದ್ರ ಸಮಾನ ಕಾಂತಿಯುಳ್ಳ ಮುಖವುಳ್ಳವನೂ, ಕೋಟಿ ಮನ್ಮಥರ ಸೌಂದರ್ಯದಂತೆ ಸುಂದರನೂ ಆದ, ರಘುನಂದನನಾದ ಶ್ರೀರಾಮನನ್ನು ವಂದಿಸುತ್ತೇನೆ.

ಏತದ್ಧಿ ರಾಮಾಯಣ ಸ್ತೋತ್ರಗಳು

ರಾಮೋ ಬದ್ಧ ಪಯೋನಿಧಿರ್ಗುಣನಿಧಿರ್ಗತ್ವಾಗಚಾರ್ಯೈರಲಂ |
ಲಂಕಾಂ ಪ್ರಾಪ್ಯ ಸ ಕುಂಭಕರ್ಣ ತನುಜಂ ಹತ್ವಾರಣೇ ರಾವಣಂ |
ತತ್ರಸ್ಥಾಪ್ಯ ವಿಭೀಷಣಂ ಸ್ವನಗರೀಂ ಸೀತಾಪತಿಃ ಪುಷ್ಪಕಂ |
ಚಾರೂಢಃ ಪುನರಾಗತಸ್ಸಭಗವಾನ್ ಧಾತ್ರೀಪತಿಃ ಪಾತುನಃ ||

ಸಮುದ್ರಕ್ಕೆ ಸೇತುಬಂಧನ ಮಾಡಿದ, ಗುಣಾಕರನಾದ ಶ್ರೀರಾಮನು, ಕಪಿಗಣಗಳಿಂದ ಕೂಡಿ ಲಂಕೆಯನ್ನು ಸಮೀಪಿಸಿ, ಯುದ್ಧದಲ್ಲಿ ರಾವಣನನ್ನು ಆವನ ಮಗನಾದ ಇಂದ್ರಜಿತುವನ್ನು ತಮ್ಮನಾದ ಕುಂಭಕರ್ಣನನ್ನೂ ಸಂಹರಿಸಿದನು, ಮತ್ತು ಆಲಂಕೆಯಲ್ಲಿ ವಿಭೀಷಣನಿಗೆ ರಾಜ್ಯಾಭಿಷೇಕಮಾಡಿ ಲಂಕೆಯಿಂದ ಹಿಂತಿರುಗಿಬಂದು ಸೀತಾ ಸಮೇತನಾಗಿ ಪುಷ್ಪಕವಿಮಾನದಲ್ಲಿ ಕುಳಿತು ಅಯೋಧ್ಯೆಗೆ ಹಿಂತುರಿಗಿ ಅಲ್ಲಿ ಸಿಂಹಾಸನಾರೂಢನಾಗಿ ಪ್ರಾಕಾಶಿಸಿದ ಭೂಮೀಶ್ವರನಾದ ಶ್ರೀರಾಮಚಂದ್ರನು ನಮ್ಮನ್ನು ಕಾಪಾಡಲಿ.

ಸಾಕೇತೇ ಜನನಂ ಕುಮಾರ ಗಮನಂ ಯಜ್ಞಪ್ರತೀ ಪಾಲನಂ |
ಶಾಪಾದುದ್ಧರಣಂ ಧನುರ್ವಿದಳನಂ ಸೀತಾಂಗನೋದ್ವಾಹನಂ |
ಲಂಕಾಯಾಡಹನಂ ಸಮುದ್ರತರಣಂ ಸೌಮಿತ್ರಿ ಸಮ್ಮೋಹನಂ |
ರಕ್ಷಸ್ಸಂಹರಣಂ ಸ್ವರಾಜ್ಯಗಮನಂ ಚೈತದ್ಧಿ ರಾಮಾಯಣಂ ||

ಅಯೋಧ್ಯೆಯಲ್ಲಿ ಶ್ರೀರಾಮಚಂದ್ರನು ಜನಿಸಿದನು. ಬಾಲನಾಗಿ ವಿಶ್ವಾಮಿತ್ರನೊಡನೆ ಹೋಗಿ ಆ ಋಷಿಯ ಯಾಗರಕ್ಷಣೆ ಮಾಡಿದನು, ಗೌತಮಪತ್ನಿಯಾದ ಅಹಲ್ಯೆಯನ್ನು ಶಾಪದಿಂದ ವಿಮುಕ್ತಳನ್ನಾಗಿ ಮಾಡಿದನು. ಶಿವಧನುಸ್ಸನ್ನು ಭಂಜಿಸಿದನು. ಸೀತಾರಮಣಿಯನ್ನು ಮದುವೆಯಾದನು. ಪಿತೃವಾಕ್ಯ ಪರಿಪಾಲನೆಗಾಗಿ ವನವಾಸಕ್ಕೆ ಹೋಗಿದ್ದಾಗ ರಾವಣನು ಸೀತಾಪಹರಣ ಮಾಡಲು ಅವನ ಪಟ್ಟಣವಾದ ಲಂಕೆಯನ್ನು ತನ್ನ ಭಕ್ತಾಗ್ರಣಿಯಾದ ಆಂಜನೇಯನಿಂದ ಸುಡಿಸಿದನು. ರಾವಣನ ವಧೆಗಾಗಿ ಲಂಕೆಯನ್ನು ಪ್ರವೇಶಿಸಲು ಸಮುದ್ರಕ್ಕೆ ಸೇತುಬಂಧನ ಮಾಡಿದನು. ಯುದ್ಧದಲ್ಲಿ ಲಕ್ಷ್ಮಣನು ಅಸ್ತ್ರಘಾತದಿಂದ ಮೂರ್ಛೆ ಹೊಂದಲು ಅವನನ್ನು ಸಂಜೀವಿನಿ ಔಷಧದಿಂದ ಎಚ್ಚರಿಸಿ ರಾವಣನನ್ನೂ ಅವನ ಕಡೆಯ ರಾಕ್ಷಸರನ್ನೂ ಸಂಹರಿಸಿ, ಪುನಃ ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾದನು. ಹೀಗೆಂದು ರಾಮಾಯಣವನ್ನು ತಿಳಿದುಕೊ.

ಜನ್ಮಾದೌಕ್ರತುರಕ್ಷಣಂ ಮುನಿಪತೇ ಸ್ಥಾಣೋರ್ಧನುರ್ಭಂಜನಂ |
ವೈದೇಹೀಗ್ರಹಣಂ ಪಿತುಶ್ಚವಚನಾ ದ್ಘೋರಾಟವೀ ಗಾಹನಂ |
ಕೋದಂಡಗ್ರಹಣಂ ಖರಾದಿಮಥನಂ ಮಾಯಾಮೃಗಚ್ಛೇದನಂ |
ಬದ್ಧಾಬ್ಧಿಕ್ರಮಣಂ ದಶಾಸ್ಯಹನನಂ ಚೈತದ್ಧಿರಾಮಾಯಣಂ ||

ಶ್ರೀರಾಮಚಂದ್ರನು, ಹುಟ್ಟಿದ ಮೊದಲಿನಲ್ಲಿ ವಿಶ್ವಾಮಿತ್ರ ಋಷಿಯ ಯಾಗರಕ್ಷಣೆ ಮಾಡಿದನು. ಆಮೇಲೆ ಶಿವಧನಸ್ಸನ್ನು ಭಗ್ನಗೊಳಿಸಿದನು. ಅನಂತರ ಸೀತೆಯೊಡನೆ ವಿವಾಹವಾಯಿತು. ಆಮೇಲೆ ಪಿತೃವಾಕ್ಯ

ಪರಿಪಾಲನೆಗಾಗಿ ಭಯಂಕರವಾದ ಅರಣ್ಯ ಪ್ರವೇಶಮಾಡಿದನು. ತನ್ನ ಕೋದಂಡವನ್ನು ಹಿಡಿದು ಖರದೂಷಣಾದಿ ರಾಕ್ಷಸರನ್ನು ಸಂಹರಿಸಿದನು. ಮಾಯೆಯಿಂದ ಜಿಂಕೆಯ ರೂಪದಲ್ಲಿ ಬಂದ ಮಾರೀಚನನ್ನು ಛೇದಿಸಿದನು. ಸಮುದ್ರಕ್ಕೆ ಸೇತುಬಂಧನ ಮಾಡಿದನು. ರಾವಣನನ್ನು ಸಂಹರಿಸಿದನು. ಈ ರೀತಿ ರಾಮ ಚರಿತ್ರೆಯನ್ನು ತಿಳಿದುಕೋ.

ಪೂರ್ವಂ ರಾಮತಪೋವನಾನುಗಮನಂ ಹತ್ವಾಮೃಗಂ ಕಾಂಚನಂ |
ವೈದೇಹೀಹರಣಂ ಜಟಾಯುಮರಣಂ ಸುಗ್ರೀವ ಸಂಭಾಷಣಂ |
ವಾಲೀ ನಿಗ್ರಹಣಂ ಸಮುದ್ರತರಣಂ ಲಂಕಾಪುರೀ ದಾಹನಂ |
ಪಶ್ಚಾದ್ರಾವಣ ಕುಂಭಕರ್ಣಮಥನಂ ಚೈತದ್ಧಿ ರಾಮಾಯಣಂ ||

ಮೊದಲು ರಾಮನು ದಂಡಕಾರಣ್ಯವೆಂಬ ತಪೋವನಕ್ಕೆ ಹೋದನು. ಅಲ್ಲಿ ಹೊಂಬಣ್ಣದ ರೂಪಿಯಾದ ಮಾರೀಚನನ್ನು ಸಂಹರಿಸಿದನು. ಆಮೇಲೆ ರಾವಣನಿಂದ ಸೀತಾಪಹರಣವಾಯಿತು. ರಾವಣನನ್ನು ತಡೆಯಲು ಹೋದ ಜಟಾಯುವು ಅವನಿಂದ ಕೊಲ್ಲಲ್ಪಟ್ಟನು. ಸೀತಾನ್ವೇಷಣಕ್ಕಾಗಿ ಸುಗ್ರೀವನ ಸಖ್ಯವಾಗಿ ಅವನೊಡನೆ ಸಂಭಾಷಣೆ ನಡೆಯಿತು. ಸುಗ್ರೀವನಿಗೆ ರಾಜ್ಯಪ್ರಾಪ್ತಿಯಾಗಲು, ರಾಮನಿಂದ ಸುಗ್ರೀವನ ಅಣ್ಣನಾದ ವಾಲಿಯ ಸಂಹಾರವಾಯಿತು. ಸೀತೆಯಿರುವ ಸ್ಥಳವನ್ನು ನೋಡಿ ಬರಲು ಹೋದ ಆಂಜನೇಯನಿಂದ ಲಂಕೆಯು ದಹಿಸಲ್ಪಟ್ಟಿತು. ಆಮೇಲೆ ಲಂಕೆಗೆ ಹೋಗಲು ಸಮುದ್ರಕ್ಕೆ ಸೇತು ಬಂಧನವಾಯಿತು. ಕೊನೆಗೆ ರಾವಣ ಅವನ ತಮ್ಮನಾದ ಕುಂಭಕರ್ಣಾದಿಗಳು ಕೊಲ್ಲಲ್ಪಟ್ಟರು ಹೀಗೆಂದು ರಾಮಾಯಣವನ್ನು ತಿಳಿ.

ಫಲಶ್ರುತಿ

ಜಾತಿಭ್ರಷ್ಟೋಽಪಿ ಪಾಪೀ ಪರಧನ ಪರದಾರೇಷು ನಿತ್ಯೋದ್ಯತೋವಾ |
ಸ್ತೇಯೀ ಬ್ರಹ್ಮಘ್ನ ಮಾತಾ ಪಿತೃವಧ ನಿರತೋ ಯೋಗಿಬೃಂದಾಪಕಾರೀ |
ಧ್ಯೇಯಂ ಕರ್ಣಾಮೃತಂ ಯಃ ಪಠತಿ ಹಿ ಸತತಂ ರಾಮಚಂದ್ರಸ್ಯ ಭಕ್ತಃ |
ಯೋಗೀಂದ್ರೈರಪ್ಯಲಭ್ಯಂ ಪದಮಪಿ ಲಭತೇ ಸರ್ವ ದೇವೈಶ್ಚ ಸೇವ್ಯಂ ||

ಜಾತಿಭ್ರಷ್ಟನಾಗಲಿ, ಪಾಪಿಯಾಗಲಿ, ಪರಧನವನ್ನೇ ಅಪಹರಿಸಿರಲಿ, ಪರಸ್ತ್ರೀಯರಲ್ಲಿ ರಮಿಸಲಿ, ಇವೆಲ್ಲದರಲ್ಲೂ ನಿತ್ಯವೂ ಉದ್ಯುಕ್ತನಾಗಿರಲಿ, ಕಳ್ಳತನ ಮಾಡಲಿ, ಬ್ರಹ್ಮಹತ್ಯೆ ಮಾಡಲಿ, ಪಿತೃವಧೆ ಮಾಡಲಿ, ಯೋಗಿಗಳ ಬೃಂದಕ್ಕೆ ಅಪಕಾರ ಮಾಡಲಿ, ಹೇಗೇ ಇರಲಿ, ಅವನು ಶ್ರೀರಾಮಕರ್ಣಾಮೃತವನ್ನು ಭಕ್ತಿಯಿಂದ ಸತತವೂ ಪಠಿಸುತ್ತಾ ಬಂದರೆ, ಅಂತಹವನು ಕ್ರಮಕ್ರಮವಾಗಿ ಸರ್ವ ದೇವತೆಗಳಿಂದಲೂ ಪೂಜ್ಯನಾಗಿ ಯೊಗಿಶ್ರೇಷ್ಠರಿಗೂ ಲಭಿಸಲು ಅಸಾಧ್ಯವಾದ ಮೋಕ್ಷಪದವಿಯನ್ನು ಪಡೆಯುತ್ತಾನೆ.

ವಿಭೀಷಣ ಕೃತ ಮಂಗಳ ಶ್ಲೋಕ

ಮಂಗಳಂ ಕೋಸಲೇಂದ್ರಾಯ ।
ಮಹನೀಯ ಗುಣಾಬ್ಧಯೇ ।
ಚಕ್ರವರ್ತಿ ತನೂಜಾಯ ।
ಸಾರ್ವಭೌಮಾಯ ಮಂಗಳಂ ॥

ಕೋಸಲ ದೇಶದ ಅಧಿಪತಿಯೂ ಸಾಗರದಂತೆ ಮಿತಿಯಿಲ್ಲದ ಸದ್ಗುಣಗಳಿಂದ ಕೂಡಿದವನೂ ದಶರಥ ಚಕ್ರವರ್ತಿಯ ಪುತ್ರನೂ ವಿಶ್ವಕ್ಕೇ ಒಡೆಯನೂ ಆದ ಶ್ರೀರಾಮಚಂದ್ರ ಪ್ರಭುವಿಗೆ ಮಂಗಳವು.

ವೇದವೇದಾಂತ ವೇದ್ಯಾಯ ।
ಮೇಘಶ್ಯಾಮಲ ಮೂರ್ತಯೇ ।
ಪುಂಸಾಂ ಮೋಹನ ರೂಪಾಯ ।
ಪುಣ್ಯಶ್ಲೋಕಾಯ ಮಂಗಳಂ ॥

ವೇದವೇದಾಂತಗಳಿಂದಲೇ ತಿಳಿಯಬೇಕಾದವನೂ ನೀಲಮೇಘಶ್ಯಾಮನೂ ಪುರುಷೋತ್ತಮನೂ ಮೋಹನರೂಪನೂ ಪುಣ್ಯಚರಿತ್ರನೂ ಆದ ಶ್ರೀರಾಮ ಮೂರ್ತಿಗೆ ಮಂಗಳವು.

ವಿಶ್ವಾಮಿತ್ರಾಂತರಂಗಾಯ ।
ಮಿಥಿಲಾ ನಗರೀ ಪತೇಃ ।
ಭಾಗ್ಯಾನಾಂಪರಿಪಾಕಾಯ ।
ಭವ್ಯರೂಪಾಯ ಮಂಗಳಂ ॥

ವಿಶ್ವಾಮಿತ್ರ ಮಹರ್ಷಿಯ ಉಪಾಸ್ಯ ದೇವತೆಯೂ ಮಿಥಿಲಾಪುರದ ದೊರೆಯಾದ ಜನಕ ಮಹಾರಾಜನಿಗೆ ಅಳಿಯನಾಗಿ ಅವನ ಭಾಗ್ಯಮೂರ್ತಿಯಾದವನೂ ಲೋಕಮೋಹಕನೂ ಆದ ಶ್ರೀರಾಮ ಚಂದ್ರನಿಗೆ ಮಂಗಳವು.

ಪಿತೃಭಕ್ತಾಯ ಸತತಂ ।
ಭ್ರಾತೃಭಿಸ್ಸಹ ಸೀತಯಾ ।
ನಂದಿತಾಖಿಲ ಲೋಕಾಯ ।
ರಾಮಚಂದ್ರಾಯ ಮಂಗಳಂ ॥

ಸರ್ವದಾ ಪಿತೃಭಕ್ತಿ ಸಂಪನ್ನನೂ ಸೋದರರಿಂದಲೂ ಪತ್ನಿಯಾದ ಸೀತೆಯಿಂದಲೂ ಕೂಡಿರುವವನೂ ಲೋಕಕ್ಕೆಲ್ಲಾ ಆನಂದದಾಯಕನೂ ಆದ ಶ್ರೀರಾಮಮೂರ್ತಿಗೆ ಮಂಗಳವು.

ತ್ಯಕ್ತ ಸಾಕೇತ ವಾಸಾಯ ।
ಚಿತ್ರಕೂಟ ವಿಹಾರಿಣೇ ।
ಸೇವ್ಯಾಯ ಸರ್ವಯಮಿನಾಂ ।
ಧೀರೋದಾತ್ತಾಯ ಮಂಗಳಂ ॥

ಅಯೋಧ್ಯೆಯ ವಾಸವನ್ನು ಬಿಟ್ಟು ಚಿತ್ರಕೂಟ ಗಿರಿಯಲ್ಲಿ ವಿಹರಿಸಿ ಸರ್ವ ಋಷಿಗಳಿಂದಲೂ ಸೇವಿತನಾದ, ಧೀರನೂ ಉದಾರನೂ ಆದ ಶ್ರೀರಾಮ ಚಂದ್ರನಿಗೆ ಮಂಗಳವು.

ಸೌಮಿತ್ರಿಣಾಚ ಜಾನಕ್ಯ ।
ಚಾಪ ಬಾಣಾಸಿ ಧಾರಿಣೇ ।
ಸಂಸೇವ್ಯಾಯ ಸದಾ ಭಕ್ತ್ಯಾ ।
ಸಾನುಜಾಯಾಸ್ತು ಮಂಗಳಂ ॥

ಸೀತಾಲಕ್ಷ್ಮಣರಿಂದ ಸರ್ವದಾ ಸೇವಿಸಿಕೊಳ್ಳುತ್ತಾ, ಚಾಪ, ಬಾಣ, ಖಡ್ಗಗಳನ್ನು ಧರಿಸಿಕೊಂಡಿರುವ ಶ್ರೀರಾಮಚಂದ್ರನಿಗೆ ಸೋದರರೊಡನೆ ಮಂಗಳವಾಗಲಿ.

ದಂಡಕಾರಣ್ಯ ವಾಸಾಯ । ಖಂಡಿತಾಮರ ಶತ್ರವೇ । ಗೃಧ್ರರಾಜಾಯ ಭಕ್ತಾಯ । ಮುಕ್ತಿದಾಯಾಸ್ತು ಮಂಗಳಂ ॥	ದಂಡಕಾರಣ್ಯದಲ್ಲಿ ವಾಸ ಮಾಡಿ ದೇವತೆಗಳ ಶತ್ರುಗಳಾದ ರಾಕ್ಷಸರನ್ನು ಖಂಡಿಸಿ ಭಕ್ತನಾದ ಗೃಧ್ರ ರಾಜನಿಗೆ ಅಂದರೆ "ಜಟಾಯುವಿಗೆ" ಮುಕ್ತಿಯನ್ನು ದಯಪಾಲಿಸಿದ ಶ್ರೀರಾಮಚಂದ್ರನಿಗೆ ಮಂಗಳವು.
ಸಾದರಂ ಶಬರೀದತ್ತ । ಫಲಮೂಲಾಭಿಲಾಷಿಣೇ । ಸೌಲಭ್ಯ ಪರಿಪೂರ್ಣಾಯ । ಸತ್ಯೋದ್ಯುಕ್ತಾಯ ಮಂಗಳಂ ॥	ಶಬರಿಯು ಪ್ರೀತಿಯಿಂದ ಕೊಟ್ಟ ಗೆಡ್ಡೆಗೆಣಸು ಹಣ್ಣುಗಳಲ್ಲಿ ಅಭಿಲಾಷೆ ತೋರಿದ ನಿಜಭಕ್ತರಿಗೆ ಬಹು ಸುಲಭನಾದ ಸತ್ಯವ್ರತನಾದ ಶ್ರೀರಾಮಚಂದ್ರನಿಗೆ ಮಂಗಳವು.
ಹನೂಮತ್ಸಮ ವೇತಾಯ । ಹರೀಶಾಭೀಷ್ಟದಾಯಿನೇ । ವಾಲಿಪ್ರಮಥನಾಯಾಸ್ತು । ಮಹಾಧೀರಾಯ ಮಗಳಂ ॥	ತನ್ನ ಸಾನ್ನಿಧ್ಯದಲ್ಲಿ ಸರ್ವದಾ ಹನುಮಂತನನ್ನು ಹೊಂದಿರುವ ಸುಗ್ರೀವನ ಇಷ್ಟವನ್ನು ಪೂರ್ತಿಮಾಡಿದ, ವಾಲಿಯನ್ನು ಸಂಹರಿಸಿದ ಶ್ರೀರಾಮಚಂದ್ರನಿಗೆ ಮಂಗಳವು.
ಶ್ರೀಮತೇ ರಘುವೀರಾಯ । ಸೇತೋರ್ಲಂಘಿತ ಸಿಂಧವೇ । ಜಿತರಾಕ್ಷಸ ರಾಜಾಯ । ರಣಧೀರಾಯ ಮಂಗಳಂ ।	ಶ್ರೀಮಂತನೂ ರಘುಕುಲಾಗ್ರಣಿಯೂ ಸೇತು ಬಂಧನ ಮಾಡಿ ಸಮುದ್ರವನ್ನು ದಾಟಿ ರಾಕ್ಷಸ ರಾಜನಾದ ರಾವಣನನ್ನು ಮರ್ದಿಸಿ ಯುದ್ಧದಲ್ಲಿ ಮಹಾ ಪರಾಕ್ರಮವನ್ನು ತೋರಿದವನೂ ಆದ ಶ್ರೀರಾಮಚಂದ್ರನಿಗೆ ಮಂಗಳವು.
ಆಸಾದ್ಯ ನಗರೀಂ ದಿವ್ಯಾ । ಮಭಿಷಿಕ್ತಾಯ ಸೀತಯಾ । ರಾಜಾಧಿರಾಜ ರಾಜಾಯ । ರಾಮಭದ್ರಾಯ ಮಂಗಳಂ ॥	ದಿವ್ಯವಾದ ಅಯೋಧ್ಯಾ ಪಟ್ಟಣಕ್ಕೆ ಆಗಮಿಸಿ ಸೀತಾಸಮೇತನಾಗಿ ಪಟ್ಟಾಭಿಷಿಕ್ತನಾದ ಚಕ್ರವರ್ತಿ ಶ್ರೀರಾಮಭದ್ರನಿಗೆ ಮಂಗಳವು.
ವಿಭೀಷಣ ಕೃತೇ ಪ್ರೀತ್ಯಾ । ವಿಶ್ವಾಭೀಷ್ಟಪ್ರದಾಯಿನೇ । ಜಾನಕೀ ಪ್ರಾಣನಾಥಾಯ । ಸದಾ ರಾಮಾಯ ಮಂಗಳಂ ॥	ಆದರ ಭಕ್ತಿಗಳಿಂದ ವಿಭೀಷಣನು ರಚಿಸಿದ ಪ್ರಪಂಚಕ್ಕೆ ಸರ್ವಾಭೀಷ್ಟಗಳನ್ನೂ ಕೊಡುವ ಈ ಮಂಗಳಶ್ಲೋಕಕ್ಕೆ ಅಧಿದೈವವೂ ಜಾನಕೀಪತಿಯೂ ಸತತವೂ ಮನೋರಂಜಕನೂ ಆದ ಶ್ರೀರಾಮ ಚಂದ್ರನಿಗೆ ಮಂಗಳವು.

ಆತ್ಮಾರಾಮ ಪೂಜಾ ದ್ವಾದಶಮಂಜರಿ

ವ್ಯವಹಾರ ವೆಂದೆಂಬ ನಿರ್ಮಾಲ್ಯ ಕಳೆದು।
ಪ್ರಾಣ ಬಂಧನವೆನಿಪ ಮಡಿಯನುಟ್ಟು ॥

ದೇವತಾಗೃಹವೆಂದು ದೇಹವನೆ ಮಾಡಿ।
ಶೀರ್ಷೋಜ್ಜ್ವಲಾಬ್ಜದಲಿ ಸಂಸ್ಥಾಪಿಸಿ ॥ ಪ ॥

ಜ್ಞಾನ ಕರ್ಮೇಂದ್ರಿಯಾದ್ಯಂತರಂಗಗಳೆಲ್ಲ।
ಪೂಜೆಗನುವಾಗಿರ್ಪ ಸಲಕರಣೆಯಾಗೆ॥

ಮೂಲಾದಿ ಷಟ್ಕಮಲಪುಷ್ಪಪೂಜೆಯ ಮಾಡಿ।
ದಶವಿಧ ಪ್ರಾಣಗಳ ಪರಿಚರರ ಮಾಡಿ ॥

ಸುಷುಮ್ನಾ ಇಡಾ ಪಿಂಗಳಾದಿ ನಾಡಿಗಳೆ।
ಗಂಗಾಭಿಷೇಕತ್ರಿವೇಣಿಯೆನಿಸಿ ॥

ಗಾರ್ಹ್ಯಾದಿ ಅಗ್ನಿಗಳು ಧೂಪ ವಹ್ನಿಗಳಾಗೆ।
ಆಜ್ಞಾಂತ ಚಿತ್ಕಳೆಯು ದೀಪವೆನಿಸೆ ॥

ಚಿತ್ತದೈಕಾಗ್ರತೆಯ ಬತ್ತಿಯನು ಗೈದು।
ಧ್ಯಾನ ಬಿಂದ್ವಾತ್ಮಕದ ತೈಲವನೆ ಸುರಿದು ॥

ರುದ್ರ ವಿಷ್ಣು ಬ್ರಹ್ಮ ಗ್ರಂಥಿಯುತಮಾಗಿರ್ಪ।
ಮೂರೆಳೆಯ ವುಪವೀತವನ್ನರ್ಪಿಸಿ ॥

ಪ್ರಣವನಾದಬ್ರಹ್ಮ ಹಂಸದಿಂ ಸ್ತುತಿಗೈದು।
ಶೀರ್ಷ ಪದ್ಮದ ಸುಧೆಯ ನೈವೇದ್ಯಕಿಟ್ಟು ॥

ವಿಘ್ನೇಶ ಬ್ರಹ್ಮೇಶ ವಿಷ್ಣು ಅಕ್ಷಾಂತಗಳ।
ಭೂಮ್ಯಾದಿ ತತ್ತ್ವಗಳ ಪ್ರಾಣ ಶಕ್ತಿಯನು।

ಮೋಕ್ಷಲಕ್ಷ್ಮೀಸಹಿತ ತಾರಕಬ್ರಹ್ಮನಾ।
ಜೀವರೂಪದಲಿರುವ ಚಿಜ್ಜ್ಯೋತಿ ರೂಪನಾ ॥

ಹೃದಯ ಪದ್ಮದೊಳಿರುವ ಆತ್ಮಾಭಿರಾಮನಾ।
ಯೋಗ ಪೂಜೆಯಲೊಲಿಸಿ ಪರಮಾತ್ಮನಹೆನು ॥

ಕಪನೀಪತಿ ವಿರಚಿತ

ಯೋಗ ಚಕ್ರಾತ್ಮಕ ನಿರ್ಗುಣ ಧ್ಯಾನ

'ಹಂಸ' 'ಪ್ರಣವ'ಗಳಾದಿಯಕ್ಷರವು ತಾನಾಗಿ |
ಕಲ್ಪನೆಯ ಜಗಕೆಲ್ಲ ಮಂಕುರಮದಾಗಿ |
ಆಧಾರಮಾಧೇಯಮೆಂಬ ಭಾವನೆಯಿಂದ |
ತೋರ್ಪ 'ಮೂಲಾಧಾರ' ನಿನಗೆ ಶರಣು ||

ಸದ್ರೂಪದಿಂ ಪೊಸೆದು ಕಾರಣಾತೂಲವಂ |
ನಾಮರೂಪಾತ್ಮಕದ ಜಗವ ಸೃಷ್ಟಿಸಿದೆ |
ಸರ್ವ ಜೀವಂಗಳಾಧಿಷ್ಠಾನನಾಗಿರುವೆ |
ದಿವ್ಯ 'ಸ್ವಾಧಿಷ್ಠಾನ' ನಿನಗೆ ಶರಣು ||

ಸ್ಫಟಿಕಮಣಿ ಸನ್ನಿಧಿಯು, ಪೂಬಣ್ಣ, ಮಣಿಗಪ್ಪ |
ತೆರದಿಂದ, ಜಗವಾಗಿ ಪ್ರತಿಬಿಂಬಿಸಿ |
ಪರಿಪೂರ್ಣ ನಿರ್ಗುಣನೆ, ಜಗವಾಗಿ ತೋರುತಿಹೆ |
'ಮಣಿಪೂರ' ಚಕ್ರನೇ ವಂದಿಸುವೆನು ||

ವಿಶ್ವನಾಟಕವೆಲ್ಲ ನಿನ್ನೊಳು ವಿಶ್ವಪ್ರಳಯದೆ ಲಯವ ಹೊಂದಲು |
ವಿಶ್ವರಕ್ಷಕ ! ಹೇ 'ಅನಾಹತ' ವಿದಿತನಾಗಿರುವೆ |
ಹೃದಯ ಕುಹರದ ಜೀವರೂಪನೆ, ಪ್ರಚಲಗೊಳಿಸದೆ ಪ್ರಾಣಮನಗಳ |
ಅಚಲಗೈದವುಗಳನು ರಕ್ಷಿಸು ಮೋಕ್ಷಪದದಕ್ಷ ||

ಸ್ಥೂಲ ಸೂಕ್ಷ್ಮಾತ್ಮಕದ ಮಲಿನ ದೇಹದಲಿದ್ದು |
ನಾದಬ್ರಹ್ಮನ ಕೂಡಿ ಲಯಿಸಿ ಮಾಯೆಯನು |
ಸಾಕ್ಷಿತ್ವದಿಂ ನೀನು ಶುದ್ಧನೆಂದೆನಿಸಿರುವೆ |
ಜ್ಞಾನದಾತ 'ವಿಶುದ್ಧ' ವಂದಿಸುವೆನು ||

ಸ್ಥಾವರಾತ್ಮಕ ಜಂಗಮಾತ್ಮಕ ವಿಶ್ವವೆಲ್ಲವ ನೀನು ತಿಳಿಯುವೆ |
ನಿನ್ನ ತಿಳಿಯಲು ಬೇರೆ ತಿಳುವಿನ ಬೆಳಕು ಬೇಕಿಲ್ಲ ||
ಸಕಲ ಜಗವನು ಲಯವ ಗೊಳಿಸುತೆ ಪ್ರಣವರೂಪದೆ ಕಳೆಯ ಸೇರುವೆ |
'ಹಂಸ' 'ಪ್ರಣವ'ಗಳಂತ್ಯದಕ್ಷರ ನೀನು, 'ಆಜ್ಞೇಯಾ' ||
ಅಂತರಾತ್ಮನನೈಕ್ಯಗೊಳಿಸಲು ಬ್ರಹ್ಮರಂಧ್ರದ ಬಿಂದುಮಾರ್ಗನೆ |
ಶಾಂತ, 'ಆಜ್ಞಾಚಕ್ರ', ನಿನಗಿದೊ, ನಮ್ರ ವಂದನೆಯು ||

ಕಿರಣ ಸಾಸಿರ ರವಿಗೆ, ಭಾಸಕನು ನೀನಾಗಿ ।
ಚಕ್ರ 'ಸಾಹಸ್ರದಲಿ' ತೋರುತಿರುವೆ ॥

ನಿನ್ನ ಬೆಳಗುವರಿಲ್ಲ, ನೀನೆ ಸಕಲಕೆ ಬೆಳಕು ।
ಚಿದ್ರೂಪ, ನಿರ್ಲಯನೆ, ನಿರ್ಗುಣಾತ್ಮಾ ॥

ನೀನಿರ್ಪ ಶಿರದಿಂದಲಮೃತ ಧಾರೆಯು ಹರಿದು ।
ತಂಪನೆಸಗುವುದಲ್ತೆ, ಯೋಗಿ ಜನಕೆ ॥

'ಹಂಸ' 'ಪ್ರಣವ'ದ ಮಂತ್ರ ವೊಂದಾಗೆ ನಿನ್ನೊಳಗೆ ।
ನಾದಕಳೆಗಳವೆಲ್ಲ ಸೇರೆ ಸೂಕ್ಷ್ಮದಲಿ ॥

ನಾನು ನಾನೆಂದೆಂಬ ಹಮ್ಮು ತಾ ಲಯವಾಗ ।
ಲೈಕ್ಯವದು ಸಿದ್ಧಿಪುದು ಸಹಜವೆನಿಸಿ ॥

ಇಂತಿರುವ ಚಕ್ರಾತ್ಮ ಸಚ್ಚಿದಾನಂದನೇ
ಸಂತತವು ನಿನ್ನನ್ನೆ ಚಿಂತಿಸುತಿಹೆ ॥

ಷಟ್ಚಕ್ರದೂರ್ಧ್ವದಲಿ ನಾದಾಂತ ತತ್ವದಲಿ ।
'ಹಂಸ' 'ಓಂ'ಕಾರೈಕ್ಯ ನೆಲೆಯು ನೀನು ॥

ಬ್ರಹ್ಮರಂಧ್ರದಿ ಸ್ಫುರಿಪೆ ಜೀವತ್ವವನು ಕಳೆವೆ ।
'ತತ್ತ್ವಮಸಿ' ಸಾಧನೆಗೆ ಕೊನೆ ನಿನ್ನ ನಿಲುವು ॥

ಚಂದ್ರಮಂಡಲಗಳಿತ ಪೀಯೂಷಧಾರೆಯಲಿ ।
ತಣ್ಪೀವೆ, ಲಯಿಪೆ ಷೋಡಶ ಕಲೆಗಳಾ ॥

ಮನವು ತಾ ಲಯವಾಗಿ ಜೀವನಿರ್ಗುಣನಪ್ಪ ।
ಸ್ಥಳವೆನಿಪ ನಿರ್ವಾಣ ಪೀಠ ನೀನು ॥

ಜ್ಯೋತಿಪ್ರಕಾಶನೇ, ಅಕ್ಷಾಂತ ದಂತ್ಯನೇ ।
ಯೋಗಿವರಸಾಧಕಗೆ ಕಲ್ಪತರುವೇ ॥

'ಪದ್ಮಸಾಹಸ್ರನೇ' ಮೋಕ್ಷಪ್ರದಾತನೇ ।
ಏಕಾಗ್ರಮನನಾಗಿ ಧ್ಯಾನಿಸುವೆನು ॥

ನಿನ್ನಲ್ಲಿ ತೋರುತಿಹ ನಿರ್ಗುಣ ಬ್ರಹ್ಮದೊಳು ।
ಭೇದರಹಿತದಲೆನ್ನ ನೈಕ್ಯಗೊಳಿಸು ॥

ಕಪನೀಪತಿ ವಿರಚಿತ

ಶುದ್ಧಿಪತ್ರ

ಪುಟ	ಪಙ್ಕ್ತಿ	ತಪ್ಪು	ಒಪ್ಪು
13	15	ಮುನಿಸಿದ	ಮುನಿ ಸಿದ್ಧ
15	3	ನಿರ್ನಾಷ	ನಿರ್ನಾಶ
,,	16	ಸಿದ್ಧಂವಂತ್ರಂ	ಸಿದ್ಧಮಂತ್ರಂ
18	1	ಶತಮುಖ	ಶತಮಖ
22	1	ವಿಹರಣೇ	ವಿರಹಣೇ (ಇಲ್ಲಿ ವಿಪ್ರಲಂಭ ಶೃಂಗಾರವೇ ಸಹಜ)
,,	3	ಭಯಮುಘೇ	ಭಯವಹೇ
,,	15	ಭಯವನ್ನು ಪ್ರಕಟಿಸುವ	ಭಯವನ್ನು ನಮ್ಮಲ್ಲಿ ಉಂಟುಮಾಡುವ
25	15	ಮರಿಭಯದ್ರಾಮಂ	ಮರಿಭಯಾದ್ರಾಮಂ
,,	24	ಬಂಧುಶ್ವ	ಬಂಧುಶ್ಚ
30	3	ಸುಪ್ರರೇತಿ	ಸುಪ್ರತೇತಿ
,,	23	ಸಯುಕ್ತಃ	ಸಂಯುಕ್ತಃ
,,	,,	ಪಾತಯುಮಾಂ	ಪಾತುಮಾಂ
32	20	ಧಾಮ ಜನಪ್ರವೇಶಂ	ಇಲ್ಲಿ ಅರ್ಥಕ್ಲೇಶದಿಂದಾಗಿ ಯಥಾಮತಿಯಾಗಿ ಅರ್ಥಮಾಡಿದೆ.
34	12	ಸ್ತುತೋ	ಸ್ತುಮೇ
35	18	ಫೂಷ್ಟಿತಂ	ಪುಷ್ಪಿತಂ
40	4	ಧತಾಂ	ಧತ್ತಾಂ
,,	23	ಸಂತೋತಾ	ಸಂತೋಷಿತಾ
43	1	ದೃಶ್ಯಂ	ದೃಶಂ
44	3	ನಿಚ್ಚಕ್ರ	ನಿಷ್ಕಕ್ರ
45	2	ಕೀರ್ವೈತ್ರಿ	ಕಿರ್ವೈತ್ರಿ
57	4	ಸ್ಪುರತು	ಸ್ಫುರತು
68	1	ಕರಬ್ಜಾ	ಕರಾಬ್ಜ
,,	4	ಪದ್ಮಾಸ್ಯಂ	ಸ್ವಾಸೀನಂ
70	19	ಪಾಪಿತಾ	ಪಾವಿತಾ
72	1	ಪರೀ ರಂಭಾಪೃತಂ	ಪರೀ ರಂಭಾವೃತಂ
,,	4	ಸಂತಂತಂ	ಸಂತತಂ
77	3	ಚತ್ವುರಿಧ	ಚತುರ್ವಿಧ
79	23	ಸೀತಾ	ಸೀತಾಂ
83	2	ಪುಷ್ಟ	ಪುಷ್ಪ

ಪುಟ	ಪಙ್ಕ್ತಿ	ತಪ್ಪು	ಒಪ್ಪು
100	12	ಪಾರಾಗ	ಪರಾಗ
,,	22	ದ್ವಾದರ	ದ್ವಾದಶಾರ
108	26	ಜ್ಯೋತಿ	ಜ್ಯೋತಿ
127	4	ದೇವಷ್ಯಾರ್	ದೇವಷ್ಯಾರ್ದಿ
133	16	ಏಕಮೇವಾದ್ವಿತೀಮಂ	ಏಕಮೇವಾದ್ವಿತೀಯಂ
138	16	ಉಪದಾನ	ಉಪಾದಾನ
143	27	ಆಭಾವ	ಅಭಾವ
166	8	ನಿತ್ಯಾನಿಸ್ವವಸ್ತು	ನಿತ್ಯಾನಿತ್ಯ ವಸ್ತು
166	12	ಪ್ರಾಣಾಮಾಮ	ಪ್ರಾಣಾಯಾಮ
172	4	ಶರ್ಮ	ಶರ್ಮಾ
182	2	ಮೂಕಲ್ಪ	ಮಾಕಲ್ಪ
183	4	ರಾಜೇಂದ್ರ	ರಾಜೇಂದ್ರಂ
184	12	ಕೃಪರ್ಣಂ	ಕೃಪಣಂ